# ಪಂಪನನ್ನು ಕುರಿತ ವಿಮರ್ಶೆ : ಒಂದು ಅಧ್ಯಯನ

ಎಸ್. ಎಸ್. ರೇಣುಕಾರಾಧ್ಯ



ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ ಪಿಎಚ್. ಡಿ. ನಿಬಂಧ

1986

100



...led to the Examiner for Evaluation

Controller of Examinations
Bangalore University,
Bangalore.

# ಪಂಪನನ್ನು ಕುರಿತ ವಿಮರ್ಶೆ: ಒಂದು ಅಧ್ಯಯನ



ಎಸ್. ಎಸ್. ರೇಣುಕಾರಾಧ್ಯ



ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ ಪಿಎಚ್. ಡಿ. ನಿಬಂಧ

1986

# ಪ್ರಮಾಣ ಪತ್ರ

'ಪಂಪನನ್ನು ಕುರಿತ ವಿಮರ್ಶೆ : ಒಂದು ಅಧ್ಯಯನ' ಎಂಬ ಶೀರ್ಷಿಕೆಯ ಈ ನಿಬಂಧವು ನಾನು ಪಿಎಚ್.ಡಿ., ಪದವಿಗಾಗಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅರ್ಪಿಸಲೆಂದು ಡಾ|| ಕೆ. ಮರುಳಸಿದ್ದಪ್ಪನವರ ಮಾರ್ಗದರ್ಶನದಲ್ಲಿ ಕೈಗೊಂಡ ಸಂಶೋಧನೆಯ ಫಲವಾಗಿ ರೂಪುಗೊಂಡಿದೆ. ಈ ನಿಬಂಧದ ವಿಷಯವನ್ನು ಇಡಿಯಾಗಿ ಆಗಲಿ ಅಥವಾ ಇದರ ಯಾವುದೇ ಭಾಗವನ್ನಾಗಲಿ ಈ ಮೊದಲು ಬೇರಾವುದೇ ಪದವಿಗಾಗಲಿ, ಇತರ ಉದ್ದೇಶಗಳಿಗಾಗಲಿ ಬಳಸಿಲ್ಲವೆಂದು ಪ್ರಮಾಣ ಮಾಡುತ್ತೇನೆ.

ಬೆಂಗಳೂರು

ದಿನಾಂಕ: 23 ನೇ ಜೂನ 1986

(ಎಸ್.ಎಸ್. ರೇಣುಕಾರಾಧ್ಯ)
ಸಂಶೋಧನ ಸಹಾಯಕ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560 056

# ಯೋಗ್ಯತಾ ಪತ್ರ

'ಪಂಪನನ್ನು ಕುರಿತ ವಿಮರ್ಶೆ : ಒಂದು ಅಧ್ಯಯನ' ಎಂಬ ಶೀರ್ಷಿಕೆಯ ಈ ನಿಬಂಧವು ಪಿಎಚ್.ಡಿ., ಪದವಿಗಾಗಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅರ್ಪಿಸಲೆಂದು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದುದಾಗಿದೆ. ಈ ನಿಬಂಧವು ಸಂಶೋಧಕರು ಕೈಗೊಂಡ ಸ್ವಂತ ಸಂಶೋಧನೆಯ ಫಲವಾಗಿ ರೂಪುಗೊಂಡಿದೆ. ಈ ನಿಬಂಧದ ವಿಷಯವನ್ನು ಇಡಿಯಾಗಿ ಆಗಲಿ ಅಥವಾ ಇದರ ಯಾವುದೇ ಭಾಗವನ್ನಾಗಲಿ ಈ ಮೊದಲು ಬೇರಾವುದೇ ಪದವಿ ಅಥವಾ ಇತರ ಯಾವುದೇ ಉದ್ದೇಶಗಳಿಗೆ ಬಳಸಿಲ್ಲವೆಂದು ಸಮರ್ಥಿಸುತ್ತೇನೆ.

ಬೆಂಗಳೂರು

ದಿನಾಂಕ: 23 ನೇ ಜೂನ್ 1986

(ಡಾ|| ಕೆ. ಮರುಳಸಿದ್ಧಪ್ಪ)
ಮಾರ್ಗದರ್ಶಿ
ರೀಡರ್, ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560 056

# ಕೃತಜ್ಞತೆಗಳು

'ಪಂಪನನ್ನು ಕುರಿತ ವಿಮರ್ಶೆ : ಒಂದು ಅಧ್ಯಯನ' ಎಂಬ ಶೀರ್ಷಿಕೆಯ ಈ ನಿಬಂಧವು ಪಿಎಚ್.ಡಿ., ಪದವಿಗಾಗಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅರ್ಪಿಸಲೆಂದು ಸಿದ್ಧಪಡಿಸಿದುದಾಗಿದೆ. ಈ ನಿಬಂಧವನ್ನು ಸಿದ್ಧಪಡಿಸುವಲ್ಲಿ ನನಗೆ ಮಾರ್ಗದರ್ಶನ ಮಾಡಿ, ನಿಬಂಧವು ಪೂರ್ಣಗೊಳ್ಳಲು ಕಾರಣರಾದ ಡಾ|| ಕೆ.ಮರುಳಸಿದ್ಧಪ್ಪ ಅವರಿಗೆ,

ಇಂಥದೊಂದು ಅಧ್ಯಯನ ಕ್ಷೇತ್ರದಲ್ಲಿ ಕೆಲಸ ಮಾಡಲು ಅವಕಾಶವಿರುವುದನ್ನು ಸೂಚಿಸಿದ್ದಲ್ಲದೆ, ಆಗಿಂದಾಗ್ಗೆ ವಿಚಾರಿಸುತ್ತ, ಕೆಲವು ಉಪಯುಕ್ತ ಸಲಹೆ, ಸೂಚನೆಗಳನ್ನು ನೀಡುತ್ತಾ ಬಂದ ಡಾ|| ಕೆ.ವಿ.ನಾರಾಯಣ ಅವರಿಗೆ,

ಈ ಅಧ್ಯಯನವನ್ನು ಕೈಗೊಳ್ಳಲು ಅವಕಾಶವನ್ನು ಕಲ್ಪಿಸಿಕೊಟ್ಟು, ಮತ್ತೆ ಮತ್ತೆ ಕೆಲಸದ ಮುಂದುವರಿಕೆಯನ್ನು ವಿಚಾರಿಸುತ್ತ ಬಂದ, ನನ್ನ ಗುರುಗಳೂ ಕನ್ನಡ ಅಧ್ಯಯನ ಕೇಂದ್ರದ ಹಿಂದಿನ ನಿರ್ದೇಶಕರೂ ಆದ ಡಾ|| ಜಿ.ಎಸ್.ಶಿವರುದ್ರಪ್ಪನವರಿಗೆ, ಮತ್ತು ಡಾ|| ಎಂ.ಚಿದಾನಂದಮೂರ್ತಿಯವರಿಗೆ ಹಾಗೂ ಈಗಿನ ನಿರ್ದೇಶಕರಾಗಿರುವ ಡಾ|| ಎಸ್.ಎಸ್.ಲಕ್ಷ್ಮೀನಾರಾಯಣ ಭಟ್ಟ ಅವರಿಗೆ,

ನನ್ನ ಪರಾಮರ್ಶನ ಕಾರ್ಯಕ್ಕೆ ಅಗತ್ಯವಿದ್ದ ನೆರವನ್ನು ನೀಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಶೋಧನಾ ವಿಭಾಗದ ಸಿಬ್ಬಂದಿಯವರಿಗೆ,

ಮತ್ತು ಈ ನಿಬಂಧವನ್ನು ಅಚ್ಚುಕಟ್ಟಾಗಿ ಟೈಪಿಸಿಕೊಟ್ಟ ಶ್ರೀ ಆರ್.ದಯಾಶಂಕರ ಅವರಿಗೆ,

ನಾನು ಕೃತಜ್ಞನಾಗಿದ್ದೇನೆ.

(ಎಸ್.ಎಸ್.ರೇಣುಕಾರಾಧ್ಯ)

ಬೆಂಗಳೂರು

ದಿನಾಂಕ: 23 ನೇ ಜೂನ್ 1986

## ವಿಷಯ ಸೂಚಿ

ಪುಟ ಸಂಖ್ಯೆ

ಪುಟ ಸಂಖ್ಯೆ

ಪುಟ ಸಂಖ್ಯೆ

ಪುಟ ಸಂಖ್ಯೆ

— : 0 : —

# ಅಧ್ಯಾಯ : ಒಂದು

## ಪೀಠಿಕೆ : ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಇದುವರೆಗೆ ದೊರೆತಿರುವ ಆಧಾರಗಳಿಂದ ತಲುಪಲಾಗಿರುವ ತೀರ್ಮಾನಗಳ ಪ್ರಕಾರ ಪಂಪನೇ ಮೊದಲ ಕನ್ನಡ ಕವಿ. ಮತ್ತು ಮಹತ್ವದ ಕವಿಯೂ ಹೌದೆಂಬುದು ಈಗಾಗಲೇ ಸರ್ವವಿದಿತವಿರುವ ಸಂಗತಿ. ಸುಮಾರು ಒಂದು ಸಾವಿರ ವರುಷಗಳಷ್ಟು ಪ್ರಾಚೀನನಾದ ಆ ಕವಿಯನ್ನು, ಆ ಕವಿಯ ಕೃತಿಗಳನ್ನು ಕುರಿತ ವಿಮರ್ಶಾ ಸಾಹಿತ್ಯದ ಇತಿಹಾಸ ಒಂದು ಶತಮಾನವನ್ನು ಕೂಡ ಮೀರಲಾರದು. ಪಂಪನನ್ನು ಕುರಿತ ಮೊದಲ ಬರಹವೆಂದು ಹೇಳಲಾಗಿರುವ ಲೂಯಿ ರೈಸ್ ಅವರ 'ದಿ ಪೊಯೆಟ್ ಪಂಪ' (1882) ಎಂಬ ಪರಿಚಯಾತ್ಮಕ ಲೇಖನವನ್ನು[1] ಗಮನದಲ್ಲಿರಿಸಿಕೊಂಡರೆ, ಪಂಪನನ್ನು ಕುರಿತ ಒಂದು ವ್ಯವಸ್ಥಿತವಾದ ಅಧ್ಯಯನ ಕ್ರಮವು ಪ್ರಾರಂಭವಾಗಿ ಸುಮಾರು ಒಂದು ಶತಮಾನವಾಯಿತೆನ್ನಬಹುದು. ಇದೇ ಮಾತನ್ನು ಪಂಪನಂಥ ಇತರ ಕವಿ ಕೃತಿಗಳಿಗೆ ಸಂಬಂಧಿಸಿದಂತೆಯೂ ಹೇಳಬಹುದಾಗಿದೆ. ಹಾಗೆ ನೋಡಿದರೆ ನಾವಿಂದು 'ಸಾಹಿತ್ಯ ವಿಮರ್ಶೆ' ಎಂದು ಕರೆಯುತ್ತಿರುವ ಸಾಹಿತ್ಯಕ ಚಟುವಟಿಕೆಯೇ ಹೊಸದು. ನಮ್ಮ ಸಂದರ್ಭದಲ್ಲಿ ಸಾಹಿತ್ಯಾಧ್ಯಯನದ ಈ ಒಂದು 'ಶಿಸ್ತು' ರೂಪುಗೊಳ್ಳಲು ಪ್ರಾರಂಭವಾದದ್ದೇ ಇಂಗ್ಲಿಷ್ ಸಾಹಿತ್ಯದ ಪರಿಚಯದ ಫಲವಾಗಿ. ಹೀಗೆ ರೂಪುಗೊಳ್ಳಲು ತೊಡಗಿದ ಕಾಲಾವಧಿ ಕಳೆದ ಶತಮಾನದ ಕೊನೆಯ ದಶಕಗಳು ಮತ್ತು ಈ ಶತಮಾನದ ಮೊದಲ

---

1. J.O.R.A.S. of Great Britain and Ireland, New Series, Vol. 14. 1882. PP: 19-22.

ದಶಕಗಳೆಂಬುದು ಈಗ ಸ್ಪಷ್ಟವಿರುವ ಸಂಗತಿ. ಈ ಹಿಂದಿನ ಎಲ್ಲಾ ಕಾಲದಲ್ಲೂ ನಮ್ಮಲ್ಲಿ ಸೃಜನ ಸಾಹಿತ್ಯದ ಜೊತೆ ಜೊತೆಗೇ ವಿಮರ್ಶನ ಸಾಹಿತ್ಯವೂ, ಕ್ರಮಬದ್ಧವಾಗಿ ಬೆಳೆದು ಬರಲಿಲ್ಲ. ಹೀಗಾಗಿ ಆಧುನಿಕ ಕನ್ನಡ ವಿಮರ್ಶೆಯ ಮೊದಲ ಹೆಜ್ಜೆಗಳೆಂದರೆ, ಪಂಪನನ್ನು ಅಥವಾ ಅವನಂಥ ಪ್ರಾಚೀನ ಕವಿಗಳನ್ನು ಕುರಿತಂತೆ ಪ್ರಾರಂಭವಾದ ಅಧ್ಯಯನ ಕ್ರಮದ ಮೊದಲ ಹೆಜ್ಜೆಗಳೆಂದೇ ಹೇಳಬಹುದು.

ನಮ್ಮ ಸಂದರ್ಭದಲ್ಲಿ ಈ ಮೊದಲಿನ ಎಲ್ಲಾ ಕಾಲದಲ್ಲೂ 'ವಿಮರ್ಶೆ' ಎಂಬಂಥ ಸಾಹಿತ್ಯಕ ಚಟುವಟಿಕೆಯೊಂದು ಬೆಳೆದು ಬರಲಿಲ್ಲವೇಕೆ? ಎಂಬುದಕ್ಕೆ ಸಂಬಂಧಿಸಿದಂತೆ ವಿಭಿನ್ನ ಕಾರಣಗಳನ್ನು ಊಹಿಸುವ ಪ್ರಯತ್ನಗಳು ನಡೆದಿವೆ. ಮಾಸ್ತಿಯವರು ಹೇಳುವ ಕೆಲವು ಮಾತುಗಳನ್ನಿಲ್ಲಿ ಗಮನಿಸಬಹುದು. "ನಮ್ಮಲ್ಲಿ ಹಿಂದೆ ದುಷ್ಟ ಗ್ರಂಥಗಳು ಪ್ರಚಾರವಾಗುವುದಕ್ಕೆ ಅವಕಾಶವಿರಲಿಲ್ಲ. ಕವಿಯಾಗಬೇಕೆಂದವನು ತನ್ನ ಶಕ್ತಿಯನ್ನು ಸಭೆಗಳ ಮುಂದೆ ಸ್ಥಾಪಿಸಬೇಕಾಗಿತ್ತು. ತಿಳಿದವರ ಸಭೆಗಳು, ಅದರಲ್ಲೂ ಇತರ ಕವಿಗಳೂ ಇರುತ್ತಿದ್ದಂಥವು; ಇಂಥ ಸಭೆಗಳ ಮುಂದೆ ಬಹಳ ಒಳ್ಳೆಯ ಕಾವ್ಯವಲ್ಲದೆ ಯಾವುದೂ ಉಳಿಯುತ್ತಿರಲಿಲ್ಲ. ಇದಾದ ಮೇಲೆ ಇದು ಒಳ್ಳೆಯ ಗ್ರಂಥ, ಇದು ಅಲ್ಲ ಎಂದು ಹೇಳಬೇಕಾಗಿರಲಿಲ್ಲ. .......... ಒಳ್ಳೆಯದಲ್ಲದ ಗ್ರಂಥಕ್ಕೆ ಉಳಿವೇ ಇಲ್ಲ. ಹೀಗೆ ಸಭೆಗಳ ನಿರ್ದಾಕ್ಷಿಣ್ಯ ತಿರಸ್ಕಾರದಿಂದಲೂ ಪ್ರತಿಗಳನ್ನು ಮಾಡುವುದರಲ್ಲಿ ಇದ್ದ ಕಷ್ಟಗಳಿಂದಲೂ ಒಳ್ಳೆಯ ಗ್ರಂಥಗಳು ಮಾತ್ರ ಪ್ರಾಚುರ್ಯಕ್ಕೆ ಬಂದು ಜನರಲ್ಲಿ ಒಳ್ಳೆಯ ಗ್ರಂಥಗಳ ಸ್ವಾರಸ್ಯವನ್ನು ತಿಳಿಯುವ ಶಕ್ತಿ ಹಬ್ಬಿದ್ದರಿಂದ ಅಸಾಧು ಪ್ರವೃತ್ತಿಗಳನ್ನು ತಿದ್ದುವುದಕ್ಕಾಗಿ ವಿಮರ್ಶೆ ಬೇಕಾಗಿರಲಿಲ್ಲ." [2] ಈ ಮಾತುಗಳಲ್ಲಿ ವ್ಯಕ್ತವಾಗುವಂತೆ ಪಂಡಿತ ಮಂಡಲಗಳಲ್ಲಿರುತ್ತಿದ್ದವರೆಲ್ಲ

---

2. ಮಾಸ್ತಿ ವೆಂಕಟೇಶ ಅಯ್ಯಂಗಾರ, 'ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ', ವಿಮರ್ಶೆ—1, ಬೆಂಗಳೂರು, 1926. ಪು : 2—3

ಗುಣಗ್ರಾಹಿಗಳೇ ಆಗಿದ್ದರೆನ್ನಲಾಗದು. ಪಂಡಿತ ಮಂಡಲಿಗಳ ಅಂಗೀಕಾರವನ್ನು ಪಡೆದ ಕೃತಿಗಳೆಲ್ಲ ಉತ್ತಮ ದರ್ಜೆಯವೇ ಆಗಿದ್ದವೆನ್ನುವುದು ಕೂಡ ಸಂದೇಹಾಸ್ಪದ. ಏಕೆಂದರೆ, 'ಬಹಳ ಒಳ್ಳೆಯ' ಎಂದು ಹೇಳಲಾಗದ ಹಲವು ಕೃತಿಗಳು ಉಳಿದು ಬಂದಿರುವುದನ್ನು ಗಮನಿಸಬಹುದು. ಇನ್ನು ಒಳ್ಳೆಯ ಗ್ರಂಥಗಳು ಮಾತ್ರ ಪ್ರಾಮುಖ್ಯಕ್ಕೆ ಬಂದು 'ಇದು ಒಳ್ಳೆಯದು, ಇದು ಅಲ್ಲ' ಎಂದು ಹೇಳಬೇಕಾದ ಅಗತ್ಯವೇ ಇಲ್ಲದ್ದರಿಂದ ವಿಮರ್ಶೆ ಬೇಕಾಗಿರಲಿಲ್ಲವೆಂಬ ಮಾತು. ಜಿ.ಎಸ್.ಶಿವರುದ್ರಪ್ಪನವರೆಂದಂತೆ "………. ಯಾವುದು ಒಳ್ಳೆಯ ಗ್ರಂಥ, ಯಾವುದು ಅಲ್ಲ ಎನ್ನುವುದನ್ನು ಯಾರಾದರೂ ಹೇಳಿಕೊಟ್ಟಿದ್ದರೆ ಚೆನ್ನಾಗಿತ್ತು. ಆಗ ಜನರ ವಿವೇಚನಾ ಶಕ್ತಿಯು ಪರಿಣಾಮದಿಂದಲಾದರೂ ಇನ್ನೂ ಒಳ್ಳೆಯ ಗ್ರಂಥಗಳು ನಮ್ಮಲ್ಲಿ ಬರಬಹುದಾಗಿತ್ತು."[3] ಹೀಗಾಗಿ ನಮ್ಮಲ್ಲಿ 'ವಿಮರ್ಶೆ' ಬೆಳೆದು ಬರದಿರುವುದಕ್ಕೆ ಕಾರಣ, ವಿಮರ್ಶೆ ಮಾಡುವ ಕೆಲಸವನ್ನು ಪಂಡಿತ ಮಂಡಲಿಗಳು ಮಾಡುತ್ತಿದ್ದವು ಎಂಬುದಲ್ಲ. ಹಾಗೆ ನೋಡಿದರೆ ಇದು ಒಳ್ಳೆಯ ಕೃತಿ, ಇದು ಒಳ್ಳೆಯ ಕೃತಿಯಲ್ಲ ಎಂದು ಹೇಳುವ ಸೀಮಿತ ಉದ್ದೇಶಗಳು ಮಾತ್ರ ವಿಮರ್ಶೆಗಿರಲಾರವು. ಆದುದರಿಂದ ಮಾಸ್ತಿಯವರೇ ಗುರುತಿಸಿದಂತೆ, ಪ್ರತಿಗಳನ್ನು ಮಾಡುವಲ್ಲಿ ಇದ್ದ ಕಷ್ಟಗಳ ಪರಿಣಾಮವಾಗಿ ಒಳ್ಳೆಯ ಕೃತಿಗಳು ಮಾತ್ರ ಪ್ರಾಮುಖ್ಯಕ್ಕೆ ಬಂದವೆಂದಲ್ಲ, ಅಂಥ ಒಳ್ಳೆಯ ಕೃತಿಗಳು ಪ್ರಾಮುಖ್ಯಕ್ಕೆ ಬರದೆಯೂ ಹೋಗಿವೆ. ಸೀಮಿತ ಸಂಖ್ಯೆಯ ಪ್ರತಿಗಳ ಲಭ್ಯತೆ, ಓದುವ ವರ್ಗದ ಸೀಮಿತತೆ, ಅಭಿಪ್ರಾಯ ಭೇದಗಳ ಪರಿಮಿತತೆ, ಪಂಡಿತ ಮಾನ್ಯವಾದುದಕ್ಕೆ ಪುರಸ್ಕಾರ — ಇಂಥ ಅಂಶಗಳು ವಿಮರ್ಶೆಯ ಅಭಾವ ಸ್ಥಿತಿಗೆ ಕಾರಣಗಳಾಗಿದ್ದಿರಬಹುದು. ಕಾರಣಗಳೇನೇ ಇರಲಿ, ಸೃಜನ ಸಾಹಿತ್ಯದಂತೆ, ವಿಮರ್ಶನ ಸಾಹಿತ್ಯವೂ ಬೆಳೆದು

---

3. ನೋಡಿ : ವಿಮರ್ಶೆಯ ಪೂರ್ವ ಪಶ್ಚಿಮ, ಮೈಸೂರು, 1977 (4ನೇ ಮುದ್ರಣ). ಪು : 42

ಬಾರದುದರಿಂದ ನಮ್ಮ ಸಾಹಿತ್ಯಕ್ಕೆ ನಷ್ಟವಂತೂ ಆಗಿದೆ. ಇದರ ಪರಿಣಾಮಗಳನ್ನು ಕನ್ನಡ ಸಾಹಿತ್ಯ ಪರಂಪರೆಯ ನೆರೆಯಿಂದ ಕಂಡುಕೊಳ್ಳಬಹುದಾಗಿದೆ.

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ವಿಮರ್ಶೆಯು ಚಟುವಟಿಕೆಯೊಂದು ರೂಪುಗೊಳ್ಳಲಿಲ್ಲವಾದರೂ ರಚಿತವಾದ ಕೃತಿಗಳನ್ನು ಯಾರೂ ಓದಲೇ ಇಲ್ಲವೆಂದಾಗಲಿ, ಅವುಗಳ ಕುರಿತು ಯಾವುದೇ ಅಭಿಪ್ರಾಯಗಳನ್ನು ತಾಳಲೇ ಇಲ್ಲವೆಂದಾಗಲಿ ಅಲ್ಲ. ಈ ಮಾತಿಗೆ ಪ್ರಬಲ ಆಧಾರಗಳನ್ನಿತ್ತು ಸ್ಪಷ್ಟೀಕರಿಸುವುದು ಕಷ್ಟವಾದರೂ ಕವಿ ಕೃತಿಗಳ ಪ್ರಾರಂಭದಲ್ಲೋ, ಅಂತ್ಯದಲ್ಲೋ ಕಾಣಬರುವ, ಲೇಖಕನ ಸ್ವವಿವರಗಳಲ್ಲಿ, ಅನ್ಯಕವಿ ಪ್ರಶಂಸೆ, ನಿಂದೆಗಳಲ್ಲಿ ಕೆಲವು ಸೂಚನೆಗಳು ದೊರೆಯುತ್ತವೆಯೆಂಬುದು ಸ್ಪಷ್ಟ. ಈ ಸಂಬಂಧದಲ್ಲಿ ಗೋಕಾಕರು ಹೇಳಿರುವ ಮಾತುಗಳು[4] ಹೀಗಿವೆ: "ಕನ್ನಡ ಸಾಹಿತ್ಯಕ್ಕೇನು ವಿಮರ್ಶೆಯು ಹೊಸದಲ್ಲ. ಮೊದಲಿನಿಂದಲೂ ನಡೆದು ಬಂದಿದೆ. ನಮ್ಮ ಕವಿಗಳು ದುರ್ಜನರನ್ನೂ (ಕೆಟ್ಟ ವಿಮರ್ಶಕರು) ದುಷ್ಕವಿಗಳನ್ನೂ ಅನೇಕ ಸಲ ನಿಂದಿಸುತ್ತಾರೆ. ಕೆಲವು ಸಲ ಈ ವಿಡಂಬನೆಯು ಅಲ್ಲಲ್ಲಿ ತೀಕ್ಷ್ಣವಾಗಿರುತ್ತದೆ. .......... ಆದರೆ ಆ ಕಾಲದಲ್ಲಿಯೂ ಅಳಿಗಬ್ಬಿಗರೇ ಮೆರೆಯುತ್ತಿರಲಿಲ್ಲ. ಸತ್ಯಪ್ರಿಯರಾದ ವಿಮರ್ಶಕರು ಹಲವು ಸಲ ಕಾಣಿಸಿಕೊಳ್ಳುತ್ತಿದ್ದರು. 'ಪೇಳ್ವೊಡೆ ಪಂಪನೆ ಪೇಳ್ಗುಮೆ'ಂದು ಹೇಳಿ ಮಹಾಭಾರತವನ್ನು ಬರೆಯಲು ಪಂಪನನ್ನು ಪ್ರೇರಿಸಿದ ಪಂಡಿತರು ಕಡಿಮೆ ತರಗತಿಯವರೇ?". ಇಲ್ಲಿ ಗೋಕಾಕರು ಕನ್ನಡದಲ್ಲಿ ವಿಮರ್ಶೆ ಮೊದಲಿನಿಂದಲೂ ಬೆಳೆದು ಬಂದಿದೆ ಎಂದಿರುವುದು ತೀರ ಸೀಮಿತವಾದ ಅರ್ಥದಲ್ಲಿ ಎಂಬುದನ್ನು ವಿವರಿಸಬೇಕಾದ ಅಗತ್ಯವಿಲ್ಲ. ಇಂಥ ಪ್ರಶಂಸೆಯು, ಮೆಚ್ಚುಗೆಯು,

---

4. ವಿಮರ್ಶೆಯ ಸ್ಥಾನ, ಜ.ಕ., 11-5. 1933. ಪು: 41.

ನಿಂದೆಯ ಮಾತುಗಳಿಂದ ಒಬ್ಬ ಕವಿಯನ್ನು, ಒಂದು ಕವಿ ಕೃತಿಯನ್ನು ಕುರಿತು ಆ ಕವಿಯ ಸಮಕಾಲೀನ ಮತ್ತು ನಂತರದ ಸಂದರ್ಭದಲ್ಲಿ ಹೇಗೆ ಪರಿಭಾವಿಸಲಾಯಿತು, ಯಾವ ಬಗೆಯ ಅಭಿಪ್ರಾಯಗಳನ್ನು ಹೊಂದಲಾಯಿತೆಂಬುದರ ಕೆಲವು ಸೂಚನೆಗಳನ್ನು ತಿಳಿಯಬಹುದಾಗಿದೆ. ಪಂಪನ ನಂತರದ ಹಲವು ಕವಿಗಳು, ಅವನ ಕವಿತೆಯಲ್ಲಿ ಕಂಡುಕೊಂಡ ಗುಣ ಲಕ್ಷಣವನ್ನು ಪ್ರಶಂಸಾ ರೂಪದಲ್ಲಿ ಹೇಳಿರುವ ನಿದರ್ಶನಗಳಿವೆ. ಬೆಳ್ಳಾವೆ ವೆಂಕಟ ನಾರಣಪ್ಪನವರು ತಮ್ಮ ಪಂಪ ಭಾರತದ ಪರಿಷ್ಕರಣದ ಉಪೋದ್ಘಾತದಲ್ಲಿ ಇಂಥ ನಿದರ್ಶನಗಳನ್ನೆಲ್ಲ ಒಂದೆಡೆಗೆ ಕಲೆಹಾಕಿದ್ದಾರೆ. ಇಂಥ ಮಾತುಗಳನ್ನು ಕುರಿತು ಶಿವರುದ್ರಪ್ಪನವರು ಹೀಗೆಂದಿದ್ದಾರೆ : "ಕೃತಿಯ ಪರಿಣಾಮವನ್ನು ಮತ್ತೊಬ್ಬರಿಗೆ ವಿವರವಾಗಿ ವರ್ಣಿಸಿ ಹೇಳದೆ, ಒಂದು ಮಾತಿನಲ್ಲಿ ಸೂತ್ರವೆಂಬಂತಹ ರೂಪದಲ್ಲಿ ಹೇಳುವ ಕೆಲವು ಮಾತುಗಳನ್ನು ನಾವು ವಿಮರ್ಶೆಯ ಒಂದು ವಿಧಾನವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ..... ಆಯಾ ಕವಿಗಳ ಕೃತಿಗಳಲ್ಲಿ ಕಂಡುಬರುವ ಯಾವುದೋ ಒಂದು ವಿಶಿಷ್ಟ ಗುಣವನ್ನು ಆಯಾ ಕವಿಗಳ ಜೀವಾಳ ಎಂಬಂತೆ ಎತ್ತಿ ಹೇಳುವ ರೀತಿ ಇದು. .......... ಇಂಥ ಭಾವನೆಯ ಮಾತುಗಳೂ ದೀರ್ಘಕಾಲದ ಪರಿಣಾಮದಿಂದ, ಸಮರ್ಪಕವಾದ ವಿಮರ್ಶನ ಮತಿಯಿಂದ ಮೂಡಿದರೆ, ಅಮೂಲ್ಯವಾದ ವಿಮರ್ಶೆಯ ಸೂಕ್ತಿಗಳೂ ಆಗುವುದರಲ್ಲಿ ಸಂದೇಹವಿಲ್ಲ"ವೆಂದು ಹೇಳಿ ಈ ಸೂಕ್ತಿಗಳನ್ನು 'ಭಾವನಾ ವಿಮರ್ಶೆ' ಎಂದು ಕರೆದಿದ್ದಾರೆ.[5] ಪಂಪನನ್ನು ಕುರಿತು ನಂತರದ ಕವಿಗಳು ಅವನ ಕೆಲವು ನಿರ್ದಿಷ್ಟ ಗುಣಗಳನ್ನು ಎತ್ತಿ ಹಿಡಿದು ಪ್ರಶಂಸಿಸಿರುವುದನ್ನು ಕಾಣಬಹುದು. 'ಗೀರ್ಗುಂಫದ ಪೆಂಪು' (ದುರ್ಗಸಿಂಹ),

---

5. ಪೂರ್ವೋಕ್ತ, ಪು : 38—39.

‘ಅಸದೃಶಮಪ್ಪ ಅಪೂರ್ವರಸ’ (ನಯಸೇನ), ‘ನುಣ್ಣುವೆತ್ತನುಡಿ’ (ಪಾರ್ಶ್ವ ಪಂಡಿತ), ‘ಒಜೆ’ (ಗುಣವರ್ಮ), ‘ಇಂಪು’ (ಜನ್ನ), ‘ಗುಣ’ (ಮಲ್ಲಿಕಾರ್ಜುನ) — ಇಂಥ ಅಂಶಗಳನ್ನು ಆಯಾ ಕವಿಗಳು ಮೆಚ್ಚಿಕೊಂಡಿದ್ದಾರೆ. ರನ್ನ, ಪಂಪನಿಂದ ‘ವಾಗ್ವಿಭವೋನ್ನತಿ ನೆಗಳ್ದುದು’ ಎಂದರೆ, ನಾಗರಾಜನೆಂಬ ಕವಿ ಪಂಪನನ್ನು ಏಕಮೇವ ಸತ್ಕವಿಯೆಂದಿದ್ದಾನೆ. ಪಂಪನ ಕೃತಿಗಳಲ್ಲಿ ಕಂಡುಕೊಂಡ ರಚನಾ ಕೌಶಲದ ಯಾವುದೋ ಒಂದು ವಿಶಿಷ್ಟಾಂಶವನ್ನು ಇಲ್ಲಿ ಪಂಪನ ವಿಶಿಷ್ಟತೆಯೆಂಬಂತೆ ಹೇಳಲಾಗಿದೆ. ಎಸ್.ವಿ.ರಂಗಣ್ಣನವರು ಇಂಥ ಮಾತುಗಳನ್ನು ‘ವೈಯಕ್ತಿಕ ಹೇಳಿಕೆಗಳೆಂದು ತೆಗೆದುಕೊಳ್ಳಬೇಕೇ ಹೊರತು ನಿರ್ದಾಕ್ಷಿಣ್ಯದ ವಿಮರ್ಶೆಯೆಂದು ಪರಿಗಣಿಸಬೇಕಾದ್ದಿಲ್ಲ.’ ಎನ್ನುವರಾದರೂ ಈ ‘ಅಭಿಪ್ರಾಯಗಳ ವಿಭಿನ್ನತೆ ಪಂಪನ ಶೈಲಿ ಬಹುಮುಖವೆಂದು ಕಾಣುವುದಕ್ಕೆ ಒಳ್ಳೆಯ ನಿದರ್ಶನ’ವೆಂದಿದ್ದಾರೆ.[6] ಇಂಥ ಮಾತುಗಳಿಂದ ವಿಮರ್ಶೆಯ ಚಟುವಟಿಕೆಯೊಂದು ಇಲ್ಲದಿದ್ದ ಸಂದರ್ಭದಲ್ಲಿ, ತೀರ ಸೀಮಿತವಾದ ಅರ್ಥದಲ್ಲೇ ಆದರೂ ಪಂಪನ ನಂತರದ ಕಾಲದಲ್ಲಿ ಅವನನ್ನು ಕುರಿತು ಪರಿಭಾವಿಸಿದ್ದರ ಸ್ವರೂಪವನ್ನು ತಿಳಿಯಬಹುದು. ವಿಮರ್ಶೆಯ ಚಟುವಟಿಕೆಯೊಂದು ರೂಪುಗೊಂಡಿರುವ ಇಂದಿನ ಸಂದರ್ಭದಲ್ಲಿ ಕೂಡ ಇಂಥ ಭಾವನಾತ್ಮಕ ಪರಿಭಾವನೆಗಳು ಇಲ್ಲವೆಂದಲ್ಲ. ಆಧುನಿಕ ಕನ್ನಡ ಕವಿಗಳು ಪಂಪನನ್ನು ಕುರಿತು ಬರೆದಿರುವ ಕವಿತೆಗಳಲ್ಲಿ ಪಂಪನನ್ನು, ಪಂಪನ ಕೃತಿಗಳನ್ನು ಕುರಿತ ಪ್ರಶಂಸಾತ್ಮಕವಾದ ಭಾವನೆಗಳು ವ್ಯಕ್ತವಾಗಿರುವುದನ್ನು ಗಮನಿಸಬಹುದು. ಆದರೂ ಈ ಭಾವನಾತ್ಮಕ ಪರಿಭಾವನೆಗಳೇ ಆಗಲಿ, ಪ್ರಶಂಸೆಯ ಅಥವಾ ನಿಂದಾ ರೂಪದ ಮಾತುಗಳೇ ಆಗಲಿ ಕವಿ ಕೃತಿಗಳ ಕುರಿತಾಗಿ ತಳೆದಿದ್ದಿರಬಹುದಾದ ಭಾವನೆಯನ್ನು ತಿಳಿಯಲು ಇರುವ ಪ್ರಾಸಂಗಿಕ ಸೂಚನೆಗಳೇ ಹೊರತು

---

6. ನೋಡಿ : ‘ಪಂಪನ ಶೈಲಿ’, ಶೈಲಿ–1, ಮೈಸೂರು, 1944. ಪು : 41.

ವಿಮರ್ಶೆಯಲ್ಲ. ವಿಮರ್ಶೆಯೆಂಬುದೊಂದು ಪ್ರತ್ಯೇಕ ಸಾಹಿತ್ಯಕ ಚಟುವಟಿಕೆ ಮೊದಲಾದುದು ಕಳೆದ ಶತಮಾನದ ಕೊನೆಯ ಮತ್ತು ಈ ಶತಮಾನದ ಮೊದಲ ದಿನಗಳಲ್ಲಷ್ಟೆ.

ಪ್ರಾಚೀನ ಕೃತಿಗಳ ಪರಿಷ್ಕರಣ ಪ್ರಯತ್ನಗಳ ಜೊತೆ ಜೊತೆಗೇ ರೂಪುಗೊಳ್ಳಲು ಪ್ರಾರಂಭವಾದ ಪರಿಚಯಾತ್ಮಕ ಸ್ವರೂಪದ ಕನ್ನಡ ವಿಮರ್ಶೆ, ಈ ಒಂದು ಶತಮಾನವನ್ನೂ ಮೀರಿಲ್ಲದ ಕಡಿಮೆ ಕಾಲಾವಧಿಯಲ್ಲಿ ಗಮನಾರ್ಹವಾಗಿ ಬದಲಾಗಿದೆ, ಹಲವು ಆಯಾಮಗಳನ್ನು ಪಡೆದುಕೊಂಡಿದೆ. ಹಲವು ಅನ್ಯಜ್ಞಾನ ಶಿಸ್ತುಗಳ ಪ್ರಭಾವವೂ ಈಚಿನ ವಿಮರ್ಶೆಯ ಮೇಲಾಗಿರುವುದು ಕಾಣಬರುತ್ತದೆ. ಇದರ ಮಧ್ಯೆ ಕನ್ನಡ ವಿಮರ್ಶೆ ಅಗತ್ಯವಿದ್ದಷ್ಟು ಬೆಳೆಯಲಿಲ್ಲವೆಂಬ ಮಾತೂ ಆಗಾಗ ಕೇಳಿಬರುತ್ತಿದೆ. ಈ ಮಾತನ್ನು ಒಪ್ಪುವಾಗಲೂ ಪ್ರಾರಂಭದಿಂದ ಇಂದಿನವರೆಗೆ ಕನ್ನಡ ವಿಮರ್ಶೆಯಲ್ಲಿ ಆಗಿರುವ ಬದಲಾವಣೆಗಳನ್ನೇನೂ ಮರೆಯಲಾಗದು. ಇಂಥ ಸಂದರ್ಭದಲ್ಲಿ ನಿಯ ಕನ್ನಡದ ಮೊದಲ ಕವಿಯೂ ಮಹತ್ವದ ಕವಿಯೂ ಆಗಿರುವ ಪಂಪನಂಥ ಕವಿಯೊಬ್ಬನ ಕೃತಿಗಳನ್ನು ಕುರಿತ ವಿಮರ್ಶೆಯ ಒಲವು–ನಿಲುವುಗಳನ್ನು ಕಂಡುಕೊಳ್ಳುವುದು ತೀರ ಪ್ರಾಥಮಿಕ ನೆಲೆಯಲ್ಲಿ ಸ್ವಾರಸ್ಯಕರವಾದದ್ದೂ, ಅಷ್ಟೇ ಮಟ್ಟಿಗೆ ಉಪಯುಕ್ತವೂ ಆಗಿರುವಂಥದು. ನಮ್ಮ ವಿಮರ್ಶೆಯಲ್ಲಿ ಪಂಪನ ಕೃತಿಗಳನ್ನು ಯಾವ ಯಾವ ನೆಲೆಗಳಿಂದ ಅಧ್ಯಯನ ಮಾಡಲಾಗಿದೆ? ಯಾವ ರೀತಿಯಲ್ಲಿ ಪರಿಭಾವಿಸಲಾಗಿದೆ? ಯಾವ ಯಾವ ಬಗೆಯ ದೃಷ್ಟಿ ಧೋರಣೆಗಳನ್ನು ನಮ್ಮ ವಿಮರ್ಶಕರು ಪಂಪನನ್ನು ಕುರಿತಂತೆ ತಾಳುತ್ತ ಬಂದಿದ್ದಾರೆ? ಒಟ್ಟಾರೆಯಾಗಿ ಏನೇನು ಕೆಲಸ ನಡೆದಿದೆ? ಅದರ ಸ್ವರೂಪ ಮತ್ತು ನೆಲೆ–ಬೆಲೆಗಳೇನು? ಎಂಬಂಥ ಹಲವು ಅಂಶಗಳು ಪಂಪನನ್ನು ಕುರಿತ ವಿಮರ್ಶಾ ಸಾಹಿತ್ಯವನ್ನು ಅವಲೋಕಿಸುವಾಗ ಮುಖ್ಯವಾಗುತ್ತವೆ. ಇದುವರೆಗೆ ನಡೆದಿರುವ ಒಟ್ಟಾರೆ ಕೆಲಸದ ಸ್ವರೂಪವನ್ನು ಗ್ರಹಿಸುವುದರ ಮೂಲಕ, ಇನ್ನು ಮುಂದಿನ ಅಧ್ಯಯನಗಳು ಗಮನಿಸಬೇಕಾದ

ನೆಲೆಗಳನ್ನು, ಅಂಥ ಅಧ್ಯಯನಗಳು ಪಡೆದುಕೊಳ್ಳಬೇಕಾದ ಸ್ವರೂಪವೆಂಥದೆಂಬುದನ್ನು ಕಂಡುಕೊಳ್ಳುವುದು ಸಾಧ್ಯ. ಯಾವುದೇ ಭಾಷೆಯ ಸಾಹಿತ್ಯದಲ್ಲೂ ಇಂಥ ಅಧ್ಯಯನಗಳು ಕಾಲದಿಂದ ಕಾಲಕ್ಕೆ ಅಗತ್ಯವಾಗಿ ನಡೆಯಬೇಕಾದಂಥವು.

ನಿರ್ದಿಷ್ಟ ಕೃತಿ ಕೇಂದ್ರಿತ ವಿಮರ್ಶಾ ಸಾಹಿತ್ಯವನ್ನು ಕುರಿತ ಅಧ್ಯಯನ ಕನ್ನಡದ ಸಂದರ್ಭಕ್ಕೆ ಹೊಸದೆಂದೇ ಹೇಳಬೇಕು. ಕನ್ನಡ ವಿಮರ್ಶೆಯ ಬೆಳವಣಿಗೆಯನ್ನು ಕುರಿತು ಈಗಾಗಲೇ ಕೆಲವು ಬೆಲೆಯುಳ್ಳ ಅಧ್ಯಯನಗಳು ನಡೆದಿವೆ. 'ಕನ್ನಡ ವಿಮರ್ಶೆಯ ನೆಲೆ–ಬೆಲೆ', 'ಬಿಡುಗಡೆಯ ಬೆಳ್ಳಿ' – ಇಂಥ ಗ್ರಂಥಗಳಲ್ಲಿ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕನ್ನಡ ವಿಮರ್ಶೆಯ ಕುರಿತಾದ ಕೆಲವು ಮೌಲಿಕ ಚರ್ಚೆಗಳಿರುವುದನ್ನು ಗಮನಿಸಬಹುದು. ಇಂಥ ಇನ್ನಿತರ ಕೆಲವು ಪ್ರಯತ್ನಗಳೂ ನಡೆದಿವೆ. ಆದರೆ ನಿರ್ದಿಷ್ಟ ಲೇಖಕನನ್ನು, ಕೃತಿಯನ್ನು ಕುರಿತು ಕಾಲದಿಂದ ಕಾಲಕ್ಕೆ ಬೆಳೆದು ಬಂದ ವಿಮರ್ಶಾ ಸಾಹಿತ್ಯವನ್ನು ಕುರಿತ ಅಧ್ಯಯನಗಳು ನಮ್ಮಲ್ಲಿ ನಡೆದಂತಿಲ್ಲ. ಅಂಥದೊಂದು ಗಮನಾರ್ಹ ಪ್ರಯತ್ನವೆಂದರೆ, ಕೆ.ವಿ.ನಾರಾಯಣರ 'ಕುವೆಂಪು ಕೃತಿಗಳ ವಿಮರ್ಶೆಯ ನೆಲೆಗಳು' ಎಂಬ ಚರ್ಚೆ. ಇದು ಅಧ್ಯಯನಕ್ಕೆ ಅನುಸರಿಸಿದ ವಿಧಾನ ಮತ್ತು ಚರ್ಚೆಯ ಸ್ವರೂಪ ಎರಡೂ ನೆಲೆಗಳಿಂದ ಗಮನಿಸತಕ್ಕುದಾಗಿದೆ. ಇಂಗ್ಲೀಷಿನಲ್ಲಾದರೆ, ಇಂಥ ಅನೇಕ ಅಧ್ಯಯನಗಳು ನಡೆದಿದ್ದು, ವಿಭಿನ್ನ ಸ್ವರೂಪವನ್ನು ಪಡೆದುಕೊಂಡಿವೆ. ಒಬ್ಬ ನಿರ್ದಿಷ್ಟ ಕೃತಿಕಾರನ ಕೃತಿಗಳನ್ನು ಕುರಿತು ಬೆಳೆದು ಬಂದ ವಿಮರ್ಶಾ ಪರಂಪರೆಯನ್ನು ಕುರಿತ ವ್ಯವಸ್ಥಿತವಾದ ಅಧ್ಯಯನಗಳು ಮಾತ್ರವಲ್ಲದೆ, ನಿರ್ದಿಷ್ಟ ಕೃತಿಕಾರನನ್ನು, ಕೃತಿಗಳನ್ನು ಕುರಿತು ಬೆಳೆದು ಬಂದ ವಿಮರ್ಶಾ ಪರಂಪರೆಯಲ್ಲಿ, ಅತ್ಯುತ್ತಮ ವಿಮರ್ಶೆಗಳಿಂದ ಆಯ್ದ ಭಾಗಗಳನ್ನು ಕಾಲಾನುಕ್ರಮದಲ್ಲಿ ಸಂಕಲಿಸಿರುವ ಪ್ರಯತ್ನಗಳು ಕೂಡ ನಡೆದಿವೆ. ನಿರ್ದಿಷ್ಟ ಕೃತಿಕಾರನನ್ನು ಕುರಿತ ವಿಮರ್ಶಾ ಸಾಹಿತ್ಯವನ್ನು ಅಧ್ಯಯನಕ್ಕೆ ಒಳಗು ಮಾಡಿರುವ ಹಲವು ಕೃತಿಗಳನ್ನೂ,

'ಕ್ರಿಟಿಕಲ್ ಹೆರಿಟೇಜ್' ಮಾದರಿಯ ಹಲವು ಕೃತಿಗಳನ್ನು ಈ ನಿಟ್ಟಿನಲ್ಲಿ ನೆನಪಿಗೆ ತಂದುಕೊಳ್ಳಬಹುದು.

ಈ ಬಗೆಯ ಅಧ್ಯಯನಗಳು ಕನ್ನಡದಲ್ಲಿ ನಡೆದಿಲ್ಲವೆಂಬುದರ ಜೊತೆಗೆ, ಇಲ್ಲಿರುವ ಕೆಲವು ವಿಶಿಷ್ಟ ಸಮಸ್ಯೆಗಳೂ ಗಮನಿಸಬೇಕಾದಂಥವು. ಒಬ್ಬ ಲೇಖಕನನ್ನು ಕುರಿತ ವಿಮರ್ಶಾ ಸಾಹಿತ್ಯವನ್ನು ಅಧ್ಯಯನ ಮಾಡಬೇಕೆನ್ನುವವರಿಗೆ, ಹಲವು ನಿಯತಕಾಲಿಕಗಳಲ್ಲಿ ಚೆದುರಿಹೋಗಿರುವ ಎಲ್ಲ ವಿಮರ್ಶಾ ಬರಹಗಳೂ ಒಂದೆಡೆಗೆ ದೊರೆಯಲಾರವು. ಇದು ನಮ್ಮ ಗ್ರಂಥಾಲಯ ವ್ಯವಸ್ಥೆಗೆ ಸಂಬಂಧಿಸಿದ ಪ್ರಶ್ನೆ. ಅದು ಹೋಗಲಿ ಒಬ್ಬ ಲೇಖಕನನ್ನು ಕುರಿತಂತೆ ನಡೆದಿರುವ ಸಮಗ್ರ ಅಧ್ಯಯನದ ಸೂಚಿಗಳೂ ನಮ್ಮಲ್ಲಿ ವಿರಳ. ಆದರೂ ಎಸ್.ಶಿವಣ್ಣನವರು ರಂ.ಶ್ರೀ. ಮುಗಳಿಯವರ ಕನ್ನಡ ಸಾಹಿತ್ಯ ಚರಿತ್ರೆಯ ಅನುಬಂಧವಾಗಿ ಸಿದ್ಧಪಡಿಸಿರುವ 'ಅಭ್ಯಾಸ ಸೂಚಿ' ಹಾಗೂ ಟಿ.ವಿ.ವೆಂಕಟರಮಣಯ್ಯನವರ 'ಕನ್ನಡ ಭಾಷಾ ಸಾಹಿತ್ಯ ಲೇಖನ ಸೂಚಿ'ಗಳು ತಮ್ಮ ಎಲ್ಲ ಮಿತಿಗಳ ನಡುವೆಯೂ ಈ ನಿಟ್ಟಿನಲ್ಲಿ ಸಾಕಷ್ಟು ನೆರವಿಗೆ ಬರಬಲ್ಲವು.

ಇಲ್ಲಿ ಇನ್ನೊಂದು ಅಂಶವನ್ನು ಸ್ಪಷ್ಟಪಡಿಸಬೇಕು. ಇದು ಪಂಪನನ್ನು ಕುರಿತ ವಿಮರ್ಶೆಯ ಅಧ್ಯಯನವೇ ಹೊರತು ವಿಮರ್ಶೆಯ ವಿಮರ್ಶೆಯಾಗಲಿ, ಪುನರ್ ವಿಮರ್ಶೆಯ ಪ್ರಯತ್ನವಾಗಲಿ ಅಲ್ಲ. ಏಕೆಂದರೆ ವಿಮರ್ಶೆಯ ವಿಮರ್ಶೆಯನ್ನಾಗಲಿ, ಪುನರ್ ವಿಮರ್ಶೆಯನ್ನಾಗಲಿ ನಡೆಸುವುದೆಂದರೆ, ಈಗಾಗಲೇ ಬಂದಿರುವ ವಿಮರ್ಶಾ ಬರಹವೊಂದರಲ್ಲಿ ತಲುಪಲಾಗಿರುವ ನಿಲುವುಗಳನ್ನೋ ಅಭಿಪ್ರಾಯಗಳನ್ನೋ ಸಂಗತವೆನ್ನಿಸಿದರೆ ಸಮರ್ಥಿಸುವ, ಹಾಗೆನ್ನಿಸದಿದ್ದರೆ ಅದನ್ನು ನಿರಾಕರಿಸಿ ಸಂಗತವೆಂದು ತೋರುವ ಅಭಿಪ್ರಾಯವನ್ನು ಮುಂದಿಡುವುದೇ ಆಗಿರುತ್ತದೆ. ಹಾಗಾಗುವಾಗ ಅದು ಮೂಲ ಕೃತಿಯನ್ನೇ ಕುರಿತ ಬೇರೊಂದು ವಿಮರ್ಶೆಯೇ ಆಗಿರುತ್ತದೆ. ಇದರ ಬದಲು ವಿಮರ್ಶೆಯೊಂದರಲ್ಲಿ

ತಲುಪಲಾಗಿರುವ ನಿಲುವುಗಳಿಗೆ ಬಳಸಲಾದ ವಿಮರ್ಶಾ ನಿಲುವುಗಳನ್ನು, ಅನುಸರಿಸಲಾಗಿರುವ ಮಾರ್ಗವನ್ನು ಇಲ್ಲವೆ ಮಾನದಂಡವನ್ನು ಕುರಿತು ವಿಶ್ಲೇಷಿಸಲು, ಅವನ್ನು ಕುರಿತು ಚರ್ಚಿಸಲು, ಅವುಗಳಿಗಿರುವ ವ್ಯಾಪ್ತಿ ಮತ್ತು ಮಿತಿಗಳನ್ನು ಗುರುತಿಸಲು ಅವಕಾಶವಿರುತ್ತದೆ. ಕೆ.ವಿ.ನಾರಾಯಣರೆಂದಂತೆ ವಿಮರ್ಶೆಯು ವಿಮರ್ಶೆಗೆ ಅಥವಾ ವಿಮರ್ಶೆಯನ್ನು ಕುರಿತ ಅಧ್ಯಯನಕ್ಕೆ ಇದು ಹೆಚ್ಚು ಸೂಕ್ತವಾದ ಮಾರ್ಗ.[7]

ಪ್ರಸ್ತುತ ಅಧ್ಯಯನ ಪಂಪನನ್ನು ಕುರಿತ ವಿಮರ್ಶಾ ಸಾಹಿತ್ಯದ ಅಧ್ಯಯನವೇ ಆಗಿದ್ದರೂ ಇಲ್ಲಿ ವಿಮರ್ಶೆಗಳನ್ನು ಮಾತ್ರವೇ ಗಮನದಲ್ಲಿರಿಸಿಕೊಂಡಿಲ್ಲ. ವಿಮರ್ಶೆಗೆ ಪೂರಕವಾದ, ಪಂಪನನ್ನು ಕುರಿತ ಇತರ ಅಧ್ಯಯನದ ನೆಲೆಗಳನ್ನೂ ಇಲ್ಲಿ ಗಮನಿಸಲಾಗಿದೆ. ಪ್ರಾಚೀನ ಕೃತಿಯೊಂದನ್ನು ಕುರಿತ ವಿಮರ್ಶಾ ಸಾಹಿತ್ಯದ ಅಧ್ಯಯನದ ಸಂದರ್ಭದಲ್ಲಿ ಆ ಕೃತಿಯ ಪರಿಷ್ಕೃತ ಪಾಠ ಕೂಡ ಮುಖ್ಯವಾಗುತ್ತದೆ. ಏಕೆಂದರೆ ಸಮರ್ಥವಾದ ಪಾಠವಿಲ್ಲದೆ ಸಮರ್ಥವಾದ ವಿಮರ್ಶೆ ಬೆಳೆಯಲಾರದು. ಹೀಗಾಗಿ ಕಾಲಾನುಕ್ರಮದಲ್ಲಿ ಬಂದ ಪಂಪನ ಕೃತಿಗಳ ಪರಿಷ್ಕರಣಗಳನ್ನು ಇಲ್ಲಿ ಗಮನಿಸುವುದು ಯುಕ್ತವೇ ಆಗಿದೆ. ಹಾಗೆಯೇ ಆ ಪರಿಷ್ಕರಣಗಳಲ್ಲಿ ಉಳಿದ ಅರಕೆಗಳನ್ನು ತುಂಬುವ, ಅಸ್ಪಷ್ಟತೆಗಳನ್ನು ಸ್ಪಷ್ಟೀಕರಿಸುವ ಪ್ರಯತ್ನಗಳನ್ನೂ ಗಮನಿಸಬೇಕಾಗುತ್ತದೆ. ಪಾಠ ಚರ್ಚೆಯ ಇಂಥ ಪ್ರಯತ್ನಗಳು ಮಾತ್ರವಲ್ಲದೆ, ಪಂಪನ ವ್ಯಕ್ತಿ ವಿವರಗಳು ಮತ್ತು ಅರಿಕೇಸರಿಯ ವಂಶಾವಳಿಯ ವಿವರಗಳನ್ನು ಕುರಿತ ಚರ್ಚೆಗಳನ್ನೂ ಇಲ್ಲಿಗೆ ಒಳಗು ಮಾಡಿಕೊಳ್ಳಲಾಗಿದೆ. ಉಳಿದಂತೆ

---

7. ನೋಡಿ : ಕುವೆಂಪು ಕೃತಿಗಳ ವಿಮರ್ಶೆಯ ನೆಲೆಗಳು, ಕ.ಭಾ., 13–1 ಮತ್ತು 2, 1980. ಪು : 156

ವಿಮರ್ಶೆಯಲ್ಲಿ ಕಾಣಬರುವ ಪ್ರಧಾನವಾದ ದೃಷ್ಟಿಕೋನಗಳನ್ನು ಗಮನಿಸುವುದಂತೂ ಸರಿಯೆ. ಹೀಗಾಗಿ ಈ ಅಧ್ಯಯನ ಪಂಪನ ಕೃತಿಗಳನ್ನು ಕುರಿತ ಅಧ್ಯಯನದ ಎಲ್ಲ ನೆಲೆಗಳನ್ನೂ ಗಣನೆಗೆ ತೆಗೆದುಕೊಂಡದ್ದಾಗಿದೆ.

## ಅಧ್ಯಾಯ : ಎರಡು

## ಪಂಪನ ಕಾವ್ಯಗಳು ಮತ್ತು ಅವುಗಳ ಪರಿಷ್ಕರಣಗಳು

ಸುಮಾರು ಒಂದು ಸಾವಿರ ವರುಷಗಳಷ್ಟು ಪ್ರಾಚೀನನಾದ ಪಂಪಕವಿಯ ಕಾವ್ಯಗಳು ಮುದ್ರಣ ಸಂಸ್ಕೃತಿಯಲ್ಲಿ ಬೆಳಕು ಕಂಡದ್ದು ತೀರ ಇತ್ತೀಚೆಗೆ, ಎಂದರೆ ಸುಮಾರು ಒಂದು ಶತಮಾನದ ಹಿಂದೆಯಷ್ಟೆ. ಆ ಮೊದಲಿನ ಇಡೀ ಕಾಲಮಾನದಲ್ಲಿ ಅವು ಉಳಿದು ಬಂದದ್ದು ಹಸ್ತಪ್ರತಿಗಳ ಮೂಲಕ ಮಾತ್ರ ಮತ್ತು ಆ ಎಲ್ಲಾ ಕಾಲದಲ್ಲಿ ಆ ಹಸ್ತಪ್ರತಿಗಳನ್ನೇ ಪಂಪನ ಕಾವ್ಯಗಳಾಗಿ ಜನ ಓದಿದ್ದಾರೆ. ಇಂಥ ಹಸ್ತಪ್ರತಿಗಳನ್ನೇ ಆಧರಿಸಿ ಆ ಕಾವ್ಯಗಳ ಪರಿಷ್ಕರಣಗಳು ಇಂದು ಸಿದ್ಧವಾಗಿವೆ.

ಮುದ್ರಣ ಸಂಸ್ಕೃತಿ ಹೆಚ್ಚು ಪ್ರಚುರಗೊಂಡಿರುವ ಈ ದಿನಗಳಲ್ಲಿ ಕವಿಯೊಬ್ಬ ತನ್ನ ಕೃತಿಯನ್ನು ತಾನೇ ಅಚ್ಚಿಸಿ ಪ್ರಕಟಿಸಬಹುದಾದ ಸಾಧ್ಯತೆಗಳಿವೆ. "ಈ ದಿನ ಕವಿ ಅಥವಾ ಲೇಖಕನಿಗೆ ಬರವಣಿಗೆಯ ಸಾಧನ ಸಾಮಗ್ರಿಗಳ ತೊಂದರೆಯಿಲ್ಲ; ಬರೆದುದನ್ನು ಪ್ರಕಟಿಸುವ ಮಾಧ್ಯಮಗಳು ಸಾಕಷ್ಟಿವೆ. ಪ್ರಕಾಶಕರಿದ್ದಾರೆ, ಪತ್ರಿಕೆಗಳಿವೆ .........."[1] ಜೊತೆಗೆ ಮುದ್ರಣದ ಹಂತದಲ್ಲಿ ತಾನೇ ಅಚ್ಚಿನ ದೋಷಗಳನ್ನು ತಿದ್ದಬಹುದು; ತನ್ನ ಕೃತಿಯೊಳಗೆ ಯಾವುದೇ ಅನುದ್ದೇಶಿತ ಅಪಪಾಠಗಳು, ವಿಚಾರಗಳು ಬಂದು ಸೇರದಂತಹ ಶುದ್ಧ ಪಾಠವನ್ನು ತನ್ನ ಓದುಗರಿಗೆ ನೀಡಬಹುದಾಗಿದೆ. ಪಂಪನಂತಹ ಯಾವುದೇ ಪ್ರಾಚೀನ ಕವಿಗೂ ಇಂಥ ಸವಲತ್ತುಗಳಿರಲಿಲ್ಲ. ಈ ಎಲ್ಲ ಸವಲತ್ತುಗಳೂ ಮುದ್ರಣ ಸಂಸ್ಕೃತಿಯ ಪ್ರಚುರತೆಯಿಂದಾಗಿ ಈ ತಲೆಮಾರಿನ ಕವಿ ಲೇಖಕರಿಗೆ ದತ್ತವಾಗಿರುವಂಥವು. ಕವಿಯಾದವನು ಬರೆಯುವುದೇ ಮೂಲತ: ಪ್ರಯಾಸದ ಕೆಲಸವಾಗಿದ್ದ ಅಂದಿನ ದಿನಗಳಲ್ಲಿ ಒಂದು ಕವಿ ಕೃತಿಯ ಹೆಚ್ಚು ಹೆಚ್ಚು ಪ್ರತಿಗಳ ಅಗತ್ಯವನ್ನು ಪೂರೈಸುತ್ತಿದ್ದವರು ಲಿಪಿಕಾರರು. ಪಂಡಿತ ಮಂಡಲಿಗಳ, ರಾಜಾಸ್ಥಾನಗಳ ಆಚೆಯ ಕಾವ್ಯಾಸಕ್ತರಿಗೆ ಕವಿ ಕೃತಿಗಳು ದೊರೆಯುವ ಸಾಧ್ಯತೆಗಳು ಇಂಥ ಲಿಪಿಕಾರರಿಂದ ಮಾತ್ರವೇ ಇದ್ದಿರಬೇಕು. ಡಿ.ಎಲ್.ನರಸಿಂಹಾಚಾರ್ಯರು

---

1. ಶಿವರುದ್ರಪ್ಪ ಜಿ.ಎಸ್., ಕನ್ನಡ ಸಾಹಿತ್ಯ ಸಮೀಕ್ಷೆ, ಬೆಂ.ವಿ.ವಿ., 1975. ಪು:13

ಹೇಳುವಂತೆ "ನಮ್ಮ ಹಳೆಯ ಸಾಹಿತ್ಯದ ಬಹುಭಾಗ ಇದುವರೆಗೂ ಉಳಿದು ಬಂದಿರುವುದು ಇಂಥ ಲಿಪಿಕಾರ ಪರಂಪರೆಯ ಅವಿಶ್ರಾಂತ ಪ್ರಯತ್ನಗಳಿಂದಲೇ". [2]

## 1.1 ಗ್ರಂಥ ಸಂಪಾದನೆ ಮತ್ತು ವಿಮರ್ಶೆ

ಪ್ರಾಚೀನ ಕೃತಿಗಳನ್ನು ಕುರಿತ ವಿಮರ್ಶಾ ಸಾಹಿತ್ಯವನ್ನಾಗಲಿ, ಅಧ್ಯಯನಗಳನ್ನಾಗಲಿ ಅಭ್ಯಾಸ ಮಾಡುವ ಸಂದರ್ಭದಲ್ಲಿ ಆ ಕೃತಿಗಳ ಪರಿಷ್ಕೃತ ಪಾಠ ಕೂಡ ಮುಖ್ಯವಾಗುತ್ತದೆ. ಏಕೆಂದರೆ ಒಂದು ಕೃತಿಯನ್ನು ಕುರಿತ ನಮ್ಮ ಎಲ್ಲ ಸಂವಾದಗಳು, ವಾಗ್ವಾದಗಳೂ ಆ ಕೃತಿಯ ಪಾಠವನ್ನೇ ಆಧರಿಸಿರುತ್ತವೆ. ಜೊತೆಗೆ ಒಂದು ಕೃತಿಯನ್ನು ಕುರಿತ ಉತ್ತಮ ವಿಮರ್ಶೆ ಬೆಳೆಯಲು ಆ ಕೃತಿಯ ಸಮರ್ಥ ಪಾಠವಿಲ್ಲದೆ ಸಾಧ್ಯವಿಲ್ಲ. ಕವಿಯೇ ಬರೆದ ಹಸ್ತಪ್ರತಿ ಉತ್ತಮ ಸ್ಥಿತಿಯಲ್ಲಿ ದೊರೆಯುವುದಾದರೆ ಆ ಕೃತಿಯ ಪಾಠವನ್ನು ಕುರಿತ ಸಮಸ್ಯೆಗಳು ಬಹುಮಟ್ಟಿಗೆ ಇಲ್ಲವಾಗಬಹುದು. ಇಂಥ ಸಾಧ್ಯತೆಗಳಿಲ್ಲವಾದಾಗ ಲಿಪಿಕಾರರು ಸಿದ್ಧಪಡಿಸಿದ ಹಸ್ತಪ್ರತಿಗಳನ್ನೇ ಆಶ್ರಯಿಸಬೇಕಾಗುತ್ತದೆ.

ಸಾಮಾನ್ಯವಾಗಿ ಕೃತಿಯೊಂದರ ಮೂಲ ಪ್ರತಿಯನ್ನು ಆಧಾರವಾಗಿರಿಸಿಕೊಂಡು ಅದರ ನಕಲುಗಳನ್ನು ಮಾಡಬೇಕೆಂದು ಸಂಕಲ್ಪಿಸಿ ತೊಡಗುವ ಲಿಪಿಕಾರ ತನಗರಿವಿಲ್ಲದಂತೆಯೇ ಅನೇಕ ತಪ್ಪುಗಳನ್ನು ಅನುದ್ದೇಶಿತವಾಗಿ ಮಾಡಬಹುದು. ಆ ತಪ್ಪುಗಳು ತಾನೇ ನೋಡಿ ಬರೆಯುವಾಗ ತಪ್ಪು ಗ್ರಹಿಕೆಯಿಂದಾಗಬಹುದು ಅಥವಾ ಬೇರೆಯವರಿಂದ ಹೇಳಿಸಿ ಪ್ರತಿ ಮಾಡುವಾಗ ತಪ್ಪಾಗಿ ಕೇಳಿದುದರ ಪರಿಣಾಮವಾಗಿಯೂ ಆಗಬಹುದು. ಇದಲ್ಲದೆ ಆ ಲಿಪಿಕಾರ ಕೆಲವೇಳೆ ತಾನೇ ಕೆಲವು ಪದ್ಯಗಳನ್ನೋ, ಪದ್ಯಭಾಗಗಳನ್ನೋ ಹೊಸೆದು ಸೇರಿಸಬಹುದು; ಮೂಲದ ಪಾಠವನ್ನು ತಿದ್ದಿ ತನ್ನ ನಕಲಿನಲ್ಲಿ ಸೇರಿಸಬಹುದು. ಹೀಗಾಗಿ ಉದ್ದೇಶಿತವಾಗಿಯೂ ಕೆಲವು ಅಪಪಾಠಗಳು ಬಂದು ಸೇರುತ್ತವೆ. ಇದಲ್ಲದೆ ಇನ್ನೊಂದು ಸೂಕ್ಷ್ಮ ಸಂಗತಿಯೆಂದರೆ ಕವಿಯೇ ಕೆಲವೇಳೆ ಪಾಠಭೇದಗಳಿಗೆ ಕಾರಣವಾಗಬಹುದು.

---

2. ನರಸಿಂಹಾಚಾರ ಡಿ.ಎಲ್., ಕನ್ನಡ ಗ್ರಂಥ ಸಂಪಾದನೆ, ಮೈಸೂರು, 1964. ಪು:55

ಒಂದು ಕೃತಿಯನ್ನು ಬರೆದು ಮುಗಿಸಿದ ಮೇಲೆ ಯಾವುದೋ ಒಂದು ಸಮಯದಲ್ಲಿ ಅದರ ಯಾವುದೋ ಒಂದು ಪ್ರಯೋಗ, ಪದ ಅಥವಾ ಪದ್ಯವೇ ಸರಿದೋರದೆ ಅದನ್ನು ತಿದ್ದಲೂಬಹುದು. ಆ ತಿದ್ದುಪಡಿಗೆ ಮೊದಲೇ ಆದ ಮೂಲ ಪ್ರತಿಯ ನಕಲಿನ ಪಾಠಕ್ಕೂ ತಿದ್ದುಪಡಿಯಾದ ನಂತರ ಮಾಡಲಾದ ನಕಲಿನ ಪಾಠಕ್ಕೂ ಇಂಥ ಸಂದರ್ಭಗಳಲ್ಲಿ ಸಹಜವಾಗಿಯೇ ಪಾಠ ಭಿನ್ನತೆಗಳು ತಲೆದೋರುತ್ತವೆ. ಇಂಥದೊಂದು ತಿದ್ದುಪಡಿಯನ್ನು ಪಂಪನೇ ಮಾಡಿರಬಹುದೆಂದು ಡಿ.ಎಲ್.ಎನ್. ಅವರು ಊಹಿಸಿದ್ದಾರೆ.[3] ಅದನ್ನಿಲ್ಲಿ ಗಮನಿಸಬಹುದು: ಆದಿಪುರಾಣದಲ್ಲಿ ಅಲಕಾಪುರ ವರ್ಣನೆಯ ಸಂದರ್ಭದಲ್ಲಿ ಬರುವ "ಬಳಸಿದ ಪೊನ್ನ ಕೋಂಟೆ ಪುರಲಕ್ಷ್ಮಿಯ ಕೈಗೆಯರ್ದ ತೋಣದೊಳ್ ಬಳಸಿದ ಪೊನ್ನ ಕನ್ನವಡದಂತಿರೆ .........." (1–70) ಎಂಬ ಪದ್ಯದಲ್ಲಿನ 'ಕನ್ನವಡ' ಎಂಬುದಕ್ಕೆ 'ಕಾಂಡಪಟ' ಎಂಬ ಪಾಠಾಂತರವಿದೆ. ಎಲ್.ಬಸವರಾಜು ಅವರ ಪರಿಷ್ಕರಣದಲ್ಲಿ 'ಕನ್ನವಡ' ಎಂಬುದೇ ಸ್ವೀಕೃತವಾಗಿದೆ. ಎಸ್.ಜಿ. ನರಸಿಂಹಾಚಾರ್ ಮತ್ತು ಕುಂದಣಗಾರರ ಪರಿಷ್ಕರಣಗಳಲ್ಲಿ ಕಾಂಡಪಟ ಎಂಬುದನ್ನೇ ಸ್ವೀಕರಿಸಲಾಗಿದೆ. ಇವೆರಡೂ ಭಿನ್ನ ಪಾಠಗಳು ಪಂಪನಿಂದಲೇ ಆಗಿರಬೇಕೆಂದು ಡಿ.ಎಲ್.ಎನ್. ಅವರ ಊಹೆ. ಅವರ ಪ್ರಕಾರ "ಆದಿಪುರಾಣವನ್ನು ಬರೆದು ಮುಗಿಸಿದ ಮೇಲೆ ಪಂಪ ಕೂಡಲೇ ತನ್ನ ಭಾರತದ ರಚನೆಗೆ ತೊಡಗಿರಬೇಕು. ಅದರ ಆರಂಭದ ಭಾಗದಲ್ಲಿ ಪರಾಶರ ಮುನೀಂದ್ರನು ಮತ್ಸ್ಯಗಂಧಿಯೊಡನೆ ದೋಣಿಯಲ್ಲಿ ಕುಳಿತು ಯಮುನೆಯನ್ನು ದಾಟುತ್ತಿರುವಾಗ ಆ ಋಷಿ ಅವಳಲ್ಲಿ ಮೋಹಗೊಂಡ ಕಥೆ ಬರುತ್ತದೆ. ಹಾಗೆ ಮೋಹವಶನಾದ ಅವನು ಅವಳಿಗೆ ಯೋಜನಗಂಧಿತ್ವವನ್ನು ಕೊಟ್ಟು 'ಕಾಂಡಪಟದಂತಿರ್ಪನ್ನೆಗಂ ಮಾಡಿ ಮಂಜನ' ಅವಳೊಡನೆ ಕೂಡಿದನೆಂದು ಉಕ್ತಿ. ಇದನ್ನು ಬರೆಯುವಾಗ ಪಂಪನಿಗೆ ತಾನು ಆದಿಪುರಾಣದಲ್ಲಿ 'ಕಾಂಡಪಟದಂತಿರೆ' ಎಂದು ಬರೆದದ್ದು ನೆನಪಿಗೆ ಬಂದಿರಬೇಕು. ಆಗ ಅವನಿಗೆ ಹೊಳೆಯಿತು, ಆ ಪದಪ್ರಯೋಗ ಅಲ್ಲಿ ಉಚಿತವಲ್ಲವೆಂದು. ಆಮೇಲೆ ಅವನು ಅದನ್ನು 'ಕನ್ನವಡ' ಎಂದು ಮಾರ್ಪಡಿಸಿರಬೇಕು." ಇದು ಊಹೆಯೇ ಆದರೂ ಸಾಧಾರವಾಗಿದೆ; ಸಮರ್ಪಕವಾಗಿದೆ. ಆದಿಪುರಾಣದ ಸಂದರ್ಭಕ್ಕೆ ಕನ್ನಡಿ ಕಟ್ಟಿದ ಗೋಡೆ ಎಂಬರ್ಥದ 'ಕನ್ನವಡ' ಅರ್ಥಪೂರ್ಣವಾಗಿ ಹೊಂದುತ್ತದೆ. ಬದಲಾಗಿ ತೆರೆ ಎಂಬರ್ಥವುಳ್ಳ ಕಾಂಡಪಟ

---

3. ನರಸಿಂಹಾಚಾರ್ ಡಿ.ಎಲ್., ಕನ್ನಡ ಗ್ರಂಥ ಸಂಪಾದನೆ, ಮೈಸೂರು, 1964. ಪು: 66–67

ಅಲ್ಲಿಗೆ ಸರಿಯಾಗದು; ಅದು ವಿಕ್ರಮಾರ್ಜುನ ವಿಜಯದ ಸಂದರ್ಭಕ್ಕೆ ಉಚಿತ ಪ್ರಯೋಗವೆಂದು ತೋರುತ್ತದೆ.

ಇಂಥ ಸಂಭವನೀಯ ಸಾಧ್ಯತೆಗಳ ಜೊತೆಗೆ ಉತ್ತಮ ಸಾಧನ ಸಾಮಗ್ರಿಗಳಿಂದ ಹಸ್ತಪ್ರತಿಗಳನ್ನು ಸಂರಕ್ಷಿಸುವ ಸಾಧ್ಯತೆಗಳೂ ಇಲ್ಲವಾದಾಗ ನೂರಾರು ವರ್ಷಗಳ ನಂತರವೂ ಅವುಗಳು (ಕವಿಕೃತ ಪಾಠಗಳು) ಇದ್ದಿರಬಹುದಾದ ಸ್ಥಿತಿಯನ್ನು ಊಹಿಸಬಹುದು. ಇಷ್ಟೆಲ್ಲದರ ನಡುವೆ ಈ ಹಸ್ತಪ್ರತಿಗಳನ್ನೇ ಆಧರಿಸಿ ಕವಿ ಪಾಠವನ್ನು ಅಥವಾ ಅದಕ್ಕೆ ಹತ್ತಿರವಾದ ಪಾಠವನ್ನು ಪರಿಷ್ಕರಿಸಿ ಸಿದ್ಧಗೊಳಿಸುವ ಕಾರ್ಯದಲ್ಲಿ ಸಂಪಾದಕ ತನ್ನೆಲ್ಲ ಶ್ರಮವನ್ನೂ ವ್ಯಯ ಮಾಡಿರುತ್ತಾನೆ, ಅದರಲ್ಲೂ ಪಂಪನಂಥ ಪ್ರೌಢ ಕವಿಗಳ ಕೃತಿಗಳನ್ನು ಪರಿಷ್ಕರಿಸುವಾಗ, ಜಟಿಲವಾದ ಅನೇಕ ಸಮಸ್ಯೆಗಳನ್ನು ಬಿಡಿಸುವಾಗ ಹಲವಾರು ಶಾಸ್ತ್ರ ವಿಷಯಗಳಿಂದ, ಅಧ್ಯಯನ ಶಿಸ್ತುಗಳಿಂದ ಸಹಾಯವನ್ನು ಪಡೆಯಬೇಕಾಗುತ್ತದೆ. ಆ ಅರ್ಥದಲ್ಲಿ ಅವನಿಗೆ ಕವಿಗಿರುವಷ್ಟೇ ಪ್ರಮಾಣದ ಅಥವಾ ಇನ್ನೂ ಹೆಚ್ಚಿನ ವ್ಯುತ್ಪತ್ತಿ ಇರಬೇಕಾಗುತ್ತದೆ. ಅನೇಕ ಪಾಠಗಳನ್ನು ಕುರಿತಂತೆ ಯಾವುದು ನಂಬಲರ್ಹವಾದುದು? ಯಾವುದು ಕವಿಕೃತವಾದ ಪಾಠ? ಅಥವಾ ಅದಕ್ಕೆ ಹತ್ತಿರವಾದುದು? ಎಂಬುದನ್ನು ಕಂಡುಕೊಳ್ಳುವಲ್ಲಿ ಮತ್ತು ಅದಕ್ಕೆ ಪೂರಕವಾದ ಚರ್ಚೆ, ತೀರ್ಮಾನಗಳಲ್ಲಿ ಒಂದು ಬಗೆಯಾದ ವಿಮರ್ಶೆಯನ್ನೇ ಮಾಡಿರುತ್ತಾನೆ. ಇದಕ್ಕೆ ಮೇಲೆ ಸೂಚಿಸಿದ 'ಕನ್ನವಡ' — 'ಕಾಂಡಪಟ'ಗಳ ಸಂಬಂಧದ ಚರ್ಚೆಯೇ ಒಂದು ನಿದರ್ಶನ. ಹೀಗಾಗಿ ಪಾಠ ಪರಿಷ್ಕರಣದ ಕಾರ್ಯವನ್ನು ಒಂದು ಹಂತದಲ್ಲಿ ವಿಮರ್ಶೆ ಎಂದು ಕರೆದರೂ ತಪ್ಪಾಗಲಾರದು. ಒಂದು ಹಂತದಲ್ಲಿ ಎನ್ನುವಾಗ ಸೀಮಿತ ಅರ್ಥದಲ್ಲಿ ಎಂಬುದು ಸ್ಪಷ್ಟ. ಒಂದು ಕೃತಿಯನ್ನು ಕುರಿತ ವಿಮರ್ಶೆಗೆ, ಅದರ ಬೆಳವಣಿಗೆ ಪೂರಕವಾದ ನೆಲೆಯೊಂದನ್ನು ನಿರ್ಮಿಸುವ ಕಾರ್ಯಕ್ಷೇತ್ರ ಗ್ರಂಥ ಸಂಪಾದನೆ ಎಂಬುದು ಸ್ಪಷ್ಟ. ಹೀಗಾಗಿ ಇಂಥ ಕ್ಷೇತ್ರವನ್ನು ನಿರ್ಮಿಸುವಲ್ಲಿ ಆ ಕೃತಿಯ ಕುರಿತಾದ ಒಂದು ಬಗೆಯ ವಿಮರ್ಶೆಯ ಸುಳುಹುಗಳು ಇದ್ದೇ ಇರುತ್ತವೆ.

## 2.2 ಪಂಪನ ಕಾವ್ಯಗಳ ಹಸ್ತಪ್ರತಿಗಳು, ಓದುಗ ಪರಂಪರೆ — ಇತ್ಯಾದಿ

ನಮ್ಮ ಸಾಹಿತ್ಯದ ಸಂದರ್ಭದಲ್ಲಿ ಮೊದಲಿನಿಂದಲೂ ಧರ್ಮ ಮತ್ತು ರಾಜತ್ವಗಳೆರಡೂ ಸಾಹಿತ್ಯದ ಪ್ರಮುಖ ಪ್ರೇರಕಾಂಶಗಳಾಗಿದ್ದು, ಪ್ರಭಾವಯುತವಾಗಿ ಕೆಲಸ ಮಾಡಿವೆಯೆಂಬುದನ್ನು ನಮ್ಮ ಸಾಹಿತ್ಯ ಪರಂಪರೆಯ ನೆಲೆಯಿಂದ ತಿಳಿಯಬಹುದಾಗಿದೆ. ಇದರಿಂದಾಗಿ ಬಹುತೇಕವಾಗಿ ಧರ್ಮಕ್ಕೆ ಮತ್ತು ರಾಜತ್ವಕ್ಕೆ ಬೇಕಾದದ್ದು ಉಳಿಯಿತು. ಮತ್ತು ಬೆಳೆಯಿತು; ಬೇಡವಾದದ್ದು ಗೌಣವಾಯಿತು ಇಲ್ಲವೇ ಮರೆಯಾಯಿತು. ಈ ಮಾತುಗಳು ಇಲ್ಲಿಗೆ ಅನಗತ್ಯವೆಂಬಂತೆ ತೋರಬಹುದಾದರೂ ನಮ್ಮ ಪ್ರಾಚೀನ ಸಾಹಿತ್ಯಿಕ ಸಂದರ್ಭದಲ್ಲಿ ಒಂದು ಸಾಹಿತ್ಯ ಕೃತಿಯ ಅಳಿವು ಉಳಿವಿನ ಪ್ರಶ್ನೆಗೂ ಈ ಮೇಲಿನ ಅಂಶಗಳಿಗೂ ಅತ್ಯಂತ ನೇರ ಸಂಬಂಧವಿತ್ತೆಂಬ ಅಂಶವನ್ನು ಇಲ್ಲಿ ನಮೂದಿಸಬೇಕಾಗಿದೆ. ಇದಕ್ಕೆ ಪಂಪನ ಎರಡು ಕಾವ್ಯಗಳಿಗೆ ದೊರೆತಿರುವ ಹಸ್ತಪ್ರತಿಗಳನ್ನು ಗಮನಿಸಿದರೂ ಸಾಕೆಂದು ತೋರುತ್ತದೆ. ವಿಕ್ರಮಾರ್ಜುನ ವಿಜಯ ಲೌಕಿಕ ಕೃತಿಯಾದುದರಿಂದಲೋ ಏನೋ ಅಂದಿನ ಪ್ರಭಾವೀ ಧಾರ್ಮಿಕ ವಲಯಕ್ಕೆ ಅದು ಅಮುಖ್ಯ ಅಥವಾ ಗೌಣವೆಂದು ಕಂಡಿರಬೇಕು. ಅದೇ ಜೈನ ಧಾರ್ಮಿಕ ಚೌಕಟ್ಟನ್ನು ಪಡೆದ ಪಂಪನದೇ ಮತ್ತೊಂದು ಕೃತಿ 'ಆದಿಪುರಾಣ' ವನ್ನು ವಿಜೃಂಭಿಸಿದ್ದರ ಪರಿಣಾಮವಾಗಿಯೋ ಏನೋ ಅದು ಹೆಚ್ಚು ಪ್ರಚುರವಾಗಿರುವ ಸಾಧ್ಯತೆಗಳಿವೆ. ವಿಕ್ರಮಾರ್ಜುನ ವಿಜಯಕ್ಕೆ ಇದುವರೆಗೆ ದೊರೆತಿರುವ ಹಸ್ತಪ್ರತಿಗಳು ಮೂರು ಮಾತ್ರ. ಅದೇ ಆದಿಪುರಾಣಕ್ಕೆ ಸಾಕಷ್ಟು ಹಸ್ತಪ್ರತಿಗಳು ದೊರೆತಿವೆ. "ಧರ್ಮ ಗ್ರಂಥಗಳಲ್ಲದ, ನಿಜವಾದ ಕಾವ್ಯಗಳನ್ನು ಪ್ರತಿ ಮಾಡಿ ಉಳಿಸಿಕೊಳ್ಳಬೇಕೆನ್ನುವ ಬಗೆಗೆ ಆಯಾ ಮತ ಧರ್ಮದವರು ತಾಳಿದ ಈ ನಿರಾಸಕ್ತಿಗೆ ಧರ್ಮದ ಪ್ರಭಾವವೇ ಕಾರಣ. ಅವರಿಗೆ ಕಾವ್ಯ ಯಾವುದು ಪುರಾಣ ಯಾವುದು ಎಂಬುದು ಗೊತ್ತಿರಲಿಲ್ಲವೆಂದಲ್ಲ. ಅವರಿಗೆ ಕಾವ್ಯಗಳಿಗಿಂತ ಪುರಾಣಗಳೇ ಮುಖ್ಯವಾಗಿದ್ದುವು. ಅಥವಾ ನಿಜವಾದ ಕಾವ್ಯವೆಂದರೆ, ಧಾರ್ಮಿಕ ಕಾವ್ಯ ಅಥವಾ ಪುರಾಣಗಳೇ ಎಂಬ ಕಲ್ಪನೆ ಮನೆ ಮಾಡಿಕೊಂಡಿದ್ದಿರಬಹುದು. ಅಲ್ಲದೆ ಅಂದಿನ ಪ್ರಮುಖ ವ್ಯಕ್ತಿಗಳು, ಕವಿಗಳು ಬರೆದ

ಇಂತಹ ಧಾರ್ಮಿಕ ಕಾವ್ಯಗಳನ್ನು ಅಧಿಕ ಸಂಖ್ಯೆಯಲ್ಲಿ ಪ್ರತಿ ಮಾಡಿಸಿ ಭಕ್ತಾದಿಗಳಿಗೆ ದೊರಕಿಸಿಕೊಡುವುದು ಒಂದು ಧಾರ್ಮಿಕ ಕರ್ತವ್ಯ ಎಂದು ಭಾವಿಸಿದ್ದೂ ಈ ಭಾವನೆಗೆ ಕಾರಣವಿರಬಹುದು." [4]

ಪಂಪ ಜೈನ ಧರ್ಮೀಯನಾಗಿರುವಾಗಲೂ, ಜೈನ ಧಾರ್ಮಿಕ ವಲಯ ಆ ಕವಿಯ ಎರಡು ಕಾವ್ಯಗಳಲ್ಲಿ ತೋರಿದ ತರತಮ ನಿಜಕ್ಕೂ ವಿಚಿತ್ರವೆಂಬಂತೆ ತೋರುತ್ತದೆ. ಆದಿಪುರಾಣದ ಹಸ್ತಪ್ರತಿಗಳು ಜೈನ ಬಸದಿ– ಭಂಡಾರಗಳಲ್ಲಿ ಸಾಕಷ್ಟು ದೊರೆಯುತ್ತಿರುವಾಗ ವಿಕ್ರಮಾರ್ಜುನ ವಿಜಯದ ಪ್ರತಿಗಳೇಕೆ ಆ ಸಾಧ್ಯತೆಯಿಂದ ವಂಚಿತವಾದುವೆಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಈ ಮಾತಿನ ಅರ್ಥ ವಿಕ್ರಮಾರ್ಜುನ ವಿಜಯವನ್ನು ಈ ಶತಮಾನದವರೆಗೆ ಯಾರೂ ಓದಲೇ ಇಲ್ಲ ಎಂದಾಗಲಿ, ಆದಿಪುರಾಣ ಕೇವಲ ಅಂಧ ಧರ್ಮಶ್ರದ್ಧೆಯ ಕಾವ್ಯವೆಂದಾಗಲಿ ಖಂಡಿತಾ ಅಲ್ಲ. ಹಾಗೆ ನೋಡಿದರೆ ಆವೆರಡನ್ನೂ ಒಂದು ಮೇಲು ಮತ್ತೊಂದು ಕೀಳು ಎಂಬ ಮಾತು ಸಲ್ಲದ ವಿಚಾರವಾದೀತು. ಆ ಎರಡೂ ಕಾವ್ಯಗಳಿಗೆ ದೊರೆಯುವ ಹಸ್ತಪ್ರತಿಗಳ ಸಂಖ್ಯಾಬಾಹುಳ್ಯ ಆ ಕಾವ್ಯಗಳ ಪ್ರಚುರತೆಯ ಹಿಂದಿರಬಹುದಾದ ಹಿತಾಸಕ್ತಿಗಳನ್ನು ಸೂಚಿಸುತ್ತದೆ ಎಂಬುದು ಮಾತ್ರ ಇಲ್ಲಿ ಗಮನಿಸಬೇಕಾದ ಅಂಶ.

ಇನ್ನು ಆಧುನಿಕ ಸಂದರ್ಭವನ್ನು ಗಮನಿಸಿದರೆ, ಓದುಗ ಪರಂಪರೆ ಮತ್ತು ಸಾಹಿತ್ಯ ಇವುಗಳ ಸಂಬಂಧವನ್ನು ಕುರಿತಂತೆ ಒಂದು ಅಂಶ ಸ್ಪಷ್ಟವಿರುವಂತೆ ತೋರುತ್ತದೆ. ಒಂದು ಸಾಹಿತ್ಯ ಕೃತಿಯ ಓದುಗ ವಲಯ ಕಾಲದಿಂದ ಕಾಲಕ್ಕೆ ವಿಸ್ತಾರವಾಗಬಹುದು ಅಥವಾ ಸಂಕುಚಿತವಾಗಬಹುದು. ಇದನ್ನು ಆಯಾ ಕಾಲದ ಓದುಗರ ಮನೋಧರ್ಮವೇ ನಿಯಂತ್ರಿಸುತ್ತದೆಯೆಂದು ತೋರುತ್ತದೆ. ಮೇಲೆ ಪ್ರಸ್ತಾಪಿಸಿದಂತೆ ಆದಿಪುರಾಣ ಜೈನ ಧಾರ್ಮಿಕ ಕೃತಿಯೆನ್ನುವುದರ ಜೊತೆಗೆ, ಅದರ ಕಾವ್ಯತ್ವದ ಗುಣಕ್ಕಿಂತಲೂ ಅದು 'ಪೂಜ್ಯ' ಎಂಬ ಭಾವನೆ ಆ ಕಾವ್ಯಕ್ಕೆ ಸ್ವಲ್ಪ ಹೆಚ್ಚಿನ ಬೆಲೆಯನ್ನು ತಂದುಕೊಟ್ಟಿರುವ ಸಾಧ್ಯತೆಗಳಿವೆ. ಜೈನ ಧರ್ಮೀಯರ ಇಂಥ ಒಲವು ಆ ಕಾವ್ಯಕ್ಕೆ

---

4. ಶಿವರುದ್ರಪ್ಪ ಜಿ.ಎಸ್., ಕನ್ನಡ ಸಾಹಿತ್ಯ ಸಮೀಕ್ಷೆ, ಬೆಂ.ವಿ.ವಿ., 1975, ಪು: 46–47

ಜೈನೇತರರಿಂದಲೂ ದೊರೆಯುತ್ತೋ ಇಲ್ಲವೋ ಎಂದು ಹೇಳುವುದು ಕಷ್ಟ. ಆದರೆ ಇವತ್ತಿನ ಸಂದರ್ಭದಲ್ಲಿ ಇದು ವಿಪರ್ಯಯವಾಗಿರುವಂತೆ ಕಾಣುತ್ತದೆ. ಒಂದು ರೀತಿಯಲ್ಲಿ ಆದಿಪುರಾಣದ ಓದುಗ ವಲಯಕ್ಕಿಂತ ವಿಕ್ರಮಾರ್ಜುನ ವಿಜಯದ ಓದುಗ ವಲಯ ಇವತ್ತಿನ ದಿನಗಳಲ್ಲಿ ವಿಸ್ತಾರವಾಗಿದೆ ಎಂಬುದು ಸ್ಪಷ್ಟ. ಪಂಪನ ಎರಡೂ ಕಾವ್ಯಗಳನ್ನು ಕುರಿತಂತೆ ನಡೆದಿರುವ ಅಧ್ಯಯನಗಳ ಬಾಹುಳ್ಯವು ಈ ಮಾತನ್ನು ಸಮರ್ಥಿಸುತ್ತದೆಂದು ತೋರುತ್ತದೆ. ಇದು ಇವತ್ತಿನ ಪುನರೋದ್ಧರ್ಮದ ಸೂಚನೆಯೂ ಆಗಬಹುದು.

## 2.3 ವಿಕ್ರಮಾರ್ಜುನ ವಿಜಯದ ಪರಿಷ್ಕರಣಗಳು

ಇದುವರೆಗೆ ದೊರೆತಿರುವ ವಿಕ್ರಮಾರ್ಜುನ ವಿಜಯದ ಹಸ್ತಪ್ರತಿಗಳು ಒಟ್ಟು ಮೂರು ಮಾತ್ರ :—

(1) ಮೈಸೂರು ಅರಮನೆಯ ಸರಸ್ವತಿ ಭಂಡಾರದಲ್ಲಿ ದೊರೆತ ತಾಳೆಯೋಲೆ ಪ್ರತಿ

(2) ಪೂನಾ ಭಂಡಾರ್ಕರ ರಿಸರ್ಚ್ ಇನ್ಸ್ಟಿಟ್ಯೂಟಿನಲ್ಲಿ ದೊರೆತ ತಾಳೆಯೋಲೆ ಪ್ರತಿ

(3) ಆರಾ ಸೆಂಟ್ರಲ ಜೈನಾ ಓರಿಯಂಟಲ ಲೈಬ್ರರಿಯ ಪ್ರತಿ.

ಈ ಮೂರು ಹಸ್ತಪ್ರತಿಗಳನ್ನಾಧರಿಸಿ ಪಂಪನ ವಿಕ್ರಮಾರ್ಜುನ ವಿಜಯಕ್ಕೆ ಎರಡು ಪರಿಷ್ಕರಣಗಳು ಬಂದಿವೆ. ಮೊದಲನೆಯದು ಬಿ.ಲೂಯೀ ರೈಸ್ ಪರಿಷ್ಕರಿಸಿದ 'ಪಂಪ ಭಾರತ ಅಥವಾ ವಿಕ್ರಮಾರ್ಜುನ ವಿಜಯ' (1898) ಮತ್ತೊಂದು ಬೆಳ್ಳಾವೆ ವೆಂಕಟನಾರಾಯಣಪ್ಪನವರು ಪರಿಷ್ಕರಿಸಿದ 'ಪಂಪ ಭಾರತಂ ಎಂಬ ವಿಕ್ರಮಾರ್ಜುನ ವಿಜಯಂ' (1931).

## 2.3.1 ಬಿ. ಲೂಯಿ ರೈಸ್ ಅವರ ಪರಿಷ್ಕರಣ

1898 ರಲ್ಲಿ ಬಿಬ್ಲಿಯೊಥಿಕಾ ಕರ್ನಾಟಕಾ ಮಾಲಿಕೆಯಲ್ಲಿ ಪ್ರಕಟವಾದ ಲೂಯಿ ರೈಸ್ ಅವರ ಪರಿಷ್ಕರಣವೇ ವಿಕ್ರಮಾರ್ಜುನ ವಿಜಯದ ಮೊದಲ ಪರಿಷ್ಕರಣ. ಅಷ್ಟೇ ಅಲ್ಲ ಅದು, ಪಂಪನ ಎರಡೂ ಕಾವ್ಯಗಳಿಗೆ ನಡೆದ ಪರಿಷ್ಕರಣಗಳಲ್ಲಿ ಕೂಡ ಮೊದಲನೆಯದು. ಆ ಮೊದಲು ರೈಸರು 1882 ರಲ್ಲಿ "ಜರ್ನಲ್ ಆಫ್ ರಾಯಲ್ ಏಷಿಯಾಟಿಕ ಸೊಸೈಟಿ" ಪತ್ರಿಕೆಯಲ್ಲಿ 'ದಿ ಪೊಯೆಟ್ ಪಂಪ' ಎಂಬ ಲೇಖನವನ್ನು ಇಂಗ್ಲೀಷಿನಲ್ಲಿ ಬರೆದಿದ್ದರು.[5] ಅದು ಪಂಪ ಕವಿಯನ್ನು ಕುರಿತು ಪ್ರಕಟವಾದ ಮೊದಲ ಅಧ್ಯಯನವಾಗಿರುವುದರ ಜೊತೆಗೆ, ಆ ಕವಿಯನ್ನು ಮೊದಲಿಗೆ ಕನ್ನಡ ವಿದ್ವತ್ ವಲಯಕ್ಕೆ ಪ್ರಕಟಪಡಿಸಿದವರೂ ಅವರೇ. ಈ ಕುರಿತು ಎಲ್.ಬಸವರಾಜು ಅವರು "ಬೆಂಜಮಿನ ಲೂಯೀ ರೈಸರೆಂದರೆ ವಿಸ್ಮೃತಿಯ ಸಾಗರ ತಳದಿಂದ ಪಂಪನನ್ನೂ ಪಂಪಕಾವ್ಯ ವಸುಂಧರೆಯನ್ನೂ ಎತ್ತಿ ತಂದ ವರಾಹ ಮೂರ್ತಿ .........." ಇತ್ಯಾದಿಯಾಗಿ ಹೇಳುವ ಮಾತುಗಳನ್ನು[6] ಉತ್ಪ್ರೇಕ್ಷೆಯೆಂದು ಭಾವಿಸಬೇಕಾಗಿಲ್ಲ.

ರೈಸ ತಮ್ಮ ಪರಿಷ್ಕರಣಕ್ಕೆ ಸಮಗ್ರವಾದ ಹಸ್ತಪ್ರತಿಯೊಂದನ್ನು ದೊರಕಿಸಿಕೊಳ್ಳುವುದು ಕಷ್ಟಸಾಧ್ಯವಾದುದರ ಬಗ್ಗೆ, ಅಂಥ ಹಸ್ತಪ್ರತಿಗಳಿಗಾಗಿ ಪ್ರಯತ್ನಿಸಿದ ಬಗ್ಗೆ ಹೇಳಿಕೊಂಡಿದ್ದಾರೆ. ಅವರು ತಮ್ಮ ಪರಿಷ್ಕರಣಕ್ಕೆ ಬಳಸಿದ ಪ್ರತಿಗಳು ಎರಡು. ಒಂದರಲ್ಲಿ ಪ್ರಥಮಾಶ್ವಾಸವೇ ಇರಲಿಲ್ಲ; ಆ ಪ್ರತಿಯನ್ನವರು ಸುಮಾರು ಇಪ್ಪತ್ತು ವರ್ಷಗಳ ಹಿಂದೆಯೇ ಪ್ರಕಟಣೆಯ ಉದ್ದೇಶದಿಂದ ಅದರ

---

5. Lewis Rice, The Poet Pampa, J.O. R.A.S. of Great Britain and Irland (New Series) Vol. 14 London, 1882 PP 19-22
   ಮೂಲತಃ: ಇದೊಂದು ಪಂಪ ಕವಿಯನ್ನು ಕುರಿತ ಪರಿಚಯಾತ್ಮಕ ಬರೆಹ. ಅವನ ಆಶ್ರಯದಾತ ಅರಿಕೇಸರಿಯ ವಂಶಾವಳಿಯ ಕುರಿತಾದ ಕೆಲ ಚರ್ಚೆಗಳೂ ಇಲ್ಲವೆ.
6. ಆದಿಪುರಾಣ, (ಸಂ) ಬಸವರಾಜು ಎಲ್., ಮೈಸೂರು, 1976, ಪು: iv.

ನಕಲನ್ನು ತೆಗೆದಿರಿಸಿಕೊಂಡಿದ್ದರು. ಆ ನಂತರದಲ್ಲಿ ಅವರಿಗೆ ದೊರೆತದ್ದು ಸರಸ್ವತಿ ಭಂಡಾರದ ಪ್ರತಿ. ಇದಲ್ಲದೆ, ಅವರ ಮಾತುಗಳನ್ನೇ[7] ಆಧರಿಸಿ ಹೇಳುವುದಾದರೆ ಈ ಪರಿಷ್ಕರಣದ ಅಚ್ಚಿನ ದೋಷಗಳನ್ನು ತಿದ್ದುವಾಗ ಆರ್. ನರಸಿಂಹಾಚಾರ್ಯರು ಮತ್ತೊಂದು ಅಸಮಗ್ರ ಪ್ರತಿಯೊಂದಿಗೆ ತಾಳೆ ನೋಡಿದರು. ಹೀಗಾಗಿ, ಈ ಪರಿಷ್ಕರಣವನ್ನು ಸಿದ್ಧಪಡಿಸಲು ಮುಖ್ಯವಾಗಿ ಬಳಸಲಾದುದು ಎರಡೇ ಪ್ರತಿಗಳನ್ನಾದರೂ ತಾಳೆ ನೋಡಲು ಬಳಸಿದ ಅಸಮಗ್ರ ಪ್ರತಿಯನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಒಂದು ಸಮಗ್ರ ಪ್ರತಿ, ಮತ್ತೆರಡು ಅಸಮಗ್ರ ಪ್ರತಿಗಳಾಗುತ್ತವೆ. ಇಷ್ಟು ಮಿತ ಸಾಮಗ್ರಿಯೊಂದಿಗೆ ರೈಸರು ತಮಗೆ ಸಾಧ್ಯವಿದ್ದಷ್ಟು ಶ್ರಮ ವಹಿಸಿ ವಿಕ್ರಮಾರ್ಜುನ ವಿಜಯದ ಪರಿಷ್ಕರಣವೊಂದನ್ನು ಮೊತ್ತಮೊದಲಿಗೆ ಹೊರತಂದರು. ಈ ಪರಿಷ್ಕರಣಕ್ಕೆ ಸಂಬಂಧಿಸಿದ ಕೆಲವು ಅಂಶಗಳನ್ನು ಹೀಗೆ ಸೂಚಿಸಬಹುದೆಂದು ತೋರುತ್ತದೆ.

(1) ಕಂದ, ವೃತ್ತ ಮತ್ತು ಗದ್ಯಭಾಗಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕೊಡಲಾಗಿದೆ. ಆದರೆ ಇಡೀ ಕಾವ್ಯದಲ್ಲಿ ಪದ-ಪದಗಳ ಮಧ್ಯೆ ಬಿಡುವು ಕಾಣಬರದೆ ಒಂದಕ್ಕೊಂದು ಕೋದುಕೊಂಡಂತೆ ತೋರುತ್ತವೆ.

(2) ಅಲ್ಲಲ್ಲಿ ಒಂದೊಂದು ಪಾಠಾಂತರಗಳನ್ನು ಕೊಡಲಾಗಿದ್ದು, ಅವುಗಳು ಅತ್ಯಂತ ವಿರಳವಾಗಿವೆ. ಉದಾ:- 'ಪೂಣ್ದವರೊಳ್' ಎಂಬುದಕ್ಕೆ 'ಭೀಮನೊಳ್' (4-7); 'ಜವ' ಎಂಬುದಕ್ಕೆ 'ಯಮ' (4-7); 'ಅದೆಂತು ದಶಾಧಿಪತೀ' ಎಂಬುದಕ್ಕೆ 'ಅದೆಂತು ಮಂಗಾಧಿಪತೀ' (9-19); 'ಗಾಂಡೀವಿಯೆಂದೇಳಿಸಿ ನುಡಿದಪೆ' ಎಂಬುದಕ್ಕೆ 'ಗಾಂಡೀವಿಯಾರೆಂದೆಣಿಕೆಗಳಿವೆ' (9-55); '..... ತಿದುರ್ಗದೆಲ್ಲಂ ನೆರೆದ' ಎಂಬುದಕ್ಕೆ 'ಇದುರ್ಗದಿದರ್ ಬೆರೆದ' (9-55) ಇತ್ಯಾದಿ.

(3) ತಮಗೆ ಸಂದೇಹವೆಂದು ತೋರಿಬಂದ ಕೆಲವೆಡೆಗಳಲ್ಲಿ ಟಿಪ್ಪಣಿಗಳನ್ನು ಬರೆಯಲಾಗಿದೆ.

---

7. ನೋಡಿ : ಇಂಗ್ಲಿಷ್ ಪೀಠಿಕೆ, ವಿಕ್ರಮಾರ್ಜುನ ವಿಜಯ (ಸಂ) ಲೂಯಿ ರೈಸ್, ಬೆಂಗಳೂರು, 1898. ಪು: 13

ಉದಾ :— "ಗುರು ಗುರುಸುತ ಶಕುನಿ ಕೃಪಾಂ
ಗರಾಜರಂ ಬರಿಸಿ ನುಡಿದವನಿಪನೇಂ ಕೇ
ಳ್ದರೆ ಪಾಂಡು ಸುತರ ಮುನಿಸಿನ
ತಱಿಸಲವಿನ ಜಲದ ವಿನಜಲದಲಲದ ಕರತನದಳವಂ" (10—2)

ಈ ಪದ್ಯದಲ್ಲಿ 'ರ' ಕಾರಕ್ಕೂ 'ಱ' ಕಾರಕ್ಕೂ ಪ್ರಾಸ ಹೇಳಲ್ಪಟ್ಟಿದೆ. ತಿದ್ದಲಕ್ಷತ್ಯವಿಲ್ಲ ಎಂದಿದ್ದಾರೆ. ಕೊನೆಯ ಸಾಲಿನಲ್ಲಿ ಬರುವ 'ಜಲದವಿನ ಜಲದಲಲದ' ಎಂಬುದರ ಬಗ್ಗೆ ಅವರು ಏನನ್ನೂ ಹೇಳಿಲ್ಲ. ಆ ಪಾಠ ನಂತರ ಬಂದ ಬೆಳ್ಳಾವೆಯವರ ಪರಿಷ್ಕರಣದಲ್ಲಿ 'ಜಲದ ಬಲದ' ಎಂದಾಗಿದೆ.

(4) ಸರಿಯೆಂದು ತೋರಿದ ಕೆಲವೆಡೆಗಳಲ್ಲಿ ಊಹಾತ್ಮಕ ಪಾಠವನ್ನು ಕೊಡಲಾಗಿದೆ. ಆದರೆ ಈ ಊಹಾತ್ಮಕ ಪಾಠಗಳನ್ನು ಆಯಾ ಎಡೆಯಲ್ಲೇ ಕಂಸಿನಲ್ಲಿ ತೋರಿಸದೆ ಟಿಪ್ಪಣಿಯ ರೂಪದಲ್ಲಿ ಕೊಡಲಾಗಿದೆ.

ಉದಾ :— "ಸರಿದಧಿಪತಿ ಮೊಳಕಾಲ್ವರೆ।
ಮುರಮೊರಮುರುಮುಯ್ವುಮುವ್ವರೆಗಮುಜಾಂಡಂ॥
ಬರತಲೆಯನೆಲೆಗೆ ರೋಕಾಂ।
ತರಮೆಡೆಮುಯ್ಲ್ವನಿಸೆ ಪೆರ್ಚಿದಂ ರವಿತನಯಂ॥" (12—11)

ಇಲ್ಲಿನ ಎರಡನೆಯ ಪಾದದ ಪಾಠಕ್ಕೆ ಸಂಬಂಧಿಸಿದಂತೆ "ಈ ಪಾದವು ಬಹಳ ಅಶುದ್ಧವಾಗಿದೆ. ಆದ್ದರಿಂದ (ಮುರಂಬರಂ ಮೇರು ಮುಯ್ವರೆಗಮುಜಾಂಡಂ) ಎಂದು ಮಾಡಿದರೆ ಸರಿಯಾಗಿರಬಹುದೆಂದು ತೋರುತ್ತೆ" ಎಂದಿದ್ದಾರೆ. ಕೊನೆಯ 'ರವಿತನಯಂ' ಎಂಬುದು 'ದನುತನಯಂ' ಎಂದಾಗಿರುವುದನ್ನು ಬಿಟ್ಟರೆ ಬೆಳ್ಳಾವೆಯವರ ಪರಿಷ್ಕರಣದಲ್ಲಿ ಊಹಾ ಪಾಠವೂ ಸೇರಿದಂತೆ ಈ ಪದ್ಯ ವ್ಯತ್ಯಾಸಗೊಂಡಿಲ್ಲ.

(5) ತೀರ ಅಸ್ಪಷ್ಟವೆನ್ನಿಸಿದ, ನಶಿಸಿಹೋದ ಭಾಗಗಳನ್ನು ತುಂಬಲೇಬೇಕೆಂದು

ಎಲ್ಲಿಯೂ ಪ್ರಯತ್ನಿಸಿರುವಂತೆ ತೋರದು, ಅಂಥೆಡೆಗಳಲ್ಲಿ ಆ ಭಾಗಗಳನ್ನು ಹಾಗೆಯೇ ಬಿಡಲಾಗಿದೆ. ಇದರಿಂದ ಪರಿಷ್ಕಾರಕರ ಪ್ರಾಮಾಣಿಕತೆಯನ್ನು ಮನಗಾಣಬಹುದಾಗಿದೆ.

(6) 'ಕಾವ್ಯ ವಿಶ್ಲೇಷಣೆ' ಎಂಬ ಭಾಗದಲ್ಲಿ ಪದ್ಯಾನುಕ್ರಮವಾಗಿ ಪ್ರಮುಖ ಕಥಾಸಾರವನ್ನು ನಿರೂಪಿಸಲಾಗಿದೆ. ಇದನ್ನು ಅವರು ವಿಶ್ಲೇಷಣೆಯೆಂದು ಕರೆದಿರುವರಾದರೂ ವಾಸ್ತವವಾಗಿ ಇದು 'ಕಥಾ ಸಾರ'ದ ಮಾದರಿಯದಾಗಿದೆ. ಸಾಮಾನ್ಯವಾಗಿ ಪರಿಷ್ಕರಣವೊಂದಕ್ಕೆ ಅಗತ್ಯವಿರುವ ಪದ್ಯಗಳ ಅಕಾರಾದಿಯನ್ನಾಗಲಿ, ಕ್ಲಿಷ್ಟ ಪದಗಳ ಅಥವಾ ವಿಶಿಷ್ಟ ಪದಗಳ ನಿಘಂಟನ್ನಾಗಲಿ ನೀಡದಿರುವುದು ಒಂದು ಕೊರತೆಯೆಂದೇ ತೋರುತ್ತದೆ.

ರೈಸರದು ಪ್ರಾಥಮಿಕ ಪ್ರಯತ್ನವೆಂಬುದನ್ನು ಗಮನಿಸದಿದ್ದರೆ ಈ ಪರಿಷ್ಕರಣದ ದೋಷಗಳೇ ದೊಡ್ಡವಾಗಿ ಕಾಣಬಹುದು. ಎಷ್ಟೇ ಆದರೂ ಇಂಗ್ಲಿಷ ನೆಲೆಗಟ್ಟಿನ ಅವರಿಗೆ ಪಂಪನಂತಹ ಕವಿಯ ಕಾವ್ಯ ಪರಿಷ್ಕರಣ ಒಂದು ಸವಾಲು. ಅಗ್ಗ ಹಸ್ತಪ್ರತಿಗಳನ್ನು ದೊರಕಿಸಿಕೊಳ್ಳುವುದೇ ಒಂದು ಪ್ರಯಾಸದ ಕೆಲಸ. ಇಷ್ಟಕ್ಕೂ ಅವರಿಗೆ ಇತರ ಯಾವುದೇ ಅಂಶಕ್ಕಿಂತಲೂ ಈ ಕೃತಿಯನ್ನು ಮುದ್ರಿಸಿ ಹೊರ ತರುವುದೇ ಮುಖ್ಯ ಉದ್ದೇಶ ಇದ್ದಿರಬೇಕು. ಹೀಗಾಗಿ ಈ ಪರಿಷ್ಕರಣದಲ್ಲಿರುವ ಅರೆಕೊರೆಗಳು ಅವರು ಆಧರಿಸಿದ ಮಿತ ಆಕರ ಸಾಮಗ್ರಿಯ ಪರಿಣಾಮ. ಇಷ್ಟೆಲ್ಲದರ ಮಧ್ಯೆ ಈ ಪ್ರಯತ್ನ ಈ ನೆಲೆಯಲ್ಲಿ ಮುಂದುವರಿಯಬೇಕಾದ ವಿದ್ವತ್ ಚಟುವಟಿಕೆಗಳಿಗೆ ತೋರುಬೆರಳಾಯಿತೆಂಬುದು ಗಮನಾರ್ಹವಾದ ವಿಚಾರ.

## 2.3.2 ಬೆಳ್ಳಾವೆ ವೆಂಕಟನಾರಾಯಣಪ್ಪನವರ ಪರಿಷ್ಕರಣ

ವಿಕ್ರಮಾರ್ಜುನ ವಿಜಯದ ಬೆಳ್ಳಾವೆಯವರ ಪರಿಷ್ಕರಣ ಒಂದು ರೀತಿಯಲ್ಲಿ ಲೂಯಿ ರೈಸರ ಪರಿಷ್ಕರಣಕ್ಕೆ ಪರಿಷ್ಕಾರ ರೂಪದಾಗಿ ಬಂದಿತೆಂದೇ ಹೇಳಬಹುದು.

1898 ರಲ್ಲಿ ರೈಸರಿಂದ ಸಂಪಾದಿತವಾಗಿ ಮುದ್ರಿತವಾದ ಗ್ರಂಥದ ಆಧಾರದ ಮೇಲೆ ಮೂರು ತಾಳೆಯೋಲೆಯ ಪ್ರತಿಗಳ ಸಹಾಯದಿಂದ ತಿದ್ದಿ ಪರಿಷ್ಕರಿಸಿದ ಈ ಗ್ರಂಥ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮೊದಲಿಗೆ ಇಡಿಯಾಗಿ ಪ್ರಕಟವಾದುದು 1931 ರಲ್ಲಿ. ಈ ಮುನ್ನ ಮೊದಲ ಎಂಟು ಆಶ್ವಾಸಗಳನ್ನು 1926 ರಲ್ಲೂ ಉಳಿದ ಆರು ಆಶ್ವಾಸಗಳನ್ನು 1927 ರಲ್ಲೂ ಪ್ರಕಟಿಸಲಾಗಿತ್ತು.

ರೈಸರಿಂದ "ಸಂಪಾದಿತವಾಗಿ ಮುದ್ರಿತವಾದ ಗ್ರಂಥದ ಆಧಾರದ ಮೇಲೆ....." ಎಂದು ಉಪೋದ್ಘಾತದಲ್ಲಿ ಹೇಳಲಾಗಿದೆಯಾದರೂ ವಾಸ್ತವವಾಗಿ ಅದಕ್ಕೆ ದೊರೆತಿರುವುದು ಒಂದು ಹಸ್ತಪ್ರತಿಯ ಬೆಲೆ ಮಾತ್ರ. ಅದರ ಪಾಠವನ್ನೇ ಮೂಲ ಪಾಠವಾಗಿ ಆಧರಿಸಿಲ್ಲ. ಈ ಕಾರಣಕ್ಕಾಗಿಯೇ ಈ ಪರಿಷ್ಕರಣವನ್ನು ರೈಸ್ ಮುದ್ರಣಕ್ಕೆ ಬಂದ ಪರಿಷ್ಕಾರ ರೂಪವೆಂದು ಕರೆದದ್ದು. ಈ ಪರಿಷ್ಕರಣಕ್ಕೆ ಬಳಸಲಾದ ಹಸ್ತಪ್ರತಿಗಳು ಒಟ್ಟು ನಾಲ್ಕು :—

(1) ಲೂಯಿ ರೈಸರು ಪ್ರಕಟಿಸಿದ ಮುದ್ರಿತ ಪ್ರತಿ (ಕ)

(2) ಮೈಸೂರು ಅರಮನೆಯ ಸರಸ್ವತಿ ಭಂಡಾರದ ತಾಳೆಯೋಲೆ ಪ್ರತಿ (ಖ)

(3) ಪೂನಾ ಭಂಡಾರ್ಕರ ರಿಸರ್ಚ್ ಇನ್ಸ್ಟಿಟ್ಯೂಟಿನ ತಾಳೆಯೋಲೆ ಪ್ರತಿ (ಗ)

(4) ಆರಾ ಪ್ರತಿ (ಘ)

ಪರಿಷ್ಕಾರಕರು ಮುದ್ರಿತ ಪ್ರತಿಯನ್ನೂ, ಆ ಪ್ರತಿಯನ್ನು ಸಿದ್ಧಪಡಿಸುವಲ್ಲಿ ಬಳಸಲಾದ ಎರಡು ಪ್ರತಿಗಳನ್ನೂ ಇಲ್ಲಿ ಗಮನಿಸಿರುವರಾದರೂ ಆರಾ ಪ್ರತಿಯನ್ನು ಹೆಚ್ಚು ನಂಬಲರ್ಹವಾದ ಪಾಠವೆಂದು ಭಾವಿಸಿದ್ದಾರೆ. ಅಲ್ಲದೆ ಆ ಪ್ರತಿಯೇ ಪೂರ್ವದ ಪ್ರತಿಯೆಂದೂ 'ಗ' ಅದಕ್ಕೆ ಈಚಿನದೆಂದೂ ಇವೆರಡಕ್ಕೂ ಸಾಮ್ಯವು ಹೆಚ್ಚಾಗಿರುವುದೆಂದೂ 'ಖ' ಪ್ರತಿ ಎಲ್ಲಕ್ಕಿಂತ ಆಧುನಿಕವೆಂದೂ ಹೇಳಿ ಆ ಪ್ರತಿಗಳ

ಪ್ರಾಚೀನತೆ — ಅರ್ವಾಚೀನತೆಗಳನ್ನು ಗುರುತಿಸಿಕೊಂಡಿದ್ದಾರೆ.[8]

ಇಂದು ವಿಕ್ರಮಾರ್ಜುನ ವಿಜಯದ ಅಧಿಕೃತ ಮುದ್ರಣವನ್ನು ಓದುತ್ತೇವೆಂದರೆ ಅದು ಬೆಳ್ಳಾವೆಯವರದೇ. ಇಲ್ಲಿ ಪರಿಷ್ಕರಣ ಕಾರ್ಯವನ್ನು ಶಾಸ್ತ್ರೀಯವಾಗಿ ನಿರ್ವಹಿಸಲಾಗಿದೆ. ಲಭ್ಯ ಸಾಮಗ್ರಿಯನ್ನು ಸಮರ್ಥವಾಗಿ ಬಳಸಿಕೊಂಡಿರುವ ಈ ಪರಿಷ್ಕರಣದ ಕುರಿತಾದ ಕೆಲವಂಶಗಳನ್ನು ಈ ಕೆಳಗಿನಂತೆ ಸೂಚಿಸಬಹುದು.

(1) ಪದ್ಯದಲ್ಲಿ ಕಂದ — ವೃತ್ತ — ಗದ್ಯ ಭಾಗಗಳನ್ನು ಸ್ಪಷ್ಟವಾಗಿ ಬಿಡಿಸಿ ತೋರಿಸಲಾಗಿದೆ. ಈ ವೇಳೆಗಾಗಲೇ ಪರಿಷ್ಕರಣದ ಕಾರ್ಯವೆಂಬುದೊಂದು ರೂಪುಗೊಂಡಿದ್ದರಿಂದ ಈ ವ್ಯವಸ್ಥೀಕರಣ ಒಂದು ಪ್ರಶ್ನೆಯಾಗಿಲ್ಲ.

(2) 'ಅರಾ' ಎಂಬಲ್ಲಿ ವಿಕ್ರಮಾರ್ಜುನ ವಿಜಯದ ಹಸ್ತಪ್ರತಿ ದೊರೆತುದು ಈ ಪರಿಷ್ಕರಣ ಸುಸಮರ್ಥವಾದುದಾಗಿ ರೂಪುಗೊಳ್ಳುವುದು ಸಾಧ್ಯವಾಯಿತು. ಈ ಪ್ರತಿಯನ್ನು ಪರಿಷ್ಕಾರಕರು ಪೂರ್ವದ ಪ್ರತಿಯೆಂದೂ, ಅದರ ಪಾಠ ನಂಬಲರ್ಹವಾದುದೆಂದೂ ಪರಿಗಣಿಸಿದ್ದಾರೆ. ಇದರಿಂದಾಗಿ ಈ ಪರಿಷ್ಕರಣ ರೈಸರ ಪರಿಷ್ಕರಣಕ್ಕಿಂತ ಬಹುಪಾಲು ಮುಂದೆ ಹೋಗಲು ಸಾಧ್ಯವಾಯಿತು.

(3) ಲಭ್ಯವಿರುವ ಪಾಠಾಂತರಗಳನ್ನೆಲ್ಲ ನೀಡಲಾಗಿದೆ. ಅರ್ಥವಾಗದಂಥ ಪದಗಳು, ಪದ್ಯ ಭಾಗಗಳನ್ನು ಸಂಶಯ ಚಿಹ್ನೆಯಿಂದಲೂ ಎಲ್ಲ ಪ್ರತಿಗಳ ಪಾಠವೂ ಒಂದೇ ರೀತಿಯಿದ್ದೂ ಅವು ಸಮಂಜಸವೆಂದು ತೋರದ ಕಡೆಗಳಲ್ಲಿ 'ಸ' (ಸರ್ವ) ಎಂಬ ಟಿಪ್ಪಣಿಯಿಂದಲೂ, ಕೆಲವೆಡೆ ಸಮಂಜಸವೆಂದು ತೋರಿದರೂ ಅಷ್ಟು ತೃಪ್ತಿಕರವೆಂದು ತೋರದಿದ್ದರೆ ಆ ಸಲಹೆಗಳನ್ನು 'ಪ' (ಪರಿಷತ್ತು) ಎಂಬ ಸಂಕೇತದಿಂದ ತೋರಿಸಲಾಗಿದೆ.[9]

---

8. ನೋಡಿ : ವಿಕ್ರಮಾರ್ಜುನ ವಿಜಯ (ಸಂ) ಬೆಳ್ಳಾವೆ, ಮೈ.ವಿ.ವಿ., 1977. ಪು: viii. (ಉಪೋದ್ಘಾತ)
9. ನೋಡಿ : ವಿಕ್ರಮಾರ್ಜುನ ವಿಜಯ (ಸಂ) ಬೆಳ್ಳಾವೆ, ಪು: xix. (ಉಪೋದ್ಘಾತ)

(4) ರೈಸ ಪರಿಷ್ಕರಣದಲ್ಲಿ ಅನಿವಾರ್ಯವಾಗಿ ಹಾಗೆಯೇ ಬಿಟ್ಟುಹೋಗಿದ್ದ ಖಾಲಿ ಭಾಗಗಳನ್ನೆಲ್ಲ ಇಲ್ಲಿ ತುಂಬಿ ಪೂರ್ಣಗೊಳಿಸಲಾಗಿದೆ.

(5) ಸಂದಿಗ್ಧಕರವಾದ ಪಾಠಗಳಿಗೆ ಸಂಬಂಧಿಸಿದಂತೆ ಮಾಡಲಾದ ಊಹೆಗಳನ್ನು ಕಂಸಿನಲ್ಲಿ ಕೊಡಲಾಗಿದೆ. ಈ ಪರಿಷ್ಕರಣದಲ್ಲಿ ಇಂಥ ಸುಮಾರು ಆರು ನೂರು ಊಹಾ ಪಾಠಗಳಿರುವುದಾಗಿ ಹೇಳಲಾಗಿದೆ.[10]

(6) 'ಪದ್ಯಗಳ ವರ್ಣಾನುಕ್ರಮಣಿಕೆ' ಮತ್ತು 'ಕ್ಲಿಷ್ಟಪದಗಳ ನಿಘಂಟು'— ಇವೆರಡೂ ಈ ಪರಿಷ್ಕರಣದ ಉಪಯೋಗವನ್ನು ಹೆಚ್ಚಿಸಿವೆಯೆಂಬಲ್ಲಿ ಅನುಮಾನವಿಲ್ಲ.

(7) ಪಂಪ ಕವಿಯ ಕಾಲ ದೇಶಾದಿ ವಿವರಗಳಿಂದ ಹಿಡಿದು ಈ ಪರಿಷ್ಕರಣದಲ್ಲಿ ಬಳಸಲಾದ ಹಸ್ತಪ್ರತಿಗಳ ವಿವರಗಳು, ಈ ಪರಿಷ್ಕರಣಕ್ಕೆ ಅನುಸರಿಸಲಾದ ಕ್ರಮ, ಪಂಪ ಕವಿಯನ್ನು ಪಂಪಾನಂತರದ ಕವಿಗಳು ಪರಿಭಾವಿಸಿದ ಬಗ್ಗೆ — ಇತ್ಯಾದಿಯಾದ ಕೆಲವು ವಿವರಗಳನ್ನೊಳಗೊಂಡ ಉಪೋದ್ಘಾತ ಈ ಪರಿಷ್ಕರಣದ ಉಪಯುಕ್ತ ಅಂಗವಾಗಿದೆ.

(8) ಹಿಂದೆಯೇ ಗುರುತಿಸಿದಂತೆ ಈ ಪರಿಷ್ಕರಣ ಒಂದು ಸಾಂಸ್ಥಿಕ ಪ್ರಯತ್ನ. ಇದರ ಪರಿಷ್ಕಾರಕ ಒಬ್ಬನೇ ವ್ಯಕ್ತಿಯಲ್ಲ, ಹಲವರು. ಈ ಎಲ್ಲ ಕೆಲಸದ ಹಿಂದೆ ಬೆಳ್ಳಾವೆಯವರು ಇರುವ ಕಾರಣಕ್ಕೆ ಈ ಪರಿಷ್ಕರಣವನ್ನು ಬೆಳ್ಳಾವೆಯವರ ಪರಿಷ್ಕರಣ ಎಂದು ಕರೆಯುವುದು ಉಚಿತವಾಗಿದೆ. ಬೆಳ್ಳಾವೆಯವರಿಗೆ ಸಹಕರಿಸಿದ ಹಲವರು ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಈ ಪ್ರಯತ್ನದ ಹಿಂದಿರುವುದು ಸ್ಪಷ್ಟ.

---

10. ನೋಡಿ : ವಿಕ್ರಮಾರ್ಜುನ ವಿಜಯ (ಸಂ) ಬೆಳ್ಳಾವೆ, ಪು: xviii - xix.

ಉಪೋದ್ಘಾತದ ವಿವರಗಳಿಂದ[11] ತಿಳಿದು ಬರುವಂತೆ ಈ ಪರಿಷ್ಕರಣದ ಕಾರ್ಯ ಪ್ರಾರಂಭವಾದುದೇ ಮುಖ್ಯವಾಗಿ, ರೈಸ ಪರಿಷ್ಕರಣದ ಪ್ರತಿಗಳು ದುರ್ಲಭವಾದುದರಿಂದ; ಮತ್ತು ಸರಕಾರವೇ ಈ ಕೃತಿಯನ್ನು (ರೈಸ ಪರಿಷ್ಕರಣವನ್ನು) ತಿದ್ದಿ ಪ್ರಕಟಿಸುವ ಜವಾಬ್ದಾರಿಯನ್ನು ಪರಿಷತ್ತಿಗೆ ವಹಿಸಿದುದರಿಂದ. ಆದರೆ, ಮೊದಲ ಪರಿಷ್ಕರಣದಲ್ಲಿದ್ದ ದೋಷಗಳನ್ನು ಹಾಗೂ ಗ್ರಂಥ ಪಾಠಗಳನ್ನು ತಿದ್ದಿ ಮುಗಿಯಬಹುದಾಗಿದ್ದ ಕಾರ್ಯ ಒಂದು ಸಮರ್ಥ ಪರಿಷ್ಕರಣವಾಗುವ ಮಟ್ಟಕ್ಕೆ ಬೆಳೆದುದು ಒಂದು ಗಮನಾರ್ಹ ಸಂಗತಿಯಾಗಿದೆ.

### 2.3.3 ವಿಕ್ರಮಾರ್ಜುನ ವಿಜಯದ ಪರಿಷ್ಕರಣಗಳನ್ನು ಕುರಿತು ಕೆಲವು ವಿವರಗಳು

ವಿಕ್ರಮಾರ್ಜುನ ವಿಜಯದ ಪರಿಷ್ಕರಣಗಳಲ್ಲಿ ಮೊದಲನೆಯದು ರೈಸರದಾದರೆ ಎರಡನೆಯದು ಮತ್ತು ಸದ್ಯಕ್ಕೆ ಕೊನೆಯದು ಬೆಳ್ಳಾವೆ ವೆಂಕಟನಾರಾಯಣಪ್ಪನವರದು. ಈ ಮೇಲಿನ ವಿವರಗಳಲ್ಲಿ ಅಂತಹ ಪರಿಷ್ಕರಣಗಳನ್ನು ಕುರಿತ ಕೆಲವು ಅಂಶಗಳನ್ನು ಕುರಿತು ಹೇಳುವಲ್ಲಿ, ಬೆಳ್ಳಾವೆಯವರ ಪರಿಷ್ಕರಣ [illegible] ರೈಸರ ಪರಿಷ್ಕರಣಕ್ಕೆ ಮುಂದುವರಿದ ಕಾರ್ಯರೂಪದ್ದಾಗಿ ಬಂದಿದೆಯೆಂಬುದನ್ನು ಸೂಚಿಸಲಾಗಿದೆ. ಇಲ್ಲಿ ಆ ಅಂಶವನ್ನು ಎರಡೂ ಪರಿಷ್ಕರಣಗಳ ಕೆಲವು ನಿದರ್ಶನಗಳನ್ನು ಗಮನಿಸಿ ಇನ್ನಷ್ಟು ಖಚಿತಪಡಿಸಿಕೊಳ್ಳಬಹುದು. ಈ ನಿದರ್ಶನಗಳಿಂದ ಇವೆರಡು ಪರಿಷ್ಕರಣಗಳ ನಡುವಿನ ಸಾದೃಶ್ಯ—ವೈದೃಶ್ಯಗಳಲ್ಲದೆ, ಬೆಳ್ಳಾವೆಯವರ ಪರಿಷ್ಕರಣ ಮೊದಲನೆಯ ಪರಿಷ್ಕರಣಕ್ಕಿಂತ ಎಷ್ಟರಮಟ್ಟಿಗೆ ಹೊಸ ಹೆಜ್ಜೆಗಳನ್ನು ತುಳಿದಿದೆ ಎಂಬ ಅಂಶವೂ ಮನವರಿಕೆಯಾಗುತ್ತದೆ.

ಪ್ರಥಮಾಶ್ವಾಸದ ಒಂದು ಪದ್ಯ (32) :

---

11. ನೋಡಿ : ವಿಕ್ರಮಾರ್ಜುನ ವಿಜಯ (ಸಂ) ಬೆಳ್ಳಾವೆ, ಮು : viii-xi.

"ಮಂತರಿಸದ ಱಿವು ಗುರುವಱ।
ದಂತುಟು ಸಮಪಾಳಿಂತೆಡೆಗೆ ಪೊಣರ್ದಿರೆ ಬಲವಂ॥
ತಿಂತೊಳೆ ಮಾಪೆರ್ಱಡೆ ಗುಣಮೋ।
ರಂತೆ ನಿಸರ್ಗವೆ ಸುಭದ್ರ ಮುನಿಪುಂಗವನಾ॥"

(ರೈಸ್)

"ಮಾಂಕರಿಸದಱಿವು ಗುರು ಮಱ।
ನಾಂಕುಶಮಂ ಪಾಱಿಂತೆಡೆಗೆ ಪೊಣರ್ದರಿ ಬಲವಂ॥
ಕಿಂಕೊಳೆ ಮಾ (ಱ್ಪೆಡೆಗಣಮೆ) ನಿ।
ರಂಕುಶಮೆನಿಸಿದುದು ಮುನಿಸು ಭದ್ರಾಂಕುಶನಾ॥"

(ಬೆಳ್ಳಾವೆ)

ಈ ಪದ್ಯದ ಬಹುಪಾಲು ಪಾಠ ಎರಡೂ ಪರಿಷ್ಕರಣಗಳಲ್ಲಿ ಬೇರೆ ಬೇರೆಯಾಗಿದೆ. ಮೇಲಿನ ಪಾಠವನ್ನೇ ಆಧರಿಸಿ ಎರಡನೇ ಅರಿಕೇಸರಿಯ ತಂದೆ ಇಮ್ಮಡಿ ನರಸಿಂಹನ ಗುರು 'ಮುನಿ ಸುಭದ್ರ' ಎಂದು ತಪ್ಪಾಗಿ ಹೇಳುವ ಪ್ರಯತ್ನಗಳು ಮೊದಮೊದಲು ನಡೆದಿವೆ.[12] ಆದರೆ ಬೆಳ್ಳಾವೆ ಪರಿಷ್ಕರಣದಲ್ಲಿ ಈ ಬಗೆಯ ತಪ್ಪು ಗ್ರಹಿಕೆಗೆ ಅವಕಾಶವಿಲ್ಲದಾಗಿದೆ.

ದಶಮಾಶ್ವಾಸದ ಒಂದು ಪದ್ಯ (75)

"ಪಿಡಿಕೆಯೆಲ್ಲಾಣಿಯ ..........।
ಪೊಡೆಯಂಬೊಳ್‍ದವುದಿನ ಮೆಚ್ಚು ..... ಪೆಸೆದಿಱುದು(ಱೆ)ಬ॥
ಲ್ಪಡೆ ಸುರಿಗೆಗಿ ಱ್ರಿದಿರಂ।
ಪಡೆದುದು ಭೋಗರ್ಗರೆದು ಪರಿಮನೆತ್ರರ ಕಡಲಂ॥"

(ರೈಸ್)

---

12. ನೋಡಿ : Lewis Rice, 'Poet Pampa', J.O.R.A.S. of Great Britain and Irland, Vol. 14. London, 1882. P: 20; Krishna Rao B.V., Ve(Le)mulavada Inscription of Arikesarin II J.A.H.R.S. Vol.Vl Part 3 & 4, 1932. P: 174.
ಇತ್ಯಾದಿ. ಮುಂದಿನ ಅಧ್ಯಾಯದಲ್ಲಿ ಈ ಸಂಬಂಧದ ಚರ್ಚೆಯಿದೆ.

"ಪಿಡಿಕೆಯುಕ್ಕೆ ದೊಣೆಯುಂ ಪೊಡೆಯುಂ।
(ಬಡೆ ಮುಡಿ) ವಿನವೆಡುಬ್ಬ ಸುರಿಗೆ ಗಿಟ್ಟಿದಿರಿದಿ ರಂ॥
ಪಡೆ ವೆಣದಿಱಿದುಂ ಬಲ್ಲಡೆ।
ಪಡೆದುದು ಭೋರ್ಗರೆದು ಪರಿವ ನೆತ್ತರ ಕಡಲಂ॥"

(ಬೆಳ್ಳಾವೆ)

ಕೊನೆಯ ಪಾದವೊಂದನ್ನು ಹೊರತು ಇಡೀ ಪದ್ಯ ಸಂಪೂರ್ಣವಾಗಿ ವ್ಯತ್ಯಸ್ತವಾಗಿವೆ. ರೈಸ ಪರಿಷ್ಕರಣದ ಪದ್ಯದ ಅರ್ಥವೇ ತಿಳಿಯಲಾಗದು ಮತ್ತು ಅಪೂರ್ಣ ಭಾಗಗಳೂ ಇವೆ. ಬೆಳ್ಳಾವೆ ಪರಿಷ್ಕರಣದಲ್ಲಿ ಇಂಥ ಅಸ್ಪಷ್ಟತೆ ಮತ್ತು ಅಪೂರ್ಣ ಭಾಗಗಳು ಇಲ್ಲದಾಗಿವೆ.

ಇಡೀ ಪದ್ಯ ಭಾಗಗಳೇ, ವಚನ ಭಾಗಗಳೇ ರೈಸ ಪರಿಷ್ಕರಣದಲ್ಲಿ ಕಾಣದಾಗಿವೆ, ಅರ್ಥಾತ್ ಅಪೂರ್ಣವಾಗಿ ಉಳಿದಿವೆ. ಈ ಅಪೂರ್ಣತೆಗಳನ್ನು ಪೂರ್ಣಗೊಳಿಸುವಲ್ಲಿ ಬೆಳ್ಳಾವೆ ಪರಿಷ್ಕರಣ ಯಶಸ್ವಿಯಾಗಿದೆ. ಇಂಥ ಅಪೂರ್ಣ ಭಾಗಗಳ ನಿದರ್ಶನಗಳಾಗಿ ಹಲವನ್ನು ನೀಡಬಹುದಾದರೂ ಇಲ್ಲಿ ಒಂದೆರಡನ್ನು ಮಾತ್ರ ಗಮನಿಸಬಹುದಾಗಿದೆ :—

ಎಂಟನೆಯ ಆಶ್ವಾಸದ ಒಂದು ಪದ್ಯ (15)

"ಪಾರವಾರಿಧಿಗಳ್ಕಲಂಕಿದುವುದ್ಧಮುಯ್ಯನುದಗ್ರ.....।
............................ ಸಿಡಿಲ್ದ॥
..............................।
ತಾರೆಗಳ್ನಭದಿಂದುದಿರ್ದುವು ಪೆಂಪಿದೆಂತೊ ಮಹಾಹವಾ॥"

(ರೈಸ)

ಈ ವೃತ್ತದಲ್ಲಿ ಮೊದಲ ಮತ್ತು ಕೊನೆಯ ಸಾಲುಗಳಲ್ಲಿ ಮಾತ್ರ ಪಾಠ ಇದೆಯಾದರೂ, ಅದೂ ಸಮರ್ಪಕವಾದುದಾಗಿಲ್ಲ. ಮತ್ತು ಎರಡು-ಮೂರನೆಯ ಪಾದಗಳು ಅಪೂರ್ಣವಾಗಿವೆ. ಇದನ್ನು ಸಮರ್ಪಕವಾಗಿ ಪೂರ್ಣಗೊಳಿಸಿದ ಬೆಳ್ಳಾವೆ ಪರಿಷ್ಕರಣದ ಪಾಠ ಹೀಗಿದೆ :—

"ಪೊರಳೆ ವಾರಿಧಿಗಳ್ ಕಲಂಕಿದುವು(ರ್ದೆ ವು) ಯುಗಾಂತದುದಗ್ರವುಂ।
ದರವುದಂದಲುಗಿತ್ತು ಬಾ(ಯ್ತೆಗ)ಯ್ತು ದಿಗ್ಗಜಂ ಪೆಱಗಿಟ್ಟುವಾಂ॥
(ತ)ರದೆ ತೆರಾಟ್ಟನೆ ದಾಡೆಗುಟ್ಟ ಕೞಲ್ದುವು ತಾರಗೆಗಳ್ ನಭಂ।
ಬೆರ(ಸು) ಬಿಱುಂಪು ಪೆಂಪಿದೇಂ ಪಿರಿದಾಂತತ್ತೊ ದೈತ್ಯ ವರಾಹನಾ॥

(72)

ಸಪ್ತಮಾಶ್ವಾಸದ ಒಂದು ಪದ್ಯ ರೈಸ ಪರಿಷ್ಕರಣದಲ್ಲಿ ಹೀಗಿದೆ :—

"ಇದು ಕೈಲಾಸನ ಗಂಭವಾನಿಪತಿ ಚೇತೋಜಾತ ನಂಬೂದಿಮಾ
ಡಿ .......... ತ್ರಿದಶಾ ಳಂಕಾಧ್ವರ ಧ್ವಂಸಕ ನೊಸಲಕ
ಣ್ಣಾತತನ್ನದೋರ್ಗರ್ವ ವರ್ಧದಗುರ್ವಂ ಪ್ರಕಟಂ ಮಾಡುವ ಬಗೆಯೊ
ಳಿದಂ ಪತ್ತಿದೊಡಿತ್ತಂಬರವಂಲಂಕಾಧೀಶಂಗಾ ನೀಳಕಂಠಾ।"

ಈ ಪದ್ಯವನ್ನು ಕುರಿತು ರೈಸ ಅವರು ಅಡಿ ಟಿಪ್ಪಣಿಯಲ್ಲಿ "ಈ ಪದ್ಯವು ತಿದ್ದಲು ಸಾಧ್ಯವಾಗಲಿಲ್ಲ" ಎಂದಿದ್ದಾರೆ. ಬೆಳ್ಳಾವೆಯವರ ಪರಿಷ್ಕರಣದಲ್ಲಿ ಈ ಪದ್ಯದ ಅಪೂರ್ಣ ಭಾಗವನ್ನು ತುಂಬಿರುವುದಲ್ಲದೆ, ಅಲ್ಲಿನ ಕೆಲವು ಅಸ್ಪಷ್ಟ ಪಾಠಗಳನ್ನು ಸ್ಪಷ್ಟೀಕರಿಸಲು ಯತ್ನಿಸಲಾಗಿದೆ :—

"ಇದು ಕೈಲಾಸಂ ಭವಾನೀ ಧವನ ನೆಲೆ ಮನೋಜಾತನಂ ಬೂದಿ ಮಾಡಿ
(ತ್ರಿ)ದಱೊಳ್ ದಕ್ಷಾಧ್ವರ ಧ್ವಂಸಕನ ನೊಸಲ ಕಣ್ಣಾತ(ನೊಳ್) ತನ್ನದೋರ್ಗ
ರ್ವದಗುರ್ವಂ (ಪ್ರಾ) ಕಟಂ ಮಾಡುವ ಬಗೆಯೊಳಿದಂ ಪತ್ತಿ ಕಿ(ಱೊತ್ತಿ)ತ್ತಿ
ಪೊ(ತ್ತೆ)
ತ್ತಿದೊಡಿತ್ತಂ (ಮೆಚ್ಚಿ ಲಂಕಾಧಿಪತಿಗೆ ಬರವಂ ರಾಗದಿಂ) ನೀಳಕಂಠಂ"

(7— 74)

ಈ ಪರಿಷ್ಕರಣದ ಪರಿಷ್ಕಾರಕರಿಗೂ ಈ ಪದ್ಯದ ಪಾಠವನ್ನು ತಿದ್ದುವಲ್ಲಿ ಹಸ್ತಪ್ರತಿಗಳು ಪೂರ್ಣ ಪ್ರಮಾಣದಲ್ಲಿ ಸಹಾಯಕಗಳೇನೂ ಆಗಿಲ್ಲವೆಂಬುದು ಇಲ್ಲಿ ಉಳಿದಿರುವ ಊಹಾ ಪಾಠಗಳನ್ನು ಗಮನಿಸಿದರೇ ತಿಳಿಯುತ್ತದೆ. ಒಟ್ಟು ಇಲ್ಲಿ ಅರು

ಊಹಾ ಪಾಠಗಳಿವೆ. (ತ್ರಿ); (ಪ್ರಾ) ಇವುಗಳಿಗೆ ಸರ್ವತ್ರ ಅನುಕ್ರಮವಾಗಿ 'ತ್ರ' ಮತ್ತು 'ಪ್ರ' ಗಳನ್ನು ಲಭ್ಯ ಪಾಠಾಂತರಗಳಾಗಿ ನೀಡಲಾಗಿದ್ದು ಇಂಥವು ಲಿಪಿಕಾರ ದೋಷಗಳ ಫಲವಾಗಿದ್ದಿರಬೇಕೆಂದು ಹೇಳಲು ಸಾಧ್ಯವಿದೆ. (ಟ್ರೋ); (ತ್ರೆ) ಇವುಗಳಿಗೆ ಅನುಕ್ರಮವಾಗಿ 'ಕ್ರೆ' ಮತ್ತು 'ಕ್ರೋ' ಗಳನ್ನು 'ಫ' ಪ್ರತಿಯು (ಅರಾ ಪ್ರತಿ) ಪಾಠಾಂತರಗಳಾಗಿ ನೀಡಲಾಗಿದೆ. ಈ ಊಹೆಗಳಿಗೆ ವಿವರಗಳೇನೂ ಇಲ್ಲ. ಕೊನೆಯ ಸಾಲಲ್ಲಿ ಬರುವ 'ಮುಟ್ಟಿ ಲಂಕಾಪತಿಗೆ ಬರವಂ ರಾಗದಿಂ' ಎಂಬ ಊಹಾ ಪಾಠಕ್ಕೆ 'ಬರವಂ ಲಂಕಾಧೀಶಂ' ಎಂಬ ಸರ್ವತ್ರ ಪಾಠವನ್ನೂ 'ಗಾನೀಳ' ಪಾಠವನ್ನು 'ಫ' ಪ್ರತಿಯದೆಂದೂ ಪಾಠಾಂತರಗಳಾಗಿ ತೋರಿಸಲಾಗಿದೆ. ಎರಡನೆಯ ಸಾಲಿನಲ್ಲಿ ಬರುವ (ನೋಳ್) ಎಂಬ ಊಹಿತ ಪಾಠಕ್ಕೆ ಪಾಠಾಂತರಗಳೇನೂ ಇಲ್ಲ. ಇಂಥ ಪಾಠಾಂತರಗಳೇ ಇಲ್ಲದ ಸಂದರ್ಭದಲ್ಲಿ ಮಾಡಿದ ಊಹೆಗಳಿಗೆ ವಿವರಗಳಿದ್ದರೆ (ಆ ಊಹೆಯನ್ನು ಸಮರ್ಥಿಸುವ) ಹೆಚ್ಚು ಒಳ್ಳೆಯದೆಂದು ತೋರುತ್ತದೆ. ಹೀಗಿದ್ದೂ ರೈಸ ಪರಿಷ್ಕರಣದ ಮೇಲಿನ ಪದ್ಯದಲ್ಲಿದ್ದ ಅಸ್ಪಷ್ಟತೆಯನ್ನು ಈ ಪರಿಷ್ಕರಣದ ಪದ್ಯ ಪರಿಹರಿಸಿದೆಯೆಂಬುದು ಸ್ಪಷ್ಟ.

ಇನ್ನು ಸಣ್ಣ ಪುಟ್ಟ ಪಾಠ ಬೇಧಗಳುಳ್ಳ, ಅವುಗಳಿಂದ ಅರ್ಥ ಭೇದಗಳೂ ಆಗಬಹುದಾಗಿರುವ ನಿದರ್ಶನಗಳು ಅಸಂಖ್ಯವಾಗಿವೆ. ಅವೆಲ್ಲವನ್ನೂ ಇಲ್ಲಿ ನಿದರ್ಶಿಸಬೇಕಾದ ಅಗತ್ಯವೂ ಇಲ್ಲ, ಅದು ಸಾಧ್ಯವೂ ಇಲ್ಲ. ಮೇಲಿನ ವಿವರಗಳು ಮತ್ತು ನಿದರ್ಶನಗಳು ಈ ಪರಿಷ್ಕರಣಗಳಲ್ಲಿನ ವ್ಯತ್ಯಾಸವನ್ನು ಸ್ಪಷ್ಟ ಮಾಡಬಲ್ಲವೆಂದು ತೋರುತ್ತದೆ.

ಇದಲ್ಲದೆ ರೈಸ ಅವರ ಪರಿಷ್ಕರಣದಲ್ಲಿ ಕೆಲವು ಭಾಗಗಳೇ ಕೈಬಿಟ್ಟು ಹೋಗಿದ್ದು ದೊರೆಯದಂತಾಗಿವೆ. ಎಂಟನೇ ಆಶ್ವಾಸದಲ್ಲಿ ಇಂಥದೊಂದು ನಿದರ್ಶನವಿರುವುದನ್ನು ಗಮನಿಸಬಹುದು. ಈ ಆಶ್ವಾಸದ 57ನೇ ಪದ್ಯಾನಂತರ [13] ರೈಸ ಪರಿಷ್ಕರಣದಲ್ಲಿ

---

13. ಈ ಪದ್ಯ ಕೂಡ ಅಸಂಪೂರ್ಣವಾಗಿದೆ : "ಪರ್ವರಿಕೆ ಗಿಡದೆ ಕರಿ ವಿಷ1ಖರ್ಪರ ನಿದಿರಾಂತೊಡಾತು ಪಲಲಂ ತಳಮುಂ॥ ಮಾಪೋರ್ಟ್ವೆಸೆದು ತಟ್ಟ..... 1.... ವುಂ.....ಸಿಂಹನಂದದಿನಾರ್ದ್ದಂ॥". ಬೆಳ್ಳಾವೆಯವರ ಪರಿಷ್ಕರಣದಲ್ಲಿ "ತಳು (ಕಪ್ಪುರಿ) ತರ್ಪಿನೆಗಮುವುಂ(ಕಿ)" ಎಂದು ಸಂಪೂರ್ಣವಾಗಿದೆ.
(ನೋಡಿ : ಬೆಳ್ಳಾವೆ ಪರಿಷ್ಕರಣ : 8 – 58)

"ಅಂತು ಸಂಶೋಧನ .............. ಗಂಗಾನಂದನನಿಂತೆಂದಂ" ಎಂಬೊಂದು ಅಸಂಪೂರ್ಣ ಭಾಗವನ್ನು ಗಮನಿಸುತ್ತೇವೆ. ಬೆಳ್ಳಾವೆಯವರ ಪರಿಷ್ಕರಣವನ್ನು ಗಮನಿಸಿದಾಗ "ಅಂತು ಸಂಶೋಧನ .........." ಎಂದು ಪ್ರಾರಂಭವಾಗುವ ವಚನ ಭಾಗ ಮತ್ತು ".......... ಗಂಗಾ ನಂದನನಿಂತೆಂದಂ" ಎಂದು ಮುಗಿಯುವ ವಚನ ಭಾಗ — ಇವೆರಡರ ಮಧ್ಯೆ ಇಡೀ ಒಂದು ಪ್ರಸಂಗವೇ ಇರುವುದು ಮನವರಿಕೆಯಾಗುತ್ತದೆ.[14] ರೈಸ ಅವರ ಪರಿಷ್ಕರಣದಲ್ಲಿ ಈ ಪ್ರಸಂಗ — ಕೀಚಕ ಪ್ರಸಂಗ — ಕೈ ಬಿಟ್ಟು ಹೋಗಿದೆ. ಬೆಳ್ಳಾವೆಯವರ ಪರಿಷ್ಕರಣದಲ್ಲಿ ".......... ಗಂಗಾನಂದನನಿಂತೆಂದಂ" ಎಂಬುದು 85 ನೆಯ ಪದ್ಯಾನಂತರ ಬರುವ ವಚನ ಭಾಗದ ಕೊನೆಯ ತುಣುಕಾಗಿದೆ. ಈ ಮಧ್ಯೆ ಬಂದು ಹೋಗುವ ಹಲವು ವೃತ್ತಗಳು, ವಚನ ಭಾಗಗಳು ರೈಸರ ಪರಿಷ್ಕರಣದಲ್ಲಿ ದೊರೆಯದಾಗಿವೆ. ಬೆಳ್ಳಾವೆಯವರು ಈ ಇಡೀ ಪಾಠ "ಥ ಪ್ರತಿಯಲ್ಲಿ ಮಾತ್ರವಿದೆ" ಎಂದು ಸೂಚಿಸಿದ್ದಾರೆ. ಇದೊಂದೇ ಪ್ರತಿಯಲ್ಲಿ ದೊರೆಯುವ ಈ ಪಾಠವೆಲ್ಲ ಹೊಸದಾಗಿ ಅದ ಸೇರ್ಪಡೆಯಿರಬೇಕೆಂದು ಹೇಳಲಾಗದು. ಅಂಥ ಹೇಳಿಕೆಗೆ ಕೃತಿಯಲ್ಲಿ ಪ್ರಮಾಣಗಳಿಲ್ಲ. 'ಥ' ವನ್ನುಳಿದ ಇತರ ಪ್ರತಿಗಳಲ್ಲೆಲ್ಲ ಇದು ತ್ರುಟಿತವಾಗಿ ಇಲ್ಲವೇ ಕೈ ಬಿಟ್ಟುಹೋಗಿರಬೇಕೆಂಬುದು ಹೆಚ್ಚು ಸಾಕ್ತವಾದುದೆಂದು ತೋರುತ್ತದೆ.

ಇಂಥ ಅಪೂರ್ಣವಿರುವ, ವ್ಯತ್ಯಸ್ತವಿರುವ ಹಲವು ಭಾಗಗಳನ್ನು ಗಮನಿಸಲು ಸಾಧ್ಯವಿದೆ. ಅದರಲ್ಲೂ ವಿಶೇಷವಾಗಿ ಏಳು—ಎಂಟನೆಯ ಆಶ್ವಾಸಗಳಲ್ಲಿ ಇಂಥ ಭಾಗಗಳು ಹಲವಿವೆ. ಇನ್ನು ಕೊನೆಯದಾಗಿ ಪ್ರಥಮಾಶ್ವಾಸದ ಒಂದು ಪದ್ಯವನ್ನು ಗಮನಿಸಬಹುದು :—

"ಬೆಳೆದೆಱಗಿರ್ದ ಕೆಯ್ವೊಲನೆ ಕೆಯ್ವೊಲನಂ ಬಳಸಿರ್ದ ಪೂತ ಪೂ
ಗೊಳಂಗಳೆ ಪೂತ ಪೂಗೊಳಂಗಳಂ ಬಳಸಿರ್ದ ವಿಚಿತ್ರ ನಂದನಾ

---

14. ನೋಡಿ : ವಿಕ್ರಮಾರ್ಜುನ ವಿಜಯ (ಸಂ) ಬೆಳ್ಳಾವೆ, 8.58 ವ.— 85 ವ.

ವಳಿಗಳೆ ನಂದನಾವಳಿಗಳಂ ಬಳಸಿರ್ದ ಮದಾಳಿ ಸಂಕುಲಂ
ಗಳೆ ವಿಷಯಾಂಗನಾ ಲುಳಿತ ಕುಂತಳದಂತೆವೊಲೊಪ್ಪಿ ತೋಱುಗುಂ"

(ಬೆಳ್ಳಾವೆ : 1– 53)

ಬೆಳ್ಳಾವೆ ಪರಿಷ್ಕರಣದಲ್ಲಿ ದೊರೆಯುವ ಈ ಪದ್ಯ ರೈಸ್ ಪರಿಷ್ಕರಣದಲ್ಲಿ ಬೇರೆ ಬೇರೆ ಪದ್ಯಗಳಲ್ಲಿ ಸೇರಿಹೋಗಿದೆ. ಅಲ್ಲಿ ಮೊದಲೆರಡು ಸಾಲುಗಳು ಮತ್ತು ನಂತರದ ಪದ್ಯದ ಕೊನೆಯ ಎರಡು ಸಾಲುಗಳು ಸೇರಿ ಒಂದು ಪದ್ಯವಾಗಿದೆ. ಆ ಪದ್ಯವನ್ನಿಲ್ಲಿ ನೋಡಬಹುದು :—

"ಬೆಳೆದೆಱಗಿರ್ದ ಕೆಯ್ವೊಲನೆ ಕೆಯ್ವೊಲನಂ ಬಳಸಿರ್ದ ಪೂತ ಪೂ
ಗೊಳಗಳೆ ಪೂತ ಪೂಗೊಳಂಗಳಂ ಬಳಸಿರ್ದ ವಿಚಿತ್ರ ನಂದನಾ
ವಳಿಗಳೆ ರಮ್ಯನಂದನಮನಲ್ಲಿ ವಿಯೋಗಿ ಜನಕ್ಕೆ ಬೇಟಮುಂ
ಬಳೆವುದು ನಾಡಕಾಡ ಬೆಳಸೆ ಬೆಳಸಾ ವಿಷಯಾಂತರಾಳದೊಳ್"

(ರೈಸ : 1– 53)

ಬೆಳ್ಳಾವೆಯವರು ಇದನ್ನು ಗಮನಿಸಿ ಪ್ರಸ್ತಾಪಿಸಿ (ಅಡಿ ಟಿಪ್ಪಣಿ ಪದ್ಯ : 1– 53) "53– 54 ನೆಯ ಪದ್ಯಗಳನ್ನು ಬೇರೆ ಬೇರೆಯಾಗಿ ಕೊಟ್ಟಿರುವುದು 'ಫ' ಪ್ರತಿಯಲ್ಲಿ ಮಾತ್ರ. ಮಿಕ್ಕ ಪ್ರತಿಗಳಲ್ಲಿ 53 ನೆಯ ಪದ್ಯದ ಪೂರ್ವಾರ್ಧವನ್ನು 54 ನೆಯ ಪದ್ಯದ ಉತ್ತರಾರ್ಧವನ್ನು ಸೇರಿಸಿಕೊಟ್ಟಿದೆ" ಎಂದಿದ್ದಾರೆ. ಇದರಿಂದ ಎರಡು ಅಂಶಗಳನ್ನು ತಿಳಿಯುವುದು ಸಾಧ್ಯ. ಒಂದು 'ಫ' ಪ್ರತಿ ಇತರೆಲ್ಲ ಪ್ರತಿಗಳಿಗಿಂತ ಬೇರೆಯಾಗಿರುವುದು (ಇತರ ಪಾಠಾಂತರಗಳೂ, ಪಾಠ ವ್ಯತ್ಯಾಸಗಳೂ ಇದನ್ನು ಸಮರ್ಥಿಸುತ್ತವೆ.). ಮತ್ತೊಂದು ಈ ವ್ಯತ್ಯಾಸದ ಹಿಂದೆ ಲಿಪಿಕಾರನ ಅನುದ್ದೇಶಿತವಾದ ತಪ್ಪು ಗ್ರಹಿಕೆಯು ಕೆಲಸ ಮಾಡಿರಬಹುದಾದ ಸಾಧ್ಯತೆ. ರೈಸ್ ಪರಿಷ್ಕರಣದ ಮೂರನೆಯ ಪಾದದಲ್ಲಿರುವ ಪಾಠ, ಬೆಳ್ಳಾವೆ ಪರಿಷ್ಕರಣದಲ್ಲಿ (1– 54) "ಬೆಳೆವುದು ರಮ್ಯ ನಂದನ ವನಾಳಿ ವಿಯೋಗೀ ಜನಕ್ಕೆ ಬೇಟಮಂ" ಎಂದು ಭಿನ್ನವಾಗಿದ್ದರೆ ನಾಲ್ಕನೆಯ ಪಾದ ಯಾವುದೇ ವ್ಯತ್ಯಾಸಗಳನ್ನು ಹೊಂದಿಲ್ಲ.

ರೈಸ್ ಮತ್ತು ಬೆಳ್ಳಾವೆ ಪರಿಷ್ಕರಣಗಳಲ್ಲಿ ಕಾಣಬರುವ ಭಿನ್ನತೆಯನ್ನು ಮೇಲಿನ ಕೆಲವು ನಿದರ್ಶನಗಳು ಸ್ಪಷ್ಟಪಡಿಸುತ್ತವೆ. ನಿದರ್ಶನಗಳನ್ನು ಬೆಳೆಸುತ್ತಾ ಹೋಗಬಹುದು, ಏಕೆಂದರೆ ಅಂಥ ಅಸಂಖ್ಯ ನಿದರ್ಶನಗಳನ್ನು ನಾವು ಗುರುತಿಸಲು ಸಾಧ್ಯ. ವಿಷಯ ಸ್ಪಷ್ಟನೆಗೆ ಪೂರಕವಾಗಿ, ಅಗತ್ಯವಿದ್ದಷ್ಟು ನಿದರ್ಶನಗಳನ್ನು ಮಾತ್ರವೇ ಇಲ್ಲಿ ತೋರಿಸಲಾಗಿದೆ. ಹಿಂದಿನ ವಿವರಗಳಲ್ಲಿ ಮೊದಲ ಪರಿಷ್ಕರಣದ ಅನೇಕ ಅರಕೆ, ಅಸಾಂಗತ್ಯಗಳು, ಅಸ್ಪಷ್ಟತೆಗಳು ನಂತರದ ಪರಿಷ್ಕರಣದಲ್ಲಿ ಪರಿಹಾರವಾಗಿವೆಂಬುದು ಸ್ಪಷ್ಟವಾಗುತ್ತದೆ. ಹೀಗಾಗಿ ರೈಸ್ ಪರಿಷ್ಕರಣಕ್ಕಿಂತ ಬೆಳ್ಳಾವೆ ಪರಿಷ್ಕರಣ ಹಲವು ಹೊಸ ಹೆಜ್ಜೆಗಳನ್ನು ತುಳಿದಿದೆ. ಈ ಪರಿಷ್ಕರಣದಲ್ಲಿ ಅಪೂರ್ಣ ಭಾಗಗಳು ಸಂಪೂರ್ಣವಾಗಿ ಇಲ್ಲವಾಗಿವೆ. ಹಲವು ಊಹಾ ಪಾಠಗಳಿವೆ. ಈ ಊಹಾ ಪಾಠಗಳಲ್ಲಿ ಕೆಲವಕ್ಕೆ ಪಾಠಾಂತರಗಳನ್ನು ನೀಡಲಾಗಿದೆ. ಮತ್ತೆ ಕೆಲವಕ್ಕೆ ಇಲ್ಲ. ಅಂಥೆಡೆ ಪಾಠಾಂತರವಾಗಲಿ, ಪಾಠವಾಗಲಿ ಇಲ್ಲದಿರಬಹುದು. ಆದರೆ ಆ ಊಹಾ ಪಾಠಕ್ಕೆ ಸಂಬಂಧಿಸಿದ ಟಿಪ್ಪಣಿ ಯನ್ನಾದರೂ ಕೊಟ್ಟಿದ್ದರೆ ಹೆಚ್ಚು ಉಪಯುಕ್ತವಾಗುತ್ತಿತ್ತು. ಇಂಥ ಊಹಾ ಪಾಠಗಳನ್ನು ಸಮರ್ಥಿಸುವ, ನಿರಾಕರಿಸುವ ಪ್ರಯತ್ನಗಳು; ಪ್ರಶ್ನಾತ್ಮಕವಾಗಿಯೇ ಉಳಿದಿರುವ ಅಸಂಖ್ಯ ಪಾಠಗಳನ್ನು ಬಿಡಿಸಬೇಕಾದ ಪ್ರಯತ್ನಗಳು ನಡೆಯುವ ಅವಕಾಶವಿದೆ ಮತ್ತು ಅದು ಅಗತ್ಯ ಕೂಡ. ಈ ಎಲ್ಲದರ ಹಿನ್ನೆಲೆಯಲ್ಲಿ ನಮಗೆ ಮನವರಿಕೆಯಾಗುವ ಒಂದು ಅಂಶವೆಂದರೆ : ಹೊಸ ಹೊಸ ಆಧಾರಗಳು, ಆಕರ ಸಾಮಗ್ರಿ ದೊರೆಯುತ್ತ ಹೋದಂತೆಲ್ಲ ಪಾಠ ಪರಿಷ್ಕರಣವೆನ್ನುವುದು ಬೇರೆ ಬೇರೆಯ ಆಯಾಮಗಳನ್ನು ಪಡೆಯುವುದು ಸಾಧ್ಯ, ಎಂಬುದು.

### 2.3.4 ವಿಕ್ರಮಾರ್ಜುನ ವಿಜಯದ ಮರು ಮುದ್ರಣಗಳು, ಸಂಗ್ರಹಗಳು – ಇತ್ಯಾದಿ

ಇವೆರಡು ಪರಿಷ್ಕರಣಗಳ ನಂತರ ವಿಕ್ರಮಾರ್ಜುನ ವಿಜಯದ ಬೇರಾವ ಪರಿಷ್ಕರಣಗಳೂ ನಡೆದಿಲ್ಲ. ಬೆಳ್ಳಾವೆಯವರ ಪರಿಷ್ಕರಣಕ್ಕೆ ಮತ್ತೆ ಮತ್ತೆ ಮರು ಮುದ್ರಣಗಳನ್ನು ತರಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನಿಂದ 1931 ರಲ್ಲಿ ಇಡಿಯಾಗಿ

ಪ್ರಕಟವಾದ ಈ ಪರಿಷ್ಕರಣ ಹಾಗೂ ಈ ಪರಿಷ್ಕರಣ ಇಡಿಯಾಗಿ ಪ್ರಕಟವಾಗುವ ಮೊದಲೇ ಪ್ರಕಟವಾದ ಎರಡು ಭಾಗಗಳು (ಆಶ್ವಾಸ 1 ರಿಂದ 6 : 1926; ಆಶ್ವಾಸ 7 ರಿಂದ 14 : 1927) ಮೈಸೂರು ವಿಶ್ವವಿದ್ಯಾಲಯದಿಂದ ಹಲ ಸಲ ಮರು ಮುದ್ರಿತವಾಗಿವೆ.[15] ಈ ಎಲ್ಲ ಮರು ಮುದ್ರಣಗಳ ಉದ್ದೇಶ ಪ್ರತಿಗಳ ಪೂರೈಕೆಯೇ ಆಗಿದೆ. ಮರು ಮುದ್ರಣಗಳ ಈ ಪ್ರಧಾನ ಉದ್ದೇಶವನ್ನು ನಿರಾಕರಿಸಲಾಗದಾದರೂ ಪಂಪನಂಥ ಪ್ರಾಚೀನ ಕವಿಗಳ ಕೃತಿಗಳ ಪರಿಷ್ಕರಣದ ಹಾದಿಯಲ್ಲಿ ನಾವಿನ್ನೂ ಪ್ರಾರಂಭದ ಹಂತದಲ್ಲಿದ್ದೇವೆ ಎಂಬುದನ್ನು ಮರೆಯಲಾಗದು. 1931ರ ಈ ಪರಿಷ್ಕರಣದ ಪ್ರಕಟಣೆಯ ನಂತರ ಈ ಪರಿಷ್ಕರಣದ ಪಾಠವನ್ನೇ ಆಧರಿಸಿ ಹಲವು ಪಾಠ ಚರ್ಚೆಗಳು ನಡೆದಿವೆ. ಕೆಲವೆಡೆಗಳಲ್ಲಾದರೂ ಒಂದು ಸಂಗತ ನಿಲುವಿಗೆ ಬರಲಾಗಿದೆ. ಮರು ಮುದ್ರಣಗಳಾಗುವಾಗ ಇಂಥ ಕೆಲವು ಮಹತ್ವದ ಚರ್ಚೆಗಳ ತಿರುಳನ್ನಾದರೂ ಅಡಿ ಟಿಪ್ಪಣಿಯಾಗಿ ಕೊಡಬಹುದೆಂದು ತೋರುತ್ತದೆ. ಇದರಿಂದ ಕವಿ ಕೃತಿಯ ಅಭ್ಯಾಸಿಗಳಿಗೆ ಒದಗಿ ಬರುವ ಸಹಾಯವನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಪಂಪ ಭಾರತದ ಮರು ಮುದ್ರಣಗಳನ್ನು ಕುರಿತು ಹೇಳುವಾಗ ಎಸ್. ಅನಂತ ರಂಗಾಚಾರ ಅವರ ಗದ್ಯಾನುವಾದ ಕೃತಿಯನ್ನು [16] ಪ್ರಸ್ತಾಪಿಸಬೇಕಾದ ಅಗತ್ಯವಿದೆ. ಏಕೆಂದರೆ ಇದು ಕೇವಲ ಗದ್ಯಾನುವಾದ ಮಾತ್ರ ಆಗಿರದೆ ಪಂಪ ಭಾರತದ

---

15. ಇಲ್ಲಿ ಒಂದು ಅಂಶವನ್ನು ಹೇಳಬೇಕಾಗಿದೆ : ಮೈಸೂರು ವಿಶ್ವವಿದ್ಯಾಲಯವು ಹೊರ ತಂದ ಮರು ಮುದ್ರಣಗಳ ಪ್ರಧಾನ ಸಂಪಾದಕರು ಕುವೆಂಪು ಅವರು. ಆ ಗ್ರಂಥದ ಉಪೋದ್ಘಾತದಲ್ಲಿ ಬೇರೆಲ್ಲೂ ಈ ಕೃತಿಯ ಸಂಪಾದಕ ಬೆಳ್ಳಾವೆ ವೆಂಕಟನಾರಾಯಣಪ್ಪನವರೆಂಬುದು ಸೂಚಿತವಾಗಿಲ್ಲ. ಈ ಕೃತಿಯ ಸಂಪಾದಕರು ಕುವೆಂಪು ಅವರೆಂದೇ ಉಲ್ಲೇಖಿಸಿರುವ ನಿದರ್ಶನಗಳನ್ನೂ ಗಮನಿಸಬಹುದು. ಸಂಗತಿಗಳನ್ನು ಕುರಿತ ಮಾಹಿತಿಗಳು ಅಸ್ಪಷ್ಟವಾಗದಂತೆ ಎಚ್ಚರ ವಹಿಸುವುದು ಅತ್ಯಗತ್ಯ ಎಂಬುದನ್ನು ಗಮನಿಸಬೇಕಾಗಿದೆ.

16. ಪಂಪ ಭಾರತಂ (ಗದ್ಯಾನುವಾದ), (ಅನು) ಎಸ್.ಅನಂತ ರಂಗಾಚಾರ, ಬೆಂಗಳೂರು, 1977.

ಸಂಪೂರ್ಣ ಪಾಠವನ್ನು ಪುನರ ಮುದ್ರಿಸಿದೆ. ಕಾವ್ಯ ಕೃತಿಯೊಂದರ ಗದ್ಯಾನುವಾದವೆನ್ನುವುದು ಕೇವಲ ಕಥಾ ನಿರೂಪಣೆಯಾಗುವುದರ ಆಚೆಗೆ ಏನೂ ಅಲ್ಲವೆಂಬುದು ತಿಳಿದಿರುವ ಸಂಗತಿಯೇ ಆಗಿದೆ. ಬರಿಯ ಕಥಾ ಸಾರವನ್ನಷ್ಟೆ ತಿಳಿಯಬೇಕೆನ್ನುವುದಾದರೆ ಕಾವ್ಯವೇ ಏಕೆ ಬೇಕು? ಎಂಬ ಬೇರೊಂದು ಪ್ರಶ್ನೆಯೇ ಏಳುತ್ತದೆ. ಸದ್ಯಕ್ಕೆ ಈ ಚರ್ಚೆ ಇಲ್ಲಿಗೆ ಅಗತ್ಯವಿಲ್ಲ. ಪಂಪ ಭಾರತದ ಪಾಠವನ್ನೂ ಅದರ ಅನುವಾದವನ್ನೂ ಜೊತೆ ಜೊತೆಗೆ ನೀಡುವ ಈ ಕೃತಿ ಬೇರಾವ ಪರಿಷ್ಕರಣದಲ್ಲೇ ಸುದೀರ್ಘವಾಗಿಯೇ ಇರುವ ಆಶ್ವಾಸಾನುಕ್ರಮ ಕಥಾ ಸಂಗ್ರಹಕ್ಕಿಂತ ಹೆಚ್ಚಿನದೇನನ್ನೂ ಸಾಧಿಸಿದಂತೆ ತೋರದು. ಅದರ ಬದಲು ಮೇಲೆ ಸೂಚಿಸಿದಂತೆ ಅದುವರೆಗೆ ನಡೆದಿದ್ದ ಪಾಠ ಚರ್ಚೆಗಳ ಸಾರ ರೂಪಗಳನ್ನೂ (ಅವು ಕಡಿಮೆಯೇ ಆದರೂ) ಅಗತ್ಯವಿರುವೆಡೆಗಳಲ್ಲಿ, ಕೆಲವು ವಿವರಣ ಟಿಪ್ಪಣಿಗಳನ್ನು ನೀಡಬಹುದಿತ್ತು. ಈ ಕೃತಿಯಲ್ಲಿಯೇ ಪಂಪ ಭಾರತದ ಮಂಗಲ ಪದ್ಯದಲ್ಲಿ ಬರುವ 'ಸುಪುಷ್ಪ ವೃಷ್ಟಿ' ಎಂಬ ಪಾಠವನ್ನು ಕುರಿತು ಡಿ.ಎಲ್.ಎನ್. ಅವರ ಚರ್ಚೆಯನ್ನು ಒಪ್ಪಿ, ಅವರು ಸೂಚಿಸಿದ 'ಪುಷ್ಪಪುಷ್ಟಿ' ಎಂಬ ಪಾಠವನ್ನೇ ಅಂಗೀಕರಿಸಿದ್ದಾರೆ.[17] ಗದ್ಯಾನುವಾದದ ಬದಲು ಇಂಥ ವಿವರಗಳನ್ನುಳ್ಳ ಮರು ಮುದ್ರಣದ ಉಪಯೋಗ ಮತ್ತು ಸಾರ್ಥಕತೆ ಮಹತ್ವದ್ದೆಂದು ತೋರುತ್ತದೆ. ಪರಿಷ್ಕೃತ ಮುದ್ರಣಗಳಲ್ಲಿನ ಪಾಠವೇ ಮರುಮುದ್ರಣಗಳಲ್ಲಿ ಮುದ್ರಣ ದೋಷಗಳನ್ನು ಉಳಿಸಿಕೊಳ್ಳುವುದು ಒಂದು ವಿಪರ್ಯಾಸ. ಮರು ಮುದ್ರಣಗಳಲ್ಲಿ ಆಗುವ ಇಂಥ ಮುದ್ರಣ ದೋಷಗಳನ್ನು — ಅವು ಅನುದ್ದೇಶಿತವೇ ಆದರೂ — ಉಳಿಸದಂತೆ ಮಾಡುವುದು ಅಗತ್ಯ.

ಇಷ್ಟು ಹೊರತು ಈ ಪರಿಷ್ಕರಣದ ಇಡೀ ಮರು ಮುದ್ರಣಗಳು ಇಲ್ಲವೆಂದೇ ಹೇಳಬಹುದು. ಎನ್.ಬಸವಾರಾಧ್ಯ ಮತ್ತಿತರರು ಸೇರಿ ಹೊರತಂದ 'ಪಂಪ ಭಾರತ ಸಂಗ್ರಹ'.[18] ಒಂದು ಸಂಗ್ರಹಿತ ಮರು ಮುದ್ರಣವೆಂದು ಕರೆಯಬಹುದು.

---

17. ಪಂಪ ಭಾರತಂ (ಗದ್ಯಾನುವಾದ), (ಅನು) ಎನ್.ಅನಂತ ರಂಗಾಚಾರ್, ಬೆಂಗಳೂರು, 1977. ಪು: 69

18. ಪಂಪ ಭಾರತ ಸಂಗ್ರಹ, (ಸಂ) ಎನ್.ಬಸವರಾಧ್ಯ ಮತ್ತು ಇತರರು, ಬೆಂಗಳೂರು, 1964.

ಸಂಪಾದಕರೇ ಹೇಳಿಕೊಂಡಂತೆ "ಪಂಪನ ಮೂಲ ಉದ್ದೇಶ, ಘನತೆ, ಗೌರವ ಹಾಗೂ ಕಥಾ ಸರಣಿಗೆ ಯಾವ ಕುಂದೂ ಬಾರದಂತೆ ಈ ಸಂಗ್ರಹವನ್ನು ಸಿದ್ಧಪಡಿಸಲಾಗಿದೆ." ಅಲ್ಲಲ್ಲಿ ಕೆಲವು ಮುದ್ರಣ ದೋಷಗಳು ಉಳಿದಿರುವವಾದರೂ ಅವಕ್ಕೆ ಸಂಬಂಧಿಸಿದಂತೆ ಒಪ್ಪೋಲೆಯೊಂದಿರುವುದು ಸಮಾಧಾನದ ಸಂಗತಿ.

ಒಟ್ಟಾರೆಯಾಗಿ ಹೇಳುವುದಾದರೆ, ನಮ್ಮ ಸಂದರ್ಭದಲ್ಲಿ ಮರು ಮುದ್ರಣಗಳು ವಿಫುಲವಾಗಿಲ್ಲವೆಂದು ತೋರುತ್ತದೆ. ಪರಿಷ್ಕಾರ ರೂಪದ ಮರು ಮುದ್ರಣಗಳಂತೂ ವಿರಳ ಅಥವಾ ಇಲ್ಲವೆಂದೇ ಹೇಳಬಹುದು. ಆದರೆ ಮೇಲೆ ಸೂಚಿಸಿದಂಥ ಸ್ವರೂಪದ ವಿಶಿಷ್ಟ ಮರು ಮುದ್ರಣಗಳು ಬರಬೇಕಾಗಿದೆ.

## 2.4 ಆದಿಪುರಾಣದ ಪರಿಷ್ಕರಣಗಳು

ಸಂಖ್ಯಾ ಬಾಹುಳ್ಯದ ದೃಷ್ಟಿಯಿಂದ ಪಂಪ ಭಾರತದ ಹಸ್ತಪ್ರತಿಗಳಿಗೆ ಹೋಲಿಸಿದರೆ ಆದಿಪುರಾಣದ ಹಸ್ತಪ್ರತಿಗಳ ಪ್ರಮಾಣ ಹೆಚ್ಚಾಗಿದೆ. ಅವುಗಳಲ್ಲಿ ಬಹುಪಾಲು ಪ್ರತಿಗಳು ಜೈನ ಮಠಗಳಲ್ಲಿ ದೊರೆತವು. ಕೆಲವು ಮಾತ್ರ ಓರಿಯೆಂಟಲ್ ರಿಸರ್ಚ್ ಇನ್ಸ್‌ಟಿಟ್ಯೂಟ್ ಮೊದಲಾದ ಕಡೆಗಳಲ್ಲಿ ದೊರೆತವು. ಈ ಹಸ್ತಪ್ರತಿಗಳ ಆಧಾರದ ಮೇಲೆ ಇದುವರೆಗೆ ಆದಿಪುರಾಣವನ್ನು ಮೂರು ಸಲ ಪರಿಷ್ಕರಿಸಲಾಗಿದೆ :—

(1) ಎನ್.ಜಿ.ನರಸಿಂಹಾಚಾರ್ಯರ ಪರಿಷ್ಕರಣ (1900)
(2) ಕೆ.ಜಿ.ಕುಂದಣಗಾರ ಮತ್ತು ಎ.ಪಿ.ಚೌಗುಲೆ ಅವರ ಪರಿಷ್ಕರಣ (1953)
(3) ಎಲ್.ಬಸವರಾಜು ಅವರ ಪರಿಷ್ಕರಣ (1976)

### 2.4.1 ಎನ್.ಜಿ.ನರಸಿಂಹಾಚಾರ್ ಅವರ ಪರಿಷ್ಕರಣ

ಆದಿಪುರಾಣವನ್ನು ಮೊತ್ತಮೊದಲಿಗೆ ಪರಿಷ್ಕರಿಸಿ ಪ್ರಕಟಿಸುವ ಪ್ರಯತ್ನ

ಮಾಡಿದವರು ಎಸ್.ಜಿ.ನರಸಿಂಹಾಚಾರ್ಯರು. ಇದಕ್ಕೂ ಮೊದಲು ಪಂಪ ಭಾರತವನ್ನು ಪರಿಷ್ಕರಿಸಿದ ಲೂಯಿ ರೈಸರು ಆದಿಪುರಾಣದ ಪ್ರತಿಯೊಂದನ್ನು ತಮ್ಮ ಬಳಿ ಇರಿಸಿಕೊಂಡಿದ್ದಾಗಿ ತಿಳಿದು ಬರುತ್ತದೆಯಾದರೂ ಅವರೇನೂ ಅದನ್ನು ಪ್ರಕಟಿಸಲಿಲ್ಲ. ಎಸ್.ಜಿ.ಎನ್. ಅವರ ಪರಿಷ್ಕರಣ ಕ್ರಿ.ಶ. 1900 ರಲ್ಲಿ ಗೌರ್ನಮೆಂಟ್ ಓರಿಯೆಂಟಲ್ ಲೈಬ್ರರಿ ಸೀರೀಸಿನಲ್ಲಿ ಪ್ರಕಟವಾಯಿತು. ಈ ಪರಿಷ್ಕರಣಕ್ಕೆ ಎಸ್.ಜಿ.ಎನ್. ಒಟ್ಟು ನಾಲ್ಕು ಹಸ್ತಪ್ರತಿಗಳನ್ನು ಬಳಸಿದ್ದಾರೆ. ಅವುಗಳಲ್ಲಿ ಎರಡು ಶ್ರವಣ ಬೆಳಗೊಳದ ಜೈನ ಮಠದವೆಂದೂ, ಉಳಿದೆರಡು ಓರಿಯೆಂಟಲ್ ಲೈಬ್ರರಿಯವೆಂದೂ (ಅವು ಈಗ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿವೆ)[19] ಹೇಳಿಕೊಂಡಿದ್ದಾರೆ. ಅವರೇ ಹೇಳಿರುವಂತೆ ಈ ಪರಿಷ್ಕರಣಕ್ಕೆ ಶ್ರವಣ ಬೆಳಗೊಳದ ಜೈನ ಮಠದ ಎರಡು ಪ್ರತಿಗಳಲ್ಲಿ ಒಂದನ್ನು ಮಾತ್ರ ಪ್ರಮಾಣಿತ ಆಧಾರವಾಗಿಯೂ ಉಳಿದುವನ್ನು ಆ ಪ್ರತಿಯಲ್ಲಿ ಎಲ್ಲೆಲ್ಲಿ ಸಂದಿಗ್ಧಗಳು ತೋರಿಬಂದವೋ ಅಲ್ಲಿ ಮಾತ್ರ ಹೋಲಿಸಿ ನೋಡಿ ಉತ್ತಮ ಪಾಠವನ್ನು ಸ್ವೀಕರಿಸಿದ್ದಾರೆ.[20]

ಎಸ್.ಜಿ.ಎನ್. ತಮ್ಮ ಕಾಲಕ್ಕೆ ಲಭ್ಯವಿದ್ದ ಸಾಧನ ಸಾಮಗ್ರಿಗಳನ್ನಾಧರಿಸಿ ಇದ್ದುದರಲ್ಲಿ ತೃಪ್ತಿಕರವಾದ ಪರಿಷ್ಕರಣವನ್ನು ಸಿದ್ಧಪಡಿಸಿದ್ದಾರೆ. ಇಂದು ನಮಗೆ ಆ ಪರಿಷ್ಕರಣದ ಕುರಿತಾದ ಅನೇಕ ಪ್ರಶ್ನೆಗಳು ಏಳಬಹುದು. ಆದರೆ ಆ ಪರಿಷ್ಕರಣದ ಮಿತಿಗಳು ದೊಡ್ಡವೆಂದು ಪರಿಗಣಿಸಬೇಕಾಗಿಲ್ಲ. ಆಗಿನ ಕಾಲಕ್ಕೆ ಅದು ಮಹತ್ಕಾರ್ಯ

---

19. ಬಸವರಾಜು ಎಲ್., (ಸಂ) ಆದಿಪುರಾಣ, ಮೈಸೂರು, 1976, ಪು: vii (ಅರಿಕೆ)

20. ಎಸ್.ಜಿ.ಎನ್. ಸಂಪಾದಿಸಿದ ಆದಿಪುರಾಣದ (Government Oriental Library Series, ಮೈಸೂರು, 1900)
ಇಂಗ್ಲಿಷ್ ಮುನ್ನುಡಿ : "The Text of this edition is mainly based on one of the Palm Leaf Manuscripts belonging to Jaina Mutt. And it is where the reading of the MS was upperently incorrect that a better reading found in any one of the other MSS. has been inserted in its place. All impt. varients are given as foot notes. P: iv.

ವೆನ್ನುವಷ್ಟು ಪ್ರಯತ್ನವನ್ನು ಅವರು ಮಾಡಿದ್ದಾರೆ. ಪರಿಮಿತ ಸಾಮಗ್ರಿಯನ್ನಾಧರಿಸಿ ಮೊತ್ತಮೊದಲ ಪರಿಷ್ಕರಣವನ್ನು ಹೊರತಂದುದು ಅವರ ಸಾಧನೆ.

ಎಸ್.ಜಿ.ಎಸ್. ಪರಿಷ್ಕರಣಕ್ಕೆ ಸಂಬಂಧಿಸಿದ ಕೆಲವಂಶಗಳನ್ನು ಈ ಕೆಳಗಿನಂತೆ ಗುರುತಿಸಬಹುದು :—

(1) ಕಂದ, ವಚನ, ವೃತ್ತ — ಇತ್ಯಾದಿಗಳನ್ನು ಸ್ಪಷ್ಟವಾಗಿ ಕೊಡಲಾಗಿದೆ. ಪದಗಳ ನಡುವೆ ಬಿಡುವು ಇಲ್ಲದಂತೆ, ಒಂದಕ್ಕೊಂದು ಕೋದುಕೊಂಡಂತೆ ಕಾಣುವ ಆ ಕಾಲದ ಪರಿಷ್ಕರಣಗಳ ಒಂದು ಸಾಮಾನ್ಯ ಪರಿಪಾಟಿಗೆ ಈ ಪರಿಷ್ಕರಣ ಒಂದು ಅಪವಾದವಾಗಿದೆ.

(2) ವಿರಳವಾಗಿ ಅಲ್ಲಲ್ಲಿ ಒಂದೊಂದು ಪಾಠಾಂತರಗಳನ್ನು ನೀಡಲಾಗಿದೆ. ಮೇಲೆ ಸೂಚಿಸಿದಂತೆ ಅವರು ಮೂಲವಾಗಿರಿಸಿಕೊಂಡ ಶ್ರವಣ ಬೆಳಗೊಳದ ಒಂದು ಪ್ರತಿಯಲ್ಲಿ ಎಲ್ಲೆಲ್ಲಿ ಅಸಮಂಜಸವೆನ್ನಿಸಿತೋ ಅಲ್ಲಿ ಮಾತ್ರ ಇತರ ಪ್ರತಿಗಳಲ್ಲಿ ಉತ್ತಮವೆಂದು ಕಂಡು ಬಂದ ಪಾಠವನ್ನು ನೀಡಿರುವುದಾಗಿ ಅವರೇ ಸೂಚಿಸಿದ್ದಾರೆ. ಆದರೆ ಉಳಿದೆಡೆಗಳಲ್ಲೂ ಇರುವ ಭಿನ್ನ ಪಾಠಗಳನ್ನು ತೋರಿಸುವುದರಿಂದ ಹೆಚ್ಚು ಪ್ರಯೋಜನವಾಗುತ್ತಿತ್ತು.

(3) ಸಂದಿಗ್ಧವೆಂದು ತೋರಿದ ಕಡೆಗಳಲ್ಲಿ ಇತರ ಪ್ರತಿಗಳಲ್ಲಿ ಉತ್ತಮವೆಂದು ತೋರಿದ ಪಾಠವನ್ನು ಸ್ವೀಕರಿಸಿದ್ದಾರೆಯೇ ಹೊರತು ಎಲ್ಲಿಯೂ ಊಹಾತ್ಮಕ ಪಾಠಗಳನ್ನು ಕೊಟ್ಟಂತೆ ತೋರದು.

(4) ತಾವೇ ಬರೆದ ಇಂಗ್ಲಿಷ್ ಮುನ್ನುಡಿಯಲ್ಲಿ ಪಂಪ ಕವಿಯ ಕಾವ್ಯಗಳ ಬಗ್ಗೆ, ಅವನ ಕಾವ್ಯಕೌಶಲದ ಬಗ್ಗೆ, ಅವನ ನಂತರದ ಕವಿಗಳು ಅವನನ್ನು ಪರಿಭಾವಿಸಿದ ಬಗ್ಗೆ ಕೆಲವು ವಿವರಗಳನ್ನು ನೀಡಿರುವರಲ್ಲದೆ, ಆ ಕೃತಿಯ ಪರಿಷ್ಕರಣದಲ್ಲಿ ಉಪಯೋಗಿಸಲಾದ ಪ್ರತಿಗಳ ಬಗ್ಗೆ ಹೇಳಲಾಗಿದೆ.

(5) 'ಪಂಪ ಕವಿ ಚರಿತಂ' ಎಂಬ ಭಾಗದಲ್ಲಿ ಪಂಪನಿಗೆ ಸಂಬಂಧಿಸಿದ ಇತಿವೃತ್ತದ ವಿವರಗಳು, ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ — ಈ ಎರಡೂ ಕೃತಿಗಳಲ್ಲಿ ಸಂಸ್ಕೃತದ ಶ್ರೀಹರ್ಷ, ಭಾರವಿ, ಬಾಣ ಮೊದಲಾದ ಕವಿಗಳಿಂದ ಅನೇಕ ಭಾವಗಳನ್ನು ತೆಗೆದುಕೊಂಡು ಕನ್ನಡಿಸಿರುವುದರ ನಿದರ್ಶನಗಳನ್ನು ನೀಡಿರುವುದು ಉಪಯುಕ್ತವಾಗಿದೆ. ಜೊತೆಗೆ ಇಡೀ ಆದಿಪುರಾಣದ ಕಥಾ ಸಾರಾಂಶವನ್ನು ಅನುಕ್ರಮವಾಗಿ ಕೊಡಲಾಗಿದೆ.

ಈ ಕೆಲವು ಮುಖ್ಯಾಂಶಗಳು ಎಸ.ಜಿ.ಎನ. ಆದಿಪುರಾಣದ ಪರಿಷ್ಕರಣಕ್ಕೆ ಅನುಸರಿಸಿದ ಪಾಠ ಪರಿಷ್ಕರಣದ ಕೆಲವು ವಿಧಾನಗಳು ಕೂಡ ಆಗಿವೆ. ಇನ್ನೂ ಹೆಚ್ಚಿನ ಪಾಠ ಭೇದಗಳನ್ನು ತೋರಿಸಲು, ಪದ್ಯಗಳ ಅಕಾರಾದಿಯೊಂದನ್ನು ಸಿದ್ಧಪಡಿಸಲು, ಕಠಿಣ ಪದಗಳ ನಿಘಂಟೊಂದನ್ನು ನೀಡುವ ಸಾಧ್ಯತೆಗಳಿದ್ದವು, ಮತ್ತು ಅವು ಅಗತ್ಯ ಕೂಡ. ಇವುಗಳಿಲ್ಲದೆ ಆ ಪರಿಷ್ಕರಣದ ಪೂರ್ಣ ಪ್ರಮಾಣದ ಉಪಯೋಗ ಸಾಧ್ಯವಾಗದೆಂದು ಹೇಳಿದರೆ ತಪ್ಪಾಗಲಾರದು. ಹಾಗೆ ನೋಡಿದರೆ ಪಾಠ ಪರಿಷ್ಕರಣದ ಎಲ್ಲ ನೆರೆಗಳಲ್ಲೂ ಎಸ.ಜಿ.ಎನ. ಕಟ್ಟುನಿಟ್ಟಾಗಿದ್ದರೆಂದೇನೂ ಹೇಳಲಾಗದು. ಆದರೆ ಅವರು ಮಾಡಿದ್ದು ಮೊದಲ ಪ್ರಯತ್ನ ಎಂಬುದನ್ನು, ಅವರಿಗಿದ್ದ ಸಾಮಗ್ರಿ ಮಿತಿಯನ್ನು ಮರೆಯುವಂತಿಲ್ಲ.

## 2.4.2 ಕೆ.ಜಿ.ಕುಂದಣಗಾರ ಮತ್ತು ಎ.ಪಿ.ಚೌಗುಲೆ ಪರಿಷ್ಕರಣ

ಕ್ರಿ.ಶ. 1953 ರಲ್ಲಿ ಕೆ.ಜಿ.ಕುಂದಣಗಾರ ಮತ್ತು ಎ.ಪಿ.ಚೌಗುಲೆ — ಇವರಿಬ್ಬರೂ ಸೇರಿ ಆದಿಪುರಾಣದ ಎರಡನೆಯ ಪರಿಷ್ಕರಣವನ್ನು ಹೊರತಂದರು. ಈ ಪರಿಷ್ಕರಣದ ಉದ್ದೇಶವನ್ನು ಕುರಿತು ಸಂಪಾದಕರು ಮುಖ್ಯವಾಗಿ ಎರಡು ಅಂಶಗಳನ್ನು ಪ್ರಸ್ತಾಪಿಸಿದ್ದಾರೆ: ಒಂದು, ಅದುವರೆಗೆ ಪ್ರಚುರವಿದ್ದ ಎಸ.ಜಿ.ಎನ. ಅವರ ಪರಿಷ್ಕರಣದ ಎಲ್ಲ ಪ್ರತಿಗಳೂ ದುರ್ಲಭವಾದದ್ದು; ಮತ್ತೊಂದು ಜಿನಸೇನಾಚಾರ್ಯರ ಪೂರ್ವ ಪುರಾಣವನ್ನು ಹೋಲಿಸಿದಾಗ ಅದರೊಳಗಿನ ಪದ್ಯಗಳು, ಉಪಮೆಗಳು, ಕೂಡು ನುಡಿಗಳು, ಗಾದೆಗಳು ಇತ್ಯಾದಿಗಳನ್ನು ಪಂಪನು ಹೇರಳವಾಗಿ ಬಳಸಿರುವನೆಂದು

ಕಂಡುಬಂದದ್ದು. ತಮ್ಮ ಪರಿಷ್ಕರಣದ ಉದ್ದೇಶವನ್ನು ಕುರಿತು ಸಂಪಾದಕರು ಹೇಳಿರುವ ಮೊದಲನೆಯ ಅಂಶ ತೀರ ವಿಚಿತ್ರದ್ದಾಗಿದೆ. ಏಕೆಂದರೆ ಎಸ್.ಜಿ.ಎನ್. ಪರಿಷ್ಕರಣದ ಪ್ರತಿಗಳು ದುರ್ಲಭವಾಗಿದ್ದುವೆಂದಾದರೆ ಪ್ರತಿಗಳ ಅಗತ್ಯವನ್ನು ಪೂರೈಸಲು ಅದರ ಮರು ಮುದ್ರಣವಷ್ಟೇ ಸಾಕಾಗಿತ್ತು. ಎರಡನೆಯ ಅಂಶ ಕೂಡ ಅಷ್ಟೇನೂ ಮಹತ್ವದ ಅಂಶವಲ್ಲವಾದರೂ ಈ ಪರಿಷ್ಕರಣದ ಉದ್ದೇಶವನ್ನು ಹೇಳುತ್ತದೆಯೆಂಬುದನ್ನು ಒಪ್ಪಬೇಕು. ಪೂರ್ವ ಪುರಾಣ ಮತ್ತು ಆದಿಪುರಾಣದಲ್ಲಿರುವ ಸಾಮಾನ್ಯಾಂಶಗಳಲ್ಲಿ ಕೆಲವನ್ನು — ಪದ್ಯಗಳು, ಉಪಮೆಗಳು ಇತ್ಯಾದಿ — ಉಪೋದ್ಘಾತದಲ್ಲಿ ಉದಾಹರಿಸಿರುವರಲ್ಲದೆ ಕೆಲವೊಂದು ದೋಷಗಳನ್ನು ತಿದ್ದುವಲ್ಲಿ ಅದರಿಂದ ಸಹಾಯವನ್ನು ಪಡೆದಿದ್ದಾರೆ. ಅಲ್ಲಲ್ಲಿ ಅಂತೂ ಮೂಲಗಳನ್ನು ಕೂಡ ಸೂಚಿಸಲಾಗಿದೆ.

ಈ ಪರಿಷ್ಕರಣವನ್ನು ಮೂರು ಪ್ರತಿಗಳ ಸಹಾಯದಿಂದ ಸಿದ್ಧಪಡಿಸಿದ್ದು ಅವುಗಳಲ್ಲೊಂದು ಎಸ್.ಜಿ.ಎನ್. ಅವರ ಪರಿಷ್ಕರಣವಾಗಿದೆ.[21] ಎಲ್.ಬಸವರಾಜು ಅವರು ಈ ಬಗ್ಗೆ ಪ್ರಸ್ತಾಪಿಸುತ್ತಾ ಕುಂದಣಗಾರರು ಉಪಯೋಗಿಸಿಕೊಂಡಿರುವ ಮೂಡುಬಿದರೆಯ ಎರಡು ಪ್ರತಿಗಳಲ್ಲಿ ಯಾವುದಾದರೊಂದನ್ನು ತಮ್ಮ ಪರಿಷ್ಕರಣಕ್ಕೆ ಮೂಲವಾಗಿರಿಸಿ ಕೊಳ್ಳದೆ, ಎಸ್.ಜಿ.ಎನ್. ಅವರ ಸಂಪಾದಿತ ಪಾಠವನ್ನೇ ಮೂಲವಾಗಿಟ್ಟು ಕೊಂಡಿರುವುದನ್ನು ಗ್ರಂಥಸಂಪಾದನಾ ಕಾರ್ಯದಲ್ಲಿ ಮಾಡಬಾರದ ಮಹಾಪರಾಧವೆಂದು ಕರೆದಿದ್ದಾರೆ. ಬಹುಶಃ ಹೀಗೆ ಮಾಡಿದ್ದರಿಂದಾಗಿ ಎಸ್.ಜಿ.ಎಸ್. ಅವರ ಪರಿಷ್ಕರಣಕ್ಕೆ ಒಂದು ಹಸ್ತಪ್ರತಿಯ ಬೆಲೆಯನ್ನಷ್ಟೆ ಕೊಟ್ಟಂತಾಯಿತು. ಅಲ್ಲದೆ ತಮ್ಮ ಪರಿಷ್ಕರಣಕ್ಕೆ ಮೂಲವಾಗಬಲ್ಲ ಹಸ್ತಪ್ರತಿಯೊಂದನ್ನು ಅವರು ದೊರಕಿಸಿಕೊಂಡಿಲ್ಲ. ಹೀಗಾಗಿ ಈ ಪರಿಷ್ಕರಣವನ್ನು ಕುರಿತು ಎಲ್.ಬಸವರಾಜು ಅವರು "ತಮ್ಮ ಪರಿಷ್ಕರಣಕ್ಕೆ ಮೂಲವಾಗಬಲ್ಲ ಹಸ್ತಪ್ರತಿಯೊಂದನ್ನು ದೊರಕಿಸಿಕೊಳ್ಳದೆ ಪರಿಷ್ಕರಣಕ್ಕೆ ಕೈ ಹಾಕಬಾರದಿತ್ತು" ಎಂಬ ಮಾತಿನಲ್ಲಿ ಬರಿಯ ಆರೋಪದ ದನಿಯನ್ನು ಮಾತ್ರ ಹುಡುಕಬೇಕಾಗಿಲ್ಲ.

---

21. ನೋಡಿ : ಕೆ.ಜಿ.ಕುಂದಣಗಾರ ಮತ್ತು ಎ.ಪಿ.ಚೌಗುಲೆಯವರು ಸಂಪಾದಿಸಿದ ಆದಿಪುರಾಣ (ಬೆಳಗಾವಿ, 1953)ದ ಉಪೋದ್ಘಾತ. ಪು: 2.

ಉಳಿದಂತೆ ಎಸ್.ಜಿ.ಎನ್. ಅವರ ಪರಿಷ್ಕರಣಕ್ಕೆ ಅನ್ವಯವಾಗುವ ಮಾತುಗಳನ್ನು ಇಲ್ಲಿಗೂ ಹೇಳಬಹುದು. ಅಗತ್ಯ ಬಿದ್ದಲ್ಲಿ ಊಹಾತ್ಮಕ ಪಾಠಗಳನ್ನು ಕಂಸಿನಲ್ಲಿ ನೀಡಲಾಗಿದೆ. ಅಲ್ಲದೆ ಉಪೋದ್ಘಾತದಲ್ಲಿ ಬಂದ ವಿವರಗಳು, ಅನುಬಂಧಗಳಲ್ಲಿ ನೀಡಿರುವ ನಾಮಕೋಶ, ಜೈನ ಪಾರಿಭಾಷಿಕಗಳ ಕೋಶ, ಕಠಿಣ ಶಬ್ದಕೋಶ, ಪದ್ಯಾನುಕ್ರಮಣಿಕೆ ಇತ್ಯಾದಿಗಳು ಗ್ರಂಥದ ಉಪಯೋಗವನ್ನು ಹೆಚ್ಚಿಸಿವೆ ಎಂಬ ವಿಷಯದಲ್ಲಿ ಅನುಮಾನವಿಲ್ಲ.

### 2.4.3 ಎಲ್.ಬಸವರಾಜು ಅವರ ಪರಿಷ್ಕರಣ

ಆದಿಪುರಾಣದ ಮೂರನೆಯ ಪರಿಷ್ಕರಣವಿದು. ಬಸವರಾಜು ಅವರ ಈ ಪರಿಷ್ಕರಣಕ್ಕೆ ಒಂದು ಮಹತ್ವದ ಸ್ಥಾನವಿದೆ. 1976 ರಲ್ಲಿ ಪ್ರಕಟವಾದ ಈ ಪರಿಷ್ಕರಣ, ಅವರೆಗಿನ ಎರಡೂ ಪರಿಷ್ಕರಣಗಳಿಗಿಂತ ವಿಭಿನ್ನವಾದ ಮತ್ತು ಅದಕ್ಕಿಂತ ಹೆಚ್ಚಾಗಿ ಈ ದಿಸೆಯಲ್ಲಿ ಅದುವರೆಗೆ ನಡೆದ ಕಾರ್ಯದ ಮುಂದುವರಿಕೆಯಾಗಿದೆ. ಈ ಮೂರನೆಯ ಪರಿಷ್ಕರಣದ ಅಗತ್ಯ ಬಸವರಾಜು ಅವರಿಗೆ ಕಂಡುಬಂದದ್ದು, ಕೆ.ಜಿ.ಕುಂದಣಗಾರರು ಹೇಳಿಕೊಂಡಂತೆ ಆದಿಪುರಾಣದ ಪ್ರತಿಗಳು ದುರ್ಲಭವಾದುದಲ್ಲ. ಬದಲಾಗಿ ತಮ್ಮ ಪರಿಷ್ಕರಣಕ್ಕೆ ಬೇರೆಯದೇ ಆದ ಅಗತ್ಯ ಮತ್ತು ಉದ್ದೇಶಗಳಿದ್ದುದನ್ನು ಹೇಳಿಕೊಂಡಿದ್ದಾರೆ. ಮೊದಲನೆಯದಾಗಿ, ಮೊದಲ ಪರಿಷ್ಕರಣದಲ್ಲಿ (ಎಸ್.ಜಿ.ಎನ್.) ಕುಂದುಕೊರತೆಗಳಿದ್ದುದು; ಮತ್ತು ಎರಡನೆಯ ಪರಿಷ್ಕರಣದಲ್ಲಿ ಆದ ಅಸಾಂಗತ್ಯಗಳು. ಈ ಕುರಿತು ಅವರು ಹೇಳುವ ಮಾತುಗಳು ಗಮನಾರ್ಹವಾಗಿವೆ: "ಎಸ್.ಜಿ.ಎನ್.ರ ಪರಿಷ್ಕರಣದಲ್ಲಿ .......... ನ್ಯೂನಾತಿರೇಕಗಳಿವೆಯಾದರೂ 1900 ರಷ್ಟು ಹಿಂದಿನ ಕಾಲದಲ್ಲಿ ಸಾಕಷ್ಟು ಪ್ರತಿಗಳ ಮಾಹಿತಿಯೂ ಇಲ್ಲದೆ, ಇದ್ದವುಗಳನ್ನು ಬಳಸಿಕೊಳ್ಳಲು ಬೇಕಾದ ನಿಷ್ಕೃಷ್ಟ ಶಾಸ್ತ್ರೀಯ ವಿಧಾನಗಳೂ ಪ್ರಚುರವಾಗದೇ ಇದ್ದುದರಿಂದ ಅವು ಕ್ಷಮ್ಯ" ಎಂದು ಹೇಳುವ ಅವರಿಗೆ "ಗ್ರಂಥ ಸಂಪಾದನಾ ಶಾಸ್ತ್ರವು ಭಾರತದಲ್ಲಿ ಪ್ರಚಲಿತವಾಗಿದ್ದ 1953 ರಷ್ಟು ಇತ್ತೀಚಿನ ಕಾಲದಲ್ಲಿ ಪರಿಷ್ಕರಣ ಕಾರ್ಯವನ್ನು

ಕೈಗೆತ್ತಿಕೊಂಡ ಕುಂದಣಗಾರರು — ಮೂಡುಬಿದರೆಯಲ್ಲಿ, ಶ್ರವಣ ಬೆಳಗೊಳದಲ್ಲಿ ಕಾರ್ಕಳದಲ್ಲಿ — ಅಷ್ಟೇ ಏಕೆ ಬಸದಿ ಬಸದಿಗಳಲ್ಲಿದ್ದ ಆದಿಪುರಾಣದ ಪ್ರತಿಗಳನ್ನು ಪರೀಕ್ಷಿಸದೆ — ಅವುಗಳೊಳಗಿಂದ ಮೂಲವಾಗಿಟ್ಟುಕೊಳ್ಳಲು ಒಂದು ಪ್ರತಿಯನ್ನಾದರೂ ನಿರ್ಧರಿಸಿಕೊಳ್ಳಲಾರದೇ ಹೋದುದು ತರವಲ್ಲ." ಅದಲ್ಲದೆ, ಕುಂದಣಗಾರರು ದೊರಕಿಸಿಕೊಂಡಿದ್ದ ಮೂಡುಬಿದರೆಯ ಎರಡು ಪ್ರತಿಗಳಲ್ಲಿ (ಇವು ಎಸ್.ಜಿ.ನ. ಅವರು ಬಳಸಿದವುಗಳಲ್ಲ) ಯಾವುದೊಂದನ್ನೂ ತಮ್ಮ ಪರಿಷ್ಕರಣಕ್ಕೆ ಮೂಲವಾಗಿರಿಸಿಕೊಳ್ಳದೆ ಎಸ್.ಜಿ.ನ. ಸಂಪಾದಿಸಿದ ಪಾಠವನ್ನೇ ಮೂಲವಾಗಿ ಇರಿಸಿಕೊಂಡುದು; ಗ್ರಂಥದ ಕೆಲವು ಮೂಲ ಪಾಠಗಳನ್ನು ಸ್ವಚ್ಛಂದವಾಗಿ ಅನಾವಶ್ಯಕವೆಂದು ಕೈ ಬಿಟ್ಟುದು; ಮತ್ತು ಬಳಸಿಕೊಂಡ ಪ್ರತಿಗಳಲ್ಲಿ ಇವು ಇತ್ತೀಚಿನ ಕಾಲದವು, ಇವು ಪ್ರಾಚೀನ ಕಾಲದವೆಂದು ನಿಗದಿಪಡಿಸಿಕೊಳ್ಳಲಾಗದೆ — ಸಿಕ್ಕಿದ ಪ್ರತಿಗಳಲ್ಲಿ ಸೇರ್ಪಡೆಯಾಗಿರುವ ಪ್ರಕ್ಷಿಪ್ತ ಭಾಗಗಳನ್ನೂ ಪಾಠವಾಗಿ ಸ್ವೀಕರಿಸಿರುವುದು ಇತ್ಯಾದಿಗಳನ್ನು ಕುರಿತು ಪ್ರಸ್ತಾಪಿಸಿ ಕುಂದಣಗಾರರು ಗ್ರಂಥ ಸಂಪಾದನಾ ಶಾಸ್ತ್ರದಲ್ಲಿ ಮಾಡಬಾರದ ಮಹಾಪರಾಧಗಳನ್ನು ಮಾಡಿದ್ದಾರೆ ಎಂದಿದ್ದಾರೆ.[22] ಇಂಥ ಅಸಾಂಗತ್ಯಗಳನ್ನು ಸರಿಪಡಿಸಬೇಕಾದ ಕೆಲಸ ಈ ಪರಿಷ್ಕರಣಕಾರರಿಗೆ "ಅವಶ್ಯಕವೂ ತುರ್ತಿನದೂ" ಆಗಿ ಕಂಡದ್ದು ಸಹಜವೇ ಆಗಿದೆ.

ಇಂಥ ಉದ್ದೇಶದ ಫಲವಾಗಿ ಬಂದ ಈ ಪರಿಷ್ಕರಣದಲ್ಲಿ ಅತ್ಯಂತ ಶಾಸ್ತ್ರೀಯವಾದ ಸಂಪಾದನಾ ಶಾಸ್ತ್ರದ ಕ್ರಮಗಳನ್ನು ಅನುಸರಿಸಲಾಗಿದೆ. ಜೊತೆಗೆ ಈ ಹಿಂದಿನ ಪರಿಷ್ಕರಣಗಳಿಗೆ ಹೋಲಿಸಿದರೆ ಇದೊಂದು ಹೊಸ ಬಗೆಯ ಪರಿಷ್ಕರಣ. ಈ ಪರಿಷ್ಕರಣಕ್ಕಾಗಿ ಪರಿಷ್ಕರಣಕಾರರು ಈ ಹಿಂದಿನ ಸಂಪಾದನೆಗಳಲ್ಲಿ ಬಳಸಲಾಗಿದ್ದ ಹಸ್ತಪ್ರತಿಗಳನ್ನಲ್ಲದೆ, ಸ್ವತಃ ತಾವೇ ಹತ್ತು ಪ್ರತಿಗಳನ್ನು ಹೊಸದಾಗಿ ಕಲೆ ಹಾಕಿದ್ದಾರೆ. ಇದರಿಂದಾಗಿ ಪಾಠ ಪರಿಷ್ಕರಣಕ್ಕೆ ಸಾಮಗ್ರಿ ಬಾಹುಳ್ಯ ದೊರಕಿದಂತಾಯಿತು. ಇದಲ್ಲದೆ, ಆದಿಪುರಾಣದ ಉದ್ಧರಣೆಗಳುಳ್ಳ ಶಬ್ದಮಣಿ ದರ್ಪಣ, ಕಾವ್ಯಾವಲೋಕನ, ರಸರತ್ನಾಕರ, ಕಾವ್ಯಸಾರ, ಸೂಕ್ತಿ ಸುಧಾರ್ಣವ ಮೊದಲಾದ ಗ್ರಂಥಗಳಲ್ಲಿರುವಂಥ ಪಾಠಗಳನ್ನೂ ಗಮನದಲ್ಲಿರಿಸಿಕೊಳ್ಳಲಾಗಿದೆ.

---

22. ಆದಿಪುರಾಣ (ಸಂ) ಎಲ್.ಬಸವರಾಜು, ಪು: viii (ಅರಿಕೆ)

ಈ ಪರಿಷ್ಕರಣಕ್ಕೆ ಸಂಬಂಧಿಸಿದ ಕೆಲವು ಮುಖ್ಯ ರೂಪರೇಷೆಗಳನ್ನು ಈ ಕೆಳಗಿನಂತೆ ಸೂಚಿಸಬಹುದು :—

(1) ಸಂಖ್ಯಾ ದೃಷ್ಟಿಯಿಂದ ಹಿಂದಿನ ಎರಡೂ ಪರಿಷ್ಕರಣಗಳಲ್ಲಿ ಬಳಸಲಾದ ಪ್ರತಿಗಳಿಗಿಂತ ಹೆಚ್ಚು ಪ್ರತಿಗಳನ್ನು ಕಲೆ ಹಾಕಲಾಗಿದೆ. ಮೇಲೆ ಸೂಚಿಸಿದಂತೆ, ಹಿಂದಿನ ಸಂಪಾದನೆಗಳಲ್ಲಿ ಗಮನಿಸಿದ ಪ್ರತಿಗಳಲ್ಲದೆ (ಎಸ್.ಜಿ.ನ. ನಾಲ್ಕು; ಕುಂದಣಗಾರ ಎರಡು) ಹತ್ತು ಪ್ರತಿಗಳನ್ನು ಹೊಸದಾಗಿ ಗಮನಿಸಲಾಗಿದೆ. ಕಾಲದ ದೃಷ್ಟಿಯಿಂದ ಆದಿಪುರಾಣವನ್ನು ಲಿಪಿ ಮಾಡಿದ ಅತ್ಯಂತ ಪ್ರಾಚೀನ ಹಸ್ತಪ್ರತಿಯನ್ನು ಬಳಸಲಾಗಿದೆ. ಕ್ರಿ.ಶ. 1399 ರ ಈ ಪ್ರತಿ ಪಂಪನ ಆದಿಪುರಾಣದ ಪ್ರತಿಗಳಲ್ಲಿ ಪ್ರಾಚೀನವಾದದ್ದು ಮಾತ್ರವಲ್ಲದೆ "ಇಡೀ ಕನ್ನಡ ನಾಡಿನಲ್ಲೇ ಆಗಲಿ, ಹೊರಗಡೆಯೇ ಆಗಲಿ ಇದಕ್ಕಿಂತ ಹಳೆಯದಾದ (ಕಾಲ ಗುರುತಿಸಿದ) ಪ್ರತಿಯೊಂದಿಲ್ಲ" ಎಂಬುದಾಗಿಯೂ ಈ ಪ್ರತಿಯ ಸಾದ್ಯಂತವಾದ ಪಾಠವನ್ನು ಪ್ರಸ್ತುತ ಪರಿಷ್ಕರಣಕ್ಕೆ ಮೂಲವಾಗಿ ಬಳಸಲಾಗಿದೆಯೆಂದೂ ಸಂಪಾದಕರು ಹೇಳಿಕೊಂಡಿದ್ದಾರೆ. ಎಂದರೆ ಈ ಪ್ರತಿಯನ್ನು ಮೊದಲಿಗೆ ಮೂಲ ಪಾಠವಾಗಿ ಬಳಸಲಾಗಿದೆ.

(2) ಈ ಪರಿಷ್ಕರಣದ ಸಂಪಾದಕರು ಇದುವರೆಗೆ (ಪ್ರಸ್ತುತ ಪರಿಷ್ಕರಣವೂ ಸೇರಿದಂತೆ) ಆದಿಪುರಾಣದ ಪರಿಷ್ಕರಣಗಳಲ್ಲಿ ಬಳಸಲಾದ ಹಸ್ತಪ್ರತಿಗಳ ಪೀಳಿಗೆ ಮತ್ತು ಸಂಬಂಧಗಳನ್ನೂ, ಅವುಗಳ ಪ್ರಾಚೀನತೆ ಅರ್ವಾಚೀನತೆಗಳನ್ನೂ ಸ್ಪಷ್ಟವಾಗಿ ಬಿಡಿಸಿಕೊಂಡಿದ್ದಾರೆ.[23] ಕವಿಯ ಸ್ವಹಸ್ತಪ್ರತಿಯ ನಕಲುಗಳು ಚರಿತ್ರೆಯ ಹಾದಿಯಲ್ಲಿ ವಿವಿಧ ಶಾಖೋಪಶಾಖೆಗಳಿಗೆ ಸೇರಿದ್ದು, ಲಭ್ಯವಿರುವ ಪ್ರತಿಗಳ ನಡುವೆ ಇರುವ ಪರಸ್ಪರ ಸಂಬಂಧವನ್ನೂ ಕಾಲವನ್ನೂ ತಿಳಿಯುವುದು ಪಾಠ ಪರಿಷ್ಕರಣಕ್ಕೆ ತೀರ ಅಗತ್ಯ. ಇಂಥ ಪ್ರಯತ್ನವನ್ನು ಆದಿಪುರಾಣದ ಪರಿಷ್ಕರಣಕಾರರಲ್ಲಿ ಎಲ್.ಬಸವರಾಜು ಅವರು ಮೊತ್ತಮೊದಲಿಗೆ ಮಾಡಿದ್ದಾರೆ.

---

23. ಆದಿಪುರಾಣ (ಸಂ) ಎಲ್.ಬಸವರಾಜು, ಪು: xiii.

(3) ಮೂಲ ಪಾಠ ದೃಷ್ಟಿಯಿಂದ ವಿಶ್ವಾಸಾರ್ಹ ಪ್ರತಿಯೊಂದು ದೊರೆತುದರಿಂದಾಗಿ, ಅನೇಕ ಸಮಸ್ಯೆಗಳನ್ನು ಬಿಡಿಸಿಕೊಳ್ಳಲು ಸಾಧ್ಯವಾದುದರ ಜೊತೆಗೆ ಹಲವು ಪ್ರಕ್ಷಿಪ್ತ ಭಾಗಗಳನ್ನು ಪತ್ತೆ ಹಚ್ಚಿ ಕೈ ಬಿಡುವುದು ಸಾಧ್ಯವಾಗಿದೆ. ಉದಾ :— ಪ್ರಥಮಾಶ್ವಾಸದ 23 ನೆಯ ಪದ್ಯವಾಗಿ ಎಸ್.ಜಿ.ನ. ಮತ್ತು ಕುಂದಣಗಾರರ ಪರಿಷ್ಕರಣಗಳಲ್ಲಿ ಈ ಕೆಳಗಿನ ಪದ್ಯವನ್ನು ಕೊಡಲಾಗಿದೆ :—

"ಕೋಗಿಲೆಯ ಸರವರಣ್ಯದೊ
ಳೇಗೆಯ್ವುದೊ ಮೂರ್ಖ ಜಡ ಜನಾರಣ್ಯದೊಳಿಂ
ಪೋಗಡಿಸದ ಕವಿ ಶಬ್ದವು
ದೇಗೆಯ್ಯುಂದರಣ್ಯ ರುದಿತಮದು ಬಗೆವಾಗಳ್"

ಎಸ್.ಜಿ.ಎನ್. ಅವರು ಈ ಪದ್ಯವು ತಾವು ನೋಡಿದ 'ಖ', 'ಗ', ಪ್ರತಿಗಳಲ್ಲಿರಲಿಲ್ಲವೆಂದು ಸೂಚಿಸಿದ್ದಾರೆ.[24] ಆದರೆ ಅದು ಪ್ರಕ್ಷಿಪ್ತವಿರಬಹುದೆಂದು ಸಂದೇಹಿಸಲಿಲ್ಲ. ಈ ಕುರಿತು ಎಲ್.ಬಸವರಾಜು ಅವರು 1485ರ 'ಓ' (ಅವರು ಗಮನಿಸಿದ ಪ್ರತಿಗಳಲ್ಲೊಂದು) ಪ್ರತಿಯಲ್ಲಿ ಈ ಪದ್ಯ ಸಿಗುವುದಾಗಿಯೂ, ಬಹುಶಃ ಆ ವೇಳೆಗಾಗಲೇ ಈ ಪದ್ಯ ಪ್ರಕ್ಷಿಪ್ತವಾಗಿರಬಹುದೆಂದೂ ಹೇಳಿದ್ದಾರೆ. ಅದೇ ರೀತಿ ಎಸ್.ಜಿ.ಎನ್. ತಾವು ಗಮನಿಸಿದ 'ಗ' ಪ್ರತಿಯಲ್ಲಿ, ಕುಂದಣಗಾರರು 'ಬ' ಪ್ರತಿಯಲ್ಲಿ ಇಲ್ಲವೆಂದು ಹೇಳಿಯೂ ಸ್ವೀಕರಿಸಿದ ಪದ್ಯವೊಂದು ಹೀಗಿದೆ :—

"ಕಲಿದವರ್ಗಳುದ್ದಳೊಡ್ಡವರೇ ಬಿಟ್ಟರೆ ಮೇಣವರಿಂ ಬಳಿಕ್ಕೆ ತಾ
ಮುಳಿವರೆ ಮೇಣದಂತ ಮರಣಂ ತಮಗಂ ಬರ್ದುಕಿಲ್ಲ ಧರ್ಮಮುಂ
ಕಲಿಯಿಸಿಕೊಳ್ವುದೊಂದೆ ಜಡುರಿಂತುಟು ಸಂಸ್ಕೃತಿ ಧರ್ಮಮೇಕೆ ಬಾ
ಯ್ಮುಳಿವುದದೇಕೆ ಚಿಂತಿಸುವುದೇಕೆ ಮಲುಂಬುವುದೇಕೆ ನೋವುದೋ"[25]

---

24. ನೋಡಿ : ಆದಿಪುರಾಣ (ಸಂ) ಎಸ್.ಜಿ.ಎನ್., ಪು : 5
25. ನೋಡಿ : ಆದಿಪುರಾಣ (ಸಂ) ಕುಂದಣಗಾರ ಮತ್ತು ಜಾಗುಲೆ, 3—53

ಈ ಸಂದರ್ಭಕ್ಕೆ ಅಷ್ಟಾಗಿ ಹೊಂದಿಕೆಯಾಗದೆಂಬಂತೆ ತೋರುವ ಈ ಪದ್ಯ ಪಂಪ ಭಾರತದ್ದಾಗಿದ್ದು ಇಲ್ಲಿಗೆ ಹೇಗೋ ಅಧಿಕವಾಗಿ ಬಂದು ಸೇರಿದೆಯೆಂಬುದನ್ನು ಎಲ್.ಬಸವರಾಜು ಅವರು ಗುರುತಿಸಿದ್ದಾರೆ.[26] ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಪಂಪ ಭಾರತದಲ್ಲಿ ಬರುವ ಈ ಪದ್ಯದ ಪಾಠ ಈ ಕೆಳಗಿನಂತಿದೆ :—

"ಕಳಿದವರ್ಗ<u>ಱಿಪ್ಪ</u>ದ <u>ಱೊಪ್ಪ</u>ವರೇ <u>ಱೊಪ್ಪವಂತವರಿಂ</u> ಬಳಿಕ್ಕೆ ತಾ
ಮುಳಿಪೊಡೆ-ಮೇ<u>ಳಿ ರಂತವರಣಂ</u> ತಮಗಂ ಬರ್ದುಕಿಲ್ಲ ಧರ್ಮಮಂ
ಗೆಳಿಯಿಸಿಕೊಳ್ವುದೊಂದೆ ಪದುರಿಂತುಟು ಸಂಸ್ಕೃತಿ ಧರ್ಮಮೇಕೆ
ಬಾಯಳಿವುದೇಕೆ ಪಲುಂಬುವುದೇಕೆ ನೋವುದೋ "[27]

ಅದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಎರಡೂ ಕಡೆ ಬರುವ ಈ ಪದ್ಯವನ್ನು ಗಮನಿಸಿದ ಡಿ.ಎಲ್.ಎನ್. ಅವರು "ಇದು ಪಂಪನಿಗೆ ತುಂಬ ಪ್ರಿಯವಾದ ಪದ್ಯ. ಅವನ ಆದಿಪುರಾಣದಲ್ಲೂ ಇದು ಬರುತ್ತದೆ" ಎಂದಿದ್ದಾರೆ.[28] ಪಂಪ ತನಗೆ ಪ್ರಿಯವಾದ ಭಾವವೊಂದನ್ನು ಹೇಳುವ ಪದ್ಯವನ್ನು ಎರಡೂ ಕಡೆ ಬರೆದಿರಲಾರ. ಎಂದರೆ, ಒಂದು ಕೃತಿಯಲ್ಲಿ ಬಂದ ಒಂದು ಭಾವ, ಅದೇ ಕವಿಯ ಮತ್ತೊಂದು ಕೃತಿಯಲ್ಲಿ ಬರಲಾರದೆಂದಾಗಲಿ, ಬರಬಾರದೆಂದಾಗಲಿ ಈ ಮಾತಿನ ಅರ್ಥವಲ್ಲ; ಬದಲಾಗಿ ಒಂದೇ ಪದ್ಯವನ್ನು ಎರಡು ಕಡೆ ತರುವ ಸಾಧ್ಯತೆಗಳು ವಿರಳವೆಂಬುದು ಮಾತ್ರ ಈ ಮಾತಿನ ಅರ್ಥ. ಹೀಗಾಗಿ ಕಾರಣಾಂತರದಿಂದ ವಿಕ್ರಮಾರ್ಜುನ ವಿಜಯದ ಈ ಪದ್ಯವನ್ನು ಪ್ರತಿಕಾರನೊಬ್ಬ ಅದಿಪುರಾಣಕ್ಕೆ ತಂದಿರುವ ಸಾಧ್ಯತೆಗಳೇ ಹೆಚ್ಚು. ಮೊದಲನೆಯದಾಗಿ ಈ ಪದ್ಯ ಎಲ್.ಬಸವರಾಜು ಅವರು ತಮ್ಮ ಪರಿಷ್ಕರಣಕ್ಕೆ ಮೂಲವಾಗಿರಿಸಿಕೊಂಡಿರುವ 'ಹ' ಪ್ರತಿಯಲ್ಲಿ ಸಿಗುವುದಿಲ್ಲ. ಮತ್ತು ಈ ಹಿಂದೆ ಪ್ರಸ್ತಾಪಿಸಿದ ಅಧಿಕ ಪದ್ಯ ಯಾವ ಪ್ರತಿಗಳಲ್ಲಿ ದೊರೆಯುತ್ತದೋ ಅವೇ ಪ್ರತಿಗಳಲ್ಲಿಯೇ ಈ ಪದ್ಯ ಕೂಡ ಉಕ್ತವಾಗಿರುವುದು. ಎರಡನೆಯದಾಗಿ, ಈ ಅಧಿಕ ಪದ್ಯದ ಎರಡನೆಯ ಪಾದದಲ್ಲಿ

---

26. ನೋಡಿ: ಅದಿಪುರಾಣ (ಸಂ) ಎಲ್.ಬಸವರಾಜು, ಪು: 78—79.
27. ವಿಕ್ರಮಾರ್ಜುನ ವಿಜಯ (ಸಂ) ಬೆಳ್ಳಾವೆ, 2—27.
28. ನರಸಿಂಹಾಚಾರ ಡಿ.ಎಲ್., ಪಂಪ ಭಾರತ ದೀಪಿಕೆ, ಮೈ.ವಿ.ವಿ., 1976 ಪು: 65.

'ತಮಗಂ ಬರ್ದುಕಿಲ್ಲ' ಎಂಬುದನ್ನು ಗಮನಿಸಬೇಕು. ತಮಗೂ ಬಾಳುವೆಯಿಲ್ಲ ಎಂಬರ್ಥದಲ್ಲಿ 'ತಮಗಂ' ಎಂಬುದಕ್ಕೆ ಗೌರವಾರ್ಥದ ಬಹುವಚನ ಸೂಚಕ ಅರ್ಥವಿದೆ. ಪಂಪ ಭಾರತದಲ್ಲಿ ತಪೋವೃದ್ಧರಾದ ಮುನಿಗಳು ಕುಂತಿಗೆ ಸಂತೈಸುವ ಸಂದರ್ಭದಲ್ಲಿ ಈ ಅರ್ಥ ಮತ್ತು ಮಾತುಗಳು ಉಚಿತವಾಗಿ ಪ್ರಯೋಗವಾಗಿವೆ. ಆದಿಪುರಾಣದಲ್ಲೂ ಈ ಸಂತೈಸುವಿಕೆಯ ಸಂದರ್ಭವೇ ಇದೆಯಾದರೂ ಲಲಿತಾಂಗ ತನ್ನ ಪೂರ್ವಜನ್ಮದ ಪುತ್ರನಾದ ಶ್ರೀವರ್ಮನ ಉದ್ವೇಗವನ್ನಾರಿಸುವ ಮಾತಾಗಿ ಈ ಪದ್ಯ ಉಕ್ತವಾಗಿರುವುದು ಗಮನಾರ್ಹವಾದುದು. ಇಲ್ಲಿ 'ತಮಗಂ' ಎಂಬ ಪ್ರಯೋಗ ಉಚಿತವಾಗಿ ಕಾಣುವುದಿಲ್ಲ. ಅಲ್ಲದೆ ಈ ಸಂದರ್ಭದಲ್ಲಿ ಬರುವ ಇತರ ಪದ್ಯಗಳಲ್ಲಿರುವ ಏಕವಚನಾರ್ಥದ ಸಂಬೋಧನೆಗಳೂ ಇದನ್ನು ಸಮರ್ಥಿಸುತ್ತವೆ. ಉದಾ:— "..... ನೀನಾರ್ಗೆ ನಿನ್ನೀ ಪಳಯಿಸುವಿವರಾರ್ಗೇಕೆ ಶೋಕಿಪ್ಪೆಯುಮ್ಮಳ ಮನದೊಳ್ ನೀನಾಮೋರ್ಡಿನ್ನಿ (= ಡಿಂ ನಿ) ನೊನ್ನಡಲನೆ ಜಿನ ದೀಕ್ಷಾಕ್ಷಮಂ ಮಾಡು ಪುತ್ರಾ (3—53);" "..... ನೀಂ ತಡಿಯು ನೆಯುಂತಲ್ಲದಿಂತೀ ಚತುರ .......... ಮತ್ತೆಲ್ಲಿ ನೀನಾರ್ತಪ್ಪೆ" (3—54) ಇತ್ಯಾದಿಗಳನ್ನು ಗಮನಿಸಬಹುದು. ಆದಿಪುರಾಣದಲ್ಲಿ ಈ ಸಂದರ್ಭದಲ್ಲಿ ಬರುವ ಎರಡು—ಮೂರು ಪದ್ಯಗಳ ಭಾವ ವಿಕ್ರಮಾರ್ಜುನ ವಿಜಯದ ಈ ಪದ್ಯದ ಭಾವಕ್ಕೆ ಹತ್ತಿರ ಹತ್ತಿರ ಎನ್ನಿಸುವಂತೆ ಇರುವ ಕಾರಣದಿಂದ ಲಿಪಿಕಾರ ಅದನ್ನು ಇಲ್ಲಿಗೆ ಪ್ರತಿ ಮಾಡಿಕೊಂಡಿರುವ ಸಾಧ್ಯತೆಗಳೇ ಹೆಚ್ಚು. ಹಾಗೆ ಮಾಡಿರಬಹುದಾದ ಪ್ರತಿಕಾರ ಎರಡೂ ಕೃತಿಗಳನ್ನು ಚೆನ್ನಾಗಿ ಓದಿಕೊಂಡವನೆಂಬುದಂತೂ ಸ್ಪಷ್ಟ. ಆ ಪ್ರತಿಯ ನಕಲುಗಳಲ್ಲಿ ಇದು ಸಹಜವಾಗಿಯೇ ಉಳಿದುಬಂದಿರಬೇಕು. ಇಂಥ ಹಲವು ನಿದರ್ಶನಗಳನ್ನು ಈ ಪರಿಷ್ಕರಣವು ಗುರುತಿಸಿದೆ.

(4) ಲಭ್ಯವಿರುವ ಪಾಠಾಂತರಗಳನ್ನೆಲ್ಲ ಅಲ್ಲಲ್ಲಿಯೇ ಅಡಿ ಟಿಪ್ಪಣಿಗಳಲ್ಲಿ ಕೊಡಲಾಗಿದೆ. ಜೊತೆಗೆ ಜಟಿಲವೆಂದು ತೋರಿದ ಕೆಲವು ಪಾಠಗಳನ್ನು ಅಲ್ಲಲ್ಲಿಯೇ ಚರ್ಚಿಸಲಾಗಿದೆ. ಓದುಗನ ದೃಷ್ಟಿಯಿಂದ ಈ ಚರ್ಚೆಗಳ ಉಪಯುಕ್ತತೆಯನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

(5) "ಪ್ರಸ್ತುತ ಪರಿಷ್ಕರಣಕ್ಕೆ ಆ ಸಂಸ್ಕೃತ ಮಹಾಪುರಾಣವನ್ನು ಆದ್ಯಂತವಾಗಿ ತಾಳೆ ನೋಡಿ ಗಮನಾರ್ಹವಾದುದನ್ನು ಗುರುತಿಸುತ್ತ ಬಳಸಿಕೊಳ್ಳಲಾಗಿದೆ" ಎನ್ನುವ (ಅರಿಕೆ ಪು: xi) ಸಂಪಾದಕರು ಈ ಸಂಬಂಧದ ತೌಲನಿಕ ಅಧ್ಯಯನಕ್ಕೆ ತೊಡಗುವವರಿಗೆ ಉಪಯುಕ್ತ ಪೀಠಿಕೆಯೊಂದನ್ನು ಹಾಕಿಕೊಟ್ಟಿದ್ದಾರೆ. ಕಿ.ರಂ. ನಾಗರಾಜ ಅವರೆನ್ನುವಂತೆ "ಪಂಪನ ಆದಿಪುರಾಣ ಮತ್ತು ಜಿನ ಸೇನಾಚಾರ್ಯರ ಪೂರ್ವ ಪುರಾಣಕ್ಕೆ ಸಂಬಂಧಿಸಿದ ತೌಲನಿಕ ಅಧ್ಯಯನದ ವಿವರಗಳು — ಸಂಸ್ಕೃತ ಮತ್ತು ಕನ್ನಡ ಕವಿತೆಯ ಮೂಲಭೂತ ನೆಲೆಗಳ ಸಮಸ್ಯೆಗಳನ್ನು ಒಳಗೊಳ್ಳುವುದನ್ನು ಆದಿಪುರಾಣದ ಸಂಪಾದಕರ ಟಿಪ್ಪಣಿಗಳ ಮೂಲಕ ತಿಳಿಯಬಹುದಾಗಿದೆ. ಈ ತೌಲನಿಕ ಅಧ್ಯಯನವನ್ನು ಕುರಿತ ಬಸವರಾಜು ಅವರ ನಿಲುವುಗಳ ಬಗೆಗೆ ಚರ್ಚೆ ಸಾಧ್ಯವಿದೆ. ಜಿನಸೇನಾಚಾರ್ಯರ ಕಾವ್ಯವನ್ನು ಕುರಿತ ತೌಲನಿಕ ಅಧ್ಯಯನಕ್ಕೆ ಸಂಬಂಧಿಸಿದ ವಿವರಗಳು ಕೃತಿಯ ಉದ್ದಕ್ಕೂ ಹರಡಿಕೊಂಡಿವೆ. ಅವುಗಳು ವಿಭಿನ್ನ ನೆಲೆಗಳನ್ನು ಒಳಗೊಂಡಿವೆ. ಆದರೂ ಜೀವನದ ವಿವರಗಳ ಪ್ರಪಂಚವನ್ನು ಅಭಿವ್ಯಕ್ತಿಸುವಲ್ಲಿ ಪಂಪನ ಧೋರಣೆಗೂ ಜಿನಸೇನರ ಧೋರಣೆಗೂ ಇರುವ ಭಿನ್ನತೆಯನ್ನು ಸ್ಪಷ್ಟವಾಗಿ, ಖಚಿತವಾಗಿ ಅವರು ಗ್ರಹಿಸಿಕೊಂಡಿದ್ದಾರೆ."[29] ಇಂಥವರ ನಿದರ್ಶನವಾಗಿ ಕಿ.ರಂ. ಅವರು ಕೆಲವು ನಿದರ್ಶನಗಳನ್ನು ತೋರಿಸಿದ್ದಾರೆ. ಇಂಥ ಅಸಂಖ್ಯ ನಿದರ್ಶನಗಳಿವೆ. ಕೆಲವನ್ನು ಮಾತ್ರ ಇಲ್ಲಿ ಗಮನಿಸಬಹುದು :—

"ಇಲ್ಲಿಂದ ವಜ್ರಬಾಹು ವೈರಾಗ್ಯ ಹೊಂದಿದನೆಂಬವರೆಗಿನ ವಾರ್ತೆ ಪೂರ್ವ ಪುರಾಣದಲ್ಲಿ ಇರುವುದಾದರೂ, ಅದು ಕಾವ್ಯವಾಗಿರುವುದು ಪಂಪನ ಆದಿಪುರಾಣದಲ್ಲೇ" (4—58 ವಚನದ ಟಿಪ್ಪಣಿ ಪು: 120).

"ಪೂರ್ವ ಪುರಾಣದ ಕೆಲವಂಶಗಳನ್ನು ಸೋಸಿ ಬಿಡುವಲ್ಲಿ, ಉಚಿತವೆನಿಸಿದುದನ್ನು ಹೊಸದಾಗಿ ಸೇರಿಸಿಕೊಳ್ಳುವಲ್ಲಿ — ಪಂಪನು ಹದವನ್ನು ಗುರುತಿಸಿಕೊಳ್ಳುವನು" (4—68ರ ಟಿಪ್ಪಣಿ ಪು: 124).

---

29. ನಾಗರಾಜ ಕಿ.ರಂ., ಕನ್ನಡ ಕಾವ್ಯ ರಚನಾ ಪರಂಪರೆಯ ವಿಶಿಷ್ಟತೆ, ಅಂಕಣ (ಆಲೋಕ) ಸಂಚಿಕೆ 3. ಬೆಂಗಳೂರು, 1979; ಪು: 11—12.

"ಜೀವ ಸ್ತ್ರೀಯಾಗಿರುವವರೆಗೆ ಮೋಕ್ಷವಿಲ್ಲ ಎಂಬ ಪೂರ್ವ ಪುರಾಣದ ಅಭಿಪ್ರಾಯದಲ್ಲಿ ಪಂಪನಿಗೆ ನಂಬಿಕೆಯಿದ್ದರೂ — ಅದನ್ನು ಅವನು ಪೂರ್ವ ಪುರಾಣದಷ್ಟು ವಿಸ್ತಾರವಾಗಿ ಹೇಳದೆ ಸಂಗ್ರಹಿಸಿದ್ದಾನೆ. ಈ ರೀತಿಯ ಸಂಗ್ರಹಣಾ ಕಾರ್ಯದಲ್ಲಿ ಪಂಪನ ಅಸಮ್ಮತಿಯೂ ಅಡಗಿದೆಯೋ ಇಲ್ಲವೋ ಎಂದು ಖಚಿತವಾಗಿ ಹೇಳುವುದು ಕಷ್ಟ" (5–62ರ ಟಿಪ್ಪಣಿ ಪು: 154–155).

ಹೀಗೆ ಹಲವು ನಿದರ್ಶನಗಳನ್ನು ಗುರುತಿಸುತ್ತಾ ಹೋಗಬಹುದು. ವಿಷಯ ಸ್ಪಷ್ಟನೆಗಾಗಿ ಇಷ್ಟು ಸಾಕೆಂದು ತೋರುತ್ತದೆ.

(6) ಇನ್ನು ಈ ಪರಿಷ್ಕರಣದ ಮತ್ತೊಂದು ವಿಶೇಷಾಂಶವೆಂದರೆ, ಪ್ರಶ್ನಾರ್ಥಕ, ಆಶ್ಚರ್ಯ ಸೂಚಕವೇ ಮೊದಲ್ಗೊಂಡು ಅಲ್ಪ ವಿರಾಮ, ಪೂರ್ಣ ವಿರಾಮ ಇತ್ಯಾದಿ ಚಿಹ್ನೆಗಳನ್ನು ಬಳಸುವುದರ ಮೂಲಕ ಮಾಡಿರುವ ಪಾಠದ ವಿಶಿಷ್ಟ ವ್ಯವಸ್ಥೀಕರಣ ಮತ್ತು ಕೆಲವು ಪಾಠಗಳನ್ನು ಕಂಸಿನಲ್ಲಿ ಬಿಡಿಸಿ ತೋರಿಸಿರುವುದು. ಇದರಿಂದ ಕಾವ್ಯದ ಓದಿಗೆ ಒಂದು ವಿಶೇಷ ತರದ ಅಯಾಮವೇ ದೊರೆತಂತಾಗಿದೆ. ಇದು ಇನ್ನಷ್ಟು ವ್ಯಾಪಕವಾಗಿದ್ದರೆ, ಹೆಚ್ಚು ಪ್ರಯೋಜನವಿತ್ತು.

ಉದಾ :—

"ನಿನಗೀ ಷಟ್ಖಂಡ ಮಂಡಲಮೆಱಗಿದುದೇಂ *ಸಾಲದೆ? ಬೇಡ*! ದುರ ವೃ
ತ್ತನೊಳಿನ್ನೇನೆಂದು ದೇವರ *ಕಡೆಗಣಿಸಿದರೆ*! ಸೌಂದರ್ಯಮಂ ಕಾದ ಪೆಂಪೀ
ವನಧಿ ದ್ವೀಪಾಂತರಾಳಕ್ಷಿತಿಯೊಳೆಸೆಗು*ಮಾ (ಮ, ಅ)ಕ್ಷೇ*ಪದಿಂ ಬೇಡ ನೀಂ ಕ್ರೋ
ಧನನಾಗಲ್; ನಿನ್ನ ತಮ್ಮಂ ನಿನಗೆಱಗಿದಂ ನಂಬುರಾಜಾಧಿರಾಜ"

(14–83)

"ಕರಿಣಿಗಣಕರ ಶೀಕರ1ಪರಿಕರದೊಳ*ಮು(=ಮ, ಅ)ಲೆ*ವ ಚಮರರುಹ ಪವನ ಪರಂ
ಪರೆಯೊಳ*ಮಾ(= ಮ, ಅ)*ಱದೆ — ನೃಪ ಸುಂ1ದರೀ ಶ್ರಮಾಂಭಃ
ಕಣಂಗಳುಣ್ಮಿದವಾಗಳ್"

(11–50)

(7) ಪದ್ಯಗಳ ಅಕಾರಾದಿ ಮತ್ತು ಅದಕ್ಕಿಂತ ಹೆಚ್ಚಾಗಿ ಅರ್ಥಕೋಶಗಳು ಗ್ರಂಥದ ಉಪಯೋಗವನ್ನು ಹೆಚ್ಚಿಸಿವೆ.

ಈ ಮೇಲಿನ ವಿವರಗಳಿಂದ ಎಲ್.ಬಸವರಾಜು ಅವರ ಪರಿಷ್ಕರಣದ ಕೆಲವೊಂದು ವಿಶಿಷ್ಟಾಂಶಗಳು ಮನದಟ್ಟಾಗುತ್ತದೆ. ಅವರೇ ಹೇಳಿರುವಂತೆ[30] "ಪಂಪನ ಆದಿಪುರಾಣ 1389 ರ ವೇಳೆಗೆ ಯಾವ ರೂಪದಲ್ಲಿತ್ತೆಂಬುದನ್ನು ಮಾತ್ರ ಈಗ ನಿರ್ಧರಿಸಲಾಗಿದೆ. ಅದೂ ಸ್ಥೂಲವಾಗಿ! ಈ 1389 ಕ್ಕಿಂತ ಹಿಂದಿನ ಕಾಲದ ಪ್ರಾತಿನಿಧಿಕ ಪ್ರತಿಗಳು ಲಭ್ಯವಾಗುವವರೆಗೆ ಈ ಪರಿಷ್ಕರಣಕ್ಕಿಂತ ಉತ್ತಮವಾದ ಪರಿಷ್ಕರಣವನ್ನು (ಮೂಲ ಪಾಠ ದೃಷ್ಟಿಯಿಂದ) ತರುವುದು ಸಾಧ್ಯವಿಲ್ಲವೆಂದು ಸಂಪಾದನಾ ಶಾಸ್ತ್ರದ ಸೂತ್ರಗಳನ್ವಯ ಹೇಳದೆ ಗತ್ಯಂತರವಿಲ್ಲ" ಎಂಬ ಮಾತು ಪ್ರಸ್ತುತ ಪರಿಷ್ಕರಣಕ್ಕೆ ಸಂಬಂಧಿಸಿದಂತೆ ಒಪ್ಪತಕ್ಕದಾಗಿದೆ.

ಇಷ್ಟು ಗುಣಾತ್ಮಕ ಅಂಶಗಳನ್ನು ಈ ಪರಿಷ್ಕರಣ ಹೊಂದಿದೆಯಾದರೂ, ಅದೊಂದು ದೋಷಗಳೇ ಇಲ್ಲದ ಪರಿಷ್ಕರಣವೆನ್ನಲಾಗದು. ದೋಷಗಳಿವೆಯಾದರೂ. ಅವುಗಳು ಸರಿಪಡಿಸಬಹುದಾದುವು. ಎಂದರೆ ಈ ದೋಷಗಳು ಬಹುಮಟ್ಟಿಗೆ ಪಾಠ ಪರಿಷ್ಕರಣದ ವಿಧಾನಕ್ಕೆ ಸಂಬಂಧಿಸಿದುವಲ್ಲ; ಬದಲಾಗಿ ಅದಕ್ಕೆ ಹೊರತಾದುವು. ಉದಾಹರಣೆಗೆ ಮುದ್ರಣ ದೋಷದ ಕೆಲವು ನಿದರ್ಶನಗಳು ದೊರೆಯುತ್ತವೆ. ಇಂಥವುಗಳಿಗೆ ತಿದ್ದುಪಡಿಯೊಂದನ್ನು ಕೊಡಲಾಗಿದೆಯಾದರೂ ಇಲ್ಲಿ ಸೇರದ ಕೆಲವು ತಪ್ಪುಗಳನ್ನು ಕಾಣಬಹುದಾಗಿದೆ. ಇದಲ್ಲದೆ ಕೆಲವೆಡೆ ಪದ್ಯದ, ವಚನದ ಪಾಠದಲ್ಲಿ ಪಾಠ ಭೇದಗಳಿರುವುದಕ್ಕೆ ಚಿಹ್ನೆಗಳನ್ನು ಕೊಡಲಾಗಿದೆಯಾದರೂ ಪಾಠ ಭೇದಗಳು ಸೂಚಿತವಾಗದೆ ಬಿಟ್ಟು ಹೋಗಿವೆ. ಇದಕ್ಕೆ ಕೆಲವು ನಿದರ್ಶನಗಳನ್ನು ಇಲ್ಲಿ ಸೂಚಿಸಬಹುದು.

2—67 "·····ಸ್ವಯಂಬುದ್ಧನೆಂದುದನೆಂದಾದೆನಲ್ಲದಂದೆನಗವೀ
ಲೋಕಕ್ಕಮೇಂ ಸಮ್ಮದಂ"[31]

---

30. ನೋಡಿ: ಆದಿಪುರಾಣ (ಸಂ) ಬಸವರಾಜು ಎಲ್., ಪು: xii (ಅರಿಕೆ).
31. ಎಸ್.ಜಿ.ನ. ಮತ್ತು ಕುಂದಣಗಾರರ ಪರಿಷ್ಕರಣಗಳಲ್ಲಿ '.... ನೆಂಬುದ ನಾನೆಂದೆನದಲ್ಲದಂದೆನಗವೀ' ಎಂಬ ಭಿನ್ನ ಪಾಠವಿದೆ (2—67).

4-47 "..... ಕಳೆ <u>ಪಾಱುಗಳಂದಮೇಂ</u> ಬೆಡಂಗಣಿಯರ ವಿಲೇಕೆಗೆಂದು
<u>ಪೊಗಟ್ದರ</u> ಕೆಲರಲ್ಲಿ ಹಿಮಾಂಶು ವಕ್ತ್ರೆಯಂ" [32]

7-90 "..... ನೀರ್ಗಳನೆತ್ತಂ ಸುರಿದವು ಜನಾರ್ಭಕಾಜಳ <u>ಶಿರದೊಳ್</u>
ಜಲದಂಗಳಂತೆ ನಗದೊಳ್ ಸುರಿಗುಂ" [33]

ಇಂಥ ಕೆಲವು ಅರಕೆಗಳು ಈ ಪರಿಷ್ಕರಣದಲ್ಲಿ ಉಳಿದಿವೆ. ಆದರೆ ಇಂಥವನ್ನೆಲ್ಲ ಮುಂದೆ ಬರುವ ಮರುಮುದ್ರಣಗಳಲ್ಲಿ ತುಂಬಲು ಸಾಧ್ಯವಿದೆ ಮತ್ತು ಅದು ಅಗತ್ಯವಾದುದು ಕೂಡ. ಇಷ್ಟರ ಮಧ್ಯೆ ಈ ಪರಿಷ್ಕರಣದ ಗುಣಾತ್ಮಕ ಅಂಶಗಳು ಇದನ್ನೊಂದು ಬೆಲೆಯುಳ್ಳ ಪರಿಷ್ಕರಣವನ್ನಾಗಿ ಮಾಡಿವೆ. "ಮೇಲು ನೋಟಕ್ಕೆ ಕೇವಲ 'ಗ್ರಂಥ ಸಂಪಾದನೆ' ಎನಿಸಿಕೊಳ್ಳುವ ಈ ಕೃತಿ ಕನ್ನಡ ಕಾವ್ಯವನ್ನು ಕುರಿತ ರೂಢಿಯಲ್ಲಿರುವ ವಿಚಾರಗಳಿಗೂ, ಕಾವ್ಯದಲ್ಲಿನ ಒಳ ವಿವರಗಳ ವಿನ್ಯಾಸಕ್ಕೂ ಇರುವ ಒಡೆದು ಕಾಣುವ ವ್ಯತ್ಯಾಸಗಳನ್ನು ಕುರಿತ ಅನೇಕ ಹೊಳಹುಗಳನ್ನು ಒಳಗೊಂಡಿದೆ. ಈ ಹೊಳಹುಗಳ ಮೂಲಕ ಕಾವ್ಯದ ಅಂತರ ಸಂಬಂಧೀ ಪ್ರಕ್ರಿಯೆಗಳನ್ನು ವಿವರಿಸಿಕೊಳ್ಳಲು, ವಿಶ್ಲೇಷಿಸಿಕೊಳ್ಳಲು ತುಂಬಾ ಸಹಾಯ ಒದಗಿ ಬಂದಿದೆ" [34] ಎಂಬ ಕಿ.ರಂ.ನಾಗರಾಜರ ಮಾತುಗಳು ಈ ಪರಿಷ್ಕರಣದ ವೈಶಿಷ್ಟ್ಯವನ್ನು ಸ್ಪಷ್ಟಪಡಿಸುತ್ತವೆ.

---

32. 'ಪಾಱುವಳಂದಮಂ' ಎಂಬ ಪಾಠ ಎಸ್.ಜಿ.ನ. ಮತ್ತು ಕುಂದಣಗಾರರಲ್ಲಿ ಸಮಾನವಾಗಿದೆ. ಆದರೆ 'ಪೊಗಟ್ದರ' ಎಂಬುದಕ್ಕೆ ಎಸ್.ಜಿ.ಎನ್.: 'ಪೊಗಟ್ದದ' ಎಂದಿದ್ದರೆ (4-47), ಕುಂದಣಗಾರರಲ್ಲಿ 'ಪೊಗೞ್ದರ' ಎಂಬ ಕುೞ 'ೞ' ಕಾರ ಪ್ರಯೋಗವಿದೆ (4-47).

33. 'ಜಲದಂಗಳಂತೆ' ಎಂಬ ಪಾಠ ಎಸ್.ಜಿ.ಎನ್. (7-88) ಮತ್ತು ಕುಂದಣಗಾರ (7-89) ಎರಡೂ ಕಡೆ 'ಜಲದಂಗಳಂತೆ' ಎಂಬಂತೆ ದೊರೆಯುತ್ತದೆ.

34. ನಾಗರಾಜ ಕಿ.ರಂ., ಕನ್ನಡ ಕಾವ್ಯ ರಚನಾ ಪರಂಪರೆಯ ವಿಶಿಷ್ಟತೆ, ಅಂಕಣ (ಅಲೋಕ), ಸಂಚಿಕೆ 3, ಬೆಂಗಳೂರು, 1979. ಪು: 11.

## 2.4.4 ಮೊದಲೆರಡು ಪರಿಷ್ಕರಣಗಳು ಮತ್ತು ಎಲ್.ಬಸವರಾಜು ಅವರ ಪರಿಷ್ಕರಣ : ಕೆಲವು ವಿವರಗಳು

ಇದುವರೆಗಿನ ಪ್ರಸ್ತಾಪದಿಂದ ಆದಿಪುರಾಣದ ಮೂರು ಪರಿಷ್ಕರಣಗಳ ಸಾಮಾನ್ಯವಾದ ಸ್ವರೂಪ ಹಾಗೂ ಸ್ಥೂಲವಾಗಿಯಾದರೂ ಪರಸ್ಪರ ಅವುಗಳ ನಡುವೆ ಇರುವ ಭಿನ್ನಾಂಶಗಳೂ ಮನವರಿಕೆಯಾಗಿವೆ. ಆ ದಿಸೆಯಲ್ಲಿ ಇನ್ನು ಕೆಲವು ನಿದರ್ಶನಗಳನ್ನಷ್ಟೆ ಇಲ್ಲಿ ಗಮನಿಸಬಹುದೆಂದು ತೋರುತ್ತದೆ.

ಮೂರನೇ ಆಶ್ವಾಸದ ಒಂದು ಪದ್ಯ :

"ಸೂಡಿದ ಪಾರಿಜಾತದ ನಮೇರುವ ಬಾಸಿಗಮೊಯ್ಯನೊಯ್ಯ ನಿ
ಪೊರ್ಡಿದುದಂದಿನಂಗರುಚಿ ಕಣ್ಗೆಟ್ಟಿದಾಯ್ತು ವಿಭೂಷಣಂಗಳೊಳ್
ತೀಡುವ ರಶ್ಮಿಗಳ್ ಮಸುಳ್ಪಂವಾಗುಳಿಯಾಯ್ತು ನಿತಂಬೆಗಂ ಮೊಗಂ
ಬಾಡಿ ತಗುಳ್ಪಂ ಸೂಚಿಸಿದುವಾ ದಿವಿಜಂಗವಸಾನ ಕಾಲಮಂ"



(ಎಸ್.ಜಿ.ಎಸ್. : 3—3)

"ಸೂಡಿದ ಪಾರಿಜಾತದ ನಮೇರುವ ಬಾಸಿಗಮೊಯ್ಯನೊಯ್ಯ ನಿ
ಪೊರ್ಡಿದುದಂದಿನಂಗರುಚಿ ಕಣ್ಗೆಟ್ಟಿದಾಯ್ತು ವಿಭೂಷಣಂಗಳೊಳ್
ತೀಡುವ ರಶ್ಮಿಗಳ್ ಮಸುಳ್ಪಂವಾಗುಳಿಯಾಯ್ತು ನಿತಂಬೆಗಂ ಮೊಗಂ
ಬಾಡಿ ತಗುಳ್ಪಂ ಸೂಚಿಸಿದುವಾ ದಿವಿಜಂಗವಸಾನಕಾಲಮಂ"

(ಕುಂದಣಗಾರ : 3—3)

"ಸೂಡಿದ ಪಾರಿಜಾತದ ನಮೇರುವ ಬಾಸಿಗಮೊಯ್ಯನೊಯ್ಯ ನಿ
ಪೊರ್ಡಿದುದಂದಿನಂಗರುಚಿ ಕಣ್ಗಳಿದಾಯ್ತು ವಿಭೂಷಣಂಗಳೊಳ್
ತೀಡುವ ರಶ್ಮಿಗಳ್ ಮಸುಳ್ಪಂವಾಗುಳಿಯಾಯ್ತು ನಿತಂ ಬೆಗಲ್ತೊಗಂ
ಮಾಡೆ ತಗುಳ್ಪಂ ಸೂಚಿಸಿದುವಾ ದಿವಿಜಂಗವಸಾನ ಕಾಲಮಂ"

(ಎಲ್.ಬಸವರಾಜು : 3—3)

ಎಸ್.ಜಿ.ಎಸ್. ಮತ್ತು ಕುಂದಣಗಾರರ ಪರಿಷ್ಕರಣಗಳಲ್ಲಿ ಈ ಪದ್ಯದ ಪಾಠ ಸಂಪೂರ್ಣವಾಗಿ ಸಮಾನವಾಗಿದೆ. ಮತ್ತು ಇವೆರಡೂ ಕಡೆ ದೊರೆಯುವ ಪಾಠಕ್ಕಿಂತ ಬಸವರಾಜು ಅವರ ಪರಿಷ್ಕರಣದ ಪಾಠ ಬೇರೆಯದಾಗಿದೆ. ಬಸವರಾಜು ಅವರ ಪರಿಷ್ಕರಣದಲ್ಲಿ 'ಕಣ್ಗೆಳಿದಾಯ್ತು' 'ಇನಿತುಂಬೆಗಲ್ತೊಗಂ ಮಾಡೆ' ಎಂದಿರುವ ಪಾಠಗಳಿಗೆ ಮೊದಲ ಎರಡೂ ಪರಿಷ್ಕರಣಗಳಲ್ಲಿ 'ಕಣ್ಗೆಲಿದಾಯ್ತು' 'ಇನಿತುಬ್ಬೆಗಂ ಮೊಗಂ ಬಾಡಿ' ಎಂಬ ಪಾಠಗಳಿವೆ. ಕೇಶಿರಾಜನ ವಿವರಗಳು, ಚಂದ್ರಪ್ರಭ ಪುರಾಣದ ಉಲ್ಲೇಖಗಳನ್ನೆಲ್ಲ ಉದ್ಧರಿಸಿ 'ಇಳಿದು' ಎಂಬಲ್ಲಿರಬೇಕಾದುದು ಕುಳ 'ಳ' ಕಾರವೇ ಎಂಬುದನ್ನು ಸಮರ್ಥಿಸಿದ್ದಾರೆ. ಮೊದಲೆರಡು ಪರಿಷ್ಕರಣಗಳಲ್ಲಿ ಗಮನಿಸಲಾದ ಹಸ್ತಪ್ರತಿಗಳಲ್ಲಿ 'ಬೆಗಲ್ತೊಗಂ' ಎಂಬುದನ್ನು ಸರಿಯಾಗಿ ಗ್ರಹಿಸದೆ ಅಥವಾ ಅದರ ಅರ್ಥವನ್ನು ಕ್ಲಿಷ್ಟವೆಂದು ಭಾವಿಸಿದ ಪರಿಣಾಮವಾಗಿ 'ಇನಿತುಬ್ಬೆಗ' ಎಂಬ ಪಾಠವನ್ನು ಸೇರಿಸಿರಬಹುದು.

ಪಂಪ ಕಾವ್ಯವನ್ನು ಹೆಣ್ಣಿಗೆ ಹೋಲಿಸಿದ ಪದ್ಯವೊಂದು ಹೀಗಿದೆ:—

"ಮೃದು ಪದ ಗತಿಯಿಂ, ರಸಭಾ|ವದ ಪೆರ್ಚಿಂ ಪಣ್ಯವನಿತೆಯವೋಲ್ ಕೃತಿ ಸಾಂ॥
ಯರ್ಥದ ಜಾತಿಯರ್ಥದ ಕಣಿಯೆನೆ, |ವಿದಗ್ಧ ಬುಧ ಜನದ ಮನವನಲೆಯದೆ
ವೇಡಾ?!॥
(1—17)

ಇದು ಬಸವರಾಜು ಅವರ ಪರಿಷ್ಕರಣದ ಪಾಠ. ಮೊದಲೆರಡು ಪರಿಷ್ಕರಣಗಳಲ್ಲಿ ಎಸ್.ಜಿ.ನ. ಅವರು 'ಪಣ್ಯ'ವನ್ನೇ ಉಳಿಸಿಕೊಂಡಿದ್ದು 'ಪುಣ್ಯವನಿತೆ' ಎಂಬುದನ್ನು ಪಾಠಾಂತರವಾಗಿ ತೋರಿಸಿದ್ದರೆ, ಕುಂದಣಗಾರರು 'ಪುಣ್ಯವನಿತೆ' ಎಂಬುದನ್ನೇ ಅಂಗೀಕರಿಸಿದ್ದಾರೆ. ಬಸವರಾಜು ಅವರು ತಾವು ಅಂಗೀಕರಿಸಿದ ಮೇಲಿನ ಪಾಠವನ್ನು ಕುರಿತು "ಕಾವ್ಯವು ಪಣ್ಯವನಿತೆ (= ಸೂಳೆ) ಯಂತಿರಬೇಕು ಎಂಬುದೇ ಪಂಪನ ಅಭಿಮತ. ಆ ಬಗ್ಗೆ ಅವನಿಗೆ ಎಗ್ಗೆನಿಸಿಗಿಲ್ಲ. ಏಕೆಂದರೆ ಅಂದಿನ ಸಮಾಜದಲ್ಲಿ ಪಣ್ಯವನಿತೆಯರಿಗೆ ಮಾನ್ಯತೆಯಿತ್ತು. ಸ್ವತಃ ಪಂಪನೇ ತನ್ನ ವಿಕ್ರಮಾರ್ಜುನ ವಿಜಯ ಕೃತಿ ಪ್ರಬಂಧದಿಂದ ರಾಜರಿಗೆ ಔದಾರ್ಯ, ಯೋಧರಿಗೆ ಅದಟು,

ಗಣಿಕಾ ಜನಕ್ಕೆ ಎದುರು ಒದಗಿ ನೆಲಸುವಂತಾಗಲೆಂದು ಆಶಿಸುತ್ತಾನೆ" ಎಂದು ಸಮರ್ಥಿಸುತ್ತಾರೆ.[35] ಅಂದಿನ ಸಮಾಜದಲ್ಲಿ ಪಣ್ಯವನಿತೆಯರಿಗೆ ಮಾನ್ಯತೆಯಿರಲಿ, ಇಲ್ಲದಿರಲಿ ಈ ಪಾಠವಂತೂ ಸ್ವೀಕೃತವಾದುದು ಸಮರ್ಥನೀಯವಾಗಿದೆ. ಕಾವ್ಯವನ್ನು 'ವನಿತೆ' ಅಥವಾ 'ಹೆಣ್ಣು' ಎಂಬರ್ಥದಲ್ಲಿ ಪರಿಭಾವಿಸಲಾಗಿರುವುದು ಎಲ್ಲರಿಗೂ ವಿದಿತವೇ ಇರುವ ಸಂಗತಿ. ಹೀಗಾಗಿ ಈ ಪಾಠ ಹೆಣ್ಣಿನ ಒಂದು ವಿಶೇಷ ಗುಣವನ್ನು ಹೇಳುತ್ತಿದೆ. ಕೆ.ವಿ.ನಾರಾಯಣ ಅವರ ಮಾತಿನಂತೆ[36] "ಹೆಂಗಸಿಗೆ ಆರೋಪಿತವಾದ ಗುಣಗಳ ಚೌಕಟ್ಟಿನಲ್ಲಿ ನೋಡಿದರೆ 'ಪಣ್ಯವನಿತೆ' ಎನ್ನುವ ಪಾಠ ಹೆಚ್ಚು ಸೂಕ್ತವೆಂದೇ ಭಾವಿಸಬಹುದು."

ಆದಿಪುರಾಣದ ಮತ್ತೊಂದು ಪ್ರಸಿದ್ಧ ಪದ್ಯ :—

"ನೆಲಸುಗೆ ನಿನ್ನ ವಕ್ಷದೊಳ್ ನಿಶ್ಚಲಮೀ ಭಟ ಖಡ್ಗ ಮಂಡಲೋ
ತ್ಪಲವನ ವಿಭ್ರಮ ಭ್ರಮರಿಯಪ್ಪ ಚಲಾಚಲ ರಾಜ್ಯ ಲಕ್ಷ್ಮಿ! ಭೂ
ಲಲನೆಯನಯ್ಯ ನಿತ್ತುದುಮನಾಂ ನಿನಗಿತ್ತೆನಿ(ನ,ಇ) ದೇವುದಣ್ಣ, ನಿ
ನ್ನೊಲಿದ ಲತಾಂಗಿಗಂ ಧರೆಗಮೊ‿ನೋಲಿದಂದು ನೆಗಳ್ತೆ ಮಾಸದೇ?!"

(ಎಲ್.ಬಸವರಾಜು : 14—128)

ಎಸ್.ಜಿ.ನರಸಿಂಹಾಚಾರ್ಯರ ಪರಿಷ್ಕರಣದಲ್ಲಿ ಈ ಪದ್ಯದ ಪಾಠ ಹೀಗಿದೆ :—

"ನೆಲಸುಗೆ ನಿನ್ನ ವಕ್ಷದೊಳ್ ನಿಶ್ಚಳಮೀ ಭಟ ಖಡ್ಗ ಮಂಡಲೋ
ತ್ಪಲವನ ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನಯ್ಯ ನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗಳ್ತೆ ಮಾಸದೇ"

(14—130)

---

35. ನೋಡಿ: ಆದಿಪುರಾಣ (ಸಂ) ಎಲ್.ಬಸವರಾಜು, 1—17ರ ಅಡಿ ಟಿಪ್ಪಣಿ.

'ಸಂಪದ [illegible] ಶ್ರೇಣಿ'

36. ನೋಡಿ: ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ : ಸಂಪುಟ—2, (ಸಂ) ಜಿ.ಎಸ್.ಶಿವರುದ್ರಪ್ಪ, ಬೆಂಗಳೂರು, 1975. ಪು: 127ರ ಅಡಿ ಟಿಪ್ಪಣಿ.

ಮೊದಲ ಪಾದದಲ್ಲಿ ಬರುವ 'ನಿಶ್ಚಳ' ಎಂಬುದು 'ನಿಶ್ಚಲ' ಎಂದಿರುವುದನ್ನು ಬಿಟ್ಟರೆ ಕುಂದಣಗಾರರ ಪರಿಷ್ಕರಣದ ಈ ಪದ್ಯ ಎಸ್.ಜಿ.ಎನ್. ಪರಿಷ್ಕರಣದ ಪದ್ಯಕ್ಕೆ ಸಮಾನವಾಗಿದೆ.[37] ಇರುವ ಈ ಒಂದೇ ಪಾದ ಭೇದ ಅಂಥ ಗಮನಾರ್ಹವಾದ ವ್ಯತ್ಯಾಸವಲ್ಲ.

ಎಸ್.ಜಿ.ನ. ಮತ್ತು ಕುಂದಣಗಾರರ ಪರಿಷ್ಕರಣಗಳ ಪಾಠಕ್ಕಿಂತ ಬಸವರಾಜು ಅವರ ಪರಿಷ್ಕರಣದ ಪಾಠ ಗಮನಾರ್ಹವಾಗಿ ಬೇರೆಯಾಗಿದೆ ಎಂಬುದನ್ನು ಗಮನಿಸಬಹುದು. ಮುಖ್ಯವಾಗಿ ಮೊದಲೆರಡು ಪರಿಷ್ಕರಣಗಳಲ್ಲಿರುವ 'ಮನೋಹರಿ', 'ಭೂವಲಯ' 'ನೀನೊಲಿದ' (ಅ)'ಮಾಟಸಿದಂದು' ಎಂಬ ಪಾಠಗಳಿಗೆ ಬದಲಾಗಿ ಬಸವರಾಜು ಅವರ ಪರಿಷ್ಕರಣದಲ್ಲಿ ಅನುಕ್ರಮವಾಗಿ 'ಚಲಾಚಲ', 'ಭೂ ಲಲನೆ', 'ನಿನ್ನೊಲಿದ' '(ಅ)ಮಾನೊಲಿದಂದು' ಎಂಬ ಪಾಠಗಳಿವೆ. ಬಸವರಾಜು ಅವರ ಪರಿಷ್ಕರಣದಲ್ಲಿ ಎಸ್.ಜಿ.ನ. ಮತ್ತು ಕುಂದಣಗಾರರ ಪರಿಷ್ಕರಣಗಳಲ್ಲಿ ಪಾಠ ಭೇದಗಳೆಂದು ಯಾವ ಪಾಠಗಳನ್ನು ಅಡಿ ಟಿಪ್ಪಣಿಯಲ್ಲಿ ತೋರಿಸುತ್ತಾರೋ ಅವನ್ನು ಸ್ವೀಕರಿಸಲಾಗಿದ್ದು, ಅಲ್ಲಿ ಸ್ವೀಕೃತವಾಗಿದ್ದ ಪಾಠಗಳನ್ನು ಇಲ್ಲಿ ಅಡಿ ಟಿಪ್ಪಣಿಯಲ್ಲಿ ಕೊಡಲಾಗಿದೆ. ಹೀಗಾಗಿ ಅದುವರೆಗೆ ಪ್ರಚುರವಿದ್ದ ಮತ್ತು ಓದುತ್ತ ಬರಲಾಗಿದ್ದ ಪಾಠಕ್ಕಿಂತ ವಿಭಿನ್ನವಾದ ಪಾಠ ಇಲ್ಲಿ ದೊರೆಯುತ್ತದೆ. ಆದರೆ ಇಲ್ಲಿನ ನಾಲ್ಕು ಭಿನ್ನ ಪಾಠಗಳಲ್ಲಿ 'ಚಲಾಚಲ' ಮತ್ತು '(ಅ)ಮಾನೊಲಿದಂದು' — ಇವೆರಡಕ್ಕೆ ಮಾತ್ರ ಪಾಠಾಂತರಗಳನ್ನು ನೀಡಲಾಗಿದೆ. ಉಳಿದೆರಡು ಪಾಠಗಳಿಗೆ — 'ಭೂ ಲಲನೆ' ಮತ್ತು 'ನಿನ್ನೊಲಿದ' — ಪಾಠಾಂತರವನ್ನೇ ನೀಡುವುದಿಲ್ಲ. ಅದುವರೆಗಿನ ಎಲ್ಲ ಪಠ್ಯಗಳಲ್ಲೂ ಇದ್ದ ಈ ಪಾಠಗಳನ್ನು ಅಡಿ ಟಿಪ್ಪಣಿಗಳಲ್ಲಿ ಪಾಠಾಂತರಗಳಾಗಿ ನೀಡಬೇಕಾದ ಅಗತ್ಯವಿತ್ತು.

ಮೊದಲ ನೋಟಕ್ಕೆ ಬಸವರಾಜು ಅವರ ಪರಿಷ್ಕರಣದ ಈ ಪದ್ಯ ವಿಭಿನ್ನವಾಗಿ ತೋರಬಹುದು. ಮತ್ತು ಈವರೆಗೆ ಇದಕ್ಕಿಂತ ವಿಭಿನ್ನ ಪಾಠಗಳನ್ನು ಓದಿದ್ದ ಮನಸ್ಸಿಗೆ ಒಗ್ಗದಿರಲೂಬಹುದು. ಅದೇನೇ ಇದ್ದರೂ ನಿಜದಲ್ಲಿ, ಈ ಪಾಠಗಳಿಂದಾಗಿ ಈ ಪದ್ಯದ ಅರ್ಥ ಪುಷ್ಟಿ ಇನ್ನಷ್ಟು ಉಜ್ವಲವಾಗಿದೆ; ಮಹತ್ವದ್ದಾಗಿ ಪರಿಣಮಿಸಿದೆ

---

37. ನೋಡಿ: ಆದಿಪುರಾಣ (ಸಂ) ಕುಂದಣಗಾರ ಮತ್ತು ಎ.ಪಿ.ಚೌಗುಲೆ 14—130.

ಎಂಬುದಂತೂ ಸ್ಪಷ್ಟ. ಇಲ್ಲಿನ ಹೆಣ್ಣಿನ ಪ್ರತಿಮೆ ಮತ್ತು ವ್ಯಂಗ್ಯಾರ್ಥಗಳು ಹಂತ ಹಂತವಾಗಿ ಬೆಳೆಯುತ್ತಾ ಹೋಗುವುದು ಗಮನಾರ್ಹ ಸಂಗತಿಯಾಗಿದೆ. (ಮುಂದಿನ ಅಧ್ಯಾಯದಲ್ಲಿ ಈ ಚರ್ಚೆಯನ್ನು ಬೆಳೆಸಬಹುದು.)

ಇನ್ನೊಂದು ಪ್ರಮುಖ ವಿಚಾರವನ್ನಿಲ್ಲಿ ಪ್ರಸ್ತಾಪಿಸಬೇಕಾಗಿದೆ. ಹಿಂದೆಯೇ ಗುರುತಿಸಿದಂತೆ, ವಿಶ್ವಾಸಾರ್ಹ ಪ್ರತಿಯೊಂದು (ಸಂಪಾದಕರು 'ಹ' ಎಂದು ಕರೆದಿದ್ದಾರೆ) ದೊರೆತುದರಿಂದ ಹಲವು ಪ್ರಕ್ಷಿಪ್ತ ಭಾಗಗಳನ್ನು ಗುರುತಿಸಿ ಕೈ ಬಿಡುವುದು ಸಾಧ್ಯವಾಗಿದೆ ಎಂಬುದು ಸರಿಯೇ. ಆದರೆ ಹೀಗೆನ್ನುವಾಗ ಈ ಪ್ರತಿಯಲ್ಲಿ ಇಲ್ಲದ ಎಲ್ಲವೂ ಪ್ರಕ್ಷಿಪ್ತ ಎಂದು ಸಾದಾಸೀದಾ ಗುರುತಿಸಿದ್ದಾರೆಂದು ತಿಳಿಯಲಾಗದು. ಒಂದು ಪ್ರಕ್ಷಿಪ್ತವನ್ನು ಗುರುತಿಸಿ ಕೈ ಬಿಡುವಾಗ ಸಂಪಾದಕರು ಅಂತಹ ಸಂದರ್ಭದಲ್ಲಿನ ವಿಷಯ ನಿರೂಪಣೆ, ಭಾವ ಸಾಹಚರ್ಯ, ಭಾಷೆಯ ಸೂಕ್ಷ್ಮ ಬದಲಾವಣೆ ಇತ್ಯಾದಿಗಳನ್ನು ಲಕ್ಷ್ಯದಲ್ಲಿರಿಸುತ್ತಾರೆ. ಹೀಗಾಗಿ ಹಿಂದಿನ ಎರಡೂ ಪರಿಷ್ಕರಣಗಳಲ್ಲಿ ನಾವು ಓದುತ್ತ ಬರಲಾಗಿದ್ದ ಹಲವಷ್ಟು ಪದ್ಯ, ಪದ್ಯ ಭಾಗಗಳನ್ನು ಈ ಪರಿಷ್ಕರಣದಲ್ಲಿ ಕೈ ಬಿಡಲಾಗಿದೆ. ಇದಕ್ಕೆ ಸಾಕಷ್ಟು ನಿದರ್ಶನಗಳನ್ನು ಈ ಪರಿಷ್ಕರಣದಿಂದ ತೋರಿಸಲು ಸಾಧ್ಯವಿದೆಯಾದರೂ, ಒಂದು ನಿದರ್ಶನವನ್ನು ವಿಷಯ ಸ್ಪಷ್ಟನೆಗಾಗಿ ಇಲ್ಲಿ ಗಮನಿಸಿದರೆ ಸಾಕೆಂದು ತೋರುತ್ತದೆ.

ಏಳನೆಯ ಆಶ್ವಾಸದಲ್ಲಿ ಮರುದೇವಿ 'ಈರೆಂಟುಮೊಳ್ಗನಸು' ಗಳನ್ನು ಜಿನ ಶಿಶುವಿನ ಜನನದ ಸಂಕೇತವಾಗಿ ಕಾಣುವ ಸಂದರ್ಭವಿದೆ. ಪಂಪ ಇದರ ನಿರೂಪಣೆಗೆ ಲಲಿತ ರಗಳೆಯನ್ನು ಬಳಸಿದ್ದಾನೆ. ಎಪ್ಪತ್ತು ಸಾಲುಗಳಿರುವ ಈ ರಗಳೆಯ ಭಾಗದಲ್ಲಿ ಬಸವರಾಜು ಅವರು ತಮ್ಮ ಪರಿಷ್ಕರಣದಲ್ಲಿ ಕೊನೆಯ ಇಪ್ಪತ್ತಾರು ಸಾಲುಗಳನ್ನು ಪ್ರಕ್ಷಿಪ್ತವೆಂದು ಗುರುತಿಸುತ್ತಾರೆ. ಎಸ್.ಜಿ.ನ. ಪರಿಷ್ಕರಣದಲ್ಲಿ ಈ ಭಾಗ ಸಂಪೂರ್ಣವಾಗಿ ಇದೆ. ಕುಂದಣಗಾರರ ಪರಿಷ್ಕರಣದಲ್ಲಿ ಕೊನೆಯ ಇಪ್ಪತ್ತಾರು ಸಾಲುಗಳು ಒಂದು ಪ್ರತಿಯಲ್ಲಿ (ಬ) ದೊರೆಯುವೆಂಬುದನ್ನು ಸೂಚಿಸಲಾಗಿದೆ.[38]

---

38. ನೋಡಿ: ಆದಿಪುರಾಣ (ಸಂ) ಕುಂದಣಗಾರ, ಪು: 268.

ಪ್ರಕ್ಷಿಪ್ತವೆಂದು ಸಂದೇಹಿಸಲಾದ ಈ ಭಾಗವನ್ನು ಕುರಿತು ಎಲ್.ಬಸವರಾಜು ಅವರು "ಇಲ್ಲಿಂದ ಮುಂದಿನ ಪಾಠಾಂತರ ಭಾಗ ಹ, ಚ, ಕುR. ಬ .......... ಪ್ರತಿಗಳಲ್ಲಿ ಇಲ್ಲ. ಈ (ಬಿಟ್ಟಿರುವ) ಭಾಗದಲ್ಲಿರುವ ವಿಷಯ ಮುಂದೆ ಪಾಠದಲ್ಲಿ ಬರುವ ಕಂದಗಳೆರಡರಲ್ಲಿ ಮೊದಲೇ ಉಕ್ತವಾಗಿರುವುದರಿಂದ ಮತ್ತು ಈ ಭಾಗವಿಲ್ಲದಿದ್ದರೂ ಕಥಾ ಸೂತ್ರಕ್ಕೆ ಭಂಗ ಬಾರದಿರುವುದರಿಂದ, ಈ ಅಧಿಕ ರಗಳೆಯ ಭಾಗವನ್ನು ಸೇರಿಸಿಕೊಂಡು ಓದಿದಾಗ ಮುಂದೆ ಬರುವ ಕಂದ ಪದ್ಯಗಳು ಅನನ್ವಯವಾಗುವುದರಿಂದ, ಈ ಅಧಿಕ ಭಾಗದಲ್ಲೇ ಎರಡು ಕಡೆ ಪ್ರಾಸ ಭಂಗವಿರುವುದರಿಂದ — ಈ ಮೇಲೆ ಹೇಳಿದ ಮುಂದಿನ ಪಾಠ ಪ್ರಕ್ಷಿಪ್ತ" ಎಂದು ಆ ಪಾಠವನ್ನು ಅಡಿ ಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ.[39] ಪ್ರಕ್ಷಿಪ್ತವೆಂದು ಗುರುತಿಸಲಾಗಿರುವ ಈ ಸಾಲುಗಳಲ್ಲಿನ ವಿವರಗಳು ಮತ್ತೆ ಮತ್ತೆ ಮರುಕಳಿಸಿದಂತೆ ಸಹಜವಾಗಿಯೇ ತೋರುತ್ತದೆ. ಈ ಪ್ರಕ್ಷಿಪ್ತ ಪಾಠದ ಕೊನೆಯ ನಾಲ್ಕೈದು ಸಾಲುಗಳಂತೂ ಮೇಲಿನ ಅನುಮಾನವನ್ನು ಸ್ಪಷ್ಟವಾಗಿ ಸಮರ್ಥಿಸುತ್ತವೆ.[40] ಬಸವರಾಜು ಅವರ ಪರಿಷ್ಕರಣವನ್ನು ಗಮನಿಸಿದಾಗ ಇಂಥ ಅಧಿಕ ಪಾಠಗಳು ದೊರೆಯುವುದು ನಿರ್ದಿಷ್ಟ ಪ್ರತಿಗಳಲ್ಲೇ ಹೊರತು ಕಾಲ ದೃಷ್ಟಿಯಿಂದ ಪ್ರಾಚೀನವಾದ ಪಾಠ ದೃಷ್ಟಿಯಿಂದ ನಂಬಲರ್ಹವಾದ ಪ್ರತಿಗಳಲ್ಲಿ ಅಲ್ಲ ಎಂಬುದು ಮನವರಿಕೆಯಾಗುತ್ತದೆ.

ಇಷ್ಟೆಲ್ಲ ಗುಣಾತ್ಮಕ ಅಂಶಗಳಿಂದ ಕೂಡಿದ ಬಸವರಾಜು ಅವರ ಪರಿಷ್ಕರಣ ಮೌಲಿಕವಾದುದಾಗಿದೆ. ಎಂದ ಮಾತ್ರಕ್ಕೆ ಈ ಮೊದಲ ಪರಿಷ್ಕರಣಗಳು ನಿರುಪಯುಕ್ತವೆಂದಾಗಲಿ, ಅವುಗಳಿಗೆ ಯಾವ ಬೆಲೆಯೂ ಇಲ್ಲವೆಂದಾಗಲಿ ಅಲ್ಲ. ಐತಿಹಾಸಿಕವಾಗಿ ಆ ಪರಿಷ್ಕರಣಗಳಿಗೆ ತಮ್ಮದೇ ಆದ ಸ್ಥಾನವಿದೆ ಎಂಬುದನ್ನು ಮರೆಯಲಾಗದು. ಎಂದೇ

---

39. ನೋಡಿ : ಆದಿಪುರಾಣ (ಸಂ) ಎಲ್.ಬಸವರಾಜು, ಪು: 213–14.

40. "ದಡಿಗಡಿಗೆ ನೊಗಯಿಸಿದಳೊಗೆದ ಮೊಗರಾಗದಿಂ
ನೆಗಳ್ದ ಕವಿತಾ ಗುಣಾರ್ಣವನ ವರ್ಣಿಸುವುದಂ
ಪೊಗಸು ಬಗೆದೋದುವರ ಮನದೊಳಾಟಿಸಿದುದಂ
ಪಡೆವರೀ ಷೋಡಶ ಸ್ವಪ್ನದ ಫಲಂಗಳಂ
ಪಡೆಯಲಣಮಾಗದ ಸುಖಂಗಳಂ ಮಂಗಳಂ"

ಈ ಪರಿಷ್ಕರಣವನ್ನು ಇದುವರೆಗೆ ಈ ನಿಟ್ಟಿನಲ್ಲಿ ನಡೆದ ಕಾರ್ಯದ ಮುಂದುವರಿಕೆಯೆಂದು ಕರೆಯುವುದು ಹೆಚ್ಚು ಸಮಂಜಸ. ಏಕೆಂದರೆ ಈ ಪರಿಷ್ಕರಣ ಕೂಡ ಈ ದಿಸೆಯಲ್ಲಿ ಕೊನೆಯ ಮಾತಲ್ಲ. ಇದಕ್ಕೂ ಮುಂದುವರಿದ ಪರಿಷ್ಕರಣಗಳನ್ನು ಹೊಸ ಸಾಮಗ್ರಿಯ ಶೋಧದಿಂದಾಗಲಿ, ಹೊಸ ಬಗೆಯ ಪರಿಷ್ಕಾರಗಳ ಸಾಧ್ಯತೆಗಳಿಂದಾಗಲಿ ಮಾಡಬೇಕಾದ ಅಗತ್ಯಗಳು ಇದ್ದೇ ಇವೆ.

## 2.4.5 ಸಂಗ್ರಹಗಳು, ಮರು ಮುದ್ರಣಗಳು, ಇತ್ಯಾದಿ

ಪಠ್ಯವೊಂದರ ಸಂಗ್ರಹಗಳನ್ನಾಗಲಿ, ಮರು ಮುದ್ರಣಗಳನ್ನಾಗಲಿ ನಿಜವಾದ ಅರ್ಥದಲ್ಲಿ ಪರಿಷ್ಕರಣಗಳೆಂದು ಪರಿಗಣಿಸಲಾಗದೆಂಬುದು ಸರಿಯೇ ಆದರೂ, ಒಂದು ಕೃತಿಯ ಪರಿಷ್ಕರಣಗಳನ್ನು ಗಮನಿಸುವಾಗ ಆ ಕೃತಿಯ ಸಂಗ್ರಹಗಳನ್ನಾಗಲಿ, ಮರು ಮುದ್ರಣಗಳನ್ನಾಗಲಿ ಗಮನಿಸದೆ ಇರಲಾಗದು.

ಸಂಗ್ರಹಗಳ ವಿಷಯವನ್ನೇ ತೆಗೆದುಕೊಂಡರೆ ನಮ್ಮಲ್ಲಿ ಕಥಾ ದೃಷ್ಟಿಯಿಂದ ಕೃತಿಯನ್ನು ಸಂಗ್ರಹಿಸುವ ಮಾದರಿಯೇ ಹೆಚ್ಚು ಪ್ರಚಲಿತವೆನ್ನಬೇಕು. ಹೀಗಾಗಿಯೇ ಸಂಗ್ರಹಕಾರರು ತಮ್ಮ ಸಂಗ್ರಹಗಳನ್ನು ಕುರಿತು "ಕಥಾ ಸೂತ್ರವನ್ನು ಗಮನದಲ್ಲಿರಿಸಿ ಕೊಂಡು .........." "ಮುಖ್ಯವಾದ ಯಾವ ವಿಚಾರಕ್ಕೂ ಕುಂದಾಗದಂತೆ .........." ಎಂಬರ್ಥದ ಮಾತುಗಳನ್ನು ಹೇಳುವುದನ್ನು ಪದೇ ಪದೇ ಗಮನಿಸುತ್ತೇವೆ. ಹಾಗೆ ನೋಡಿದರೆ ಇಂಥ ಮಾತುಗಳ ಬಗ್ಗೆ ಚರ್ಚೆಗಳನ್ನೆತ್ತಲು ಸಾಧ್ಯವಿದೆ. ಅತ್ಯಂತ ಕೆಟ್ಟ ಮಾದರಿಯ ಸಂಗ್ರಹಗಳು ~~ಪರಿಷ್ಕರಣಗಳು~~ ಕೂಡ ಮೇಲಿನ ಮಾತುಗಳ ಹಿಂದೆ ಮರೆಯಾಗುತ್ತಿರುವುದು ನಮಗೆ ಅನೇಕ ಪ್ರಶ್ನೆಗಳನ್ನು ಹುಟ್ಟಿಸುತ್ತದೆ. ಕವಿಯ ಆಶಯಕ್ಕೆ ಕುಂದಾಗದಂತೆ ಸಂಗ್ರಹವೊಂದನ್ನು ಮಾಡಬಹುದೇ? ಹೌದಾದರೆ, ಮೂಲ ಕೃತಿಯ ಅಗತ್ಯವೇ ಬೇಕಾಗದಲ್ಲವೇ ಎಂಬ ಸಂದೇಹವೂ ಏಳುತ್ತದೆ. ಸದ್ಯಕ್ಕೆ ಈ ಚರ್ಚೆಯನ್ನು ಇಲ್ಲಿ ಬೆಳೆಸುವ ಅಗತ್ಯವಿಲ್ಲ. ಆದರೆ ಈ ಸಂಗ್ರಹ ಕೃತಿಗಳ ಹಿಂದೆ

et?

ಮತ್ತೊಂದು ಅಂಶವೂ ಇರುವಂತೆ ಕಾಣುತ್ತದೆ. ಅದೆಂದರೆ ಬಹುಪಾಲು ಸಂಗ್ರಹಗಳೆಲ್ಲ ಶಾಲಾ – ಕಾಲೇಜುಗಳ ಪಠ್ಯಗಳಾಗಿ ನಿಯುಕ್ತವಾಗುವಂಥವು. ಈ ಅಂಶವೂ ನಮ್ಮನ್ನು ಬೇರೆ ಬೇರೆಯ ಚರ್ಚೆಗಳಿಗೆ ಎಳೆಯುವುದರಿಂದ ಒಂದು ಮಾತನ್ನು ಮಾತ್ರ ಹೇಳಬಹುದೆಂದು ತೋರುತ್ತದೆ. ಪಠ್ಯಗಳಾಗಿ ನಿಯುಕ್ತಿಸಲಾಗುವ ಈ ಸಂಗ್ರಹಗಳ ಅಪೇಕ್ಷೆಯ ಹಿಂದಿರುವ ಅಂಶಗಳಿಗಾಗಲಿ, ಸಮರ್ಥಿಸುವುದರ ಹಿಂದಿರುವ ಕಾರಣಗಳಿಗಾಗಲಿ ಕೇವಲ ಸಂಗ್ರಹಗಳು ಮಾತ್ರ ಉತ್ತರವಲ್ಲ; ಬದಲಾಗಿ ಆ ಮೂಲ ಕೃತಿ ಅಥವಾ ಅದರ ಭಾಗಗಳು ಪಠ್ಯವಾಗುವುದು.

ಸಂಗ್ರಹ ವಿಧಾನವನ್ನೇ ಮುಖ್ಯವಾಗಿರಿಸಿಕೊಂಡ ಸಂಗ್ರಹಿತ ಕೃತಿಗಳು ಹೆಚ್ಚಾಗಿವೆಯಾದರೂ, ಸಂಗ್ರಾಹಕನಾದವನು ತನ್ನ ಸಂಗ್ರಹದ ಪಾಠಗಳನ್ನು ಕುರಿತು, ಅಲ್ಲಿನ ಸಮಸ್ಯೆಗಳನ್ನು ಕುರಿತು ತನ್ನದೇ ಆದ ನಿಲುವುಗಳನ್ನು ತಾಳುವ ಸಾಧ್ಯತೆಗಳನ್ನು ನಿರಾಕರಿಸಲಾಗದು ಮತ್ತು ಅಂತಹ ಸಂಗ್ರಹಗಳು ಹೆಚ್ಚು ಅಪೇಕ್ಷಣೀಯವಾಗುತ್ತವೆ.

'ಆದಿಪುರಾಣ' ಕ್ಕೆ ಬಂದ ಮುಖ್ಯ ಸಂಗ್ರಹವೆಂದರೆ ಎಲ್.ಗುಂಡಪ್ಪನವರದು.[41] ಮೇಲೆ ಹೇಳಿದಂತೆ ಮುಖ್ಯವಾಗಿ ಕಥಾನುಕ್ರಮಕ್ಕೆ ಕುಂದಾಗದಂತೆ (ಪ್ರಮುಖ ಘಟನಾವಳಿಗಳು ಬಿಟ್ಟು ಹೋಗದಂತೆ ಎಂಬುದು ಹೆಚ್ಚು ಸರಿಯಾದೀತು) ಸಂಗ್ರಹ ವಿಧಾನಕ್ಕೆ ಹೆಚ್ಚು ಒತ್ತು ಕೊಟ್ಟಿರುವ ಸಂಗ್ರಹವಿದು. 1900 ರಲ್ಲಿ ಪ್ರಕಟವಾದ ಎಸ್.ಜಿ.ನರಸಿಂಹಾಚಾರ್ಯರ ಪರಿಷ್ಕರಣವನ್ನು ಈ ಸಂಗ್ರಹ ಮೂಲವಾಗಿರಿಸಿಕೊಂಡಿದೆ. ಆದರೆ ಈ ಸಂಗ್ರಹ ಇದಿಷ್ಟೇ ಅಲ್ಲ ಎಂಬುದನ್ನು ಹೇಳುವ ಮಾತುಗಳು ಹೀಗಿವೆ: "ಈ ಆದಿಪುರಾಣ ಸಂಗ್ರಹದಲ್ಲಿ ಓರಿಯೆಂಟಲ ಲೈಬ್ರರಿಯ ಮುದ್ರಿತ ಪ್ರತಿಯನ್ನೇ ಅನುಸರಿಸಿದೆ. ಉಚಿತವೆಂದು ತೋರಿದ ಕಡೆ ಆ ಸಂಪಾದಕರು ಅಡಿ ಟಿಪ್ಪಣಿಯಲ್ಲಿ ಕೊಟ್ಟ ಪಾಠಾಂತರಗಳನ್ನು ಅಂಗೀಕರಿಸಲಾಗಿದೆ. ಅಡಿ ಟಿಪ್ಪಣಿಯ ಪಾಠವೂ ಸಮರ್ಪಕವೆನಿಸದ ಕೆಲವು ಸಂದಿಗ್ಧ ಸಂದರ್ಭಗಳಲ್ಲಿ ಮಾತ್ರ ಓಲೆ ಗರಿಗಳನ್ನು ನೋಡಿ ಸರಿ ಕಾಣಿಸಿದ ಪಾಠವನ್ನು ಆಯ್ದುಕೊಂಡಿದೆ. ಒಂದೆರಡು ಕಡೆಗಳಲ್ಲಿ ಹೊರತು ಈ ಸಂಗ್ರಹದಲ್ಲಿ

---

41. ಆದಿಪುರಾಣ ಸಂಗ್ರಹ (ಸಂ) ಎಲ್.ಗುಂಡಪ್ಪ, ಮೈ.ವಿ.ವಿ., 1954.

ಎಲ್ಲಾ ಪಾಠಾಂತರಗಳನ್ನು ಗುರುತಿಸಿಲ್ಲ. ಅಂಗೀಕೃತ ಪಾಠವನ್ನು ಮರು ಮುದ್ರಿಸಿದೆ.–[42] ಕೃತಿಯ ಸ್ವೀಕೃತ ಪಾಠವನ್ನು ಸಂಗ್ರಹಿಸುವುದರ ಜೊತೆಗೆ ಪಾಠ ಭೇದಗಳನ್ನು ಗಮನಿಸಲಾಗಿರುವ ಈ ಸಂಗ್ರಹದಲ್ಲಿ ಪಾಠಾಂತರಗಳನ್ನು ನೀಡಬೇಕಾಗಿತ್ತು. ಒಂದೆರಡು ಕಡೆ ಮಾತ್ರ ಪಾಠಾಂತರಗಳನ್ನು ಗುರುತಿಸಿದಂತೆ ಅದು ವ್ಯಾಪಕವಾಗಬೇಕಾದುದು ಅಪೇಕ್ಷಣೀಯವೆಂದು ಮಾತ್ರ ಇಲ್ಲಿ ಹೇಳಬೇಕಾಗಿದೆ.

1954 ರಲ್ಲಿ ಮೊದಲಿಗೆ ಪ್ರಕಟವಾದ ಈ ಸಂಗ್ರಹ ಆ ನಂತರ ಹಲವು ಮರು ಮುದ್ರಣಗಳನ್ನು ಕಂಡಿದೆ. ಈ ಮರು ಮುದ್ರಣಗಳೆಲ್ಲ ತರಗತಿಯ ಪಠ್ಯದ ಪ್ರತಿಗಳ ಅಗತ್ಯವನ್ನು ಪೂರೈಸುವ ಉದ್ದೇಶದಿಂದ ಆದವುಗಳಾಗಿದ್ದು ಮುದ್ರಣದಿಂದ ಮುದ್ರಣಕ್ಕೆ ಗಮನಾರ್ಹ ಬದಲಾವಣೆಗಳೇನೂ ಇಲ್ಲ. ಈ ಸಂಗ್ರಹದ ಹೆಮ್ಮೆಯ ಎರಡು ಕೋಡುಗಳೆಂದರೆ, ಆರಂಭದಲ್ಲಿ ಪೀಠಿಕೆ ಮತ್ತು ಕೊನೆಗೆ ಬಂದ ಟಿಪ್ಪಣಿಗಳು ಅರ್ಥಕೋಶಗಳು. ಯಾವುದೇ ಬಗೆಯ ಓದುಗನಿಗೂ ಉಪಯುಕ್ತವಾಗಬಲ್ಲ ವಿವರಗಳನ್ನು ಪೀಠಿಕೆಯಲ್ಲಿ ಚರ್ಚಿಸಲಾಗಿದೆ. ಟಿಪ್ಪಣಿಗಳು ಕೇವಲ ವಿಶಿಷ್ಟ ಪದ ಸೂಚಿಯ ಮಟ್ಟದ್ದಾಗದೆ, ಆ ಗುಣವನ್ನೂ ಉಳಿಸಿಕೊಂಡು ವಿವರಗಳನ್ನು ಒಳಗೊಂಡಿವೆ.

ಈ ಸಂಗ್ರಹವನ್ನು ಬಿಟ್ಟರೆ, 1953 ರಲ್ಲಿ ಪ್ರಕಟವಾದ 'ಭರತ — ಬಾಹುಬಲಿ' ಎಂಬ ಸಂಗ್ರಹವನ್ನು ಕುರಿತು ಇಲ್ಲಿ ಪ್ರಸ್ತಾಪಿಸಬೇಕು. ಇದರ ಸಂಗ್ರಾಹಕರು ಕೆ.ಎಂ.ಕೃಷ್ಣರಾವ್ ಮತ್ತು ಜಿ.ಬ್ರಹ್ಮಪ್ಪನವರು. ಇಂಥದೊಂದು ಸಂಗ್ರಹದ ಉದ್ದೇಶವನ್ನು ಕುರಿತು ಹೇಳುವ ಮಾತುಗಳು ಹೀಗಿವೆ: "ಪಂಪನ ಆದಿಪುರಾಣದಲ್ಲಿ ಆಕರ್ಷಣೀಯವಾದ ಪ್ರಕರಣ ಭರತ — ಬಾಹುಬಲಿಗಳ ಜೀವನ ಚಿತ್ರ. ಆ ವಿಸ್ತಾರವಾದ ಚಂಪೂ ಗ್ರಂಥದಲ್ಲಿ ಈ ಚಿತ್ರ ಅಲ್ಲಲ್ಲೇ ಚದುರಿಹೋಗಿದೆ. ಇದನ್ನು ಒಟ್ಟಿಗೆ ನೇರಿಸಿಕೊಟ್ಟರೆ ಚಿತ್ರದ ಕಳೆ ಹೆಚ್ಚು. ಕನ್ನಡಿಗರಿಗೆ ಇದರ ಸ್ವಾರಸ್ಯವನ್ನು ಸವಿಯಲು ಸುಲಭವಾಗುವುದೆಂಬ ಯೋಚನೆ ನಮಗೆ ಬಂದದ್ದರಿಂದ

---

42. ಆದಿಪುರಾಣ ಸಂಗ್ರಹ (ಸಂ) ಎಲ್.ಗುಂಡಪ್ಪ, ಮೈ.ವಿ.ವಿ., 1956. ಪು: xcvi.

ಈ ಕಾರ್ಯವನ್ನು ಕೈಗೊಂಡದ್ದಾಯಿತು" (ಮುನ್ನುಡಿ). ಇಂಥ ಮಾತುಗಳನ್ನು ಒಂದು ನೆಲೆಯಲ್ಲಿ ಒಪ್ಪಬಹುದಾದರೂ, ಒಂದು ಕೃತಿಯನ್ನು ಹೀಗೆ ನಿರ್ದಿಷ್ಟ ವಿವರಗಳನ್ನಾಧರಿಸಿ ಪ್ರತ್ಯೇಕಿಸಬಹುದಾದರೂ ಅದು ಎಷ್ಟು ಮಟ್ಟಿಗೆ ಸಮ್ಮತವೆಂಬ ಪ್ರಶ್ನೆಯೂ ನಮ್ಮನ್ನು ಕಾಡುವುದು ಸಹಜವಾಗಿಯೇ ಇದೆ. ಏಕೆಂದರೆ ಒಂದು ಒಳ್ಳೆಯ ಕೃತಿ ಹೀಗೆ ಬೇರೆ ಬೇರೆಯಾಗಿ ಒಡೆದಾಗಲೂ ತನ್ನ ಒಟ್ಟಂದವನ್ನು ಉಳಿಸಿಕೊಂಡೀತೆ ಅಥವಾ ಇಲ್ಲವೇ ಎಂಬುದು ಕೂಡ ಗಮನಿಸಬೇಕಾದ ಒಂದು ಸಂಗತಿಯಾಗಿದೆ.

ಒಟ್ಟಾರೆಯಾಗಿ ಇಂಥ ಸಂಗ್ರಹಿತ ಕೃತಿಗಳು ನಮ್ಮ ಪ್ರಾರಂಭದ ದಿನಗಳ ವಿಮರ್ಶೆಯ ಮೇಲೆ ತಮ್ಮದೇ ಆದ ಪ್ರಭಾವವನ್ನು ಬೀರಿವೆಯೆಂಬುದು ಸ್ಪಷ್ಟ. ಈ ಸಂಬಂಧದ ವಿವರಗಳನ್ನು ಮುಂದೆ ಚರ್ಚಿಸಲಿರುವುದರಿಂದ ಇಲ್ಲಿ ಪ್ರಸ್ತಾಪಿಸುವುದು ಅಗತ್ಯವಿಲ್ಲವೆಂದು ತೋರುತ್ತದೆ.

ಮೇಲಿನೆರಡು ಸಂಗ್ರಹಗಳನ್ನುಳಿದು, ಇತರ ಸಂಗ್ರಹಿತ ಕೃತಿಗಳು ಇಲ್ಲವೆನ್ನಬಹುದು. ಇನ್ನು ಮರು ಮುದ್ರಣಗಳ ವಿಷಯಕ್ಕೆ ಬಂದರೆ ವಿಕ್ರಮಾರ್ಜುನ ವಿಜಯಕ್ಕೆ ಬಂದ ಗದ್ಯಾನುವಾದದಂತೆಯೇ ಆದಿಪುರಾಣಕ್ಕೂ ಒಂದು ಗದ್ಯಾನುವಾದವನ್ನು ತರಲಾಗಿದೆ.[43] (ಈ ಗದ್ಯಾನುವಾದದ ಸಂಗತಿಯನ್ನು ಕುರಿತು ಪಂಪ ಭಾರತದ ಗದ್ಯಾನುವಾದ ಕೃತಿಯ ಸಂಬಂಧದ ಪ್ರಸ್ತಾಪದಲ್ಲೇ ಹೇಳಲಾಗಿದೆ.) ಗದ್ಯಾನುವಾದದ ಜೊತೆಗೆ ಆದಿಪುರಾಣದ ಇಡೀ ಪಾಠವನ್ನು ಪುನರ್ ಮುದ್ರಿಸಿದ್ದು, ಅದು ಇಲ್ಲಿ ನಮ್ಮ ಮುಖ್ಯ ಪ್ರಶ್ನೆಯಾಗಿದೆ. ಈ ಪ್ರಶ್ನೆ ಪಂಪ ಭಾರತದ ಗದ್ಯಾನುವಾದದೊಡನೆ ಬಂದ ಪುನರ್ ಮುದ್ರಣಕ್ಕಿಂತ ಬೇರೆಯದಾಗಿದೆ. ಏಂದರೆ ಅಲ್ಲಿನದು ಮೊದಲೇ ಇದ್ದ ಪರಿಷ್ಕೃತ ಪಾಠದ (ಬೆಳ್ಳಾವೆ) ತದ್ವತ್ ಮುದ್ರಣ. ಆ ಪಾಠದಿಂದ ವಿಶಿಷ್ಟ ರೂಪದ ಹಾನಿಯೇನೂ ಇಲ್ಲ. ಇಲ್ಲಿನದಾದರೆ ಬರಿಯ ಪುನರ್ ಮುದ್ರಣವಲ್ಲ. ಆ ಕೃತಿಯಲ್ಲೇ ಒಂದೆಡೆಗೆ ಸೂಚಿತವಾದಂತೆ, ಇದೂ ಒಂದು 'ಪರಿಷ್ಕರಣ'. ಈ ಅನುವಾದಗಳ ಅಗತ್ಯವನ್ನು ಕುರಿತಂತೆ ಹೇಳಲಾಗಿರುವ ಎರಡು ಕಾರಣಗಳಲ್ಲಿ ಒಂದು "ಪಠ್ಯಪುಸ್ತಕಗಳಾಗಿ

---

43. 1980 ರಲ್ಲಿ ಪರಿಷತ್ತಿನಿಂದ ಪ್ರಕಟಗೊಂಡಿದೆ.

ಈ ಪ್ರಾಚೀನ ಕಾವ್ಯಗಳನ್ನು ಇಷ್ಟಾಗ ಕಾಣಬರುವ ಮೂಲ ಗ್ರಂಥಗಳ ವಿಶೇಷ ಅಭಾವ" ಎಂದೇ ಈ ಅನುವಾದದೊಂದಿಗೆ ಆದಿಪುರಾಣದ ಪಾಠವನ್ನೂ ಕೊಡಲಾಗಿದೆ ಎಂದೇ ತಿಳಿಯೋಣ. ಹೀಗಿರುವಾಗಲೂ ಮೂಲ ಗ್ರಂಥಗಳ 'ವಿಶೇಷ ಅಭಾವ' ವನ್ನು ನೀಗಲು ಈಗಾಗಲೇ ಇರುವ ಒಂದು ಪರಿಷ್ಕರಣದ ಮರು ಮುದ್ರಣವಷ್ಟೇ ಸಾಕಾದೀತೆಂಬ ಮಾತು ಬೇರೆ. ಜೊತೆಗೆ, ಅನುವಾದವನ್ನು ಮಾಡುವಾಗಲೂ ಈಗಾಗಲೇ ಪ್ರಚಲಿತವಿರುವ ಪರಿಷ್ಕೃತ ಪಠ್ಯವೊಂದನ್ನು ಅಂಗೀಕರಿಸುವುದು ಸಹಜ. ಹಾಗಿಲ್ಲವಾದಲ್ಲಿ, ಸರಿಯೆಂದು ತೋರಿದ ಕಡೆಗಳಲ್ಲಿ ಸ್ವೀಕರಿಸಲಾಗದ ಪಾಠಗಳನ್ನು ಕುರಿತು ವಿವರಣ ಟಿಪ್ಪಣಿಗಳನ್ನು ನೀಡುವ ಅವಕಾಶವಿರುತ್ತದೆ. ಇದಾವ ಸಾಧ್ಯತೆಯೂ ಇಲ್ಲವಾದಾಗ ಏನಾಗಬಹುದೆಂಬುದಕ್ಕೆ ಪ್ರಸ್ತುತ ಪರಿಷ್ಕರಣ ಒಂದು ನಿದರ್ಶನವಾಗಿದೆ.

ಮೂಲತಃ ಈ ಕೃತಿಯ ಗದ್ಯಾನುವಾದಕರಾದ ಕೆ.ಎಲ್.ನರಸಿಂಹ ಶಾಸ್ತ್ರಿಗಳು ಇಲ್ಲಿನ ಅನುವಾದದಲ್ಲಿ ನೀಡಲಾಗಿರುವ ಪಾಠ ಯಾವ ಪರಿಷ್ಕರಣದ್ದೆಂದು ಹೇಳಿಲ್ಲ. ಈ ಅನುವಾದವನ್ನು ಪರಿಶೀಲಿಸಿ, ಇದನ್ನು ಮತ್ತೊಮ್ಮೆ ತಿದ್ದಿದ ರಂಗನಾಥ ಶರ್ಮರು ಹೇಳುವ ಮಾತುಗಳನ್ನಿಲ್ಲಿ ಗಮನಿಸಬಹುದು : "ಅನುವಾದವನ್ನು ಓದುತ್ತ ಹೋದಂತೆ ಬಹಳ ಕಡೆ ತಿದ್ದುಪಡಿ ಅವಶ್ಯವೆನಿಸಿತು. ಒಂದು ಪದ್ಯದ ಅನುವಾದದಲ್ಲಿ ಶಬ್ದವನ್ನು, ಇನ್ನೊಂದರಲ್ಲಿ ಶಬ್ದಾರ್ಥವನ್ನು, ಮತ್ತೊಂದರಲ್ಲಿ ವಾಕ್ಯವನ್ನು, ಮಗುದೊಂದರಲ್ಲಿ ವಾಕ್ಯಾರ್ಥವನ್ನು ತಿದ್ದಬೇಕಾಯಿತು.....ಹೀಗೆ ಆದಿಪುರಾಣದ ಅನುವಾದದಲ್ಲಿ ನಾನು ಕೈಯಾಡಿಸದ ಒಂದು ಪದ್ಯವಾಗಲಿ, ವಚನವಾಗಲಿ ಉಳಿಯಲಿಲ್ಲ ..... ಜೊತೆಗೆ ಆದಿಪುರಾಣದ ಮೂಲ ಪಾಠವನ್ನೂ ಪರಿಷ್ಕರಿಸಿದ್ದೇನೆ."[44] ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಈ ಅನುವಾದ ಗ್ರಂಥದಲ್ಲಿ ಇರುವ ಪಾಠ, ಈ ಮೊದಲೇ ಇದ್ದ ಪರಿಷ್ಕರಣವೊಂದರ ಪುನರ ಮುದ್ರಣವಲ್ಲ, ಅದೊಂದು 'ಪರಿಷ್ಕರಣ' ಎಂಬುದು. ಈ 'ಪರಿಷ್ಕರಣ'ವನ್ನು ಸಿದ್ಧಪಡಿಸಿದ ಬಗ್ಗೆ ಹೇಳುತ್ತಾ ರಂಗನಾಥ ಶರ್ಮರು "ಈ ಗ್ರಂಥದಲ್ಲಿ ಅನುವಾದಕ್ಕೆ ಮೂಲವಾಗಿ

---

44. ನೋಡಿ : 'ಪಂಪ ಮಹಾಕವಿ ವಿರಚಿತ ಆದಿಪುರಾಣ' (ಗದ್ಯಾನುವಾದ), ಬೆಂಗಳೂರು, 1980. ಪು : 43–44

ಆದಿಪುರಾಣದ ಪಾಠವನ್ನು ಗೊತ್ತುಪಡಿಸಿಕೊಳ್ಳಲು ಬಳಸಿಕೊಂಡಿರುವ ಮುದ್ರಿತ ಪ್ರತಿಗಳು ಮೂರು" ಎನ್ನುತ್ತಾರೆ. ಈ ಮೂರು 'ಮುದ್ರಿತ ಪ್ರತಿಗಳು' ಈ ಹಿಂದೆ ಪ್ರಸ್ತಾಪಿಸಿದ ಎನ್.ಜಿ.ಎನ್; ಕುಂದಣಗಾರ ಮತ್ತು ಎ.ಪಿ.ಚೌಗುಲೆ; ಎಲ್.ಬಸವರಾಜು ಅವರ 'ಪರಿಷ್ಕರಣ' ಗಳು ಎಂಬುದು ಗಮನಿಸಬೇಕಾದ ಮತ್ತೊಂದು ಅಂಶ.

ರಂಗನಾಥ ಶರ್ಮರು ಈ ಪರಿಷ್ಕರಣದ ಆಧಾರ ಸಾಮಗ್ರಿಯನ್ನು ಕುರಿತು ಹೇಳುವ ಮಾತುಗಳನ್ನು[45] ಗಮನಿಸೋಣ. "ಕೆ.ಎಲ್.ನರಸಿಂಹಶಾಸ್ತ್ರಿಗಳು ಇದನ್ನು ಅನುವಾದಿಸುವಾಗ ಅವರಿಗೆ ದೊರೆತವು ಮೊದಲೆರಡು ಪ್ರತಿಗಳು (ಎನ್.ಜಿ.ಎನ್. ಮತ್ತು ಕುಂದಣಗಾರರ ಪರಿಷ್ಕರಣಗಳು). ಮೂರನೆಯದು ಆಗ ಪ್ರಕಟವಾಗಿರಲಿಲ್ಲ. ನಾನು ಪರಿಷ್ಕರಿಸುವಾಗ ಡಾ|| ಎಲ್.ಬಸವರಾಜು ಅವರ ಗ್ರಂಥವನ್ನು ಬಳಸಿಕೊಂಡಿದ್ದೇನೆ. ಸೌಕರ್ಯಕ್ಕಾಗಿ ಇದನ್ನು 'ಬ' ಪ್ರತಿಯೆಂದು ವ್ಯವಹರಿಸಿದ್ದೇನೆ. ..... ಈ ಮೂರು ಪ್ರತಿಗಳಲ್ಲಿ ಪಾಠ ಶುದ್ಧಿಯ ದೃಷ್ಟಿಯಿಂದ. ಎನ್.ಜಿ.ಎನ್. ಅವರ ಪ್ರತಿಗಿಂತ ಕುಂದಣಗಾರರ ಪ್ರತಿ ಉತ್ತಮ, ಡಾ|| ಎಲ್.ಬಸವರಾಜು ಅವರು ಸಂಪಾದಿಸಿದ 'ಬ' ಪ್ರತಿ ಸರ್ವೋತ್ತಮ. ..... ಅವರ ಶ್ರಮ ಅಪಾರವಾದದ್ದು. ಕನ್ನಡ ವಿದ್ವಲ್ಲೋಕವು ಡಾ|| ಎಲ್.ಬಸವರಾಜು ಅವರಿಗೆ ಚಿರಋಣಿಯಾಗಿದೆ. ನಮ್ಮ ಪ್ರಸ್ತುತ ಗ್ರಂಥದಲ್ಲಿ ಮೂಲ ಪಾಠದ ಶೋಧನಕ್ಕೆ ಮತ್ತು ಅನುವಾದದ ಪರಿಷ್ಕರಣಕ್ಕೆ ಅವರ ಗ್ರಂಥದಿಂದ ತುಂಬ ಸಹಾಯವಾಗಿದೆ." ಹೀಗೆನ್ನುವ ಅವರು ಮುಂದೆ ತದ್ವಿರುದ್ಧವಾದ ಮಾತುಗಳನ್ನಾಡುತ್ತಾರೆ : "ಈ ಗ್ರಂಥದಲ್ಲಿ ಶ್ರೀ ಎನ್.ಜಿ.ನರಸಿಂಹಾಚಾರ್ಯರ ಪರಿಷ್ಕರಣವನ್ನು ಮೂಲವಾಗಿ ಇಟ್ಟುಕೊಳ್ಳಲಾಗಿದೆ. ಅದರಲ್ಲಿ ದೋಷವು ಗೋಚರಿಸಿದರೆ ಶ್ರೀ ಕುಂದಣಗಾರರ ಪ್ರತಿಯಿಂದಲೂ, ಅದೂ ತೃಪ್ತಿಕರವಾಗದಿದ್ದಾಗ ಡಾ|| ಎಲ್.ಬಸವರಾಜು ಅವರ ಪ್ರತಿಯಿಂದಲೂ ಆರಿಸಿಕೊಳ್ಳಲಾಯಿತು." ಈ ಮಾತುಗಳು ತೀರ ವಿಚಿತ್ರವಾಗಿ ಕಾಣುತ್ತವೆ. ಏಕೆಂದರೆ ಈ ಮಾತುಗಳಲ್ಲಿ ಒಂದು ಪರಿಷ್ಕರಣಕ್ಕಿಂತ ಮತ್ತೊಂದು ಉತ್ತಮ ಎನ್ನುವಾಗ ಅದಕ್ಕಿರುವ ಮಾನದಂಡವೇನೆಂಬುದು

---

45. ನೋಡಿ : ಅದೇ, ಪು : 44-45

ತಿಳಿಯುವಂತಿಲ್ಲ. 'ಸರ್ವೋತ್ತಮ' ವೆಂದು ಕರೆಯುವ ಬಸವರಾಜು ಪರಿಷ್ಕರಣದ ಪಾಠವನ್ನೇ ಏಕೆ ಬಳಸಲಿಲ್ಲ? ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಸರ್ವೋತ್ತಮವೆಂದು ಕರೆದು ಅದನ್ನು ಇಡಿಯಾಗಿ ಅನುಸರಿಸದಿದ್ದರೂ ಆ ಪರಿಷ್ಕರಣದ ಕೆಲವು ಮಹತ್ವದ ತಿದ್ದುಪಡಿಗಳನ್ನಾದರೂ ಅನುಸರಿಸಬೇಕಾದ ಅಗತ್ಯವಿತ್ತು. ಇದಾವುದೂ ಇಲ್ಲದ ಈ ಪಾಠವನ್ನು ಒಂದು ಬಗೆಯ ವಿಚಿತ್ರ ಪರಿಷ್ಕರಣವೆಂದು ಕರೆಯಬಹುದು. ಇದುವರೆಗಿನ ಮೂರೂ ಪರಿಷ್ಕರಣಗಳನ್ನು ಹಸ್ತಪ್ರತಿಗಳಂತೆ ಬಗೆಯಲಾಗಿದೆ ಮತ್ತು ಬಳಸಲಾಗಿದೆ. ಒಂದು ಸರಿದೋರದಿರುವಾಗ ಮತ್ತೊಂದು, ಮತ್ತೊಂದು ಸರಿದೋರದಿರುವಾಗ ಮಗುದೊಂದು ಎಂಬ ಈ ಪರಿಷ್ಕಾರಕರ ವಿಚಿತ್ರ ತತ್ವದ ಫಲವಾಗಿ ಇದೊಂದು ಮಿಶ್ರ ಹಸ್ತಪ್ರತಿಯ ಸ್ವರೂಪವನ್ನು ಪಡೆದ ಪಾಠವಾಗಿದೆ ಎನ್ನಬಹುದು. ಮತ್ತು ಇದು ಒಂದು ಕವಿ ಕೃತಿಯನ್ನು ಕುರಿತಂತೆ ನಡೆಯುವ ಕೆಲಸದಲ್ಲಿ 'ಮುನ್ನಡೆ'ಯ ಸ್ವರೂಪದ್ದಾಗಿರದೆ, 'ಹಿನ್ನಡೆ'ಯ ಸ್ವರೂಪದ್ದಾಗಿದೆಯೆಂಬುದು ಅತ್ಯಂತ ಸ್ಪಷ್ಟವಾಗಿ ಕಾಣುವ ವಿಚಾರವಾಗಿದೆ.

## 2.5 ಪರಿಷ್ಕರಣ ಕಾರ್ಯದ ಮುಂದಿನ ಸಾಧ್ಯತೆಗಳು

ಈ ವರೆಗಿನ ಒಟ್ಟು ಚರ್ಚೆಯಲ್ಲಿ ಸೂಚಿತವಾದಂತೆ, ಈಗ್ಗೆ ಪಂಪನ ಎರಡೂ ಕಾವ್ಯಗಳ ಅಧಿಕೃತವಾದ, ಮತ್ತು ಸದ್ಯಕ್ಕೆ ಹೇಳುವುದಾದರೆ ಇತ್ತೀಚಿನ ಪರಿಷ್ಕರಣಗಳೆಂದರೆ : ವಿಕ್ರಮಾರ್ಜುನ ವಿಜಯಕ್ಕೆ ಸಂಬಂಧಿಸಿದಂತೆ ಬೆಳ್ಳಾವೆಯವರ ಪರಿಷ್ಕರಣ; ಆದಿಪುರಾಣಕ್ಕೆ ಸಂಬಂಧಿಸಿದಂತೆ ಎಲ್. ಬಸವರಾಜು ಅವರ ಪರಿಷ್ಕರಣ. ಎಂದರೆ ಇವೆರಡು ಪರಿಷ್ಕರಣಗಳೂ ಪರಿಪೂರ್ಣವೆಂದಾಗಲಿ, ಈ ದಿಸೆಯಲ್ಲಿ ನಡೆಯಬೇಕಾದ ಕಾರ್ಯದ ಮುಕ್ತಾಯವಾಗಿದೆ ಎಂದಾಗಲಿ ಈ ಮಾತಿನ ಅರ್ಥವಲ್ಲ. ಬದಲಾಗಿ ಈ ಎರಡೂ ಪರಿಷ್ಕರಣಗಳು ಅಂಥ ಪರಿಷ್ಕರಣಗಳು ಬರುವ ಮೊದಲು ಇದ್ದ ಪರಿಷ್ಕರಣಗಳಿಗಿಂತ ಅನೇಕಾಂಶಗಳಲ್ಲಿ ಮುಂದುವರೆದಿವೆ, ಮತ್ತು ಸ್ವರೂಪ ದೃಷ್ಟಿಯಿಂದ ವಿಶಿಷ್ಟವಾಗಿವೆಯೆಂದು ಈ ಮಾತಿನ ಅರ್ಥ. ಹಾಗೆ ನೋಡಿದರೆ ಬೆಳ್ಳಾವೆಯವರ ಪರಿಷ್ಕರಣ ಸಂಖ್ಯೆಯ

ದೃಷ್ಟಿಯಿಂದ ಎರಡನೆಯದಾದರೂ ಅದು ರೈಸ ಪರಿಷ್ಕರಣದ ಪರಿಷ್ಕಾರ ರೂಪದ್ದಾಗಿರುವುದರಿಂದಲೂ, ರೈಸ ಪರಿಷ್ಕರಣ ಹಲವು ಅಸ್ಪಷ್ಟತೆ, ಅರಕೆಗಳಿಂದ ಅಪರಿಪೂರ್ಣವಾಗಿರುವುದರಿಂದಲೂ — ಇದು ಈ ಪರಿಷ್ಕರಣದ ಮಿತಿಯೇ ಹೊರತು ಆರೋಪವಲ್ಲವೆಂಬುದನ್ನು ಈ ಹಿಂದಿನ ಚರ್ಚೆಗಳಿಂದ ತಿಳಿಯಬಹುದು — ವಿಕ್ರಮಾರ್ಜುನ ವಿಜಯಕ್ಕಿರುವ ಒಂದೇ ಅಧಿಕೃತ ಪರಿಷ್ಕರಣ ಎಂದರೆ ತಪ್ಪಾಗಲಾರದು. ಎಲ್.ಬಸವರಾಜು ಅವರ ಆದಿಪುರಾಣದ ಪರಿಷ್ಕರಣ ಒಂದು ವಿಶಿಷ್ಟ ಮಾದರಿಯದು. ಕೇವಲ 'ಸಂಪಾದನೆ'ಯ ಕೆಲಸವಾಗಿ ಮುಗಿಯಬಹುದಾಗಿದ್ದ ಈ ಪರಿಷ್ಕರಣ, ಅದನ್ನು ಮೀರಿ ಹಲವು ಆಯಾಮಗಳನ್ನು ಒಳಗೊಂಡಿದೆ. ಈ ಪರಿಷ್ಕರಣ ಆದಿಪುರಾಣದ ಹಲವು ಪ್ರಕ್ಷಿಪ್ತ ಭಾಗಗಳನ್ನು ಮೊದಲಿಗೆ ಗುರುತಿಸಿದೆ. ಇಂಥವೆಲ್ಲ ಮತ್ತೆ ಮತ್ತೆ ಚರ್ಚೆಗೆ ಒಳಗಾಗಬೇಕಾದ, ಆ ನಿಟ್ಟಿನಲ್ಲಿ ಫಲಪ್ರದ ನಿರ್ಣಯಗಳತ್ತ ನಡೆಯಬೇಕಾದ ಸಂಗತಿಗಳು. ಈ ಪ್ರಕ್ಷಿಪ್ತಗಳಲ್ಲಿ ಪಂಪ ಭಾರತದ ಪದ್ಯಗಳೂ ನುಸುಳಿಕೊಂಡಿರುವುದನ್ನು ಈ ಪರಿಷ್ಕರಣದಲ್ಲಿ ಗುರುತಿಸಲಾಗಿದೆ. ಇನ್ನೂ ಇರಬಹುದಾದ ಸಾಧ್ಯತೆಗಳನ್ನು ನಿರಾಕರಿಸಲಾಗದು. ಇದೇ ರೀತಿ ಆದಿಪುರಾಣದ ಪದ್ಯಗಳು, ಪದ್ಯ ಭಾಗಗಳು ವಿಕ್ರಮಾರ್ಜುನ ವಿಜಯಕ್ಕೂ ಬಂದು ಸೇರಿರಬಹುದಾದ ಸಾಧ್ಯತೆಗಳೂ ಇವೆ. ಎಂದರೆ ಆದಿಪುರಾಣದಲ್ಲಿದ್ದುದು ಏನೇ ವಿಕ್ರಮಾರ್ಜುನ ವಿಜಯದಲ್ಲಿದ್ದರೂ ಅದೆಲ್ಲ ಆದಿಪುರಾಣದ್ದೆಂದಾಗಲಿ; ವಿಕ್ರಮಾರ್ಜುನ ವಿಜಯದ್ದು ಏನೇ ಆದಿಪುರಾಣದಲ್ಲಿದ್ದರೂ ಅದೆಲ್ಲ ವಿಕ್ರಮಾರ್ಜುನ ವಿಜಯದ್ದೇ ಎಂದಾಗಲಿ ಅಲ್ಲ. ಉದಾ:— "ಜಲಧಿ ತರಂಗ ತಾಟಿತ ಧರಾತಳ .........." (ಆ.ಪು. 4—84) "ಉದಧಿ ತರಂಗ ತಾಟಿತ ಧರಾತಳ .........." (ವಿ.ವಿ. 13—6) ಇಂಥ ಕೆಲವು ಪದಪುಂಜಗಳಾಗಲಿ, ವಾಕ್ಯಗಳಾಗಲಿ ಎರಡೂ ಕೃತಿಗಳಲ್ಲಿ ದೊರೆಯುತ್ತವೆಯಾದರೂ ಆಯಾ ಸಂದರ್ಭದ ಭಾವಕೋಶಕ್ಕೆ ಅನನ್ಯವೆಂಬಂತಿರುತ್ತವೆ. ಬಹುಶಃ ಪಂಪನಿಗೆ ಒಂದು ಕೃತಿಯನ್ನು ಬರೆಯುವಾಗ ಮತ್ತೊಂದರ ಪ್ರಯೋಗ ಹೊಳೆದಿರಬಹುದು; ಸರಿಯೆಂದು ತೋರಿದ್ದನ್ನು ಮಾರ್ಪಡಿಸಿರಬಹುದು. ಇದು ಸಹಜವಾದುದೇ ಆಗಿದೆ. (ಇಂಥ ಮಾರ್ಪಾಟಿನ ಸಾಧ್ಯತೆಯನ್ನು ಕುರಿತು ಡಿ.ಎಲ್.ಎನ್. ಅವರ ಊಹೆಯೊಂದನ್ನು ಈ [illegible] ಅಧ್ಯಾಯದ ಮೊದಲಲ್ಲೇ ಗಮನಿಸಲಾಗಿದೆ.) ಆದರೆ ಒಂದು ಕೃತಿಯ

ಪ್ರಯೋಗ ಮತ್ತೊಂದರಲ್ಲಿ ಬಂದಾಗ ಅದು ಅನಗತ್ಯವಾಗಿ ತುರುಕಲಾಗಿದೆ ಅನ್ನಿಸುವಂಥ ಮಾರ್ಪಾಟುಗಳನ್ನು, ಸೇರ್ಪಡೆಗಳನ್ನು ಕವಿಯೇ ಸ್ವತಃ ಮಾಡಲಾರ. ಇಂಥದೊಂದು ಸಾಧ್ಯತೆಯನ್ನು ಪಂಪ ಭಾರತದಿಂದ ತೋರಿಸಬಹುದಾಗಿದೆ. ಈ ಪದ್ಯವನ್ನು ನೋಡೋಣ :—

"ಒಡನಳುರೆ ಕಿರ್ಚು ತೋಳಿಂ।
ಸಡಿಲಿಸದಾ ಪ್ರಾಣವಲ್ಲಭರ ಪ್ರಾಣಮನಂ॥
ಡೊಡಗಳೆದರೋಪರೋಪರೊ।
ಕೆಡದ ಸಾಂಯುಲ ಪಡೆದರಿನ್ನವಂ ಸಂತೋಳ್ವವೇ॥"

(ಬೆಳ್ಕಾವೆ : 5—93)

ಈ ಪದ್ಯದ ಮೊದಲ ಸಾಲಿನಲ್ಲಿ 'ಒಡನಳುರೆ ಕಿರ್ಚು' ಎಂಬುದರ ಬದಲು 'ಬಿಡದೆ ಪೊಗೆ ಸುತ್ತೆ' ಎಂದಿರುವುದನ್ನು ಬಿಟ್ಟರೆ ಇಡೀ ಪದ್ಯ ಆದಿಪುರಾಣದಲ್ಲೂ ಬರುತ್ತದೆ. ಪಂಪನ ಈ ಪದ್ಯ ಬಹು ಜನಪ್ರಿಯವಾದುದು. ಆದಿಪುರಾಣದಲ್ಲಿ ಶ್ರೀಮತಿ ವಜ್ರಜಂಘರು "ಅನ್ಯೋನ್ಯಾಂಗ ಸ್ಪರ್ಶನಸುಖ ನಿಮೀಲಿತ ವಿಲೋಚನರಂತಂತೆ ನಿದ್ರಾರಸವಶಗತ"ರಾಗಿದ್ದಾಗ ಕೇಶ ಸಂಸ್ಕಾರಕ್ಕಾಗಿ ಹಾಕಿದ್ದ ಧೂಪ ಕಾಳಾಗರುವಿನಿಂದ (ಗವಾಕ್ಷ ಜಾಲ ಕವಾಟಗಳನ್ನು ತೆರೆಯದಿದ್ದುದರಿಂದಾಗಿ) ಪ್ರಾಣ ಬಿಟ್ಟರು ಎಂಬ ಇಡೀ ಸಂದರ್ಭದ ಭಾವಕೋಶದ ಒಂದು ಮುಖ್ಯ ಪದ್ಯವಾಗಿ ಬಂದಿದೆ. ಈ ಪದ್ಯ ಅಥವಾ ಈ ಪದ್ಯದ ಭಾವ ಅಲ್ಲಿಲ್ಲವಾದರೆ, ಅಥವಾ ಹೊರತುಪಡಿಸಿ ನೋಡಿದರೆ ಇಡೀ ಪ್ರಸಂಗವೇ ಒಂದು ರೀತಿಯಲ್ಲಿ ಊನವಾದಂತೆ ತೋರುತ್ತದೆ. ಆದರೆ ಪಂಪ ಭಾರತದಲ್ಲಿ ಈ ಪದ್ಯ ಬರುವ ಸಂದರ್ಭದ ಹಿನ್ನೆಲೆಯಲ್ಲಿ ನೋಡಿದರೆ, ಈ ಸಂದರ್ಭಕ್ಕೆ ಈ ಪದ್ಯವಿಲ್ಲದಿದ್ದರೂ (ಅದೆಷ್ಟೇ ಸುಂದರವಿರಲಿ) ನಡೆಯುತ್ತದೆ ಅನ್ನಿಸುತ್ತದೆ. ಖಾಂಡವವನ ದಹನದ ಸಂದರ್ಭದಲ್ಲಿ ಬರುವ ವಿವರಗಳ ಮಧ್ಯೆ ಈ ಪದ್ಯ ಬಂದ ತಕ್ಷಣ, ಏನೋ ಧುತ್ತೆಂದು ಬಂದಂತೆ ಭಾಸವಾಗುತ್ತದೆ. ಈ ಪದ್ಯದ ಭಾವಕ್ಕೆ ಪೂರಕವಾದ ಒಂದು ಸೂಚನೆ ಕೂಡ ಈ ಇಡೀ ಸಂದರ್ಭದ ವಿವರಗಳಲ್ಲಿ ಇದ್ದಂತೆ

ತೋರುವುದಿಲ್ಲ. ಡಿ.ಎಲ್.ಎನ್. ಅವರು ಎರಡೂ ಕಡೆ ಬರುವ ಈ ಪದ್ಯವನ್ನು ಕುರಿತು ಬರೆಯುತ್ತಾ "ಈ ಪದ್ಯ ಪಂಪನಿಗೆ ತುಂಬ ಮೆಚ್ಚಾದದ್ದು" ಎಂದಿದ್ದಾರೆ.[46] ಬಹುಶಃ ಪಂಪ ಅಂಥ ಸುಂದರ ಭಾವವುಳ್ಳ ಪದ್ಯವನ್ನು ಇಲ್ಲಿಗೂ ತಂದಿರಲಾರ. ಹಾಗೆ ತರುವುದಿದ್ದರೆ ಅದಕ್ಕೆ ಪೂರಕವಾದುದನ್ನು ನಿರ್ಮಿಸುತ್ತಿದ್ದನೆಂದು ತೋರುತ್ತದೆ. ಪಂಪನ ಎರಡೂ ಕಾವ್ಯಗಳನ್ನು ಚೆನ್ನಾಗಿ ಓದಿಕೊಂಡಿದ್ದ ಲಿಪಿಕಾರನೋ ಏನೋ (ಅವನಿಗೆ ಈ ಪದ್ಯದ ಭಾವ ತುಂಬ ಮೆಚ್ಚುಗೆಯಾಗಿರಬಹುದು) ಈ ಪದ್ಯವನ್ನೂ ಮತ್ತು ಈ ಪದ್ಯವ ಅನುಸರಿಸಿ ಬರುವ "ಮತ್ತಮಲ್ಲಿ ಕೆಲವು ಲತಾಗೃಹಂಗಳೊಳಂ ಧಾರಾಗೃಹಂಗಳೊಳಂ" ಎಂಬ ವಚನ ಭಾಗವನ್ನೂ ಪಂಪಭಾರತಕ್ಕೆ ಸೇರಿಸಿರುವ ಸಾಧ್ಯತೆಯಿದೆ. ಇದು ಈ ಪದ್ಯದ ಸಂದರ್ಭವನ್ನಷ್ಟೆ ಆಧರಿಸಿ ಮಾಡಿದ ಊಹೆ ಮಾತ್ರವೇ ಹೊರತು ನಿರ್ಧಾರವಾಗಲಿ, ಕೊನೆಯ ಮಾತಾಗಲಿ ಅಲ್ಲ. ಇಂಥ ಹಲವು ಅಂಶಗಳು ಮುಂದೆ ಈ ನಿಟ್ಟಿನಲ್ಲಿ ನಡೆಯುವ ಚರ್ಚೆಗಳಿಂದ, ಪರಿಷ್ಕರಣಗಳಿಂದ, ಹೊಸ ಸಾಮಗ್ರಿಗಳಿಂದ ಖಚಿತವಾಗಬೇಕಿದೆ.

ಇಲ್ಲಿ ಮತ್ತೊಂದು ಮುಖ್ಯವಾದ ಅಂಶವನ್ನು ಸೂಚಿಸಬೇಕಾಗಿದೆ. ಪಂಪನ ವಿಕ್ರಮಾರ್ಜುನ ವಿಜಯ ಮತ್ತು ಆದಿಪುರಾಣಗಳ ಕೆಲವು ಪದ್ಯಗಳು ಸೂಕ್ತಿ ಸುಧಾರ್ಣವ, ಕಾವ್ಯ ಸಾರದಂತಹ ಸಂಕಲನ ಗ್ರಂಥಗಳಲ್ಲಿ ಸೇರಿರುವುದನ್ನು ಗಮನಿಸಬಹುದು. ಹೀಗೆ ದೊರೆಯುವ ಪದ್ಯಗಳು ಕೆಲವೇ ಆದರೂ ಅವುಗಳನ್ನು ಅಗತ್ಯವಾಗಿ ನಮ್ಮ ಪರಿಷ್ಕರಣಗಳಲ್ಲಿ, ಪಾಠ ಚರ್ಚೆಗಳಲ್ಲಿ ಬಳಸಬೇಕಾಗಿದೆ. ಹೀಗೆ ಬಳಸುವುದರಿಂದ ಆ ಪದ್ಯಗಳ ಮೂಲ ಪಾಠವನ್ನು ಪುನಾರಚಿಸಬಹುದೆಂದಾಗಲಿ, ಅಲ್ಲಿ ದೊರೆಯಬಹುದಾದ ಪದ್ಯಗಳ ಸಂಬಂಧದಲ್ಲಿರುವ ಸಮಸ್ಯೆಗಳೆಲ್ಲ ಬಗೆಹರಿಯುತ್ತವೆಂದಾಗಲಿ ಅಲ್ಲ. ಇದರಿಂದ ಆ ಮೂಲಗಳಲ್ಲಿ ದೊರೆಯುವ ಪದ್ಯಗಳು, ಮತ್ತು ಆ ಪದ್ಯಗಳಿಗೇ ಇರುವ ಪಾಠ ಭೇದಗಳು ಹೀಗೆ ಹಲವು ಪಾಠ ಬೇದಗಳಂತೂ ದೊರೆಯುತ್ತವೆ. ಇಷ್ಟಕ್ಕೂ ನಾವು ಪಾಠಾಂತರಗಳನ್ನಾಧರಿಸಿ ಮೂಲ ಪಾಠವನ್ನು ಕಂಡುಹಿಡಿಯುತ್ತೇವೆನ್ನುವುದು ಒಂದು ಆದರ್ಶವಾಗಿ ಉಳಿದು ಬಿಡುತ್ತದೆ. ಹೀಗಾಗಿ ನಮಗಿಂದು ಪಾಠಾಂತರಗಳು ಬೇಕಿರುವುದು

---

46. ಪಂಪ ಭಾರತ ದೀಪಿಕೆ, ಮೈಸೂರು, 1971. ಪು: 210

ಕವಿ ಪಾಠದ ಪರಿಷ್ಕರಣಕ್ಕೆ ಮಾತ್ರವಲ್ಲ; ಬದಲಾಗಿ, ಕವಿ ಪಾಠವನ್ನು ಕುರಿತಂತೆ ಕಾಲದಿಂದ ಕಾಲಕ್ಕೆ ಬಂದ ಪ್ರತಿಕ್ರಿಯೆಗಳು ಎನ್ನುವ ಕಾರಣಕ್ಕಾಗಿ. ಆದಿಪುರಾಣದ ಒಂದು ಪದ್ಯವನ್ನು ಗಮನಿಸೋಣ :—

"ಇದು ಸುಖದೊಂದು ಪುಂಜಮಿದು ಪುಣ್ಯದ ಪಿಂಡಮಿದಂಗಜಂಗೆ ಬಾ
ಳ್ಮೊದಲಿದು ಚಿತ್ತಜಂಗೆ ಕುಲದೈವಮಿ<u>ದಂಗಜ</u> ಚಕ್ರವರ್ತಿಗೆ
ತ್ತಿದ <u>ಪೊಸ ಛತ್ರಮಿಂ</u>ತಿದು ಮನೋಜನ ಕೈಪಿಡಿಯೆಂದು <u>ಮಾಣಿನ್ನಾ</u>
ಸುದತಿಯ ರೂಪನಿಂ ಪೆಱತನೆಂದೊಡೆ ಕಃ ಕರಮುಗ್ಗನಾಗನೇ?"

ಇದು ಸೂಕ್ತಿ ಸುಧಾರ್ಣವದಲ್ಲಿ ದೊರೆಯುವ ಆದಿಪುರಾಣದ ಪದ್ಯ. 'ವಿವಾಹ ವರ್ಣನಂ' ಎಂಬ ಭಾಗದ 45ನೇ ಪದ್ಯವಾಗಿ ಬಂದಿದೆ. ಇದೇ ಪದ್ಯ 'ಕಾವ್ಯಾವಲೋಕನ'ದಲ್ಲೂ ಬರುತ್ತದೆ. ಸೂಕ್ತಿ ಸುಧಾರ್ಣವದಲ್ಲಿ ಈ ಪದ್ಯಕ್ಕೆ ಮೂರು ಪಾಠ ಭೇದಗಳು ಸೂಚಿತವಾಗಿವೆ: ಅಂಗಜ—ದುಸ್ವರ; ಪೊಸ ಛತ್ರ—ಪೊಸಮಟ್ಟ; ಮಾಣಿನ್ನಾ—ಕಾಣ್ಬುದೀ. ಎಲ್. ಬಸವರಾಜು ಅವರು ತಮ್ಮ ಪರಿಷ್ಕರಣದಲ್ಲಿ ಕಾವ್ಯಾವಲೋಕನದ ಪದ್ಯದ ಪಾಠಾಂತರಗಳಾಗಿ 'ಮಂತದು' (ಮೂರನೇ ಸಾಲಿನ 'ಪೊಸಮಟ್ಟಮಲ್ತದು' ಎಂಬಲ್ಲಿ 'ಮಲ್ತದು' ಎಂಬುದಕ್ಕೆ 'ಮಂತದು' ಎಂಬ ಪಾಠವನ್ನು ಮಾತ್ರ ತೋರಿಸಿದ್ದಾರೆ. 'ಪೊಸ ಛತ್ರ' ಎಂಬ ಪಾಠಾಂತರವನ್ನು ತೋರಿಸಿಲ್ಲ.) 'ಮಾಣ್ಬನಾ' ಎಂಬೆರಡನ್ನು ತೋರಿಸುತ್ತಾರೆ. ಮಾಣ್ಬನಾ ಎಂಬುದು ಸೂಕ್ತಿ ಸುಧಾರ್ಣವದ ಪದ್ಯದಲ್ಲಿ 'ಮಾಣಿನ್ನಾ' ಎಂದಿದೆ. ಇದಲ್ಲದೆ ನಮ್ಮ ಆದಿಪುರಾಣದ ಇದುವರೆಗಿನ ಪರಿಷ್ಕರಣಗಳಲ್ಲಿ ಈ ಪದ್ಯದಲ್ಲಿ "ಅದು ಸುಖದೊಂದು ಪುಂಜಮದು ....." ಎಂಬಂತೆ 'ಅದು, ಅದು' ಎಂದು ಪುನರಾವರ್ತಿತವಾದರೆ ಮೇಲೆ ಉದ್ಧರಿಸಿದ ಪದ್ಯದಲ್ಲಿ 'ಇದು ಸುಖದೊಂದು .....' ಎಂಬಂತೆ 'ಇದು, ಇದು' ಎಂದು ಬೇರೆಯಾಗಿದೆ. ಈ ಪದ್ಯದಲ್ಲಿ ಕಾಣಬರುವ ಭಿನ್ನತೆಗಳು ಖಂಡಿತವಾಗಿಯೂ ಅನುದ್ದೇಶಿತವಾಗಿರಲು ಸಾಧ್ಯವಿಲ್ಲ. ಉದ್ದೇಶಿತವಾದ ತಿದ್ದುಪಡಿಗಳೇ ಇವಾಗಿವೆ. ತಿದ್ದುಪಡಿಗೆ ಕೈ ಹಾಕಿದ ಓದುಗನ ಗ್ರಹಿಕೆ ಎಂಥದೇ ಆಗಿರಲಿ, ಮುಖ್ಯವಾಗಿ ನಾವಿಲ್ಲಿ ಗಮನಿಸಬೇಕಾದ ಅಂಶ, ಇಂಥ ಪಾಠ ಭಿನ್ನತೆಗಳು ನಿರ್ದಿಷ್ಟ ಓದುಗನ (ಕನಿಷ್ಠ ಉದ್ದೇಶಿತವಾದ ತಿದ್ದುಪಡಿಗಳು)

ಪ್ರತಿಕ್ರಿಯೆಗಳ ಫಲಗಳಾಗಿರಬಹುದೇ? ಹಾಗಿದ್ದರೆ ಅದೆಂಥ ಸ್ವರೂಪದ್ದು? ಎಂಬುದು ಮಾತ್ರ ಎಂದು ತೋರುತ್ತದೆ.

ಮೇಲೆ ಪ್ರಸ್ತಾಪಿಸಿದ ಮೂಲಗಳಲ್ಲಿ ದೊರೆಯುವ ಪಂಪ ಭಾರತದ ಪದ್ಯಗಳನ್ನು ಇದುವರೆಗೆ ನಡೆದ ಎರಡು ಪರಿಷ್ಕರಣಗಳಲ್ಲಿ ಬಳಸಲಾಗಿಲ್ಲ. ನಮಗೆ ಪರಿಚಿತವಿರುವ ಪಾಠಕ್ಕಿಂತ ಕೊಂಚವಾದರೂ ಭಿನ್ನತೆಗಳನ್ನುಳ್ಳ ಇಂಥ ಪದ್ಯಗಳನ್ನು, ಈ ಪದ್ಯಗಳಿಗೆ ದೊರೆಯುತ್ತಿರುವ ಪಾಠಾಂತರಗಳನ್ನು ಪರಿಷ್ಕರಣ ಕಾರ್ಯದಲ್ಲಿ ಒಳಗು ಮಾಡಿಕೊಳ್ಳಬೇಕಾಗಿದೆ. ಬಸವರಾಜು ಅವರು ಆದಿಪುರಾಣದಲ್ಲಿ ಈ ಮೂಲಗಳನ್ನೆಲ್ಲ ಗಮನಿಸಿದರಾದರೂ ಇತರೆಡೆಗಳಲ್ಲಿ ಮಾಡಿದಂತೆ ಇಲ್ಲಿ ಕೂಡ ಕೆಲವು ಪಾಠಾಂತರಗಳನ್ನು ಸೂಚಿಸಿದರು, ಮತ್ತೆ ಕೆಲವನ್ನು ಕೈ ಬಿಟ್ಟರು. ಹೀಗಾಗುವಾಗ ಕೆಲವು ಮುಖ್ಯವಾದ ಪಾಠಾಂತರಗಳೇ ಮರೆಯಾಗಿವೆ ಎಂಬುದು ಕೂಡ ಗಮನಿಸಬೇಕಾದ ಅಂಶ. ಇಂಥ ಸಾಧ್ಯತೆಗಳನ್ನು ಈ ನಿಟ್ಟಿನಲ್ಲಿ ಮುಂದೆ ನಡೆಯುವ ಕೆಲಸಗಳಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾದ ಅಗತ್ಯವಿದೆ.

## ಅಧ್ಯಾಯ : ಮೂರು

## ಪಂಪನನ್ನು ಕುರಿತ ಅಧ್ಯಯನಗಳಲ್ಲಿ ಸಂಶೋಧನೆಯ ನೆಲೆಗಳು

## 3.1 ಸಂಶೋಧನೆ : ಗ್ರಹಿಕೆ– ವ್ಯಾಪ್ತಿ

ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯವನ್ನು ಕುರಿತಂತೆ ನಡೆದಿರುವ ಅಧ್ಯಯನಗಳನ್ನು ಗಮನಿಸಿದರೆ, ಅವುಗಳಲ್ಲಿ ಸಂಶೋಧನೆ ಎಂಬುದೊಂದು ಭಾಗವನ್ನು ಸ್ಪಷ್ಟವಾಗಿ ಬಿಡಿಸಿ ತೋರಿಸಲು ಸಾಧ್ಯವಿದೆ.[1] ಹೀಗೆ ಬಿಡಿಸಿ ತೋರಿಸಬಹುದಾದ ಬರಹಗಳೆಲ್ಲವೂ ಮುಖ್ಯವಾಗಿ ಕವಿಯೊಬ್ಬನ ಕಾಲ–ದೇಶ–ಮತ–ಕೃತಿ ಇಲ್ಲವೇ ಕೃತಿಯ ಕರ್ತೃ–ಇಂಥ ಪ್ರಶ್ನೆಗಳಲ್ಲಿ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿವೆ ಮತ್ತು ಅವೆಲ್ಲ ಪ್ರಧಾನವಾಗಿ ಪುನಾರಚನೆಯ ಉದ್ದೇಶದವೇ ಆಗಿವೆ. ಅಲ್ಲದೆ ಇಂಥ ಪುನಾರಚನೆಯ ಉದ್ದೇಶ ಉಳ್ಳದ್ದು ಮಾತ್ರ ಸಂಶೋಧನೆ ಎನ್ನುವ ಪ್ರವೃತ್ತಿಯೊಂದು ಚಲಾವಣೆಗೆ ಬಂದುದನ್ನೂ ಇಲ್ಲಿ ನೆನೆಯಬಹುದು. ಹೀಗಾದುದಕ್ಕೆ ನಮ್ಮ ಸಾಹಿತ್ಯಕ ಸಂದರ್ಭದ ಕೆಲವು ವಿಶಿಷ್ಟ ಸಮಸ್ಯೆಗಳೂ ಕಾರಣಗಳಾಗಿವೆ. ನಮ್ಮ ಸಾಹಿತ್ಯ ಸಂಬಂಧಿಯಾದ ಕೆಲವು ಪ್ರಾಥಮಿಕ ಹಂತದ ಮಾಹಿತಿಗಳು ಕಳೆದುಹೋದ ಕೊಂಡಿಗಳಾಗಿವೆ, ಲಭ್ಯ ಮಾಹಿತಿಗಳ ಗೊಂದಲ–ಅಸ್ಪಷ್ಟತೆಗಳು ಉಳಿದೇ ಇವೆ. ಹೀಗಾಗಿ ಸಂಶೋಧನೆಯ ಪ್ರಧಾನವಾದ ಆಸಕ್ತಿ ಇಂಥ ಅರಕೆಗಳನ್ನು ತುಂಬುವತ್ತ ಹರಿದುದು ಸಹಜವೆಂಬಂತಿದೆ.

ಕಳೆದ ಶತಮಾನದ ಕೊನೆಗೆ ಮತ್ತು ಈ ಶತಮಾನದ ಪ್ರಾರಂಭದ ದಿನಗಳಲ್ಲಿ ಇಂಥ ಆಸಕ್ತಿಗಳಿಂದ ಕೂಡಿದ ಅಧ್ಯಯನ ಕ್ರಮವೊಂದನ್ನು ರೂಢಿಸಿದವರು, ನಮ್ಮ ಸಾಹಿತ್ಯ–ಸಂಸ್ಕೃತಿಗಳನ್ನು ಕುರಿತು ಅಧ್ಯಯನಗಳನ್ನು ಕೈಗೊಂಡ ಪಾಶ್ಚಾತ್ಯ

---

1. ಇತ್ತೀಚೆಗೆ ಕೆ.ವಿ.ನಾರಾಯಣ ಅವರು ಸಂಶೋಧನೆ ಹಾಗೂ ವಿಮರ್ಶೆ ಇವುಗಳ ಕುರಿತಾಗಿ ಇದ್ದ ಕೆಲವು ಅಸ್ಪಷ್ಟತೆಗಳನ್ನು ಸ್ಪಷ್ಟೀಕರಿಸಿದ್ದಾರೆ.
   ನೋಡಿ: ಹೊಸಗನ್ನಡ ಸಾಹಿತ್ಯ ಸಂಶೋಧನೆಯ ಪೂರ್ವ ಚರಿತ್ರೆ – ಮುನ್ನೋಟಗಳು (ನವ್ಯೋತ್ತರ), ಅಂಕಣ, ಮಾರ್ಚ–ಏಪ್ರಿಲ 1985 ಪು: 1–7.

ವಿದ್ವಾಂಸರೇ ಆಗಿದ್ದಾರೆ. ಇವರು ಮೊದಲ ಬಾರಿಗೆ ಸಂಪಾದಿಸಿ ಹೊರತಂದ ಕಾವ್ಯ ಕೃತಿಗಳನ್ನು ಕುರಿತ ತಮ್ಮ ಅಧ್ಯಯನಗಳಲ್ಲಿ ಪ್ರಧಾನವಾಗಿ ಆಯಾ ಕವಿಯ ವ್ಯಕ್ತಿ ವಿವರಗಳು ಅವರ ಆಸಕ್ತಿಯ ವಿಷಯಗಳಾಗಿವೆ. ಕವಿಯ ಹೆಸರು, ಕಾಲ ಗಣನೆ, ಸ್ಥಳ, ಬದುಕಿದ ರಾಜಮನೆತನದ ಆಶ್ರಯ ಇಂಥ ಪ್ರಶ್ನೆಗಳನ್ನು ಕುರಿತ ಅವರ ಜಿಜ್ಞಾಸೆಗಳು ಅವರು ಈ ಬಗ್ಗೆ ವಹಿಸಿದ ಆಸಕ್ತಿಯನ್ನು ಸ್ಪಷ್ಟಪಡಿಸುತ್ತವೆ. 'ಕಾವ್ಯದ ವಿಶ್ಲೇಷಣೆ' ಎಂಬ ಭಾಗಗಳಲ್ಲಿ ಆಶ್ವಾಸಾನು-ಕ್ರಮವಾದ ಕಾವ್ಯ ವಿವರಗಳನ್ನು ಗುರುತಿಸಬಹುದಾದರೂ, ಅವರ ಚರ್ಚೆಗಳು ಕಾವ್ಯದ ದೃಷ್ಟಿಯಿಂದ ಗೌಣವೆನ್ನಬಹುದಾದ ವಿವರಗಳಲ್ಲೇ ನಿರತವಾದುವು. ಇಂಥ ಪ್ರವೃತ್ತಿಯ ಅಧ್ಯಯನಗಳು ಇತ್ತೀಚಿನವರೆಗೂ ಮುಂದುವರಿದಿವೆ. ಈ ಹಿನ್ನೆಲೆಯಲ್ಲಿ "ಸಂಶೋಧನೆ ಎಂದರೆ 'ಕಂಡುಹಿಡಿಯುವುದು', 'ಇದುವರೆಗೂ ಗೊತ್ತಿಲ್ಲದಿದ್ದುದನ್ನು ಕಾಣಿಸುವುದು', ಅಸ್ಪಷ್ಟ ಸಂಗತಿಗಳನ್ನು ಇನ್ನೂ ಹೆಚ್ಚು ಹೆಚ್ಚು ಸ್ಪಷ್ಟಗೊಳಿಸುವುದು' ಎಂಬಿತ್ಯಾದಿ ವಿವರಗಳು ಇಂದಿಗೂ ಸಾಹಿತ್ಯದ ಅಧ್ಯಯನದ ಕೆಲವು ವಲಯಗಳಲ್ಲಿ ಮಾನ್ಯವಾಗಿವೆ. ಈ ಮಾನ್ಯತೆ ಸಾಧುವೂ ಆಗಿದೆ. ಏಕೆಂದರೆ ನಮ್ಮ ಸಾಹಿತ್ಯದ ಇತಿಹಾಸವಿನ್ನೂ ಸಂಗತಿಗಳ ಕೊರತೆ, ಅಸ್ಪಷ್ಟತೆ, ಗೊಂದಲಗಳಿಂದಾಗಿ ಅಪೂರ್ಣವಾಗಿಯೇ ಉಳಿದಿದೆ" ಎಂಬ ಕೆ.ವಿ.ನಾರಾಯಣ ಅವರ ಮಾತನ್ನು[2] ಗಮನಾರ್ಹವಾದುದೆಂದು ಪರಿಗಣಿಸಬೇಕಾಗುತ್ತದೆ. ಇದಕ್ಕಿಂತ ಭಿನ್ನ ಸ್ವರೂಪದ ಕೆಲವು ಸಂಶೋಧನ ಬರೆಹಗಳನ್ನು ಈ ಶತಮಾನದ ಮೊದಮೊದಲ ದಶಕಗಳಲ್ಲೂ ಗುರುತಿಸಬಹುದಾದರೂ ಅವು ವಿರಳವೆಂದೇ ಹೇಳಬೇಕು. ಇತ್ತೀಚೆಗೆ ಸಂಶೋಧನೆ ಮೇಲೆ ಪ್ರಸ್ತಾಪಿಸಿದ ಅಧ್ಯಯನ ಕ್ರಮವನ್ನು ಮೀರಿ ಬೆಳೆಯುತ್ತಿದೆ. ಇದರಿಂದ ಸಾಹಿತ್ಯಕ ಸಂಶೋಧನೆಯ ಬಗೆಗಿನ ನಮ್ಮ ಗ್ರಹಿಕೆಗಳು ವಿಭಿನ್ನ ಆಯಾಮಗಳನ್ನು ಪಡೆದುಕೊಳ್ಳುತ್ತಿವೆ.

---

2. ನೋಡಿ : ಅದೇ, : ಪು: 1.

ಈ ಅಧ್ಯಾಯದಲ್ಲಿ ಚರ್ಚಿಸಲಿರುವ ಪಂಪ ಕವಿಯನ್ನು ಕುರಿತ ಸಂಶೋಧನ ಬರೆಹಗಳು ಬಹು ಮುಖ್ಯವಾಗಿ ಮೇಲೆ ಪ್ರಸ್ತಾಪಿಸಿದ ಸ್ವರೂಪದವು ಮಾತ್ರ ಆಗಿವೆ. ಇದರಾಚೆಗೆ ಬೆಳೆದ ಕೆಲವಷ್ಟು ಅಧ್ಯಯನಗಳು ಇವೆಯಾದರೂ ಅವುಗಳಲ್ಲಿ ಬಹುಪಾಲು ಅಧ್ಯಯನಗಳ ದೃಷ್ಟಿ ಬೇರೆಯದು ಎನ್ನಿಸುವುದರಿಂದ ಅವನ್ನೆಲ್ಲ ಇಲ್ಲಿ ಒಳಗು ಮಾಡಿಲ್ಲ. ಜೊತೆಗೆ ಇನ್ನೊಂದು ಮಾತನ್ನಿಲ್ಲಿ ಹೇಳಬೇಕಿದೆ: ಗ್ರಂಥ ಸಂಪಾದನೆ ಸಂಶೋಧನೆಯ ಕಕ್ಷೆಗೆ ಸೇರಿದ್ದೆಂಬ ಮಾತನ್ನು ಬೇರೆ ಹೇಳಬೇಕಾಗಿಲ್ಲ. ಪಂಪನ ಕಾವ್ಯಗಳ ಪರಿಷ್ಕರಣಗಳನ್ನೇ ಕುರಿತಂತೆ ಬೇರೆಡೆಗೆ ಚರ್ಚಿಸಿರುವುದರಿಂದ ಇಲ್ಲಿಗೆ ಆ ಚರ್ಚೆಗಳನ್ನು ಹೊರತುಪಡಿಸಿಕೊಳ್ಳಲಾಗಿದೆ.

## 3.2 ಪಂಪನನ್ನು ಕುರಿತ ಸಂಶೋಧನೆ : ನೆಲೆಗಳು

ಪಂಪ ಕವಿಯನ್ನು ಕುರಿತು ಇದುವರೆಗೆ ನಡೆದಿರುವ ಸಂಶೋಧನೆಯನ್ನು ಪ್ರಮುಖವಾಗಿ ಎರಡು ನೆಲೆಗಳಲ್ಲಿ ಗುರುತಿಸಿಕೊಳ್ಳಬಹುದಾದ ಸಾಧ್ಯತೆಯಿದೆ: ಒಂದು, ಕವಿ ಸಂಬಂಧಿಯಾದ ಅಧ್ಯಯನಗಳು ಮತ್ತು ಇನ್ನೊಂದು, ಕಾವ್ಯ ಸಂಬಂಧೀ ಅಧ್ಯಯನಗಳು. ಕವಿ ಸಂಬಂಧಿಯಾದ ಅಧ್ಯಯನಗಳಲ್ಲಿ ಸಾಮಾನ್ಯವಾಗಿ ಪಂಪ ಕವಿಯ ವ್ಯಕ್ತಿ ವಿವರಗಳಿಗೆ ಸಂಬಂಧಿಸಿದ ಚರ್ಚೆಗಳು ಹಾಗೂ ಅವನ ಆಶ್ರಯದಾತನಾದ ಅರಕೇಸರಿಯ ವಂಶಾವಳಿಯ ಕುರಿತಾದ ಚರ್ಚೆಗಳು ಸೇರುತ್ತವೆ. ಕಾವ್ಯ ಸಂಬಂಧೀ ಅಧ್ಯಯನಗಳು ಕಾವ್ಯದೊಳಗಿನ ಪಾಠ ಚರ್ಚೆಗಳು, ಅರ್ಥ ಕ್ಲೇಶಗಳ ಸ್ಪಷ್ಟನೆ ಹಾಗೂ ಇನ್ನಿತರ ಕೆಲವು ಚರ್ಚೆಗಳನ್ನು ಒಳಗೊಳ್ಳುತ್ತವೆ.

## 3.3 ಕವಿ ಸಂಬಂಧೀ ಅಧ್ಯಯನಗಳು

ಮೇಲೆ ಸೂಚಿಸಿದಂತೆ ಕವಿ ಸಂಬಂಧೀ ಅಧ್ಯಯನಗಳನ್ನು ಎರಡು ಗುಂಪಾಗಿ ವಿಂಗಡಿಸಬಹುದಾಗಿದೆ. ಮೊದಲ ಗುಂಪಿಗೆ ಸೇರುವ ಅಧ್ಯಯನಗಳು ಪಂಪ ಕವಿಯ ಕಾಲ, ದೇಶ, ಇತ್ಯಾದಿ ವಿವರಗಳನ್ನು ಕುರಿತಿರುವಂಥವು. ಎರಡನೆಯ ಗುಂಪಿಗೆ ಸೇರುವ ಅಧ್ಯಯನಗಳು ಪಂಪ ಕವಿಯ ಆಶ್ರಯದಾತನಾದ ಅರಿಕೇಸರಿಯ ವಂಶಾವಳಿ, ಅವನ ಕುಲಶಾಖೆಯ ಸಂಬಂಧಗಳನ್ನು ಕುರಿತಿರುವಂಥವು. ಈ ಗುಂಪಿನ ಚರ್ಚೆಗಳಲ್ಲಿ ಸಾಹಿತ್ಯದ ಅಧ್ಯಯನಕಾರರು ಮಾತ್ರವಲ್ಲದೆ ಚರಿತ್ರೆಯ ಅಧ್ಯಯನಕಾರರೂ ಆಸಕ್ತಿ ವಹಿಸಿದ್ದಾರೆ. ಹಲವಷ್ಟು ಸಂದರ್ಭಗಳಲ್ಲಿ ಇವೆರಡು ಗುಂಪಿನ ಚರ್ಚೆಗಳನ್ನು ಸ್ಪಷ್ಟವಾಗಿ ಬೇರೆ ಬೇರೆಯೆಂದು ಬೇರ್ಪಡಿಸಲಾಗದು ಎನ್ನಿಸುತ್ತದೆ. ಆದರೂ ಅಧ್ಯಯನದ ಸೌಲಭ್ಯಕ್ಕೆಂದು ಇವೆರಡನ್ನೂ ಬೇರೆ ಬೇರೆಯಾಗಿಯೇ ಗಮನಿಸಬಹುದು.

### 3.3.1 ಪಂಪ ಕವಿಯ ವ್ಯಕ್ತಿಗತ ವಿವರಗಳನ್ನು ಕುರಿತ ಚರ್ಚೆಗಳು

ಪಂಪನೇ ತನ್ನ ಕೆಲವಾದರೂ ವ್ಯಕ್ತಿ ವಿವರಗಳನ್ನು ಹೇಳಿಕೊಂಡಿದ್ದಾನೆ. ಆ ವಿವರಗಳು ಕಾಲ—ದೇಶ—ಕವಿಯು ಆಶ್ರಯ ಪಡೆದ ರಾಜ, ಕವಿಯ ಬಗ್ಗೆ ರಾಜ ತೋರಿದ ಉದಾರತೆ ಇತ್ಯಾದಿ ವಿವರಗಳ ಆಚೆಗೆ ನಮಗೇನನ್ನೂ ಹೇಳವು. ಇವೆಲ್ಲವೂ ಕವಿ ಪ್ರಾಸಂಗಿಕವಾಗಿ ತನ್ನ ಕಾವ್ಯದ ಆದ್ಯಂತ್ಯಗಳಲ್ಲಿ ಹೇಳಿಕೊಂಡ ಬಿಡಿ ವಿವರಗಳೇ ಹೊರತು ಇಡಿ ವಿವರಗಳಲ್ಲ. ಹೀಗಾಗಿ ಕವಿಯ ಕುರಿತಾದ ಪೂರ್ಣಪ್ರಮಾಣದ ವ್ಯಕ್ತಿ ವಿವರಗಳು ತಿಳಿದು ಬರುವ ಮಾತು ದೂರವೇ ಉಳಿಯುತ್ತದೆ. ಈ ನಿಟ್ಟಿನಲ್ಲಿ ನಮ್ಮ ಸಹಾಯಕ್ಕೆ ಬರುವ ಶಾಸನಗಳ ನೆರವೂ ಅಷ್ಟಕ್ಕಷ್ಟೆ. ಇದರಿಂದಾಗಿ ಕವಿಯ ವ್ಯಕ್ತಿ ವಿವರಗಳಿಗೆ ಸಂಬಂಧಿಸಿದಂತೆ ನಡೆದ ಬಹುಪಾಲು ಚರ್ಚೆಗಳು ಇಂಥ ಬಿಡಿ ವಿವರಗಳನ್ನೇ

ಕುರಿತಿವೆ, ಮತ್ತು ಅವುಗಳಲ್ಲಿರುವ ಅಸ್ಪಷ್ಟತೆಗಳನ್ನು ಸ್ಪಷ್ಟೀಕರಿಸಲು ಅದ ಪ್ರಯತ್ನಗಳೇ ಆಗಿವೆ.

ಪಂಪ ಕವಿಯ ಕಾಲ, ಕೃತಿ ರಚನೆಯ ಕಾಲ — ಇವನ್ನು ಕುರಿತಂತೆ ಭಿನ್ನಾಭಿಪ್ರಾಯಗಳಿದ್ದಂತಿಲ್ಲ. ಏಕೆಂದರೆ ಕವಿಯೇ ತಾನು "ದುಂದುಭಿ ಸಂವತ್ಸರೋದ್ಭವಂ."[3] ಎಂದು ತನ್ನ ಜನನ ಕಾಲವನ್ನು ಹೇಳಿಬಿಟ್ಟಿದ್ದಾನೆ. ತನ್ನ ಕೃತಿ ರಚನೆಯ ಕಾಲವನ್ನು "ಶಕ ವರ್ಷಮೆಂಟುನೂಱಕ್ಕೆ ಕಡೆಯೊಳಱುವತ್ತು ಮೂಱು ಸಂದುದು ಜಗತ್ ಪ್ರಕಟ ಪ್ಲವ ಸಂವತ್ಸರದ ಕಾರ್ತೀಕಂ ಮುದಮನೀಯೆ ನಂದೀಶ್ವರದೊಳ್" ಎಂದೂ "ಸಿತ ಪಕ್ಷದ ಪಂಚಮಿ ದಿನಪತಿವಾರಂ ಶುಭದ ಮೂಲ ನಕ್ಷತ್ರದೊಳನ್ವಿತವಾಗೆ ನೆಗಱ್ದಿಂದೀ ಕೃತಿ ಜಗದೊಳ್" ಎಂಬೆಲ್ಲ ವಿವರಗಳನ್ನೂ ನೀಡಿದ್ದಾನೆ.[4] ಇದರ ಆಧಾರದ ಮೇಲಿಂದ ಶಕವರ್ಷ 863 ಕ್ಕೆ ಸರಿಹೊಂದುವ ಕ್ರಿ.ಶ. 941 ನೆಯ ವರ್ಷ ಆದಿಪುರಾಣದ ರಚನಾ ಕಾಲವೆಂದೂ,[5] ಈ ನಿರ್ಣಯವನ್ನು ಆಧರಿಸಿ ದುಂದುಭಿ ಸಂವತ್ಸರ ಕ್ರಿ.ಶ. 902 ಕ್ಕೆ (ಶಕ ವರ್ಷ 824) ಸರಿಹೊಂದುವುದರಿಂದ ಅದನ್ನು ಅವನ ಜನನ ಕಾಲವೆಂದೂ ತಿಳಿಯಲಾಗಿದೆ. ಆದರೆ ಕೃತಿ ರಚನೆಯ ಕಾಲವನ್ನು ಒಂದು ವರ್ಷ

---

3. ಆದಿಪುರಾಣ, (ಸಂ.) ಎಲ್.ಬಸವರಾಜು, 1—32.

4. — ಅದೇ — — ಅದೇ — 16—38 ಮತ್ತು 39.

5. ಕವಿಯು ತನ್ನೆರಡು ಕಾವ್ಯಗಳನ್ನೂ ಒಂದೇ ವರ್ಷ ಮುಗಿಸಿರುವೆನೆಂದು ಸೂಚಿಸಿದ್ದಾನೆ. ಈ ಬಗ್ಗೆ ಇವೆರಡೂ ಕೃತಿಗಳ ರಚನೆಯ ಮಧ್ಯೆ ಸಾಕಷ್ಟು ಕಾಲ ಕಳೆದಿರಬೇಕೆಂದೂ; ಒಂದನ್ನು ಆರು ತಿಂಗಳಲ್ಲಿ ಮತ್ತೊಂದನ್ನು ಮೂರು ತಿಂಗಳಲ್ಲಿ (ಇದನ್ನು ಕವಿಯೇ ಹೇಳಿದ್ದು) ಮುಗಿಸಿದನೆಂದೂ ಹೇಳುವ ಅಭಿಪ್ರಾಯಗಳಿವೆಯಾದರೂ ಯಾವುದೂ ಖಚಿತವಿಲ್ಲ. ಸದ್ಯಕ್ಕೆ ಕವಿಯ ಮಾತನ್ನು ಒಪ್ಪಬೇಕು.

ಅಚೀಚೆಗೆ ಎಳೆಯುವ ಪ್ರಯತ್ನವನ್ನು ಮಾಡಲಾಗಿದೆ.[6] ಆದರೆ ಇದೇನೂ ಅಂಥ ಮಹತ್ವದ ವಿಚಾರವಲ್ಲ.

ಇದೇ ರೀತಿ ಪಂಪನ ವಂಶ ಮೂಲತಃ ಬ್ರಾಹ್ಮಣ ಮತಾವಲಂಬಿಯಾಗಿದ್ದು ನಂತರ ಜೈನ ಧರ್ಮವನ್ನವಲಂಬಿಸಿದ ಬಗ್ಗೆಯೂ ಅಂಥ ಭಿನ್ನಾಭಿಪ್ರಾಯಗಳೇನೂ ಇಲ್ಲ. ಈ ಮತಾಂತರ ನಡೆದುದು ಪಂಪನ ತಂದೆಯಾದ ಅಭಿರಾಮ ದೇವರಾಯ (ಭೀಮಪಯ್ಯನ) ಕಾಲದಲ್ಲಿ ಎಂದು ಸೂಚಿಸಿದ್ದಾನೆ ಪಂಪ. ಅವನು ಹೇಳುವಂತೆ ಅವನ ತಂದೆಯು "ಜಾತಿಯೊಳೆಲ್ಲಮುತ್ತಮದ ಜಾತಿಯ ವಿಪ್ರಕುಲಂಗೆ ನಂಬಲೇ ಮಾತೋ ಜಿನೇಂದ್ರ ಧರ್ಮಮೆ ವಲಂ ದೊರೆ ಧರ್ಮದೊಳೆಂದು ನಂಬಿ ತಜ್ಜಾತಿಯ ನುತ್ತರೋತ್ತರಮೆ ಮಾಡಿನೆಗಳ್ಚಿದನ ..........."[7] ಈ ಅಂಶವನ್ನು ಪಂಪನನ್ನು ಕುರಿತು ಹೇಳುವ ಸಂದರ್ಭ ಬಂದಾಗಲೆಲ್ಲ ಹಲವೆಡೆ ಮತ್ತೆ ಮತ್ತೆ ಹೇಳುತ್ತ ಬರಲಾಗಿದೆ. ಈ ಅಂಶದ ಹಿನ್ನೆಲೆಯಲ್ಲೇ ಜೈನ ಮತಾವಲಂಬಿಯಾದ ಪಂಪ ತನ್ನ ಭಾರತ ಕಥೆಯನ್ನು ಜೈನ ದೃಷ್ಟಿಯಿಂದ ನೋಡಿದ್ದಾನೆಯೇ? ಎಂದು ಹುಡುಕುವ ಪ್ರಯತ್ನಗಳೂ ನಡೆದಿವೆ. ಈ ಪ್ರಯತ್ನಗಳಲ್ಲಿ ಕೆಲವು ಪ್ರಸಂಗಗಳನ್ನು, ಕೆಲವು ಮಾತುಗಳನ್ನು (ದ್ರೌಪದಿಯ ಪಂಚ ಪತಿತ್ವವನ್ನು ಕೈ ಬಿಟ್ಟುದು, ಅರ್ಜುನನಿಗೆ ಒಮ್ಮೆ ತನ್ನ ರಾಮ ಜನ್ಮದ ನೆನಪುಗಳು ಮರುಕಳಿಸಿದುವೆಂಬುದು ಇತ್ಯಾದಿ)

---

6. ಎಂ.ಗೋವಿಂದ ಪೈ, ಅವರು "ಶಾ.ಶ. 863 ನೆಯ ಪ್ಲವ ಸಂವತ್ಸರವು ಉತ್ತರ ಸಂಪ್ರದಾಯದ ಮೇರೆಗೆ ಒದವಿದುದು ಕ್ರಿ.ಶ. 940—41 ರಲ್ಲಿ, ದಕ್ಷಿಣ ಸಂಪ್ರದಾಯದ ಪ್ರಕಾರ ಕ್ರಿ.ಶ. 941—42 ರಲ್ಲಿ" ಎಂದು ಹೇಳಿ ಪಂಪ ಪ್ರಸ್ತಾಪಿಸಿದ ವಾರ, ನಕ್ಷತ್ರಗಳು 942 ಕ್ಕೆ ಹೊಂದುತ್ತವೆಯೆಂದಿದ್ದಾರೆ. ನೋಡಿ: 'ಪಂಪನ ದೇಶ ಕಾಲಗಳ ವಿಚಾರ', ಭಾರತಿ, ಆಗಸ್ಟ—ನವೆಂಬರ 1933; 'ಪಂಪನ ಆದಿಪುರಾಣ ರಚನಾ ಕಾಲ', ಕಂಠೀರವ, ಆಗಸ್ಟ—ಸೆಪ್ಟೆಂಬರ 1940.

7. ವಿಕ್ರಮಾರ್ಜುನ ವಿಜಯ, (ಸಂ.) ಬೆಳ್ಳಾವೆ, 14—48.

ಜೈನ ದೃಷ್ಟಿಯವೆಂದು ನಿದರ್ಶಿಸಲಾಗಿದೆ.[8] ಈಚೆಗೆ ಎಂ.ಎಂ.ಕಲಬುರ್ಗಿಯವರು ಪಂಪ ಕವಿಯಾದುದಕ್ಕೂ, ಅವನ ತಂದೆ ಜೈನ ಮತಾವಲಂಬಿಯಾದುದಕ್ಕೂ ಕಾರ್ಯ-ಕಾರಣ ಸಂಬಂಧವನ್ನು ಕಲ್ಪಿಸಲು ಪ್ರಯತ್ನಿಸಿದ್ದಾರೆ. ಅವರು ಹೇಳುವ ಮಾತುಗಳು ಹೀಗಿವೆ:[9] "ಮತಾಂತರ ಪಂಪನ ವಂಶಾವಳಿಯಲ್ಲಿ ಜರುಗಿದ ಬಹು ಮುಖ್ಯ ಘಟನೆ. .......... ಮತಾಂತರಗೊಳ್ಳದಿದ್ದರೆ ಬಹುಶಃ ಪಂಪ ಕವಿಯಾಗುತ್ತಿರಲಿಲ್ಲ. ಏಕೆಂದರೆ ಆ ಕಾಲದ ಅಗ್ರಹಾರಗಳು ಪಂಡಿತರನ್ನು ಸೃಷ್ಟಿಸುವ ಕಾರಖಾನೆಗಳೇ ಹೊರತು ಕವಿಗಳನ್ನು ಸೃಷ್ಟಿಸುವ ಹೊಲಗಳಲ್ಲ. ನಮ್ಮ ಪ್ರಾಚೀನ ಅಗ್ರಹಾರಗಳ ಚರಿತ್ರೆಯಲ್ಲಿ ಟೀಕೆ, ಟಿಪ್ಪಣಿ, ವ್ಯಾಖ್ಯಾನ, ಶಾಸ್ತ್ರಗಳನ್ನು ಬರೆದ ದೊಡ್ಡ ವಿದ್ವಾಂಸರು ಕಂಡು ಬರುವರೇ ವಿನಃ ಕಾವ್ಯ ಬರೆದ ಕವಿಗಳು ಕಂಡು ಬರುವುದಿಲ್ಲವೆಂಬುದೇ ಇದಕ್ಕೆ ನಿದರ್ಶನ". ಈ ಮಾತು ಒಂದು ನೆಲೆಯಲ್ಲಿ ಸರಿಯೆಂದು ತೋರಬಹುದಾದರೂ ಈ ಮಾತನ್ನೊಪ್ಪುವುದು ಕಷ್ಟವಾಗುತ್ತದೆ. ಈ ಅಂಶವನ್ನು ಹೀಗೆ ಎಳೆಯುವುದು ಸಂಗತವೇ ಎಂಬ ಸಂದೇಹ ನಮಗೆದುರಾಗುತ್ತದೆ.

---

8. ವಿಕ್ರಮಾರ್ಜುನ ವಿಜಯದ ಉಪೋದ್ಘಾತದಲ್ಲಿ ಬೆಳ್ಳಾವೆ ವೆಂಕಟನಾರಾಯಣಪ್ಪನವರು "ಪಂಪನು ವ್ಯಾಸ ಭಾರತವನ್ನು ಬಿಟ್ಟು ಹೋಗಲೊಲ್ಲದೆ ಈ ಪಂಚ ಪತಿತ್ವವನ್ನು ಮಾತ್ರ ಹೇಗಾದರೂ ತಪ್ಪಿಸಿಬಿಡಬೇಕೆಂದು ಪ್ರಯತ್ನಪಟ್ಟು ದ್ರೌಪದಿಯನ್ನು ಅರ್ಜುನನಿಗೆ ಮಾತ್ರ ಮದುವೆ ಮಾಡಿಸಿದರೂ ಮುಂದೆ ಈ ವಿಚಾರವಾಗಿ ಅನೇಕ ಸ್ಥಳಗಳಲ್ಲಿ ಕೃತಕೃತ್ಯನಾಗಲಿಲ್ಲ" ಎಂದಿದ್ದಾರೆ. (ಪು: xvii); ಅದೇ ರೀತಿ ಅವರು ಇನ್ನೂ ಕೆಲವು ಅಂಶಗಳನ್ನು ಹೇಳಿದ್ದಾರೆ. (ಪು: xiii) ಯಾತ್ರಾರ್ಥಿಯಾದ ಅರ್ಜುನನಿಗೆ ತನ್ನ ಪೂರ್ವಜನ್ಮದ ಸ್ಮರಣೆ (ರಾಮಜನ್ಮೋತ್ಪತ್ತಿಯು), ದೇವೇಂದ್ರನಿಗೆ ಅನನಕಂಪವಾದುದು — ಇತ್ಯಾದಿಗಳನ್ನು ಪಂಪ ಜೈನ ಸಂಪ್ರದಾಯವನ್ನನುಸರಿಸಿದ್ದರ ನಿದರ್ಶನಗಳಾಗಿ ತೋರಿಸುತ್ತಾರೆ, ವೆಂಕಟರಾಮಪ್ಪನವರು. ನೋಡಿ: 'ಪಂಪ ಭಾರತ ದರ್ಶನ', ನವಿ ನೆನಪು, 1970. ಪು: 9—12.
9. ಪಂಪನ ಪರಿಸರಗಳು, (ಅಣ್ಣಿಗೇರಿಯ ಪಂಪ ವಿಚಾರ ಸಂಕಿರಣದಲ್ಲಿ ಮಂಡಿತ) ಅಪ್ರಕಟಿತ, 1985.

### 3.3.1.1 ಜಿನವಲ್ಲಭನ ಶಾಸನದ ಶೋಧ

ಪಂಪನ ವ್ಯಕ್ತಿ ವಿವರಗಳನ್ನು ಕುರಿತ ಚರ್ಚೆಗಳು ವಿಪುಲವಾಗಿ ನಡೆಯಲು ಪ್ರಾರಂಭವಾದದ್ದು ಜಿನವಲ್ಲಭನ ಶಾಸನ ದೊರೆತ ಮೇಲೆಯೇ. ಅದುವರೆಗಿನ ಎಲ್ಲ ಚರ್ಚೆಗಳೂ ಪಂಪ ತನ್ನ ಕಾವ್ಯಗಳ ಆದ್ಯಂತ್ಯಗಳಲ್ಲಿ ಹೇಳಿಕೊಂಡ ಕೆಲ ಸಂಗತಿಗಳನ್ನೇ ಆಧರಿಸಿದ್ದುವು. ಈ ಶಾಸನ ಪಂಪನ ಸಂಬಂಧದ ಕೆಲವು ವಿವರಗಳನ್ನು ಹೇಳುವುದರಿಂದ, ಪಂಪನ ಕಾವ್ಯಗಳಲ್ಲಿ ದೊರೆಯುವ ವಿವರಗಳು ಮತ್ತು ಶಾಸನದ ವಿವರಗಳ ಸಾಮ್ಯತೆಯನ್ನು ಗುರುತಿಸುವ ಉತ್ಸುಕತೆಯನ್ನು ಶಾಸನ ದೊರೆತ ಪ್ರಾರಂಭದ ದಿನಗಳಲ್ಲಿ ಕಾಣುತ್ತೇವೆ.

ಈ ಶಾಸನವನ್ನು ಡಾ: ಎನ.ವೆಂಕಟರಮಣಯ್ಯನವರು ಮೊದಲ ಬಾರಿಗೆ 1967 ರಲ್ಲಿ ಬೆಳಕಿಗೆ ತಂದರು. ಅದು ತೆಲುಗು ಮಾಸ ಪತ್ರಿಕೆಯಾದ "ಭಾರತಿ" ಯಲ್ಲಿ ಪ್ರಕಟವಾಯಿತು.[10] ಅದರ ಕನ್ನಡ ಅನುವಾದವನ್ನು ಸೀತಾರಾಮ ಜಾಗೀರದಾರರು 1968 ರಲ್ಲಿ ಮಾಡಿಕೊಟ್ಟರು.[11] ಇವನ್ನಾಧರಿಸಿ ಕನ್ನಡ ನುಡಿ ಮುತ್ತಿತರ ಪತ್ರಿಕೆಗಳಲ್ಲಿ ಕೆಲ ಚರ್ಚೆಗಳು ನಡೆದವು.[12] ಆದರೆ ಡಾ: ಎನ.

---

10. ('ಜಿನವಲ್ಲಭುನಿ ಗಂಗಾಧರಂ ಶಿಲಾ ಶಾಸನಮು' ಭಾರತಿ, ಮಾರ್ಚ 1967) ಉಧೃತ: ಸೀತಾರಾಮ ಜಾಗಿರದಾರ, ಜಿನವಲ್ಲಭನ ಗಂಗಾಧರಂ ಶಾಸನ, ಪ್ರ.ಕ., 50—3, 1968. ಪು: 25. ಈ ಮುನ್ನ 1966 ರಲ್ಲೇ ಮೈಸೂರಲ್ಲಿ ನಡೆದ ಇತಿಹಾಸ ಸಮ್ಮೇಳನದಲ್ಲಿ ಈ ಬಗ್ಗೆ ಒಂದು ಲೇಖನವನ್ನು ಓದಿದ್ದರು.
11. 'ಜಿನವಲ್ಲಭನ ಗಂಗಾಧರಂ ಶಾಸನ', ಪ್ರ.ಕ., 50—3, 1968.
12. ನೋಡಿ: 1968—1969ರ ಕನ್ನಡ ನುಡಿಯ ಸಂಚಿಕೆಗಳು; ಪ್ರ.ಕ., 50—3,4; 53—4 ಇತ್ಯಾದಿಗಳನ್ನು ಗಮನಿಸಬಹುದು. ಚರ್ಚೆಗಳು ಒಂದೊಂದು ಅಂಶದ ಕುರಿತಂತೆಯೂ ಓತಪ್ರೋತವಾಗಿ ಬೆಳೆದಿವೆ. ಕೆಲವು ಪುನರಾವರ್ತಿತ ವಿವರಗಳನ್ನು ಒಳಗೊಂಡಿದ್ದರೂ ಮತ್ತೆ ಕೆಲವು ಚರ್ಚೆಗಳು ಗಮನಾರ್ಹವಾಗಿವೆ ಎಂಬುದು ಸ್ಪಷ್ಟ.

ವೆಂಕಟರಮಣಯ್ಯನವರು ತಮ್ಮ ಲೇಖನದ ಜೊತೆಗೆ ಪ್ರಕಟಿಸಿದ ಶಾಸನದ ಪಡಿಯಚ್ಚುಗಳು ಕೆಲವೆಡೆ ಅಸ್ಪಷ್ಟವೂ, ಅಸಮಾಧಾನಕರವೂ ಆಗಿದ್ದು, ಅದನ್ನಾಧರಿಸಿದ ಮೊದಲ ಚರ್ಚೆಗಳು ಕೆಲವು ಸಮಸ್ಯೆಗಳನ್ನೆದುರಿಸಿವೆ. (ಅವುಗಳನ್ನು ಮುಂದೆ ಗಮನಿಸಬಹುದು.) ಒಟ್ಟಿನಲ್ಲಿ ಈ ಶಾಸನ ಬೆಳಕಿಗೆ ಬಂದುದರಿಂದ ಪಂಪನಿಗೆ ಸಂಬಂಧಿಸಿದಂತೆ ಕೆಲವು ಹೊಸ ಅಂಶಗಳು ತಿಳಿದವು. ಅವುಗಳಲ್ಲಿ ಮುಖ್ಯವಾದುವು ಹೀಗಿವೆ: ಈ ಶಾಸನವನ್ನು ಹಾಕಿಸಿದ ಜಿನವಲ್ಲಭ, ಪಂಪನ ತಮ್ಮ — ಪಂಪನಿಗೊಬ್ಬ ತಮ್ಮನಿದ್ದನೆಂಬುದೇ ತಿಳಿದುದು ಈ ಶಾಸನದಿಂದ; ಪಂಪನ ತಂದೆಯ ಹೆಸರು ಭೀಮ; ತಾಯಿ ಅಬ್ಬಣಬ್ಬೆ — ಪಂಪ ತಂದೆಯ ಹೆಸರನ್ನು ಅಭಿರಾಮದೇವರಾಯನೆಂದು ಹೇಳಿದ್ದ, ತಾಯಿಯ ಪ್ರಸ್ತಾಪವನ್ನೇ ಮಾಡಿರಲಿಲ್ಲ; ಜಿನವಲ್ಲಭ ತನ್ನಣ್ಣನಾದ ಪಂಪನ ಹೆಸರಲ್ಲಿ ಕವಿತಾ ಗುಣಾರ್ಣವ ಎಂಬ ಕೆರೆಯನ್ನೂ, ತ್ರಿಭುವನ ತಿಲಕವೆಂಬ ಬಸದಿಯನ್ನೂ ಮದನ ವಿಳಾಸವೆಂಬ ಬನವನ್ನೂ ನಿರ್ಮಿಸಿದ್ದ ಇತ್ಯಾದಿ.

ಈ ಸಂಗತಿಗಳನ್ನು ಆಧರಿಸಿ ಬಹಳಷ್ಟು ಚರ್ಚೆಗಳು ನಡೆದಿವೆ. ಪಂಪನ ತಂದೆ ಅಭಿರಾಮದೇವರಾಯನೆಂಬುದು ಅವನ ಕಾವ್ಯದಿಂದಲೇ ತಿಳಿದ ಸಂಗತಿ. ಈ ಶಾಸನದಲ್ಲಿ ಪಂಪನ ತಂದೆ ಭೀಮನೆಂದು ಸೂಚಿತವಾಗಿದೆ. ಭೀಮನೆಂಬುದೇ ಪಂಪನ ತಂದೆಯ ಹೆಸರಿರಬಹುದೇ ಎಂಬ ಊಹೆಯನ್ನು ಮುಳಿಯ ತಿಮ್ಮಪ್ಪಯ್ಯನವರು ಈ ಶಾಸನ ದೊರೆಯುವುದಕ್ಕಿಂತ ಸುಮಾರು ಇಪ್ಪತ್ತು ವರ್ಷಗಳಷ್ಟು ಹಿಂದೆಯೇ ಊಹಿಸಿದ್ದರು ಎಂಬ ಅಂಶ ನಿಜಕ್ಕೂ ಗಮನಾರ್ಹವಾದುದು. ಇದನ್ನು ಕಾಕತಾಳೀಯವೆಂದು ತಳ್ಳಿಹಾಕುವಂತಿಲ್ಲ. ಏಕೆಂದರೆ ಮುಳಿಯ ಅವರು ಪಂಪಭಾರತದ ಪದ್ಯಕ್ಕಿರುವ ಪಾಠಾಂತರಗಳ ಮೇಲೆ ಈ ಊಹೆಯನ್ನು ಕಟ್ಟಿದ್ದರು. ಅದನ್ನಿಲ್ಲಿ ಉಲ್ಲೇಖಿಸಬಹುದೆಂದು ತೋರುತ್ತದೆ:[13]

---

13. ಮುಳಿಯ ತಿಮ್ಮಪ್ಪಯ್ಯ, ನಾಡೋಜ ಪಂಪ, ಮಂಗಳೂರು, 1938. ಪು: 73– 74.

"ಆ ಕೌಮಾರಯ್ಯಂಗವನಿತ
ಶಾಕಾಶವ್ಯಾಪ್ತಕೀರ್ತಿ ನಿಜಗುಣಮಣಿರ
ತಾಕ್ಕರನಜ್ಞಾನ ತಮೋ
ನೀ ಕರನಭಿರಾಮದೇವರಾಯಂ ತನಯಂ "

ಈ ಪದ್ಯವನ್ನುದ್ಧರಿಸಿ ಹೀಗೆ ಬರೆದಿದ್ದಾರೆ: "ಕನ್ನಡ ಸಾಹಿತ್ಯ ಪರಿಷತ್ತಿನವರಿಂದ ಪ್ರಕಟವಾದ ವಿಕ್ರಮಾರ್ಜುನ ವಿಜಯದ ಅಡಿ ಟಿಪ್ಪಣಿಯಲ್ಲಿ ಈ ಪದ್ಯದ ಅಂತ್ಯ ಭಾಗವು 'ನಿಕರಂ ಧೀಮನಾಮದೆಯಂ' ಎಂದು (ಗ) ಪ್ರತಿಯ ಪಾಠವಾಗಿಯೂ 'ನೀಕಪರಂಧೀಮನಾಮದೆಯಂ' ಎಂದು (ಘ) ಪ್ರತಿಯದಾಗಿಯೂ ಇರುವಂತೆ ತೋರುತ್ತಿದೆ. ಆ ಎರಡು ಭಿನ್ನ ಪ್ರತಿಗಳಿಂದ ಊಹಿಸಬಹುದಾದಂತೆ 'ಧೀಮ' ಎಂದೇ ಅವನ ಹೆಸರಾಗಿದ್ದಿರಬಹುದೇ? ಹೇಗೂ ಇರಲಿ; ಹೆಸರುಗಳಲ್ಲಿ ಸಂದೇಹವಾದರೂ ವ್ಯಕ್ತಿಯಲ್ಲಿಲ್ಲ." ಎಂದೂ ಅಡಿ ಟಿಪ್ಪಣಿಯಲ್ಲಿ "......... ಅಜ್ಞಾನ ತಮೋ 'ನೀಕರನಾ ಧೀಮನಾಮಧೇಯಂ ತನಯಂ" ಎಂದು ಶುದ್ಧವಾಗಿರಬಹುದೇ?" ಎಂದೂ ಬರೆದರು. ಅಂತೂ ಅವರ ಊಹೆ ನಿಜವಾಗಿದೆ, ಶಾಸನಾಧಾರದಿಂದ. ಸಾಹಿತ್ಯ ಸಂಶೋಧನೆಯಲ್ಲಿ ಇಂಥ ಹೊಳಹುಗಳು ನಿಜಕ್ಕೂ ಗಮನಾರ್ಹವಾದುವಾಗುತ್ತವೆ. ಮೇಲೆ ಉದ್ಧರಿಸಿದ ಪದ್ಯಕ್ಕೆ ಮುಳಿಯ ತಿಮ್ಮಪ್ಪಯ್ಯನವರು ಸೂಚಿಸಿದ ಪಾಠವೂ ಬೇರಾವುದಾದರೂ ಆಧಾರದಿಂದ ಸಮರ್ಥಿತವಾದರೂ ಆಗಬಹುದು.

ಈ ಕುರಿತು ಈ ಶಾಸನ ದೊರೆತ ಹೊಸದರಲ್ಲಿ ಪಾಂಡುರಂಗರಾವ ದೇಸಾಯಿಯವರು ಈ ಎರಡು ಹೆಸರುಗಳಲ್ಲಿ "ಯಾವುದೊಂದನ್ನು ಹಿಡಿಯುವ ಅಗತ್ಯವಿಲ್ಲ. ಇಬ್ಬಗೆಯ ಜೋಡು ಹೆಸರುಗಳ ರೂಢಿ ಅಪರೂಪವೇನಲ್ಲ" ಎಂದಿದ್ದಾರೆ.[14] ಅವರ ಪ್ರಕಾರ ಅಭಿರಾಮದೇವರಾಯ ಎಂಬುದು

---

14. 'ಜಿನವಲ್ಲಭನ ಗಿರಿ ಶಾಸನ', ಕ.ನು., 31–3,4–5, 1968. ಪು: 20.

ಭೀಮಪಯ್ಯನಿಗಿದ್ದ ಪ್ರತಿಷ್ಠೆಯ ಹೆಸರು. ಇಂಥ ಸಾಧ್ಯತೆಯನ್ನು ಡಾ: ಎಂ.ಎಂ. ಕಲಬುರ್ಗಿಯವರು ನಿರಾಕರಿಸುತ್ತಾ "ಪಂಪ ಭಾರತದಲ್ಲಿರುವ 'ಭೀಮನಾಮದೆಯಂ' ಈ ಹೆಸರಿನ ಬಗ್ಗೆ ಹುಟ್ಟಬಹುದಾದ ದೊಡ್ಡ ಸಮಸ್ಯೆಯನ್ನು ತಪ್ಪಿಸಿದೆ .......... ಪಂಪನ ಬಾಯಿಂದ ಇಳಿದು ಬಂದಿರಬಹುದಾದ 'ಭೀಮನಾಮಧೇಯಂ' ಎಂಬ ಶುದ್ಧ ಪಾಠವನ್ನು ಬಿಮನಾಮದೆಯಂ ಬಿರಾಮದೆಯಂ ಬಿರಾಮದೇವಂ (ಅ +) ಬಿರಾಮದೇವರಾಯಂ ಎಂಬ ಕ್ರಮದಲ್ಲೋ ಇನ್ನೊಂದು ಕ್ರಮದಲ್ಲೋ ಕುಲಗೆಡುತ್ತ ಬಂದಿರಬೇಕು ........... ಹೀಗೆ ಕುಲಗೆಡುತ್ತಾ ಬಂದು ರೈಸ ಸಂಪಾದನೆಯಲ್ಲಿ 'ತಮೋನೀಕರನಭಿರಾಮ ದೇವರಾಯಂ' ಎಂಬ ರೂಪ ತಾಳಿದಂತಿದೆ. ಆದರೆ 'ತಮೋನೀಕಪರಂ ಭೀಮ ನಾಮದೆಯಂ' ಎಂಬುದೇ ಮೂಲ ಪಾಠವಾಗಿರಬೇಕು. ಆದುದರಿಂದ ದೇಸಾಯಿಯವರು ಹೇಳುವಂತೆ ಅಭಿರಾಮದೇವರಾಯ ಭೀಮಪಯ್ಯನ ಇನ್ನೊಂದು ಹೆಸರಲ್ಲ. ಹೊಣೆಗೇಡಿ ಲಿಪಿಕಾರರಿಂದ ಕುಲಗೆಡುತ್ತ ಬಂದ ಒಂದು ಪರಮಾವಧಿ ಪಾಠ"ವೆಂದು ಹೇಳುತ್ತಾರೆ.[15]

ಈ ಮೇಲಿನೆರಡು ಅಭಿಪ್ರಾಯಗಳಲ್ಲಿ ಯಾವುದೊಂದನ್ನು ನಿರಾಕರಿಸುವಂತಿಲ್ಲ, ಒಪ್ಪುವಂತಿಲ್ಲ. ಒಂದರ್ಥದಲ್ಲಿ ಎರಡೂ ಸಮರ್ಥನೀಯ; ಮತ್ತೊಂದು ಅರ್ಥದಲ್ಲಿ ಸಂದೇಹಾಸ್ಪದ. ಹೀಗಾಗಿ ಮುಂದೆ ದೊರೆಯಲಿರುವ ಆಧಾರಗಳೂ, ಪಂಪ ಭಾರತಕ್ಕೆ ಬರಲಿರುವ ಪರಿಷ್ಕರಣಗಳೋ, ದೊರೆಯಲಿರುವ ಹಸ್ತಪ್ರತಿಗಳೋ ಸಮರ್ಥನೆಯನ್ನು ನೀಡಬೇಕಾಗಿದೆ. ಒಂದು ಅಂಶ ಮಾತ್ರ ಸತ್ಯ: ಅಭಿರಾಮದೇವರಾಯನೆಂದು ನಾವು ತಿಳಿದಿದ್ದ ಪಂಪನ ತಂದೆಯನ್ನು ಭೀಮನೆಂದು ಶಾಸನದಲ್ಲಿ ಸೂಚಿಸಿರುವುದರಿಂದ ಖಂಡಿತವಾಗಿ ಅದು ಅವನ ಹೆಸರಾಗಿರಬೇಕು.

---

15. ಗಂಗಾಧರಂ ಶಾಸನ — ಕೆಲ ಹೊಸ ವಿಚಾರಗಳು, ಕ.ನು., 32—11, 1969. ಪು: 7.

ಪಂಪನ ತಾಯಿ ಅಬ್ಬಣಬ್ಬೆಯೆಂಬ ಸಂಗತಿಯು ಉಕ್ತವಾಗಿರುವ ಶಾಸನದ ಪಾಠ ಹೀಗಿದೆ:—

"ಶ್ರೀ ವತ್ಸ ಗೋತ್ರಂ ಗುಣಿ ಕಬ್ಬಿ ನಿಡುಗೊಣ್ಡೆಯ ಅಭಿಮಾನ ಚನ್ದ್ರನ
ಮೊಮ್ಮಂ ಭೀಮಪಯ್ಯನ ಬೆಳ್ವೊಲದಣ್ಣಿಗೆಱೆಯ ಜೋಯಿಸ
ಸಿಂಘನ ಮೊಮ್ಮ —
ಳಬ್ಬಣಬ್ಬೆಯ ಮಗಂ ..........."[16]

ಇಲ್ಲಿ ಉದ್ಧರಿಸಲಾಗಿರುವುದು ಶಾಸನದ ಪರಿಷ್ಕೃತ ಪಾಠ. ಮೊದಲಿಗೆ ಈ ಶಾಸನವನ್ನು ಬೆಳಕಿಗೆ ತಂದ ಡಾ: ಎನ್.ವೆಂಕಟರಮಣಯ್ಯನವರು ನೀಡಿದ ಪಾಠಕ್ಕಿಂತ ಇದು ಭಿನ್ನವಾಗಿದೆ ಮತ್ತು ಸ್ಪಷ್ಟ ಪಾಠವಾಗಿದೆ, ಕೂಡ. ಡಾ: ಎನ್.ವೆಂಕಟರಮಣಯ್ಯನವರು ನೀಡಿದ್ದ ಪಾಠ ಹೀಗಿದೆ :—

"ಅಭಿಮಾನ ಚನ್ದ್ರನ ಮೊಮ್ಮಂ ಭೀಮಪಯ್ಯನ ಬೆಳ್ವೊಲದಣ್ಣಿಗೆಱೆಯ
ಜೋಯಿಸ ಸಿಂಘನ ಮೊಮ್ಮ(ಂ) ಮಬ್ಬಣಬ್ಬೆಯ ಮಗಂ ... ಜಿನವಲ್ಲಭಂ"

ಇವೆರಡು ಪಾಠಗಳಲ್ಲಿ ಒಂದೆಡೆಗೆ 'ಮೊಮ್ಮಳಬ್ಬಣಬ್ಬೆ' ಎಂದಿದ್ದರೆ ಮತ್ತೊಂದೆಡೆ 'ಮೊಮ್ಮ(ಂ) ಮಬ್ಬಣಬ್ಬೆ' ಎಂದಿದೆ. ವೆಂಕಟರಮಣಯ್ಯನವರು ಕಂಸಿನಲ್ಲಿ ತೋರಿಸಿದ (ಂ) ಈ ಪಾಠ ಅವರು ಊಹಿಸಿ ಹಾಕಿದ್ದು. ಮೇಲೆ ಸೂಚಿಸಿದ ಪರಿಷ್ಕೃತ ಪಾಠವನ್ನು ಕಂಡುಕೊಳ್ಳುವ ಮೊದಲು ವೆಂಕಟರಮಣಯ್ಯನವರ ಪಾಠವನ್ನೇ ಆಧರಿಸಿ ಹಲವಷ್ಟು ವಾಗ್ವಾದಗಳು ನಡೆದುವು. ಆ ವಾಗ್ವಾದಗಳು ಮುಖ್ಯವಾಗಿ ಪಾಠ ನಿಜವಾಗಿ

---

16. ಜಿನವಲ್ಲಭನ ಶಾಸನ, ಶಾಸನ ಸಂಗ್ರಹ, (ಸಂ.) ಎಂ.ಎಂ.ಅಣ್ಣಿಗೇರಿ ಮತ್ತು ಆರ.ಶೇಷಶಾಸ್ತ್ರಿ, ಬೆಂಗಳೂರು, 1975. ಪು: 11.

ಇರಬೇಕಾದುದು 'ಮರ್ಮ(ಂ)ಮಬ್ಬಣಬ್ಬೆ' ಯೆಂದೇ ಮರ್ಮ್ಮಳಬ್ಬಣಬ್ಬೆಯೆಂದೇ?; "ಅಭಿಮಾನ ಧನನ್ನನ ಮರ್ಮಂ ಭೀಮಪಯ್ಯನ" ಎಂಬ ವಾಕ್ಯದಲ್ಲಿರುವ 'ಮರ್ಮ' ಶಬ್ದವನ್ನು ಅನ್ವಯಿಸಬೇಕಾಗಿರುವುದು ಭೀಮಪಯ್ಯನಿಗೋ ಜಿನವಲ್ಲಭನಿಗೋ? ಎಂಬ ಗೊಂದಲಗಳನ್ನು ಎದುರಿಸಿವೆ. ವೆಂಕಟರಮಣಯ್ಯನವರ ಪಾಠದಲ್ಲಿದ್ದ 'ಮಬ್ಬಣಬ್ಬೆ' ಎಂಬುದನ್ನು 'ಪಬ್ಬಣಬ್ಬೆ' ಎಂದೂ ತಿದ್ದಲಾಯಿತು. ಅದನ್ನು ಅಬ್ಬಣಬ್ಬೆಯೆಂದು ಸಮರ್ಥಿಸಲಾಯಿತು.[17] ಮೊದಲಿಗೆ ಡಾ: ಎಂ.ಎಂ. ಕಲಬುರ್ಗಿಯವರು ಈ ಪಾಠ ಸ್ಪಷ್ಟನೆಗೊಂದು ಒಳ್ಳೆಯ ಸೂಚನೆಯನ್ನು ನೀಡಿದರು. ಇದಕ್ಕೆ ಅವರು ಎರಡು ಸಾಧ್ಯತೆಗಳನ್ನು ಕಲ್ಪಿಸುತ್ತಾರೆ. ಮೊದಲನೆಯದು, ಜಿನವಲ್ಲಭ ಭೀಮಪಯ್ಯನ ಮಗನೆಂಬುದು ಸ್ಪಷ್ಟವಾಗಿರುವುದರಿಂದ (ಭೀಮ ತನುಜಂ ಎಂಬ ಮಾತಿನ ಆಧಾರದ ಮೇಲೆ) 'ಭೀಮಪಯ್ಯನ' ಎಂಬುದರ ಮುಂದೆ 'ಮಗಂ' ಎಂದು ಸೂಚಿಸಬಹುದೆಂದು ಹೇಳಿ, ಈ ತಿದ್ದುಪಡಿಯಲ್ಲಿ ಅರ್ಥ ಸಂಶಯ ಉಳಿಯುವುದರಿಂದ ಅದನ್ನು ಕೈಬಿಟ್ಟು ಮತ್ತೊಂದು ಸೂಚನೆಯನ್ನು ನೀಡುತ್ತಾರೆ: 'ಮರ್ಮ(ಂ)ಮಬ್ಬಣಬ್ಬೆಯ' ಎಂಬಲ್ಲಿರುವ (ಂ) ವೆಂಕಟರಮಣಯ್ಯನವರ ಊಹಿತ ಪಾಠವಾಗಿದ್ದು ಅದರ ಬದಲಿಗೆ (ಳ್) ಊಹಿಸಬಹುದೆಂದು ಹೇಳಿದ್ದಾರೆ. ಈ ಎರಡನೆಯ ತಿದ್ದುಪಡಿಯನ್ನು ಅನುಮೋದಿಸುತ್ತಾ ಅವರು "ಪಂಪನ ತಾಯಿಯ ಹೆಸರು ಅಬ್ಬಣಬ್ಬೆಯೋ, ಮಬ್ಬಣಬ್ಬೆಯೋ ಆಗಿರಲಿ, ಆಕೆ ಮಾತ್ರ ಜೋಯಿಸ ಸಿಂಘನ ಮಗಳಲ್ಲ, ಮೊಮ್ಮಗಳು" ಎನ್ನುತ್ತಾರೆ.[18] ಕಲಬುರ್ಗಿಯವರ ಎರಡನೆಯ ತಿದ್ದುಪಡಿ ಸಂಗತವಾದ ಊಹೆ. ತಮ್ಮ ಮೊದಲ ತಿದ್ದುಪಡಿಯನ್ನು ಕುರಿತು ಅವರಿಗೇ ಅಸಮಾಧಾನವಿರುವಾಗ ದೇಸಾಯಿಯವರು ಅದಕ್ಕೆ ಪ್ರತಿಕ್ರಿಯಿಸಬೇಕಾದ

---

17. ಪಾಂಡುರಂಗರಾವ ದೇಸಾಯಿ, 'ಜಿನವಲ್ಲಭನ ಗಿರಿ ಶಾಸನ', ಕ.ನು., 31–3, 4–5, 1968. ಪು: 20.

18. ಕಲಬುರ್ಗಿ ಎಂ.ಎಂ., 'ಪಂಪನನ್ನು ಕುರಿತ ಶಾಸನ – ಒಂದು ತಿದ್ದುಪಡಿ' ಕ.ನು., 31–4, 5, 1968. ಪು: 23–24.

ಅಗತ್ಯವಿರಲಿಲ್ಲ.[19] ನಂತರ ಜಿ.ಎಸ್.ಗಾಯಿಯವರು ಈ ಬಗ್ಗೆ ಹೀಗೆ ಬರೆದರು : "ನಾನು ಓದಿರುವಂತೆ ಈ ಭಾಗದ ಶಾಸನದ ಮೂಲ ಪಾಠವು ಈ ರೀತಿಯಾಗಿರುತ್ತದೆ: "ಅಭಿಮಾನ ಜನ್ಮನ ಮರ್ಮಂ ಭೀಮಪಯ್ಯನ ಬೆಳ್ವೊಲದಣ್ಣಿಗೆಯ ಜೋಯಿಸ ಸಿಂಘನ ಮಮ್ಮಳಬ್ಬಣಬ್ಬೆಯ ಮಗಂ .......... ಜಿನವಲ್ಲಭಂ". ಇಲ್ಲಿ ಡಾ: ವೆಂಕಟರಮಣಯ್ಯನವರು ಓದಿದ 'ವಬ್ಬಣಬ್ಬೆ' ಶಬ್ದದ ಮೊದಲನೆಯ ಅಕ್ಷರವು 'ವ' ಕಾರವಾಗದೆ 'ಳ' ಕಾರವಾಗಿರುತ್ತದೆಂದು ನಿಸ್ಸಂದೇಹವಾಗಿ ಹೇಳಬಹುದು. ಮತ್ತು ಇಲ್ಲಿನ ಪಾಠವನ್ನು 'ಮರ್ಮಳಬ್ಬಣಬ್ಬೆ' ಎಂದು ಓದಬೇಕು. ಈ ಪಾಠವು ಯಾವ ತಿದ್ದುಪಡಿಯ ಅವಶ್ಯಕತೆಯೂ ಇಲ್ಲದೆ ಕಲಬುರ್ಗಿಯವರ ಸೂಚನೆಯನ್ನು ಸಮರ್ಥಿಸುತ್ತದೆ". ಮುಂದುವರಿದು "ಇಲ್ಲಿಯ ಅಭಿಮಾನ ಜನ್ಮನ ಮರ್ಮಂ ಭೀಮಪಯ್ಯನ" ಎಂಬ ವಾಕ್ಯದಲ್ಲಿರುವ ಮರ್ಮಂ ಶಬ್ದವನ್ನು ಭೀಮಪಯ್ಯನಿಗೇ ಅನ್ವಯಿಸಬೇಕಲ್ಲದೆ, ದೂರಾನ್ವಯದಿಂದ ಜಿನವಲ್ಲಭನಿಗಲ್ಲ"ವೆಂದು ಹೇಳಿ ಪಂಪ ಭಾರತ ಮತ್ತು ಜಿನವಲ್ಲಭನ ಶಾಸನ — ಇವೆರಡರ ವಿವರಗಳ ಆಧಾರದ ಮೇಲಿಂದ ಪಂಪನ ವಂಶ ಚಿತ್ರವೊಂದನ್ನು ನೀಡಿದ್ದಾರೆ.[20] ಇಷ್ಟಾಗಿಯೂ 'ಳ' ಸಾಧ್ಯವಿಲ್ಲವೆಂದೂ ವಬ್ಬಣಬ್ಬೆ ಮಾತ್ರವೇ ಸಾಧ್ಯವೆಂದೂ ಜೋಯಿಸ ಸಿಂಘನ ಮಗಳು ವಬ್ಬಣಬ್ಬೆಯೆಂದೂ ಪಾಂಡುರಂಗರಾವ ದೇಸಾಯಿಯವರು ವಾದಿಸಿ ಅದರ ಸಮರ್ಥನೆಗಾಗಿ 'ವಬ್ಬಣಬ್ಬೆ' ಎಂಬ ಪಾಠದ ಪಡಿಯಚ್ಚನ್ನೂ ಪ್ರತ್ಯೇಕವಾಗಿ ನೀಡಿದರು.[21] ಜಿ.ಎಸ್.ಗಾಯಿ ಅವರು ಇದಕ್ಕೆ ಪ್ರತಿಕ್ರಿಯಿಸುತ್ತಾ[22]

---


19. ಪಾಂಡುರಂಗರಾವ ದೇಸಾಯಿ, 'ತಿದ್ದುಪಡಿಯ ಗಡಿಬಿಡಿ — ಗಂಗಾಧರಂ ಶಾಸನ', ಕ.ನು., 31—8, 1968. ಪು: 3.
20. ಗಾಯಿ ಜಿ.ಎಸ್., 'ಪಂಪನ ತಮ್ಮ ಜಿನವಲ್ಲಭನ ಶಿಲಾಶಾಸನ', ಪ್ರ.ಕ., 50.4, 1969. ಪು: 116.
21. ಪಾಂಡುರಂಗರಾವ ದೇಸಾಯಿ, 'ಗಂಗಾಧರಂ ಶಾಸನ — ಕೈಗೆ ಕನ್ನಡಿ', ಕ.ನು., 32—4,5, 1969. ಪು: 11—13.
22. ಗಾಯಿ ಜಿ.ಎಸ್., 'ಮಮ್ಮಳಬ್ಬಣಬ್ಬೆ'ಯೋ 'ಮಮ್ಮವಬ್ಬಣಬ್ಬೆ'ಯೋ, ಕ.ನು., 32—8, 1969. ಪು: 19—20.

ಶಾಸನದಲ್ಲಿ ಮರ್ಮವಬ್ಬಣಬ್ಬೆ ಎಂಬ ಪಾಠವಿರಬಹುದಾದ ಸಾಧ್ಯತೆಯನ್ನು ನಿರಾಕರಿಸಿದ್ದಾರೆ. ದೇಸಾಯಿಯವರು ತಮ್ಮ ವಾದ ಸಮರ್ಥನೆಗಾಗಿ ನೀಡಿದ ಪಡಿಯಚ್ಚನ್ನು ಕುರಿತು ಅವು "ಮೂಲ ಅಕ್ಷರಗಳ ಯಥಾವತ್ ಛಾಯಾಚಿತ್ರಗಳಾಗಿರದೆ ಕೈಯಿಂದ ಪ್ರತಿ ಮಾಡಿಸಿದ ಅಕ್ಷರಗಳೆಂದು ತಿಳಿಯುತ್ತದೆ" ಎಂಬ ಕಾರಣಕ್ಕಾಗಿ ಅವು ಪ್ರಮಾಣ ಭೂತವಲ್ಲವೆಂದಿದ್ದಾರೆ. ಜೊತೆಗೆ ಅವರು ಆ ಪಾಠದ ಒಂದು ಪಡಿಯಚ್ಚನ್ನೂ ನೀಡಿದ್ದಾರೆ. ಇವೆರಡು ಪಡಿಯಚ್ಚುಗಳನ್ನು ಗಮನಿಸಿದ ಯಾರಿಗಾದರೂ ಗಾಯಿ ಅವರು ತಮ್ಮ ಲೇಖನದ ಜೊತೆಗೆ ಪ್ರಕಟಿಸಿರುವುದೇ ಹೆಚ್ಚು ನೈಜವೆಂದೂ ನಂಬಲರ್ಹ ಪಡಿಯಚ್ಚು ಎಂದೂ ಸಹಜವಾಗಿಯೇ ಅನ್ನಿಸುತ್ತದೆ. ಈ ಪಡಿಯಚ್ಚಿನಲ್ಲಿ 'ಳ' — 'ವ' ಅಕ್ಷರಗಳ ಭೇದ ಸ್ಪಷ್ಟವಾಗಿ ಕಾಣಿಸುತ್ತದೆ.

ಈ ಮೇಲಿನ ಎರಡು ಅಂಶಗಳಿಗೆ ಸಂಬಂಧಿಸಿದಂತೆ ಓತಪ್ರೋತವಾಗಿ ಚರ್ಚೆಗಳು ನಡೆದಿರುವುದನ್ನು ಗಮನಿಸಿದರೆ ಇಂಥ ವಿಷಯಗಳ ಪುನಾರಚನೆಗೆ ತೋರಿದ ಉತ್ಸುಕತೆಯು ನಮಗೆ ಮನದಟ್ಟಾಗುತ್ತದೆ. ಆದರೆ 'ವಬ್ಬಣಬ್ಬೆ' 'ಅಬ್ಬಣಬ್ಬೆ' ಇವುಗಳಲ್ಲಿ ಯಾವುದು ಸರಿಯೆಂದು ನಡೆದ ಚರ್ಚೆಗಳಿಗೆಲ್ಲ ಕಾರಣ ಡಾ: ಎನ್. ವೆಂಕಟರಮಣಯ್ಯನವರು ಶಾಸನದ ಮೂಲ ಪಾಠವನ್ನು ಗ್ರಹಿಸುವಲ್ಲಿ ಆದ ತಪ್ಪಿನ ಪರಿಣಾಮವೇ ಹೊರತು ಶಾಸನದಲ್ಲೇ ಇದ್ದ ಅಸ್ಪಷ್ಟತೆಯಲ್ಲವೆಂಬುದನ್ನಿಲ್ಲಿ ಗಮನಿಸಬೇಕು. ಒಂದು ವೇಳೆ ವೆಂಕಟರಮಣಯ್ಯನವರು ಸರಿಯಾಗಿಯೇ ಗ್ರಹಿಸಿದ್ದರೆ ಇಷ್ಟೆಲ್ಲ ಚರ್ಚೆಗಳು ಬಹುಶಃ ನಡೆಯುತ್ತಲೇ ಇರಲಿಲ್ಲವೆಂದು ತೋರುತ್ತದೆ, ಎಂದು ಹೇಳಿದರೆ ಈ ಮಾತು ಅವರ ಮೇಲೆ ಮಾಡುವ ಆರೋಪವಾಗಬೇಕಿಲ್ಲ.

ಇಷ್ಟಲ್ಲದೆ ಶಾಸನದಲ್ಲಿ ಬಂದ ಇನ್ನಿತರ ವಿವರಗಳನ್ನು ಕುರಿತಂತೆಯೂ ಬೇರೆ ಬೇರೆಯ ಚರ್ಚೆಗಳು ನಡೆದಿವೆ. ಪಂಪ–ಜಿನವಲ್ಲಭರು ಏಕೋದರ ಭ್ರಾತೃಗಳೇ? ಎಂಬ ಪ್ರಶ್ನೆಯನ್ನು ಮೇಲಿನ ಚರ್ಚೆಗಳಲ್ಲಿ ನಡೆದು ಒಂದು ನಿಲುಗಡೆಗೆ

ಬಂದ ಮೇಲೆಂದೂ ಕೇಳಲಾಗಿದೆ.[23] ಇಂಥ ಪ್ರಶ್ನೆಗಳು ನಮಗೆ ಏಳಬೇಕಾದ ಕಾರಣಗಳಿಲ್ಲ. ಏಕೆಂದರೆ ಶಾಸನದಲ್ಲಿನ 'ಭೀಮತನೂಜ' ಎಂಬ ಮಾತಾಗಲಿ, 'ಪಂಪಾರ್ಯಾನುಜ' ಎಂಬ ಮಾತಾಗಲಿ ಜಿನವಲ್ಲಭ ಭೀಮಪಯ್ಯನ ಮಗ ಮತ್ತು ಪಂಪನ ತಮ್ಮ ಎಂಬುದನ್ನು ನಿಸ್ಸಂದಿಗ್ಧವಾಗಿ ಸೂಚಿಸುತ್ತವೆ. ಈ ಎಲ್ಲ ಚರ್ಚೆಗಳನ್ನು ಗಮನಿಸಿದ ಮೇಲೆ ಕೊನೆಗೆ ಪಂಪನ ವಂಶ ವಿವರವನ್ನು ಕುರಿತು ಒಂದು ನಿರ್ಧಾರಕ್ಕೆ ಬರಲು ಸಾಧ್ಯವಾಗಿದೆ. ಪಂಪ ಭಾರತ ಮತ್ತು ಜಿನವಲ್ಲಭನ ಶಾಸನ ಈ ಎರಡೂ ಮೂಲಗಳಲ್ಲಿ ದೊರೆಯುವ ವಿವರಗಳ ಆಧಾರದ ಮೇಲೆ ಈವರೆಗಿನ ಚರ್ಚೆಗಳಿಂದ ಸಿದ್ಧವಾದಂತೆ ಪಂಪನ ವಂಶ ಚಿತ್ರವನ್ನು ಈ ಕೆಳಗಿನಂತೆ ರೇಖಿಸಬಹುದಾಗಿದೆ:




---

23. ಸೀತಾರಾಮ ಜಾಗಿರದಾರ, ಜಿನವಲ್ಲಭನ ಶಾಸನವನ್ನು ಕುರಿತು ಓದುಗನೊಬ್ಬನ ಪ್ರಶ್ನೆಗಳು, ಕ.ನು., 32–4,5, 1969.

ಪಂಪನ ಕಾವ್ಯಗಳಲ್ಲಿ ಅವನ ತಾಯಿಯ ಬಗೆಗಿನ ಯಾವ ವಿವರಗಳೂ ತಿಳಿದು ಬಂದಿಲ್ಲವೆಂದು ಈಗಾಗಲೇ ಪ್ರಸ್ತಾಪಿಸಲಾಗಿದೆ. ಆ ವಿವರಗಳು ನಮಗೆ ತಿಳಿದುದು ಜಿನವಲ್ಲಭನ ಶಾಸನದಿಂದಲೇ. ನಮಗೆ ಈಗಾಗಲೇ ತಿಳಿದ ಸಂಗತಿಗಳಲ್ಲಿದ್ದ ಅರಕೆಗಳಾಗಲಿ, ಅಸ್ಪಷ್ಟತೆಗಳಾಗಲಿ ಮುಂದೆ ಕಾಲಕಾಲಕ್ಕೆ ದೊರೆಯಬಹುದಾದ ಹೊಸ ಆಧಾರಗಳಿಂದ ಪೂರ್ಣವಾಗುತ್ತವೆ, ಸ್ಪಷ್ಟವಾಗುತ್ತಾ ಹೋಗುತ್ತವೆಯೆಂಬ ವಿದಿತ ಸಂಗತಿಯನ್ನು ಈ ಮೇಲಿನ ವಿವರಗಳು ಸಮರ್ಥಿಸುತ್ತವೆ.

ಈ ಮೇಲಿನ ಚರ್ಚೆಗಳಿಗೆ ಸಂಬಂಧಿಸಿದಂತೆ ಇಲ್ಲವೆ ಪೂರಕವಾಗಿ ಇನ್ನಿತರ ಕೆಲವು ಚರ್ಚೆಗಳು ನಡೆದಿವೆ. ಅವೆಲ್ಲ ಪ್ರಧಾನವಾಗಿ ಪಂಪನೇ ಹೇಳಿಕೊಂಡ ಮತ್ತು ಶಾಸನದಲ್ಲೂ ಉಕ್ತವಾದ ಧರ್ಮವುರ; ಅದು ಇದ್ದಿತೆಂದು ಹೇಳಲಾದ ಬೆಜ್ಜ ಸಾಸಿರ ಇತ್ಯಾದಿಗಳ ಪ್ರಾದೇಶಿಕ ನೆಲೆಗಳನ್ನು ಗುರುತಿಸಿಕೊಳ್ಳುವ ಉದ್ದೇಶದವೇ ಆಗಿವೆ. ಪಂಪ ಧರ್ಮವುರ ಅಗ್ರಹಾರವು ಬೆಜ್ಜ ಸಾಸಿರದಲ್ಲಿದ್ದಿತೆಂಬುದನ್ನು ಸ್ಪಷ್ಟವಾಗಿ ಹೇಳಿದ್ದಾನೆ.[24] ಜಿನವಲ್ಲಭನ ಶಾಸನದಲ್ಲಿ "ಸಬ್ಬಿನಾಡ ನಟ್ಟ ನಡುವಣ ಧರ್ಮ್ಮವುರದುತ್ತರ ದಿಗ್ಭಾಗದ" ಎಂಬ ಮಾತಿದೆ.[25] ಈ 'ಬೆಜ್ಜ' ಮತ್ತು 'ಸಬ್ಬಿ' ಇವುಗಳ ಕುರಿತಾಗಿ ಇರುವ ಚರ್ಚೆಗಳು ಅವೆರಡೂ ಒಂದೇ ಪ್ರದೇಶ ಸೂಚಕಗಳೆಂಬುದನ್ನು ಎತ್ತಿ ಹಿಡಿದಿವೆ. ಈ ಬಗ್ಗೆ ಚರ್ಚಿಸುತ್ತ ಜಿ.ಎಸ್.ಗಾಯಿಯವರು ಪಂಪ ಭಾರತದ ಬೆಜ್ಜಗೆ ಚರ್ಚೆ ಎಂಬ ಪಾಠಾಂತರವಿರುವುದನ್ನಾಧರಿಸಿ ಹಳಗನ್ನಡ ಶಾಸನಗಳಲ್ಲಿ 'ಬ' ಮತ್ತು 'ಚ' ಅಕ್ಷರಗಳ ವ್ಯತ್ಯಾಸ ವಿಶೇಷವಲ್ಲದ್ದರಿಂದ 'ಬೆಜ್ಜ' ಎಂಬುದನ್ನು 'ಚರ್ಚೆ' ಎಂದೂ ಓದಬಹುದೆಂದು ಹೇಳಿ ಚಬ್ಬಿಯು ಚಬ್ಬಿಯ — ಸಬ್ಬಿಯ ರೂಪವಾಗಿದ್ದು ಬೆಜ್ಜ ಸಾಸಿರವು ಸಬ್ಬಿ ಸಹಸ್ರದ ರೂಪವೆಂದು ತಿಳಿಯಲು ಅವಕಾಶವುಂಟೆಂದಿದ್ದಾರೆ. ಇದಕ್ಕೆ

---

24. ವಿಕ್ರಮಾರ್ಜುನ ವಿಜಯ, (ಸಂ.) ಬೆಳ್ಳಾವೆ, 14—56.

25. ನೋಡಿ : ಜಿನವಲ್ಲಭನ ಶಾಸನ, ಶಾಸನ ಸಂಗ್ರಹ (ಸಂ.)
ಎಂ.ಎಂ.ಅಣ್ಣಿಗೇರಿ ಮತ್ತು ಆರ.ಶೇಷಶಾಸ್ತ್ರಿ, ಬೆಂಗಳೂರು 1975.
ಪು: 11.

ಪೂರಕವಾಗಿ ಅವರು ಎರಡನೇ ಅರಿಕೇಸರಿಯ ಮೊಮ್ಮಗ ಮೂರನೇ ಅರಿಕೇಸರಿಯ ಪರಭಣಿ ತಾಮ್ರ ಶಾಸನದಲ್ಲಿ ಉಲ್ಲೇಖಿತವಾದ ಸಬ್ಬಿದೇಶ ಸಹಸ್ರ; ಚಾಲುಕ್ಯ ಅರಸ ಜಗದೇಕಮಲ್ಲ ಎರಡನೇ ಜಯಸಿಂಹನ 1017ರ ದೌಲತಾಬಾದ ತಾಮ್ರ ಶಾಸನದಲ್ಲಿ ಉಲ್ಲೇಖಿತವಾದ ಸಬ್ಬಿದೇಶ — ಇವನ್ನೆಲ್ಲ ಪ್ರಸ್ತಾಪಿಸಿ ಈ ಸಬ್ಬಿ ನಾಡು — ಸಬ್ಬಿ ಸಹಸ್ರ — ಚೆಬ್ಬಿ ಸಾಸಿರ — ಇವೆಲ್ಲ ಒಂದೇ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.[26]

ಅರಿಕೇಸರಿಯು ಪಂಪನಿಗೆ ಕೊಟ್ಟ 'ಧರ್ಮಪುರ' ಯಾವುದೆಂಬುದನ್ನು ಸ್ಪಷ್ಟೀಕರಿಸುವ ಕೆಲವು ಪ್ರಯತ್ನಗಳು ನಡೆದಿವೆ. 'ಧರ್ಮಪುರ' ಹೆಸರಿನ ಹಲವು ಗ್ರಾಮಗಳು ಕರೀಂ ನಗರ ಜಿಲ್ಲೆಯಲ್ಲಿ ದೊರೆಯುತ್ತಿರುವುದು ಮತ್ತು ಇಂಥದೇ ಪಂಪನು ಪಡೆದ ಧರ್ಮಪುರವೆಂದು ಸಮರ್ಥಿಸುವ ಯಾವುದೇ ಶಾಸನ ಅಥವಾ ದಾಖಲು ದೊರೆಯದಿರುವುದು ಈ ಎಲ್ಲ ಪ್ರಯತ್ನಗಳು ಎದುರಿಸಿದ ದೊಡ್ಡ ಪ್ರಶ್ನೆಗಳಾಗಿರುವಂತೆ ತೋರುತ್ತದೆ. ಜಿ.ಎಸ್.ಗಾಯಿಯವರು "ವೃಷಭಾದ್ರಿ ಅಥವಾ ಈಗಿನ ಬೊಮ್ಮಲಗುಟ್ಟ ಎಂಬ ಬೆಟ್ಟದ ದಕ್ಷಿಣಕ್ಕೆ .......... ಹತ್ತಿರದಲ್ಲಿ ಧರ್ಮಪುರ ಅಥವಾ ಧರ್ಮಪುರವೆಂಬ ಗ್ರಾಮವಿರುವುದಿಲ್ಲ. ಆದರೆ ಈಗಿನ ಕುರಿಕ್ಯಾಲ ಎಂಬ ಗ್ರಾಮವು ಬೊಮ್ಮಲಮ್ಮ ಗುಟ್ಟದ ದಕ್ಷಿಣಕ್ಕೆ ಐದು—ಆರು ಫರ್ಲಾಂಗು ದೂರವಿದೆ. ಆದುದರಿಂದ ಈಗಿನ ಕುರಿಕ್ಯಾಲ ಹಾಗೂ ಅದರ ಜೊತೆಗಿರುವ ನೇಲಕೊಂಡ ಪಲ್ಲಿ ಮತ್ತು ಕೊಂಡಪಲ್ಲಿ ಎಂಬ ಉಪಗ್ರಾಮಗಳು ಸೇರಿ ಶಾಸನದಲ್ಲಿ ಉಕ್ತವಾದ ಧರ್ಮಪುರ ಅಥವಾ ಧರ್ಮಪುರವಾಗಿರಬಹುದೆನ್ನುತ್ತಾರೆ. ಅವರ ಪ್ರಕಾರ ಕರೀಂ ನಗರ ಜಿಲ್ಲೆಯ ಧರ್ಮಪುರ, ಧರ್ಮಾರ ಊರುಗಳು ಶಾಸನದಲ್ಲಿ ವರ್ಣಿಸಿದ ಧರ್ಮಪುರಕ್ಕೆ ಸರಿಹೋಗುವುದಿಲ್ಲವಾದುದರಿಂದ ಅವು ಪಂಪ ಪಡೆದ ಧರ್ಮಪುರ ಅಲ್ಲ;[27] ಈಚೆಗೆ ಎಂ.ಚಿದಾನಂದಮೂರ್ತಿಯವರು ಗಾಯಿಯವರ ಈ ಅಭಿಪ್ರಾಯವನ್ನು ಕುರಿತಂತೆ "ವಾಸ್ತವವಾಗಿ ಧರ್ಮಪುರವು ಒಂದು ಅಗ್ರಹಾರವಾಗಿದ್ದುದರಿಂದ ಅದು ಈಗಿನ

---

26. 'ಪಂಪನ ತಮ್ಮ ಜಿನವಲ್ಲಭನ ಶಾಸನ', ಪ್ರ.ಕ., 53—4, 1972. ಪು: 80.
27. — — ಅದೇ — — ಪು: 81.

ಕುರ್ಕ್ಯಾಲ, ನೇಲಕೊಂಡನಪಲ್ಲಿ, ಕೊಂಡನಪಲ್ಲಿ ಎಂಬ ಗ್ರಾಮಗಳ ಸಂಕೀರ್ಣವೆಂದು ಭಾವಿಸುವುದು ಸರಿಯಾಗುವುದಿಲ್ಲ. ಈ ಊರುಗಳು ಪರಸ್ಪರ ಒಂದೊಂದು ಮೈಲು ದೂರದಲ್ಲಿದೆ ಮತ್ತು ಆ ಇಡೀ ಸಂಕೀರ್ಣ ಇಂದಿನ ಒಂದು ನಗರದಷ್ಟು ದೊಡ್ಡದಾಗುತ್ತದೆ ಎಂದಿದ್ದಾರೆ.[28] "ಈಗಿನ ಕುರಿಕ್ಯಾಲ ಎಂಬ ಗ್ರಾಮವು ಶಾಸನದಲ್ಲಿರುವ ಧರ್ಮಪುರ ಗ್ರಾಮದ ವರ್ಣನೆಗೆ ಸರಿಹೋಗುತ್ತದೆ." ಎಂಬ ಗಾಯಿಯವರು "ಪ್ರಾಚೀನ ಸ್ಮಾರಕ ಅಥವಾ ಅವಶೇಷಗಳ ದೃಷ್ಟಿಯಿಂದ ಆ ಗ್ರಾಮವನ್ನು ಪರಿಶೀಲಿಸಿದಂತೆ ತೋರುವುದಿಲ್ಲ"ವೆಂದು ಹೇಳುತ್ತಾ ಆ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಧರ್ಮಪುರವನ್ನು ಕುರಿತ ತಮ್ಮ ವಿವರವಾದ ಚರ್ಚೆಯಲ್ಲಿ "ಆ ಊರು ಆ ಗುಡ್ಡದ ದಕ್ಷಿಣಕ್ಕೆ (ಬೊಮ್ಮಲಮ್ಮ ಗುಟ್ಟ) ಅನತಿ ದೂರದಲ್ಲಿರಬೇಕೆಂದೂ ಆ ಜಾಗದಲ್ಲಿ ಕೊನೆಯಪಕ್ಷ ಎರಡು ಕೆರೆಗಳಿದ್ದಿರಬೇಕೆಂದೂ ಮತ್ತು ಆ ಕೆರೆಗಳ ಹಿಂದಿನ ಜಮೀನುಗಳು ಬ್ರಾಹ್ಮಣರ ಉಂಬಳಿ ಜಮೀನುಗಳಾಗಿದ್ದಿರಬೇಕು" ಎಂಬುದನ್ನು ಸಮರ್ಥಿಸಲು ಯತ್ನಿಸಿದ್ದಾರೆ. ಅವರು ಹೇಳುವ ಕೆರೆಗಳು : ಒಂದು, ಕವಿತಾ ಗುಣಾರ್ಣವ ಕೆರೆ (ಜಿನವಲ್ಲಭ ತನ್ನ ಅಣ್ಣನ ಹೆಸರಲ್ಲಿ ಕಟ್ಟಿಸಿದ್ದು. ಎನ್.ವೆಂಕಟರಮಣಯ್ಯನವರು ಗುಡ್ಡದ ಹಿಂಭಾಗದ ಉತ್ತರದ ಕಣಿವೆಯಲ್ಲಿರುವ 'ಉಡನ ಚೆರುವು' ಈ ಕೆರೆಯೆಂದರೆ, ಗಾಯಿ ಮತ್ತು ಕಲಬುರ್ಗಿಯವರು ದಕ್ಷಿಣಕ್ಕಿರುವ 'ಪಾತ ಚೆರುವು' ಅದೆಂದು ಹೇಳಿದರು) ಮತ್ತೊಂದು ಅರಿಕೇಸರಿ ಪಂಪನಿಗೆ ಕೊಟ್ಟ ಧರ್ಮಪುರದಲ್ಲಿ ಮೊದಲೇ ಇದ್ದುದು. ಪಂಪನಿಗೆ ಕೊಟ್ಟ ಧರ್ಮಪುರದಲ್ಲಿ ಒಂದು ಕೆರೆಯಿದ್ದಿರಬಹುದಾದ ಸೂಚನೆಯ ಸಮರ್ಥನೆಗೆ ಎಂ.ಚಿದಾನಂದಮೂರ್ತಿಯವರು "ದೆಸೆ ಮುಖ ಧೂಮದಿಂ ದ್ವಿಜರ ಹೋಮದಿನೊಳ್ಗಿೞ" ಎಂಬ ಪದ್ಯದ ನೆರವನ್ನು ಪಡೆದಿದ್ದಾರೆ. ಇಷ್ಟಾಗಿಯೂ ಧರ್ಮಪುರ ಯಾವುದಿರಬಹುದೆಂಬುದು ಇಂದಿಗೂ ಒಂದು ಸಮಸ್ಯೆಯಾಗಿಯೇ ಉಳಿಯುತ್ತದೆ. ನಾವು ತೋರಿಸಬಹುದಾದ ಯಾವ ಆಧಾರವೂ ಪೂರ್ಣ ಪ್ರಮಾಣದಲ್ಲಿ

---

28. ಚಿದಾನಂದಮೂರ್ತಿ ಎಂ., 'ಕರೀಂ ನಗರ ಜಿಲ್ಲೆಯಲ್ಲಿ ಪಂಪ ಕವಿಯ ತಮ್ಮ ಜಿನವಲ್ಲಭನ ಶಾಸನ : ಹೆಚ್ಚಿನ ಶೋಧಗಳು', ಅಪ್ರಕಟಿತ, 1985.

ನಮ್ಮ ಊಹೆಯನ್ನು ಸಮರ್ಥಿಸುವಲ್ಲಿ ಸೋಲುತ್ತಿರುವುದು ಇದರ ಮುಖ್ಯ ಕಾರಣವಿರಬಹುದೆಂಬಲ್ಲಿ ಅನುಮಾನವಿಲ್ಲ. ಏಕೆಂದರೆ ಒಂದು ಸಾವಿರ ವರುಷಗಳಷ್ಟು ಹಿಂದಿನದಾದ ಅಗ್ರಹಾರವೊಂದನ್ನು ಗುರುತಿಸುವಲ್ಲಿ ನಾವು ಮೊರೆ ಹೋಗಲು ಅವಕಾಶವಿರುವ ಆಧಾರಗಳು ಅಥವಾ ಅವಶೇಷಗಳ ಪ್ರಮಾಣ್ಯತೆಯ ಕುರಿತಾದ ಅನುಮಾನಗಳು ಉಳಿದೇ ಬಿಡುತ್ತವೆ. ಮತ್ತು ಉಳಿಯಬೇಕು ಕೂಡ. ಹೀಗಾಗಿ ಪಂಪನಿಗೆ ಕೊಟ್ಟ ಧರ್ಮಪುರದ ದತ್ತಿಯ ವಿವರವನ್ನೊಳಗೊಂಡ ದಾಖಲೆಯೋ ಅಥವಾ ಶಾಸನವೋ ಮಾತ್ರ ನಮ್ಮ ಊಹೆಗಳ ಸಮರ್ಥನೆಗೆ ಪುಷ್ಟಿಯನ್ನು ನೀಡಬಲ್ಲವು. ಸದ್ಯ ಅಂಥ ಯಾವುದೇ ಸಾಧ್ಯತೆಗಳು ನಮಗಿಲ್ಲ. ಜಿನವಲ್ಲಭನ ಶಾಸನದಲ್ಲಿ ಬರುವ "ಬರೆದುದೆ ತಾಂಬ್ರ ಶಾಸನಂಮುದೇಯವೆ ಧರ್ಮಪುರಂ .........." ಎಂಬ ಮಾತುಗಳು ಪಂಪನಿಗೆ ಅರಿಕೇಸರಿ ಧರ್ಮಪುರವನ್ನು ಕೊಟ್ಟುದರ ದಾಖಲೆಯಾಗಿರಬಹುದಾದ ತಾಮ್ರ ಶಾಸನದ ವಿಷಯವನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಮತ್ತು ಅದು ದೊರೆತ ಪಕ್ಷಕ್ಕೆ ಪಂಪನ ವ್ಯಕ್ತಿ ವಿವರಗಳಿಗೆ ಸಂಬಂಧಿಸಿದಂತೆ ಮಹತ್ವದ ಶೋಧವಾಗುತ್ತದೆಂಬಲ್ಲಿ ಅನುಮಾನವಿಲ್ಲ. ಆದರೆ ಅದೇ ಶಾಸನದಲ್ಲಿ ಬರುವ " .......... ಪೋಗಿ ನೋಡ ಸುನ್ದರ ವೃಷಭಾಚಳೋನ್ನತ ಶಿಲಾತಳದೊಳ್ಬರೆದಕ್ಕರಂಗಳಂ" ಎಂಬ ಮಾತುಗಳು ಅರಿಕೇಸರಿಯು ಪಂಪನಿಗೆ ಹಾಕಿಸಿಕೊಟ್ಟ ಶಿಲಾಶಾಸನವನ್ನೇ ಸೂಚಿಸುತ್ತಿರಬಹುದೇ? ಎಂಬ ಪ್ರಶ್ನೆ ನಮ್ಮ ವಿದ್ವಾಂಸರನ್ನು ಕಾಡಿದೆ. ಈ ಮಾತುಗಳನ್ನಾಧರಿಸಿ ಇತರ ಕೆಲವು ಊಹೆಗಳೂ ನಡೆದಿವೆ. ಅಂಥ ಊಹೆಗಳು ಜಿನವಲ್ಲಭನ ಶಾಸನ ರಚನೆಯ ಹಿಂದಿರಬಹುದಾದ ಕಾರಣವನ್ನು ಕುರಿತಿವೆ ಕೂಡ. ಅವುಗಳಲ್ಲಿ ಎರಡು ಹೀಗಿವೆ: ಅರಿಕೇಸರಿ ಪಂಪನಿಗೆ ಕೊಟ್ಟ ತಾಮ್ರ ಶಾಸನ ಕಳೆದು ಹೋಗಿ ಪಂಪನ ಕಾಲಾನಂತರ ಜನರಿಗೆ ಬಂದಿರಬಹುದಾದ ಸಂದೇಹವನ್ನು ಪರಿಹರಿಸುವ ಕಾರಣದಿಂದ ಜಿನವಲ್ಲಭ ಈ ಶಾಸನವನ್ನು ಹಾಕಿಸಿರಬಹುದು; ಧರ್ಮಪುರದ ದತ್ತಿಯನ್ನು ಊರ್ಜಿತಪಡಿಸಿಕೊಳ್ಳಲು ಜಿನವಲ್ಲಭ ವೃಷಭಗಿರಿಯ ಮೇಲೆ ಅದನ್ನು ಶಾಶ್ವತವಾದ ದಾಖಲೆಯಾಗುವಂತೆ ಮಾಡಿರಬಹುದು. ತಾಮ್ರ ಪಟ ಕಳೆದು ಹೋಗಿತ್ತೆಂಬುದಾಗಲಿ, ಈ ಶಾಸನ ಪಂಪನ ಮರಣೋತ್ತರ ಶಾಸನವೆಂಬುದಾಗಲಿ

ಮೇಲುನೋಟಕ್ಕೆ ಸಂಗತವೆನ್ನಿಸಬಹುದಾದರೂ ಊಹೆಗಳು ಮಾತ್ರವಲ್ಲದೆ ಬೇರೆಯಲ್ಲ. ಮೇಲೆ ಉದ್ಧರಿಸಿದ ಮಾತುಗಳನ್ನು ಇತ್ತೀಚೆಗೆ ಎಂ.ಚಿದಾನಂದಮೂರ್ತಿಯವರು ಪಂಪನಿಗೆ ಧರ್ಮಪುರವು ದತ್ತಿಯಾಗಿ ಬಂದುದರಿಂದ ಜನರಿಗೆ ಹುಟ್ಟಿದ ಸಂಭ್ರಮವನ್ನು ಸೂಚಿಸುತ್ತವೆ ಎಂದು ವಿವರಿಸಿರುವುದು[29] ಸಮರ್ಥನೀಯವೆಂಬಂತೆ ತೋರುತ್ತದೆ.

ಇದಿಷ್ಟು ಜಿನವಲ್ಲಭನ ಶಾಸನದ ಸಂಬಂಧದಲ್ಲಿ ಪಂಪನ ವ್ಯಕ್ತಿವಿವರಗಳನ್ನು ಕುರಿತಂತೆ ನಡೆದ ಅಧ್ಯಯನಗಳ ಸ್ವರೂಪ. ಇನ್ನು ಮುಂದೆ ಪಂಪನ ಆಶ್ರಯದಾತ ಅರಿಕೇಸರಿಯ ಸಂಬಂಧದಲ್ಲಿ ನಡೆದಿರುವ ಚರ್ಚೆಗಳನ್ನು ಗಮನಿಸಬಹುದು.

### 3.3.2 ಅರಿಕೇಸರಿಯ ವಂಶಾವಳಿಯನ್ನು ಕುರಿತ ಚರ್ಚೆಗಳು

ಈ ಹಿಂದಿನ ಅವಲೋಕನದಿಂದ ಪಂಪನ ವ್ಯಕ್ತಿ ವಿವರಗಳನ್ನು ಕುರಿತಂತೆ ಬಹಳಷ್ಟು ಚರ್ಚೆಗಳು ನಡೆದಿವೆಯೆಂಬುದು ಮನವರಿಕೆಯಾಗುತ್ತದೆ. ಬಾಹುಳ್ಯದ ದೃಷ್ಟಿಯಿಂದ ಗಮನಿಸಿದರೆ, ಇಷ್ಟೇ ಪ್ರಮಾಣದ ಚರ್ಚೆಗಳು ಅರಿಕೇಸರಿಯ ವಂಶಾವಳಿಯನ್ನು ಕುರಿತಂತೆ ಕೂಡ ನಡೆದಿವೆ. ಪಂಪ ಅರಿಕೇಸರಿಯನ್ನು ತನ್ನ ಆಶ್ರಯದಾತನೆಂದು ಹೇಳಿಕೊಂಡಿರುವನಲ್ಲದೆ, ಆ 'ಭೂಪೋತ್ತಮ' ನನ್ನು ಭಾರತ ಕಥೆಯ ಅರ್ಜುನನೊಂದಿಗೆ ಹೋಲಿಸಿ ಸಮೀಕರಿಸಿದ್ದಾನೆಂಬ ಅಂಶ ಈಗಾಗಲೆ ಸರ್ವವಿದಿತವಾಗಿರುವ ಸಂಗತಿ. ಈ ಸಮೀಕರಣದ ಕಾರಣದಿಂದ ಪಂಪ ಭಾರತ ಕಥೆಯನ್ನು ಹೇಳಲು ಪಾಂಡು– ಕುರು ಕುಲಗಳ ವಂಶಾನುಕ್ರಮವನ್ನು ಹೇಳುವುದು ಎಷ್ಟು ಅನಿವಾರ್ಯವೋ ಅಷ್ಟೇ ಅನಿವಾರ್ಯವೆಂಬಂತೆ ಅರಿಕೇಸರಿಯ

---

29. ಚಿದಾನಂದಮೂರ್ತಿ ಎಂ., 'ಕರೀಂ ನಗರ ಜಿಲ್ಲೆಯಲ್ಲಿ ಪಂಪ ಕವಿಯ ತಮ್ಮ ಜಿನವಲ್ಲಭನ ಶಾಸನ : ಹೆಚ್ಚಿನ ಶೋಧಗಳು', ಅಪ್ರಕಟಿತ, 1985.

ವಂಶಾನುಕ್ರಮವನ್ನು ಹೇಳಿದ್ದಾನೆ. ಪಂಪ ಭಾರತದಲ್ಲಿ ಬರುವ ಅರಿಕೇಸರಿಯ ವಂಶಾವಳಿಯನ್ನು ಹೀಗೆ ರೇಖಿಸಬಹುದು :—

ಚಾಳುಕ್ಯ ವಂಶ

1. ಯುದ್ಧಮಲ್ಲ I
(ಸಪಾದ ಲಕ್ಷ ಕ್ಷಿತಿಯ ಅರಸು)

↓

2. ಅರಿಕೇಸರಿ I

↓

3. ನರಸಿಂಹ I    4. ಭದ್ರದೇವ

↓

5. ಯುದ್ಧಮಲ್ಲ II [30]
(ನರಸಿಂಹನ ಅಗ್ರಸುತ, ಇತರರ ಉಲ್ಲೇಖವಿಲ್ಲ)

↓

6. ಬದ್ದೆಗ
('ಪಿರಿಯ ಮಗ' ಇತರರ ಉಲ್ಲೇಖವಿಲ್ಲ)

↓

7. ಯುದ್ಧಮಲ್ಲ III [30]

↓

8. ನರಸಿಂಹ II — ಜಾಕವ್ವೆ (ಹೆಂಡತಿ)

↓

9. ಅರಿಕೇಸರಿ II (ಪಂಪನ ಆಶ್ರಯದಾತ)

---

30. ಮುಳಿಯ ತಿಮ್ಮಪ್ಪಯ್ಯನವರು ಮೇಲೆ ಉದ್ಧರಿಸಿದ ವಂಶಾನುಕ್ರಮದ ಎರಡನೇ ಮತ್ತು ಮೂರನೇ ಯುದ್ಧಮಲ್ಲರನ್ನು ದುಗ್ಧಮಲ್ಲ (I) ಮತ್ತು ದುಗ್ಧಮಲ್ಲ (II) ಎಂದು ಗ್ರಹಿಸಿದ್ದಾರೆ. (ನೋಡಿ: ನಾಡೋಜ ಪಂಪ, ಮಂಗಳೂರು, 1938. ಪು: 20—21) ಪಂಪ ಭಾರತದ ರೈಸ್ ಪರಿಷ್ಕರಣದಲ್ಲಿ 'ದುಗ್ಧಮಲ್ಲ' ಎಂಬ ಪಾಠವಿದೆ. ಬೆಳ್ಳಾವೆ ಪರಿಷ್ಕರಣದಲ್ಲಿ 'ಯುದ್ಧಮಲ್ಲ' ಎಂಬುದನ್ನು ಸ್ವೀಕರಿಸಿ, 'ದುಗ್ಧಮಲ್ಲ' ಎಂಬುದನ್ನು ಪಾಠಾಂತರವಾಗಿ ನೀಡಲಾಗಿದೆ.

## 3.3.2.1 ಅರಿಕೇಸರಿಯ ವಂಶಾವಳಿಯನ್ನು ಕುರಿತ ಚರ್ಚೆಗಳಿಗೆ ವೇದಿಕೆಯನ್ನು ನಿರ್ಮಿಸಿದ ಕೆಲವು ಶಾಸನ ಮೂಲಗಳು

ಈ ವಂಶಾನುಕ್ರಮದಲ್ಲಿ ಕೊನೆಗೆ ಬಂದ ಎರಡನೆಯ ಅರಿಕೇಸರಿ ಪಂಪನ ಆಶ್ರಯದಾತ. ಪಂಪ ಅವನನ್ನು ಸಾಮಂತ ಚೂಡಾಮಣಿಯೆಂದು ಕರೆದಿದ್ದಾನೆ. ತಾನು ಅವನ ಆಶ್ರಯದಲ್ಲಿ ಒಬ್ಬ ಕವಿ ಮಾತ್ರ ಅಲ್ಲ, ಸ್ನೇಹಿತ ಕೂಡ ಎಂದು ಹೇಳಿಕೊಂಡಿದ್ದಾನೆ. ಹೀಗಾಗಿ, ಮುಖ್ಯವಾಗಿ ಅರಿಕೇಸರಿಯನ್ನು ಅರ್ಜುನನೊಂದಿಗೆ ಸಮೀಕರಿಸಿದ್ದು, ಅವನು ತನ್ನ ಆಶ್ರಯದಾತ ಹಾಗೂ ಸ್ನೇಹಿತನೆಂದು ಹೇಳಿದ್ದು ಇವೆಲ್ಲ ಪಂಪ ಭಾರತದ ಓದಿನಲ್ಲಿ ಗಮನ ಸೆಳೆದ ವಿಚಾರಗಳಾಗಿವೆ, ಹಾಗೂ ಈ ಸಂಬಂಧದಲ್ಲಿ ನಡೆದ ಚರ್ಚೆಗಳ ನೆಲೆಗಟ್ಟುಗಳಾಗಿವೆ. ಇದಕ್ಕೂ ಮುಖ್ಯವಾದ ಎರಡು ಅಂಶಗಳು ಅರಿಕೇಸರಿಯ ವಂಶಾವಳಿಯ ಕುರಿತಾದ ಚರ್ಚೆಗಳ ಹಿಂದಿರುವಂತೆ ತೋರುತ್ತದೆ. ಒಂದು, ಪಂಪ ಭಾರತದಲ್ಲಿ ಬರುವ ಮೇಲಿನದೇ ವಂಶಾವಳಿಯನ್ನುಳ್ಳ ಶಾಸನಗಳು ದೊರೆತಿದ್ದು ಶಾಸನಗಳು ಮತ್ತು ಪಂಪಭಾರತ ಇವೆರಡೂ ಕಟೆ ಬರುವ ವಂಶಾವಳಿ ಒಂದೇ? ಅಥವಾ ಬೇರೆಯೇ? ಎಂಬುದು. ಮತ್ತೊಂದು, ಈ ವಂಶಾವಳಿಯ ಚಾಲುಕ್ಯ ಅರಸರು ಚಾಲುಕ್ಯ ವಂಶದ ಯಾವ ಶಾಖೆಯಲ್ಲಿ ಸೇರುವರು ಎಂಬುದು. ಬಹುಮುಖ್ಯವಾಗಿ ಇವೆರಡು ಪ್ರಶ್ನೆಗಳು ಅರಿಕೇಸರಿಯ ವಂಶಾವಳಿಯನ್ನು ಕುರಿತು ಚರ್ಚಿಸಿದ ಎಲ್ಲರನ್ನೂ ಒಂದಿಲ್ಲೊಂದು ರೀತಿಯಲ್ಲಿ ಕಾಡಿವೆ. ಹಾಗಾಗಿ ಇವುಗಳೇ ಆ ಚರ್ಚೆಗಳ ಹಿಂದಿರುವ ಕಾರಣಗಳೂ ಆಗಿವೆಯೆನ್ನಬಹುದು.

ನಮಗೆ ಈಗಾಗಲೆ ದೊರೆತಿರುವ ವೇಮುಲವಾಡ ಶಾಸನ ಮತ್ತು ಪರಭಣಿ ತಾಮ್ರ ಪಟ್ಟ — ಇವೆರಡೂ ಅರಿಕೇಸರಿಯ ವಂಶಾವಳಿಯ ವಿವರಗಳನ್ನು ಒಳಗೊಂಡಿವೆ. ವೇಮುಲವಾಡ ಶಾಸನ ಪಂಪನ ಆಶ್ರಯದಾತನಾದ ಎರಡನೇ ಅರಿಕೇಸರಿ ಹಾಕಿಸಿದ್ದು. ಪರಭಣಿ ತಾಮ್ರ ಪಟ್ಟ ಎರಡನೇ ಅರಿಕೇಸರಿಯ ಮೊಮ್ಮಗನಾದ ಮೂರನೇ

ಅರಿಕೇಸರಿಯು ಹಾಕಿಸಿದ್ದು. ಇವೆರಡಲ್ಲದೆ ಕೊಲ್ಲಿಪಾರ ದಾನ ಪತ್ರವೊಂದು ಸಹ ದೊರೆತಿದೆ. ಪಂಪ ಭಾರತದಲ್ಲಿ ಬರುವ ವಂಶಾನುಕ್ರಮಕ್ಕೂ, ವೇಮುಲವಾಡ ಶಾಸನ, ಪರಭಣಿ ತಾಮ್ರ ಶಾಸನ — ಇವುಗಳಲ್ಲಿ ಬರುವ ವಂಶಾನುಕ್ರಮಕ್ಕೂ ಅಂಥ ಗಮನಾರ್ಹವಾದ ವ್ಯತ್ಯಾಸವೇನೂ ಇಲ್ಲ. ಪಂಪ ಭಾರತದಲ್ಲಿ ಸೂಚಿತವಾದ ಮೊದಲ ಅರಸ ಯುದ್ಧಮಲ್ಲನನ್ನು ವೇಮುಲವಾಡ ಶಾಸನ ವಿನಯಾದಿತ್ಯ ಎಂಬ ವಿಶೇಷಣದೊಂದಿಗೆ ಕರೆದಿದೆ. ವಿಕ್ರಮಾರ್ಜುನ ವಿಜಯ ಮತ್ತು ಪರಭಣಿ ತಾಮ್ರ ಪಟ್ಟ ಇವೆರಡೂ ಹೇಳುವ ಒಂದನೇ ಅರಿಕೇಸರಿಯ ಮತ್ತೊಬ್ಬ ಮಗ ಭದ್ರದೇವನನ್ನು ಕುರಿತು (ಒಂದನೇ ನರಸಿಂಹನ ಸೋದರ) ವೇಮುಲವಾಡ ಶಾಸನ ಮೌನವಿರುವುದಲ್ಲದೆ, ಐದು ಮತ್ತು ಆರನೆಯ ಅರಸರಾದ ಬದ್ದೆಗ ಮತ್ತು ಯುದ್ಧಮಲ್ಲರನ್ನು ಉಲ್ಲೇಖಿಸಿಲ್ಲ. ಎರಡನೆಯ ಅರಿಕೇಸರಿಯ ಪತ್ನಿ ರೇವಕನಿರ್ಮಡಿ ಎಂದು ವೇಮುಲವಾಡ ಶಾಸನ ಹೇಳಿದರೆ ಪರಭಣಿ ತಾಮ್ರ ಪಟ್ಟದಲ್ಲಿ ಲೋಕಾಂಬಿಕೆ ಎಂದು ಹೇಳಲಾಗಿದೆ. ವಿಕ್ರಮಾರ್ಜುನ ವಿಜಯ ಮತ್ತು ಎರಡನೇ ಅರಿಕೇಸರಿಯ ವೇಮುಲವಾಡ ಶಾಸನದಲ್ಲಿ ಬರುವ ವಂಶಾನುಕ್ರಮ ಯುದ್ಧಮಲ್ಲನಿಂದ ಪ್ರಾರಂಭವಾಗಿ ಎರಡನೇ ಅರಿಕೇಸರಿಯೊಂದಿಗೆ ಮುಗಿಯುತ್ತದೆ. ಪರಭಣಿ ತಾಮ್ರ ಪಟ್ಟದಲ್ಲಿ ಎರಡನೇ ಅರಿಕೇಸರಿಯ ನಂತರ ಬದ್ದೆಗ ಮತ್ತು ಮೂರನೇ ಅರಿಕೇಸರಿಯ ಉಲ್ಲೇಖವಿದೆ. ಇಷ್ಟನ್ನುಳಿದು ವಿಕ್ರಮಾರ್ಜುನ ವಿಜಯ, ವೇಮುಲವಾಡ ಶಾಸನ ಹಾಗೂ ಪರಭಣಿ ತಾಮ್ರ ಪಟ್ಟ — ಈ ಮೂರೂ ನೀಡುವ ಅರಿಕೇಸರಿಯ ವಂಶಾವಳಿಯ ವಿವರಗಳು ಸಂವಾದಿಗಳೇ ಆಗಿವೆ. ಕೊಲ್ಲಿಪಾರ ಶಾಸನದ ವಂಶಚಿತ್ರ ಇವೆಲ್ಲ ಮೂಲಗಳೂ ನೀಡುವ ವಿವರಗಳಿಗಿಂತ ಬಹುಮಟ್ಟಿಗೆ ಭಿನ್ನವಾಗಿದೆ. ಅದರಲ್ಲಿ ದೊರೆಯುವ ವಂಶಾವಳಿ ಹೀಗಿದೆ :—

ಸತ್ಯಾಶ್ರಯ ರಣ ವಿಕ್ರಮ

↓

ಪೃಥ್ವೀಪತಿ

↓

ಮಹಾರಾಜ

↓

ರಾಜಾದಿತ್ಯ ಪೃಥು ವಿಕ್ರಮ

↓

ವಿನಯಾದಿತ್ಯ ಯುದ್ಧಮಲ್ಲ

↓

ಅರಿಕೇಸರಿ I

ವೇಮುಲವಾಡ ಶಾಸನವನ್ನು ಕುರಿತು ಬರೆಯುವ ಸಂದರ್ಭದಲ್ಲಿ ಬಿ.ವಿ.ಕೃಷ್ಣರಾವ್ ಅವರು ಈ ಕೊಲ್ಲಿಪಾರ ದಾನಪತ್ರವನ್ನು ಕುರಿತು ಪ್ರಸ್ತಾಪಿಸಿದ್ದಾರೆ. ವೇಮುಲವಾಡ ಶಾಸನ ಮತ್ತು ಪಂಪ ಭಾರತಗಳಲ್ಲಿ ಬರುವ ವಂಶಾವಳಿಗಳಲ್ಲಿ ಸಾಮ್ಯತೆಯನ್ನು ಗುರುತಿಸಿಕೊಂಡ ಅವರು ಕೊಲ್ಲಿಪಾರ ದಾನ ಪತ್ರದ ವಂಶಾವಳಿಯಲ್ಲಿ ಈ ಸಂಬಂಧದ ವಿವರಗಳ ಸಾಮ್ಯತೆಯನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಈ ಕುರಿತು ಅವರ ತೀರ್ಮಾನ ರೂಪದ ಮಾತುಗಳು ಹೀಗಿವೆ:[31] "ಕೊಲ್ಲಿಪಾರ ದಾನ ಪತ್ರದ ಕೊನೆಯ ಎರಡು ಹೆಸರುಗಳೂ, ನಮ್ಮ (ವೇಮುಲವಾಡ) ಶಾಸನದ ಮೊದಲೆರಡು ಹೆಸರುಗಳೂ

---

31. Krishna Rao B.V., Ve (Lemulavada Inscription of Arikesarin II, J.A.H.R.S.J. Vol. VI Part 3 and 4, 1932. P: 178.

ಸಂಪಾದಿಯಲಾಗಿದೆ. ಆದುದರಿಂದ ನಮ್ಮ (ವೇಮುಲವಾಡ) ಶಾಸನದ ವಿವರಗಳ ಪ್ರಕಾರ ಇಮ್ಮಡಿ ಅರಿಕೇಸರಿಯ ವಂಶವು ವಿನಯಾದಿತ್ಯ ಯುದ್ಧಮಲ್ಲನಿಂದ ಪ್ರಾರಂಭವಾಗುತ್ತದೆಯೆಂದು ತಿಳಿಯಬಹುದು." ಅವರು ಈ ಮಾತುಗಳನ್ನು ಮುಂದುವರಿಸುತ್ತಾ ಇವೆರಡೂ ವಂಶಾವಳಿಗಳನ್ನು ಒಟ್ಟಿಗೆ ಇರಿಸಿ ಈ ವಂಶದ ವಂಶಾವಳಿಯೊಂದನ್ನು ನೀಡಿದ್ದಾರೆ.[32] ಈ ವಂಶಾವಳಿಯ ಪಟ್ಟಿಯನ್ನು ಇಲ್ಲಿ ಉದ್ಧರಿಸಬೇಕಾದ ಅಗತ್ಯ ಇಲ್ಲವಾದರೂ, ಅದರಲ್ಲಿರುವ ಕೆಲವು ಗೊಂದಲಗಳ ಕುರಿತು ಪ್ರಸ್ತಾಪಿಸಬೇಕಾದ ಕಾರಣಕ್ಕಾಗಿ ಅದನ್ನಿಲ್ಲಿ ಉದ್ಧರಿಸುವ ಅಗತ್ಯವಿದೆ.

<u>ಚಾಲುಕ್ಯಾನ್ವಯ</u>

1. ಸತ್ಯಾಶ್ರಯ

↓

2. ಪೃಥ್ವೀಪತಿ

↓

3. ಮಹಾರಾಜ

↓

4. ರಾಜಾದಿತ್ಯ ಪೃಥು ವಿಕ್ರಮ

↓

5. ವಿನಯಾದಿತ್ಯ ಯುದ್ಧಮಲ್ಲ

↓

---

32. **Krishna Rao B.V., Ve (Le)mulavada Inscription of Arikesarin II, J.A.H.R.S. Vol. VI Part 3 and 4, 1932. P: 179.**
ಇಲ್ಲಿ ಇಂಗ್ಲಿಷಿನಲ್ಲಿ ನೀಡಲಾಗಿರುವ ವಿವರಗಳನ್ನು ಕನ್ನಡಕ್ಕೆ ತದ್ವತ್ ಉದ್ಧರಿಸಿಕೊಳ್ಳಲಾಗಿದೆ.

6. ಅರಿಕೇಸರಿ I

↓

7. ನರಸಿಂಹ I (ಅಥವಾ ನರಸಿಂಹಭದ್ರದೇವ)

↓

8. ಬುಗ್ಗಮಲ್ಲ ಅಥವಾ ಯುದ್ಧಮಲ್ಲ

↓

9. ಸೋಲದ ಗಂಡ ಬದ್ದೆಗ

↓

10. ಯುದ್ಧಮಲ್ಲ II

↓

ನರಸಿಂಹ II (ಜಾಕವ್ವ) — ಮಹಾ ಸಾಮಂತಾಧಿಪತಿ ಅರಿಕೇಸರಿ (ಚಂದ್ರಾನನ ದೇವಿಯಿಂದ)

ಇದು ಬಿ.ವಿ.ಕೃಷ್ಣರಾವ್ ಅವರು ನೀಡಿರುವ 'ಪುನಾರಚಿತ' ವಂಶ ಚಿತ್ರ. ಈ ಪುನಾರಚನೆಗೆ ಅವರು ಪಂಪನ ವಿಕ್ರಮಾರ್ಜುನ ವಿಜಯವನ್ನು ನೋಡಿದ್ದಾರೆಂಬುದು ಸ್ಪಷ್ಟ. ಅವರೇ ಗುರುತಿಸಿರುವಂತೆ ವೇಮುಲವಾಡ ಶಾಸನದಲ್ಲಿ ಆರು ಜನ ಅರಸರ ಹೆಸರುಗಳನ್ನು ಮಾತ್ರವೆ ಹೇಳಲಾಗಿದೆ. ವಿಕ್ರಮಾರ್ಜುನ ವಿಜಯವು ಹೇಳುವ — ಈ ಮೊದಲೇ ಗಮನಿಸಿದಂತೆ — ವಂಶಾವಳಿಯು ಐದು ಮತ್ತು ಆರನೆಯ ಅರಸರುಗಳಾದ ಬದ್ದೆಗ ಮತ್ತು ಯುದ್ಧಮಲ್ಲರನ್ನು ಇಲ್ಲಿ ಹೆಸರಿಸಿಲ್ಲ. ವೇಮುಲವಾಡ ಶಾಸನದಲ್ಲಿ ಅನುಕ್ತವಾಗಿರುವ ಈ ಹೆಸರುಗಳಿಗೆ ಸಂಬಂಧಿಸಿದಂತೆ "ಈ ಶಾಸನದ ರಚನಕಾರನಿಗೆ ಐತಿಹಾಸಿಕ ಸಂಗತಿಗಳ ಸ್ಪಷ್ಟ ಜ್ಞಾನವಿಲ್ಲದಿರಬಹುದು" ಎಂದಿದ್ದಾರೆ. ವೇಮುಲವಾಡ ಶಾಸನ ಮತ್ತು ವಿಕ್ರಮಾರ್ಜುನ ವಿಜಯ —

ಇವೆರಡೂ ಮೂಲಗಳ ವಂಶಾವಳಿ ಸಂವಾದಿಯಾಗಿರುವುದನ್ನು ಗುರುತಿಸಿಯೂ,[33] ಪಂಪ ಒಂದನೇ ಯುದ್ಧಮಲ್ಲನಿಂದ ಹಿಡಿದು ಇಮ್ಮಡಿ ಅರಿಕೇಸರಿಯವರೆಗೆ ನೀಡಿರುವ ವಂಶಾನುಕ್ರಮ ಅಧಿಕೃತವಾಗಿದೆಯೆಂದು ತಿಳಿದೂ ಕೆಲವು ಅಸಾಂಗತ್ಯಗಳನ್ನು, ಗೊಂದಲಗಳನ್ನು ಬಿಡಿಸಿಕೊಳ್ಳುವಲ್ಲಿ ಬಿ.ವಿ.ಕೃಷ್ಣರಾಯರು ಸಫಲರಾದಂತೆ ತೋರದು. ಅಂಥ ಕೆಲವು ಗೊಂದಲಗಳನ್ನು ಇಲ್ಲಿ ಗಮನಿಸಬಹುದು.

ಮೊದಲನೆಯದಾಗಿ, ಒಂದನೇ ಅರಿಕೇಸರಿಯ ಮಗ 'ನರಸಿಂಹ I' ಅಥವಾ 'ನರಸಿಂಹಭದ್ರದೇವ' ಎನ್ನುತ್ತಾರೆ, ಕೃಷ್ಣರಾವ್. ಎಂದರೆ, ಒಂದನೇ ನರಸಿಂಹನ ಮತ್ತೊಂದು ಹೆಸರು 'ನರಸಿಂಹಭದ್ರದೇವ' ಎನ್ನುವ ಗ್ರಹಿಕೆ ಅವರಿಗಿದ್ದಂತಿದೆ. ಅದೇ ರೀತಿ ಇಮ್ಮಡಿ ಅರಿಕೇಸರಿಯನ್ನು ಎರಡನೇ ಯುದ್ಧಮಲ್ಲನ ಮಗನಾಗಿಯೂ ಇಮ್ಮಡಿ ನರಸಿಂಹನ ಸೋದರನಾಗಿಯೂ ಭಾವಿಸಲಾಗಿದೆ. ಅಲ್ಲದೆ ಮೇಲಿನ ವಂಶಾವಳಿಯಲ್ಲಿ

---

33. " .......... therefore we can assume that pedigree according to our record and that given by Pampa are the same and belonged to one and the same family, and tha Arikesarin II of our record is identical with Pampa's patron."

Krishna Rao B.V., Ve (Le) mulavada Inscription of Arikesarian II, J.A.H.R.S./. Vol. VI Part 3 and 4 1932. P: 177.

ಇಮ್ಮಡಿ ಯುದ್ಧಮಲ್ಲನ ಮಕ್ಕಳಾದ ಇವರಿಬ್ಬರೂ ಜಾಕವ್ವ (ನರಸಿಂಹ II) ಮತ್ತು ಚಂದ್ರಾನನೆಯರಿಗೆ ( ಅರಿಕೇಸರಿ II ) ಜನಿಸಿದರೆಂಬಂತಿದೆ. ಎಂದರೆ ಈ ವಂಶಾವಳಿಯ ಪ್ರಕಾರ ಇಮ್ಮಡಿ ನರಸಿಂಹನ ಹೆಂಡತಿ ಜಾಕವ್ವೆ ಅವನ ತಾಯಿಯಾಗಿದ್ದಾಳೆ; ನರಸಿಂಹನ ಮಗನಾದ ಇಮ್ಮಡಿ ಅರಿಕೇಸರಿ ಅವನಿಗೆ ಸೋದರನಾಗಿದ್ದಾನೆ; ಅವನ ತಾಯಿ ಚಂದ್ರಾನನೆ. ಈ ವಿವರಗಳನ್ನು ಬೇರಾವ ಮೂಲದಿಂದಲೂ ಪಡೆದಿಲ್ಲ, ವಿಕ್ರಮಾರ್ಜುನ ವಿಜಯದಿಂದಲೇ ಎಂಬುದು ಒಂದು ವಿಚಿತ್ರ ಸಂಗತಿ. ಏಕೆಂದರೆ ಅವರು 'ಪಂಪನ ಪ್ರಕಾರ ಅರಿಕೇಸರಿಯ ವಂಶಾವಳಿ' ಎಂದು ಪ್ರತ್ಯೇಕವಾಗಿಯೇ ಒಂದೆಡೆಗೆ ಉದ್ಧರಿಸಿದ್ದಾರೆ.[34] ಇಂಥ ತಪ್ಪು ಗ್ರಹಿಕೆಗಳಿಗೆ ಕಾರಣ ಬಹುಶಃ ಫ್ಲೀಟರು ಕನ್ನಡದ ಬಹುದೊಡ್ಡ ವಿದ್ವಾಂಸರು ಎಂಬ ಅತಿರೇಕದ ನಂಬಿಕೆ ಅವರಿಗಿದ್ದುದು. ಏಕೆಂದರೆ, ಕೊರ್ಲ್ಲಪಾರ ದಾನ ಪತ್ರವನ್ನು ಪ್ರಕಟಿಸಿದ ಸೋಮಶೇಖರ ಶರ್ಮರು[35] ಪಂಪ ನೀಡಿದ ವಿವರಗಳನ್ನು ಸರಿಯಾಗಿಯೇ ಗ್ರಹಿಸಿದ್ದರೂ ಸಹ ಕೃಷ್ಣರಾವ ಅವರು ಶರ್ಮರ ಗ್ರಹಿಕೆಯನ್ನು ಅಲ್ಲಗಳೆದರು. ಹೀಗೆ ಅಲ್ಲಗಳೆಯಲು ಸೋಮಶೇಖರ ಶರ್ಮರಿಗಿಂತಲೂ ಫ್ಲೀಟರು ಕನ್ನಡದ ಬಹು ದೊಡ್ಡ ವಿದ್ವಾಂಸರು ಎಂಬ ಒಂದೇ ನಂಬಿಕೆ ಅವರಿಗೆ ಸಾಕಾಯಿತು.[36]

---

34. ಅದೇ, ಪು: 175.

35. (ಭಾರತಿ ತೆಲುಗು ಮಾಸ ಪತ್ರಿಕೆ, Vol. VIII, Part 2)
ಉಧೃತ : ಅದೇ, ಪು: 172.

36. ಅದೇ, ಪು: 175.

ಫ್ಲೀಟರು ಕನ್ನಡದ ದೊಡ್ಡ ವಿದ್ವಾಂಸರೆಂಬುದೇನೋ ಸರಿಯೆ. ಆದರೆ ಅವರು ಎಲ್ಲ ಸಂದರ್ಭಗಳಲ್ಲಿಯೂ ಹೇಳುವುದು ಸಮರ್ಪಕವೆಂದು ಹೇಳಲಾಗದು. ಅವರು ಮಾಡುವ ತಪ್ಪುಗಳಿಗೆ ಕಾರಣ ಕೆಲವೇಳೆ ಅವರವೇ ಮಿತಿಗಳಿರಬಹುದು; ಇನ್ನು ಕೆಲವೇಳೆ ಅವರು ಆಶ್ರಯಿಸಿದ ಸಾಮಗ್ರಿಯ ಮಿತಿಯೂ ಕಾರಣವಾಗಬಹುದು. ಉದಾ :— 'ನರಸಿಂಹಭದ್ರದೇವ' ಎಂಬುದು ಒಂದೇ ಹೆಸರೆಂದು ಗ್ರಹಿಸಲು ಅವಕಾಶವಿಲ್ಲದಿರುವಾಗಲೂ ಅವರು ಹಾಗೆ ಗ್ರಹಿಸಿದ್ದಾರೆ. ಬೆಳ್ಳಾವೆಯವರ ಪರಿಷ್ಕರಣದಲ್ಲಿ ಈ ವಿಚಾರ ಬರುವ ಪದ್ಯ ಹೀಗಿದೆ :—

"ಅರಿಕೇಸರಿಗಾತ್ಮಜರರಿ ।
ನರಪ ಶಿರೋದಳನ ಪರಿಣತೋಗ್ರಾಸಿ ಭಯಂ ॥
ಕರ‿ಕರರಾಯರ್ವರೊಳಾರ ।
ದೊರೆಯೆನೆ ನರಸಿಂಹ ಭದ್ರದೇವರ ನೆಗಳ್ದರ ॥"[37]

ಇದಕ್ಕೂ ಮೊದಲಿನ ಲೂಯಿ ರೈಸರ ಪರಿಷ್ಕರಣದಲ್ಲಿ ಮೂರನೇ ಪಾದದಲ್ಲಿ "ಕರರೀಕರಯೀರ್ವರೊಳ್ ..........." ಎಂದಿರುವುದನ್ನು ಹೊರತು ಬೇರಾವ ಭಿನ್ನ ಪಾಠವೂ ಇಲ್ಲ. ಎಂದರೆ ಇದಕ್ಕಿಂತ ಬೇರೆಯಾದ ಪಾಠವೊಂದನ್ನು ಫ್ಲೀಟರು ಆಶ್ರಯಿಸಿರಲು ಸಾಧ್ಯವಿಲ್ಲ. ರೈಸ್ ಅವರ ಪರಿಷ್ಕರಣದಲ್ಲಿ ಕೂಡ ಅರಿಕೇಸರಿಗೆ ನರಸಿಂಹ ಮತ್ತು ಭದ್ರದೇವ ಎಂಬ ಇಬ್ಬರು ಮಕ್ಕಳೆಂದಲ್ಲದೆ ಒಬ್ಬನೇ ಮಗನೆಂದಾಗಲಿ, ಅವನ ಹೆಸರು 'ನರಸಿಂಹ‿ಭದ್ರದೇವ' ಎಂದಾಗಲಿ ಹೇಳಲು ಅವಕಾಶವಿಲ್ಲ. ಮೇಲಾಗಿ 'ಆತ್ಮಜರ', 'ಭಯಂಕರ ಕರರ,' 'ಆಯಿರ್ವರೊಳ್', ನೆಗಳ್ದರ — ಈ ಎಲ್ಲ ಪ್ರಯೋಗಗಳಲ್ಲಿಯೂ ಬಹುವಚನ ಸೂಚನೆಯೇ ಇದೆ. ಹೀಗಿರುವಲ್ಲಿ ಫ್ಲೀಟರು ತಪ್ಪಾಗಿ

---

37. ನೋಡಿ: ವಿಕ್ರಮಾರ್ಜುನ ವಿಜಯ, (ಸಂ.) ಬೆಳ್ಳಾವೆ, 1—22; ರೈಸ್, 1—22.

ಗ್ರಹಿಸಲು ಅವರ ಮಿತಿಯೇ ಕಾರಣವಲ್ಲದೆ ಬೇರೆಯಲ್ಲ ಎಂದೇ ಹೇಳಬೇಕಾಗುತ್ತದೆ.

ಇಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಅಂಶ, ಇಮ್ಮಡಿ ಅರಿಕೇಸರಿ ಮತ್ತು ಇಮ್ಮಡಿ ನರಸಿಂಹ ಇವರ ಸಂಬಂಧವನ್ನು ಕುರಿತ ತಪ್ಪು ಗ್ರಹಿಕೆಯದು. ಪ್ರಚಲಿತ ಪಾಠಗಳ ಆಧಾರದಿಂದ ಇಮ್ಮಡಿ ನರಸಿಂಹನ ಹೆಂಡತಿ ಜಾಕವ್ವೆ; ಅವನ ಮಗ ಅರಿಕೇಸರಿಯೆಂದು ತಿಳಿಯಲು ಯಾವ ಅಡ್ಡಿಯೂ ಇಲ್ಲ. ಹೀಗಿರುವಾಗ ಇಮ್ಮಡಿ ಅರಿಕೇಸರಿ ಮತ್ತು ಇಮ್ಮಡಿ ನರಸಿಂಹ — ಇವರಿಬ್ಬರೂ ಇಮ್ಮಡಿ ಯುದ್ಧಮಲ್ಲನ ಮಕ್ಕಳೆಂದೂ ಅನುಕ್ರಮವಾಗಿ ಅವರು ಚಂದ್ರಾನನೆ ಮತ್ತು ಜಾಕವ್ವೆಯರಿಗೆ ಜನಿಸಿದರೆಂದೂ ಬಿ.ಬಿ.ಕೃಷ್ಣರಾವ್ ಅವರು ಹೇಳುವುದು ತೀರ ವಿಚಿತ್ರವಾಗಿ ಕಾಣುತ್ತದೆ. ಚಂದ್ರಾನನೆ ಎಂಬಾಕೆ ಅರಿಕೇಸರಿಗೆ ಜನ್ಮವಿತ್ತಳೆಂಬುದಿರಲಿ, ಆ ಹೆಸರಿನ ಒಬ್ಬ ರಾಣಿ ಇಡೀ ಈ ವಂಶದಲ್ಲೇ ಎಲ್ಲಿಯೂ ಬಂದಂತೆ ಕಾಣುವುದಿಲ್ಲ. 'ಚಂದ್ರಾನನೆ' ಎಂಬ ಪದ ಜಾಕವ್ವೆಯ ಗುಣಾತಿಶಯವನ್ನು ಹೇಳಲು ಬಳಕೆಯಾದ ಒಂದು ಪದವೇ ಹೊರತು, ಅದೇ ಒಂದು ಹೆಸರಲ್ಲ. ಅದು ಒಂದು ಹೆಸರಾಗುವ ಪಕ್ಷಕ್ಕೆ ವಿಳೋಳ ನೀಳಾಳಕೆ ಎಂಬುದೂ ಒಬ್ಬಳು ರಾಣಿಯ ಹೆಸರೆಂದು ಹೇಳಬೇಕಾದೀತು. ಇಂಥ ವಿಚಿತ್ರ ಗ್ರಹಿಕೆಗಳಿಗೆ ಅವಕಾಶವಿಲ್ಲವೆಂಬುದು ಈ ಕೆಳಗಿನ ಪದ್ಯಗಳನ್ನು ಗಮನಿಸಿದಾಗ ಖಚಿತವಾಗುತ್ತದೆ :—

"ಆ ನರಸಿಂಹ ಮಹೀಶ ಮ ।
ನೋನಯನ ಪ್ರಿಯೆ ವಿಳೋಳ ನೀಳಾಳಕೆ ಚಂ ॥
ದ್ರಾನನೆ ಜಾಕವ್ವೆ ಬಲಾ ।
ಜಾನಕಿಗಗ್ಗಳಮೆ ಕುಲದೊಳಂ ಶೀಲದೊಳಂ ॥ –[38]

"ಆ ಜಾಕವ್ವೆಗಮಾ ವಸು ।
ಧಾ ಜಂಯು ಸದ್ಗಲ್ಲಭಂಗಮುತ್ತಿ ವಿಶದ ಯಶೋ ॥
ರಾಜಿತ ನೆನಿಪರಿಕೇಸರಿ ।
ರಾಜಂ ತೇಜೋಗ್ನಿ ಮುಗ್ಧ ರಿಪು ನೃಪ ಶಲಭಂ ॥ "[38]

ಬೆಳ್ಳಾವೆ ಪರಿಷ್ಕರಣದ ಈ ಎರಡೂ ಪದ್ಯಗಳು ಲೂಯಿ ರೈಸರ ಪರಿಷ್ಕರಣದಲ್ಲಿ ಕೊಂಚ ಭಿನ್ನವಾಗಿವೆ. ಮೊದಲ ಪದ್ಯದ ಎರಡು ಮತ್ತು ಮೂರನೆಯ ಸಾಲುಗಳು "ಸಾನಂದಶ್ರೀ ವಿಳಾಸವತಿ .......... ಚಂದ್ರಾನನೆ ಚೆಲ್ಕೆಯುಂದಾ" ಎಂದೂ, ಎರಡನೆಯ ಪದ್ಯದಲ್ಲಿ 'ಜಾಕವ್ವೆ' ಎಂಬುದರ ಬದಲಿಗೆ 'ಜಾತವ್ವೆ'; 'ಯಶೋರಾಜಿತ' ಎಂಬುದರ ಬದಲಿಗೆ 'ಯಶೋಭ್ರಾಜಿತ' ಎಂದೂ ಭಿನ್ನವಾಗಿವೆ. ಆದರೂ ಈ ಭಿನ್ನ ಪಾಠಗಳು ಮೇಲೆ ಪ್ರಸ್ತಾಪಿಸಿದ ವಿಚಾರವನ್ನು ಸ್ಥೂಲವಾಗಿಯಾದರೂ ಗ್ರಹಿಸಲು ಅಡ್ಡಿಯಾಗಲಾರವೆಂದು ತೋರುತ್ತದೆ. ಸ್ವತಃ ರೈಸರೇ ತಮ್ಮ ಪಂಪ ಭಾರತದ ಪರಿಷ್ಕರಣವನ್ನು ಪ್ರಕಟಿಸುವ ಮುನ್ನವೇ ಬರೆದ ಲೇಖನವೊಂದರಲ್ಲಿ[39] ಇಮ್ಮಡಿ ನರಸಿಂಹನ ಹೆಂಡತಿ 'ಚಂದ್ರಾನನೆ' ಎಂದೇ ಹೇಳುವರಾದರೂ ಪಂಪ ಭಾರತದ ಪರಿಷ್ಕರಣಕ್ಕೆ ಬರೆದ ಮುನ್ನುಡಿಯಲ್ಲಿ ತಮ್ಮ

---

38. ನೋಡಿ: ವಿಕ್ರಮಾರ್ಜುನ ವಿಜಯ, (ಸಂ.) ಬೆಳ್ಳಾವೆ, 1—39, 41

39. "........... his queen was chandrānane. To them was born Arikesari Raja".

ನೋಡಿ : Lewis Rice, 'Poet Pampa', J.O.R.A.S. of Great Britain and Irland (New Series) Vol. 14. London, 1882. P: 20.

ಮೊದಲ ಅಭಿಪ್ರಾಯವನ್ನು ಬದಲಿಸಿಕೊಂಡಿದ್ದಾರೆ. ಮೊದಲು 'ಚಂದ್ರಾನನೆ' ಎಂಬುದನ್ನು ನರಸಿಂಹನ ರಾಣಿ ಎಂದು ಗ್ರಹಿಸಿದ್ದರೆ ಇಲ್ಲಿ ಅದು ಜಾಕವ್ವೆಯನ್ನು ವರ್ಣಿಸುವ ಪದವೆಂಬುದನ್ನು ಸ್ಪಷ್ಟವಾಗಿ ಖಚಿತಪಡಿಸಿಕೊಂಡಿದ್ದಾರೆ.[40] ಇಷ್ಟಾದರೂ ಅವರು ಜಾಕವ್ವೆ ಎಂಬುದನ್ನು 'ಜಾತವ್ವೆ' ಎಂದೇ ಗ್ರಹಿಸಿದ್ದಾರೆ. ಅವರ ಪರಿಷ್ಕರಣದಲ್ಲಿ ಜಾತವ್ವೆ ಎಂಬ ಪಾಠ ಮಾತ್ರ ದೊರೆಯುತ್ತದೆ.

ಇದೇ ರೀತಿ ಇಮ್ಮಡಿ ನರಸಿಂಹನ ಗುರು ಮುನಿ ಸುಭದ್ರ ಎಂಬುದು ಮತ್ತೊಂದು ತಪ್ಪು ಗ್ರಹಿಕೆ. ಲೂಯಿ ರೈಸರು ಮೊದಲು[41] 'ಮುನಿ ಸುಭದ್ರ' ಇಮ್ಮಡಿ ನರಸಿಂಹನ ಗುರು ಎಂದು ಸ್ಪಷ್ಟವಾಗಿಯೇ ಹೇಳಿದರಾದರೂ, ತಮ್ಮ ಪಂಪ ಭಾರತದ ಪರಿಷ್ಕರಣಕ್ಕೆ ಬರೆದ ಮುನ್ನುಡಿಯಲ್ಲಿ ಅಷ್ಟು ಸ್ಪಷ್ಟವಾಗಿ ಹೇಳದೆ, ಆ ಹೆಸರನ್ನು ಮಾತ್ರ ಪ್ರಸ್ತಾಪಿಸಿದ್ದಾರೆ. ಬಿ.ವಿ.ಕೃಷ್ಣರಾವ ಅವರೂ ಇಮ್ಮಡಿ ನರಸಿಂಹನ ಗುರು 'ಮುನಿ ಸುಭದ್ರ' ಎಂಬುದನ್ನು ಹೇಳಿದ್ದಾರೆ. ಆದರೆ ವಾಸ್ತವವಾಗಿ ಪಂಪ ಇಮ್ಮಡಿ ನರಸಿಂಹನ ಗುರು ಯಾರೆಂದು ಹೇಳುವಲ್ಲಿ ಮೌನವಿದ್ದಾನೆ. ಮುನಿ ಸುಭದ್ರ ಎಂಬುದೊಂದು ಅಪಪಾಠ ಜನಿತವಾದ ಹುಸಿ ಕಲ್ಪನೆ ಮಾತ್ರ. ಇದಕ್ಕೆ ಕಾರಣವಾದ ರೈಸ ಪರಿಷ್ಕರಣದ ಪದ್ಯ ಹೀಗಿದೆ :—

"ಮುಂತರಿಸದಱಿವು ಗುರು ಮತ ।
ದಂತಯುಬು ಸಮುಪಾಳಿಯೆಡೆಗೆ ಪೊಣರ್ದಿರೆ ಚಲಮಂ ॥
ತಿಂತೆಯೊಳೆ ಮಾಪೊರ್ಣ್ಪಡೆ ಗುಣಮೋ ।
ರಂತೆ ನಿಸರ್ಗಮೆ <u>ಸುಭದ್ರ ಮುನಿ ಪುಂಗವನಾ</u> ॥" (1 — 32)

---

40. "........... Jātavve, with a Face like the moon surpassed Jānaki in beauty and virtuous qualities"
ನೋಡಿ : Introduction ವಿಕ್ರಮಾರ್ಜುನ ವಿಜಯಂ (ಸಂ.) ರೈಸ 1898. ಪು: 4.

41. ಪೂರ್ವೋಕ್ತ, ಪು: 20.

ರೈಸ ಪರಿಷ್ಕರಣದ ಈ ಪದ್ಯಕ್ಕೆ ಬೇರಾವ ಪಾಠಾಂತರಗಳೂ ಇಲ್ಲ. ಪದ್ಯ ಇರುವಂತೆಯೇ ಗಮನಿಸುವುದಾದರೆ, ಇಲ್ಲಿ ಬರುವ 'ಸುಭದ್ರ ಮುನಿ ಪುಂಗವನಾ' ಎಂಬ ಪಾಠ ಈ ಕಲ್ಪನೆಗೆ ಪೂರಕವಾಗಿರುವಂತೆ ತೋರುತ್ತದೆ. ಆದರೆ ಈ ಪದ್ಯವನ್ನು ಹೀಗೆ ಅರ್ಥೈಸುವಾಗ, ಇಲ್ಲಿರುವ ಅಸ್ಪಷ್ಟತೆ ನಮ್ಮ ಗಮನಕ್ಕೆ ಬರುತ್ತದೆ. ಮತ್ತು ಆ ಪದ್ಯ ಬರುವ ಸಂದರ್ಭದ ಹಿಂದು–ಮುಂದಿನ ಪದ್ಯಗಳೊಂದಿಗೆ ಸಾತತ್ಯತೆಯನ್ನು ಪಡೆದಂತೆ ತೋರುವುದಿಲ್ಲ. ಆದರೆ ಬೆಳ್ಳಾವೆಯವರು ಪರಿಷ್ಕರಿಸಿದ ಪಂಪ ಭಾರತದಲ್ಲಿ ಈ ಪದ್ಯ ಬೇರೆಯದೇ ಆದ ಅರ್ಥವನ್ನು ಕೊಡುತ್ತದೆ. ಮತ್ತು ಲೂಯಿ ರೈಸ ಅವರ ಪರಿಷ್ಕರಣದಲ್ಲಿ ದೊರೆಯುವ ಪದ್ಯಕ್ಕಿಂತ ಬಹುಪಾಲು ಭಿನ್ನವಾಗಿದೆ.

"ಮೂಂಕರಿಸದಜೀವ ಗುರು ಮಹ ।
ನಾಂಕುಶಮಂ ಪಾಟಿಂಯೆಡೆಗೆ ಪೊಣರ್ದರಿಂಬಲಮಂ ॥
ಕಿಂಕೊಳೆ ಮಾ(ಟ್ಟೈಡೆಗಣಮೆ) ನಿ ।
ರಂಕುಶಮೆನಿಸಿದುದು ಮುನಿಸು ಭದ್ರಾಂಕುಶ(ನಾ) ॥"

ಈ ಪಾಠವನ್ನಾಶ್ರಯಿಸಿ ಇಮ್ಮಡಿ ನರಸಿಂಹನ ಗುರು ಸುಭದ್ರ ಮುನಿಯೆಂದು ಹೇಳುವುದು ಸಾಧ್ಯವಿಲ್ಲ. ಇಂಥ ತಪ್ಪು ಗ್ರಹಿಕೆಗಳಲ್ಲಿ ಕೆಲವಕ್ಕಾದರೂ ಬೆಳ್ಳಾವೆ ಪರಿಷ್ಕರಣ ಹೊರ ಬರುವ ಮುನ್ನ ಪ್ರಚಲಿತವಿದ್ದ ಪಾಠಗಳು ಕಾರಣವಾಗಿವೆಯೆಂಬುದು ನಿಸ್ಸಂಶಯ. ಹಾಗೆ ಪ್ರಚಲಿತವಿದ್ದ ಪಾಠಗಳು, ಒಂದೋ, ರೈಸ ಅವರ ಪರಿಷ್ಕರಣದ್ದಿರಬೇಕು ಅಥವಾ ಆ ಪರಿಷ್ಕರಣಕ್ಕೆ ಬಳಸಿದ ಹಸ್ತಪ್ರತಿಗಳದ್ದಿರಬೇಕು. ರೈಸ ಪರಿಷ್ಕರಣದ ಪಾಠ ಭಿನ್ನತೆಗಳನ್ನು ಈ ಮೇಲೆಯೇ ಸಂದರ್ಭಾನುಸಾರ ಸೂಚಿಸಲಾಗಿದೆ. ಎಂದರೆ ತಪ್ಪು ಪಾಠಗಳು ತಪ್ಪು ನಿರ್ಣಯಗಳಿಗೆ ಎಡೆ ಮಾಡಿವೆ. ಹೀಗಾಗಿ, ಇಂಥ ಕೆಲವು ತಪ್ಪು ಗ್ರಹಿಕೆಗಳನ್ನು ಆ ಕಾಲದ ವಿದ್ವಾಂಸರ ಮಿತಿಗಳಾಚೆಗೆ ನೋಡಬೇಕಾಗಿದೆ. ಎಂದ ಮಾತ್ರಕ್ಕೆ, ಕೆಲವೆಡೆ ಪಾಠ ಸರಿಯಾಗಿರುವಾಗಲೂ

ಅದನ್ನು ಅರ್ಥೈಸಿದ ರೀತಿಯೇ ವಿಚಿತ್ರವಾದುದಿರುವಾಗ, ಆ ವಿದ್ವಾಂಸರುಗಳ ಮಿತಿಗಳಲ್ಲದೆ ಬೇರೆಯಲ್ಲ ಎಂಬುದನ್ನೂ ನಾವು ಗಮನಿಸಬೇಕು. ಜೊತೆಗೆ ಇದ್ದುದರಲ್ಲೇ ಉತ್ತಮ ಪಾಠಗಳು ದೊರೆಯುವಾಗಲೂ ಅದನ್ನು ಲಕ್ಷಿಸದೆ ಕೆಲವರು ತಪ್ಪು ನಿರ್ಣಯಗಳಿಗೆ ಬಂದಿದ್ದಾರೆ. ಉದಾಹರಣೆಗೆ, ಬಿ.ವಿ.ಕೃಷ್ಣರಾವ್ ಅವರಿಗಿಂತ ಮೊದಲೇ ಅರಿಕೇಸರಿಯ ವಂಶಾವಳಿಯನ್ನು ಕುರಿತು ಬರೆದವರಿಗೆ, ವಿಕ್ರಮಾರ್ಜುನ ವಿಜಯದ ಅತ್ಯಂತ ಸಮರ್ಥ ಪಾಠವೇನೂ ದೊರೆಯುವ ಸಾಧ್ಯತೆ ಇರಲಿಲ್ಲ. ಈ ಸಂಗತಿ, ಆ ವಿದ್ವಾಂಸರುಗಳು ಉಲ್ಲೇಖಿಸುವ ಪಾಠಗಳನ್ನು ಗಮನಿಸಿದರೇ ತಿಳಿಯುವಂಥದು. ಹೆಚ್ಚು ಕಡಿಮೆ ಕೆಲವು ರೈಸ ಪರಿಷ್ಕರಣಕ್ಕೆ ಹತ್ತಿರವಿದ್ದರೆ, ಮತ್ತೆ ಕೆಲವು ಆ ಪರಿಷ್ಕರಣದವೇ ಆಗಿವೆ. ಆದರೆ ಬಿ.ವಿ.ಕೃಷ್ಣರಾವ್ ಅವರು ಬರೆಯುವ ವೇಳೆಗೆ (1932) ಪಂಪ ಭಾರತದ ಬೆಳ್ಳಾವೆ ವೆಂಕಟನಾರಾಯಣಪ್ಪನವರ ಪರಿಷ್ಕರಣ ಪ್ರಕಟವಾಗಿತ್ತು (1931). ಅದಕ್ಕೂ ಮೊದಲು ಆ ಗ್ರಂಥದ ಮೊದಲ ಎಂಟು ಆಶ್ವಾಸಗಳು ಮತ್ತು ನಂತರದ ಆರು ಆಶ್ವಾಸಗಳನ್ನುಳ್ಳ ಭಾಗಗಳು ಅನುಕ್ರಮವಾಗಿ 1926, ಮತ್ತು 1927 ರಲ್ಲಿ ಪ್ರಕಟವಾಗಿದ್ದುವು. ಆದುದರಿಂದ ಕೃಷ್ಣರಾವ್ ಅವರು ಈ ಪರಿಷ್ಕರಣವನ್ನು ಗಮನಿಸದೆ, ಫ್ಲೀಟರು ಹೇಳಿರುವುದಕ್ಕೇ ಶರಣು ಹೋದುದೊಂದು ವಿಪರ್ಯಾಸ.

ಈ ಮೇಲಿನ ವಿವರಗಳಿಂದ ಅರಿಕೇಸರಿಯ ವಂಶಾವಳಿಯನ್ನು ಗ್ರಹಿಸುವಲ್ಲಿ ಆದ ಕೆಲವು ಅನಗತ್ಯ ಗೊಂದಲಗಳ ಸ್ವರೂಪ ಏನೆಂಬುದು ತಿಳಿಯುತ್ತದೆ. ಇಷ್ಟು ಅಸ್ಪಷ್ಟತೆಯಿಂದ, ಗೊಂದಲಗಳಿಂದ ಕೂಡಿದ ವಂಶಾವಳಿಯನ್ನು ಪುನಾರಚಿಸಿದ ಕೃಷ್ಣರಾವ್ ಅವರು ನಿಸ್ಸಂದೇಹವಾಗಿ "ಇದೊಂದು ಪ್ರತ್ಯೇಕ ಕುಲಶಾಖೆಯೆಂದೂ ಆದುದರಿಂದ ಇದನ್ನು ಬೇರಾವ ಕುಲಶಾಖೆಗಳ ಜೊತೆಗೂ ಕಲ್ಪಿಸಿಕೊಳ್ಳಬೇಕಾದ" ಅಗತ್ಯವಿಲ್ಲವೆಂದೂ ಹೇಳುತ್ತಾರೆ.[42]

---

42. Ve (Lemulavada Inscription of Arikesarin II, J.A.H.R.S.J. Vol. VI Part 3 and 4, 1932. P: 180.

ಎ.ಆರ್.ಕೃಷ್ಣಶಾಸ್ತ್ರಿ ಮತ್ತು ಬೆಳ್ಳಾವೆ ವೆಂಕಟನಾರಾಯಣಪ್ಪನವರ 'ಪರಭಣಿ ತಾಮ್ರ ಶಾಸನ ಮತ್ತು ಪಂಪ ಭಾರತ'.[43] ಹಾಗೂ ಡಿ.ಎಲ್. ನರಸಿಂಹಾಚಾರ್ಯರ 'ದಿ ಜೀನಿಯಾಲಜಿ ಆಫ್ ಅರಿಕೇಸರಿ'.[44] ಎಂಬೆರಡು ಬರೆಹಗಳು ಇಲ್ಲಿಗೆ ಉಲ್ಲೇಖನೀಯವಾದುವಾಗಿವೆ. ಇವೆರಡೂ ಬರೆಹಗಳು ಅದುವರೆಗೆ ನಡೆದ ಚರ್ಚೆಗಳ ವಿವರಗಳನ್ನು ಒಂದು ರೀತಿಯಲ್ಲಿ ವ್ಯವಸ್ಥೀಕರಿಸುವ ಸ್ವರೂಪದವು. ಮೊದಲನೆಯದು 'ಭಾರತ ಇತಿಹಾಸ ಸಂಶೋಧಕ ಮಂಡಲದ' ಪತ್ರಿಕೆಯಲ್ಲಿ (1932) ಪ್ರಕಟವಾದ ಪರಭಣಿ ತಾಮ್ರ ಪಟವನ್ನು ಕುರಿತ ಲೇಖನವನ್ನು ಸಂಗ್ರಹಿಸಿ ಕೊಡುವ ಉದ್ದೇಶದ್ದಾಗಿದ್ದು, ಕೆಲವು ಉಪಯುಕ್ತ ಮಾಹಿತಿಗಳನ್ನೊಳಗೊಂಡಿದೆ. ಎರಡನೆಯ ಲೇಖನ ಪ್ರಧಾನವಾಗಿ ಮೇಲೆ ಪ್ರಸ್ತಾಪಿಸಿದ ಬಿ.ವಿ.ಕೃಷ್ಣರಾಯರ ಚರ್ಚೆಗೆ ಪ್ರತಿಕ್ರಿಯಾ ಸ್ವರೂಪದ್ದಾಗಿದೆ. ಅರಿಕೇಸರಿಯ ವಂಶಾವಳಿಗೆ ಸಂಬಂಧಿಸಿದಂತೆ — ಬಹುಮುಖ್ಯವಾಗಿ ಪಂಪ ಭಾರತದ ವಿವರಗಳು ಮತ್ತು ಆ ವಂಶದ ಪ್ರಾದೇಶಿಕ ನೆಲೆ ಕುರಿತು — ಆದ ಕೆಲವು ತಪ್ಪು ಗ್ರಹಿಕೆಗಳನ್ನು (ಮೇಲೆ ಪ್ರಸ್ತಾಪಿಸಿದ) ಸವಿವರವಾಗಿ ಚರ್ಚಿಸಿದೆ. ಇಡೀ ಚರ್ಚೆಯ ಹಿಂದೆ ವಿವರಗಳ ಯುಕ್ತ ನಿರೂಪಣೆ ಮತ್ತು ಚರ್ಚೆಗಳ ಪುನರ ವ್ಯವಸ್ಥೀಕರಣ ಎದ್ದು ಕಾಣುತ್ತದೆ.

ಇನ್ನು ಈ ನಿಟ್ಟಿನಲ್ಲಿ ಗಮನಿಸಬೇಕಾದ ಗಮನಾರ್ಹವಾದ ಚರ್ಚೆ ಮುಳಿಯ ತಿಮ್ಮಪ್ಪಯ್ಯನವರದು. ಅವರು ಅರಿಕೇಸರಿಯ ಕುಲ ಶಾಖೆಯ ಹೊಲಬನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ. ವಿಕ್ರಮಾರ್ಜುನ ವಿಜಯದಲ್ಲಿ ಬರುವ ಅರಿಕೇಸರಿಯ ವಂಶ ವಿವರಗಳು ವೇಮುಲವಾಡ ಶಾಸನ ಮತ್ತು ಪರಭಣಿ ತಾಮ್ರ ಪಟ್ಟದಲ್ಲಿ ಬರುವ ವಿವರಗಳೊಂದಿಗೆ ಬಹುಪಾಲು ಸಂವಾದಿಯಾಗಿರುವುದನ್ನು

---

43. ಪ್ರ.ಕ., 15–1, 1934. ಪು: 65–81

44. J.~~O~~.A.H.R.S.~~J~~. Vol. VII, Part I, 1932. P: 159-164.

ಗುರುತಿಸಿದ್ದಾರೆ.[45] ಮುಳಿಯ ಅವರ ಈ ಸಂಬಂಧದ ಚರ್ಚೆಯೆಲ್ಲ ಈ ಶಾಖೆಯು ಎಲ್ಲಿಂದ ಪ್ರಾರಂಭವಾಯಿತೆಂಬ ಪ್ರಶ್ನೆಯನ್ನು ಮುಖ್ಯ ಗುರಿಯಾಗಿ ಹೊಂದಿದೆ. ಆರ್.ಜಿ.ಭಂಡಾರ್ಕರ ಅವರು ನೀಡುವ[46] ವಿವರಗಳ ಆಧಾರದ ಮೇಲೆ ಕೊಲ್ಲಿಪಾರ ಶಾಸನದಲ್ಲಿ ಬರುವ ಅರಸರು ಈ ವಂಶದ ಪೂರ್ವಜರಾಗಿರಬೇಕೆಂಬ ಒಂದು ಅಂಶವನ್ನು ಸಮರ್ಥಿಸಿದ್ದಾರೆ. ಮೇಲೆ ಉದ್ಧರಿಸಿದ ಕೊಲ್ಲಿಪಾರ ಶಾಸನದ ಹೆಸರುಗಳಲ್ಲಿ ವಿನಯಾದಿತ್ಯ ಯುದ್ಧಮಲ್ಲನಿಗಿಂತ ಹಿಂದಿನ ಎಲ್ಲ ಹೆಸರುಗಳೂ ಬಿರುದಾಗಿ ತೋರುತ್ತವೆ ಎಂಬುದನ್ನು ಹೇಳುತ್ತಾ, ಆಯಾ ಅರಸರ ನಿಜನಾಮಗಳು ಅನುಕ್ರಮವಾಗಿ ಪುಲಿಕೇಶಿ I, ಕೀರ್ತಿವರ್ಮ I, ಪುಲಿಕೇಶಿ II, ಜಯಸಿಂಹವರ್ಮ (ಲಾಟ) ಎಂಬುದಾಗಿ ಗುರುತಿಸುತ್ತಾರೆ.[47] ಮತ್ತು ಶಾಸನದಲ್ಲಿ ಉಕ್ತವಾದ ರಾಜಾದಿತ್ಯ ಪೃಥು ವಿಕ್ರಮನೇ ಈ ಲಾಟದ ಜಯಸಿಂಹ ವರ್ಮನೆಂದೂ ಅವನು ವಿನಯಾದಿತ್ಯ ಯುದ್ಧಮಲ್ಲನ ತಂದೆಯೆಂದೂ ಹೇಳುತ್ತಾರೆ. ಹೀಗಾಗಿ ಈ ಇಮ್ಮಡಿ ಅರಿಕೇಸರಿಯ ಶಾಖೆ ಲಾಟದ ಜಯಸಿಂಹ ವರ್ಮನಿಂದ ಪ್ರಾರಂಭವಾಗುತ್ತದೆ ಎಂಬುದು ಅವರ ವಾದ.

ಈ ವಾದ ಸಮರ್ಥನೆಯ ಸಾರಾಂಶವನ್ನು ಹೀಗೆ ಸಂಗ್ರಹಿಸಬಹುದು: ಎರಡನೆಯ ಪುಲಿಕೇಶಿಯ ನಾಲ್ವರು ಮಕ್ಕಳಲ್ಲಿ ಕೊನೆಯವನಾದ ಜಯಸಿಂಹ ವರ್ಮ ಲಾಟ ಪ್ರಾಂತವನ್ನಾಳುತ್ತಿದ್ದನು. ಅವನಿಗೆ ಶೀಲಾದಿತ್ಯ ಮತ್ತು ವಿನಯಾದಿತ್ಯ ಯುದ್ಧಮಲ್ಲನೆಂದು ಇಬ್ಬರು ಮಕ್ಕಳು. ತಂದೆಯಾದ ಜಯಸಿಂಹ ವರ್ಮನ ಅನಂತರವೂ ಕೆಲಗಾಲದವರೆಗೆ ಅವನ ಮಗನಾದ ವಿನಯಾದಿತ್ಯನು ಆ ಲಾಟ

---

45. ನಾಡೋಜ ಪಂಪ, ಮಂಗಳೂರು, 1938. ಪು: 20—22.
46. (Early History of Dekkan, 1895)
    ಉದ್ಧೃತ : ಅದೇ, ಪು: 24—26.
47. ಅದೇ, ಪು: 24.

ದೇಶದಲ್ಲೇ ಇದ್ದಿರಬೇಕು. ಈ ಸಂದರ್ಭಕ್ಕೆ 'ಚಾಳುಕ್ಯ ವಂಶದ ಅಧಿರಾಜ ಪಟ್ಟವನ್ನೇರಿದ ಎರಡನೆಯ ಕೀರ್ತಿವರ್ಮನು ರಾಜ್ಯಭ್ರಷ್ಟನಾದುದರಿಂದ ಕರ್ನಾಟಕದ ರಾಜದಂಡವು ರಾಷ್ಟ್ರಕೂಟರ ವಶವಾಯಿತು'. ಅದುವರೆವಿಗೆ ಆಯಾ ಪ್ರಾಂತದ ಅಧಿಪತಿಗಳಾಗಿದ್ದ ಚಾಳುಕ್ಯ ವಂಶದ ಮತ್ತು ಅವರಿಗೆ ಅಧೀನರಾಗಿದ್ದ ಸಾಮಂತರೆಲ್ಲ ರಾಷ್ಟ್ರಕೂಟರ ಅಧೀನರಾಗಬೇಕಾದುದು ಅನಿವಾರ್ಯವಾಯಿತು. ರಾಷ್ಟ್ರಕೂಟ ದಂತಿದುರ್ಗ ಲಾಟವನ್ನು ವಶಪಡಿಸಿಕೊಂಡಾಗ 'ಆ ಲಾಟವನ್ನುಳಿಸಿಕೊಳ್ಳಲಾಗದೆ, ನೆಲೆಗೊಂಡ ರಾಷ್ಟ್ರಕೂಟರಿಗೆ ತಲೆವಾಗಲೂ ಒಲ್ಲದೆ ಅತ್ಯಭಿಮಾನಿಯಾದ ವಿನಯಾದಿತ್ಯ ಯುದ್ಧಮಲ್ಲ ಆ ನಾಡನ್ನೇ ಬಿಟ್ಟನೆಂದು ತೋರುತ್ತದೆ. ನಂತರ ಅವನು ಬೋಧನದಲ್ಲಿ ಸ್ವತಂತ್ರವಾದ ರಾಜ್ಯವೊಂದನ್ನು ಕಟ್ಟಿದನು. ಇದು ವಿನಯಾದಿತ್ಯ ಯುದ್ಧಮಲ್ಲನ ಪೂರ್ವಜರ ಹೊಲಬು ಮತ್ತು ಆ ವಂಶದವರು ಬೋಧನದಲ್ಲಿ ನೆಲೆಗೊಂಡುದರ ಹಿನ್ನೆಲೆಯನ್ನು ಹೇಳುವ ತಿಮ್ಮಪ್ಪಯ್ಯನವರ ಚರ್ಚೆಯ ಸಾರ ರೂಪ.[48] ಇಷ್ಟು ಚರ್ಚೆಯ ಕೊನೆಗೆ, ಈ ಕುಲ ಶಾಖೆಯ ಅರಸರು ನಮಗೀಗಾಗಲೇ ತಿಳಿದ ಯಾವ ಚಾಲುಕ್ಯ ಶಾಖೆಯಲ್ಲಿ ಸೇರುವರೆಂಬ ಪ್ರಶ್ನೆಗೆ ಮುಳಿಯ ಅವರು ತೀರ ಸ್ಪಷ್ಟವಾದ ತೀರ್ಮಾನಕ್ಕೆ ಬಂದಿದ್ದಾರೆ. ಅವರ ತೀರ್ಮಾನದ ಪ್ರಕಾರ ಈ ಇಮ್ಮಡಿ ಅರಿಕೇಸರಿಯ ಕುಲ ಶಾಖೆಯು ಪಶ್ಚಿಮ ಚಾಲುಕ್ಯ ಶಾಖೆಗಾಗಲಿ, ಪೂರ್ವ ಚಾಲುಕ್ಯ ಶಾಖೆಗಾಗಲಿ ಸೇರುವುದಿಲ್ಲ. ಅದು ಎರಡನೆಯ ಪುಲಿಕೇಶಿಯ ಮಗನಾದ ಜಯಸಿಂಹ ವರ್ಮನಿಂದ ಕವಲೊಡೆದು ವಿಸ್ತರಿಸಿದ ಲಾಟ ಚಾಲುಕ್ಯ ಶಾಖೆ. "ಈ ಚಾಲುಕ್ಯ ಶಾಖೆಯವರನ್ನು ಲಾಟದ ಚಾಲುಕ್ಯರು, ಅಥವಾ ಬೋಧನ – ಚಿತ್ರಕೂಟಗಳ ಚಾಲುಕ್ಯರು, ಅಲ್ಲವೆ ಲೆಂಬುಳವಾಟ (ವೇಮುಲವಾಡ) ದ ಚಾಲುಕ್ಯರು ಎಂದೂ ಕರೆಯಬಹುದಾಗಿ ತೋರುತ್ತದೆ" ಎಂದಿದ್ದಾರೆ.[49]

---

48. ಅದೇ, ಪು: 23–26.

49. – ಅದೇ – 58.

ಕೆ·ವೆಂಕಟರಾಯಾಚಾರ್ಯರು ಕೊಲ್ಲಿಪಾರ ಶಾಸನದ ವಿವರಗಳನ್ನು ಬೇರೊಂದು ರೀತಿಯಲ್ಲಿ ನಿರ್ವಚಿಸಿದ್ದಾರೆ.[50] ಇಷ್ಟಕ್ಕೂ ಅವರ ಚರ್ಚೆಯ ಬಹು ಮುಖ್ಯ ಉದ್ದೇಶ 'ಪಂಪನು ಆಶ್ರಯಿಸಿದ ಚಾಲುಕ್ಯ ಮನೆತನ' ಯಾರಿಂದ ಪ್ರವರ್ತಿತವಾಯಿತೆಂಬುದು. ಈ ಪ್ರಶ್ನೆಗೆ ಅವರು ಬಾದಾಮಿ ಚಾಲುಕ್ಯ ಶಾಖೆಯು ಈ ವಂಶಕ್ಕೆ ಮೂಲವೆಂದು ಹೇಳುತ್ತಾರೆ. ಅವರ ಪ್ರಕಾರ ಕೊಲ್ಲಿಪಾರ ಶಾಸನದಲ್ಲಿ ವಿನಯಾದಿತ್ಯ ಯುದ್ಧಮಲ್ಲನಿಗಿಂತ ಹಿಂದಿನವರ ಹೆಸರುಗಳೆಲ್ಲ ಬಿರುದುಗಳಾಗಿದ್ದು, ಅವು ಬಾದಾಮಿ ಚಾಲುಕ್ಯರ ಬಿರುದುಗಳನ್ನು ಹೋಲುತ್ತವೆ. ಇಲ್ಲಿ ಅವರು ಶಾಸನೋಕ್ತ ಬಿರುದುಗಳಿಗೆ ಸಂವಾದಿಗಳಾಗಿ ನೀಡುವ ಹೆಸರುಗಳು ಹೆಚ್ಚು ಕಡಿಮೆ ಮುಳಿಯ ಅವರಿತ್ತ ಹೆಸರುಗಳನ್ನೇ ಹೋಲುತ್ತವೆ. ಆದರೆ ನಾಲ್ಕನೆಯ ಹೆಸರು 'ರಾಜಾದಿತ್ಯ' (ಕೊಲ್ಲಿಪಾರ ಶಾಸನ) ಎಂಬುದನ್ನು 'ರಾಜಾ ಆದಿತ್ಯವರ್ಮ' ಎಂದು ಗುರುತಿಸಿದ್ದಾರೆ. ಮುಳಿಯ ಇವನನ್ನು ಜಯಸಿಂಹ ವರ್ಮನೆಂದು ಗುರುತಿಸುತ್ತಾರೆ. ವೆಂಕಟರಾಯಾಚಾರ್ಯರು ಇದಕ್ಕೆ ವಿವರಣೆಯನ್ನು ನೀಡುತ್ತಾ "ಎರಡನೆಯ ಪುಲಿಕೇಶಿಗೆ ಆದಿತ್ಯವರ್ಮ, ಚಂದ್ರಾದಿತ್ಯ, ವಿಕ್ರಮಾದಿತ್ಯ ಮತ್ತು ಜಯಾಶ್ರಯರೆಂಬ ನಾಲ್ಕು ಮಕ್ಕಳಿದ್ದರೆಂದು ಪ್ರಸಿದ್ಧವಿದೆ, ಇವರಲ್ಲೊಬ್ಬನಾದ ಆದಿತ್ಯವರ್ಮನನ್ನು ಶಾಸನದಲ್ಲಿ ರಾಜಾದಿತ್ಯನೆಂದು" ಕರೆದಿದೆಯೆನ್ನುತ್ತಾರೆ. ಹೀಗಾಗಿ ಕೊಲ್ಲಿಪಾರ ಶಾಸನದಲ್ಲಿರುವ ಹೆಸರುಗಳ (ಬಿರುದುಗಳ) ನಿಜನಾಮಗಳನ್ನು ಗುರುತಿಸುವಲ್ಲಿ ಇವರಿಬ್ಬರು ವಿದ್ವಾಂಸರೂ ಬೇರೆ ಬೇರೆಯಾಗಿದ್ದಾರೆ. ವೆಂಕಟರಾಯಾಚಾರ್ಯರು ಯುದ್ಧಮಲ್ಲನ ತಂದೆ ಆದಿತ್ಯವರ್ಮನೆಂದು ಹೇಳಿ, ಅವನಿಂದಲೇ ಈ ಶಾಖೆ ಕವಲೊಡೆಯಿತೆಂದೂ, ಆದುದರಿಂದ ಈ ಶಾಖೆಯು ಆದಿತ್ಯಭವವೆಂದೂ ಹೇಳುತ್ತಾರೆ. ಕೊಲ್ಲಿಪಾರ ಶಾಸನ ಮಾತ್ರವೆ ವಿನಯಾದಿತ್ಯ ಯುದ್ಧಮಲ್ಲನಿಗಿಂತ

---

50. 'ಪಂಪನು ಆಶ್ರಯಿಸಿದ ಚಾಲುಕ್ಯ ಮೂಲ ಪುರುಷರು ಯಾರು?' ಜಯಂತಿ, 16–4, 1953. ಪು: 140–145.

ಹಿಂದಿನವರ ಹೆಸರುಗಳನ್ನು ಹೇಳುವುದು. ಈ ಕಾರಣಕ್ಕಾಗಿಯೇ ಈ ಶಾಸನದ ಹೆಸರುಗಳನ್ನು ಹಿಡಿದು ಈ ವಂಶದ ಮೂಲವನ್ನು ತಿಳಿಯಲು ಸಾಧ್ಯವೇ ಎಂಬ ಪ್ರಶ್ನೆ ಸಹಜವಾಗಿಯೇ ಹಲವರನ್ನು ಕಾಡಿದೆ. ಇಷ್ಟಾಗಿಯೂ ಬಿರುದುಗಳನ್ನು ಆಶ್ರಯಿಸಿ ಏನನ್ನು ಹೇಳುವಾಗಲೂ ಅನುಮಾನಗಳು ಉಳಿದು ಬಿಡುತ್ತವೆ ಮತ್ತು ಅದು ಸಹಜ ಕೂಡ. ಏಕೆಂದರೆ ಒಬ್ಬ ಅರಸನ ಬಿರುದು ಮತ್ತೊಬ್ಬನಿಗಿರುವುದು ಅಸಹಜವೇನಲ್ಲ. ಉದಾಹರಣೆಗೆ ಇಮ್ಮಡಿ ಅರಿಕೇಸರಿಯ ಕೆಲವು ಬಿರುದುಗಳು — ಉದಾತ್ತ ನಾರಾಯಣ, ಪ್ರಿಯಗಳ್ಳ, ವಿಕ್ರಮಾರ್ಜುನ, ಗುಣಾರ್ಣವ ಇತ್ಯಾದಿಗಳು — ಮುಮ್ಮಡಿ ಅರಿಕೇಸರಿಗೂ ಇದ್ದುದಾಗಿ ಪರಭಣಿ ತಾಮ್ರ ಶಾಸನದಿಂದ ತಿಳಿದು ಬರುತ್ತದೆ.[51] ಆದುದರಿಂದ ಖಚಿತವಾಗಿ ಕಾಲ—ದೇಶಗಳನ್ನು ನಿರೂಪಿಸಿದ ಮೂಲಗಳು ತಿಳಿಯದಿದ್ದರೆ ಅಥವಾ ಬೇರಾವ ಮೂಲಗಳಿಂದಲೂ ಅವುಗಳ ಕಾಲ—ದೇಶಗಳನ್ನು ಗುರುತಿಸುವುದು ಸಾಧ್ಯವಾಗದಿದ್ದರೆ ನಮ್ಮ ಬಹುಪಾಲು ತೀರ್ಮಾನಗಳು ಊಹೆಯ ಅಂಚಿನಲ್ಲೇ ಇರುತ್ತವೆ.

ಇನ್ನು ಈ ಸಂಬಂಧದಲ್ಲಿ ನಡೆದ ಬಹು ಮುಖ್ಯ ಚರ್ಚೆಗಳಲ್ಲೊಂದು ಎನ್.ಲಕ್ಷ್ಮೀನಾರಾಯಣರಾವ್ ಅವರದು. 'ಪಂಪನ ಆಶ್ರಯದಾತನಾದ ಅರಿಕೇಸರಿಯ ವಂಶ' ವೆಂಬ ತಮ್ಮ ಲೇಖನದಲ್ಲಿ[52] ಅವರು ಇಮ್ಮಡಿ ಅರಿಕೇಸರಿಯ ವಂಶ ವಿವರಗಳನ್ನು ಕುರಿತು ಸವಿಸ್ತಾರವಾಗಿ ಚರ್ಚಿಸಿದ್ದಾರೆ. ಅರಿಕೇಸರಿಯ ವಂಶ ವಿವರಗಳನ್ನು ಒಳಗೊಂಡ ಶಾಸನ ಮೂಲಗಳು ಪಂಪ ಭಾರತದ ವಿವರಗಳಿಗೆ ಸಂವಾದಿಗಳಿವೆಯಾದರೂ ಇವಾವ ಮೂಲದಿಂದಲೂ "ಇದುವರೆಗೆ ನಮಗೆ

---

51. ನೋಡಿ: ಎ.ಆರ್.ಕೃಷ್ಣಶಾಸ್ತ್ರಿ ಮತ್ತು ಬೆಳ್ಳಾವೆ ವೆಂಕಟನಾರಾಯಣಪ್ಪನವರ 'ಪರಭಣಿ' ತಾಮ್ರ ಶಾಸನ ಮತ್ತು ಪಂಪ ಭಾರತ' ಲೇಖನದ ಅನುಬಂಧವಾಗಿ ಕೊಡಲಾಗಿರುವ ಶಾಸನದ ಪಾಠ (ಪ್ರ.ಕ. 15—1, 1934. ಪು: 77—81)
52. ಅಭಿವಂದನೆ (ಎ.ಆರ್.ಕೃ. ಅಭಿನಂದನ ಗ್ರಂಥ), ಮೈಸೂರು, 1953. ಪು: 465—481.

ಗೊತ್ತಾಗಿರುವ ಚಾಲುಕ್ಯ ವಂಶಗಳಿಗೂ ಅರಿಕೇಸರಿಯ ವಂಶಕ್ಕೂ ಇರುವ ಸಂಬಂಧವು ನಿರ್ದಿಷ್ಟವಾಗಿ ತಿಳಿಯುವುದಿಲ್ಲ" ವೆಂಬುದು ಅವರ ಅಭಿಪ್ರಾಯ. ಕೊರಿಲ್ಲಪಾರ ಶಾಸನವನ್ನುಳಿದ ಇತರ ಮೂಲಗಳಿಂದ ಇದುವರೆಗೆ ನಮಗೆ ತಿಳಿದು ಬಂದಿರುವಂತೆ ಅರಿಕೇಸರಿಯ ವಂಶದ ಮೊದಲ ಅರಸ ಯುದ್ಧಮಲ್ಲ. ಇವನಿಗಿಂತ ಹಿಂದಿನ ಅರಸರ ಹೆಸರುಗಳನ್ನು ತಿಳಿಸುವ ಕೊರಿಲ್ಲಪಾರ ಶಾಸನ "ಕೃತಕವಾಗಿರುವುದರಿಂದ ಇಲ್ಲಿ ಕೊಟ್ಟ ಹೆಸರುಗಳು" ಗಮನಾರ್ಹವಲ್ಲವೆಂದಿದ್ದಾರೆ. ಇಮ್ಮಡಿ ಅರಿಕೇಸರಿಯ ವಂಶದ ಮೊದಲನೆಯ ಯುದ್ಧಮಲ್ಲನನ್ನು ಪೋದನ (ಈಗಿನ ಬೋಧನ್) ದ ವಿನಯಾದಿತ್ಯ ಯುದ್ಧಮಲ್ಲನೆಂದೇ ಕರೆಯುವ ಎನ್.ಲಕ್ಷ್ಮೀನಾರಾಯಣ ರಾವ್ ಅವರು ಈತನು ರಾಜ್ಯ ಕಟ್ಟುವಷ್ಟು ಪ್ರಬಲನಾಗುವ ಸಂದರ್ಭ ಹೇಗೆ ಒದಗಿತೆಂದು ಹೇಳುವುದು ಕಷ್ಟವಾದರೂ, ಇವನ ಚಟುವಟಿಕೆಗಳು ಕ್ರಿ.ಶ. 750 ಕ್ಕಿಂತ ಮೊದಲೇ ಪ್ರಾರಂಭವಾಗಿರಬಹುದಾದ ಸಾಧ್ಯತೆಗಳನ್ನು ನಿರಾಕರಿಸುತ್ತಾರೆ ಮತ್ತು ಈ ಅವಧಿಗಿಂತ ಮೊದಲೇ ಗತಿಸಿಹೋಗಿರಬಹುದಾದ ಇತರ ಯುದ್ಧಮಲ್ಲ ಎಂಬ ಹೆಸರಿನ ಅರಸರೊಂದಿಗೆ ಇವನನ್ನು ಕಲ್ಪಿಸಬೇಕಾಗಿಲ್ಲವೆನ್ನುತ್ತಾರೆ. ಹಾಗೆಯೇ ಮೊದಲನೆಯ ಯುದ್ಧಮಲ್ಲನ ಕಾರ್ಯಕ್ಷೇತ್ರವಾದ 'ಸಪಾದ ಲಕ್ಷ' ವನ್ನು ಇತರಾವುದೇ ಪ್ರದೇಶದಲ್ಲಿ ಹುಡುಕಬೇಕಾದ ಅಗತ್ಯವಿಲ್ಲವೆಂದೂ, ಅದು ಈಗಿನ ಹೈದರಾಬಾದು ಸಂಸ್ಥಾನದ ಬೋಧನ್ (< ಪೋದನ) ಪರಿಸರದಲ್ಲೇ ತನ್ನ ನೆಲೆಯನ್ನು ಪಡೆದುದೆಂದೂ ಸ್ಪಷ್ಟಪಡಿಸಿದ್ದಾರೆ.

ಈ ಚಾಲುಕ್ಯ ಕುಲ ಶಾಖೆಯ ಅರಸರು ರಾಷ್ಟ್ರಕೂಟರೊಂದಿಗೆ ಹೊಂದಿದ್ದ ಸಂಬಂಧಗಳು ಮತ್ತು ಈ ಕುಲಶಾಖೆಯ ವಿವರಗಳನ್ನೊಳಗೊಂಡ ಪಂಪನ ವಿಕ್ರಮಾರ್ಜುನ ವಿಜಯದ ರಚನಾ ಕಾಲವನ್ನೂ ಗಮನದಲ್ಲಿರಿಸಿಕೊಂಡು ಈ ಕುಲಶಾಖೆಯ ಅರಸರ ಕಾಲ ನಿರ್ದೇಶನವನ್ನು ಮಾಡಲು ಪ್ರಯತ್ನಿಸಿದ್ದಾರೆ. ಈ ಸಂಬಂಧದ ಅವರ ಅಭಿಪ್ರಾಯ ಹೀಗಿದೆ: "ಮೊದಲನೆಯ ಅರಿಕೇಸರಿಯೂ ಮತ್ತು ರಾಷ್ಟ್ರಕೂಟ ಧ್ರುವನೂ (ಕ್ರಿ.ಶ. 775– 794) ಸಮಕಾಲೀನರು.

ಇಮ್ಮಡಿ ನರಸಿಂಹನು ಕ್ರಿ.ಶ. 910 ರಿಂದ 935ರ ವರೆಗೆ ರಾಜ್ಯಭಾರ ಮಾಡುತ್ತಿದ್ದಿರಬಹುದು .......... ಮೊದಲನೆಯ ಅರಿಕೇಸರಿಯ ಕಾಲದಿಂದ ಇಮ್ಮಡಿ ನರಸಿಂಹನ ಕಾಲದವರೆಗೆ ಐದು ಜನ ರಾಜರುಗಳು ಆಳಿದರು. ನರಸಿಂಹನ ತಮ್ಮನಾದ ಭದ್ರದೇವನನ್ನುಳಿದು ಉಳಿಕೆ ಅರಸರ ರಾಜ್ಯಭಾರವನ್ನೆಲ್ಲ ಸರಾಸರಿ ತಲೆಗೆ ಇಪ್ಪತ್ತೈದು ವರ್ಷಗಳಂತೆ ಎಣಿಸಬಹುದು. ಭದ್ರದೇವನು ತನ್ನ ಅಣ್ಣನ ತರುವಾಯ ಪಟ್ಟಕ್ಕೆ ಬಂದುದರಿಂದ ಈತನು ರಾಜ್ಯವಾಳಿದ ಕಾಲವು ಹತ್ತು ವರ್ಷಗಳೆಂದು ಭಾವಿಸಬಹುದು. ಇವುಗಳೆಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಮೊದಲನೆಯ ಅರಿಕೇಸರಿಯ ಕೊಟ್ಟ ಕೊನೆಯ ದಿನಗಳಿಗೂ ಎರಡನೆಯ ನರಸಿಂಹನ ರಾಜ್ಯಭಾರದ ಪ್ರಾರಂಭ ಕಾಲಕ್ಕೂ 110 ವರ್ಷಗಳ ಅಂತರವಿರುತ್ತದೆ ..........-[53] ಈ ಲೆಕ್ಕಾಚಾರದ ಆಧಾರದ ಮೇಲೆ ಮೊದಲನೆಯ ವಿನಯಾದಿತ್ಯ ಯುದ್ಧಮಲ್ಲನು ಸುಮಾರು ಕ್ರಿಸ್ತಶಕ 750ರ ವೇಳೆಗೆ ಬಲಿಷ್ಠನಾಗಿರಬಹುದೆಂಬ ತರ್ಕಸಮ್ಮತವಾದ ಒಂದು ನಿರ್ಣಯಕ್ಕೆ ಬಂದಿದ್ದಾರೆ.

ವಿಕ್ರಮಾರ್ಜುನ ವಿಜಯ ಮತ್ತು ಇತರ ಶಾಸನ ಮೂಲಗಳನ್ನು ಆಧರಿಸಿ ಈ ವಂಶದ ಪ್ರತಿಯೊಬ್ಬ ಅರಸನನ್ನೂ ಕುರಿತಂತೆ ಅವರು ನೀಡುವ ವಿವರಗಳು ಮತ್ತು ಚರ್ಚೆಗಳು ಈ ಸಂಬಂಧದ ಚರ್ಚೆಗಳಲ್ಲಿ ಆಸಕ್ತರಾದವರಿಗೆ ಉಪಯುಕ್ತವಾಗಿವೆ. ಜೊತೆಗೆ, ಅವರು ತಮ್ಮ ಇಡೀ ಚರ್ಚೆಗೆ ಪ್ರಮುಖವಾಗಿ ಆಶ್ರಯಿಸಿದ ಇಮ್ಮಡಿ ಅರಿಕೇಸರಿಯ ವೇಮುಲವಾಡ ಶಿಲಾ ಶಾಸನದ ಪರಿಷ್ಕೃತ ಪಾಠವನ್ನು ಸಂಪಾದಿಸಿ ಅನುಬಂಧವಾಗಿ ನೀಡಿದ್ದಾರೆ.

ಲಕ್ಷ್ಮೀನಾರಾಯಣ ರಾವ್ ಅವರ ಈ ಚರ್ಚೆಯ ನಂತರದಲ್ಲಿ ಈ ಎರಡು—

---

53. ಅಭಿವಂದನೆ (ಎ.ಆರ್.ಕೃ. ಅಭಿನಂದನ ಗ್ರಂಥ), ಮೈಸೂರು, 1953. ಪು: 467.

ಮೂರು ದಶಕಗಳಲ್ಲಿ ಈ ಸಂಬಂಧದ ಚರ್ಚೆಗಳು ನಡೆದಂತೆ ಕಾಣುವುದಿಲ್ಲ. ಎಂದ ಮಾತ್ರಕ್ಕೆ ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ತೀರ್ಮಾನಕ್ಕೆ ಬಂದಂತಾಗಿದೆ ಎಂದಾಗಲಿ, ಇನ್ನು ಈ ಬಗೆಗಿನ ವಾಗ್ವಾದಗಳಿಗೆ ಅವಕಾಶವಿಲ್ಲವೆಂದಾಗಲಿ ಅಲ್ಲ. ಪ್ರತಿಯೊಂದು ಕಾಲಕ್ಕೂ ಇಂಥ ವಿಚಾರಗಳು ವಾಗ್ವಾದಗಳಿಗೆ ತೆರೆದ ಬಾಗಿಲುಗಳು. ಆಯಾ ಕಾಲದಲ್ಲಿ ಲಭ್ಯವಾದ ಹೊಸ ಆಧಾರಗಳು ಮತ್ತು ಅರಿವುಗಳು ಅದುವರೆಗೂ ನಡೆದ ಚರ್ಚೆಗಳಿಗೆ ಹೊಸ ತಿರುವುಗಳನ್ನು ತಂದುಕೊಡುತ್ತವೆ ಮತ್ತು ತಂದು ಕೊಡಬೇಕಾಗಿದೆ. ಹೊಸ ಆಧಾರ ಸಾಮಗ್ರಿಯೇ ದೊರೆಯದಿದ್ದಲ್ಲಿ ಇಂಥ ಸಂಗತಿಗಳು ವಾದಗ್ರಸ್ತವಾಗಿಯೇ ಉಳಿದು ಬಿಡಲೂ ಬಹುದು. ಅರಿಕೇಸರಿಯ ಕುಲಶಾಖೆಯು ನಮಗೆ ತಿಳಿದಿರುವ ಯಾವ ಶಾಖೆಯೊಳಗೆ ಸೇರುತ್ತದೆ ಅಥವಾ ಯಾವ ಶಾಖೆಯ ಕವಲು ಎಂಬುದಕ್ಕೆ ಸಂಬಂಧಿಸಿದಂತೆ ನಡೆದ ಮೇಲಿನ ಚರ್ಚೆಗಳೆಲ್ಲ ಆ ನಿಟ್ಟಿನಲ್ಲಿ ನಡೆದ ಪ್ರಯತ್ನಗಳು ಮಾತ್ರ. ಇದರಾಚೆಗೆ ಅದೊಂದು ಪ್ರತ್ಯೇಕ ಕುಲಶಾಖೆ, ಮತ್ತು ಅದರ ಮೂಲವನ್ನು ಕುರಿತು ಕೊನೆಯ ಮಾತಾಗಿ ಏನೂ ಹೇಳುವುದು ಕಷ್ಟವಾಗಿದೆ ಎಂಬುದು ಮಾತ್ರ ಸ್ಪಷ್ಟ. ಹಾಗೂ ಇದರ ಅರಿವು ಮೇಲೆ ಗಮನಿಸಿದ ಕೆಲವು ಚರ್ಚೆಗಳಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಇರುವಂಥದೇ ಆಗಿದೆ.

### 3.3.3. <u>ಈ ಬಗೆಯ ಅಧ್ಯಯನಗಳ ಕೆಲವು ಮಿತಿಗಳು</u>

ಇದುವರೆಗೆ ಗಮನಿಸಲಾದ ಚರ್ಚೆಗಳೆಲ್ಲ ಕವಿ ಸಂಬಂಧೀ ಅಧ್ಯಯನಗಳೆಂದು ಕರೆಯಬಹುದಾದವುಗಳೇ ಆಗಿವೆಯೆಂಬುದು ಸ್ಪಷ್ಟ. (ಈ ಚರ್ಚೆಗಳೆಲ್ಲ ಪಂಪ ಕವಿಯ ವಂಶ ವಿವರಗಳು, ವಂಶಾನುಕ್ರಮದ ಪುನಾರಚನೆ, ಅವನು ಪಡೆದ ಅಗ್ರಹಾರದ ಪ್ರಾದೇಶಿಕ ನೆಲೆ, ಕವಿಯ ಆಶ್ರಯದಾತನಾದ ಅರಿಕೇಸರಿಯ ವಂಶ ಸಂಬಂಧಿಯಾದ ವಿವರಗಳು ಇತ್ಯಾದಿಗಳನ್ನೇ ತಮ್ಮ ಪ್ರಮುಖ ಕಾಳಜಿಯನ್ನಾಗಿ

ಹೊಂದಿವೆ. ಈ ಬಗೆಯ ಚರ್ಚೆಗಳನ್ನು ಗಮನಿಸುವಾಗ ಸಹಜವಾಗಿಯೇ ಹುಟ್ಟಬಹುದಾದ ಒಂದು ಪ್ರಶ್ನೆ, ನಿಜವಾದ ಅರ್ಥದಲ್ಲಿ ಈ ಚರ್ಚೆಗಳು ಪಂಪನ ಕಾವ್ಯಗಳನ್ನು ಕುರಿತ ಅಧ್ಯಯನಗಳೇ? ಎಂಬುದು. ಬಹುಶ: ಈ ಪ್ರಶ್ನೆಗೆ ಅಲ್ಲವೆಂದು ಉತ್ತರಿಸುವುದು ಯುಕ್ತವೆಂದು ತೋರುತ್ತದೆ. ಒಂದು ಹಂತದಲ್ಲಿ ಈ ಚರ್ಚೆಗಳಿಗೆಲ್ಲ ಪ್ರೇರಣೆ ಪಂಪನ ಕಾವ್ಯಗಳೇ ಆಗಿವೆಯೆಂಬುದು ಸರಿಯೆ. ಆದರೆ ಹೀಗೆ ಪ್ರೇರಣೆಯನ್ನೊದಗಿಸಿರುವ ವಿವರಗಳು, ಕವಿ ತನ್ನ ಕಾವ್ಯದ ಆದ್ಯಂತ್ಯಗಳಲ್ಲಿ ಹೇಳಿಕೊಂಡವುಗಳೇ ಹೊರತು, ಅವುಗಳೇ ಕಾವ್ಯವಲ್ಲ.

ನಮ್ಮ ಬಹುಪಾಲು ಪ್ರಾಚೀನ ಕವಿ ಕೃತಿಗಳ ಆದ್ಯಂತ್ಯಗಳಲ್ಲಿ ಆಯಾ ಕವಿಯ ಸ್ವಕೀಯ ವಿವರಗಳಿರುವುದನ್ನು ಗಮನಿಸಬಹುದು. ಆದರೆ ಇವೆಲ್ಲ ಬಿಡಿ ವಿವರಗಳೇ ಹೊರತು ವ್ಯಕ್ತಿಯಾಗಿ ಆಯಾ ಕವಿಯನ್ನು ತಿಳಿಯಲು ಸಾಧ್ಯವಾಗುವಂಥ ಇಡಿ ವಿವರಗಳಲ್ಲ. ಈ ಬಿಡಿ ವಿವರಗಳೂ ಸಹ ಕವಿಯ ಕಾಲ, ದೇಶ, ಕುಲ–ಗೋತ್ರ, ಮತ–ಧರ್ಮ ಇತ್ಯಾದಿಗಳಾಚೆಗೆ ಹೇಳುವ ಏನನ್ನೂ ಒಳಗೊಂಡಂತೆ ತೋರದು. ಹೀಗಾಗಿ ಇಂಥ ಚರ್ಚೆಗಳು ಸಹಜವಾಗಿಯೇ ಹಲವು ಮಿತಿಗಳನ್ನು ಹೊಂದಿರುತ್ತವೆ.

ಪಂಪನನ್ನು ಕುರಿತಂತೆ ನಡೆದ ಈ ಬಗೆಯ ಚರ್ಚೆಗಳಲ್ಲಿ ಈ ಬಿಡಿ ವಿವರಗಳಿಗೆ ಪೂರಕವಾಗಿರುವ ಕೆಲವು ಶಾಸನಗಳು ದೊರೆತಿದ್ದು, ಅವುಗಳನ್ನು ಬಳಸಲಾಗಿದೆ. ಕೆಲವೆಡೆ ಈ ಚರ್ಚೆಗಳು ಶಾಸನಗಳನ್ನೇ ಕುರಿತ ಅಧ್ಯಯನಗಳೂ ಎನ್ನಿಸಿ ಬಿಡುತ್ತವೆ.

(ಪಂಪನ ಊರು (ಅಗ್ರಹಾರ) ಯಾವುದು? ಕಾವ್ಯ–ಶಾಸನ ಮೂಲಗಳಲ್ಲಿ ಹೇಳಲಾದ ಬನ, ಕೆರೆ ಯಾವುವು? ಎಂಬಲ್ಲಿ ವಿಶೇಷ ಆಸಕ್ತಿಯಿಂದ ವಾಗ್ವಾದಗಳು ನಡೆದಿರುವುದನ್ನು ಗಮನಿಸಬಹುದು. ಇಷ್ಟು ದೀರ್ಘ ಕಾಲಾವಧಿಯ ನಂತರ ಅವುಗಳನ್ನು 'ನಿರ್ದಿಷ್ಟ'ವಾಗಿ ಇದೇ ಎಂದು ಗುರುತಿಸುವುದು ಕುತೂಹಲದ ಸಂಗತಿ

ಎಂಬಲ್ಲಿ ಅನುಮಾನವಿಲ್ಲ. ಆದರೆ ಹೀಗೆ 'ನಿರ್ದಿಷ್ಟ'ವಾಗಿ ಗುರುತಿಸಿಕೊಂಡಾಗಲೂ — ಸದ್ಯಕ್ಕೆ ಅದು ಸಾಧ್ಯವೇ ಅಸಾಧ್ಯವೇ ಎಂಬ ಮಾತು ಬೇರೆ — ಅದರಿಂದ ಕವಿ ಕೃತಿಯ ಅಧ್ಯಯನಕ್ಕೆ ವಿಶೇಷವಾದ ಯಾವ ಬಗೆಯ ನೆರವೂ ದೊರೆಯದೆಂಬುದು ಮಾತ್ರ ಖಚಿತ ಸಂಗತಿ. ಹೆಚ್ಚೆಂದರೆ ಅವನನ್ನು ಕುರಿತು ಹೆಮ್ಮೆ ಪಡಬಹುದು ಅಷ್ಟೆ.)

ಇನ್ನೊಂದು ಅಂಶವನ್ನಿಲ್ಲಿ ಪ್ರಸ್ತಾಪಿಸಬೇಕು. ಪಂಪನ ಕಾವ್ಯಗಳನ್ನೇ ಕುರಿತು ಮಾತನಾಡುವಾಗಲೂ ತೀರ ಅನಿವಾರ್ಯವೋ ಎಂಬಂತೆ ಪಂಪನ ಕುಲ, ಗೋತ್ರ, ಪೂರ್ವಿಕರ ವಿವರಗಳು ಮೊದಲಾಗಿ ಅವನೇ ಹೇಳಿಕೊಂಡ ಹಿತಮಿತ ಮೃದು ವಚನ, ಇತರ ವಿವರಗಳನ್ನು ಪದೇ ಪದೇ ಹೇಳುತ್ತ ಬರಲಾಗಿದೆ. ಇಂಥ ಪುನರಾವರ್ತಿತ ವಿವರಗಳ ಅಗತ್ಯವಿಲ್ಲವೆಂದು ತೋರುತ್ತದೆ. ಇದಲ್ಲದೆ, ಪಂಪನ ಬಗ್ಗೆ ನಮಗೆ ತಿಳಿದಿರುವ ಸಂಗತಿಗಳನ್ನು ಕಾವ್ಯದ ಕೆಲವು ವಿವರಗಳಿಗೆ ಸಂಬಂಧಿಸಿ ಕೂಡ ಹೇಳಲಾಗುತ್ತದೆ. ಇಂಥ ಕೆಲವನ್ನು ಈ ಅಧ್ಯಾಯದ ಮೊದಲಲ್ಲೇ ಸೂಚಿಸಲಾಗಿದೆ. ಅತ್ಯಂತ ಪ್ರಭಾವಶಾಲಿಯಾಗಿ ಬೆಳೆದು ಬಂದಿರುವ ಈ ಅಧ್ಯಯನ ಕ್ರಮ ಇಂದಿಗೂ ಚಾಲ್ತಿಯಲ್ಲಿದೆಯಾಗಿ, ಇಂಥ ಅಧ್ಯಯನ ಕ್ರಮ ಕಾವ್ಯದ ಅಧ್ಯಯನಕ್ಕೆ ಕೆಲವು ಮಿತಿಗಳನ್ನು ಹಾಕಿಕೊಂಡಿದೆಯೆನ್ನಬಹುದು. ಇಂಥ ಮಿತಿಗಳು ಪರೋಕ್ಷವಾಗಿ ಇದುವರೆಗೆ ಪ್ರಸ್ತಾಪಿಸಿದ ಚರ್ಚೆಗಳ ಮಿತಿಗಳೇ ಆಗಿವೆ.

## 3.4 ಕಾವ್ಯ ಸಂಬಂಧೀ ಅಧ್ಯಯನಗಳು

(ಕಾವ್ಯ ಸಂಬಂಧೀ ಅಧ್ಯಯನಗಳೆಂದು ಗುರುತಿಸಬಹುದಾದ ಚರ್ಚೆಗಳೆಲ್ಲ ಕಾವ್ಯವನ್ನೇ ಕೇಂದ್ರವಾಗಿ ಉಳ್ಳಂಥವು. ಕಾವ್ಯದ ಪಾಠ ಸಮಸ್ಯೆಗಳು, ಅರ್ಥ ಸಂದಿಗ್ಧತೆಗಳ ಸ್ಪಷ್ಟೀಕರಣ ಇತ್ಯಾದಿಗಳು ಈ ಅಧ್ಯಯನಗಳ ಪ್ರಮುಖ ಕಾಳಜಿಗಳಾಗಿವೆ. ಈ ಹಿಂದೆ ಗಮನಿಸಿದ ಕವಿ ಸಂಬಂಧೀ ಅಧ್ಯಯನಗಳಂತೆಯೇ

ಇವುಗಳು ಕೂಡ ಪುನಾರಚನೆಯ ಸ್ವರೂಪದವೇ ಆಗಿವೆ. ಆದರೆ, ಅವುಗಳಂತೆ ಕಾವ್ಯದ ದೃಷ್ಟಿಯಿಂದ ಗೌಣವೆನ್ನಬಹುದಾದ ವಿವರಗಳನ್ನು ಕುರಿತ ಚರ್ಚೆಗಳು ಇವಲ್ಲ. ಬದಲಾಗಿ, ಇವುಗಳು ಕಾವ್ಯ ಗ್ರಹಿಕೆಗೆ, ಕಾವ್ಯವನ್ನು ಕುರಿತ ಅಧ್ಯಯನಗಳಿಗೆ, ವಿಮರ್ಶೆಗೆ ಪೂರಕವಾಗುವಂಥ ನೆಲೆಗಟ್ಟೊಂದನ್ನು ನಿರ್ಮಿಸಬಲ್ಲವಾಗಿವೆ. ನಮ್ಮ ಬಹುಪಾಲು ಪ್ರಾಚೀನ ಕವಿ ಕೃತಿಗಳಲ್ಲಿ ಉಳಿದಿರುವ ಪಾಠ ಸಮಸ್ಯೆಗಳನ್ನು ನೆನೆದರೆ ಈ ಬಗೆಯ ಚರ್ಚೆಗಳಿಂದ ದೊರೆಯುವ ನೆರವಿನ ಸ್ವರೂಪ ಮನವರಿಕೆಯಾಗುತ್ತದೆ. ಬಾಹುಳ್ಯದ ದೃಷ್ಟಿಯಿಂದ ಗಮನಿಸಿದರೆ ವಿಕ್ರಮಾರ್ಜುನ ವಿಜಯವನ್ನು ಕುರಿತಂತೆ ಇಂಥ ಚರ್ಚೆಗಳು ಹೆಚ್ಚಾಗಿ ನಡೆದಿದ್ದು, ಆದಿಪುರಾಣಕ್ಕೆ ಸಂಬಂಧಿಸಿದಂತೆ ನಡೆದದ್ದು ಬೆರಳೆಣಿಕೆಯಷ್ಟು ವಿರಳವೆಂದು ಹೇಳಬಹುದು. ಇನ್ನು ಈ ಚರ್ಚೆಗಳನ್ನು 'ಪಾಠ ಚರ್ಚೆಗಳು' 'ಅರ್ಥ ಸಂದಿಗ್ಧತೆಗಳ ಸ್ಪಷ್ಟೀಕರಣ' ಎಂದು ಬೇರೆ ಬೇರೆಯಾಗಿಯೇ ಗುರುತಿಸಲು ಸಾಧ್ಯವಿದೆಯಾದರೂ, ಇವುಗಳು ಪರಸ್ಪರ ಸಂಬಂಧಿಗಳೇ ಆಗಿರುವುದರಿಂದ 'ಪಾಠ ಚರ್ಚೆಗಳು' ಎಂದು ಒಟ್ಟಾಗಿಯೇ ಗುರುತಿಸುವುದು ಯುಕ್ತವೆಂದು ತೋರುತ್ತದೆ.)

### 3.4.1 ಪಂಪನ ಕಾವ್ಯಗಳ ಪಾಠ ಚರ್ಚೆಗಳು

#### 3.4.1.1 ಡಿ.ಎಲ್.ಎನ್. ಅವರ ಪಂಪ ಭಾರತ ದೀಪಿಕೆ

ಪಂಪನ ಕಾವ್ಯಗಳ ಪಾಠ ಸಂಬಂಧೀ ಚರ್ಚೆಗಳಲ್ಲಿ ಡಿ.ಎಲ್.ನರಸಿಂಹಾಚಾರ್ಯರ 'ಪಂಪ ಭಾರತ ದೀಪಿಕೆ' ಮಹತ್ವದ ಪ್ರಯತ್ನವೆನ್ನಬಹುದು. ದೀಪಿಕೆಗೂ ಮುನ್ನ 'ನಾಡೋಜ ಪಂಪ' ಕೃತಿಯಲ್ಲಿಯೂ ಕೆಲವು ಪಾಠ ಚರ್ಚೆಗಳನ್ನು ಗಮನಿಸಬಹುದಾಗಿದೆ. ಆದರೆ ಅಂಥ ಚರ್ಚೆಗಳು ವಿರಳವೆಂದೇ ಹೇಳಬೇಕು. ಇಂಥ ವಿರಳ ಚರ್ಚೆಗಳಲ್ಲೂ

ಮೌಲಿಕವಾದ ಕೆಲವು ಚರ್ಚೆಗಳಿವೆಯೆಂಬುದನ್ನು ಒಪ್ಪಬೇಕಾಗುತ್ತದೆ. 'ನಾಡೋಜ ಪಂಪ' ಕೃತಿಯು ಬಹುಕಾಲದ ನಂತರ ಪ್ರಕಟವಾದ ದೀಪಿಕೆಯ ಸ್ವರೂಪ ಮತ್ತು ಉದ್ದೇಶಗಳೇ ಬೇರೆಯಾಗಿದ್ದು, ಇಲ್ಲಿನ ಚರ್ಚೆಗಳಿಗೆ ವಿಶಿಷ್ಟ ಸ್ಥಾನವಿದೆ. ಸ್ವತಃ ಡಿ.ಎಲ್.ಎನ್. ಅವರು ಈ ಕೃತಿಯನ್ನು ಪಂಪ ಭಾರತದ 'ಟೀಕು', 'ವ್ಯಾಖ್ಯಾನ' ಎಂದೆಲ್ಲ ಕರೆದಿರುವರಾದರೂ (ಮುನ್ನುಡಿ) ಪ್ರತಿ ಪದ– ಪದದ ಅರ್ಥವನ್ನು ವಿವರಿಸುವ ನೆಲೆಯಲ್ಲಿ ಅದು ಕೇವಲ 'ಟೀಕು' ಅಥವಾ 'ವ್ಯಾಖ್ಯಾನ'ವಾಗಿ ಉಳಿಯದೆ, ಅದನ್ನೂ ಮೀರಿದ ಇತರ ಆಯಾಮಗಳನ್ನು ಪಡೆದುಕೊಂಡಿದೆ. ಅವರ ಮಾತುಗಳನ್ನೇ[54] ಬಳಸಿ ಹೇಳಬಹುದಾದರೆ, "ವ್ಯಾಕರಣ, ಛಂದಸ್ಸು, ಪೂರ್ವ ಕಥಾ ವೃತ್ತಾಂತ" ಶಬ್ದಾರ್ಥ ನಿರ್ಣಯ, ಆಕರ ಗ್ರಂಥಗಳು ಮುಂತಾದ ಅನೇಕ ವಿಷಯಗಳು ಈ ಟೀಕೆಯಲ್ಲಿ ನಿರೂಪಿತವಾಗಿವೆ. ಹೀಗೆ ಅನೇಕ ವಿಷಯಗಳು ನಿರೂಪಿತವಾದದ್ದು ಬಹುಮಟ್ಟಿಗೆ ಪಾಠ ಸಮಸ್ಯೆಗಳ ಸಂಬಂಧದಲ್ಲಿಯೇ ಎಂಬುದು ಗಮನಿಸಬೇಕಾದ ಅಂಶ.

ಪಂಪನ ಕೃತಿಗಳ ಪಾಠ ಚರ್ಚೆಗಳು ನಡೆದು ಬಂದ ದಾರಿಯನ್ನು ಗಮನಿಸಿ 'ದೀಪಿಕೆ'ಯನ್ನು ಈ ನಿಟ್ಟಿನ 'ಒಂದು ಮೈಲಿಗಲ್ಲು' ಎಂದು ಕರೆದರೆ ಆ ಮಾತು ಖಂಡಿತವಾಗಿಯೂ ಉತ್ಪ್ರೇಕ್ಷೆಯಾಗಬೇಕಿಲ್ಲ. ಹೀಗೆ ಕರೆಯಲು ಕಾರಣವಿದೆ ಮತ್ತು ಹೀಗೆ ಕರೆಯುವುದರಲ್ಲಿ ಒಂದು ವಿಶಿಷ್ಟ ಅರ್ಥವಿದೆ. ಹಾಗೆ ನೋಡಿದರೆ, ಪಾಠ ಚರ್ಚೆಗಳು ಪಂಪನ ಕೃತಿಗಳ ಸಂಬಂಧದಲ್ಲಿ ನಡೆದಿರುವುದು ವಿಪುಲವೇನಲ್ಲ (ಪ್ರಮಾಣದ ದೃಷ್ಟಿಯಿಂದ). ನಡೆದದ್ದರಲ್ಲಿ ಬಹುಪಾಲು ಈ ಶತಮಾನದ ಉತ್ತರಾರ್ಧದಲ್ಲಿ, ಅದರಲ್ಲೂ ವಿಶೇಷವಾಗಿ ಅರವತ್ತು – ಎಪ್ಪತ್ತರ ದಶಕಗಳು ಮತ್ತು ನಂತರ. ದೀಪಿಕೆ ಪ್ರಕಟವಾದದ್ದು 1971 ರಲ್ಲಿ. ಈ ಮೊದಲೂ ಡಿ.ಎಲ್.ಎನ್. ಅವರು ಇತರ ಕವಿ ಕೃತಿಗಳ ಪಾಠ ಸಮಸ್ಯೆಗಳನ್ನು

---

54. ನರಸಿಂಹಾಚಾರ್ ಡಿ.ಎಲ್., ಪಂಪ ಭಾರತ ದೀಪಿಕೆ, ಮೈ.ವಿ.ವಿ., 1971 (ಮುನ್ನುಡಿ)

ಬಿಡಿಸುವಾಗಲೋ ಅಥವಾ ಪ್ರತ್ಯೇಕವಾಗಿಯೋ ಪಂಪನ ಕೃತಿಗಳನ್ನು ಕುರಿತಂತೆ ಚರ್ಚಿಸಿದ್ದಾರೆ. ದೀಪಿಕೆಯ ರಚನೆಗೆ ಮುನ್ನಿನ ಇಂಥ ಚರ್ಚೆಗಳು ಅವರ 'ಛಂದೋವಿಹಾರ', 'ಕನ್ನಡ ಗ್ರಂಥ ಸಂಪಾದನೆ', 'ಪೀಠಿಕೆಗಳು ಮತ್ತು ಲೇಖನಗಳು' ಕೃತಿಗಳಲ್ಲಿ ಸೇರಿವೆ. ಬಹುಮಟ್ಟಿಗೆ ಆ ಚರ್ಚೆಗಳ ನಿಲುವುಗಳು ದೀಪಿಕೆಯಲ್ಲಿ ಅಡಕಗೊಂಡಿವೆ. ಇದಲ್ಲದೆ, ಡಿ.ಎಲ್.ಎನ್. ಅವರ ಪಾಠ ಚರ್ಚೆಗಳು ದೀಪಿಕೆಯ ಪ್ರಕಟಣೆಗೆ ಮುನ್ನ ಮತ್ತು ನಂತರ ನಡೆದ ಹಲವು ಪಾಠ ಚರ್ಚೆಗಳಿಗೆ ದಿಕ್ಸೂಚಿಗಳೂ, ಪ್ರೇರಕ ನೆಲೆಗಳೂ ಆಗಿವೆಯೆಂಬುದನ್ನು ಗಮನಿಸಬೇಕು.

ದೀಪಿಕೆಯಲ್ಲಿ ಕಾಣಬರುವ ಇಂಥ ಚರ್ಚೆಗಳನ್ನು ಗಮನಿಸಿದಾಗ ಅವುಗಳ ಹಿಂದೆ ಅಪಾರವಾದ ವಿದ್ವತ್ತು, ಹಲವು ಜ್ಞಾನ ಶಾಖೆಗಳ ಪರಿಚಯ, ಕನ್ನಡ ಭಾಷೆಯ ಚಾರಿತ್ರಿಕ ಬೆಳವಣಿಗೆಯ ಪ್ರಜ್ಞೆಯುಳ್ಳ, ಎಲ್ಲಕ್ಕಿಂತ ಮುಖ್ಯವಾಗಿ ಕಾವ್ಯವನ್ನು ಪರಿಭಾವಿಸಬಲ್ಲ ಸೂಕ್ಷ್ಮ ಸಂವೇದನಾಶೀಲ ಮನಸ್ಸು ಕೆಲಸ ಮಾಡಿರುವುದು ಮನವರಿಕೆಯಾಗುತ್ತದೆ.

ಡಿ.ಎಲ್.ಎನ್. ಸಾಮಾನ್ಯವಾಗಿ ಒಂದು ಪದ್ಯದ ಅರ್ಥ ವಿವರಣೆಯ ಮಧ್ಯೆ ಬರುವ ಪಾಠ ಸಮಸ್ಯೆಗಳನ್ನು ಬಿಡಿಸುವಾಗ ನಿಖರವಾಗಿ ಶಾಸ್ತ್ರೀಯ ವಿಧಾನ ಏನನ್ನು ಹೇಳುತ್ತದೆ ಎನ್ನುವುದಕ್ಕಿಂತ ಮುಖ್ಯವಾಗಿ ಆ ಪದ್ಯದ ಸಂದರ್ಭ, ಭಾವದ ಹಿನ್ನೆಲೆಯಿಂದ ಯಾವ ಪಾಠ ಎಷ್ಟು ಸಮಂಜಸವೆಂಬುದನ್ನು ನಿರ್ಧರಿಸುತ್ತಾರೆ. ಇಂಥದು ಹಲವೆಡೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಗಮನಕ್ಕೆ ಬರುವಂಥದಾಗಿದ್ದು ಒಂದು ನಿದರ್ಶನವನ್ನಿಲ್ಲಿ ಗಮನಿಸಬಹುದು. ಪಂಪ ಭಾರತದ ನವಮಾಶ್ವಾಸದ ಒಂದು ಪದ್ಯ (47) :-

"ವಿಜಿಗೀಷುತ್ವದೊಳೊಂದಿ ಗೋವಳಿಗನಪ್ಪಂ ಮತ್ಸ್ಯನಾಳ್ಗಾಗಿ ವಾ
ರಿಜನಾಭಂ ಹರಿಯೆಂಬ ದೊಡ್ಡವೆಸರಂ ಪೊತ್ತಿರ್ದ ನೀಂ ಮಂತ್ರಿಯಾ

ಗೆ ಜಂತೋದೋಳಗಮನೆತ್ತಿಕೊಂಡು ರಣದೊಳ್ ಭೂಭಾಗಮಂ ನೆಟ್ಟನೊ
ಟ್ಟಜೆಂಯುಂದಂಜಿಸಿಕೊಳ್ಳದಿರ್ಪಿರೆ ಸಮಂತಾ ಗಂಡರೀ ಗಂಡರಂ."

ಬೆಳ್ಳಾವೆಂಯವರ ಪರಿಷ್ಕರಣದಲ್ಲಿ 'ಮತ್ಸ್ಯ' ಮತ್ತು 'ಇರ್ಪಿರೆ' ಎಂಬ ಪಾಠಗಳಿಗೆ 'ಮರ್ತ್ಯ' ಮತ್ತು 'ಇರ್ಪರೆ' ಎಂಬ ಪಾಠಗಳನ್ನು 'ಪ' (ಪರಿಷತ್ತು) ಎಂಬ ಸಂಕೇತದಿಂದ ಸೂಚಿಸಲಾಗಿದೆ. ಬೇರಾವ ಪಾಠ ಭೇದಗಳೂ ಇಲ್ಲ. ಮೇಲಿನ ಪದ್ಯಕ್ಕೆ ಅನ್ವಯಾರ್ಥ ಬರೆಯುತ್ತಾ,[55] "ದುಂಯೋೕಧನನ ಮಾತುಗಳಲ್ಲಿ ವ್ಯಂಗ್ಯ, ಕಟಕಿ, ತಿರಸ್ಕಾರ, ಗರ್ವ, ಮಾತ್ಸಂರ್ಯ, ಪರಿಹಾಸ — ಇವೇ ಮುಂತಾದ ಭಾವಗಳು ತುಂಬಿವೆ" ಎಂದು ವಿವರಿಸಿ, ಪರಿಷತ್ತಿನ ಸೂಚಿತ ಪಾಠಗಳನ್ನು ಗಮನಾರ್ಹವೆಂದಿದ್ದಾರೆ. ಹೀಗೆನ್ನುವಲ್ಲಿ ಆ ಸೂಚಿತ ಪಾಠಗಳಿಗಿರುವ ಭಾವ ಸಾಚಿಯಂರ್ಯವನ್ನು ಅವರು ಮುಖ್ಯವಾಗಿ ಗಮನಿಸಿರುವರೆಂಬುದು ಸ್ಪಷ್ಟ. ಹಾಗೆಯೇ ಈ ಸೂಚಿತ ಪಾಠಗಳು ಮೇಲಿನ ಭಾವವನ್ನು ಸಮರ್ಥವಾಗಿ ಪ್ರಕಟಪಡಿಸಬಲ್ಲವೆಂಬುದನ್ನೂ ಒಪ್ಪಬೇಕು.

ಒಂದು ನಿರ್ದಿಷ್ಟ ಪಾಠದ ಸಮಸ್ಯೆಯನ್ನು ಬಿಡಿಸುವಾಗ, ಅದರ ಅಸ್ಪಷ್ಟತೆಯನ್ನು ಸ್ಪಷ್ಟೀಕರಿಸುವಾಗ ಡಿ.ಎಲ್.ಎನ್. ಅಂಥ ಹಲವು ಪ್ರಯೋೕಗಗಳನ್ನು ಕಲೆ ಹಾಕಿ ಪರಿಶೀಲಿಸುತ್ತಾರೆ. ಇಂಥ ಪ್ರಯೋೕಗಗಳು ಅದೇ ಕವಿಯವಿರಬಹುದು ಅಥವಾ ಇತರ ಕವಿ ಪ್ರಯೋೕಗಗಳಿರಬಹುದು. ಪಂಪ ಭಾರತದ ಪದ್ಯವೊಂದರ (12—3) "ಅದೆಂತುಮೌ ನುಡಿ ತಪ್ಪದು ಕಮ್ಮಟಯೊವಜಂ ಬಲ್ಲೊವಜನೆಂಬುದಂ ಮಾಡುವೆನೇ" ಎಂಬಲ್ಲಿ ನುಡಿ ತಪ್ಪದು ಎಂದಿರುವ ಬೆಳ್ಳಾವೆ ಪರಿಷ್ಕರಣದ ಪಾಠವನ್ನು 'ನುಡಿ ತಪ್ಪುದು' ಎಂದೂ ಹಾಗೆಯೇ 'ಕಮ್ಮಟ' ಎಂಬುದನ್ನು 'ಕಮ್ಮರಿ' ಎಂದೂ ತಿದ್ದಿದ್ದಾರೆ. ಇಲ್ಲಿ 'ಕಮ್ಮರಿ' ಎಂಬ ಪಾಠದ ಸಂಬಂಧದಲ್ಲಿ ಅವರು

---

55. ನರಸಿಂಹಾಚಾರ ಡಿ.ಎಲ್., ಪಂಪ ಭಾರತ ದೀಪಿಕೆ, ಮೈ.ವಿ.ವಿ., 1971
ಪು: 318.

ನಡೆಸಿರುವ ಚರ್ಚೆಯನ್ನಿಲ್ಲಿ ಗಮನಿಸಬಹುದು: "ಈ ಪದ್ಯದಲ್ಲಿ ಕೆಲವು ಪಾಠ ಕ್ಲೇಶಗಳಿವೆ; ಆದರೆ ಅರ್ಥವೇನೊ ಚಿಂತಿಸಿದರೆ ವಿಶದವಾಗುತ್ತದೆ. ದ್ರೋಣನು ತನಗೆ ತಾನೇ ಹೇಳಿಕೊಳ್ಳುತ್ತಾನೆ; ಜನ ಏನು ಹೇಳುತ್ತಾರೆ. ದ್ರೋಣ ಇತರರಿಗೆ ಹೇಳುವನೇ ಹೊರತು ಯುದ್ಧದಲ್ಲಿ ತಾನು ಹೇಳಿದಂತೆ ಮಾಡಲು ತಿಳಿಯನು; ಮಾತೊಂದು ಕಾರ್ಯವಿನ್ನೊಂದು ಎಂಬಂಥ ಮಾತುಗಳಿವು, ನಾಶವಾಗುವಂಥವು. ತಾನು ನುಡಿದಂತೆ ನಡೆಯುದ ಆಚಾರ್ಯನಲ್ಲವೇ, ಎಂದು. ತಪ್ಪದು — ಅದು ತಪ್ಪು, ಸುಳ್ಳು ಎಂದೂ ಆಗಬಹುದು. ಇಲ್ಲಿ ತ(ಪ್ಪು)ದು ಎಂದು ತಿದ್ದಿದೆ; 'ಕಮ್ಮಟಿ'ಎಂಬುದನ್ನು ಕಮ್ಮ(ರಿ) ಎಂದು ತಿದ್ದಿದೆ. ಕಮ್ಮಟಿ ಎಂದರೆ ಕಮ್ಮಾರನನ್ನುಳ್ಳದ್ದು ಅಥವಾ ಕಮ್ಮಾರತನವನ್ನುಳ್ಳವನು; ಕೆಲಸ ಕೆಲಸಿ ಇದ್ದ ಹಾಗೆ, ಎಂದರೆ ಅರ್ಥವಾಗುವುದಿಲ್ಲ. ಈ ಶಬ್ದದ ಪ್ರಯೋಗವು ಹಲವೆಡೆ ಬರುತ್ತದೆ. 'ಪಡುಳಂ ಕುಳ್ಳಿರ್ದೆಮಗಾಯುದ ಮಾತಂ ತಗುಳೆ ಗಳಿಪಿ ಪೋದಂ ಸಂದಿರ್ದಬುರೊಳಿಚಿದಟಿಯಂ ತಪ್ಪದೆ ಕಮ್ಮಟಿ ಯೋಜನೆನಿಸಿದಂ ಬಲ್ಲೋಜಂ' (ಗದಾ: 2—13); 'ಇನ್ನುಂತುಬು ಪೇಟಿಂ ಕಮ್ಮಗಿರೆ ಗಮ್ಮನೆ ಕಮ್ಮರಿ ಯೋಜನಾಗನೇ' (ಆದಿ ಪು: 2—61); 'ಒಡಲಧ್ರುವಂಮುಶುಚಿಯುದಂ ..... ..... ಮರೆದಾನಿಂತಿರ್ದೊಡೆ ಕಮ್ಮರಿಯೋಜನೆಂಬ ನುಡಿಗೆಡೆಯುಪ್ಪೆಂ' (ಚಂದ್ರ ಪು: 10—124) ಈ ಮೂರು ಪ್ರಯೋಗಗಳಲ್ಲೂ ನುಡಿದಂತೆ ನಡೆಯುದವನು ಎಂಬ ಅರ್ಥ ಸ್ಪಷ್ಟವಾಗಿದೆ; ಕಮ್ಮರಿಯೋಜ ಎಂಬುದೇ ಸರಿಯಾದ ರೂಪರೂಪವೆಂಬುದೂ ಖಚಿತವಾಗುತ್ತದೆ; ಗದಾ. ಪ್ರಯೋಗದಲ್ಲಿರುವ 'ಟಿ. ತಪ್ಪು; ಕಮ್ಮರಿ (ಸಂ) ಕರ್ಮಾರಿ — ಕರ್ಮಕ್ಕೆ ಶತ್ರುವಾದವನು; ಕೆಲಸ ಮಾಡದವನು."[56] ಈ ವಿವರವನ್ನು ಗಮನಿಸಿದರೆ ಹೊಸ ತಿದ್ದುಪಡಿಗಳನ್ನು ನಿಯೋಜಿಸುವಾಗ, ಸಂದಿಗ್ಧಗಳನ್ನು ಸ್ಪಷ್ಟಪಡಿಸುವಾಗ ಅವರು ಅನುಸರಿಸುವ ಮಾರ್ಗ ಎಂಥದೆಂಬುದು ನಮಗೆ ಮನವರಿಕೆಯಾಗುತ್ತದೆ.

---

56. ನರಸಿಂಹಾಚಾರ ಡಿ.ಎಲ್., ಪಂಪ ಭಾರತ ದೀಪಿಕೆ, ಮೈ.ವಿ.ವಿ., 1971 ಪು: 435—436.

ಇದೇ ರೀತಿ "ಭಗವತಿಯೊೞು ವೇೞ್ಪ ತೆಱದಿಂ ..........." ಎಂದು ಪ್ರಾರಂಭವಾಗುವ ಪಂಪ ಭಾರತದ ಪದ್ಯವೊಂದರ (10–16) 'ಭಗವತಿಯೊೞು' ಎಂಬುದನ್ನು ಕುರಿತಂತೆ ನಡೆಸಿರುವ ಚರ್ಚೆಯನ್ನು ಗಮನಿಸಬಹುದು. ಈ ಪಾಠಕ್ಕೆ ಬೇರಾವ ಪಾಠಾಂತರಗಳೂ ಇಲ್ಲ. ಡಿ.ಎಲ್.ಎನ್. ಕೂಡ ಇಲ್ಲಿ ಎತ್ತಿಕೊಂಡಿರುವುದು ಇರುವ ಪಾಠವನ್ನು ವಿವರಿಸಬಹುದಾದ ಸಾಧ್ಯತೆಯ ಪ್ರಶ್ನೆಯೇ ಹೊರತು ಪಾಠ ಸಮಸ್ಯೆಯನ್ನಲ್ಲ. ಕೇಶಿರಾಜ 'ಏೞು' ಶಬ್ದಕ್ಕೆ ಹೇಳುವ ಆರೋಹಣ, ಸಮಗ್ರತ್ವ, 'ಗಾಯ' — ಈ ಅರ್ಥಗಳಾಗಲಿ, ನಾಮಾರ್ಥದಲ್ಲಿ ಹೇಳುವ ಏಳಿಗೆ, ಉಚ್ಛ್ರಾಯ ಎಂಬ ಅರ್ಥಗಳಾಗಲಿ ಇಲ್ಲಿಗೆ ಹೊಂದದ ಕಾರಣಕ್ಕಾಗಿ ಇದೇ ಪ್ರಯೋಗವಿರುವ ಶಾಸನ ಮೂಲಗಳನ್ನೂ, ಪಂಪನವೇ ಇತರ ಪ್ರಯೋಗಗಳನ್ನೂ ಕಲೆ ಹಾಕಿದ್ದಾರೆ. ಈ ಪ್ರಯೋಗಗಳಲ್ಲೆಲ್ಲ 'ಏೞು' ಎಂಬ ಪದ ಯುದ್ಧ ಅಥವಾ ಕಾಳಗ ಎಂಬರ್ಥಗಳಲ್ಲಿ ಬಳಕೆಯಾಗಿದ್ದು, ಅದೇ ಅರ್ಥ ಇಲ್ಲಿಗೆ ಹೊಂದಿಕೆಯಾಗುತ್ತದೆಯೆಂದು ಆ ಹಿನ್ನೆಲೆಯಲ್ಲಿ ಈ ಪದ್ಯವನ್ನು ಹೀಗೆ ಅರ್ಥೈಸುತ್ತಾರೆ: "ಜಾಮುಂಡಿ ಮಾಡಿದ ಯುದ್ಧಗಳೆಲ್ಲವೂ ಪುರಾಣ ಕಥೆಗಳಾಗಿ ಪರಿಣಮಿಸಿವೆ ಹಾಗೆಯೇ ಭೀಷ್ಮರು ಮಾಡಿದ ಯುದ್ಧಗಳೂ ಪ್ರಾಚೀನ ಕಾಲಕ್ಕೆ ಸೇರಿದುವು; ಈಗ ಅವರಿಂದ ಯಾವ ಯುದ್ಧವನ್ನೂ ಮಾಡಲಾಗುವುದಿಲ್ಲ. ವೃದ್ಧರಾದ ದ್ರೋಣ ಕೂಡ ಇನ್ನೂ ಅವರು ಯುದ್ಧ ಮಾಡಬಲ್ಲರೆಂದು ನೀನು ಭ್ರಾಂತನಾಗಿ ಅವರಿಗೆ ವೀರ ಪಟ್ಟವನ್ನು ಕಟ್ಟಿದೆ. ಆ ಗುರುಗಳನ್ನೂ, ಕುಲದ ಹಿರಿಯರನ್ನೂ ಶತ್ರುಗಳ ಸೈನ್ಯದೆದುರು ನಿಲ್ಲಿಸಿ ಅವರನ್ನು ಪರಿಹಾಸಕ್ಕೀಡು ಮಾಡುವುದರಿಂದ ನಿನಗೇನು ಪ್ರಯೋಜನ ದುರ್ಯೋಧನ — ಎಂದು .......... ಪದ್ಯದ ತಾತ್ಪರ್ಯವಾಗಿದೆ."

ದೀಪಿಕೆಯ ಪ್ರಕಟಣೆಗೆ ಬಹು ಮುನ್ನವೇ[57] ಈ ಚರ್ಚೆಯನ್ನು ನಡೆಸಿದ

---

57. ನೋಡಿ: ("ಭಗವತಿಯೊೞುವೇೞ್ಪ ತೆಱದಿಂ.....", ಸಾಹಿತ್ಯನಂದನ (ಕುಸುಮ 3) 1962; ಮರು ಮುದ್ರಿತ : "ಭಗವತಿಯೊೞು ವೇೞ್ಪತೆಱದಿಂ ಕಥೆಯಾಯ್ತುಮರೇೞು" (ವಸ್ತುಕೋಶ ಪ್ರ.ಕ. 44–2 ಮತ್ತು) "ಭಗವತಿಯೊೞು", ಪೀಠಿಕೆಗಳು ಮತ್ತು ಲೇಖನಗಳು ಮೈಸೂರು, 1971. ಪು: 945–946.

ಡಿ.ಎಲ್.ಎನ್. ದೀಪಿಕೆಯಲ್ಲಿ ಇದೇ ನಿಲುವನ್ನು ಹೊಂದಿದ್ದಾರೆ.

'ಭಗವತಿಯೇಱು' ಎಂಬುದನ್ನು ಕುರಿತ ಡಿ.ಎಲ್.ಎನ್. ಅವರ ಗ್ರಹಿಕೆಗೆ ಎರಡು ಪ್ರತಿಕ್ರಿಯೆಗಳು ಬಂದಿವೆ. ಮೊದಲನೆಯದಾಗಿ, ಎಂ.ಚಿದಾನಂದಮೂರ್ತಿಯವರು [58] ಡಿ.ಎಲ್.ಎನ್. ಅವರ ವ್ಯಾಖ್ಯಾನ ರನ್ನನ ಲೊಕ್ಕಿಗುಂಡಿ ಶಾಸನದಲ್ಲಿ (ಡಿ.ಎಲ್.ಎನ್. ಇದನ್ನು ಉದ್ಧರಿಸಿದ್ದಾರೆ) ಬರುವ ಉಕ್ತಿಗೆ ಹೊಂದಿಕೆಯಾಗದೆಂಬ ಕಾರಣಕ್ಕೆ ಅಸಮರ್ಪಕವೆಂದಿದ್ದಾರೆ. ಅವರ ಪ್ರಕಾರ ಇದು ಆ ಕಾಲದ ಒಂದು ಗಾದೆ ಮಾತಾಗಿರಬೇಕು. ಮತ್ತು ಇದಕ್ಕಿರುವ ಅರ್ಥ ಭಗವತಿಯ ಉತ್ಸವದ ಸಮಯದಲ್ಲಿ ನಡೆಯುವ ಅನುಕರಣೆಯ ವಿನೋದದ ಯುದ್ಧ, ಎಂದು. ಡಿ.ಎಲ್.ಎನ್. ಅವರ ಬರಹ ಮತ್ತು ಅದಕ್ಕೆ ಬಂದ ಚಿದಾನಂದ ಮೂರ್ತಿಯವರ ಪ್ರತಿಕ್ರಿಯೆಗಳೆರಡನ್ನೂ ಗಮನಿಸಿ ಕೆ.ವೆಂಕಟರಾಮಾಚಾರ್ಯರು ಇದನ್ನು ಬೇರೊಂದು ರೀತಿಯಲ್ಲಿ ವಿವರಿಸುತ್ತಾರೆ. ಅವರ ವಿವರಣೆಯ ಪ್ರಕಾರ 'ಏಱು' ಎಂದರೆ ಆವೇಶ, 'ಭಗವತಿಯೇಱು ವೇಱ್ಪ' ತೆರದಂತೆ ಭೀಷ್ಮನಲ್ಲಿ 'ಏಱು' (ಏರಿಕೆ; ಆವೇಶ) ಇದೀಗ ಕೇವಲ ಹಿಂದಿನ ಕತೆಯಾಗಿದೆ. ಆತನಲ್ಲೀಗ ಅದೇನೂ ಏಱು ಉಳಿದಿಲ್ಲ! (ಇಳಿಕೆಗೊಂಡಿದೆ) .......... ಒಂದೊಮ್ಮೆ ಭೀಷ್ಮನು ಪಾತ್ರಿಯಂತೆ ಏಱು (ಆವೇಶ) ವಿದ್ದಾಗ ಹೇಳಿದುದು ಮಾಡಿದುದು — ಏನಿದ್ದರೂ, ಅದೆಲ್ಲವಾ 'ಏಱು' ಇಳಿಕೆಗೊಂಡಾಗಣ ಪಾತ್ರಿಯಲ್ಲಿ ಕಾಣದಿರುವಂತೆ, ಈಗ ಭೀಷ್ಮನಲ್ಲೂ ಕಾಣಲಾರದೆಂದು ಸೂಚಿತವಾಗುತ್ತದೆ. [59] ವೆಂಕಟರಾಮಾಚಾರ್ಯರ ಅರ್ಥ ವಿವರಣೆ ಸ್ವಲ್ಪ

---

58. ಲಕ್ಕುಗುಂಡಿ ಶಾಸನದ ಒಂದು ಪದ್ಯ ಮತ್ತು 'ಭಗವತಿಯೇಱು' (ಒಗಟು) ಕ.ಭಾ. 5–1, 1972. ಪು: 159.

59. ಭಗವತಿಯೇಱು ಎಂದರೇನು? ಕ.ಭಾ. 5–4, 1973. ಪು: 17–24 (ವೆಂಕಟರಾಮಾಚಾರ್ಯರು ತಮ್ಮ ಚರ್ಚೆಯ ಎಲ್ಲೆಡೆಯಲ್ಲೂ 'ಭಗವತಿಯೇಱು ವೇಱ್ಪ' ಎಂದು ಬಳಸಿದ್ದಾರೆ. ಇದು ತಿಳಿದು ಮಾಡಿದ್ದೋ ಅಥವಾ ಅನುದ್ದೇಶಿತವೋ ಎಂಬುದು ತಿಳಿಯುವುದಿಲ್ಲ.)

ದೂರಾನ್ವಯವಾಗುವಂತೆ ತೋರುತ್ತದೆ. 'ಆವೇಶ' ಎಂಬರ್ಥವನ್ನು ಹೇಳುವಾಗ ಆವೇಶ ಎನ್ನುವುದು ಪಾತ್ರಿಗೆ ಬಂದಂತೆ ಭೀಷ್ಮನಿಗೂ ಪದೇ ಪದೇ ಬಂದು ಹೋಗುವಂಥದಲ್ಲ. 'ಕಥೆಯಾಯ್ತವರೇಱು' ಎಂಬಲ್ಲಿ ಈಗಾಗಲೇ ಗತ ಕಾಲಕ್ಕೆ ಸೇರಿದ್ದು ಎನ್ನುವ ಅರ್ಥ ಸ್ಪಷ್ಟವಾಗಿದೆ. 'ಏಱು' ಎಂಬುದಕ್ಕೆ 'ಆವೇಶ' ಎಂಬ ಅರ್ಥ ಇರಬಹುದು; ರನ್ನನ ಶಾಸನದ 'ಏಱು' ಪದ ಬೇರೆಯ ಅರ್ಥವನ್ನು ಹೇಳಬಹುದು. ಆದರೆ ಡಿ.ಎಲ್.ಎನ್. ಪಂಪ ಬಳಸಿದ ಪಾಠಕ್ಕೆ ನೀಡುವ ವಿವರಣೆ ಮಾತ್ರ ಸಂಗತವೆಂದು ತೋರುತ್ತದೆ. ಅದರೂ ಇಲ್ಲಿ ಬಳಕೆಯಾದ 'ಏಱು' ಪದ 'ಭಗವತಿಯೇಱು' ಎಂಬಲ್ಲಿ ಯುದ್ಧ ಎಂಬರ್ಥವೂ 'ಇವರೇಱು' ಎಂಬಲ್ಲಿ ಅದಕ್ಕಿಂತ ಭಿನ್ನವಾದ ಭೀಷ್ಮರ ಹೆಗ್ಗಳಿಕೆಯನ್ನು ಸೂಚಿಸಬಹುದಾದ ಅರ್ಥವೂ ಇರುವುದನ್ನೂ ಗಮನಿಸಬೇಕಾಗಿದೆ.

ಡಿ.ಎಲ್.ಎನ್. ಅವರ ಪಾಠ ಚರ್ಚೆಗಳಲ್ಲಿ ಕಾಣಬರುವ ಮತ್ತೊಂದು ಬಹು ಮುಖ್ಯವಾದ ಅಂಶವೆಂದರೆ, ಒಂದು ಪಾಠ ಸಮಸ್ಯೆಯನ್ನು ಬಿಡಿಸಲು ಪಾಠಾಂತರಗಳು ಇತರ ಕಾವ್ಯ ಪ್ರಯೋಗಗಳು ನೆರವಾಗದಿರುವಾಗ ಕಾವ್ಯೇತರವಾದ ಅನ್ಯ ಜ್ಞಾನ ಶಿಸ್ತುಗಳಿಂದ ನೆರವನ್ನು ಪಡೆಯುವುದು. ಇಂಥ ನೆರವಿನಿಂದ ಪಾಠ ಸಮಸ್ಯೆಗಳನ್ನು ಬಿಡಿಸಿದ, ಅವುಗಳತ್ತ ಬೆಳಕನ್ನು ಹಾಯಿಸಿದ ನಿದರ್ಶನಗಳನ್ನು ಅವರ ಚರ್ಚೆಗಳಲ್ಲಿ ಗಮನಿಸಬಹುದು. ನಿದರ್ಶನಕ್ಕೆ ಪಂಪ ಭಾರತದ ಮೊದಲ ಪದ್ಯದ ಸಂಬಂಧದಲ್ಲಿ ನಡೆಸಿರುವ ಚರ್ಚೆಯನ್ನು ಗಮನಿಸಬಹುದು. ಇಲ್ಲಿ ಶಿಲ್ಪ ಶಾಸ್ತ್ರದ ನೆರವನ್ನು ಪಡೆಯಲಾಗಿದೆ. ಇಡೀ ಪದ್ಯದಲ್ಲಿ ಚರ್ಚೆಗೊಳಗಾಗಿರುವ ಭಾಗ ಹೀಗಿದೆ: 'ಅತ್ಯೀಯ ಸುಪುಷ್ಪ ವೃಷ್ಟಿಯ ನೊಡಂಬಡೆ ತಾಳ್ದಿಯುಂ'. ಇದು ಬೆಳ್ಳಾವೆಯವರ ಪರಿಷ್ಕರಣದ ಸ್ವೀಕೃತ ಪಾಠ. ಇಲ್ಲಿ 'ಸುಪುಷ್ಪ ವೃಷ್ಟಿ' ಎಂಬುದಕ್ಕೆ 'ಸುಪುಷ್ಪ ದೃಷ್ಟಿ' ಎಂಬ ಪರಿಷತ್ತಿನ ಸೂಚಿತ ಪಾಠವನ್ನು ನೀಡಲಾಗಿದೆ. ಡಿ.ಎಲ್.ಎನ್. ಇಲ್ಲಿ 'ಸುಪುಷ್ಪ (ಪಟ್ಟ)' ಎಂಬ ಊಹಾ ಪಾಠವನ್ನು ನಿಯೋಜಿಸಿದ್ದಾರೆ. ಈ ನಿಯೋಜಿತ ಪಾಠವನ್ನು ಅವರು ಹೀಗೆ ಸಮರ್ಥಿಸುತ್ತಾರೆ: "ಇಲ್ಲಿ ಕಾಣುವ

ಪುಷ್ಪ ಪಟ್ಟವೆಂಬ ಶಬ್ದ ಶಿಲ್ಪ ಶಾಸ್ತ್ರಕ್ಕೆ ಸೇರಿದ್ದು. ರಾಜರೂ ದೇವತೆಗಳೂ ಧರಿಸುವ ಶಿರೋವೇಷ್ಟನಗಳಲ್ಲಿ ಜಟಾ, ಮೌಳಿ, ಕಿರೀಟ, ಕರಂಡ, ಶಿರಸ್ತ್ರಕ, ಕುಂಡಲ, ಕೇಶಬಂಧ, ಧಮ್ಮಿಲ್ಲ, ಅಲಕ, ಚೂಡ, ಮುಕುಟ, ಪಟ್ಟ ಎಂಬ ಹನ್ನೆರಡು ವಿಧಗಳಿವೆ. ಇವುಗಳಲ್ಲಿ ಪಟ್ಟವೆಂಬುದು ಪತ್ರ ಪಟ್ಟ, ರತ್ನ ಪಟ್ಟ, ಪುಷ್ಪ ಪಟ್ಟ ಎಂದು ಮೂರು ಬಗೆಯದಾಗಿದೆ. ಪಟ್ಟಭಾಜ ವರ್ಗದ ರಾಜನು ಈ ಕಿರೀಟಗಳನ್ನು ಧರಿಸುವ ಅಧಿಕಾರವನ್ನು ಹೊಂದಿದ್ದನು. ಅರಿಕೇಸರಿ ರಾಷ್ಟ್ರಕೂಟರ ಸಾಮಂತ ರಾಜನಾಗಿದ್ದರೂ ಪುಷ್ಪ ಪಟ್ಟ ಧಾರಣೆಯನ್ನು ಮಾಡಿಕೊಂಡು ಪಟ್ಟಾಧಿಕೃತನಾಗುವ ಅಂತಸ್ತಿಗೆ ಸೇರಿದ್ದನು" ಈ ಪದವನ್ನು ಬಳಸಿದ ಕೆಲವು ಕವಿ ಪ್ರಯೋಗಗಳನ್ನೂ ನಿದರ್ಶಿಸಿದ್ದಾರೆ.[60]

ಈ ನಿಯೋಜಿತ ಪಾಠವನ್ನು ನಿರಾಕರಿಸಿ ಮುಖ್ಯವಾಗಿ ಎರಡು ಪ್ರತಿಕ್ರಿಯೆಗಳು ಬಂದಿವೆ. ಒಂದು ಎಂ.ಎಂ.ಕಲಬುರ್ಗಿಯವರದು[61] ಮತ್ತೊಂದು ಸೀತಾರಾಮ ಜಾಗಿರದಾರರದು.[62] ಕಲಬುರ್ಗಿಯವರು 'ಸುಪುಷ್ಪ ದೃಷ್ಟಿ' ಎಂಬ ಬೇರೊಂದು ಪಾಠವನ್ನು ನಿಯೋಜಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವರು ಪ್ರಧಾನವಾಗಿ ಎತ್ತಿ ತೋರಿಸುವ ಅಂಶಗಳು ಎರಡು: ಒಂದು, ಈ ಪದ್ಯದಲ್ಲಿರುವ ಮೂರು ಸಂಗತಿಗಳಲ್ಲಿ ಒಂದು ಸಮುದ್ರ ಮಂಥನ, ಇನ್ನೊಂದು ವಾಮನಾವತಾರಗಳೆಂಬ ಪುರಾಣ ಘಟನೆಗಳಾಗಿರುವುದರಿಂದ ಮೂರನೆಯ ಸಂಗತಿಯೂ ಪುರಾಣ ಘಟನೆಯೇ ಇದ್ದಿರಬೇಕು; ಎರಡು, ಕಮಲಗಣ್ಣು ಎಂಬರ್ಥದ 'ಸುಪುಷ್ಪ ದೃಷ್ಟಿ' ಪಾಠ ಎಂಬ ಪಾಠ ಕೊನೆಯ ಪಕ್ಷ ಅರ್ಥ ದೃಷ್ಟಿಯಿಂದ ಯೋಗ್ಯವಾದ ಪಾಠ.

---

60. ನೋಡಿ: ನರಸಿಂಹಾಚಾರ್ ಡಿ.ಎಲ್., ಕನ್ನಡ ಗ್ರಂಥ ಸಂಪಾದನೆ, ಮೈಸೂರು, 1964. ಪು: 167–68.
61. ಪಂಪ ಭಾರತದ ಮಂಗಲ ಪದ್ಯ, ಕ.ಭಾ. 1970./ 3–2. ಪು: 6.
62. ವಿಕ್ರಮಾರ್ಜುನ ವಿಜಯದ ಆಶೀ ಪದ್ಯ, ಸಾಧನೆ 3–1, 1974. ಪು: 175–186.

ಜಾಗಿರದಾರರು 'ಸುಪುಷ್ಪ ದೃಷ್ಟಿ', 'ಸುಪುಷ್ಪ ಪುಷ್ಟ', 'ಸುಪುಷ್ಪ ದೃಷ್ಟಿ' — ಈ ಎಲ್ಲ ಊಹಿತ ಪಾಠಗಳು ಅನಾವಶ್ಯಕವೆಂದು 'ಸುಪುಷ್ಪ ವೃಷ್ಟಿ' ಎಂಬುದನ್ನೇ ಸಮರ್ಥಿಸುತ್ತಾರೆ. ಅವರ ಪ್ರಕಾರ 'ಪುಷ್ಪ' ಎಂಬುದಕ್ಕೆ ಪಂಪನ ಕಾಲದಲ್ಲಿಯೂ 'ಹೂ' ಎಂಬರ್ಥವಿದ್ದುದರ ಜೊತೆಗೆ 'ನಾಣ್ಯ' ಎಂಬ ವಿಶೇಷ ಅರ್ಥವೂ ಇದ್ದಿತು. ಕಲಬುರ್ಗಿಯವರು ಸಮರ್ಥಿಸುವ ಪಾಠವನ್ನೇ ಹೇಮಲತಾ ಪಡಕಿಯವರೂ [63] ಸಮರ್ಥಿಸಿದ್ದು, 'ಸುಪುಷ್ಪ ದೃಷ್ಟಿ' ಎಂಬ ಪಾಠ ಅಕ್ಷರ ಸಾದೃಶ್ಯದಿಂದಾಗಿ 'ಸುಪುಷ್ಪ ವೃಷ್ಟಿ' ಯಾಗಿರಬಹುದೆಂದು ವಿವರಿಸುತ್ತಾರೆ. ಮುಗಳಿಯವರು [64] ಯಾವುದೇ ಪಾಠವನ್ನೂ ಒಪ್ಪದೆ,ಇರುವ 'ಸುಪುಷ್ಪ ವೃಷ್ಟಿ' ಎಂಬ ಪಾಠವನ್ನೇ ಸಮರ್ಥಿಸುತ್ತಾರೆ.

ಡಿ.ಎಲ್.ಎನ್. ತಮ್ಮ ದೀಪಿಕೆಯಲ್ಲಿ ಕೆಲವು ಸಂದರ್ಭ ವಿವರಣೆಗಳನ್ನು ಕೊಡುತ್ತಾರೆ. ನಮಗಿಂದು ತಿಳಿದಿಲ್ಲದ ಇಂಥ ಪೂರ್ವ ಕಥಾ ವಿವರಗಳು, ಘಟನಾವಳಿಗಳು ಕೆಲವು ಸಮಸ್ಯೆಗಳನ್ನು ಬಗೆಹರಿಸಬಲ್ಲವು. ಇನ್ನು ಡಿ.ಎಲ್.ಎನ್. ಬಹಳಷ್ಟು ಸಂದರ್ಭಗಳಲ್ಲಿ ಒಂದು ನಿರ್ದಿಷ್ಟ ಪಾಠದ ಬಗ್ಗೆ ಚರ್ಚಿಸುವಾಗ, ಕನ್ನಡದ ಸೋದರ ಭಾಷೆಗಳಿಂದ ಸಂವಾದಿಯಾದ ಜ್ಞಾತಿ ಪದಗಳನ್ನು ನೀಡುತ್ತಾರೆ. ಇದರಿಂದಲೂ ಕೆಲಮಟ್ಟಿಗೆ ಅರ್ಥ ಸ್ಪಷ್ಟನೆಗೆ ಸಹಾಯವಾಗಬಲ್ಲುದು. ಜೊತೆಗೆ ಅನೇಕ ಕಡೆಗಳಲ್ಲಿ ಪದಗಳ ನಿಷ್ಪನ್ನ ಪ್ರಕ್ರಿಯೆಯನ್ನು ವಿವರಿಸಲಾಗಿದೆ. ಇಂಥ ಗುಣಾತ್ಮಕ ಅಂಶಗಳನ್ನೆಲ್ಲ ಗುರುತಿಸಬಹುದಾದ ಡಿ.ಎಲ್.ಎನ್. ಅವರ ಪಾಠ ಚರ್ಚೆಗಳಲ್ಲಿ ಒಂದು ವಿಶೇಷ ರೀತಿಯ ಶಿಸ್ತು ಎದ್ದು ಕಾಣುವಂಥದಾಗಿದೆ. ಇಷ್ಟೆಲ್ಲ ಇರುವಾಗಲೂ ಡಿ.ಎಲ್.ಎನ್. ಕೆಲವೆಡೆ ತಮಗೆ ತಾವೇ ಮಿತಿಗಳನ್ನು ಹಾಕಿಕೊಳ್ಳುವುದನ್ನೂ ಗಮನಿಸುತ್ತೇವೆ. ಕೆಲವೆಡೆ ಗೌಪ್ಯವಾದ, ವಿಶೇಷ ತರದ ಅರ್ಥವನ್ನು ನಿರೀಕ್ಷಿಸಿಯೋ

---

63. ಪಂಪ ಭಾರತದ ಪಾಠಾಂತರಗಳು, ಕ.ಭಾ. 6—2, 1973. ಪು: 207.

64. ದೀಪಿಕೆಯ ಬೆಳಕಿನಲ್ಲಿ, ಸಾಧನೆ 5—4, 1976. ಪು: 8

ಏನೋ 'ಇದರ ಅರ್ಥ ಸ್ಪಷ್ಟವಿಲ್ಲ', 'ತಿಳಿಯುವಂತಿಲ್ಲ' ಎಂದು ಕೈ ಚೆಲ್ಲಿದ್ದಾರೆ. ವಾಸ್ತವವಾಗಿ ಅವರು ಹೀಗೆ ಕೈಚೆಲ್ಲಿದ ಹಲವೆಡೆ ಅಂಥ ವಿಶೇಷವಾದ ಗೌಪ್ಯ ಅರ್ಥವೇನೂ ಇದ್ದಂತೆ ತೋರದು. ಹೀಗೆಯೇ ಕೆಲವು ಪಾಠ ಪರಿಷ್ಕರಣಗಳಲ್ಲೂ ಅನಗತ್ಯ ತಿದ್ದುಪಡಿಗಳಾಗಿರುವುದನ್ನು ಕಾಣಬಹುದು. ಈ ತಿದ್ದುಪಡಿಗಳಿಗೆ ಕಾರಣ ವಿಶೇಷಾರ್ಥದ ನಿರೀಕ್ಷೆ ಮತ್ತು ಆ ಅರ್ಥವನ್ನು ಈಗಾಗಲೇ ಇದ್ದ ಪಾಠ ಕೊಡಲಾರದೆಂಬುದು. ಇದರ ಜೊತೆಗೆ, ಹಿಂದೆ ಗಮನಿಸಿದಂತೆ ಡಿ.ಎಲ್.ಎನ್. ಒಂದು ಪಾಠದ ಪರಿಷ್ಕರಣಕ್ಕೆ ಅಂಥ ಹಲವು ಪಾಠ ಪ್ರಯೋಗಗಳನ್ನು, ಆಕರಗಳನ್ನು ಕಲೆ ಹಾಕುವರಾದರೂ, ಕೆಲವೇಳೆ ಹೀಗೆ ಕಲೆ ಹಾಕಿದ ಪ್ರಯೋಗಗಳ ಕಾರಣದಿಂದಲೇ ಕೆಲವು ಅನಗತ್ಯ ತಿದ್ದುಪಡಿಗಳೂ ಆಗಿವೆ. ಪಂಪ ಭಾರತದ ಒಂದು ಪಾಠವನ್ನು (3.81) ಡಿ.ಎಲ್.ಎನ್. ತಿದ್ದಿರುವ ನಿದರ್ಶನವನ್ನಿಲ್ಲಿ ಗಮನಿಸಬಹುದು. ಬೆಳ್ಳಾವೆ ಪರಿಷ್ಕರಣದ ಸ್ವೀಕೃತ ಪಾಠ ಹೀಗಿದೆ:—

> "………… ಬಟ್ಟೆಕ್ಕುದಯಾದ್ರಿಯೊಳ್ <u>ಪದಂ</u>
> <u>ಗಾಸಿದ ಪೊನ್ನ ಪುಂಜ</u>ಮಪ್ಪೊಂದುರ್ದುದು ಕಣ್ಗೆ ಹಿಮಾಂಶು ಮಂಡಲಂ"

ಮೇಲಿನ ಪದ್ಯ ಭಾಗದಲ್ಲಿ 'ಪದಂಗಾಸಿದ ಪೊನ್ನ ಪುಂಜ' ಎಂಬ ಪಾಠವನ್ನು ಡಿ.ಎಲ್.ಎನ್. 'ಪಟಿಂಗಾಸಿನ ಪೊನ್ನ ಘಂಟೆ' ಎಂದು ತಿದ್ದಿದ್ದಾರೆ. ಅವರು ಇದಕ್ಕೆ ಕೊಡುವ ಕಾರಣ : 'ಹದವಾಗಿ ಕಾಸಿದ ಚಿನ್ನದ ಮುದ್ದೆ' ಎಂದು ಮೇಲು ನೋಟಕ್ಕೆ ತೋರುವ ಈ ಪಾಠದ ಅರ್ಥ ಇಲ್ಲಿಗೆ ಸರಿಯಲ್ಲ. ಮತ್ತು ಸಂಸ್ಕೃತ ಶಬ್ದವಾದ 'ಪುಂಜ'ಕ್ಕೆ ಸಮಾಸದಲ್ಲಿ 'ಈ' ಕಾರಾಂತತೆಯುಂಟಾಗುತ್ತದೆಯಾಗಿ ಪಂಪನ ಪ್ರಯೋಗದಲ್ಲಿರುವ ಪದ 'ಪುಂಜಿ' ಸಮಾಸಪೊಂದರ ಶಬ್ದವಲ್ಲ. ಹೀಗಾಗಿ ಪುಂಜದವೊಲ ಎಂಬ ಪಾಠ ಅಲ್ಲಿರಬೇಕಿತ್ತು. ಆದರೂ 'ಅರ್ಥ ವಿಶದತೆಯುಂಟಾಗುವುದಿಲ್ಲ' ಎನ್ನುವ ಅವರು ಈ ಪಾಠ ಕೆಟ್ಟುಹೋಗಿರಬೇಕೆನ್ನುತ್ತಾರೆ. ತಿದ್ದುಪಡಿಗೆ ಅವರು ನೀಡುವ ಆಧಾರಗಳು ರನ್ನನ ಅಜಿತ ಪುರಾಣದ "………… ಪಟಿಂಗಾಸಿನ ಪೊನ್ನಗಂಟೆಯವೊಲೊಪ್ಪಿದುದುದ್ಗತ ಭಾನು ಮಂಡಲಂ" (6–70) ಮತ್ತು

ನೇಮಿಚಂದ್ರನ 'ಪಡಂಗಾಸಿನ ಪೊಂಗಳ್' ಎಂಬ ಪ್ರಯೋಗ. ಜೊತೆಗೆ ತಮಿಳಿನ 'ಪಟಿಂಗಾಚು (ಶು)' ಹಳೆಯ ಕಾಲದಲ್ಲಿದ್ದ ಒಂದು ಬಗೆಯ ನಾಣ್ಯದ ಹೆಸರೆಂದೂ, 'ಪಟಿಂಗಾಸಿನ ಪೊನ್' ಎಂದರೆ ಆ ಹೆಸರಿನ ನಾಣ್ಯಕ್ಕೆ ಉಪಯೋಗಿಸುತ್ತಿದ್ದ ಚಿನ್ನವೆಂದೂ ಅರ್ಥವಿರುವುದನ್ನು ನಿದರ್ಶಿಸಿದ್ದಾರೆ. ನೇಮಿಚಂದ್ರನ ಪ್ರಯೋಗಕ್ಕೆ 'ಪಟಿಂಗಾಸಿನ ಪೊಂಗಳ್' ಎಂಬ ತಿದ್ದುಪಡಿಯನ್ನು ಸೂಚಿಸಿ 'ಪಟಿಂಗಾಸಿನ ಪೊನ್ನಗಂಟೆಯಪೊಲ' ಎಂದಿರುವ ಅಜಿತ ಪುರಾಣದ ಪಾಠ ಸರ್ವಶುದ್ಧವೆಂದೂ, ರನ್ನ ಆ ಪದ್ಯವನ್ನು ಬರೆಯುವಾಗ ಪಂಪನ ಪದ್ಯವನ್ನು ಸ್ಮರಿಸಿಕೊಂಡಿರಬೇಕೆಂದೂ ಭಾವಿಸಿದ್ದಾರೆ. ಮತ್ತು ಈ ಆಧಾರಗಳ ಮೇಲೆ ಪಂಪನ ಪದ್ಯದಲ್ಲೂ 'ಪಟಿಂಗಾಸಿನ ಪೊನ್ನ ಗಂಟೆಯಪೊಲ' ಎಂಬ ಪಾಠವೇ ಇದ್ದಿರಬೇಕೆಂದೂ, ಪಂಪ ಭಾರತದ ~~[illegible]~~ ಪ್ರತಿಕಾರರು ಯಾರೋ 'ಘಂಟೆ' ಎಂದು ಮೂಲ ಪ್ರತಿಯಲ್ಲಿರಬೇಕಾದ 'ಗಂಟೆ'ಗೆ ಬದಲಾಗಿ ಬರೆದಿರಬೇಕೆಂದೂ ಅದನ್ನು 'ಅನಂತರದ ಪ್ರತಿಕಾರರು' ಪುಂಜಿ' ಎಂದು ತಪ್ಪಾಗಿ ಓದಿಕೊಂಡು ಅದನ್ನು ಹಾಗೆಯೇ ಬರೆದಿರಬೇಕೆಂದೂ ಊಹಿಸಬಹುದು' ಎಂದಿದ್ದಾರೆ.[65] ಈ ಚರ್ಚೆಯಲ್ಲಿ ಡಿ.ಎಲ್.ಎನ್. ತಿದ್ದುಪಡಿಗೆ ಹಿಡಿದ ಮಾರ್ಗ, ಅನುಸರಿಸಿದ ಕ್ರಮ ಅನುಕರಣೀಯವಾಗಿವೆಯೆಂಬಲ್ಲಿ ಅನುಮಾನವಿಲ್ಲ. ಆದರೆ ಇದೆಲ್ಲಕ್ಕೂ ಮುಖ್ಯವಾಗಿ ರನ್ನನ ಪ್ರಯೋಗ ಮತ್ತು ಪಂಪನ ಪ್ರಯೋಗದ ಬಗೆಗಿದ್ದ ಅವರ ಅನುಮಾನಗಳು ಈ ತಿದ್ದುಪಡಿಯನ್ನು ಪ್ರೇರಿಸಿವೆಯೆಂಬುದನ್ನೂ ಗಮನಿಸಬೇಕು. ಈ ಕಾರಣದಿಂದ ಅವರು ಅನಗತ್ಯವಾಗಿ ಈ ಪಾಠದ ತಿದ್ದುಪಡಿಗೆ ಕೈ ಹಾಕಿದ್ದಾರೆಂದರೆ ತಪ್ಪಾಗಲಾರದು. ಬೆಳ್ಳಾವೆ ಪರಿಷ್ಕರಣದ ಸ್ವೀಕೃತ ಪಾಠವೇ ಸಂಗತವಾಗಿದೆ ಎಂಬುದು ಸ್ಪಷ್ಟ. 'ಪಡಂಗಾಸಿದ ಪೊನ್ನ ಪುಂಜಿ' ಎನ್ನುವಲ್ಲಿ ಚೆನ್ನಾಗಿ ಕಾಸಿದ ಚಿನ್ನದ ಉಂಡೆಯಂತೆ ಎಂಬ ಅರ್ಥವನ್ನು ಸ್ಫುರಿಸುವ ಈ ಪಾಠವೇ ಚಂದ್ರೋದಯವನ್ನು ವರ್ಣಿಸುವ ಸಂದರ್ಭಕ್ಕೆ ಸಮರ್ಥನೀಯವಾಗಿದೆ. ಹಳೆಯ ಚೊಕ್ಕ ಚಿನ್ನದ ಕಾಸಿನ ಚಿನ್ನದ ಗಂಟೆಯ ಹಾಗೆ ಎಂಬರ್ಥವನ್ನು ಹೇಳುವ

---

65. ನರಸಿಂಹಾಚಾರ ಡಿ.ಎಲ್., 'ಪಟಿಂಗಾಸು', ಪ್ರ.ಕ. 42.2,1960 ಪು: 189–190.

ಡಿ.ಎಲ್.ಎನ್. ಅವರ ನಿಯೋಜಿತ ಪಾಠ ಇಲ್ಲಿ ಒಪ್ಪದು. ಮೇಲಾಗಿ ರನ್ನ ತನ್ನ ಪದ್ಯವನ್ನು ಬರೆಯುವಾಗ ಪಂಪನ ಪ್ರಯೋಗವನ್ನು ಸ್ಮರಿಸಿಕೊಂಡಿರಬೇಕು' ಎಂಬುದನ್ನು ಒಂದು ವೇಳೆ ಒಪ್ಪಿದರೂ ರನ್ನನ ಪ್ರಯೋಗದ ಆಧಾರದ ಮೇಲೆ ಪಂಪನ ಪ್ರಯೋಗವನ್ನು ತಿದ್ದಬೇಕಾಗಿಲ್ಲ. ರನ್ನ ಸೂರ್ಯೋದಯವನ್ನು ವರ್ಣಿಸುವ ಸಂದರ್ಭದಲ್ಲಿ ಈ ಪ್ರಯೋಗವನ್ನು ಮಾಡಿದ್ದಾನೆ. ಅಲ್ಲಿಗೆ ಅದು ಉಚಿತವಾಗಿದೆ. ಪಂಪನ ಪ್ರಯೋಗವಾದರೆ ಸೂರ್ಯಾಸ್ತದ ನಂತರ ಉದಯಾದ್ರಿಯಲ್ಲಿ ಚಂದ್ರೋದಯವಾಗುವುದನ್ನು ವರ್ಣಿಸುವ ಸಂದರ್ಭದಲ್ಲಿ ಬಂದಿದೆ. ರನ್ನ—ಪಂಪರ ಪ್ರಯೋಗಗಳು ಆಯಾ ಸಂದರ್ಭಕ್ಕೆ ಉಚಿತವಾಗಿವೆ. ಒಂದು ಕವಿ ಪಾಠವನ್ನು ಪರಿಷ್ಕರಿಸುವಾಗ, ತಿದ್ದುವಾಗ ಇತರ ಕವಿ ಪ್ರಯೋಗಗಳು ನೆರವಿಗೆ ಬರುತ್ತವೆಂಬುದನ್ನು ಒಂದು ನಿರ್ದೇಶಕ ತತ್ವವಾಗಿ ಬಳಸಬಹುದೇ ಹೊರತು ಸೂತ್ರವೆಂಬಂತೆ ಅಲ್ಲ, ಎಂಬುದಕ್ಕೆ ಇದೊಂದು ನಿದರ್ಶನ.

ಡಿ.ಎಲ್.ಎನ್. ಅನೇಕ ಕಡೆ ಪಾಠ ಸಮಸ್ಯೆಗಳನ್ನು ಹಾಗೆಯೇ ಉಳಿಸಿದ್ದಾರೆ. ಒಂದು ಪಾಠ ಸಮಸ್ಯೆಯನ್ನು ಬಿಡಿಸಲೇಬೇಕೆಂಬ, ಒಂದು ಪದ್ಯವನ್ನು ಅರ್ಥೈಸಿಯೇ ತೀರಬೇಕೆಂಬ ಹಟ ಅವರ ಪಾಠ ಚರ್ಚೆಗಳಲ್ಲಿದೆಯೆಂದು ತೋರದು. ಎಂದೇ ಹಲವೆಡೆ 'ಈ ಪಾಠದ ಅರ್ಥ ತಿಳಿಯುವಂತಿಲ್ಲ'. 'ಈ ಪದ್ಯದ ಅರ್ಥ ವಿಶದವಾಗಿಲ್ಲ' ಎಂಬಂಥ ಮಾತುಗಳನ್ನು ದೀಪಿಕೆಯಲ್ಲಿ ಕಾಣುತ್ತೇವೆ. ಇದು ಡಿ.ಎಲ್.ಎನ್. ಅವರ ಪಾಠ ಚರ್ಚೆಗಳಲ್ಲಿ ನಾವು ಗುರುತಿಸಬಹುದಾದ ಪ್ರಾಮಾಣಿಕತೆಯ ಹೆಗ್ಗುರುತೆಂದು ತೋರುತ್ತದೆ. ಅಂಥದೊಂದು ನಿದರ್ಶನವನ್ನಿಲ್ಲಿ ಗಮನಿಸಬಹುದು. ಪಂಪ ಭಾರತದ ಒಂದು ಪದ್ಯ :—

"ಪುದಿದ ಜಸಂ ಪೊದೞ್ದಿಂ ಬಳವೊಂದಿದಳಂಕೃತಿ ಕೃತ ದೇಸಿಯೆಂ
ಬುದನೆನೆ ವಸ್ತುವಿದ್ಯೆಯನೆ ಕಬ್ಬಮೆ ಮುನ್ನಮವಂತಿವಲ್ಲದ

ಲ್ಲದೆ ಪೆಱವಿಲ್ಲ ಕಬ್ಬಮೆನೆ ಮುನ್ನಿನ ಕಬ್ಬಮನೆಲ್ಲಮಿಕ್ಕಿಮೆ
ಟ್ಟಿದುವು ಸಮಸ್ತ ಭಾರತಮುಮಾದಿ ಪುರಾಣ ಮಹಾ ಪ್ರಬಂಧಮುಂ"
(14– 59)

ಈ ಪದ್ಯದ ಕೊನೆಯೆರಡು ಸಾಲುಗಳು ("ಮುನ್ನಿನ ಕಬ್ಬಮನೆಲ್ಲ .......... ಪ್ರಬಂಧಮುಂ") ಅತ್ಯಂತ ಪ್ರಸಿದ್ಧವಾಗಿವೆ. ಬೇಕಿರಲಿ, ಬೇಡದಿರಲಿ ಹಲವು ಬರಹಗಳಲ್ಲಿ ಉದ್ಧೃತವಾಗಿವೆ, ಈ ಸಾಲುಗಳು. ಮತ್ತೆ, ಹಲವೆಡೆ ಈ ಸಾಲುಗಳನ್ನುದ್ಧರಿಸುವಾಗ, ಅವು ಪಂಪ ತನ್ನ ಕಾವ್ಯಗಳನ್ನೇ ಕುರಿತು ಹೇಳಿಕೊಂಡಿರುವ ಪ್ರತ್ಯೇಕ ಮಾತುಗಳೆಂಬ ಭಾವನೆಯೇ ಮಿಗಿಲಾಗಿ, ಒಂದು ಪದ್ಯದ ಭಾಗವಾಗಿವೆ – ಆ ಸಾಲುಗಳು ಎಂಬುದನ್ನು ಮರೆತಂತೆ ತೋರುತ್ತದೆ. ಅದೇನೇ ಇರಲಿ, ಈ ಎರಡು ಸಾಲುಗಳು ಜನಪ್ರಿಯವಿರುವಷ್ಟು ಉಳಿದೆರಡು ಸಾಲುಗಳು ಇಲ್ಲ. ಅವುಗಳನ್ನು ವಿವರಿಸುವಲ್ಲಿ ಸಹ ಗೊಂದಲಗಳಿವೆ. ಡಿ.ಎಲ್.ಎನ್. ಈ ಪದ್ಯವನ್ನು ವಿವರಿಸುವಾಗ "ಈ ಪದ್ಯದ ಅರ್ಥ ವಿಶದವಾಗಿಲ್ಲ" ಎಂದು ಅದರ ಅನ್ವಯಾರ್ಥವನ್ನು ಬರೆದಿದ್ದಾರೆ. ಅದು ಹೀಗಿದೆ: "ಪುದಿದ ಜಸಂ – ಸೇರಿಕೊಂಡು ಇರುವ ಕೀರ್ತಿ, ಪೊದಳ್ದ – ವ್ಯಾಪಿಸಿರುವ, ಚಳಂ – ಕಾಂತಿಯು (?); ಒಂದಿದ – ಕೂಡಿದ, ಅಳಂಕೃತಿ – ಅಲಂಕಾರಗಳು, ಕೈತ – ಕೆಂಪು, ಮಾಟ, ರಚನೆ, ದೇಸಿ – ದೇಸಿ ಶೈಲಿ, ಚೆಲ್ವು; ಎಂಬುದನ – ಎಂಬುದನ್ನು, ಎನೆ – ಹೇಳಲು, ವಸ್ತುವಿದ್ಯೆಯನೆ – ಶಿಲ್ಪ ವಿದ್ಯೆಯೆನ್ನಲು (?) ಕಬ್ಬಮೆ – ಕಾವ್ಯವೆ .........." [66]

ಈ ಪದ್ಯವನ್ನು ಮುಳಿಯ ತಿಮ್ಮಪ್ಪಯ್ಯನವರು ವಿವರಿಸುವ ರೀತಿ ಡಿ.ಎಲ್.ಎನ್. ಅವರಿಗಿಂತ ಬೇರೆ : "ಜಸ (ಕೀರ್ತಿ) – ಚಳ (ಇತರರಿಂದ ಮೇಲಾಗಬೇಕೆಂಬ ಹಠ) – ಅಳಂಕೃತಿ (ಪ್ರತಿಭಾಂತರ್ಗತವಾಗಿದ್ದು ಎಡೆಯರಿತು ಹೊರಹೊಮ್ಮುವ ಪದಾರ್ಥಾಲಂಕಾರಗಳು) ಕೈತ (ಅಭ್ಯಾಸ ಬಲದಿಂದೊದಗುವ

---

66. ನೋಡಿ : ನರಸಿಂಹಾಚಾರ ಡಿ.ಎಲ್., ಪಂಪ ಭಾರತ ದೀಪಿಕೆ, ಮೈ.ವಿ.ವಿ., 1971. ಪು: 576

ಕವಿತಾ ಮಾರ್ಗಶಕ್ತಿ) — ದೇಸಿ ಎಂಬ ಈ ಕಾವ್ಯಾಂಗಗಳನ್ನು ಮಾತ್ರವೆ ಸೂಚಿಸುವ ಲಕ್ಷಣಗಳಿಂದಾಗಿ, ಇದೊಂದು ವಸ್ತು ವಿದ್ಯೆ ಎಂಬ ಮಾತಿಗೆಡೆಯಾಗುವಂತೆ (ತಾನು) ಬರೆದ ಕಾವ್ಯಗಳೇ ಮುನ್ನಿನವು. ಅಂತು ಅವು (ಆ ಆಖ್ಯಾನ ಕಾವ್ಯಗಳು ಹಾಗಿರುವವುಗಳು), ಇವು (ಈ ಪ್ರಕೃತ ಕಾವ್ಯಗಳೆರಡೂ) ಹಾಗೆ ಅಲ್ಲ .......... "[67] ಹೀಗೆ ವಿವರಿಸುವ ಮುಳಿಯ ತಿಮ್ಮಪ್ಪಯ್ಯನವರು ಪಂಪನ ಆಖ್ಯಾನ ಕವಿತೆಗಳ ಸೊಗಸುಗಳನ್ನು ಈ ಪದ್ಯದಲ್ಲಿ ಕಾಣಲೆತ್ನಿಸಿದ್ದಾರೆ. ಅವರು ಇಕ್ಕಿ ಮೆಚ್ಚಿದವೆಂದು ಹೇಳಲಾಗಿರುವ ಮುನ್ನಿನ ಕಬ್ಬಗಳು ಸ್ವತಃ ಪಂಪನವೇ ಎನ್ನುತ್ತಾರೆ. ಮತ್ತು ಪಂಪನ ಆಖ್ಯಾನ ಕವಿತೆಗಳ ಪಟ್ಟಿಯೊಂದನ್ನು ಕೂಡ ತಯಾರಿಸಿದ್ದಾರೆ.[68] ಅದರಂತೆ
'ಮುನ್ನಮವು' : (1) ಜಸಗಬ್ಬ, (2) ಪಳಗಬ್ಬ, (3) ಅಲಂಕೃತಿಗಬ್ಬ,
(4) ಕೈತಗಬ್ಬ, (5) ದೇಸಿಗಬ್ಬ, (6) ವಸ್ತುವಿದ್ಯೆಯ ಕಬ್ಬ; 'ಅಂತಿವಲ್ಲ'
(ಎಂದು ಹೇಳಿದ ಕಾವ್ಯಗಳು) : (1) ಆದಿಪುರಾಣ (2) ಪಂಪ ಭಾರತ.

ಈ ಎರಡು ವಿದ್ವತ್ ವಿವರಣೆಗಳಲ್ಲಿ ಮೊದಲಿನದು ಪದ್ಯದ ಅಸ್ಪಷ್ಟತೆಯನ್ನು ಒಪ್ಪಿಕೊಂಡು ಸಾಧ್ಯವಾದಷ್ಟು ಮಟ್ಟಿಗೆ ವಿವರಿಸಿದೆ. ಎರಡನೆಯದು, ಅಸ್ಪಷ್ಟತೆಯನ್ನು ಬೆರಳು ಮಾಡಿ ತೋರಿಸದೆ ವಿವರಿಸಿದೆ. (ಇಲ್ಲಿ ಮೊದಲಿನದು, ಎರಡನೆಯದು ಎಂಬುದು ಪ್ರಸ್ತುತ ಅಧ್ಯಯನದ ಸೌಕರ್ಯಕ್ಕಾಗಿ ಮಾತ್ರ; ಯಾವ ದರ್ಜೆಗಳ ಅನುಕ್ರಮ ಸೂಚಕವಾಗಿ ಅಲ್ಲ) ಇವೆರಡನ್ನೂ ಗಮನಿಸಿ ಈ ಪದ್ಯವನ್ನು — ಡಿ.ಎಲ್.ಎನ್. ಅವರು ಹೇಳುವ ಅರ್ಥ ವಿಶದತೆಯಿಲ್ಲವೆಂಬುದನ್ನು ಭಾಗಶಃ ಒಪ್ಪಿ;[69]

---

67. ಮುಳಿಯ ತಿಮ್ಮಪ್ಪಯ್ಯ, ನಾಡೋಜ ಪಂಪ, ಮಂಗಳೂರು, 1938. ಪು: 148
68. — ಅದೇ — ಪು: 151
69. ಹೀಗೆ ಒಪ್ಪಬೇಕಾಗಿರುವುದು ಅನಿವಾರ್ಯವಾಗಿದೆ. ಮೊದಲೆರಡು ಸಾಲುಗಳನ್ನು ವಿವರಿಸುವಾಗ ಅಸ್ಪಷ್ಟತೆ ಖಂಡಿತವಾಗಿಯೂ ಎದುರಾಗುತ್ತದೆ. ಬೇರಾವ ಪಾಠಾಂತರಗಳೂ ಲಭ್ಯವಿಲ್ಲ. ಹೀಗಾಗಿ ಅನ್ವಯ ಕ್ರಮವೊಂದೇ ನಮಗೆ ನೆರವಾಗುವ ಸಾಧ್ಯತೆಯಿರುವುದು.

ಮುಳಿಯ ಅವರ ಅಭ್ಯಾಸ ಕವಿತೆಗಳ ವಿಚಾರವನ್ನು ಬದಿಗಿರಿಸಿ — ಹೇಗೆ ವಿವರಿಸಲು ಸಾಧ್ಯವೆಂಬುದನ್ನಿಲ್ಲಿ ಗಮನಿಸಬಹುದು:

ಮೊದಲ ಸಾಲಲ್ಲಿ 'ಮುದಿದ ಜನ', 'ಮೊದಲ್ಗೊಂ ಚಳ', 'ಒಂದಿದಳಂಕೃತಿ', 'ಕೈತ ದೇಸಿ' ಎಂಬ ನಾಲ್ಕು ಕಾವ್ಯ ಸಂಬಂಧೀ ಅಂಶಗಳಿವೆ. ಅವುಗಳನ್ನು ಅನುಕ್ರಮವಾಗಿ ಕೀರ್ತಿಗಾಗಿ ಕಾವ್ಯ ಬರೆಯುವುದು ಅಥವಾ ಕಾವ್ಯ ಬರೆದುದರಿಂದ ಕೀರ್ತಿ ಬಂದರೆ (ಕಾವ್ಯ ಬರೆದುದು ನಿಮಿತ್ತವಾಗಿ ಬೇರಾವ ಕಾರಣದಿಂದಲಾದರೂ ಕೀರ್ತಿ ಬರಬಹುದಾದದ್ದನ್ನು ಸೂಚಿಸುತ್ತಿರಬಹುದೇ?); ಹಟತೊಟ್ಟು ಅಥವಾ ಚಲದಿಂದ ಕಾವ್ಯರಚನೆ ಮಾಡುವುದು; ಕೇವಲ ಅಲಂಕಾರಯುಕ್ತವಾದುದು ಅಥವಾ ಅಲಂಕಾರಕ್ಕಾಗಿ ಅಲಂಕಾರವನ್ನು ಕಾವ್ಯದಲ್ಲಿ ನಿರ್ಮಿಸುವುದು (ಇಲ್ಲಿ 'ಅಲಂಕಾರವೇ ಕಾವ್ಯ' ಎಂಬ ಮಾತಿಗೆ ಪಂಪನ ಉತ್ತರವಿರಬಹುದೇ?); ಕೃತಕವಾದ ದೇಸಿ ರಚನೆ ಅಥವಾ ಅನಗತ್ಯವಾಗಿ ದೇಸಿಯನ್ನು ತಂದಿಕ್ಕುವುದು ('ಬೆಡಂಗಪ್ಪ ಮಾರ್ಗದೊಳಂ ದೇಸಿಯೊಳಂ ಮೊದಲ್ಗೊಂ ಎನಿಪ' ಬಗೆಯ ಬರವಣಿಗೆ ಇಂಥದಲ್ಲ, ಪಂಪನದು ಮಾತ್ರ ಎಂದಿರಬಹುದು) ಎಂದು ವಿವರಿಸಿಕೊಳ್ಳಬಹುದು. ಮುಂದೆ 'ಯೆಂಬುದನೆನೆ ವಸ್ತುವಿದ್ಯೆಯೆನೆ ಕಬ್ಬಮೆ' ಎಂಬ ಭಾಗವನ್ನು ಎಂಬುದನೆ (ಮೇಲೆ ವಿವರಿಸಿದ ಬಗೆಯ ಜನ, ಚಳ, ಅಳಂಕೃತಿ, ದೇಸಿಗಳನ್ನೇ) ಎನೆ ವಸ್ತು ವಿದ್ಯೆ, ಎನೆ ಕಬ್ಬಮೆ? ಎಂದು ವಿಭಾಗಿಸಿ ಕಬ್ಬಮೆ? ಎಂಬಲ್ಲಿರುವ ಪ್ರಶ್ನಾರ್ಥಕವನ್ನು ಎನೆ ವಸ್ತುವಿದ್ಯೆಯೆ?[70] (ಕಾವ್ಯ ರಚನಾ ಕೌಶಲ ಎನ್ನಬಹುದೇ?) ಎನೆ ಕಬ್ಬಮೆ? ಎಂದು (ಕಾವ್ಯವೆಂದು ಹೇಳಬಹುದೆ?) ಅನ್ವಯಿಸಿ ವಿವರಿಸಬಹುದು. ಹೀಗೆ ಇಷ್ಟು

---

70. ಮುಳಿಯ ಅವರು 'ವಸ್ತು ವಿದ್ಯೆ' ಎಂಬುದನ್ನು ಕಾವ್ಯ ಕಥಾ ವಸ್ತುವನ್ನು (Plot) ಅಂದವಾಗಿ ಅಣಿಗಟ್ಟುವ ಚಾತುರ್ಯ ಎಂದು ವಿವರಿಸುತ್ತಾರೆ. ನೋಡಿ: ಪೂರ್ವೋಕ್ತ, ಪು: 148 (ಅಡಿ ಟಿಪ್ಪಣಿ); 'ವಸ್ತು ವಿದ್ಯೆ' ಎಂಬುದನ್ನು 'ವಸ್ತುಕ' ಸಂಬಂಧಿಯಾಗಿಯೂ ವಿವರಿಸುವ ಪ್ರಯತ್ನ ಮಾಡಲಾಗಿದೆ. ನೋಡಿ: ಸೀತಾರಾಮಯ್ಯ ಎಂ.ವಿ., ಭಾರತೀಯ ಕಾವ್ಯ ಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ, ಮೈ.ವಿ.ವಿ., 1974. ಪು: 40-41.

ಭಾಗವನ್ನು ಅರ್ಥ ಮಾಡುವುದು ಸಾಧ್ಯವಾದರೆ (ಸರಿಯಾದರೆ) ಮುಂದಿನ ಭಾಗದ ಅರ್ಥ ಸ್ಪಷ್ಟ : ಮುನ್ನಮ = ಮೊದಲಿನ ಕಾವ್ಯಗಳು; ಅಂತು = ಹಾಗೆ; ಇವಲ್ಲ = ಈ (ನನ್ನ) ಕಾವ್ಯಗಳಲ್ಲ; ಅದಲ್ಲದೆ ಬೇಱಿಲ್ಲ ಕಬ್ಬಮೆನೆ = ಅದೂ ಅಲ್ಲದೆ ಈ (ನನ್ನ) ಕಾವ್ಯಗಳ ಹಾಗೆ ಬೇರೆಯ ಕಾವ್ಯಗಳೇ ಇಲ್ಲ ಎನ್ನುವಂತೆ; ಮುನ್ನಿನ ಕಬ್ಬಮನೆಲ್ಲ .......... ಮಹಾ ಪ್ರಬಂಧಮುಂ = ಮೊದಲ ಕಾವ್ಯಗಳನ್ನೆಲ್ಲ (ನನ್ನ) ಈ ಎರಡು ಕಾವ್ಯಗಳು ಮೀರಿಸಿದುವು. ಹೀಗಾಗಿ ಒಟ್ಟಾರೆಯಾಗಿ : ಪಂಪ ತನಗಿಂತ (ತನ್ನ ಕಾವ್ಯಗಳಿಗಿಂತ) ಹಿಂದಿದ್ದ ಕಾವ್ಯಗಳ ಸ್ವರೂಪವನ್ನು ಇಲ್ಲಿ ಹೇಳುತ್ತಿದ್ದಾನೆ. ಅವು ಕೇವಲ ಕೀರ್ತಿಕಾಮನೆಗಾಗಿ, ಹಟಕ್ಕಾಗಿ ಬರೆದ ಕಾವ್ಯಗಳಾಗಿದ್ದಿರಬೇಕು; ಕೇವಲ ಅಲಂಕಾರ ಪ್ರಚುರವಾದ (ಚಮತ್ಕಾರದ), ಕೃತಕ ದೇಸಿಯಿಂದ ಕೂಡಿದ ಕಾವ್ಯಗಳಿದ್ದಿರಬೇಕು. ಇಂಥವನ್ನು ಕಾವ್ಯವೆಂದಾಗಲಿ, ಕಾವ್ಯರಚನಾ ಕೌಶಲ್ಯವೆಂದಾಗಲಿ ಕರೆಯಲಾಗದು. ಮೊದಲ ಕಾವ್ಯಗಳೆಲ್ಲ ಇಂಥವು; ನನ್ನ ಕಾವ್ಯಗಳು ಹೀಗಲ್ಲ. ಆದುದರಿಂದ ನನ್ನ ಕಾವ್ಯಗಳು ಮೊದಲ ಕಾವ್ಯಗಳನ್ನೆಲ್ಲ ಮೀರಿಸಿವೆ[71] ಎಂದು ಗ್ರಹಿಸಬಹುದು. ಹೀಗೆ ಗ್ರಹಿಸಬಹುದಾದದ್ದೂ ಕೂಡ ಒಂದು ಸಾಧ್ಯತೆ ಮಾತ್ರ ಎಂಬುದನ್ನು ಒಪ್ಪಬೇಕು.

ಇದುವರೆಗೆ ಡಿ.ಎಲ್.ಎನ್. ಅವರ ಪಾಠ ಚರ್ಚೆಗಳ ಕೆಲವು ಮುಖಗಳನ್ನು ಅಥವಾ

---

71. ಹೀಗೆ ಮೀರಿಸಿದ್ದು ಯಾವ ಕಾವ್ಯಗಳನ್ನೆಂಬುದಕ್ಕೆ ಮುಳಿಯ ಪಂಪನವೇ ಆದ ಅಭ್ಯಾಸ ಕವಿತೆಗಳನ್ನು ಎನ್ನುತ್ತಾರೆ. ಇತರರ ಕಾವ್ಯಗಳನ್ನು ಎಂಬುದನ್ನು ಅವರು ಒಪ್ಪುವುದಿಲ್ಲ. ಅವರ ಪ್ರಕಾರ ಮೊದಲನೆಯದಾಗಿ, ಹೀನ ಕಾವ್ಯಗಳನ್ನಿಕ್ಕಿ ಮೆಚ್ಚಿದ ಈ ಕಾವ್ಯ ದ್ವಯವನ್ನು ಬರೆದನೆಂದರೆ ಪಂಪನಲ್ಲಿ ಪ್ರಾಶಸ್ತ್ಯವಾಗಲಿ ಹೆಮ್ಮೆಯಾಗಲಿ ನೆರೆಗೊಳ್ಳಲಾರದು. ಆದರೆ ಪಂಪ ಇಲ್ಲಿ 'ಅಕಾವ್ಯ' ಗಳನ್ನು ನಿರಾಕರಿಸುತ್ತಿದ್ದಾನೆಂಬುದು ಗಮನಾರ್ಹ. ಎರಡನೆಯದಾಗಿ, ಇತರರ ಕಾವ್ಯಗಳನ್ನು ಕುರಿತು ಹೇಳುತ್ತಿದ್ದಾನೆಂದರೆ 'ಕವಿ ವ್ಯಾಸನೆಂಬ ಗರ್ವಮೆನಗಿಲ್ಲ' ಎಂದ ನಾಡೋಜನ ವಿನಯಶೀಲತೆಗೆ ಭಂಗ ಬರುತ್ತದೆ — ಎಂಬ ಮಾತು ಕೂಡ ನಿಲ್ಲಲಾರದು. ಏಕೆಂದರೆ 'ಅಕಾವ್ಯ' ಮತ್ತು 'ದುಷ್ಕವಿ'ಗಳ ವಿಷಯದಲ್ಲಿ ಪಂಪ ತೀರ ಕಟುವಾಗಿಯೇ ಇದ್ದಾನೆನ್ನಲು ಎರಡೂ ಕಾವ್ಯಗಳಲ್ಲಿ ನಿದರ್ಶನಗಳಿವೆ.

ಅವುಗಳ ಸ್ವರೂಪವನ್ನು ಗಮನಿಸಲಾಗಿದೆ. ಮೊದಲಲ್ಲಿ ಸೂಚಿಸಿದಂತೆ ಪಂಪನ ಪಾಠ ಚರ್ಚೆಗಳ ಸಂಬಂಧದಲ್ಲಿ ಡಿ.ಎಲ್.ಎನ್. ಅವರ ಪಾಠ ಚರ್ಚೆಗಳಿಗೆ ವಿಶೇಷ ಸ್ಥಾನವಿದೆ. ವಿಶೇಷವಾಗಿ ಅವರ ದೀಪಿಕೆ ಮತ್ತು ಅದಕ್ಕೂ ಮುನ್ನ ಇತರೆಡೆಗಳಲ್ಲಿ ಕಾಣದೊರೆಯುವ ಪಾಠ ಚರ್ಚೆಗಳು ಅನಂತರ ಬಂದ ಅನೇಕ ಪಾಠ ಚರ್ಚೆಗಳಿಗೆ ದಿಕ್ಸೂಚಿಗಳೂ, ಮಾರ್ಗದರ್ಶಿಗಳೂ ಆಗಿವೆ. ಪಂಪನ ಪಾಠ ಸಮಸ್ಯೆಗಳನ್ನು ಕುರಿತ ಚರ್ಚೆಗಳಲ್ಲೆಲ್ಲ ಆ ಬಗ್ಗೆ ಡಿ.ಎಲ್.ಎನ್. ಏನನ್ನು ಹೇಳುತ್ತಾರೆ ಎಂಬುದನ್ನು ಒಂದಲ್ಲೊಂದು ರೀತಿಯಲ್ಲಿ ಗಮನಿಸಲಾಗಿರುತ್ತದೆ. ಕೆಲವೆಡೆ ಅವರ ನಿಲುವುಗಳನ್ನು ಒಪ್ಪಿ ಸ್ವೀಕರಿಸಿರುವುದನ್ನೂ, ಮತ್ತೆ ಕೆಲವೆಡೆ ನಿರಾಕರಿಸಿರುವುದನ್ನೂ ಗಮನಿಸಬಹುದು. ಅಂಥ ಕೆಲವನ್ನು ಈ ಹಿಂದೆ ಗಮನಿಸಲಾಗಿದೆ. ಜೊತೆಗೆ ಡಿ.ಎಲ್.ಎನ್. ಅವರ ಸಂಶೋಧನೆಯ — ಪಾಠ ಸಮಸ್ಯೆಗಳನ್ನು ಬಿಡಿಸುವ ಪರಿಕ್ರಮ — ಕ್ರಮವನ್ನೂ ಒಂದಲ್ಲೊಂದು ರೀತಿಯಲ್ಲಿ ಅನುಸರಿಸುವುದನ್ನು ಗಮನಿಸಲು ಸಾಧ್ಯವಿದೆ. ಅಲ್ಲದೆ ಡಿ.ಎಲ್.ಎನ್. ಪಾಠ ಚರ್ಚೆಗಳನ್ನು ಒಪ್ಪಿ ಅಥವಾ ನಿರಾಕರಿಸಿ ಬಂದ ಪ್ರತಿಕ್ರಿಯೆಗಳೆಲ್ಲ ಮುಖ್ಯವಾಗಿ ಪಾಠ ಚರ್ಚೆಗಳಿಗೆ ಕೇಂದ್ರೀಕೃತವಾಗಿದ್ದು, ಅವರ ಪಾಠ ಚರ್ಚೆಯ ಕ್ರಮ ವಿಧಾನವನ್ನು ಕುರಿತಿರುವುದಿಲ್ಲ ಎಂಬ ಅಂಶವೂ ಗಮನಿಸತಕ್ಕದಾಗಿದೆ.

### 3.4.1.2 ಇತರ ಪಾಠ ಚರ್ಚೆಗಳು

ಪಂಪ ಭಾರತ ದೀಪಿಕೆಯಷ್ಟು ವ್ಯಾಪಕ ಪಾಠ ಚರ್ಚೆಗಳು ಬೇರೆ ನಡೆದಿಲ್ಲವಾದರೂ ಒಟ್ಟಿಗೆ ಕೆಲವು ಪಾಠ ಸಮಸ್ಯೆಗಳನ್ನೆತ್ತಿಕೊಂಡು ಚರ್ಚಿಸಿದ ಕೆಲವು ಪ್ರಯತ್ನಗಳಿವೆ. ಇಂಥ ಪ್ರಯತ್ನಗಳಲ್ಲಿ ಎರಡು ಚರ್ಚೆಗಳು ಮುಖ್ಯವಾಗಿ ಗಮನಿಸತಕ್ಕವು : ಒಂದು ರಂ.ಶ್ರೀ.ಮುಗಳಿಯವರ 'ದೀಪಿಕೆಯ ಬೆಳಕಿನಲ್ಲಿ'; [72] ಮತ್ತೊಂದು,

---

72. ಸಾಧನೆ, 5–4 ಮತ್ತು 6–1.

ಹೇಮಲತಾ ವಡಕಿಯವರ ‘ಪಂಪ ಭಾರತದ ಪಾಠಾಂತರಗಳು’.[73]

ಮುಗಳಿಯವರ ಚರ್ಚೆ ಪಂಪ ಭಾರತ ದೀಪಿಕೆಗೆ ಪ್ರತಿಕ್ರಿಯಾ ಸ್ವರೂಪದ್ದಾಗಿದ್ದು, ದೀಪಿಕೆಯ ಪಾಠ ಚರ್ಚೆಗಳನ್ನು ಕುರಿತ ಚರ್ಚೆ ಎಂದು ಕರೆಯಬಹುದು. ಸಂಗತವೆಂದು ಕಂಡು ಬಂದ ದೀಪಿಕೆಯ ಚರ್ಚೆಗಳನ್ನು ಒಪ್ಪಿ ಅಂಥ ಕೆಲವನ್ನು ನಿದರ್ಶಿಸಲಾಗಿದೆ. ಹಾಗೆ ತೋರದವುಗಳನ್ನು ಕುರಿತು, ದೀಪಿಕೆಯ ನಿಲುವುಗಳನ್ನು ಪ್ರಶ್ನಿಸಿ ನಿರಾಕರಿಸಲಾಗಿದೆ. ‘ನೆತ್ತಮನಾಡಿ ಭಾನುಮತಿ ಸೋಲ್ತೊಡೆ ........’ (ಪಂ. ಭಾ. 9–69) ಎಂಬ ಪದ್ಯವನ್ನು ಕುರಿತು, ಕರ್ಣ ಮತ್ತು ಭಾನುಮತಿ ನೆತ್ತವಾಡಿದರೆಂಬ ವಿವರವುಳ್ಳ[74] ಈ ಪದ್ಯದಲ್ಲಿ ‘ಕರ್ಣನ ಸ್ನೇಹದ, ಸ್ವಾಮಿ

---

73. ಕ. ಭಾ., 6–2, 3; 7–1, 2, 3, 4.

74. “ನೆತ್ತಮನಾಡಿ ಭಾನುಮತಿ ಸೋಲ್ತೊಡೆ ..........” ಎಂಬ ಈ ಪ್ರಸಿದ್ಧ ಪದ್ಯವನ್ನು ಕುರಿತು ‘ನಾಡೋಜ ಪಂಪ’ ಕೃತಿಯ ಪ್ರಕಟಣೆಗೂ ಮೊದಲೇ ಪ್ರಾರಂಭವಾಗಿ ಈಚಿನವರೆಗೆ ಅನೇಕ ವಾಗ್ವಾದಗಳು ನಡೆದಿವೆ, ಮತ್ತು ನಡೆಯುತ್ತಿವೆ. ಅವನ್ನೆಲ್ಲ ಪ್ರಧಾನವಾಗಿ ಎರಡು ಗುಂಪುಗಳಲ್ಲಿ ವಿಂಗಡಿಸಬಹುದು: ಒಂದು, ನೆತ್ತವನ್ನಾಡಿದವರು ಭಾನುಮತಿ ಮತ್ತು ಕರ್ಣ ಎಂದು ವಾದಿಸುವ ಗುಂಪು (ನೋಡಿ: ಡಿ.ವಿ.ಶೇಷಗಿರಿ ರಾವ್, ಪಂಪ ಭಾರತ (ಕರ್ಣನ ಪಾತ್ರ) ಜ.ಕ. 13–9, ಪು: 622; ಆಕ್ಷೇಪಣೆಗೆ ಸಮಾಧಾನ, ಜ.ಕ., 13–11, ಪು: 806–808; ಎ.ಆರ್.ಕೃಷ್ಣಶಾಸ್ತ್ರಿ, ಭಾನುಮತಿಯೊಡನೆ ನೆತ್ತವನ್ನಾಡಿದವರಾರು? ಜ.ಕ., 14–3. ಪು: 188–190; ಡಿ.ಎಲ್.ಎನ್., ಪಂಪ ಭಾರತ ದೀಪಿಕೆ, ಮೈ.ವಿ.ವಿ., 1971. ಪು: 329; ಆರ್.ರಾಚಪ್ಪ, ಪಂಪ ಭಾರತದ ಒಂದು ಪದ್ಯ, ಕ.ಭಾ., 4–3, ಪು: 8–16; ಇತ್ಯಾದಿ). ಮತ್ತೊಂದು, ನೆತ್ತವಾಡಿದವರು ಭಾನುಮತಿ ಮತ್ತು ದುರ್ಯೋಧನ, ಕರ್ಣ ಕೇವಲ ನೋಟಕ, ನೆತ್ತವಾಡುವಾಗ ಅಂತಃಪುರಕ್ಕೂ ಕರ್ಣನಿಗೆ ಪ್ರವೇಶವಿದ್ದುದೇ ಕರ್ಣ ದುರ್ಯೋಧನರ ಸ್ನೇಹದ ಎತ್ತರವನ್ನು ಸೂಚಿಸಬಲ್ಲುದು ಎಂದು ವಾದಿಸುವ ಗುಂಪು. ಇಲ್ಲೆಲ್ಲ ದಾಂಪತ್ಯದ ಸಂಬಂಧದಲ್ಲಿನ ನೈತಿಕ ನೆಲೆಗಳು ಪ್ರಭಾವಶಾಲಿಯಾಗಿರುವುದನ್ನು

ಭಕ್ತಿಯ ಪರಾಕಾಷ್ಠೆಯ ಚಿತ್ರವಿರುವುದನ್ನೂ, ಚಿತ್ರವಿರುವುದೆಂಬೂ, ಇದರಿಂದ ಸಹೃದಯ ಪ್ರತಿಭೆಗೆ ಒಂದು ಇಡೀ ದೃಶ್ಯವೇ ಕಾಣಿಸುವುದನ್ನೂ ವಿವರಿಸಿ, ಚಿಂತಿಸಿದಷ್ಟೂ ಬೆಳೆಯುತ್ತಾ ಹೋಗುತ್ತದೆ ಈ ಪದ್ಯದ ಭಾವ ವಲ್ಲರಿ' ಎಂದ ಡಿ.ಎಲ್.ಎನ್. ಅವರ ಮಾತುಗಳನ್ನು ಮುಗಿಳಿಯವರು ಮೆಚ್ಚಿ ಸೂಚಿಸಿದ್ದಾರೆ.

---

ಕಾಣಬಹುದು. (ನೋಡಿ : ಪದ್ಮನಾಭ, ಪಂಪ ಭಾರತದ ಕರ್ಣನ ಪಾತ್ರ, ಜ.ಕ., 13—11. ಪು: 805; ಮುಳಿಯ ತಿಮ್ಮಪ್ಪಯ್ಯ, ನೆತ್ತವನಾಡಿದುದು ಯಾರು? ಜ.ಕ., 14—1. ಪು: 25—29; ನೆತ್ತವನಾಡಿದುದು ಯಾರೊಡನೆ? ಜ.ಕ., 14—5. ಪು: 372—377; ಡಿ.ರೇಣುಕಾಚಾರ್ಯ, ನೆತ್ತವನಾಡಿದವರಾರು?, ಜ.ಕ., 14—6. ಪು: 427—429; ಪಿ.ಶ್ರೀರಂಗಾಚಾರ, ಪಂಪನ ಕರ್ಣ, ಪ್ರ.ಕ. 23—4., ಪು: 28; ಕೆ.ವೆಂಕಟರಾಮಾಚಾರ್ಯ, ಭಾನುಮತಿ ಕರ್ಣರು ನೆತ್ತವಾಡಿದರೇ? (ನಿವೇದನೆ), ಕ.ಭಾ. 5—1. ಪು: 2—12; ತೆಕ್ಕುಂಜೆ ಗೋಪಾಲ ಕೃಷ್ಣ ಭಟ್ಟ, ಪಂಪನ ನಡೆ—ನುಡಿ—ಬಗೆ (ವಿಚಾರ) ಪ್ರ.ಕ., 56—1. ಪು: 17—36; ಸೇಡಿಯಾಪು ಕೃಷ್ಣಭಟ್ಟ, ಭಾನುಮತಿಯ ನೆತ್ತ, ಪ್ರ.ಕ., 58—3; 9—31; ಇತ್ಯಾದಿ) ಎರಡನೆಯ ಗುಂಪಿನ ವಾದಗಳಲ್ಲಿ ಕೃತಿಕೇಂದ್ರಿತವಲ್ಲದ ದಾಂಪತ್ಯದ ಬಗೆಗಿನ ನೈತಿಕ ನಿಲುವುಗಳು, ಪಂಪ ರಸಿಕತೆಯನ್ನು ತೋರಿದ್ದಾನೆಂಬುದು ಇತ್ಯಾದಿ — ವಿಚಾರಗಳು ಪ್ರಧಾನವಾಗಿ ವಾದಸಮರ್ಥನೆಯ ಹಿಂದಿರುವಂತೆ ತೋರುತ್ತದೆ. ಮೊದಲ ಗುಂಪಿನ ವಾದಗಳಲ್ಲಿ ಪದ್ಯದ ಸಂದರ್ಭ, ಕರ್ಣ — ದುರ್ಯೋಧನರ ಸ್ನೇಹದ ಸ್ವರೂಪವನ್ನು ಕುರಿತ ಅರ್ಥ ಪರಂಪರೆಗಳು ಗಮನದಲ್ಲಿರುವಂತೆ ತೋರುತ್ತದೆ. ಇದೂ ಅಲ್ಲದೆ ನೆತ್ತವನಾಡಿದವರು ಕರ್ಣ—ದುರ್ಯೋಧನರು, ಪಣ ಭಾನುಮತಿ — ಎಂದೂ ವಿವರಿಸುವ ಪ್ರಯತ್ನ ಕೂಡ ನಡೆದಿದೆ. ಈ ವಿವರಣೆಯ ಸಮರ್ಥನೆಗೆ ' ಭಾನುಮತಿ ಸೋತೊಡೆ' ಎಂಬುದು ' ಭಾನುಮತಿಯಂ' ಎಂಬ ದ್ವಿತೀಯೆಯ ಬದಲಿಗೆ ಬಂದ ಪ್ರಥಮೆಯಾಗಿ ನೋಡಬೇಕೆನ್ನಲಾಗಿದೆ. ನೋಡಿ : ತಾಳ್ತಜೆ ಕೃಷ್ಣ ಭಟ್ಟ, ಕರ್ಣ — ಕೌರವರ ನೆತ್ತ, ಸಾಧನೆ, 19—4. ಪು: 39—44.

ಅಲ್ಲದೆ ದೀಪಿಕೆಯಲ್ಲಿ ಉದ್ದಕ್ಕೂ ಸುಲಭವಾಗಿ ಅರ್ಥವಾಗದ ಕೆಲವು ಶಬ್ದಗಳ ಮತ್ತು ವಾಕ ಪ್ರಚಾರಗಳ ಅರ್ಥಗಳನ್ನು ಸರಿಯಾಗಿ ಗೊತ್ತುಪಡಿಸಲಾಗಿರುವುದನ್ನೂ ಅಲ್ಲಲ್ಲಿ ಅವುಗಳ ನಿಷ್ಪತ್ತಿಯನ್ನು ಹಾಗೂ ಜ್ಞಾತಿ ಶಬ್ದಗಳನ್ನು ಕೊಡಲಾಗಿರುವುದನ್ನೂ ಪ್ರಸ್ತಾಪಿಸಿ ನಿದರ್ಶನಗಳನ್ನು ತೋರಿಸಿದ್ದಾರೆ. ಹೀಗೆ ದೀಪಿಕೆಯ ಟೀಕಿನಲ್ಲಿ ತಾವು ಕಂಡು ಮೆಚ್ಚಿದ ಪ್ರಕಾಶವನ್ನು ಕುರಿತ ಪ್ರಸ್ತಾಪ ಮುಗಳಿಯವರ ಚರ್ಚೆಯ ಮೊದಲ ಹಂತ.

ಎರಡನೆಯ ಹಂತದಲ್ಲಿ ಮುಗಳಿಯವರು ತಮ್ಮ ದೃಷ್ಟಿಯಿಂದ ಇನ್ನೂ ಹೆಚ್ಚಿನ ಟೀಕನ್ನು ಎಲ್ಲೆಲ್ಲಿ ದೀರಬಹುದೆಂಬುದನ್ನು ತೋರಿಸಲು ಪ್ರಯತ್ನಿಸಿರುವುದನ್ನು ಕಾಣಬಹುದು. ಹೀಗೆ ನಿರಾಕರಿಸುವಾಗ ತಮಗಿಂತ ಮೊದಲೇ ಡಿ.ಎಲ್.ಎನ್. ಚರ್ಚೆಗಳಿಗೆ ಬಂದ ಪ್ರತಿಕ್ರಿಯೆಗಳನ್ನು ಹಾಗೂ ಇತರ ಚರ್ಚೆಗಳನ್ನು ಗಮನಿಸಲಾಗಿದೆ. ವಿಕ್ರಮಾರ್ಜುನ ವಿಜಯದ ಪದ್ಯವೊಂದರಲ್ಲಿನ 'ನಕ್ಕರ ಮದ್ದ (?)' ಎಂಬ ಸ್ವೀಕೃತ ಪಾಠವನ್ನು ಕುರಿತು ಡಿ.ಎಲ್.ಎನ್. 'ನೆಕೊರ್ಜರ ಮಟ್ಟ' ಎಂದಿರಬಹುದೆಂದು ಸೂಚಿಸಿದ್ದಾರೆ.[75] ಆದರೆ ಈ ಪಾಠದ ಅರ್ಥವನ್ನು ಕುರಿತಂತೆ ಅವರು ಏನೂ ಹೇಳದೆ ಪ್ರಶ್ನೆಯಾಗಿಯೇ ಉಳಿಸಿದ್ದಾರೆ. ಈ ಕುರಿತು ಮುಗಳಿಯವರು ಬರೆಯುವಾಗ ಹೇಮಲತಾ ಪದಕಿ ಮತ್ತು ಎಂ.ಮಾಧವ ಪೈ ಅವರ ಚರ್ಚೆಗಳನ್ನು ಪ್ರಸ್ತಾಪಿಸಿ "ಇದೊಂದು ಸಮಸ್ಯಾ ಪದವೆಂದೂ ಇದರ ಪೂರ್ವ

---

75. ಡಿ.ಎಲ್.ಎನ್. ಈ ಪಾಠ ಸಮಸ್ಯೆಯನ್ನು ಬಿಡಿಸಲು ಸ್ವೀಕೃತ ಪಾಠಕ್ಕಿರುವ 'ನಕ್ಕರೆ ಮದ್ದ', 'ನೆಕೊರ್ಜರೆ ಮದ್ದ' ಎಂಬ ಎರಡು ಪಾಠ ಭೇದಗಳನ್ನೂ ಸುಕುಮಾರ ಚರಿತೆಯ 'ನೆಕ್ಕೊರೆವಟ್ಟ' ಹಾಗೂ ಕರ್ನಾಟಕ ಶಬ್ದಸಾರದ 'ನೆಕ್ಕೊರೆಗಳ ಪೊಟ್ಟೆ' ಎಂಬ ಪಾಠಗಳನ್ನು ಗಮನಿಸಿದ್ದಾರೆ.

ಪದದ ಪಾಠ ಮತ್ತು ಅರ್ಥಗಳು ಸಂದೇಹಾಸ್ಪದವಾಗಿದ್ದರೂ ಉತ್ತರ ಪದ 'ಪದಿ' ಅಥವಾ 'ಪದೆ' ಇರಬೇಕೆಂದು ಊಹಿಸಿದ್ದಾರೆ.[76]

ಹೀಗೆ ಕೆಲವು ಪಾಠ ಸಮಸ್ಯೆಗಳನ್ನು 'ದೀಪಿಕೆಯ ಬೆಳಕಿನಲ್ಲಿ' ಕುರಿತು ಚರ್ಚಿಸುವಾಗ, ಅಂತೂ ಪಾಠವನ್ನು ಕುರಿತಂತೆ ಆ ಮೊದಲು ಬಂದ ಚರ್ಚೆಗಳನ್ನು ಗಮನಿಸುವರಾದರೂ, ಕೆಲವೆಡೆ ಕೈಬಿಟ್ಟಿದ್ದಾರೆ. ಅಂಥದೊಂದು ನಿದರ್ಶನವನ್ನಿಲ್ಲಿ ಗಮನಿಸಬಹುದು : "ಭಗವತಿಯೇಱು .........." ಕುರಿತ ಚರ್ಚೆಯಲ್ಲಿ ಡಿ.ಎಲ್.ಎನ್. ಅವರು 'ಏಱು' ಎಂದರೆ ಯುದ್ಧ ಎಂದು ವಿವರಿಸುವುದನ್ನೂ ಆ ವಿವರಣೆಯನ್ನು ನಿರಾಕರಿಸಿ ಬಂದ ಪ್ರತಿಕ್ರಿಯೆಗಳನ್ನೂ ಈ ಹಿಂದೆಯೇ ಗಮನಿಸಲಾಗಿದೆ. ಡಿ.ಎಲ್.ಎನ್. ವಿವರಣೆಯನ್ನು ಬದಿಗಿರಿಸಿ ಮುಗಳಿಯವರು 'ದೇವಿ ಮೃಗ ಮೇಲೆ ಏರಿ ಬಂದು ಏಳುವ ತೆರದಿಂದ ಇವರ ಯುದ್ಧ ಅಥವಾ ಏರಿಕೆ ಹಳೆಯ ಕಥೆಯಾಯಿತು' ಎಂದು ವಿವರಿಸುತ್ತಾರೆ. ಇದೇ ಬಗೆಯ ವಿವರಣೆಯನ್ನು ಕೆ.ವೆಂಕಟರಾಯಾಚಾರ್ಯರು ನೀಡಿದ್ದರಾದರೂ ಮುಗಳಿಯವರು

---

76. ನೋಡಿ : ಹೇಮಲತಾ ಪಡಕಿ, ಪಂಪ ಭಾರತದ ಪಾಠಾಂತರಗಳು, ಕ.ಭಾ., 6–2, 1973. ಪು: 112–113; ಮಾಧವ ಪೈ ಎಂ., ನಕ್ಕರವದಿ – ನೆಕೊರ್ಱೆ ಪಟ್ಟೆ, ಪ್ರ.ಕ., 54–2, 1972. ಪು: 133. ಉತ್ತರ ಕರ್ನಾಟಕದಲ್ಲಿ ಕಿಬ್ಬೊಟ್ಟೆ ಎಂಬರ್ಥದಲ್ಲಿ 'ಬದಿ' ಎಂಬ ಪದ ಬಳಕೆಯಲ್ಲಿದ್ದುದನ್ನು ಪಡಕಿಯವರು ಗುರುತಿಸಿದ್ದಾರೆ. 'ಚೆನ್ನಾಗಿ ಕೊರೆದಂಥ ಎಂಬರ್ಥವುಳ್ಳ 'ನೇಕೊರ್ಱೆ' ಎಂಬ ಪಾಠವನ್ನು ನಿಯೋಜಿಸುತ್ತಾರೆ; ಮಾಧವ ಪೈ, ನದೀ ತೀರದಲ್ಲಿ ಮರಳಿನ ಮೇಲೆ ಬೆಳೆಯುವ ಘಸಲೆಯೆಂದು ವಿವರಿಸಿ ಪಂಪನು ಕುಂತಿ ಮಾದ್ರಿಯರ ತೊಡೆಗಳು ನೆಕೊಱೆವಟ್ಟೆ ತಾನೆ ಪೋ – ಅದಕ್ಕಿಂತ ಆ ಹುಲ್ಲಿನಂತಿರುವ ತೊಡೆಗಳಿಗಿಂತ ಕಿರುದೊಡೆ ಇನ್ನೂ ಸುಂದರ ಎಂಬರ್ಥದಲ್ಲಿ ಪ್ರಯೋಗಿಸಿದ್ದಾನೆಂದಿದ್ದಾರೆ. ಪಡಕಿಯವರ ಅರ್ಥವನ್ನೇ ಅನುಸರಿಸಿ ಮುಗಳಿಯವರು ಉತ್ತರ ಪದವನ್ನು ಅರ್ಥೈಸಿದ್ದಾರೆ.

ಅದನ್ನು ಪ್ರಸ್ತಾಪಿಸಿಲ್ಲ. ಹಾಗೆ ಮಾಡಬೇಕಾದ ಅಗತ್ಯವಿತ್ತು.

ಮುಗಳಿಯವರು 'ದೀಪಿಕೆಯ ಬೆಳಕಿನಲ್ಲಿ' ಹಲವು ಪಾಠ ಸಮಸ್ಯೆಗಳನ್ನು, ಅರ್ಥ ಸಂದಿಗ್ಧಗಳನ್ನು ಕುರಿತು ಚರ್ಚಿಸಿದ್ದಾರೆ. ಕೆಲವೆಡೆ ಡಿ.ಎಲ್.ಎನ್. ಉಳಿಸಿದ ಪ್ರಶ್ನೆ ಚಿಹ್ನೆಗಳತ್ತ ಕೆಲಮಟ್ಟಿಗಾದರೂ ಗಮನ ಹರಿಸಿದ್ದಾರೆ. ಮತ್ತೆ ಕೆಲವೆಡೆ, ಡಿ.ಎಲ್.ಎನ್. ಅವರಿಗಿಂತ ವಿಶೇಷವಾದ ಬೇರೇನನ್ನೂ ಹೇಳುವುದು ಸಾಧ್ಯವಿಲ್ಲದಿರುವಾಗಲೂ ಅಂಥ ಪಾಠಗಳನ್ನು ಕುರಿತು ಚರ್ಚಿಸಿರುವಂತೆ ತೋರುತ್ತದೆ. ಇದಕ್ಕೆ ಸಂಬಂಧಿಸಿದಂತೆ 'ಕಮ್ಮರಿಂತೋಜ' ಮೊದಲಾದ ಪಾಠಗಳನ್ನು ಕುರಿತ ಅವರ ಚರ್ಚೆಗಳನ್ನು ಗಮನಿಸಬಹುದು. ಕೆಲವು ಪಾಠಗಳಿಗೆ ಸಂಬಂಧಿಸಿದಂತೆ ತಮ್ಮದೇ ಆದ ಪ್ರಶ್ನೆಗಳನ್ನೆತ್ತಿದ್ದಾರೆ, ಪರಿಹರಿಸಲು ಪ್ರಯತ್ನಿಸಿದ್ದಾರೆ. ಕೆಲವಕ್ಕೆ ಡಿ.ಎಲ್.ಎನ್. ಯಾವ ಹಂತದಲ್ಲಿ ನಿಲ್ಲುತ್ತಾರೋ ಅದೇ ಹಂತದಲ್ಲಿ ನಿಂತಿರುವುದೂ ಉಂಟು. ಇಲ್ಲಿ ಮುಗಳಿಯವರ 'ದೀಪಿಕೆಯ ಬೆಳಕಿನಲ್ಲಿ' ಬಂದ ಪಾಠ ಚರ್ಚೆಗಳನ್ನು ಒಂದೊಂದಾಗಿ ನಿದರ್ಶಿಸಬೇಕಾದ ಅಗತ್ಯವಿಲ್ಲವೆಂದು ತೋರುತ್ತದೆ.

ಮುಗಳಿಯವರ 'ದೀಪಿಕೆಯ ಬೆಳಕಿನಲ್ಲಿ' ಪ್ರಕಟವಾಗಲು ಮುನ್ನವೇ ಹೇಮಲತಾ ಪದಕಿಯವರ 'ಪಂಪ ಭಾರತದ ಪಾಠಾಂತರಗಳು' ಎಂಬ ಸುದೀರ್ಘ ಪಾಠ ಚರ್ಚೆಗಳ ಮಾಲಿಕೆಯೊಂದು ಪ್ರಕಟವಾಗಿದೆ. 'ಕರ್ನಾಟಕ ಭಾರತಿ'ಯ ಐದು ಸಂಚಿಕೆಗಳಲ್ಲಿ ಪ್ರಕಟವಾದ ಈ ಪಾಠ ಚರ್ಚೆಗಳು ಆಶ್ವಾಸಾನುಕ್ರಮವಾಗಿ ಪಂಪ ಭಾರತದ ಪಾಠ ಸಮಸ್ಯೆಗಳನ್ನು ಕುರಿತಿವೆ. ಪದಕಿಯವರದು ಮುಗಳಿಯವರ 'ದೀಪಿಕೆಯ ಬೆಳಕಿನಲ್ಲಿ' ಯಂತೆ ದೀಪಿಕೆಗೆ ಬಂದ ಪ್ರತಿಕ್ರಿಯಾ ಸ್ವರೂಪದ ಬರೆಹವಲ್ಲ. ಈ ಪಾಠ ಚರ್ಚೆಗಳ ಮಾಲಿಕೆಯ ಉದ್ದೇಶವನ್ನು ಕುರಿತು ಹೇಳುವ ಪದಕಿಯವರ ಮಾತುಗಳು ಗಮನಿಸತಕ್ಕವು: ಪಂಪನ ಭಾರತದಲ್ಲಿರುವ ಅಸ್ಪಷ್ಟತೆಗಳನ್ನು ಕುರಿತಂತೆ ಡಿ.ಎಲ್.ಎನ್.ರ ಪ್ರಯತ್ನವನ್ನು 'ಸ್ತುತ್ಯ'ವೆಂದು

ಕರೆಯುವ ಅವರು 'ಆದರೂ ಹಲವು ದೋಷಯುತವಾದ ಪಾಠಗಳು ಹಾಗೇ ಉಳಿದಿವೆಯಲ್ಲದೆ ಹೊಸ ದೋಷಗಳೂ ಹುಟ್ಟಿಕೊಂಡಿವೆ. ಹೀಗಾಗಿ ಪಂಪ ಭಾರತದ ಪಾಠಗಳ ಅದ್ಯಂತ ಅಧ್ಯಯನ ಅವಶ್ಯವೆನಿಸುತ್ತದೆ' ಎಂದಿದ್ದಾರೆ. ಆದರೂ ಇಲ್ಲಿ ಪಂಪ ಭಾರತದ ಅದ್ಯಂತ ಪಾಠಗಳ ಅಧ್ಯಯನವನ್ನೇನೂ ಮಾಡಿಲ್ಲ; ಬದಲಾಗಿ ತಮಗೆ ಚರ್ಚಾರ್ಹವೆಂದು ತೋರಿದ ಕೆಲವನ್ನು ಮಾತ್ರ ಪ್ರತಿ ಆಶ್ವಾಸದಿಂದಲೂ ಆಯ್ದುಕೊಂಡು ಚರ್ಚಿಸಿದ್ದಾರೆ.

ಈ ಚರ್ಚೆಗಳನ್ನು ಪಂಪ ಭಾರತದ (ಪರಿಷತ್ತಿನ) ಪರಿಷ್ಕರಣವನ್ನು, ಅಲ್ಲಿನ ಪಾಠ ಭೇದಗಳನ್ನು ಆಧರಿಸಿ ಬೆಳೆಸಲಾಗಿದೆಯಾದರೂ ಬಹುಪಾಲು ಪಾಠ ಸಮಸ್ಯೆಗಳನ್ನು ಕುರಿತು ಚರ್ಚಿಸುವಾಗ, ಆ ಬಗ್ಗೆ ಡಿ.ಎಲ್.ಎನ್. ಏನು ಹೇಳಿದ್ದಾರೆ? ಎಂಬುದನ್ನು ಗಮನಿಸಲಾಗಿದೆ. ಹೀಗೆ ಗಮನಿಸುವಾಗ ಹಲವೆಡೆ ಡಿ.ಎಲ್.ಎನ್. ಅವರ ನಿಲುವುಗಳನ್ನು ಸಂಗತವೆಂದು ಒಪ್ಪಲಾಗಿದೆ. ಉದಾ: 'ಕಮ್ಮ(ಱ)' (12–3), 'ಸರ್ಪರೋಗಿ' (12–71), 'ಮಾಸರ' (3–44), 'ಕೆಯ್ಗ (ಮಾಡು)ವ ನಂಯಮಾ' ಎಂಬ ಪಾಠಕ್ಕೆ ಸಂಬಂಧಿಸಿದಂತೆ ಮಾಡಲಾಗಿರುವ ಕೆ(ಯ್ಯ)ಮಾನದ ನಂಯಮಾ' (7–40) ಎಂಬ ಪರಿಷ್ಕರಣ — ಇಂಥ ಹಲವನ್ನು ಗಮನಿಸಬಹುದು. ಇದನ್ನೆಲ್ಲ ಗಮನಿಸುವಾಗ ಪಡಿಕೆಯವರು ತಮ್ಮ ಚರ್ಚೆಯುದ್ದಕ್ಕೂ ದೀಪಿಕೆಯತ್ತ ಒಂದು ದೃಷ್ಟಿಯನ್ನಿರಿಸಿರುವುದು ಮನದಟ್ಟಾಗುತ್ತದೆ. ದೀಪಿಕೆಯಂತೆಯೇ ಈ ನಿಬಂಧದಲ್ಲಿ ಬಂದ ಇತರ ಕೆಲವು ಬಿಡಿ ಚರ್ಚೆಗಳನ್ನೂ ಗಮನಿಸಿರುವರಾದರೂ, ಆ ಮೊದಲು ಬಂದ ಚರ್ಚೆಗಳನ್ನೆಲ್ಲ ಗಮನಿಸಿದಂತೆ ತೋರದು. ಹಾಗೆ ಗಮನಿಸುವುದರಿಂದ ಹೆಚ್ಚಿನ ಪ್ರಯೋಜನವಿತ್ತು.

ಡಿ.ಎಲ್.ಎನ್. ಕೆಲವೆಡೆ ಕ್ಲಿಷ್ಟವೆಂದೋ, ಅಸ್ಪಷ್ಟವೆಂದೋ, ಕೈಬಿಟ್ಟ ಪದ್ಯಗಳನ್ನು, ಪದ್ಯಗಳ ಪಾಠಗಳನ್ನು ಪಡಿಕೆಯವರು ಬೇರಾವ ಪಾಠಾಂತರಗಳ ನೆರವನ್ನೂ ಪಡೆಯದೆ, ತಿದ್ದುಪಡಿಗೂ ಕೈಹಾಕದೆ ಸಮರ್ಥನೀಯವಾಗಿ ವಿವರಿಸಿರುವುದನ್ನು ಕಾಣಬಹುದು. ಇದು ಅವರ ಚರ್ಚೆಗಳ ಗಮನಾರ್ಹ ಗುಣಾತ್ಮಕ

ಅಂಶ. ಉದಾ: ಮೊದಲ ಆಶ್ವಾಸದ "ಸುರಭಿ ದೇವತೆಯೆಂಬ ಕಾಪಿನ ....." (29) ಎಂಬ ಪದ್ಯವನ್ನು ಕುರಿತು ಡಿ.ಎಲ್.ಎನ್. "ಅನೇಕ ಪಾಠ ಕ್ಲೇಶಗಳಿರುವುದರಿಂದ ಅದರ ಅರ್ಥ ಸರಿಯಾಗಿ ಆಗುವುದಿಲ್ಲ .......... ಇಲ್ಲಿ ಗೋಣನೆ ಎಂದಿರುವ ಪಾಠಾಂತರ ಸ್ವೀಕರಣ ಯೋಗ್ಯ; ಉಳಿದ ವಸ್ತುಗಳ ಸ್ವರೂಪ ಖಚಿತವಾಗಿ ತಿಳಿಯುವಂತಿಲ್ಲ .......... ಪದ್ಯದ ತಾತ್ಪರ್ಯ ತಿಳಿಯುವಂತಿಲ್ಲ" ಎಂದಿದ್ದಾರೆ. ಬಡಂಗನ ದಾನದ ಹೆಗ್ಗಳಿಕೆಯ ವಿವರಗಳುಳ್ಳ ಈ ಪದ್ಯವನ್ನು ಪಡಿಕಿಯವರು ವಿವರಿಸುವುದು ಹೀಗೆ: ಸುರಭಿಯು ದೇವತೆಯೆಂಬ ಕಾರಣದಿಂದ (ಬಡಂಗನ ದಾನದಲ್ಲಿ ಸೇರದಿರಲು ಅದೊಂದು ರಹಣಿ), ಐರಾವತ ಇಂದ್ರನ ಒಂದೇ ವಾಹನವಾಗಿರುವುದರಿಂದ, ಸೂರ್ಯ ರಥದ ಸಪ್ತಾಶ್ವಗಳು ಇಲ್ಲವಾದರೆ ಸೂರ್ಯನಿಗೆ (ಖರಕರ) ಕಷ್ಟವಾದೀತೆಂದು — ಹೀಗೆ ಈ ಅಪೂರ್ವ ವಸ್ತುಗಳು ಬಡಂಗನ ದಾನದಿಂದ ಹೊರಗುಳಿದುವು.[77] ಇದು ಪಡಿಕಿಯವರ ವಿವರಣೆ, ಸಂಗತವಾದದ್ದು ಕೂಡ. ಇಲ್ಲಿ 'ಅರಿಯವೆಂದು ಭದ್ರದೇವರ ಜಾಗದೊಳೊಪ್ಪುಗಾದುವೇ' ಎಂಬುದನ್ನು ಇವೇನು (ಈ ಅಪೂರ್ವ ವಸ್ತುಗಳು) ಬಡಂಗನಿಗೆ ಅಸಾಧ್ಯವಾದವುಗಳೆಂದು ಅವನ ದಾನದಿಂದ ಹೊರತಾದುವೇ? ಎಂದು ವಿವರಿಸುವುದು ಉಚಿತ.

ಪಡಿಕಿಯವರ ಚರ್ಚೆಯಲ್ಲಿ ಇಂಥ ಹಲವು ನಿದರ್ಶನಗಳನ್ನು ತೋರಿಸಬಹುದು. ಆದರೆ ಕೆಲವೇಳೆ ಸ್ವೀಕೃತ ಪಾಠವೇ ಸಂಗತವಾಗಿರುವಾಗಲೂ ಅದನ್ನು ತಿದ್ದುವ ಪ್ರಯತ್ನ ಮಾಡಲಾಗಿದೆ. ಉದಾ: ಪಂಪ ಭಾರತದ ಆರನೇ ಆಶ್ವಾಸದ ವಚನ ಭಾಗದಲ್ಲಿನ (59ನೇ ಪದ್ಯವನ್ನನುಸರಿಸಿ ಬರುವ) 'ಆಗಳ್ ಸಭಾಸದರೆಲ್ಲಮೆವೆ ಮಿಡುಕದೆ ಪಂದೆಯಂ ಪಾವಡರ್ಪೊಲುಸಿರದಿರೆ' ಎಂಬಲ್ಲಿನ 'ಎವೆಮಿಡುಕದೆ' ಎಂಬ ಪಾಠವನ್ನು 'ಎಲೆಮಿಡುಕದೆ' ಎಂದು ಪಾಠಾಂತರದ ಆಧಾರದ ಮೇಲೆ ತಿದ್ದಿ

77. ಹೇಮಲತಾ ಪಡಿಕಿ, ಪಂಪ ಭಾರತದ ಪಾಠಾಂತರಗಳು, ಕ.ಭಾ., 6–2, 1973. ಪು: 110

ಯಶೋಧರ ಚರಿತೆ ಮತ್ತು ಕುಮಾರ ವ್ಯಾಸ ಭಾರತದ ಪ್ರಯೋಗಗಳನ್ನು ನಿದರ್ಶಿಸಿ ಸಮರ್ಥಿಸಿದ್ದಾರೆ. (ಇಲ್ಲಿ ನಿದರ್ಶಿಸಿದ ಪ್ರಯೋಗಗಳನ್ನು ಕುರಿತು ಚರ್ಚೆ ಸಾಧ್ಯವಿದೆಯಾದರೂ ಇಲ್ಲಿಗೆ ಅನಗತ್ಯ) ಪಂಪನ ಈ ಪ್ರಯೋಗಕ್ಕೆ ಸಂಬಂಧಿಸಿದಂತೆ ಪರಿಷ್ಕರಣದ ಸ್ವೀಕೃತ ಪಾಠವೇ ಹೆಚ್ಚು ಯುಕ್ತವಿರುವಂತೆ ತೋರುತ್ತದೆ. ಡಿ.ಎಲ್.ಎನ್. ಕೂಡ ಇದನ್ನೇ ಒಪ್ಪಿ ವಿವರಿಸಿದ್ದಾರೆ. ಜೊತೆಗೆ ಸಂದರ್ಭವನ್ನು ಗಮನಿಸಿ. ಅಗ್ರಪೂಜೆಗೆ ಅನರ್ಹನೆಂದು ಕೃಷ್ಣನನ್ನು ಶಿಶುಪಾಲ ಹೀಯಾಳಿಸುತ್ತಿದ್ದಾನೆ. ಇದನ್ನು ನೋಡುತ್ತಿದ್ದ ಸಭಾಸದರೆಲ್ಲ 'ಪಂದಿಯುಂ ಪಾವಡರ್ಪೊಲ್' ಉಸಿರದೆ ಇದ್ದ ಸ್ಥಿತಿಯೊಂದನ್ನು ಇಲ್ಲಿ ಹೇಳಲಾಗಿದೆ. ಇಲ್ಲಿ 'ಎವೆ ಮಿಡುಕದೆ' ಎಂಬ ಪಾಠಕ್ಕಿಂತ 'ಎಲೆ ಮಿಡುಕದೆ'[78] ಎಂಬ ಪಾಠ ಹೇಗೆ ಸಮಂಜಸವಾಗಬಲ್ಲದು? ಒಂದು ಕವಿ ಪಾಠವನ್ನು ತಿದ್ದಲು ಅನೇಕ ವೇಳೆ ಇತರ ಕವಿ ಪ್ರಯೋಗಗಳಷ್ಟೇ ಆಧಾರವಾಗಲಾರವು. ಹಾಗೆ ಆಧಾರವಾಗಿ ಬಳಸುವಾಗಲೂ ಆ ಪಾಠ ಎಷ್ಟು ಸಮಂಜಸ ಎಂಬ ಪ್ರಶ್ನೆಯನ್ನು ಹಾಕಿಕೊಳ್ಳದಿದ್ದರೆ ನಮ್ಮ ತಿದ್ದುಪಡಿಗಳು ದಾರಿ ತಪ್ಪುವ ಸಂಭವವೇ ಹೆಚ್ಚು.

ಇಂಥದೇ ಮತ್ತೊಂದು ನಿದರ್ಶನವನ್ನು ಗಮನಿಸೋಣ. ಪ್ರಥಮಾಶ್ವಾಸದ ಒಂದು ಪದ್ಯ (9) "ಆ ಸಕಳಾರ್ಥ ಸಂಯುತಮಳಂಕೃತಿಯುಕ್ತಮುದಾತ್ತ..... ನೆಗಳ್ತೆಯ ನಾಳ್ದ ಕಬ್ಬಮುಂ ಕೂಸುಮ ನೀವುದೀವುದರಿಕೇಸರಿಗಲ್ಲದ ವಸ್ತುಗೀವುದೇ" ಇಲ್ಲಿ ಕೊನೆಗೆ ಬಂದ 'ಅವಸ್ತುಗೀವುದೆ' ಎಂಬುದು 'ಅವಸ್ತುವೀವುದೇ' ಎಂದಾಗಬೇಕೆಂದೂ, ಹಾಗಾದರೆ ಅರಿಕೇಸರಿಗೆ — ಅಲ್ಲದ (ಸಲ್ಲದ) ವಸ್ತುವನ್ನು ಕೊಡುವುದೇ ಎಂಬರ್ಥ ಬರುತ್ತದೆ ಎಂದೂ ಪದಕಿಯವರ ಸೂಚನೆ.[79] ಇಲ್ಲಿ

---

78. ಹೇಮಲತಾ ಪದಕಿ, ಪಂಪ ಭಾರತದ ಪಾಠಾಂತರಗಳು, ಕ.ಭಾ., 7—1, 1974. ಪು: 92; ಟಿ.ವಿ.ವೆಂಕಟಾಚಲ ಶಾಸ್ತ್ರಿಯವರು ಪದಕಿಯವರು ನಿದರ್ಶಿಸಿದ ಆಧಾರಗಳನ್ನೇ ಹೇಳಿ 'ಎಲೆ ಮಿಡುಕದೆ' ಎಂದೇ ತಿದ್ದಿದ್ದಾರೆ. ನೋಡಿ : ಪಂಪ ಭಾರತದ ಕೆಲವು ಪದಪಾಠಗಳು, ಪ್ರ.ಕ. 50—2, 1968. ಪು: 99—100

79. ಕ.ಭಾ., 6-2, 1973. ಪು: 107.

ಅರಿಕೇಸರಿಗಲ್ಲದೆ — ಅವನಿಗೆ (ಎಂದರೆ ವ್ಯಕ್ತಿಗೆ — ಡಿ.ಎಲ್.ಎನ್. ಕೂಡ ಹೀಗೆಂದೇ ವಿವರಿಸಿದ್ದಾರೆ, ದೀಪಿಕೆಯಲ್ಲಿ) ಈವುದೇ ಎಂದು ವಿವರಿಸುವುದೇ ಯುಕ್ತವಾಗಿದೆ. ಹೀಗೆ ವಿವರಿಸಿದಾಗ ಇಂಥ ಸಕಲಾರ್ಥ ಸಂಯುತಮಾದ ..... ಕಾವ್ಯವನ್ನೂ ಹೆಣ್ಣನ್ನೂ ಅರಿಕೇಸರಿಗಲ್ಲದೆ ಬೇರೆಯವರಿಗೆ ಕೊಡುವುದೇ? ಎಂಬ ಅರ್ಥ ಹೊರಡುತ್ತದೆ. ಇಂಥದೇ ಮತ್ತೊಂದು ಅನಗತ್ಯ ತಿದ್ದುಪಡಿಯನ್ನು ನಾಲ್ಕನೇ ಆಶ್ವಾಸದ ಪದ್ಯವೊಂದಕ್ಕೆ ಮಾಡಿದ್ದಾರೆ. 'ಒರ್ವಂ ಗುಣಮುಂಟೆಂದುಂಡು ಪಟ್ಟವರ್ಣನನಣಮೆ ನಿರುದ್ಯೋಗಿಯುಂ ಭೂಪನೆಂಬರ' ಎಂಬಲ್ಲಿ 'ಗುಣಮುಂಟೆಂದುಂಡು' ಎಂಬ ಪಾಠವನ್ನು 'ಗುಣ(ಲು)ಂಟೆಂದುಂಡು' ಎಂದು ತಿದ್ದಿದ್ದಾರೆ. ಈ ತಿದ್ದುಪಡಿಗೆ 'ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು' ಎಂಬ ಗಾದೆ ಮಾತನ್ನು ಪ್ರಸ್ತಾಪಿಸಿ ತಮ್ಮ ನಿಯೋಜಿತ ಪಾಠ ಆ ಗಾದೆ ಮಾತಿನ ಅರ್ಥವನ್ನು ಸೂಚಿಸುತ್ತದೆಂದು ಈ ಪರಿಷ್ಕರಣವನ್ನು ಒಂದು ಪ್ರಯತ್ನ ಮಾತ್ರವೆಂದು ಕರೆದಿದ್ದಾರೆ. ಪದಕಿಯವರ ಈ ಪರಿಷ್ಕರಣ ಮತ್ತು ಅದಕ್ಕೆ ಅವರು ಪೂರಕವಾಗಿ ಪ್ರಸ್ತಾಪಿಸಿದ ಗಾದೆ ಮಾತು ಇವೆಲ್ಲ ಆಕರ್ಷಕವಾಗಿವೆಯಾದರೂ ಇಂಥದೊಂದು ತಿದ್ದುಪಡಿಯ ಅಗತ್ಯವಿದೆಯೇ ಎಂಬ ಸಂದೇಹ ಉಳಿದೇ ಬಿಡುತ್ತದೆ. ಏಕೆಂದರೆ, ಈ ಗಾದೆ ಮಾತನ್ನು ಸಾಮಾನ್ಯವಾಗಿ 'ಸೋಮಾರಿತನ' ವನ್ನು ಟೀಕಿಸುವ ಸಂದರ್ಭದಲ್ಲಿ ಬಳಸಲಾಗುತ್ತದೆ. ಮೊದಲ ಮೂರು ಸಾಲುಗಳಲ್ಲಿ ಬಂದಿರುವಂತೆ ಹೀಗೆ ಹೀಗೆ ಮಾಡದೆ (ನೆಣಸುಳ್ಳ ಉದ್ವೃತ್ತರಂ ತಳ್ತಿಱಿಯದೆ ಇತ್ಯಾದಿ) ಕೇವಲ ಗುಣವಿದೆಯೆಂದು ಉಂಡು ಮಲಗುವವನನ್ನು ಒಂದರ್ಥದಲ್ಲಿ ಸೋಮಾರಿಯೆಂದೇ ಕರೆಯಬಹುದು. ಹೀಗಾಗಿ ಗಾದೆ ಮಾತಿನ ಅರ್ಥ ಸೂಚ್ಯವಾಗಿ ಇದ್ದೇ ಇದೆ. ಪರಿಷ್ಕರಣಗೊಂಡ (ಪದಕಿಯವರಿಂದ) ಪಾಠವನ್ನು ಒಪ್ಪಿದಾಗ ಈ ಸೂಚ್ಯವಿರುವ ಅರ್ಥ ವಾಚ್ಯವಾಗಿಬಿಡುತ್ತದೆ. (ಗುಣಮುಂಟೆಂದುಂಡು ಪಟ್ಟವರ್ಣನನ' ಎಂಬ ಮಾತು ಗುಣಾರ್ಣವ ಹೇಳುತ್ತಿರುವುದು ಎಂಬುದನ್ನೂ ಇಲ್ಲಿ ಗಮನಿಸಬೇಕು.)

ಹೀಗೆ ಪದಕಿಯವರು ಕೆಲವು ಅನಗತ್ಯ ತಿದ್ದುಪಡಿಗಳಿಗೆ ಕೈ ಹಾಕಿದ್ದಾರೆಂದರೆ, ಅದು ಅವರನ್ನು ಕುರಿತ ಆಕ್ಷೇಪಣೆ ಮಾತ್ರ ಆಗಬೇಕಿಲ್ಲ. ಅಂಥ ತಿದ್ದುಪಡಿಯನ್ನು ಯಾವ ಪಾಠಗಳಿಗೆ ಪದಕಿಯವರು ಸೂಚಿಸುತ್ತಾರೋ ಅಲ್ಲೆಲ್ಲ, ಎಂದರೆ ಆ ಪಾಠವಿರುವ ಪದ್ಯ ಅಥವಾ ವಚನ ಭಾಗಗಳಲ್ಲಿ ಒಂದಲ್ಲ ಒಂದು ಬಗೆಯ ಅಸ್ಪಷ್ಟತೆ ಇದ್ದೇ ಇರುತ್ತದೆ. ಈ ಅಸ್ಪಷ್ಟತೆಗಳು ಇಂಥ ತಿದ್ದುಪಡಿಗಳನ್ನು ಪ್ರೇರಿಸಿರುತ್ತವೆ ಎಂಬುದು ಸ್ಪಷ್ಟ. ಹಾಗೆ ನೋಡಿದರೆ ಪದಕಿಯವರು ತಿದ್ದುಪಡಿಗಳನ್ನು ಅಥವಾ ಪಾಠ ನಿಯೋಜನೆಗಳನ್ನು ಇತರ ಕವಿ ಪ್ರಯೋಗಗಳನ್ನೋ, ಇನ್ನಿತರ ಮೂಲಗಳನ್ನೋ ಆಧರಿಸಿ ಮಾಡುವುದಿಲ್ಲ. ಈ ಮಾತಿಗೆ ಅವರ ಪಾಠ ಚರ್ಚೆಯಲ್ಲಿ ಒಂದೆರಡು ಅಪವಾದಗಳಿರಬಹುದು. ಅವರ ಪಾಠ ಚರ್ಚೆಗಳನ್ನು ಗಮನಿಸಿದಾಗ, ಅವೆಲ್ಲ ಮುಖ್ಯವಾಗಿ ಅರ್ಥ ವಿವರಣೆಯ ಜಾಡು ಹಿಡಿದ ಅಸ್ಪಷ್ಟತೆಗಳ ಸ್ಪಷ್ಟೀಕರಣದ ಉದ್ದೇಶದವೆಂಬುದು ಸ್ಪಷ್ಟವಿರುವ ವಿಚಾರ. ಅವರ ಹೊಸ ಪಾಠ ನಿಯೋಜನೆಗಳು ಈ ಉದ್ದೇಶಕ್ಕೆ ಬದ್ಧವಾಗಿಯೇ ಇರುತ್ತವೆ.

ದೀಪಿಕೆಯ ನಂತರ ಪಂಪ ಭಾರತದ ಹಲವು ಪಾಠ ಸಮಸ್ಯೆಗಳನ್ನು ಒತ್ತಟ್ಟಿಗಿರಿಸಿಕೊಂಡು ಚರ್ಚಿಸಿದ ವ್ಯಾಪಕ ಪ್ರಯತ್ನಗಳು ಈ ಮೇಲೆ ಪ್ರಸ್ತಾಪಿಸಿದ ಎರಡು ಮಾತ್ರ (ದೀಪಿಕೆಯ ಬೆಳಕಿನಲ್ಲಿ ಮತ್ತು ಪಂಪ ಭಾರತದ ಪಾಠಾಂತರಗಳು). ಇವುಗಳಲ್ಲದೆ, ಇನ್ನು ಕೆಲವು ಇಂಥ ಪ್ರಯತ್ನಗಳಿವೆ. ಅಲ್ಲೆಲ್ಲ ಕೆಲ ಕೆಲವು ಪಾಠ ಸಮಸ್ಯೆಗಳನ್ನು ಒಟ್ಟಿಗೆ ಇರಿಸಿ ಚರ್ಚಿಸಲಾಗಿದೆ. ಅವುಗಳಲ್ಲಿ ಟಿ.ವಿ.ವೆಂಕಟಾಚಲ ಶಾಸ್ತ್ರಿಯವರ 'ಪಂಪ ಭಾರತದ ಪದ ಪಾಠಗಳು', ಹಂ.ಪ.ನಾಗರಾಜಯ್ಯನವರ 'ಪಂಪ ಭಾರತದ ಕೆಲವು ಪಾಠಾಂತರಗಳು ಮತ್ತು 'ಪಂಪ ಕವಿಯ ಎರಡು ಪದ್ಯಗಳು' ಇತ್ಯಾದಿಗಳನ್ನು ಪ್ರಸ್ತಾಪಿಸಬಹುದು. ವೆಂಕಟಾಚಲ ಶಾಸ್ತ್ರಿಯವರು 'ಎವೆ ಮಿಡುಕದೆ' (6.59 ವ.) 'ಅಜನನ' (9–27, 28 ವ.) ಎಂಬ ಪಾಠಗಳನ್ನು 'ಎಲೆ ಮಿಡುಕದೆ' 'ಅಜರನನ' ಎಂದು ಅನುಕ್ರಮವಾಗಿ ತಿದ್ದಿದ್ದಾರೆ. ಹಾಗೆಯೇ

(ಕ)ರ ಸಾಹಿ, 'ನಡಹುಡನಪ್ಪ ಕಟ್ಟಿಕೊಡೆ' ಗಳನ್ನು ಕುರಿತ ಚರ್ಚೆಗಳೂ ಇವೆ.[80] ಹಂಪನಾ ಅವರು ಪಂಪ ಭಾರತದ ಕೆಲವು ಪಾಠಾಂತರಗಳನ್ನು ಕುರಿತು ಚರ್ಚಿಸಿದ್ದಾರೆ.[81] ಬಹುಮುಖ್ಯವಾಗಿ ಅವರ ಚರ್ಚೆಗಳು ವ್ಯಾಕರಣಾಂಶಗಳ ಹಿನ್ನೆಲೆಯಲ್ಲಿ ಬೆಳೆದಿರುತ್ತವೆ. ಒಂದು ಪಾಠವನ್ನು ಕುರಿತ ಚರ್ಚೆಯಲ್ಲಿ ಪಂಪನವೇ ಅದ ಇತರ ಪ್ರಯೋಗಗಳನ್ನು ಗಮನಿಸಲಾಗಿದೆ. 'ಮುದುವಾಳ್ದುದಂತದೇಂ ಬೋಳ್ಪಮೋ' (13–68) ಎಂಬಲ್ಲಿ ಕುಳಕ್ಕೆ ಬದಲಾಗಿ ರಳವಿರಬೇಕೆಂದು ಕೇಶಿರಾಜನ 'ಬಾಳ್ ಜೀವನೇ, ಖಡ್ಗೇ ಕುಳಂ......' ಎಂಬ ವಿವರಣೆ ಮತ್ತು ಪಂಪನೇ ಮತ್ತೊಂದೆಡೆ (13–14) ಬಳಸಿದ ರಳಯುಕ್ತವಾದ 'ಮುದುವಾಳ್' ಎಂಬ ಪ್ರಯೋಗಗಳನ್ನಾಧರಿಸಿ ಸಮರ್ಥಿಸುತ್ತಾರೆ. ಇದೇ ರೀತಿ ಅವರ ಇತರ ಪಾಠ ಚರ್ಚೆಗಳೂ ಮೇಲೆ ಹೇಳಿದ ಸ್ವರೂಪದವೇ ಆಗಿವೆ.

### 3.4.1.3 ಕೆಲವು ಬಿಡಿ ಚರ್ಚೆಗಳು

ಇದುವರೆಗೆ ಪ್ರಸ್ತಾಪಿಸಿದ ಚರ್ಚೆಗಳ ಹೊರತು ಉಳಿದುವೆಲ್ಲ ಬಿಡಿ ಚರ್ಚೆಗಳು. ಎಂದರೆ, ಇಲ್ಲಿ ಒಂದು ಪಾಠ ಸಮಸ್ಯೆಯನ್ನೋ, ಪದ್ಯದ ಸಮಸ್ಯೆಯನ್ನೋ ಕೇಂದ್ರವಾಗಿರಿಸಿಕೊಂಡ ಚರ್ಚೆಗಳನ್ನು ಗಮನಿಸಬಹುದಾಗಿದೆ. ಹೀಗೆ ಬಿಡಿ ಪಾಠ ಸಮಸ್ಯೆಗಳನ್ನು ಚರ್ಚಿಸಿದ ಚರ್ಚೆಗಳು ಹಲವಿವೆ. ಅವನ್ನೆಲ್ಲ ಇಲ್ಲಿ ಪ್ರಸ್ತಾಪಿಸುವ ಅಥವಾ ಅವುಗಳ ಸ್ವರೂಪವನ್ನು ಪರಿಚಯಿಸುವ ಅಗತ್ಯವಿಲ್ಲವೆಂದು ತೋರುತ್ತದೆ.

---

80. ವೆಂಕಟಾಚಲ ಶಾಸ್ತ್ರಿ ಟಿ.ವಿ., ಪಂಪ ಭಾರತದ ಕೆಲವು ಪದ ಪಾಠಗಳು, ಪ್ರ.ಕ., 50–2, 1968. ಪು: 99–108.

81. ನಾಗರಾಜಯ್ಯ ಹಂ.ಪ., ಪಂಪ ಭಾರತದ ಪಾಠಾಂತರಗಳು, ಕ.ನು., 27–8 1964. ಪು: 13

ಹಾಗೆ ನೋಡಿದರೆ ಈ ಬಿಡಿ ಚರ್ಚೆಗಳಿಗೆ ಸಮಾನವಾದ ಲಕ್ಷಣಗಳನ್ನೇ, ಸ್ವರೂಪವನ್ನೇ ಗುರುತಿಸುವುದು ಸಾಧ್ಯವಿಲ್ಲ. ಅಂಥ ಸಾಧ್ಯತೆ ಕೂಡ ಇರಲಾರದು. ಏಕೆಂದರೆ ಒಂದು ಪಾಠವನ್ನು ಕುರಿತು ಒಬ್ಬರು ತಮಗೆ ಸರಿದೋರಿದ ಮಾನದಂಡವನ್ನಿರಿಸಿ, ಸರಿದೋರಿದ ಕ್ರಮದಿಂದ ಚರ್ಚಿಸಬಹುದು. ಇದು ಬೇರೆ ಪಾಠ ಚರ್ಚೆಗಿಂತ, ಚರ್ಚಕರಿಗಿಂತ ಬೇರೆಯಾಗಿರಬಹುದು. ಇಂಥ ಬಿಡಿ ಚರ್ಚೆಗಳಂತೆಯೇ ಒಂದು ನಿರ್ದಿಷ್ಟ ಪಾಠ ಸಮಸ್ಯೆಯನ್ನು ಕುರಿತಂತೆ ಓತಪ್ರೋತವಾಗಿ ಚರ್ಚೆಗಳು ಬೆಳೆಯುತ್ತ ಹೋಗಿವೆ. ಒಂದು ಪದ್ಯವನ್ನು ಕುರಿತಂತೆ ನಡೆಯುವ ಪಾಠ ಸಂಬಂಧೀ ವಾಗ್ವಾದಗಳಲ್ಲಿ, ಪ್ರತಿಕ್ರಿಯೆ ಮರು ಪ್ರತಿಕ್ರಿಯೆಗಳಲ್ಲಿ ಹಂತ ಹಂತವಾಗಿ ಆ ಪದ್ಯದ ಬೇರೆ ಬೇರೆಯ ಮುಖಗಳು ಪರಿಚಯವಾಗುತ್ತ ಹೋಗಿವೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಯಾವ ಚರ್ಚೆಯೂ ಗಮನಾರ್ಹ ವಿವರಗಳನ್ನು ನೀಡದೆ ಹೋದ ನಿದರ್ಶನಗಳೂ ಕಾಣಬರುತ್ತವೆ. ಪಂಪ ಭಾರತದ ಒಂದು ಪ್ರಸಿದ್ಧ ಪದ್ಯವನ್ನು ಕುರಿತ ಚರ್ಚೆಗಳನ್ನಿಲ್ಲಿ ನೋಡಬಹುದು :—

"ನುಡಿವುದಂ ಪತಿ ಭಕ್ತಿಯ ಪೆಂಪಿನಿಂ ನುಡಿದೈ ಪೆಱ ತಂದದಿಂ
ನುಡಿದೆಯಲ್ತೆ ಮದಾಂಧ ಸುಯೋಧನಂ ನೂಱ್ವೆಯಲ್ಕೆ ನಗಕ್ಕುಮಿ
ನ್ನೆಡೆಯೊಳಂದಿಮಡೆಂದುದದೇಂ ತಪ್ಪಿದುದೆ ನಮ್ಮೊಳವಜರ ಜನಂ
ಬಡೆದ ಭಾರ್ಗವರಪ್ಪದಱಿಂದಂ ನಂಬರು ಮಂಗಮಹೀಪತೀ"

(12— 56)

ಮುಖ್ಯವಾಗಿ ಈ ಪದ್ಯವನ್ನು ಕುರಿತು ಚರ್ಚಿಸಿದ ಮೂವರು ವಿದ್ವಾಂಸರುಗಳಿಗೆ (ಡಿ.ಎಲ್.ಎನ್. ಅವರೂ ಸೇರಿದರೆ ನಾಲ್ವರು) ಇಲ್ಲಿ ಕಂಡು ಬಂದ ಸಮಸ್ಯೆಗಳು ಹೀಗಿವೆ: ಇಲ್ಲಿ 'ನುಡಿದೆಯಲ್ತೆ' ಎಂಬುದಿರಬೇಕೋ ಅಥವಾ 'ನುಡಿಯೆಯಲ್ತೆ' ಎಂದೋ; ಅದೇ ರೀತಿ 'ಮದಾಂಧ ಸುಯೋಧನ' ಎಂಬುದನ್ನು ಅನ್ವಯಿಸಬೇಕಿರುವುದು ಕರ್ಣನಿಗೋ ಅಥವಾ ಭೀಷ್ಮನಿಗೋ. ಮತ್ತು ಹೀಗೆ

ಅನ್ವಯಿಸುವಲ್ಲಿ 'ಎಂದೆಮದೆಂದುದೇಂ ತಪ್ಪಾದುದೇ' ಎಂಬುದನ್ನು ಹೇಗೆ ವಿವರಿಸಬೇಕು? ಈ ಎರಡು ಮೂರು ಸಂಗತಿಗಳ ನೆಲೆಯಲ್ಲೇ ಈ ಪದ್ಯವನ್ನು ಕುರಿತ ಚರ್ಚೆಗಳೆಲ್ಲ ನಡೆದಿವೆ. ಡಿ.ಎಲ್.ಎನ್. 'ನುಡಿದೆಯಲ್ತೆ' ಎಂಬಲ್ಲಿ 'ನುಡಿ(ಯೆ)ಯಲ್ತೆ' ಎಂದು ಪಾಠವಿರಬೇಕೇನೋ ಎಂದಿದ್ದರು. ಹಾಗೆಯೇ 'ಮದಾಯುಧಮಮೋಘಂ' ಎಂದು ಭೀಷ್ಮ ತನಗೆ ತಾನೇ ಹೇಳಿಕೊಳ್ಳಲಾರ ಎಂದು, ಅಯು ಶಬ್ದಕ್ಕೆ ಸಾಮರ್ಥ್ಯ ಎಂಬ ಅರ್ಥವನ್ನು ಅನುಮಾನಿಸಿದ್ದರು. ದೀಪಿಕೆಯ ನಂತರ ಈ ಪದ್ಯದ ಚರ್ಚೆಯನ್ನು ಮೊದಲು ಮಾಡಿದ ಶಿವರಾಮಯ್ಯನವರು ಮೂರನೆಯ ಸಾಲಲ್ಲಿರುವ 'ಎಂದೆಮದೆಂದುದೇಂ' ಎಂಬಲ್ಲಿ 'ಎಂದೆಯದೆಂದುದೇಂ' (= ಎಂದಯ್ + ಅದೆಂದುದೇಂ) ಎಂದು ತಿದ್ದಿ — ಈ ಪಾಠವನ್ನು ಒಪ್ಪಿಕೊಂಡರೆ ಡಿ.ಎಲ್.ಎನ್. ಅವರ ಅನುಮಾನಗಳು ತಾನೇ ತಾನಾಗಿ ಬಗೆಹರಿಯುತ್ತವೆಂದು ಸೂಚಿಸಿದರು.[82] ಶಿವರಾಮಯ್ಯನವರು ಈ ತಿದ್ದುಪಡಿಯನ್ನು ಮಾಡುವಾಗ ಡಿ.ಎಲ್.ಎನ್. ಅವರು 'ನುಡಿಯೆಯಲ್ತೆ' ಎಂದು ಸಂದೇಹಪೂರ್ವಕವಾಗಿ ಸೂಚಿಸಿದ ತಿದ್ದುಪಡಿ ಮುಖ್ಯವಾಗಿ ಗಮನದಲ್ಲಿದೆಯೆಂದು ತೋರುತ್ತದೆ. ಶಿವರಾಮಯ್ಯನವರ ಈ ತಿದ್ದುಪಡಿಗೆ ಬಂದ ಜಾಗಿರದಾರರ ಪ್ರತಿಕ್ರಿಯೆಯಲ್ಲಿ ಶಿವರಾಮಯ್ಯನವರ ಸೂಚಿತ ತಿದ್ದುಪಡಿಗಳು ಅನಗತ್ಯವೆಂದೂ ಇರುವ ಪಾಠವೇ ಸಂಗತವೆಂದೂ ಹೇಳಲಾಗಿದೆ.[83] ಡಿ.ಎಲ್.ಎನ್. 'ಅಯು' ಎಂಬ ಶಬ್ದವನ್ನು ಸಾಮರ್ಥ್ಯವೆಂಬ ಅರ್ಥದಲ್ಲಿ ಗ್ರಹಿಸಲು ನಿರಾಕರಿಸಿದ್ದನ್ನು ಪ್ರಸ್ತಾಪಿಸಿ, ಶಿವರಾಮಯ್ಯನವರು ಸೂಚಿಸಿದಂತೆಯೇ 'ಅಯು' ಎಂಬ ಶಬ್ದದ ಅರ್ಥವನ್ನು 'ಸಾಮರ್ಥ್ಯ' ವೆಂದೇ ಸಮರ್ಥಿಸಿದ್ದಾರೆ. ಇವೆರಡೂ ಚರ್ಚೆಗಳನ್ನು ಗಮನಿಸಿದ ಎಂ.ವಿ.ಶ್ರೀನಿವಾಸ

---

82. ಶಿವರಾಮಯ್ಯ, ಪಂಪ ಭಾರತದ ಒಂದು ಕ್ಲಿಷ್ಟ ಪದ್ಯ, ಸಾಧನೆ, 5–2, 1976. ಪು: 175–178

83. ಸೀತಾರಾಮ ಜಾಗಿರದಾರ, ಪಂಪ ಭಾರತದ ಒಂದು ಕ್ಲಿಷ್ಟ ಪದ್ಯ, — ಅದೇ — 6–1, 1977. ಪು: 138–143.

ಮೂರ್ತಿಯವರು, ಎರಡೂ ಕಡೆ ಬಂದ ವಿವರಗಳ ಹಿನ್ನೆಲೆಯಲ್ಲಿ ಈ ಪದ್ಯವನ್ನು ಕುರಿತು ಸಮಾಲೋಚಿಸಿದ್ದಾರೆ.[84] ಇಲ್ಲಿ ಜಾಗಿರದಾರರು ಮಾಡಿದ ಅನ್ವಯಕ್ರಮ ಮತ್ತು ವಿವರಣೆಗಳನ್ನು ಇನ್ನಷ್ಟು ಸ್ಪಷ್ಟವಾಗಿ ಹೇಳಲಾಗಿದೆ. ಶ್ರೀನಿವಾಸ ಮೂರ್ತಿ ಅವರು ಪದ್ಯವನ್ನು 'ಬಿಡಿಸಿ ಓದಿದ' ಬಗೆ ಇದು :—

"ನುಡಿವುದಂ ಪತಿಭಕ್ತಿಯು ಪೆಂಪಿಂ ನುಡಿದ್ದೆ ಪೆಱತಂದದಿಂ ನುಡಿದೆಯಲ್ತೆ ಮದಾಂಧಂ
ಅಮೋಘಂ ಸೂಟ್ಟೆಯಲ್ತೆ ಎನಗೆ ಅಕ್ಕುಮೆ? ಇನ ಎಡೆಯೊಳ್
ಎಂದೆಮ? ಅದು
ಅಂದುದು ಅದು ಏಂ ತಪ್ಪಿದುದೇ? ನಮ್ಮ ಒಪಜರ ಜನಂಬಡೆದ ಭಾರ್ಗವರ
ಅಪ್ಪುದಱಿಂದಂ ನಂಬರುಂ ಅಂಗಮಹೀಪತೀ"

ಇಲ್ಲಿ 'ಪೆಱತಂದದಿಂ ನುಡಿದೆಯಲ್ತೆ' ಎಂಬುದನ್ನು ನೀನು ಬೇರೆ ಭಾವದಿಂದ ಎಂದರೆ ನನ್ನ ಮೇಲಿನ ಅಗೌರವದಿಂದಾಗಲೀ, ಕ್ರೋಧ ಮಾತ್ಸರ್ಯಗಳಿಂದಾಗಲೀ ಹೇಳಲಿಲ್ಲ (ನುಡಿದೆಯಲ್ತು + ಎ) ಎಂದು ವಿವರಿಸಿದ್ದು, ಕೇಶಿರಾಜನ ವಿವರಗಳ ಆಧಾರದ ಮೇಲೆ 'ಅಲ್ಲದು' ಎಂಬುದನ್ನು 'ಅಲ್ತು' ಎಂದೂ ಹೇಳಬಹುದೆಂದೂ, ಅದಕ್ಕೆ ಅವಧಾರಣೆಯ 'ಎ' ಸೇರಿ 'ಅಲ್ತೆ' ಆಗಿದೆಯೆಂದೂ ವಿವರಿಸಿದ್ದು ಸಂಗತವಾಗಿದೆ. ಹಾಗೆಯೇ 'ಅಂತು' ಎಂಬ ಶಬ್ದವನ್ನು (ಹಿಂದಿನ ಎರಡೂ ಚರ್ಚೆಗಳಂತೆಯೇ) 'ಸಾಮರ್ಥ್ಯ' ಎಂಬರ್ಥದಲ್ಲಿ ತೆಗೆದುಕೊಂಡದ್ದು ಮತ್ತು 'ಎಂದೆಮ' ಎಂಬಲ್ಲಿನ 'ಎಮ' ಎಂಬುದನ್ನು ಕೇಶಿರಾಜನ ಹೇಳಿಕೆಯನ್ನು ಆಧರಿಸಿ 'ಅದೇನು ಮಹಾ' ಎಂಬರ್ಥದಲ್ಲಿ ವಿವರಿಸಿದ್ದು ಕೂಡ ಸರಿಯೆ. ಆದರೆ ಶ್ರೀನಿವಾಸ ಮೂರ್ತಿ ಅವರು ಮೇಲಿನ ಅನ್ವಯಕ್ರಮದಲ್ಲಿ ಸ್ವಲ್ಪ ಸಂದೇಹಕ್ಕೆ ಎಡೆ ಮಾಡಿದಂತಿದೆ. 'ಸೂಟ್ಟೆಯಲ್ತೆ ಎನಗೆ ಅಕ್ಕುಮೆ? ಇನ ಎಡೆಯೊಳ್ ಎಂದೆಮ' ಎಂದು

---

84. ಶ್ರೀನಿವಾಸ ಮೂರ್ತಿ ಎಂ.ವಿ., ಪಂಪ ಭಾರತದ ಒಂದು ಕ್ಲಿಷ್ಟ ಪದ್ಯ ಸಮಾಲೋಚನೆ, ಸಾಧನೆ, 7—1, 1978. ಪು: 149—151

ಬಿಡಿಸಿದಾಗ 'ನರದಿಯನ್ನು ಪಡೆಯುವುದು ಸಾಧ್ಯವೇ ಎಂದೆಯಲ್ಲ ಕರ್ಣ, ಅಂದು' ಎಂಬ ಅರ್ಥ ಬರುವಂತಿದ್ದು ಕರ್ಣನ ಹಿಂದಿನ ಸಂದೇಹಾಸ್ಪದ ಪ್ರಶ್ನೆಯ ಸೂಚನೆಯಿದೆ. ಆದರೆ 'ಸೂಚಿಪ್ಪೆಯಲ್ತೆ ಎನಗಕ್ಕುಮವರ್ ಇನ ಎಡೆಯೊಳ್ ಎಂದವು' ಎಂದು ಓದಿದಾಗ,ಆಗ ಹೇಳಿದೆಯಲ್ಲ (ವೀರ ಪಟ್ಟವನ್ನು ಭೀಷ್ಮರಿಗೆ ಕಟ್ಟುವ ಸಂದರ್ಭದಲ್ಲಿ) ಎಂಬರ್ಥ ಬರುತ್ತದೆ. ಭೀಷ್ಮರಿಗೆ ವೀರ ಪಟ್ಟವನ್ನು ಕಟ್ಟುವ ಸಂದರ್ಭದಲ್ಲಿ (ದಶಮಾಶ್ವಾಸ 16–22) ಕರ್ಣ ಅದನ್ನು ಪ್ರಶ್ನಿಸಿದ ಮಾತುಗಳು ಮತ್ತು ತನಗೇ ವೀರ ಪಟ್ಟ ಬಂದಾಗ ಭೀಷ್ಮರನ್ನು ಕಾಣಲು ಬಂದ ಕರ್ಣ ಕ್ಷಮೆ ಯಾಚಿಸಿ ಹೇಳುವ ಮಾತುಗಳು (12–54, 55) — ಈ ಹಿನ್ನೆಲೆಯಲ್ಲಿ ನೋಡಿದಾಗ ಭೀಷ್ಮ ಕರ್ಣನ ಅಂದಿನ ಮಾತುಗಳನ್ನು, ಛಲದ ವರ್ತನೆಯನ್ನು ಜ್ಞಾಪಿಸಿ ಅದೇನೂ ತಪ್ಪಲ್ಲ; ನನ್ನ ಮೇಲಿನ ಕೆಟ್ಟ ಅಭಿಪ್ರಾಯದಿಂದ ನೀನು ಹೇಳಲಿಲ್ಲ; ನೀನು ಹಾಗೆ ಹೇಳಲು ಕಾರಣ ನಿನ್ನ ಪತಿ ಭಕ್ತಿ, ಎಂದು ಕರ್ಣನನ್ನು ಸಾಂತ್ವನ ಮಾಡುತ್ತಿದ್ದಾನೆ ಎಂಬುದು ಸ್ಪಷ್ಟ. ಹೀಗೆ ಜ್ಞಾಪಿಸಿದ ಛಲದ ವರ್ತನೆಯನ್ನು 'ಎನಗಕ್ಕುಮವರ್ ಇನ ಎಡೆಯೊಳ್' ಎಂಬ ಮಾತಿನಲ್ಲಿ ಗಮನಿಸಬಹುದು.

ಇದೇ ರೀತಿ 'ರಂಗತ್ತುಂಗ ಭಂಗುರ ಲಸದ್ಗಂಗಾ ಜಳಂ ನರ್ಮದಾ.....' (14–31) ಎಂಬ ಪದ್ಯವನ್ನು ಕುರಿತಂತೆಯೂ ಕೆಲವು ಚರ್ಚೆಗಳು ನಡೆದಿವೆ.[85]

---

85. ನೋಡಿ : ಸೀತಾರಾಮ ಜಾಗಿರದಾರ, ಪಂಪ ಭಾರತದಲ್ಲಿ ವರದಾ ನದಿ, ಸಾಧನೆ, 2–3, 1973. ಪು: 92–96; ಎಂ.ಎ.ಲಕ್ಷ್ಮಿ ತಾತಾಚಾರ, ಪಂಪ ಭಾರತದಲ್ಲಿ ವರದಾ ನದಿ – ಒಂದು ಪ್ರತಿಕ್ರಿಯೆ, ಅದೇ, 2–4 1973. ಪು: 205–209; ಸೀತಾರಾಮ ಜಾಗಿರದಾರ, ಪಂಪ ಭಾರತದ ವರದಾ ನದಿ – ಒಂದು ಪ್ರತಿಕ್ರಿಯೆಗೆ ಒಂದು ಉತ್ತರ, ಅದೇ, 3–2, 1974. ಪು: 145–149; ಎಂ.ಎ.ಲಕ್ಷ್ಮಿ ತಾತಾಚಾರ, ಪಂಪ ಭಾರತದಲ್ಲಿ ವರದಾ ನದಿ – ಪ್ರತಿಕ್ರಿಯೆಯ ಉತ್ತರಕ್ಕೆ ಪ್ರತ್ಯುತ್ತರ, ಅದೇ 4–1, 1975. ಪು: 149–157; ಸೀತಾರಾಮ ಜಾಗಿರದಾರ,

ಇಲ್ಲಿ ವಿದ್ವಾಂಸರಿಗೆ ಕಂಡು ಬಂದ ಮುಖ್ಯ ಪಾಠ ಸಮಸ್ಯೆ ಸ್ವೀಕೃತ ಪಾಠವಾದ 'ಸಂಗತೋತ್ಯೋರ್ಜಿತ' ಎಂಬ ಪಾಠ ಸರಿಯೇ ಅಲ್ಲವೇ? ಎಂಬುದು. ಜಾಗಿರದಾರರು ಅಲ್ಲವೆಂದು 'ಸಂಗತೋತ್ಯೋರ್ಜಿತ' ಎಂದು ನಿಯೋಜಿಸಿದ್ದಾರೆ. ಡಿ.ಎಲ್.ಎನ್. ನಿಯೋಜಿಸಿದ 'ಸಂಗತತ್ಯರ್ಜಿತ' ಎಂಬ ಪಾಠವನ್ನು ನಿರಾಕರಿಸಿದ್ದಾರೆ. ಲಕ್ಷ್ಮಿ ತಾತಾಚಾರ ಮತ್ತು ಜಿ.ವೆಂಕಟ ಸುಬ್ಬಯ್ಯನವರು ಡಿ.ಎಲ್.ಎನ್. ಸೂಚಿತ ಪಾಠವನ್ನೇ ಸಮರ್ಥಿಸುತ್ತಾರೆ. ಇದರೊಂದಿಗೆ 'ವಾರಿ ಸಾರ' ಎಂಬುದನ್ನು ಒಟ್ಟಿಗೆ ತೆಗೆದುಕೊಳ್ಳಬೇಕೆ? ವಾರಿ ಮತ್ತು ಸಾರ ಎಂದು ಬೇರೆ ಬೇರೆಯಾಗಿ ಗ್ರಹಿಸಬೇಕೇ? ಎಂಬುದೂ ಚರ್ಚೆಗೆ ಒಳಗಾಗಿದೆ. ಸದ್ಯಕ್ಕೆ ಡಿ.ಎಲ್.ಎನ್. ಸೂಚನೆಗಳು ಯುಕ್ತವಾದುವೆಂದು ಹೇಳಬೇಕಾಗಿದೆ. ಈ ಪಾಠ ಚರ್ಚೆಯ ಜೊತೆ ಜೊತೆಗೆ ಇಲ್ಲಿ ಬಂದ 'ವರದಾ ನದಿ' ಯಾವುದು? ಎಂಬ ಪ್ರಶ್ನೆ ಕೂಡ ಕಾಡಿದೆ. ಇದು ಬನವಾಸಿಯ ಬಳಿ ಹರಿಯುವ ನದಿ (ಲಕ್ಷ್ಮಿ ತಾತಾಚಾರ); ಇದು ಅರಿಕೇಸರಿಯ ರಾಜ್ಯದ ಎಲ್ಲೆಯಲ್ಲಿದ್ದ ಗೋದಾವರಿಯ ಉಪನದಿಯಾದ 'ವೈನಗಂಗಾ' (ಜಾಗಿರದಾರ) ಎಂದು ಸಮರ್ಥಿಸುವ ಚರ್ಚೆ ಪ್ರತಿ ಚರ್ಚೆಗಳು ವ್ಯಕ್ತಿಗತ ಮಟ್ಟಕ್ಕೂ ಇಳಿದಿವೆ. ವಾಸ್ತವವಾಗಿ ವರದಾ ನದಿಯ ಪ್ರಾದೇಶಿಕ ನೆಲೆಯನ್ನು ತಿಳಿಯುವುದು ಬೇರಾವ ಆಧಾರಗಳ ನೆರವೂ ಇಲ್ಲದ್ದರಿಂದ ಕಷ್ಟಸಾಧ್ಯವಾಗಿದೆ. ಇದಕ್ಕಿಂತ ಮುಖ್ಯವಾದ ಸಂಗತಿ, ಹೀಗೆ ಪ್ರಾದೇಶಿಕ ನೆಲೆಯನ್ನು ತಿಳಿದಾಗಲೂ ಈ ಪದ್ಯದ ಗ್ರಹಿಕೆಗೆ ಯಾವ ಬಗೆಯ ನೆರವು ದೊರೆಯಬಹುದೆಂಬುದು. ಬಹುಶಃ ಪಂಪ ಹೇಳಿದ ವರದಾ ನದಿ ಇದೇ ಎಂದು ತಿಳಿಯುವುದು ಒಂದು ಸಂಗತಿ ಮಾತ್ರವಾಗುವುದಕ್ಕಿಂತ ಹೆಚ್ಚೇನೂ ಆಗಲಾರದೆಂದು ತೋರುತ್ತದೆ.

---

ಪಂಪ ಭಾರತದ ವರದಾ ನದಿ — ಒಂದು ಮರು ಉತ್ತರ, ಅದೇ, 4—3 1975. ಪು: 156—162; ಜಿ.ವೆಂಕಟಸುಬ್ಬಯ್ಯ, ಪಂಪ ಕವಿಯ ವಿಕ್ರಮಾರ್ಜುನ ವಿಜಯದಲ್ಲಿನ ರಂಗತ್ತುಂಗ ತರಂಗ .......... ಎಂಬ ಮಂಗಳ ವೃತ್ತ, ಅದೇ, 7—2. 1978. ಪು: 78—90.

ಇದುವರೆಗೆ ಪಂಪ ಭಾರತದ ಪಾಠ ಸಂಬಂಧೀ ಚರ್ಚೆಗಳನ್ನು ಗಮನಿಸಲಾಗಿದೆ. ಬಾಹುಳ್ಯದ ದೃಷ್ಟಿಯಿಂದ ಸಾಕಷ್ಟು ಚರ್ಚೆಗಳು ನಡೆದಿವೆ. ಅವುಗಳಲ್ಲಿ ಹಲವು ಮೌಲಿಕವೂ ಆಗಿವೆ. ಈ ಬಗೆಯ ಪಾಠ ಚರ್ಚೆಗಳು ಆದಿಪುರಾಣವನ್ನು ಕುರಿತಂತೆ ವಿರಳವಾಗಿ ನಡೆದಿವೆ. ಪ್ರಮಾಣದ ದೃಷ್ಟಿಯಿಂದ ಪಂಪ ಭಾರತದ ಪಾಠ ಸಂಬಂಧೀ ಚರ್ಚೆಗಳಿಗೆ ಹೋಲಿಸಿದರೆ ಆದಿಪುರಾಣಕ್ಕೆ ಸಂಬಂಧಿಸಿದಂತೆ ನಡೆದದ್ದು ತೀರ ಕಡಿಮೆ ಎಂದೇ ಹೇಳಬಹುದು. ಹಾಗೆ ನೋಡಿದರೆ ಎಲ್.ಬಸವರಾಜು ಅವರ ಆದಿಪುರಾಣದ ಪರಿಷ್ಕರಣದಿಂದಾಗಿ ಆದಿಪುರಾಣದ ಪಾಠ ಚರ್ಚೆಗಳಿಗೆ ಹೊಸದೊಂದು ಅಧ್ಯಾಯವನ್ನು ತೆರೆದಂತಾಗಿದೆಯೆಂದು ಹೇಳಬಹುದು. ಈ ಪರಿಷ್ಕರಣದಲ್ಲಿ ಹಲವೆಡೆ ಸ್ವೀಕೃತ ಪಾಠಗಳಿಗೆ ಟಿಪ್ಪಣಿಗಳನ್ನು ಬರೆಯುವಲ್ಲಿ ಕೆಲವು ಪಾಠ ಸಂಬಂಧಿಯಾದ ಚರ್ಚೆಗಳಿರುವುದನ್ನು ಗಮನಿಸಬಹುದು. ಅಂಥ ಕೆಲವು ನಿದರ್ಶನಗಳನ್ನಿಲ್ಲಿ ಗಮನಿಸಬಹುದು :—

(2—20) "ತಬ್ಬಿಯಿಪ್ಪಕೊಂಡಮ್ಮ ನೀಂ ಮು ಮ್ಮ (=ಮರ್ಮ?) ನೆಯಿಪ್ಪೆ ..........." ಎಂಬಲ್ಲಿ 'ಮುಮ್ಮ (= ಮರ್ಮ?)' ಪಾಠವನ್ನು ಕುರಿತು : ~~[illegible]~~

"ಎಲ್ಲ ಕಡೆಯಲೂ 'ಮುಮ್ಮ' ಎಂಬ ರೂಪವೇ ದೊರೆಯುವುದು. ಅರ್ಕಾವತ್ತು ಮತ್ತು ಮೂವತ್ತು ಎರಡೂ ಸದೃಶವಾಗಿ ಕಾಣುವುದರಿಂದ ಲಿಪಿಕಾರರಿಗೆ ಮರ್ಮ ಎಂಬ ರೂಪ ಗುರುತಿಸಲಾರದೇ ಹೋಗಿದೆ. ಜಿನವಲ್ಲಭನ ಶಾಸನದಲ್ಲಿ ಮರ್ಮಳ್ ಎಂಬ ಪದ ಬಳಕೆಯಾಗಿರುವುದನ್ನು ಇಲ್ಲಿ ನೆನೆಯಬೇಕು. 'ಮರ್ಮ' ಎಂದರೆ ಮೊಮ್ಮಗ ...........".

(2—45) "........... ಕೂಡೆ ಜೋಲಂ ನಡಿಂದೂರ್ಣಲಳ್ಳವಿಳ್ಳ ತನಮಂ ..........." ಎಂಬಲ್ಲಿ 'ಲಳ್ಳ ವಿಳ್ಳತನ' ಎಂಬುದಕ್ಕೆ

'ಅಳ್ಳಜೊಳ್ಳತನ' ಎಂದು ದೊರೆಯುವ ಪಾಠಾಂತರವನ್ನು ಕುರಿತು :

"ರನ್ನನು 'ಅಳ್ಳಜೊಳ್ಳಯ' ಎಂಬಂತಹ ಪದವನ್ನು (ಅಜಿತ ಪುರಾಣ 2–83) ಬಳಸಿರುವನಾದರೂ ಆದಾಗಲಿ, 'ಅಳ್ಳಜೊಳ್ಳತನ' ಎಂಬ ಅದರ ರೂಪಾಂತರವಾಗಲಿ ಮತ್ತೆಲ್ಲಿಯೂ ಪ್ರಯೋಗವಾದಂತೆ ಕಾಣದು. ಮತ್ತು ಪಂಪನು ತನ್ನ ಆದಿಪುರಾಣದಲ್ಲಿ ಇತರೆಡೆ ಮತ್ತು ಪಂಪ ಭಾರತದಲ್ಲಿ ಬಳಸಿರುವುದು 'ಅಳ್ಳವಿಳ್ಳ' ಯನ್ನೇ, ಹೊರತು 'ಅಳ್ಳಜೊಳ್ಳಯನ್ನಲ್ಲ'" ಎಂದು ಹೇಳಿ ಆ ನಿದರ್ಶನಗಳನ್ನು ನೀಡಿದ್ದಾರೆ.

(14–16) "......... ಬಾಳ್ವೆಯ ಬಗೆಯೆಂಬಳಿ ಮದದಿಂ" ಎಂಬಲ್ಲಿ ಎಸ್.ಜಿ.ಎಸ್. ಮತ್ತು ಕುಂದಣಗಾರರ ಪರಿಷ್ಕರಣಗಳಲ್ಲಿ 'ಬಾಳ್' ಎಂಬ ಪಾಠವಿರುವುದನ್ನು ಕುರಿತು :

"......... 'ಬಾಳ್' ಎಂದಿರುವುದು ತಪ್ಪು, ನೋಡಿ : ಬಾಳೆಂದು ಜೀವನಾರ್ಥದೊಳಂ ಬಳಂ; ನಾಪಿದವಾಳ್, ಕೂರ್ವಾಳ್, ಹರಗುವಾಳ್, ಬಾಳ್ ಎಂಬಲ್ಲಿ ಕುಳಂ (ಕೇಶಿರಾಜ) ಬಾಳ್ ಜೀವನೇ (ಕೇಶಿರಾಜ) ಬಾಳ್ಕಂ – ಬಳ್ಕಂ, ಬಾಳ್ಕೆ – ಬಳ್ಕೆ, ಬಾಳ್ವುದು – ಬಾಳ್ವುದು (ಭಟ್ಟಾಕಳಂಕ) ಬಾಳ್ವಂ (ಭಟ್ಟಾಕಳಂಕ)".

ಈ ಮೇಲೆ ಸೂಚಿಸಿದುವು ಸದ್ಯಕ್ಕೆ ತೋರಿಸಬಹುದಾದ ನಿದರ್ಶನಗಳು ಮಾತ್ರ.[86] ಇಂಥ ಚರ್ಚೆಗಳು ಕೃತಿಯುದ್ದಕ್ಕೂ ಟಿಪ್ಪಣಿಗಳ ರೂಪದಲ್ಲಿ, ವಿವರಗಳ

---

86. ಇಲ್ಲಿ ಚರ್ಚಿತವಾದ ಮೂರು ಪಾಠಗಳೂ ಎಸ್.ಜಿ.ಎಸ್. ಮತ್ತು ಕುಂದಣಗಾರರ ಪರಿಷ್ಕರಣಗಳಲ್ಲಿ ಅನುಕ್ರಮವಾಗಿ 'ಮುಮ್ಮ', 'ಅಳ್ಳ ಜೊಳ್ಳತನ', 'ಬಾಳ್' ಎಂದು ಸ್ವೀಕೃತವಾಗಿವೆ.

ರೂಪದಲ್ಲಿ ಹರಡಿಕೊಂಡಿವೆ. ಸಾಮಾನ್ಯವಾಗಿ ಇಂಥ ಚರ್ಚೆಗಳಿಗೆ ಎಲ್. ಬಸವರಾಜು ಅವರು ಹಲವು ಪೋಷಕ ನಿದರ್ಶನಗಳನ್ನು ತೋರಿಸುತ್ತಾರೆ.

ಬಸವರಾಜು ಅವರ ಪರಿಷ್ಕರಣದ ಪ್ರಕಟಣೆಗೆ ಮುನ್ನವೂ ಕೆಲವೇ ಚರ್ಚೆಗಳು ಆದಿಪುರಾಣದ ಪಾಠಗಳನ್ನು ಕುರಿತಂತೆ ನಡೆದಿವೆ. ಡಿ.ಎಲ್.ಎನ್. ತಮ್ಮ ಗ್ರಂಥ ಸಂಪಾದನೆಯಲ್ಲಿ ಇಂಥ ಒಂದೆರಡು ಚರ್ಚೆಗಳನ್ನು ನಡೆಸಿದ್ದಾರೆ. ಅವುಗಳಲ್ಲಿ ಒಂದನ್ನು ಇಲ್ಲಿ ಗಮನಿಸಬಹುದು. ಆದಿಪುರಾಣದ ಒಂದು ಪದ್ಯದ ಪಾಠವನ್ನು ಡಿ.ಎಲ್.ಎನ್. ಪರಿಷ್ಕರಿಸಿದ್ದಾರೆ.[87] ಪದ್ಯ ಹೀಗಿದೆ (ಎಸ್.ಜಿ.ಎನ್., ಕುಂದಣಗಾರ ಪರಿಷ್ಕರಣಗಳಲ್ಲಿ) :

"ನಯಮುಪೊಸ್ವದೆ ಸೇವಕ ವೃ
ತ್ತಿಯೆದಲ ನಮಗೆಳೆವ ತೋಟೆಯು ನಿದಿರಿಸುವುದೆ
ರ್ಲ್ಲಯ ಗಾಂಪು ಚಕ್ರವರ್ತಿಯೊ
ಳಯಶಂ ನಮಗುಬ್ಬದು ಬೇಗಮೆ ಬಗದೊಡಟ್ಟುಗುಂ"

(12–108)

ಎಸ್.ಜಿ.ಎನ್. ಪರಿಷ್ಕರಣದಲ್ಲಿ ಪಾಠಾಂತರಗಳಿಲ್ಲವೆನ್ನುವ ಡಿ.ಎಲ್.ಎನ್. ಕುಂದಣಗಾರರ ಪರಿಷ್ಕರಣದಲ್ಲಿ ಪಾಠಾಂತರಗಳಿರುವುದನ್ನು ಪ್ರಸ್ತಾಪಿಸಿದ್ದಾರೆ : ಗೆರೆಯೆಳೆದ ಪಾಠಗಳಿಗೆ ಅನುಕ್ರಮವಾಗಿ 'ಚೇತನ' 'ನಿಮಗಂ ದೇವ' 'ನಂ' 'ಗುವುದು'. ಮೊದಲ ಸಾಲಿನ 'ಸೇವಕ'ಕ್ಕಿರುವ ಪಾಠಾಂತರವನ್ನು ನಿರಾಕರಿಸಿ, ಜಿನಸೇನನ ಪ್ರಯೋಗದ ಆಧಾರದ ಮೇಲೆ ಅದನ್ನು 'ವೈತಸ'ವೆಂದು ತಿದ್ದಿ "ಇದಕ್ಕೆ ಅರ್ಥ ನೀರಲ್ಲಿ ಬೆಳೆಯುವ ಒಂದು ಬಗೆಯ ಜೊಂಡು ಹುಲ್ಲು ಎಂದು.

87. ನರಸಿಂಹಾಚಾರ್ ಡಿ.ಎಲ್., ಕನ್ನಡ ಗ್ರಂಥ ಸಂಪಾದನೆ, ಮೈಸೂರು, 1964. ಪು: 191–192.

ವೈತನ ವ್ಯಕ್ತಿ ಎಂದರೆ ಅದರ ಸ್ಥಿತಿ, ವರ್ತನೆ. ನದಿಯಲ್ಲಿ ಪ್ರವಾಹ ಬಂದಾಗ ಅದನ್ನು ಎದುರಿಸುವ ಮರಗಳು ಕೊಚ್ಚಿ ಹೋಗುತ್ತವೆ; ತಲೆ ಬಾಗಿ ಜೊಂಡು ಸ್ಥಿರವಾಗಿರುತ್ತದೆ" ಎಂದು ವಿವರಿಸಿದ್ದಾರೆ. ಎರಡು, ನಾಲ್ಕನೆಯ ಪಾಠಗಳನ್ನು ತಿದ್ದಿ ಮೂರನೆಯ ಪಾಠಕ್ಕೆ ಪಾಠಾಂತರವನ್ನು ಸ್ವೀಕರಿಸಿದ್ದಾರೆ. ಡಿ.ಎಲ್.ಎನ್. ಮೇಲಿನ ಪದ್ಯದ ಪಾಠಗಳಿಗೆ (ಗೆರೆಯೆಳೆದ) ನಿಯೋಜಿಸಿದ ಪಾಠಗಳು ಅನುಕ್ರಮವಾಗಿ 'ವೈತನ', 'ದಲ ನವುಗೆಯ್ವ', 'ಸಂ', ಮತ್ತು 'ಗುವುದುಯುಗುಂ'. ಈ ತಿದ್ದುಪಡಿಯು ಬಹುಕಾಲದ ನಂತರ ಬಂದ ಎಲ್.ಬಸವರಾಜು ಪರಿಷ್ಕರಣದಲ್ಲಿ ಡಿ.ಎಲ್.ಎನ್. ಅವರ ನಿಯೋಜಿತ ಪಾಠಗಳು ಸಮರ್ಥಿತವಾಗಿವೆ.[88] ಇಂಥ ಇನ್ನೊಂದೆರಡು ಚರ್ಚೆಗಳು ಕನ್ನಡ ಗ್ರಂಥ ಸಂಪಾದನೆಯಲ್ಲಿ ಕಾಣದೊರೆಯುತ್ತವೆ.

ಆದಿಪುರಾಣದ ಒಂದು ಪ್ರಸಿದ್ಧ ಪದ್ಯ ಬಸವರಾಜು ಅವರ ಪರಿಷ್ಕರಣದಲ್ಲಿ ಹೀಗಿದೆ : (14—128)

"ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಲವಿಲ್ಲ ಭುಜ ಖಡ್ಗ ಮಂಡಲೋ
ತ್ಪಲವನ ವಿಭ್ರಮ ಭ್ರಮರಿಯಪ್ಪ ಚಲಾಚಲ ರಾಜ್ಯಲಕ್ಷ್ಮಿ! ಭೂ
ಲಲನೆಯನಯ್ಯನಿತ್ತುದುಮನಾಂ ನಿನಗಿತ್ತನಿ(ನ,ಇ) ದೇವದಣ್ಣ ನಿ
ನ್ನೊಳಿರದ ಲತಾಂಗಿಗಂ ಧರೆಗಮಾನೊಂದಿದಂದು ನೆಗಳ್ಚೆ ಮಾಸದೇ"

---

88. ನೋಡಿ: ಆದಿಪುರಾಣ (ಸಂ) ಎಲ್.ಬಸವರಾಜು, 12—84 ಡಿ.ಎಲ್.ಎನ್. ಅವರ ಪಾಠಕ್ಕಿಂತ ಬಸವರಾಜು ಅವರ ಪರಿಷ್ಕರಣದ ಪಾಠ ಒಂದೇ ಒಂದು ಭಿನ್ನಾಂಶವನ್ನು ಒಳಗೊಂಡಿದೆ : ~~ಮೂರನೆಯ~~ ಎರಡ ಸಾಲಿನ ಕೊನೆಯಲ್ಲಿ 'ತೊಜೆಯು ನಿದಿರಿಸುವುದದೆ' ಎಂಬುದರ ಬದಲು 'ತೊಳೆಯು ನಿದಿರ್ಲಿಸುವುದೆ' ಎಂದಿದೆ.

ಆದಿಪುರಾಣದ ಪರಿಷ್ಕರಣಗಳನ್ನು ಕುರಿತ ಚರ್ಚೆಯ ಸಂದರ್ಭದಲ್ಲಿ ಎಲ್. ಬಸವರಾಜು ಅವರ ಪರಿಷ್ಕರಣದ ಈ ಪದ್ಯದ ಪಾಠಗಳು ಹಿಂದಿನೆರಡು ಪರಿಷ್ಕರಣಗಳ ಪಾಠಗಳಿಗಿಂತ ಬೇರೆಯಾಗಿವೆ ಎಂಬುದನ್ನು ಹೇಳಲಾಗಿದೆ. ಈ ಬೇರೆಯಾದ ಪಾಠಗಳೆಂದರೆ : 'ನಿಶ್ಚಲವತ್', 'ಚಲಾಚಲ', 'ಭೂಲಲನೆ', 'ನಿನ್ನೊಂದ', 'ಧರೆಗಮಾನೊಂದಂದು' — ಇವುಗಳು. ಈ ಹಿಂದಿನ ಪರಿಷ್ಕರಣಗಳಲ್ಲಿ 'ನಿಶ್ಚಳವತ್' (ಕುಂದಣಗಾರ : ನಿಶ್ಚಲ), 'ಮನೋಹರಿ', 'ಭೂವಲಯ', 'ನೀನೊಂದ', 'ಧರೆಗಮಾಟಿಸಿದಂದು' ಎಂಬ ಪಾಠಗಳೇ ಇದ್ದು ಬಸವರಾಜು ಅವರ ಪರಿಷ್ಕರಣಕ್ಕೆ ಮುನ್ನ ಎಲ್ಲೆಡೆಯೂ ಉದ್ಧೃತವಾದುವು ಈ ಪಾಠಗಳೇ. ಆದರೆ ಕೆ.ವಿ. ನಾರಾಯಣ ಅವರು ಮಾತ್ರ ತಮ್ಮ ಚರ್ಚೆಯಲ್ಲಿ[89] ಈ ಪದ್ಯದ ಕೊನೆಯ ಸಾಲಿನಲ್ಲಿ 'ಧರೆಗಮಾಟಿಸಿದೊಡಂ' ಎಂಬ ಪಾಠವನ್ನಿರಿಸಿಕೊಂಡಿದ್ದಾರೆ. ಆದರೆ ಈ ಪಾಠವನ್ನು ಅವರು ಎಲ್ಲಿಂದ ಪಡೆದರೆಂದು ತಿಳಿಯದು. ಪಾಠವೇನೋ ಯುಕ್ತವೆಂದೇ ತೋರುತ್ತದೆಯಾದರೂ ಯಾವ ಪರಿಷ್ಕರಣದಲ್ಲೂ ಈ ಪಾಠ ದೊರೆಯದು. ಜಿ.ಎಚ್. ನಾಯಕರು ಈ ಪಾಠವನ್ನು ಒಪ್ಪಿದರೆ 'ಛಂದೋನಿಯಮಕ್ಕೆ ಭಂಗವುಂಟಾಗುತ್ತದೆಯೆಂದು' ಕೈಬಿಟ್ಟಿದ್ದಾರೆ.[90] ಈಚೆಗೆ ಬಂದ ಒಂದು ಚರ್ಚೆಯಲ್ಲಿ ಬಸವರಾಜು ಅವರ ಪರಿಷ್ಕರಣದ ಪಾಠಗಳನ್ನು ಒಪ್ಪಿ ಸಮರ್ಥಿಸಲಾಗಿದೆ.[91] ಹಿಂದಿನ ಅಧ್ಯಾಯದಲ್ಲೇ ಪ್ರಸ್ತಾಪಿಸಿದಂತೆ ಈ

---

89. ಆದಿಪುರಾಣದ ಒಂದು ವೃತ್ತ, ಸಾಧನೆ, 1—4, 1972. ಪು: 178—181.

90. ನೋಡಿ : ನಾಯಕ ಜಿ.ಎಚ್., ಪಂಪನ ಅಭಿವ್ಯಕ್ತಿ, ಪಂಪ : ಒಂದು ಅಧ್ಯಯನ, (ಸಂ.) ಜಿ.ಎಸ್. ಶಿವರುದ್ರಪ್ಪ, ಬೆಂ.ವಿ.ವಿ., 1974. ಪು : 223.

91. ನೋಡಿ : ಮ.ನ.ಜ., ಪಂಪನ ಒಂದು ಪದ್ಯ, ಪ್ರತಿಪಾದನೆ, ಮೈಸೂರು, 1983. ಪು : 55—70.

ಪದ್ಯದಲ್ಲಿ ಹೆಣ್ಣಿನ ಪ್ರತಿಮೆ ಮತ್ತು ವ್ಯಂಗ್ಯಾರ್ಥಗಳು ಹಂತ ಹಂತವಾಗಿ ಬೆಳೆಯುತ್ತಾ ಹೋಗುವುದನ್ನು ಗಮನಿಸಿದರೆ, ಈ ಪಾಠಗಳು ಸಮರ್ಥನೀಯವೆಂದು ತೋರುತ್ತವೆ. 'ವಿಭ್ರಮ ಭ್ರಮರಿಯಪ್ಪ ಚಲಾಚಲ ರಾಜಲಕ್ಷ್ಮಿ'ಗೆ (ಭ್ರಮೆ ಭ್ರಮೆ ಎಂದು ತೋರುವವಳು) ಅವಳ ಚಂಚಲ ಸ್ವರೂಪದ ವಿಶೇಷಣಗಳನ್ನೆಲ್ಲ ಹೇಳಿ ಅವಳನ್ನು ನಿಶ್ಚಲವಾಗಿ ನೆಲಸಲು ಆಶಿಸುವುದು ಸ್ಪಷ್ಟವಾಗಿ ವ್ಯಂಗ್ಯವೇ. ಮುಂದೆ ಭೂಮಿಯನ್ನು 'ಲಲನೆ' ಎಂದು ಕರೆದು – ಅದು ಅಯ್ಯ ಕೊಟ್ಟುದುಂ, ನಾನು ನಿನಗೆ ಕೊಡುತ್ತಿದ್ದೇನೆ (ಅದು ನನ್ನದೂ ಅಲ್ಲ, ನಿನ್ನದೂ ಅಲ್ಲ ಎಂದಿರಬಹುದು) ಎಂಬಲ್ಲಿ ಮತ್ತು 'ನಿನ್ನೊಲಿದ ಲತಾಂಗಿಗಂ ಧರೆಗಂ ಅನ ಒಲಿದಂದು' ಎಂಬಲ್ಲಿಯೂ 'ಹೆಣ್ಣು' ಎಂದು ಪ್ರತಿಮೆಯಾಗಿ ಬೆಳೆದಿರುವುದನ್ನೂ, ವ್ಯಂಗ್ಯಾರ್ಥದ ಛಾಯೆಯನ್ನೂ ಗುರುತಿಸಬಹುದು.

ಇಷ್ಟು ಹೊರತು ಆದಿಪುರಾಣದ ಪಾಠ ಸಮಸ್ಯೆಗಳನ್ನು ಕುರಿತ ಚರ್ಚೆಗಳು ನಡೆಯಲಿಲ್ಲವೆಂದು ತೋರುತ್ತದೆ. ಹದಿನಾರನೆಯ ಆಶ್ವಾಸದ 35 ಮತ್ತು 36 ನೆಯ (ಎಸ್.ಜಿ.ಎಸ್. ಮತ್ತು ಕುಂದಣಗಾರರ ಪರಿಷ್ಕರಣಗಳಲ್ಲಿ) ಎರಡು ಪದ್ಯಗಳನ್ನು ಕುರಿತು ಕೆಲವು ಚರ್ಚೆಗಳು ನಡೆದಿವೆಯಾದರೂ ಅವು ಕೃತಿ ಕೇಂದ್ರಿತವಲ್ಲದ ವಿವರಗಳಲ್ಲಿ ಆಸಕ್ತಿ ತಳೆಯುವುದರಲ್ಲೇ ಪರ್ಯವಸಾಯಿಯಾಗಿವೆ.[92] ಜೊತೆಗೆ

---

92. ನೋಡಿ : ಸೀತಾರಾಮ ಜಾಗಿರದಾರ, ಪಂಪ ಕವಿಯ ಇತಿವೃತ್ತದ ವಿಚಾರ (2), ಕ.ಸಾ.ಪ.ಪ., 56–1 1971. ಪು : 13–16; ಆದಿಪುರಾಣ ಮತ್ತು ಶುಭನಂದಿ, ಅದೇ, 58–1 1973. ಪು : 74–78; ಅ.ನೇ.ಉಪಾಧ್ಯೆ, ಆದಿಪುರಾಣದ ಎರಡು ಶ್ಲೋಕಗಳ ಅರ್ಥ, ಅದೇ, 56–2 1971. ಪು : 1–4; ಆದಿಪುರಾಣದ ಎರಡು ಪದ್ಯಗಳ ಅರ್ಥದ ಔಚಿತ್ಯ, ಅದೇ, 58–1. 1973. ಪು : 67–73; ಕಿ.ಬ.ದೇಸಾಯಿ, ಆದಿಪುರಾಣ ಮತ್ತು ಶುಭನಂದಿ, ಅದೇ, 57–1, 1972. ಪು : 36–41; ಎಂ.ಡಿ.ವಸಂತರಾಜ್, ಆದಿಪುರಾಣದ ಎರಡು ಪದ್ಯಗಳು, ಅದೇ, 58–1 1973. ಪು : 63–66.

ಎಲ್. ಬಸವರಾಜು ಅವರು ಪ್ರಕ್ಷಿಪ್ತವೆಂದು ಗುರುತಿಸುವ ಭಾಗದಲ್ಲಿ ಸೇರಿವೆ. ಹೀಗಾಗಿ ಅವುಗಳನ್ನು ಕುರಿತು ಪ್ರತ್ಯೇಕ ಪ್ರಸ್ತಾಪದ ಅಗತ್ಯವಿಲ್ಲವೆಂದು ತೋರುತ್ತದೆ.

### 3.4.1.4 ಪಾಠ ಚರ್ಚೆಗಳ ಮುಂದಿನ ಸಾಧ್ಯತೆಗಳು

ಇದುವರೆಗೆ ಪಂಪನ ಎರಡೂ ಕಾವ್ಯಗಳ ಪಾಠ ಸಂಬಂಧೀ ಅಧ್ಯಯನಗಳನ್ನು ಗಮನಿಸಿದ್ದಾಗಿದೆ. ಇಂಥ ಅಧ್ಯಯನಗಳು ಪಂಪ ಭಾರತಕ್ಕೆ ಸಂಬಂಧಿಸಿದಂತೆ ವಿಪುಲವಾಗಿ ನಡೆದಿವೆಯೆಂದು ಸಹಜವಾಗಿಯೇ ಅನ್ನಿಸಿದರೂ, ಆ ಅನ್ನಿಸಿಕೆ ಆದಿಪುರಾಣದ ಪಾಠ ಚರ್ಚೆಗಳ ಪ್ರಮಾಣದೊಂದಿಗೆ ಹೋಲಿಸಿದ ಪರಿಣಾಮವಷ್ಟೆ. ಹಾಗೆ ನೋಡಿದರೆ ಈಗ ನಡೆದ ಕೆಲಸ ಏನೇನೂ ಇಲ್ಲ. ಇದಲ್ಲದೆ ಹಿಂದೆ ಸೂಚಿಸಿದಂತೆ ಪಂಪನ ಕಾವ್ಯಗಳ ಕೆಲವು ಪದ್ಯಗಳು ಸೂಕ್ತಿ ಸುಧಾರ್ಣವ, ಕಾವ್ಯಸಾರದಂಥ ಸಂಕಲನ ಕೃತಿಗಳಲ್ಲಿಯೂ ಇತರೆಡೆಯೂ ದೊರೆಯುತ್ತವೆ. ಇಲ್ಲೆಲ್ಲ ಕೆಲವು ವ್ಯತ್ಯಸ್ತ ಪಾಠಗಳು ದೊರೆಯುತ್ತವೆಯಲ್ಲದೆ, ಅಲ್ಲಿನ ಪಾಠಗಳಿಗೂ ಕೆಲವು ಪಾಠಾಂತರಗಳು ದೊರೆಯುತ್ತಿವೆ. ಇವೆಲ್ಲ ಕೆಲವು ವಿಶಿಷ್ಟ ಪ್ರಶ್ನೆಗಳನ್ನು ಎತ್ತುತ್ತವೆ. ಇಂಥ ಮೂಲಗಳನ್ನೆಲ್ಲ ಸಾಧ್ಯವಿರುವಷ್ಟು ಮಟ್ಟಿಗೆ ಮುಂದಿನ ಪಾಠ ಚರ್ಚೆಗಳಲ್ಲಿ ಒಳಗು ಮಾಡಿಕೊಳ್ಳಲು ಅವಕಾಶವಿದೆ, ಮತ್ತು ಅಂಥ ಅಗತ್ಯವಿದೆ. ಜೊತೆಗೆ, ಇಂದು ನಮಗೆ ಪಾಠಾಂತರಗಳು ಬೇಕಾಗಿರುವುದು ಕೇವಲ ಕವಿಯ 'ಮೂಲ ಪಾಠ' ದ ಶೋಧನೆಗೆ ಮಾತ್ರ ಅಲ್ಲ, (ಇಷ್ಟಕ್ಕೂ ಕವಿಯ ಮೂಲ ಪಾಠ ಎನ್ನುವುದು — ಸ್ವಹಸ್ತಪ್ರತಿ ದೊರಕಿಲ್ಲದಾಗ — ಒಂದು ಆದರ್ಶವೇ ಆಗಿ ಉಳಿಯಬಹುದು); ಕವಿಯ ಕಾವ್ಯವನ್ನು ಕುರಿತ ಕಾಲ ಕಾಲದ ಪ್ರತಿಕ್ರಿಯೆಗಳನ್ನು ಕೂಡ ತಿಳಿಯಲು ಬೇಕಾಗಿವೆ.

## 3.5 ಪುನಾರಚನೆಯ ಸ್ವರೂಪದ ಇತರ ಅಧ್ಯಯನಗಳು

ಪಂಪ ಭಾರತ ಮತ್ತು ಪಂಪನ ಕಾಲದ ಶಾಸನಗಳಲ್ಲಿರುವ ಸಾಮ್ಯತೆಗಳು ಕೆಲವು ಅಧ್ಯಯನಗಳಿಗೆ ವಸ್ತುವಾಗಿವೆ. ಇವು ಕೂಡ ಒಂದು ರೀತಿಯಲ್ಲಿ ಪಂಪ ಕಾಲೀನ ಬದುಕಿನ ಕೆಲ ಸಂಗತಿಗಳ ಪುನಾರಚನೆಯ ಕಾಳಜಿಯಿಂದ ಕೂಡಿವೆ. ಈ ಸಂಬಂಧದಲ್ಲಿ ಗಮನಿಸಬಹುದಾದ ಒಂದು ಮುಖ್ಯ ಪ್ರಯತ್ನ ಎಂ.ಚಿದಾನಂದಮೂರ್ತಿಯವರದು. ಅವರು ತಮ್ಮ 'ಪಂಪ ಕವಿ ಮತ್ತು ಮೌಲ್ಯ ಪ್ರಸಾರ' ಎಂಬ ಬರೆಹದಲ್ಲಿ ಎರಡು ಹಂತಗಳಲ್ಲಿ ತಮ್ಮ ಚರ್ಚೆಯನ್ನು ಬೆಳೆಸಿದ್ದಾರೆ.[93] ಮೊದಲ ಹಂತದಲ್ಲಿ ಪಂಪ ಪೂರ್ವಕಾಲದ ಶಾಸನಗಳಲ್ಲಿನ ವಿವರಗಳು ಮತ್ತು ಪಂಪ ಭಾರತದ ವಿವರಗಳಲ್ಲಿರುವ ಸಾಮ್ಯತೆಯ ಆಧಾರದ ಮೇಲೆ ಪಂಪನ ಮೇಲೆ ಆಗಿರಬಹುದಾದ 'ಮೌಲ್ಯಗಳ ಆವರಣ'ದ ಪ್ರಭಾವವನ್ನೂ ಎರಡನೆಯ ಹಂತದಲ್ಲಿ ಪಂಪಾನಂತರದ ಶಾಸನಗಳು ಮತ್ತು ಪಂಪ ಭಾರತದ ವಿವರಗಳ ಹೋಲಿಕೆಯ ಆಧಾರದ ಮೇಲೆ ಪಂಪನ ನಂತರದ ಬದುಕಿನಲ್ಲಿ ಆಗಿರಬಹುದಾದ ಪಂಪ ಭಾರತದ ಪ್ರಭಾವವನ್ನೂ ಗುರುತಿಸಿದ್ದಾರೆ. ಒಂದರ್ಥದಲ್ಲಿ ಈ ಅಧ್ಯಯನದ ಮೂಲೋದ್ದೇಶ ಪಂಪನ ಹಿನ್ನೆಲೆಯಾಗಿದ್ದ ಜೀವನದ ಪುನಾರಚನೆಯೆ. ಹೀಗಾಗಿ ಆ ಉದ್ದೇಶಕ್ಕೆ ಪಂಪ ಭಾರತ ಒಂದು ಸಾಧನವಾಗಿ ಬಳಕೆಯಾಗಿದೆಯೆಂದು ತೋರುತ್ತದೆ. ಈ ಸಂಬಂಧದ ವಿವರಗಳು ಮುಂದೆ ಬೇರೊಂದು ಅಧ್ಯಾಯದಲ್ಲಿ ಬರಲಿರುವುದರಿಂದ ಇಲ್ಲಿ ಇಷ್ಟನ್ನು ಮಾತ್ರ ಹೇಳಬಹುದೆಂದು ತೋರುತ್ತದೆ. ಇದೇ ರೀತಿ ಕರೀಂ ನಗರ ಶಾಸನದಲ್ಲಿ

---

93. ಚಿದಾನಂದಮೂರ್ತಿ ಎಂ., 'ಪಂಪ ಕವಿ ಮತ್ತು ಮೌಲ್ಯ ಪ್ರಸಾರ', ಸಂಶೋಧನ ತರಂಗ–1, ಮೈಸೂರು, 1966. ಪು: 1–15.

ಪಂಪ ಭಾರತದ ಕೆಲವು ಪದ್ಯಗಳು (ಅರಿಕೇಸರಿಯ ವಂಶಾವಳಿಯ ವಿವರಗಳುಳ್ಳ) ದೊರೆಯುತ್ತಿದ್ದು, ಈ ಕುರಿತು ಒಂದೆರಡು ಅಧ್ಯಯನಗಳು ನಡೆದಿವೆ. ಇಲ್ಲಿ ಆ ಶಾಸನ ಪಾಠವನ್ನು ಪರಿಷ್ಕರಿಸುವುದರ ಜೊತೆಗೆ ಕ್ರಿ.ಶ. 946 ರ ಶಾಸನದ ಆಧಾರದಿಂದ ಅರಿಕೇಸರಿಯ ರಾಜ್ಯದ ಸೀಮೆ, ಪಂಪನ ಕಾವ್ಯಗಳಿಗೆ ಶಾಸನ ಮರ್ಯಾದೆ ಲಭಿಸಿರುವುದು ಇತ್ಯಾದಿಗಳನ್ನು ಹೇಳಲು ಪ್ರಯತ್ನಿಸಲಾಗಿದೆ.[94]

ಈ ಅಧ್ಯಾಯದ ಪ್ರಾರಂಭದಲ್ಲೇ ಸೂಚಿಸಿದಂತೆ, ಸಂಶೋಧನೆ ಇಂದು ಬಹುಮುಖ ಆಯಾಮವನ್ನು ಪಡೆದು ಬೆಳೆಯುತ್ತಿದೆ. ಪುನಾರಚನೆಯ ಸ್ವರೂಪವು ಮಾತ್ರ ಸಂಶೋಧನೆಯಲ್ಲ. ಹೀಗಾಗಿ 'ಸಂಶೋಧನೆ' ಎಂದು ಕರೆಯಬಹುದಾದ ಹಲವು ಅಧ್ಯಯನಗಳನ್ನು ಗುರುತಿಸಬಹುದಾದರೂ ಅವನ್ನೆಲ್ಲ ಇಲ್ಲಿ ಪ್ರಸ್ತಾಪಿಸಿಲ್ಲ. ನಿರ್ದಿಷ್ಟ ಬಗೆಯ ಸಂಶೋಧನ ಬರಹಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಿದೆ. ಇದರ ಕಾರಣವನ್ನು ಈ ಅಧ್ಯಾಯದ ಮೊದಲಲ್ಲಿ ಸೂಚಿಸಲಾಗಿದೆ.

---

94. ನೋಡಿ : ಕಲಬುರ್ಗಿ ಎಂ.ಎಂ. ಮತ್ತು ಪರಬ್ರಹ್ಮ ಶಾಸ್ತ್ರಿ ಪಿ.ವಿ., ಕರೀಂ ನಗರ ಶಾಸನದಲ್ಲಿ ಪಂಪ ಭಾರತದ ಪದ್ಯಗಳು, ಕ.ಭಾ., 7–3. 1975. ಪು : 117–125; ಸೀತಾರಾಮ ಜಾಗಿರದಾರ, ಅದೇ, 8–2. 1975. ಪು : 131–141; ಅನುಬಂಧ, ಕ.ಸಾ.ಪ.ಪ., 60–2. 1975. ಪು : 50–57.

# ಅಧ್ಯಾಯ : ನಾಲ್ಕು

## ಪಂಪನ ಕಾವ್ಯಗಳ ಭಾಷಿಕ ಅಧ್ಯಯನಗಳು

ಇದುವರೆಗೆ ಪಂಪನನ್ನು ಕುರಿತಂತೆ ನಡೆದಿರುವ ಚರ್ಚೆ, ವಾಗ್ವಾದಗಳನ್ನು ಗಮನಿಸುವಾಗ ಪಂಪನ ಕಾವ್ಯ ಭಾಷೆಯ ಸಂಬಂಧದ ಹಲವು ಪ್ರಾಸಂಗಿಕವಾದ ಪ್ರಸ್ತಾಪಗಳನ್ನು ಕಾಣಬಹುದಾಗಿದೆ. ಈ ಪ್ರಾಸಂಗಿಕವಾದ ಪ್ರಸ್ತಾಪಗಳು ಬಹುಮಟ್ಟಿಗೆ ಪಂಪನನ್ನು, ಪಂಪನ ಕಾವ್ಯ ಭಾಷೆಯನ್ನು ಕುರಿತಂಥ ಪ್ರಶಂಸೆಯ ಮಾತುಗಳು ಮಾತ್ರ ಆಗಿದ್ದು, ಮತ್ತೆ ಮತ್ತೆ ಪುನರುಕ್ತವಾಗಿವೆ. ಆದರೆ ಪಂಪನ ಕಾವ್ಯಗಳ ಭಾಷೆಯನ್ನೇ ಪ್ರತ್ಯೇಕವಾಗಿ ಕುರಿತು ಚರ್ಚಿಸಿದ ಪ್ರಯತ್ನಗಳು ತೀರ ವಿರಳವಾಗಿವೆ. ಆದರೂ ಈ ವಿರಳ ಪ್ರಯತ್ನಗಳು ಒಂದಲ್ಲೊಂದು ಕಾರಣದಿಂದ ಗಮನಾರ್ಹವಾಗಿವೆಯೆಂಬುದು ಒಪ್ಪತಕ್ಕ ಸಂಗತಿಯಾಗಿದೆ. ನಮ್ಮ ಅಧ್ಯಯನದ ಪರಂಪರೆಯಲ್ಲಿ ಪಂಪನ ಕಾವ್ಯ ಭಾಷೆಯನ್ನು ಹೇಗೆ ಪರಿಭಾವಿಸುತ್ತ ಬರಲಾಗಿದೆಯೆಂಬುದನ್ನು ಈ ಅಧ್ಯಯನಗಳನ್ನು ಗಮನಿಸುವುದರಿಂದ ತಿಳಿಯಬಹುದಾಗಿದೆ. ಈ ಅಧ್ಯಯನಗಳನ್ನೇ ನೇರವಾಗಿ ಗಮನಿಸುವ ಮುನ್ನ ಇಲ್ಲಿಗೆ ಪೂರಕವಾಗಬಲ್ಲ ಕೆಲವು ವಿವರಗಳನ್ನು ಪ್ರಸ್ತಾಪಿಸುವ ಅಗತ್ಯವಿದೆಯೆಂದು ತೋರುತ್ತದೆ.

## 4.1 ಕಾವ್ಯ ಭಾಷೆ ಮತ್ತು ಕಾವ್ಯ ಭಾಷೆಯ ಅಧ್ಯಯನ

'ಕಾವ್ಯ ಭಾಷೆ' ಎಂಬ ಪರಿಭಾಷೆಯನ್ನು ಬಳಸುವಾಗ, ಮುಖ್ಯವಾಗಿ ಎರಡು ಅಂಶಗಳು ನಮಗೆ ಮನವರಿಕೆಯಾಗಿರಲು ಸಾಧ್ಯ. ಮೊದಲನೆಯದಾಗಿ, ಕಾವ್ಯವೂ ಸೇರಿದಂತೆ ಸಾಹಿತ್ಯದ ಭಾಷೆಯೆನ್ನುವುದು ದಿನ ನಿತ್ಯದ ಬಳಕೆಯ ಭಾಷೆಗಿಂತ ಭಿನ್ನವಾದುದು. ಎರಡನೆಯದಾಗಿ, ಸಾಹಿತ್ಯದ ಒಂದು ಪ್ರಭೇದವಾದ ಕಾವ್ಯದಲ್ಲಿ ಬಳಕೆಯಾಗುವ ಭಾಷೆ ಸಾಹಿತ್ಯದ ಇನ್ನಿತರ ಪ್ರಭೇದಗಳಲ್ಲಿ ಬಳಕೆಯಾಗುವ ಭಾಷೆಗಿಂತ ಭಿನ್ನವಾದುದು. ಎಂದರೆ, ಕಾವ್ಯ ಭಾಷೆ ಎನ್ನುವುದು ಭಾಷೆಯ ಒಂದು ವಿಶಿಷ್ಟ ರೂಪವೆಂದಾಯಿತು. ಎಂದ

ಮಾತ್ರಕ್ಕೆ ಒಂದು ಭಾಷೆಯಲ್ಲಿ ಹುಟ್ಟುವ ಕಾವ್ಯ ಕೃತಿಯಲ್ಲಿ ಬಳಕೆಯಾಗುವ ಭಾಷೆ ದಿನ ನಿತ್ಯದ ಬಳಕೆಯ ಭಾಷೆಗಿಂತ, ಶಿಷ್ಟ ಭಾಷೆಗಿಂತ ಸಂಪೂರ್ಣವಾಗಿ ಭಿನ್ನವಾದ ಅಪರಿಚಿತ ಭಾಷೆಯೇನೂ ಅಲ್ಲ ಎಂಬುದು ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆ. ಎಂದರೆ ಕಾವ್ಯವು ನಿರೀಕ್ಷಿಸುವ ಭಾಷೆ ವಿಶಿಷ್ಟ ಸಂವಹನದ ಉದ್ದೇಶವನ್ನು ಹೊಂದಿದ್ದು, ಭಾಷೆಯ ಬಳಕೆಯ ಸಾಧ್ಯತೆಗಳ ಫಲವಾಗಿ ಸಿದ್ಧವಾಗುವಂಥದು ಎಂದಾಯಿತು.

ಕಾವ್ಯವನ್ನಾಗಲಿ, ಸಾಹಿತ್ಯವನ್ನಾಗಲಿ ಭಾಷೆಯಲ್ಲಿ ಸಂಭವಿಸುತ್ತದೆಯೆಂಬ ಕಾರಣಕ್ಕಾಗಿ 'ಶಾಬ್ದಿಕ ಕಲೆ' ಎಂದು ಕರೆಯುವುದರ ಔಚಿತ್ಯ ಸರ್ವವಿದಿತ. ಕಾವ್ಯವನ್ನು 'ಶಾಬ್ದಿಕ ಕಲೆ' ಎಂದು ಕರೆಯುವ ಮಾತಿನಲ್ಲಿ ಅದು ಇನ್ನಿತರ ಕಲೆಗಳಿಗಿಂತ ಮುಖ್ಯವಾಗಿ ಯಾವುದರಲ್ಲಿ ಬೇರೆ ಎಂಬ ಅಂಶವೂ ಸೂಚಿತವಾಗಿದೆ. ಹೀಗೆ ಬೇರೆಯಾದದ್ದು ತನ್ನ ಮಾಧ್ಯಮವನ್ನಾಗಿ ಭಾಷೆಯನ್ನು ಆಶ್ರಯಿಸಿರುವುದರಿಂದ. ಈ ನೆಲೆಯಲ್ಲಿ ಶಿಲ್ಪಕಲೆಗೆ ಶಿಲ್ಪದಂತೆ, ಚಿತ್ರಕಲೆಗೆ ಬಣ್ಣದಂತೆ, ಸಾಹಿತ್ಯಕ್ಕೆ ಭಾಷೆ ಎಂಬಂಥ ಹೋಲಿಕೆಗಳು ನೆನಪಾಗಬಹುದು. 'ಮಾಧ್ಯಮ' ಎಂದಷ್ಟೇ ನೋಡುವಾಗ ಈ ಬಗೆಯ ಹೋಲಿಕೆಗಳು ಸರಿಯೆಂದು ತೋರುತ್ತವೆ. ಆದರೆ ಈ ಮಾಧ್ಯಮಗಳು ಬಳಕೆಯಾಗುವ ಸ್ವರೂಪ ಮತ್ತು ಇವುಗಳನ್ನು ಮಾಧ್ಯಮಗಳಾಗಿ ಅಧ್ಯಯನ ಮಾಡುವ ಕ್ರಮಗಳನ್ನು ಪರಿಶೀಲಿಸಿದರೆ, ಈ ಬಗೆಯ ಹೋಲಿಕೆಗಳ ಸಂಗತತೆಯನ್ನು ಕುರಿತು ತೀರ ಸಹಜವಾಗಿಯೇ ಕೆಲವು ಅನುಮಾನಗಳು ಹುಟ್ಟುತ್ತವೆ. 'ಮಾಧ್ಯಮ' ಎಂದಷ್ಟೇ ಗಣಿಸಿದಾಗಲೂ ಸ್ಪಷ್ಟವಾಗಿ ಅವುಗಳ ಸ್ವರೂಪ ಬೇರೆ ಬೇರೆಯಾಗಿಯೇ ಇದೆ. ಉದಾಹರಣೆಗೆ, ಶಿಲ್ಪಕಲೆಯ ಮಾಧ್ಯಮವಾದ ಶಿಲೆಯನ್ನು ಗಮನಿಸೋಣ. ಶಿಲೆ ಮೂಲತಃ ಪ್ರಾಕೃತಿಕವಾದ ಒಂದು ಭೌತ ವಸ್ತು. ಅದು ಭಾಷೆಯಂತೆ ಮಾನವ ನಿರ್ಮಿತವಲ್ಲ ಮತ್ತು ಸಂಸ್ಕೃತಿಯ ಒಂದು ಅಂಗವೂ ಅಲ್ಲ. ಬಳಕೆಯ ದೃಷ್ಟಿಯಿಂದ ನೋಡುವುದಾದರೆ ಲೇಖಕ ತನ್ನ ಮಾಧ್ಯಮವಾಗಿ ಭಾಷೆಯನ್ನು ಬಳಸುವುದಕ್ಕೂ ಶಿಲ್ಪಿ ತನ್ನ ಮಾಧ್ಯಮವಾಗಿ ಶಿಲೆಯನ್ನು ಬಳಸುವುದಕ್ಕೂ ಸಾಕಷ್ಟು ಭಿನ್ನತೆಯಿದೆ.

ಶಿಲ್ಪಿ ಶಿಲೆಯನ್ನು ಒಂದು ಸಿದ್ಧ ವಸ್ತುವಾಗಿ ಸ್ವೀಕರಿಸುತ್ತಾನೆ. ಭಾಷೆಯಾದರೆ ಒಂದು ಸಿದ್ಧ ವಸ್ತುವಿನಂತೆ ದೊರೆಯುವುದೂ ಇಲ್ಲ, ಹಾಗೆ ಬಳಸುವುದೂ ಸಾಧ್ಯವಿಲ್ಲ. ಒಂದು ಭಾಷಿಕ ಸಮುದಾಯದ ಒಬ್ಬ ಸದಸ್ಯನಾಗಿ ಕವಿಯೋ (ಲೇಖಕ) ಬಳಸುತ್ತಿರುವ ಭಾಷೆ, ಅವನ ಪರಿಸರದಲ್ಲಿ ಬಳಕೆಯಾಗುತ್ತಿರುವ ಭಾಷೆಯ ವೈವಿಧ್ಯತೆಗಳು ಮತ್ತು ಅವನಿಗೆ ಹಿನ್ನೆಲೆಯಾಗಿರುವ ಸಾಹಿತ್ಯ ಪರಂಪರೆಯಿಂದ ದತ್ತವಾಗಿರುವ ಭಾಷಿಕ ಸಂಸ್ಕಾರ ಇವೆಲ್ಲವೂ ಒಟ್ಟಾಗಿ ಒಂದು ಕಾವ್ಯಕೃತಿಯ ಭಾಷೆಯನ್ನು ರೂಪಿಸುತ್ತವೆ. ಬಳಕೆಯ ದೃಷ್ಟಿಯಿಂದ ಹೀಗೆ ವಿಶಿಷ್ಟವಾಗುವ ಭಾಷಿಕ ಮಾಧ್ಯಮ, ಅಧ್ಯಯನದ ದೃಷ್ಟಿಯಿಂದಲೂ ವಿಶಿಷ್ಟವಾದುದಾಗುತ್ತದೆ. ಶಿಲ್ಪದಲ್ಲಿ ಬಳಕೆಯಾಗುವ ಶಿಲೆಯಂತೆ ಕಾವ್ಯದಲ್ಲಿ ಬಳಕೆಯಾಗುವ ಭಾಷೆಯನ್ನು ಒಂದು ವಸ್ತುವನ್ನಾಗಿ ನೋಡಲಾಗದು. ಶಿಲ್ಪದಲ್ಲಿ ಬಳಕೆಯಾಗುವ ಶಿಲೆಯನ್ನು ಕುರಿತು ಅಧ್ಯಯನ ಮಾಡುವ ಅಧ್ಯಯನಕಾರ ಆ ಶಿಲೆ ಯಾವ ಬಗೆಯದೆಂಬುದರಲ್ಲಿ ಆಸಕ್ತನಾಗಿರುವನೇ ಹೊರತು ಅದರಲ್ಲಿ ಮೂಡಿರುವ ಕಲಾತ್ಮಕತೆಯ ಬಗ್ಗೆ ಅಲ್ಲ. ಇದೇ ಮಾತನ್ನು ಕಾವ್ಯ ಭಾಷೆಯನ್ನು, ಒಂದು ನಿರ್ದಿಷ್ಟ ಕಾಲದ ದಾಖಲೆಯೆಂಬಂತೆ ಪರಿಗಣಿಸಿ ನೋಡುವ ಭಾಷಾ ವಿಜ್ಞಾನಿಯ ಅಧ್ಯಯನಕ್ಕೆ ಸಂಬಂಧಿಸಿದಂತೆಯೂ ಹೇಳಬಹುದಾದರೂ, ಸಂಸ್ಕೃತಿಯ ಒಂದು ಅಂಗವೇ ಆಗಿರುವ ಭಾಷೆಯ ಅಧ್ಯಯನ ಶಿಲೆಯಂಥ ಭೌತ ವಸ್ತುವೊಂದು ನಿರೀಕ್ಷಿಸುವುದಕ್ಕಿಂತ ಬೇರೆಯದೇ ಆದ ಕ್ರಮ ವಿಧಾನಗಳನ್ನು ನಿರೀಕ್ಷಿಸುತ್ತದೆ.[1]

---

1. ವಿವರಗಳಿಗೆ ನೋಡಿ : Edward Stankiewicz, 'Linguistics and Study of Poetic Language', Style in Language (Ed.) Thomas A Sebeok, Cambridge, 1964. P: 69-70.

ಇನ್ನು ಕಾವ್ಯ ಭಾಷೆಯನ್ನು ಕುರಿತ ಅಧ್ಯಯನ ವಿಧಾನಗಳಿಗೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನಿಲ್ಲಿ ಸೂಚಿಸಬಹುದು. ಮುಖ್ಯವಾಗಿ ಕಾವ್ಯ ಭಾಷೆಯನ್ನು ಕುರಿತ ಅಧ್ಯಯನ ಎರಡು ದೃಷ್ಟಿಗಳಿಂದ ನಡೆಯಲು ಸಾಧ್ಯ.[2] ಇವುಗಳಲ್ಲಿ ಒಂದು ಸಾಹಿತ್ಯೇತರವಾದ ಉದ್ದೇಶಗಳನ್ನು ಹೊಂದಿದ್ದರೆ, ಮತ್ತೊಂದು ಸಾಹಿತ್ಯಕವಾದ ಉದ್ದೇಶಗಳನ್ನು ಹೊಂದಿರುವಂಥದು. ಮೊದಲ ಬಗೆಯ ಅಧ್ಯಯನಗಳು ಕಾವ್ಯ ಕೃತಿಯೊಂದರ ಭಾಷೆಯನ್ನು ಆ ಕೃತಿಯು ಸಂಭವಿಸಿದ ಭಾಷೆಯ ಒಂದು ನಿರ್ದಿಷ್ಟ ಕಾಲದ ಪ್ರತಿನಿಧಿಯೆಂಬಂತೆ, ದಾಖಲೆಯೆಂಬಂತೆ ನೋಡುತ್ತವೆ. ಸಾಹಿತ್ಯ ಕೃತಿಯೊಂದು ಕಾಲ ರೇಖೆಯ ಒಂದು ನಿರ್ದಿಷ್ಟ ಬಿಂದುವಿನಲ್ಲಿ ಸಂಭವಿಸುವುದರಿಂದ ಅದರ ಭಾಷೆಯನ್ನು ಹೀಗೆ ನೋಡುವುದು ಸಾಧ್ಯವಿದೆ. ~~ಅದರ ಭಾಷೆಯನ್ನು ಹೀಗೆ ನೋಡುವುದು ಸಾಧ್ಯವಿದೆ~~ ಆದರೆ ಈ ಸಾಧ್ಯತೆ ಕೆಲವು ಮಿತಿಗಳ ಮಧ್ಯೆ ಇರುವಂಥದು. ಏಕೆಂದರೆ, ಸಾಹಿತ್ಯ ಕೃತಿಯೊಂದರ ಭಾಷೆ ಒಂದು ನಿರ್ದಿಷ್ಟ ಕಾಲದ ಬಳಕೆಯ ಭಾಷೆಯ, ಶಿಷ್ಟ ಭಾಷೆಯ ಪ್ರತಿನಿಧಿಯಾಗಿರುವುದು ಸಾಧ್ಯವಿಲ್ಲ. ಕಾವ್ಯ ಭಾಷೆ ಸಾಮಾನ್ಯ ಬಳಕೆಯ ಭಾಷೆಯ, ಶಿಷ್ಟ ಭಾಷೆಯ ನೆಲೆಯಲ್ಲೇ ತನ್ನ ಬೇರುಗಳನ್ನು ಹೊಂದಿರುತ್ತದೆಂಬುದು ನಿಜವಾದರೂ, ನಾವು ಯಾವುದನ್ನು ಶಿಷ್ಟ ಭಾಷೆಯೆನ್ನುತ್ತೇವೆಯೋ ಅದೇ ಅಲ್ಲ. ಹಾಗೆಯೇ ಸಾಮಾನ್ಯ ಬಳಕೆಯ ಭಾಷೆಯೂ ಅಲ್ಲ. ಆದರೂ ಶಿಷ್ಟ ಭಾಷೆ, ಸಾಮಾನ್ಯ ಬಳಕೆಯ ಭಾಷೆಯ ಜೊತೆಗಿನ ಕಾವ್ಯ ಭಾಷೆಯ ಸಂಬಂಧವನ್ನೇನೂ ನಿರಾಕರಿಸಲಾಗದು. ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಕಾವ್ಯ ಭಾಷೆಯೆನ್ನುವುದು ಭಾಷೆಯ ಬಳಕೆಯ ಸಾಧ್ಯತೆಗಳ ಫಲವಾಗಿ ರೂಪುಗೊಂಡಿದ್ದು, ಸಾಮಾನ್ಯ ಬಳಕೆಯ ಭಾಷೆಗೆ, ಶಿಷ್ಟ ಭಾಷೆಗೆ ಇಲ್ಲದ ವಿಶಿಷ್ಟ ಸಂವಹನ ಸಾಧ್ಯತೆಗಳನ್ನು ಪಡೆದುಕೊಂಡಿರುತ್ತದೆ ಎಂಬುದು. ಹೀಗೆ ಕಾವ್ಯ ಭಾಷೆ, ಭಾಷೆಯ ಒಂದು ವಿಶಿಷ್ಟ ರೂಪವಾಗುವುದು ಮುಖ್ಯವಾಗಿ ಸಾಮಾನ್ಯ ಭಾಷೆಯ

---

2. Rene Wellek and Austin Warren, Theory of Literature, Penguin Books, 1978. P: 176- 177.

ಕೆಲವು ನಿಯಮಗಳನ್ನು ಪ್ರಯತ್ನಪೂರ್ವಕವಾಗಿ ಮತ್ತು ಉದ್ದೇಶಪೂರ್ವಕವಾಗಿ ಮೀರುವುದರಿಂದಲೇ. ಈ 'ನಿಯಮಾತಿಕ್ರಮಣವಿಲ್ಲದೆ ಕಾವ್ಯವೇ ಇಲ್ಲ' ಎಂಬ ಮಾತನ್ನು ಒಪ್ಪಬಹುದಾದರೂ, ಕಾವ್ಯ ಭಾಷೆಯ ಎಲ್ಲಾ ಭಾಷಾಂಶಗಳೂ ನಿಯಮಾತಿಕ್ರಮಣಗೊಂಡಿರುವುದಿಲ್ಲ. ಹೀಗಾಗಿ ಕಾವ್ಯ ಭಾಷೆಯ ಅಧ್ಯಯನದಲ್ಲಿ ತೊಡಗಿದ ಭಾಷಾ ವಿಜ್ಞಾನಿಯ ಮುಖ್ಯ ಪ್ರಶ್ನೆ ಇರುವುದು ಶಿಷ್ಟ ಭಾಷೆಯ ನಿಯಮಗಳ ವಿವರಣೆಗೆ ಕಾವ್ಯ ಭಾಷೆಯನ್ನು ಹೇಗೆ ಮತ್ತು ಯಾವ ಹಂತದವರೆಗೆ ಬಳಸಬಹುದೆಂಬುದರಲ್ಲಿ. ಇಲ್ಲಿ ಕಾವ್ಯ ಕೃತಿಯೊಂದರ ಭಾಷೆಯ ಯಾವ ಅಂಶಗಳು ನಿಯಮಾತಿಕ್ರಮಣಗೊಂಡಿವೆ, ಯಾವುವು ಇಲ್ಲ ಎಂಬುದನ್ನು ಗುರುತಿಸಬೇಕಾಗುತ್ತದೆ. ಎಂದೇ ಅವನ ಆಸಕ್ತಿಯೆಲ್ಲ ಕಾವ್ಯ ಭಾಷೆ ಮತ್ತು ಶಿಷ್ಟ ಭಾಷೆಯ ಮಧ್ಯ ಇರುವ ಸಾಮಾನ್ಯಾಂಶಗಳನ್ನು ಪರಿಶೀಲಿಸುವುದರಲ್ಲಿ ಕೇಂದ್ರೀಕೃತವಾಗಿರುತ್ತದೆ. ಆದರೆ ಪ್ರಾಚೀನ ಕಾಲದ ಶಿಷ್ಟ ಭಾಷೆಯ ಖಚಿತ ಸ್ವರೂಪವನ್ನು ತಿಳಿದಿಲ್ಲದಿರುವಾಗ, ಪ್ರಾಚೀನ ಕೃತಿಯೊಂದರ ಭಾಷೆಯ ಅಧ್ಯಯನ ಈ ನೆಲೆಯಲ್ಲಿ ಒಂದು ವಿಶಿಷ್ಟ ಸಮಸ್ಯೆಯಾಗುತ್ತದೆ. ಆದುದರಿಂದ ಅಂಥ ಸಂದರ್ಭಗಳಲ್ಲಿ ಒಂದೋ ನಮಗೆ ಇಂದು ಪರಿಚಿತವಿರುವ ಭಾಷೆಯ ಮಾನದಂಡಗಳನ್ನು ಇಲ್ಲವೆ, ಆ ಭಾಷೆಗೆ ಸಾಮಾನ್ಯವಾಗಿರುವ ಕೆಲವು ನಿಯಮಗಳನ್ನೋ ಅನಿವಾರ್ಯವಾಗಿ ಬಳಸಲಾಗುತ್ತದೆ. ಇವೆಲ್ಲದರ ಮಧ್ಯ ಈ ಅಧ್ಯಯನ ವಿಧಾನ ಕಾವ್ಯ ಭಾಷೆಯನ್ನು ತನ್ನ ಉದ್ದೇಶಗಳಿಗೆ ಅಗತ್ಯವಿರುವ ಸಾಮಗ್ರಿಯ ಆಕರಗಳಾಗಿ ನೋಡುತ್ತವೆ. ಆ ಉದ್ದೇಶಗಳು ವ್ಯಾಕರಣ ರಚನೆಯದಿರಬಹುದು, ಅಥವಾ ಭಾಷಾ ಚರಿತ್ರೆಯ ಸಂಬಂಧವೂ ಇರಬಹುದು. ಹೀಗಾಗಿ ಈ ಬಗೆಯ ಅಧ್ಯಯನಗಳಲ್ಲಿ ಕಾವ್ಯ ಭಾಷೆಯ ಕಲಾತ್ಮಕವಾದ ಆಯಾಮ ಗೌಣವಾಗಿ, ಅದೊಂದು ದಾಖಲೆ ಮಾತ್ರವಾಗುತ್ತದೆ. ಹೀಗಿರುವಾಗಲೂ ಈ ಅಧ್ಯಯನ ಕ್ರಮ ಫಲಪ್ರದವಾದುದಾಗುವಲ್ಲಿ ಭಾಷೆಯ ಕಲಾತ್ಮಕ ಆಯಾಮದ ಅರಿವು, ಸಾಹಿತ್ಯ ಪರಂಪರೆಯ ಅರಿವು ಇರುವುದು ಅಗತ್ಯವೆಂಬುದನ್ನು ಮರೆಯಲಾಗದು. ದಾಖಲೆಯಾಗಿ ನೋಡುವ ಈ ವಿಧಾನವನ್ನು ನಿರುಪಯುಕ್ತವೆನ್ನಲಾಗದು. ಸಾಹಿತ್ಯ ಕೃತಿಯ ಅಧ್ಯಯನಕ್ಕೆ ದೊರೆಯುವ ನೆರವಿಗಿಂತ ಭಾಷಾ ಚರಿತ್ರೆಯನ್ನು ಕುರಿತ

ಚರ್ಚೆಗಳಿಗೆ ಮತ್ತು ಅದರ ಸಂಬಂಧೀ ಕ್ಷೇತ್ರಗಳಿಗೆ ಈ ವಿಧಾನದ ಅಧ್ಯಯನದಿಂದ ಗಮನಾರ್ಹವಾದ ನೆರವಿದೆ. ಇನ್ನು ಎರಡನೆಯ ಬಗೆಯ ಅಧ್ಯಯನ ವಿಧಾನದಲ್ಲಿ ಕಾವ್ಯ ಭಾಷೆಯನ್ನು ಒಂದು ದಾಖಲೆ ಎಂಬಂತೆ ಬಗೆಯದೆ, ಆ ನಿರ್ದಿಷ್ಟ ಕೃತಿಯ ವಿಶಿಷ್ಟತೆಯಾಗಿ ನೋಡಲಾಗುತ್ತದೆ. ಇಲ್ಲಿ ಶಿಷ್ಟ ಭಾಷೆ ಮತ್ತು ಕಾವ್ಯ ಭಾಷೆಗಳ ನಡುವೆ ಇರುವ ಸಾಮಾನ್ಯಾಂಶಗಳನ್ನು ಪರಿಶೀಲಿಸುವುದರ — ಮೊದಲ ಬಗೆಯ ಅಧ್ಯಯನ ವಿಧಾನದಲ್ಲಿ ಮಾಡುವಂತೆ — ಬದಲು ಅವೆರಡರ ನಡುವಿನ ಭಿನ್ನಾಂಶಗಳನ್ನು ಪರಿಶೀಲಿಸಲಾಗುತ್ತದೆ.[3] ಇಲ್ಲಿ ಕಾವ್ಯವೊಂದರ ಭಾಷೆ ಹೇಗೆ ಕಲಾತ್ಮಕವಾಗಿ ಬಳಕೆಯಾಗಿದೆ, ಮತ್ತು ಹಾಗೆ ಬಳಕೆಯಾಗುತ್ತ ದೈನಂದಿನದ ಸಾಮಾನ್ಯ ಭಾಷೆಗೆ, ಶಿಷ್ಟ ಭಾಷೆಗೆ ಇಲ್ಲದ ವಿಶಿಷ್ಟ ಸಂವಹನವನ್ನು, ಪರಿಣಾಮವನ್ನು ಸಾಧ್ಯಗೊಳಿಸಲು ಶಕ್ತವಾಗಿದೆಯೋ ಎಂಬುದನ್ನೇ ಮುಖ್ಯವಾಗಿ ಗಣಿಸಲಾಗುತ್ತದೆ. ಕಾವ್ಯ ಭಾಷೆಯನ್ನು ಕುರಿತ ಈ ದೃಷ್ಟಿಕೋನ ಕೃತಿಯೊಂದರ ಭಾಷಿಕ ರಚನಾ ವಿಶೇಷಗಳನ್ನು ಶೈಲಿ ಸಂಬಂಧದ್ದಾಗಿ ನೋಡುತ್ತದೆ.

## 4.2 ಪಂಪನ ಕಾವ್ಯ ಭಾಷೆಯನ್ನು ಕುರಿತ ಅಧ್ಯಯನಗಳು

ಪಂಪನ ಕಾವ್ಯ ಭಾಷೆಯನ್ನು ಕುರಿತ ಅಧ್ಯಯನಗಳು ಮೇಲೆ ಪ್ರಸ್ತಾಪಿಸಲಾದ ಎರಡೂ ನೆಲೆಗಳಿಂದ ನಡೆದಿವೆಯಾಗಿ ಅವನ್ನು ಸ್ಥೂಲವಾಗಿ (1) ಪಂಪನ ಕಾಲದ ಭಾಷೆಯ ದಾಖಲೆಯಾಗಿ ಗ್ರಹಿಸಿದ ಅಧ್ಯಯನಗಳು ಮತ್ತು (2) ಪಂಪನ ವಿಶಿಷ್ಟತೆಯನ್ನಾಗಿ ಗ್ರಹಿಸಿದ ಅಧ್ಯಯನಗಳೆಂದು ವಿಂಗಡಿಸಬಹುದು. ಈ ವಿಂಗಡಣೆ ಸ್ಥೂಲವಾದುದು ಮಾತ್ರ.

---

3. Jan Mukarovsky, 'Standard Language and Poetic Language', Linguistics and Literary Style (Ed.) Donald C. Freeman, New York, 1970. P: 41.

## 4.2.1 ಪಂಪನ ಕಾವ್ಯ ಭಾಷೆಯನ್ನು ದಾಖಲೆಯಾಗಿ ಗ್ರಹಿಸಿದ ಅಧ್ಯಯನಗಳು

ಹಳಗನ್ನಡ ಭಾಷೆಯ ನಿಯಮಗಳನ್ನೋ ಲಕ್ಷಣಗಳನ್ನೋ ಹೇಳುವಾಗ ಕೆಲವೆಡೆ ಪಂಪನಿಂದ ನಿದರ್ಶನಗಳನ್ನು ತೋರಿಸಲಾಗಿದೆ. ಅಂಥವೆಲ್ಲ ಪಂಪನ ಕಾವ್ಯ ಭಾಷೆಯನ್ನೇ ಪ್ರತ್ಯೇಕವಾಗಿ ಕುರಿತ ಚರ್ಚೆಗಳಲ್ಲದ ಕಾರಣದಿಂದ ಅವನ್ನಿಲ್ಲಿ ಗಮನಿಸಲಾಗದು. ಈ ವಿಧಾನದಿಂದ ಪಂಪನ ಕಾವ್ಯ ಭಾಷೆಯನ್ನು ವ್ಯಾಪಕವಾದ ಅಧ್ಯಯನಕ್ಕೆ ಒಳಗು ಮಾಡಿದ ಏಕೈಕ ಪ್ರಯತ್ನವೆಂದರೆ ಬಿ.ರಾಮಚಂದ್ರ ರಾವ್ ಅವರ 'ಎ ಡಿಸ್ಕ್ರಿಪ್ಟಿವ್ ಗ್ರಾಮರ್ ಆಫ್ ಪಂಪ ಭಾರತ'. ಇಂಗ್ಲಿಷನಲ್ಲಿರುವ ಈ ಗ್ರಂಥದಲ್ಲಿ ಪಂಪ ಭಾರತದ ಭಾಷೆಯನ್ನು ವಿವರಣಾತ್ಮಕವಾಗಿ ವಿಶ್ಲೇಷಿಸಲಾಗಿದೆ.

ಈ ಅಧ್ಯಯನವು ಪಂಪ ಭಾರತದ ಭಾಷೆಯನ್ನು ಹತ್ತನೆಯ ಶತಮಾನದ ಸಾಹಿತ್ಯದ ಭಾಷೆಯ ಅತ್ಯುತ್ತಮ ಪ್ರತಿನಿಧಿಯೆಂದೂ, ಖಚಿತವಾಗಿ ತಿಳಿದ ಕಾಲದ ಮತ್ತು ಪ್ರದೇಶದ ಭಾಷೆಯೆಂದೂ ನಂಬಿದ್ದು, ಅದಕ್ಕೆ ಪೂರಕವಾಗಿ ಸೂಚಿಸಲಾಗಿರುವ ಕೆಲವು ಅಂಶಗಳು ಹೀಗಿವೆ.[4] (1) ಈ ಕೃತಿಯ ರಚನಾ ಕಾಲ ಖಚಿತವಾಗಿ ತಿಳಿದಿರುವುದು (2) ಈ ಕೃತಿಯಲ್ಲಿ ಕಾಣಬರುವ ಭಾಷೆಯು ಬಳಕೆಯಲ್ಲಿದ್ದ ಪ್ರದೇಶವನ್ನು ಕವಿಯೇ ಸೂಚಿಸಿರುವುದು (3) ವ್ಯಾಪಕವಾದ ದೇಸಿಯ ಬಳಕೆ. ಈ ಮೂರೂ ಅಂಶಗಳಲ್ಲಿ ಮೊದಲೆರಡು ಮೇಲಿನ ನಂಬಿಕೆಯನ್ನು ಸಮರ್ಥಿಸುತ್ತವೆ. ಮೊದಲನೆಯ ಅಂಶವಂತೂ ನಿರ್ವಿವಾದದ ಸಂಗತಿ. ಹಾಗೆಯೇ ಮೂರನೆಯದು ಕೂಡ. ಎರಡನೆಯ ಅಂಶವನ್ನು 'ರಾಜದ್ರಾಜಕಮೆನಿಸಿದ ಪುಲಿಗೆಱೆಯ ತಿರುಳ ಕನ್ನಡ' ಎಂಬ ಪಂಪನ ಮಾತಿನ ಆಧಾರದ ಮೇಲೆಯೇ ಹೇಳುವುದಾದರೆ, ಆ ಮಾತಿನಲ್ಲಿ ಪ್ರಾದೇಶಿಕ ಸೂಚನೆಯಿದೆಯೆಂಬುದಂತೂ ಸರಿಯೆ. ಈ ಪ್ರದೇಶದ ಸುತ್ತ ಬಳಕೆಯಲ್ಲಿದ್ದಿರಬಹುದಾದ ಭಾಷಾ ಪ್ರಭೇದದಲ್ಲಿ ಈ ಕೃತಿಯು ರಚಿತವಾಗಿದೆಯೆಂದಾದರೆ, ಅದರ ಅಧ್ಯಯನಕ್ಕೆ ಎರಡು ಸಾಧ್ಯತೆಗಳಿರುತ್ತವೆ. ಮೊದಲನೆಯದಾಗಿ ಪುಲಿಗೆಱೆಯ ಕನ್ನಡದ (ಪ್ರಭೇದದ) ಸ್ವರೂಪ ನಮಗೆ ತಿಳಿದಿದ್ದ ಪಕ್ಷದಲ್ಲಿ ಅದನ್ನು ಪಂಪನ ಭಾಷೆಯೊಂದಿಗೆ ಹೋಲಿಸುತ್ತ

---

4. Ramachandra Rao, B., A Descriptive Grammar of Pampa Bharatha, Mysore, 1972. P: x

ಪಂಪ ಆ ಭಾಷೆಯನ್ನು ಹೇಗೆ ಬಳಸಿಕೊಂಡಿದ್ದಾನೆ ಎಂಬುದನ್ನು ತಿಳಿಯುವುದು ಸಾಧ್ಯ. ಆದರೆ ಇಂಥ ಸಾಧ್ಯತೆ ನಮಗಿಲ್ಲವಾದುದರಿಂದ ಪಂಪನ ಕೃತಿಯ ಭಾಷೆಯ ಮೂಲಕವೇ ಆ ಭಾಷಾ ಪ್ರಭೇದದ ಸ್ವರೂಪವನ್ನು ತಿಳಿಯುವುದು. ಇಲ್ಲಿ ಕೂಡ ಆ ಭಾಷೆಯ ಎಲ್ಲ ಅಂಶಗಳೂ 'ಪುಲಿಗೆರೆಯ ಕನ್ನಡ' ವೆನ್ನಲಾಗದು. ಪಂಪನು ಬಳಸಿರುವ ಭಾಷೆಯಲ್ಲಿ ಗುರುತಿಸಲು ಸಾಧ್ಯವಿರುವ ದೇಶಿ ಅಂಶಗಳನ್ನು ಈ ಪ್ರಭೇದದ ಅಂಶಗಳೆನ್ನಬಹುದಾದರೂ, ಇದು ನಿರ್ದುಷ್ಟವಾದ ವಿಧಾನವೇನೂ ಅಲ್ಲ. ಹೀಗಿದ್ದೂ ಇದು ಅನಿವಾರ್ಯವಾಗಿದೆ. ಹೀಗೆ ತಿಳಿಯುವ ಅಂಶಗಳು ಭಾಷಾ ಚರಿತ್ರೆಯ ದೃಷ್ಟಿಯಿಂದ ವಿಶೇಷ ಮಹತ್ವವನ್ನು ಪಡೆಯುತ್ತವೆ.

ಈ ಗ್ರಂಥದಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಸ್ವನ ವ್ಯವಸ್ಥೆಯಿಂದ ಮೊದಲ್ಗೊಂಡು ಸಂಧಿ, ನಾಮಪದ, ಕ್ರಿಯಾಪದ, ಗುಣವಾಚಕ ಇತ್ಯಾದಿಗಳನ್ನು ವಿಶ್ಲೇಷಿಸಲಾಗಿದೆ. ಎರಡನೆಯ ಭಾಗದಲ್ಲಿ ವ್ಯಾಪಕವಾದ ಪದ ಪ್ರಯೋಗ ಕೋಶವಿದೆ. ಈ ಕೋಶದಲ್ಲಿ ಪದಗಳಿಗೆ ಮೂಲವಾದ ಪ್ರಕೃತಿಗಳನ್ನು ನೀಡುವ ಬದಲು ಪದಗಳನ್ನೇ ನೀಡಲಾಗಿದೆ. ಪ್ರಕೃತಿಯೊಂದು ಬೇರೆ ಬೇರೆಯ ಪ್ರತ್ಯಯಗಳ ಸಂಯೋಜನೆಯಿಂದ ಪಡೆಯುವ ಭಿನ್ನ ರೂಪಗಳನ್ನು ತಿಳಿಯುವುದು ಇದರಿಂದ ಸಾಧ್ಯವಾಗಿದೆ. ಈ ಕೋಶದಲ್ಲಿ ನೀಡಲಾಗಿರುವ ಪದಗಳಿಗೆ ಪ್ರಯೋಗಗಳನ್ನು ನೀಡಿಲ್ಲ. ಅದರ ಬದಲು ಪದಗಳ ಅರ್ಥ ಮತ್ತು ಅವುಗಳ ಸಂದರ್ಭ ಸೂಚನೆಯ ವಿವರಗಳನ್ನು ಮಾತ್ರ ಕೊಡಲಾಗಿದೆ. ಸಾಹಿತ್ಯಾಧ್ಯಯನದ ಕೆಲವು ಪೂರಕ ಕ್ಷೇತ್ರಗಳಿಗೆ ಈ ಕೋಶದಿಂದ ಮಹತ್ವದ ನೆರವು ದೊರೆಯಬಲ್ಲುದು.

ಇನ್ನು ಮೊದಲ ಭಾಗ ಸಂಪೂರ್ಣವಾಗಿ ಭಾಷಿಕ ವಿಶ್ಲೇಷಣೆಗೆ ಮೀಸಲಾಗಿದೆ. ಈ ವಿಶ್ಲೇಷಣೆಯ ಹಿನ್ನೆಲೆಗಿರುವ ಸಾಮಗ್ರಿ ಬಾಹುಳ್ಯ ಮತ್ತು ಶ್ರಮ ಗಮನಾರ್ಹ ವಾದುದಾಗಿದೆ. ಈ ವಿಶ್ಲೇಷಣಾತ್ಮಕ ಅಧ್ಯಯನದ ಪ್ರಾರಂಭಕ್ಕೆ ಸ್ವನ ವ್ಯವಸ್ಥೆಯನ್ನು ಕುರಿತ ಚರ್ಚೆಯಿದ್ದು, ಪಂಪ ಭಾರತದ ಭಾಷೆಯ ಆಧಾರದ ಮೇಲೆ ಹಳಗನ್ನಡಕ್ಕೆ (ದೇಶ್ಯ)

ಸ್ವನಿಮಗಳನ್ನು ಪುನಾರಚಿಸಲಾಗಿದೆ. ಈ ಸಂಬಂಧದ ಕೆಲವು ವಿವರಗಳನ್ನು ಕುರಿತು ಚರ್ಚೆ ಸಾಧ್ಯವಿದೆ. ಏಕೆಂದರೆ ನಮ್ಮೆದುರು ಬಳಕೆಯಲ್ಲಿಲ್ಲದ, ಎಂದರೆ ಉಚ್ಚಾರಣಾ ವಿಧಾನವನ್ನು ಅದರ ಜೀವಂತ ಸ್ಥಿತಿಯಲ್ಲಿ ತಿಳಿಯಲು ಸಾಧ್ಯವಿಲ್ಲದ ಬರಹದ ಭಾಷೆಯಲ್ಲಿನ ಸ್ವನಗಳ ಉಚ್ಚಾರಣಾ ವಿಧಾನವನ್ನು ಕುರಿತು ನಿರ್ದಿಷ್ಟವಾಗಿ ಏನನ್ನೂ ಹೇಳುವುದು ಕಷ್ಟ. ಕಾಲದ ದೃಷ್ಟಿಯಿಂದ ನಮಗೆ ದೂರದ್ದಾದ ಬರಹದ ಭಾಷೆಯ ಸ್ವನಗಳ ಉಚ್ಚಾರಣಾ ವಿಧಾನವನ್ನು ನಿರ್ಣಯಿಸುವಲ್ಲಿ ನಮ್ಮ ಇಂದಿನ ಬಳಕೆಯ ಭಾಷೆಯಿಂದ ನಮಗೆ ಒದಗಿರುವ ಗ್ರಹಿಕೆಗಳು ಪ್ರಭಾವಿಸುವುದು ಸಾಧ್ಯ. ಒಂದು ಹಂತದಲ್ಲಿ ಇದು ಅನಿವಾರ್ಯ. ಈ ನೆಲೆಯಲ್ಲಿ ಪ್ರಾಸಕ್ಕೆ ಸಂಬಂಧಿಸಿದ ಒಂದು ಅಂಶವನ್ನು ಗುರುತಿಸಲಾಗಿದೆ. ಪಂಪ ದ್ವಿತೀಯಾಕ್ಷರ ಪ್ರಾಸ ನಿಯಮವನ್ನು ಪಾಲಿಸಿದ್ದಾನಾದರೂ ಕೆಲವೆಡೆ ಈ ನಿಯಮವನ್ನು ಮೀರಿರುವ ನಿದರ್ಶನಗಳುಂಟು. ರಾಮಚಂದ್ರ ರಾವ ಅವರೇ ಗುರುತಿಸಿರುವ ನಿದರ್ಶನಗಳಲ್ಲಿ ಒಂದೆರಡನ್ನು ಇಲ್ಲಿ ಉದಾಹರಿಸಬಹುದು :—

| ರ/ಱ | ಶ/ಸ | ಳ/ಲ | ಮ/ವ |
|---|---|---|---|
| ಕರವರ ... | ನಿಶಿತ ... | ನಾಳೆ ... | ಕ್ರಮ ... |
| ನೆರೆ ..... | ದಶನಿ ... | —ಜಾಳ ... | ಶವ ..... |
| ತೆಱ ..... | ಪ್ರಸರ... | —ಕೋಳಿ... | ಸಮ..... |
| ದರಿ ..... | ವಿಸಸನ... | ಜಾಲರ ... | ಯಮ... |
| (3—72) | (12—26) | (3—42) | (4—7) |

ಇಂಥ ಹಲವು ನಿದರ್ಶನಗಳನ್ನು ತೋರಿಸಿ ರಾಮಚಂದ್ರ ರಾವ ಅವರು ಸ್ವನಿಮಾ ಮೌಲ್ಯ ಸ್ಥಾಪನೆಗೆ ಪ್ರಾಸವೊಂದನ್ನೇ ಗಣಿಸಲಾಗದೆಂಬ ಅನುಮಾನವನ್ನು ಉಳಿಸಿಕೊಂಡೇ ಒಂದು ಅಂಶವನ್ನು ಹೇಳುತ್ತಾರೆ. "ಈ ಭಿನ್ನ ವ್ಯಂಜನ ಯುಗ್ಮಗಳು ಪ್ರಾಸ ಸ್ಥಾನದಲ್ಲಿ ಬಳಕೆಯಾಗಿರುವುದು ಅವುಗಳ ಸ್ವನ ಸಾಮ್ಯತೆಯ ಫಲವಾಗಿರಬಹುದು.

ಬರವಣಿಗೆಯಲ್ಲಿ ಬೇರೆ ಬೇರೆಯಾಗಿದ್ದರೂ ಪಂಪ ಭಾರತದ ಕಾಲದ ಆಡು ಮಾತಿನಲ್ಲಿ ಇವುಗಳ ನಡುವಿನ ವೈದೃಶ್ಯ ಕಣ್ಮರೆಯಾಗಿ ಸದೃಶವಾಗಿ ಬಳಕೆಯಾಗುತ್ತಿದ್ದಿರಬೇಕು"[5] ಇದು ಒಂದು ಅರ್ಥದಲ್ಲಿ ಸರಿ. ಉದಾ : ಶ/ಸ; ಱ/ರ; ೞ/ಳ — ಇಂಥ ಕೆಲವು ವ್ಯಂಜನ ಯುಗ್ಮಗಳಿಗೆ ಸಂಬಂಧಿಸಿದಂತೆ ಇಂಥ ನಿರ್ಣಯಕ್ಕೆ ಬರಲು ಅವಕಾಶವಿದೆ. ಭಾಷೆಯ ಬಳಕೆಯ ನೆಲೆಯಲ್ಲಿನ ಕೆಲವು ಕಾರಣಗಳು ಇವುಗಳ ಉಚ್ಚಾರಣಾ ವಿಧಾನ ಸದೃಶತೆಯನ್ನು ಪಡೆಯಲು ಪ್ರೇರಿಸಬಹುದು. ಮತ್ತು ಕನ್ನಡ ಭಾಷೆಯ ಚರಿತ್ರೆಯಲ್ಲಿ ಹೀಗಾದುದಕ್ಕೆ ನಿದರ್ಶನಗಳಿವೆ. ಆದರೆ ಈ ಅಂಶವನ್ನು ಇತರ ಕೆಲವು ವ್ಯಂಜನ ಯುಗ್ಮಗಳಿಗೆ ಹೇಳಲಾಗದು. ಪ್ರಾಸದಲ್ಲಿ ಬಳಕೆಯಾಗಿವೆಯೆಂಬುದನ್ನು ಬಿಟ್ಟರೆ ಅವು ಉಚ್ಚಾರ ಸದೃಶತೆಯನ್ನು ಪಡೆದುದಕ್ಕೆ ಪೂರಕವಾದ ಇತರ ಕಾರಣಗಳನ್ನು ಹೇಳಲಾಗದು. ದ್ವಿತೀಯಾಕ್ಷರ ಪ್ರಾಸ ನಿಯಮದ ಇಂಥ ಮೀರುವಿಕೆಯ ನಿದರ್ಶನಗಳು ಇತರ ಕವಿಗಳಲ್ಲೂ ದೊರೆಯುತ್ತವೆ. ಇದರ ಹಿಂದೆ ಇರುವ ಕಾರಣವನ್ನು ಗುರುತಿಸಬೇಕಾಗಿದೆ. ಸಾಹಿತ್ಯಕ ನೆಲೆಯಿಂದ ಇಂಥ ಮೀರುವಿಕೆಗಳಿಗೆ ವಿಶಿಷ್ಟವಾದ ಅರ್ಥವಿರುವುದನ್ನು ಕೂಡ ನಿರಾಕರಿಸಲಾಗದು. ಇಲ್ಲಿ ಒಂದು ನಿದರ್ಶನವನ್ನು ಗಮನಿಸಬಹುದು :—

"ಕ್ರಮದಿಂ ಪಡೆದೆನ್ನ ಕೊಟ್ಟುದನೆ ಕೊಂಡು ಮನೋಮುದದಿಂದೆ ಬಾಳ್ದುದಂ
ತಮರಿವರೆಲ್ಲರುಂ ಸಮನಲ್ಲದೆ ಮಾರ್ಮಲೆದುರ್ಕಿ ಭೀಮನೊಳ್
ಸಮರದೆ ಗರ್ವದಿಂ ಪೊಣರಲಾರ್ಪರೆ ಗಾವಿಲರಿನ್ನುಮೆಲ್ಲರಂ
ಯಮಸುತನುಂ ಸುರೇಂದ್ರ ಸುತನುಂ ಪೊಸೆದೀಗಳೆ ಮುಕ್ಕಿ ತೋಱರೇ"

(ವಿ.ವಿ. 4—7)

ಈ ಪದ್ಯದಲ್ಲಿ ಮ/ವ ಗಳು ಪ್ರಾಸ ಸ್ಥಾನದಲ್ಲಿವೆ. ಈ ಪ್ರಾಸ ನಿಯಮದ ಮೀರುವಿಕೆಗೂ ಪದ್ಯ ಹೇಳುತ್ತಿರುವ ಸಂಗತಿಗೂ ಒಂದು ಸಂಬಂಧವಿರುವಂತಿದೆ. ಎಂದೂ

---

5. ಅದೇ, ಪು: 23.

ಹೊಂದಿ ಬಾಳದ ಎರಡು ಪಕ್ಷಗಳಲ್ಲಿ ಒಡಂಬಡಿಕೆಯನ್ನು ಸಾಧಿಸುವ ಭೀಷ್ಮನ ಪ್ರಯತ್ನ ವ್ಯರ್ಥ. ಇಲ್ಲಿ ಭಿನ್ನ ವ್ಯಂಜನಗಳನ್ನು ಒಂದೆಡೆಗೆ ತಂದಿರುವುದೇ ಆ ಪ್ರಯತ್ನದ ವ್ಯಂಗ್ಯವಿರಬಹುದೇ? ಇದೊಂದು ಊಹೆ ಮಾತ್ರ. ಮತ್ತು ಇಂಥ ಅರ್ಥಗಳನ್ನು ಪ್ರಾಸ ನಿಯಮದ ಎಲ್ಲ ಮೀರುವಿಕೆಗಳ ಹಿಂದೆಯೂ ಗುರುತಿಸಿಯೇ ತೀರಬಹುದೆಂದು ಹೇಳಲಾಗದು.

ಇನ್ನು, ವ್ಯಾಕರಣ ವಿಶ್ಲೇಷಣೆ ಮತ್ತು ವಿವರಣೆಗಳ ಹಿಂದೆ ವ್ಯಾಪಕವಾದ ಅಧ್ಯಯನ ಮತ್ತು ಸೂಕ್ಷ್ಮ ಪರಿಶೀಲನೆಯ ಗುಣಗಳಿರುವುದನ್ನು ಗಮನಿಸಬಹುದು. ಭಾಷಿಕ ವಿಶ್ಲೇಷಣೆ ಮತ್ತು ವಿವರಣೆಯ ನೆಲೆಯಲ್ಲಿ ಈ ಅಧ್ಯಯನ ಸಾಂಪ್ರದಾಯಿಕ ವ್ಯಾಕರಣಗಳು ಅನುಸರಿಸುವ ವಿಧಾನಕ್ಕಿಂತ ಬೇರೆಯದಾಗಿದೆ. ವಿಶ್ಲೇಷಣೆ ಮತ್ತು ವಿವರಣೆಯ ವಿಧಾನದಲ್ಲಿ ಸಾಂಪ್ರದಾಯಿಕ ವ್ಯಾಕರಣಗಳ ವಿಧಾನಕ್ಕಿಂತ ಹೇಗೆ ಬೇರೆ ಎಂಬುದನ್ನು ನಿದರ್ಶನ ಸಮೇತ ಗ್ರಂಥದ ಕೊನೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಇಡೀ ಅಧ್ಯಯನದುದ್ದಕ್ಕೂ ಈ ಮಾತನ್ನು ಸಮರ್ಥಿಸುವ ನಿದರ್ಶನಗಳನ್ನು ಗುರುತಿಸಬಹುದಾಗಿದೆ.

ಸಾಹಿತ್ಯ ಕೃತಿಯೊಂದರ ಭಾಷೆಯನ್ನು ದಾಖಲೆಯಂತೆ ನೋಡುವ ಭಾಷಾ ವಿಜ್ಞಾನಿಗೆ, ಆ ಕಾಲದ ಭಾಷೆಯ (ಸಾಹಿತ್ಯೇತರ) ಸ್ವರೂಪ ತಿಳಿದಿಲ್ಲವಾದರೆ, ಅವನ ವಿಶ್ಲೇಷಣೆ, ವಿವರಣೆಗಳಿಗೆ ಪೂರಕವಾದ ಎರಡು ಸಾಧ್ಯತೆಗಳಿರುತ್ತವೆ. ಇಡೀ ಭಾಷೆಗೆ ಸಾಮಾನ್ಯವಾಗಿ ಅನ್ವಯವಾಗುವ ಕೆಲವು ನಿಯಮಗಳನ್ನು ತಾನು ಅಧ್ಯಯನ ಮಾಡುತ್ತಿರುವ ಕೃತಿಗೆ ಅನ್ವಯಿಸುವುದು, ಅಥವಾ ಆ ಭಾಷೆಯನ್ನು ಕುರಿತಿರುವ ವ್ಯಾಕರಣಗಳ ನೆರವನ್ನು ಪಡೆಯುವುದು. (ಆದರೆ ವ್ಯಾಕರಣಗಳಿಂದ ಪಡೆಯುವ ನೆರವು ತೀರ್ಮಾನಗಳ ಸಮರ್ಥನೆಗೆಂದೇ ಹೇಳಲಾಗದು. ಕೃತಿಯ ವಿಶ್ಲೇಷಣೆಯಿಂದ ತಲುಪಲಾದ ನಿರ್ಣಯಗಳಿಂದ ಆ ವ್ಯಾಕರಣ ಹೇಳುವ ನಿಯಮಗಳನ್ನು ನಿರಾಕರಿಸಲೂ ಬಹುದು) ಈ ಅಧ್ಯಯನದಲ್ಲಿ ಇವೆರಡನ್ನೂ ಕಾಣಬಹುದು.

ಈ ಬಗೆಯ ಅಧ್ಯಯನ ವಿಧಾನದಿಂದ ಕೃತಿಯೊಂದರ ಭಾಷೆಯನ್ನು ನೋಡುವಾಗ ವಿಶ್ಲೇಷಣೆಯ ಶಿಖರ ಮೇಲಿನ ಹಂತವೆಂದರೆ ವಾಕ್ಯವೆ. ಈ ಅಧ್ಯಯನ ಪಂಪ ಭಾರತದ ವಾಕ್ಯ ರಚನೆಯ ಕ್ಷೇತ್ರವನ್ನು ಒಳಗೊಂಡಿಲ್ಲ. ವಾಕ್ಯ ರಚನೆಯನ್ನು ಕುರಿತ ವಿಶ್ಲೇಷಣೆಯಿಂದ ದೊರೆಯಬಹುದಾದ ಮಾಹಿತಿಗಳು ಸಾಹಿತ್ಯಕ ಉದ್ದೇಶದಿಂದ ನಡೆಯುವ ಭಾಷಿಕ ಅಧ್ಯಯನಗಳಿಗೆ ಪೂರಕ ನೆರವನ್ನು ನೀಡಬಲ್ಲವು. ಇಷ್ಟಾದರೂ ಈ ಅಧ್ಯಯನ ತಾನು ಪ್ರವೇಶಿಸಿದ ಕ್ಷೇತ್ರಗಳನ್ನು ನಿರ್ದುಷ್ಟವಾಗಿ ಪರಿಶೀಲಿಸಿದೆಯೆಂಬಲ್ಲಿ ಅನುಮಾನವಿಲ್ಲ. ಸಾಹಿತ್ಯ ಕೃತಿಗಳ ಭಾಷೆಯನ್ನು ವಿವರಣಾತ್ಮಕವಾಗಿ ವಿಶ್ಲೇಷಿಸಿದ ಪ್ರಯತ್ನಗಳೇ ಇಲ್ಲದಿರುವಾಗ ಪಂಪನಂಥ ದೊಡ್ಡ ಕವಿಯ ಕೃತಿಯೊಂದನ್ನು ಕುರಿತ ಈ ಪ್ರಯತ್ನ ನಮ್ಮ ಅಧ್ಯಯನ ಪರಂಪರೆಯಲ್ಲಿನ ಒಂದು ಗಮನಾರ್ಹ ಸಂಗತಿ.

ಭಾಷಾ ವಿಜ್ಞಾನದ ನೆಲೆಯಿಂದ ಪಂಪನ ಕೃತಿಗಳ ಭಾಷೆಯನ್ನು ಇಷ್ಟು ವ್ಯಾಪಕವಾದ ಅಧ್ಯಯನಗಳಿಗೆ ಒಳಗು ಪಡಿಸಿದ ಬೇರೆಯ ಪ್ರಯತ್ನಗಳು ಇಲ್ಲ. ಇನ್ನೆರಡು ಲೇಖನಗಳನ್ನಷ್ಟೆ ಇಲ್ಲಿ ಪ್ರಸ್ತಾಪಿಸಬಹುದು. ಒಂದು, ಎಚ್.ಜಿ. ಬೆಂಗೇರಿಯವರ 'ಪಂಪನ ಪ್ರಾಕೃತ ಪದಕೋಶ' ಮತ್ತೊಂದು, ನೇಗಿನಹಾಳರ 'ಪಂಪನ ಭಾಷಿಕ ಅಧ್ಯಯನ'. ಇವೆರಡೂ ಪಂಪನ ಭಾಷೆಯನ್ನು ದಾಖಲೆಯಂತೆಯೇ ನೋಡಿವೆ. ಮೊದಲನೆಯದು ಪಂಪನ ಭಾಷೆಯ ಪದಕೋಶಕ್ಕೆ ಸಂಬಂಧಿಸಿದ್ದು, ಅದರ ಮುಖ್ಯ ಉದ್ದೇಶ ಪಂಪನ ಪದಕೋಶದಲ್ಲಿರುವ ಪ್ರಾಕೃತ ಪದ ಸಂಪತ್ತನ್ನು ಪ್ರತ್ಯೇಕಿಸಿ ತೋರಿಸುವುದಾಗಿದೆ.[6] ಇಂಥ ಪ್ರಾಕೃತ ಪದಗಳ ಒಂದು ದೊಡ್ಡ ಯಾದಿಯನ್ನೇ ಇಲ್ಲಿ ನೀಡಲಾಗಿದ್ದು ಅದಕ್ಕೆ ಸಂವಾದಿಯಾಗಿ ಪ್ರಾಕೃತ ಮತ್ತು ಸಂಸ್ಕೃತ ಪದಗಳನ್ನೂ ನೀಡಲಾಗಿದೆ. ಈ ಅಧ್ಯಯನ ಪಂಪ ಬಳಸಿದ ಕನ್ನಡದಲ್ಲಿರುವ

---

6. ಬೆಂಗೇರಿ, ಎಚ್.ಜಿ., ಪಂಪನ ಪ್ರಾಕೃತ ಪದಕೋಶ, ಕ.ಭಾ., 5–3 1973. ಪು: 121–142.

ಪ್ರಾಕೃತ ಪದಗಳು ಕನ್ನಡಕ್ಕೆ ಪ್ರಾಕೃತದಿಂದಲೂ, ಪ್ರಾಕೃತಕ್ಕೆ ಸಂಸ್ಕೃತದಿಂದಲೂ ಬಂದಿರುವುದನ್ನು ಹೇಳಲು ಪ್ರಯತ್ನಿಸಿದಂತೆಯೆಂಬಂತೆ ತೋರುತ್ತದೆ. ಈ ಅಧ್ಯಯನದಲ್ಲಿನ ಒಂದು ದೊಡ್ಡ ಕೊರತೆಯೆಂದರೆ ಯಾವ ವಿವರಗಳನ್ನೂ ನೀಡದೆ ಕೇವಲ ಆ ಪದಗಳ ಯಾದಿಯೊಂದನ್ನು ಮಾತ್ರವೇ ನೀಡಿರುವುದು. ಇವನ್ನು ಪ್ರಾಕೃತ ಪದಗಳೆಂದು ಕರೆಯುವುದಕ್ಕೆ ಯಾವ ಮಾನದಂಡವನ್ನು ಅನುಸರಿಸಲಾಯಿತೆಂಬುದನ್ನಾಗಲೀ ಆ ಪದಗಳ ನಿಷ್ಪತ್ತಿ ಕ್ರಮವನ್ನಾಗಲಿ ಕುರಿತು ಏನೂ ಹೇಳಿಲ್ಲ. ಇಂಥ ಯಾವ ವಿವರಗಳನ್ನೂ ಹೊಂದಿಲ್ಲದ ಈ ಅಧ್ಯಯನ, ಅಗತ್ಯವಿದ್ದ ಒಂದು ಶಿಸ್ತಿನಿಂದ ವಂಚಿತವಾಗಿದೆಯೆಂದೇ ಹೇಳಬೇಕಾಗಿದೆ. ಮೇಲಾಗಿ ಈ ಯಾದಿಯಲ್ಲಿ ಸೇರಿರುವ ಕೆಲವು ಪದಗಳಿಗೆ ಪ್ರಾಕೃತ ಮೂಲವನ್ನೇ ಹೇಳಬೇಕೆ? ಎಂಬ ಅನುಮಾನಗಳು ಸಾಧ್ಯ. ಬದೆಂಗ, ಹರಿಗ — ಇಂಥ ನಾಮಪದಗಳನ್ನೂ ಈ ಯಾದಿಯಲ್ಲಿ ಸೇರಿಸಲಾಗಿದೆ. ಬದೆಂಗ ಎಂಬುದಕ್ಕೆ ಪ್ರಾಕೃತ—ಭದಿಂಗ; ಸಂಸ್ಕೃತ—ಭದ್ರಿಕ ಎಂಬ ಪದಗಳನ್ನು ಸಂವಾದಿಗಳಾಗಿ ನೀಡಿ 'ಹರಿಗ' ಎಂಬುದನ್ನು ಪ್ರಶ್ನಾತ್ಮಕವಾಗಿ ಉಳಿಸಿದ್ದಾರೆ. ಪಂಪ ಭದ್ರದೇವ, ಅರಿಕೇಸರಿ ಎಂಬಂಥವನ್ನು ಬಳಸಿರುವಂತೆಯೇ ಬದೆಂಗ ಹರಿಗ ಎಂಬಂಥ ಪದಗಳನ್ನೂ ಬಳಸಿದ್ದಾನೆ. ಇವು ಭದ್ರದೇವ, ಅರಿಕೇಸರಿಯಂಥ ಪದಗಳಿಗೆ ಪರ್ಯಾಯವಾಗಿ ಕವಿಯೇ ಸೃಷ್ಟಿಸಿದ ಪದಗಳಾಗಿರಬಾರದೇಕೆ? ಆತ್ಮೀಯತೆ ಮತ್ತಿತರ ಕಾರಣಗಳ ಫಲವಾಗಿ ನಾಮಪದಗಳು (ಕೆಲವಾದರೂ) ಇಂಥ ರೂಪ ಭೇದಗಳನ್ನು ಪಡೆಯುವುದು ಭಾಷೆಯ ಬಳಕೆಯ ನೆಲೆಯಲ್ಲೂ ಕಾಣಬರುವಂಥದೇ. ಕವಿ ತನ್ನ ಪರಿಸರದ ಬಳಕೆಯ ಭಾಷೆಯಿಂದ ಪ್ರಭಾವಿತನಾಗುವಂತೆಯೇ, ಭಾಷೆಗಿರುವ ಹೊಸ ಸೃಷ್ಟಿ ಸಾಧ್ಯತೆಗಳನ್ನು ಸಾಧ್ಯಗೊಳಿಸುವುದರ ಮೂಲಕ ಭಾಷೆಯನ್ನೂ ಪ್ರಭಾವಿಸಬಲ್ಲ, ಎಂಬ ಅಂಶವನ್ನು ಗಮನಿಸಬೇಕು.

ಎಂ.ವಿ.ನೇಗಿನಹಾಳರ 'ಪಂಪನ ಭಾಷಿಕ ಅಧ್ಯಯನ' ಇತ್ತೀಚೆಗೆ ಬಂದುದಾಗಿದ್ದು,[7] ಇಲ್ಲಿ ಈಗಾಗಲೇ ಹಳಗನ್ನಡದ ಬಗ್ಗೆ ಇದ್ದ ಕೆಲವು ಸಾಮಾನ್ಯ ಗ್ರಹಿಕೆಗಳ ಹಿನ್ನೆಲೆಯಲ್ಲೇ ಪಂಪನ ಭಾಷೆಯನ್ನು ನೋಡಲಾಗಿದೆ. "ಪೂರ್ವದ ಹಳಗನ್ನಡದ ವರ್ಣ ಸಮುದಾಯವೇ ಪಂಪನಲ್ಲಿಯಾದರೂ ಅವುಗಳಲ್ಲಿ ಕೆಲವು ಪರಿವರ್ತನೆ ಹೊಂದಿರುವುದನ್ನೂ ಗುರುತಿಸಬಹುದು." "ಎರಡು ಸ್ವರಗಳ ಮಧ್ಯೆ ಮ>ವ ಆಗಿ ಪರಿವರ್ತಿತವಾಗುವ ಪ್ರಕ್ರಿಯೆ ನಡುಗನ್ನಡದಲ್ಲಿ ವಿಶೇಷ. ಪಂಪನಲ್ಲಾಗಲೇ ಈ ಬದಲಾವಣೆಯ ಸುಳಿವು ಕಾಣಬರುತ್ತದೆ." ಎಂಬಂಥ ಮಾತುಗಳಲ್ಲದೆ ಸಬಿಂದುಕ – ಅಬಿಂದುಕಗಳ ವಿಚಾರ, ವಿಭಕ್ತಿ ಪಲ್ಲಟದ ವಿಚಾರ, ಪಂಪನ ವಿಶಿಷ್ಟ ಪ್ರಯೋಗಗಳು, ಗಾದೆ– ಪಡೆನುಡಿ– ರೂಢಿಯ ಮಾತು ಇತ್ಯಾದಿಗಳ ಬಗೆಗಿನ ವಿವರಗಳು – ಇಂಥವೆಲ್ಲ ಈ ಮೊದಲೇ ಪ್ರಸ್ತಾಪಿತವಾಗಿದ್ದ ಸಂಗತಿಗಳಾಗಿದ್ದು ಇಲ್ಲಿ ಮತ್ತೊಮ್ಮೆ ಪುನರ ಪ್ರಸ್ತಾಪಿತವಾಗಿವೆ. ಈ ಪ್ರಸ್ತಾಪಗಳ ಮಧ್ಯೆ ಎತ್ತಿರುವ ಒಂದು ಅಂಶ ಗೊಂದಲಕರವಾಗಿರುವಂತೆ ತೋರುತ್ತದೆ. "ರೇಫ, ಶಕಟ ರೇಫ ಮತ್ತು ಳಗಳ ಉಚ್ಚಾರದಲ್ಲಿ ಹತ್ತನೆಯ ಶತಮಾನಕ್ಕಾಗಲೇ ತುಂಬಾ ಗೊಂದಲವುಂಟಾಗಿತ್ತೆಂಬುದು ನಮಗೆ ಶಾಸನಗಳಿಂದ ತಿಳಿದು ಬರುವ ಸಂಗತಿ. ಈ ಗೊಂದಲ ಕಾರಣವಾಗಿ ವ್ಯಂಜನ ಪೂರ್ವ ರೇಫೆಯನ್ನು ಕೆಲವೊಮ್ಮೆ ಳವಾಗಿ ಉಚ್ಚರಿಸುವುದೂ ಇತ್ತು." ಎಂದು ಹೇಳಿ "ಪಂಪ ಭಾರತದ ಒಂದು ಪ್ರಯೋಗವನ್ನು (4– 68) ಪೆಟ್ಟುವೆ(ರ್ಚ) ಎಂದು ಅದರ ಸಂಪಾದಕರು ತಿದ್ದಿದ್ದಾರೆ. ಆದರೆ ಕಾವ್ಯದ ಎಲ್ಲ ಹಸ್ತಪ್ರತಿಗಳಲ್ಲೂ 'ಪೆಟ್ಟುವೆೞ್ಚು' ಎಂದೇ ಇದೆ. ಇದೇ ಬಹುಶಃ ಮೂಲ ಕವಿಯ ಪ್ರಯೋಗವಾಗಿರಬೇಕು. ಯಾಕೆಂದರೆ ಅೞ್ಚಿ, ಬಾೞ್ಚಿ, ಮನೆವಾೞ್ಚಿ, ಬಿೞ್ಚು ಇವಿಷ್ಟೂ ರೂಪಗಳು ಪಂಪನಲ್ಲಿವೆ. ಇಲ್ಲೆಲ್ಲ ರೇಫೆಯೇ ಮೂಲದಲ್ಲಿರಬೇಕಾದದ್ದು. ಇವುಗಳ ವಿಚಾರದಲ್ಲಿ ಪಂಪ ಭಾರತದ ಸಂಪಾದಕರಿಗೆ ಎಳ್ಳಷ್ಟೂ ಸಂಶಯ ಉಂಟಾಗಿಲ್ಲ." ಎಂದಿದ್ದಾರೆ. ಬರಹದಲ್ಲಿ ರೇಫೆ

---

7. ಅಣ್ಣಿಗೆರೆಯಲ್ಲಿ ಪಂಪನನ್ನು ಕುರಿತು ನಡೆದ ವಿಚಾರ ಸಂಕಿರಣದಲ್ಲಿ ಮಂಡಿತ (1985).

ಮತ್ತು ರಳಗಳ ಮಧ್ಯೆ ಗೊಂದಲವಿತ್ತೆಂಬ ಅಂಶ ಸರಿಯೆ. ಆದರೆ 'ರೇಫೆಯೇ ಮೂಲದಲ್ಲಿರಬೇಕಾದದ್ದು' ಎಂದು ಅವರು ತೋರಿಸುವ ಪ್ರಯೋಗಗಳು ಅವರ ವಾದದ ಬಗ್ಗೆ ಅನುಮಾನಗಳನ್ನು ಹುಟ್ಟಿಸುತ್ತವೆ. 'ಱ' ಸ್ವರಗಳ ಮಧ್ಯೆ ಇರುವಾಗ 'ಳ' ಆಗಿಯೂ, ದ್ವಿತ್ವ ಸಮೇತವಿರುವಾಗ ರೇಫೆಯಾಗಿಯೂ ಬದಲಾದುದು ಕನ್ನಡ ಭಾಷೆಯ ಚರಿತ್ರೆಯಲ್ಲಿ ಸ್ಪಷ್ಟವಿರುವ ಸಂಗತಿ. ಆದರೆ ಇದಕ್ಕೆ ವ್ಯತಿರಿಕ್ತವಾದ ಪ್ರಕ್ರಿಯೆಯನ್ನು ಕುರಿತು ಇಲ್ಲಿ ಹೇಳಿರುವಂತಿದೆ. ಇದು ಸಂಗತವಾದುದಲ್ಲ.

ಇಷ್ಟು ಹೊರತು ಈ ನೆಲೆಯಿಂದ ಪಂಪನ ಭಾಷೆಯನ್ನು ಕುರಿತ ಚರ್ಚೆಗಳು ನಡೆದಂತಿಲ್ಲ. ಪಂಪನ ಕಾಲದ ಭಾಷೆಯ ಸ್ವರೂಪವನ್ನು ಕುರಿತಂಥ ಕೆಲವು ಚರ್ಚೆಗಳಲ್ಲಿ[8] ಪ್ರಾಸಂಗಿಕವಾಗಿ ಪಂಪನ ಭಾಷೆಯ ಕುರಿತಂತೆ ಕೆಲವು ಸಂಗತಿಗಳನ್ನು ಹೇಳಲಾಗಿದೆಯೆಂಬ ಅಂಶವನ್ನು ಈ ಹಿಂದೆ ಸೂಚಿಸಲಾಗಿದೆ. ಹೀಗೆ ಪಂಪನ ಕಾವ್ಯಗಳ ಭಾಷೆಯನ್ನು ದಾಖಲೆಯಂತೆ ಗ್ರಹಿಸಿ ನಡೆದಿರುವ ಅಧ್ಯಯನಗಳಿಂದ ಹಲವು ಉಪಯೋಗಗಳಿರಬಹುದು. ಸಾಹಿತ್ಯಾಧ್ಯಯನಕ್ಕೂ ಕೆಲಮಟ್ಟಿಗೆ ಈ ಅಧ್ಯಯನಗಳಿಂದ ನೆರವಿದೆ. ಆದರೂ ಇವು ಕೃತಿಯ ಹೊರಗಿನ ಉದ್ದೇಶಗಳಿಗೆ ಕೃತಿಯ ಭಾಷೆಯನ್ನು ಒಂದು ಸಾಧನವನ್ನಾಗಿ ಬಳಸಿವೆಯೆಂಬುದು ಸ್ಪಷ್ಟ ಸಂಗತಿ.

---

8. ಕುಶಾಲಪ್ಪ ಗೌಡರ 'ಈ ಕಾಲದ ಭಾಷೆಯ ಸ್ವರೂಪ' (ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಸಂ.) ಜಿ.ಎಸ್.ಶಿವರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾಲಯ 1975) ಎಂಬ ಬರಹದಲ್ಲಿ ಪಂಪನ ಭಾಷೆಯನ್ನು ಕುರಿತ ಕೆಲವು ವಿವರಗಳಿವೆ. ಅನೇಕ ನುಡಿಗಟ್ಟುಗಳನ್ನು, ನಾಣ್ಣುಡಿಗಳನ್ನು ಪಂಪನಿಂದ ನಿದರ್ಶಿಸಲಾಗಿದೆ.

## 4.2.2 ಪಂಪನ ಕಾವ್ಯ ಭಾಷೆಯನ್ನು ಅವನ ವಿಶಿಷ್ಟತೆಯನ್ನಾಗಿ ಗ್ರಹಿಸಿದ ಅಧ್ಯಯನಗಳು

ಇಲ್ಲಿ ಗಮನಿಸಬಹುದಾಗಿರುವ ಅಧ್ಯಯನಗಳು ಪಂಪನ ಕಾವ್ಯ ಭಾಷೆಯನ್ನು ನೋಡುವ ದೃಷ್ಟಿ ಹಾಗೂ ಉದ್ದೇಶಗಳ ನೆಲೆಯಲ್ಲಿ ಇದುವರೆಗೆ ಗಮನಿಸಿದ ಅಧ್ಯಯನಗಳಿಗಿಂತ ಸ್ಪಷ್ಟವಾಗಿ ಭಿನ್ನವಾಗಿವೆ. ಈ ಅಧ್ಯಯನಗಳಲ್ಲಿ ಪಂಪನ ದೇಸಿಯನ್ನು ಕುರಿತ, ಶೈಲಿಯನ್ನು ಕುರಿತ ಚರ್ಚೆಗಳೆಲ್ಲ ಸೇರುತ್ತವೆಯಾಗಿ, ಇವೆಲ್ಲವನ್ನೂ ಒಟ್ಟಾಗಿ ಪಂಪನ ವಿಶಿಷ್ಟತೆಯನ್ನಾಗಿ ಗ್ರಹಿಸಿದವುಗಳೆಂದು ಗುರುತಿಸಬಹುದಾದದ್ದು ಸ್ಥೂಲವಾದ ಅರ್ಥದಲ್ಲಿ ಮತ್ತು ಅಧ್ಯಯನದ ಸೌಕರ್ಯಕ್ಕಾಗಿ. ಆದರೂ ಈ ಎಲ್ಲ ಚರ್ಚೆಗಳೂ ಕಾವ್ಯ ಭಾಷೆಯನ್ನು ಪಂಪನ ಅಭಿವ್ಯಕ್ತಿ ಸಂಬಂಧದ ನೆಲೆಯಲ್ಲೇ ನೋಡುವಂಥವು.

ಈ ಚರ್ಚೆಗಳಲ್ಲಿ ಬಳಸಲಾಗಿರುವ ಕೆಲವು ಪರಿಭಾಷೆಗಳಿವೆ. ಮುಖ್ಯವಾಗಿ 'ಮಾರ್ಗ' – 'ದೇಸಿ', 'ಸಮನ್ವಯ', 'ಶೈಲಿ' ಇತ್ಯಾದಿ. ಇವುಗಳಲ್ಲಿ 'ಮಾರ್ಗ' – 'ದೇಸಿ' ಗಳಿಗೆ ಪಂಪನೇ ಮೂಲ. 'ಸಮನ್ವಯ' ಎಂಬ ಪರಿಭಾಷೆ ಬಳಕೆಯಾದುದರ ಹಿನ್ನೆಲೆಯಲ್ಲಿ ಕೂಡ ಪಂಪನೇ ಬಳಸಿದ 'ಒಡಂಬಡಂ' ಎಂಬ ಪದವೋ ಅದು ಸೂಚಿಸುವ ಅರ್ಥವೋ ಇರಬಹುದೆಂದು ತೋರುತ್ತದೆ. 'ಮಾರ್ಗ' ಮತ್ತು 'ದೇಸಿ'ಯನ್ನು ಪಂಪ ಭಾಷಾ ಸಂಬಂಧಿಯಾದ ಅರ್ಥದಲ್ಲಿ ಹೇಗೋ ಹಾಗೆಯೇ ಭಾಷೇತರ ನೆಲೆಯಲ್ಲೂ ಬಳಸಿದ್ದಾನೆ. ಇದನ್ನು ಈಗಾಗಲೇ ನಮ್ಮ ವಿಮರ್ಶಕರು ಗುರುತಿಸಿದ್ದಾರೆ. ಇನ್ನು 'ಮಾರ್ಗ' – 'ದೇಸಿ' ಗಳು ಪಂಪನಲ್ಲಿ ಬಳಕೆಯಾಗಿರುವ ವಿಧಾನವನ್ನು 'ಶೈಲಿ' ಎಂಬ ಪದ ಸೂಚಿಸುತ್ತದೆ. ಈ ಪರಿಭಾಷೆಗಳನ್ನು ಮತ್ತು ಇವು ಸೂಚಿಸುವ ಸಂಗತಿಗಳನ್ನು ಗ್ರಹಿಸುವಲ್ಲಿ ಪಂಪನ ಕಾವ್ಯ ಭಾಷೆಯನ್ನು ಕುರಿತ ಮೊದಮೊದಲ ಅಧ್ಯಯನಗಳಿಗೂ, ಇತ್ತೀಚಿನ

ಅಧ್ಯಯನಗಳಿಗೂ ಕೆಲವು ವ್ಯತ್ಯಾಸಗಳಿವೆ. ಇದನ್ನು ಮುಂದೆ ಗಮನಿಸಬಹುದು.

ಇದಲ್ಲದೆ, ಕಾವ್ಯದಲ್ಲಿ ಭಾಷೆ ಹೇಗೆ ಬಳಕೆಯಾಗಬೇಕೆಂಬುದನ್ನು ಸೂಚಿಸುವ ಪಂಪನ ಕೆಲವು ಮಾತುಗಳಿವೆ. ಹಲವು ಪ್ರಮುಖ ವಿಮರ್ಶಕರ ಗಮನವನ್ನು ಸೆಳೆದಿರುವ ಪಂಪನ ಪದ್ಯವೊಂದು ಹೀಗಿದೆ:—

"ಬಗೆ ಪೊಸತಪ್ಪುದಾಗಿ ಮೃದು ಬಂಧದೊಳೊಂದುವುದೊಂದಿ ದೇಸಿಯೊಳ್
ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯಬಂಧಮೊ
ಪ್ಪುಗುಮೆಂತು ಮಾವು ಕೆಂದಳಿರ ಮಾವಿನ ಬಿಸುಪ್ಪಿಣಿಯಿಂ ಬೞಲ್ದು ತುಂಬಿ
ಬಗಳಿನೆ ತುಂಬಿ ಕೋಗಿಲೆಯ ಬಗ್ಗನೆ ಸುಗ್ಗಿಯೊಳೊಪ್ಪುವಂತೆ ಪೋಲ್"

(ವಿ.ವಿ. 1—8)

ಕಾವ್ಯ ಬಂಧವನ್ನು ಕುರಿತು ಹೇಳುವ ಈ ಪದ್ಯದಲ್ಲಿ 'ಮಾರ್ಗ'— 'ದೇಸಿ' ಗಳು ಬಳಕೆಯಾಗಬೇಕಾದ ಒಂದು ಕ್ರಮವನ್ನು ಸೂಚಿಸಲಾಗಿದೆ. "........... ಪೇೞ್ವೆಂ ಪೆಂಗಪ್ಪ ಮಾರ್ಗದೊಳಂ ದೇಸಿಯೊಳಂ ಪೊಡರ್ಪೆನಿವಿನಂ ..........." ಎಂಬ ಮಾತು (ಆ.ಪು. 16—40) 'ಮಾರ್ಗ'— 'ದೇಸಿ' ಗಳ ಬಳಕೆಗೆ ಸಂಬಂಧಿಸಿದ ಒಂದಂಶವನ್ನೇ ಹೇಳುತ್ತಿದೆ. ಹಾಗೆಯೇ 'ಮೃದು ಪದಗತಿ', 'ಕೊಂಕುವೆತ್ತ ಪೊಸನುಡಿ', 'ಮೃದು ಮಧುರ ವಚನ ರಚನೆ', 'ಲಲಿತ ಪದಂ' ಎಂಬುವುಗಳಲ್ಲದೆ, 'ಹಿತಮಿತ ಮೃದು ವಚನನ' ಎಂದು ಪಂಪ ತನ್ನನ್ನು ಕರೆದುಕೊಂಡಿರುವುದು — ಇವೆಲ್ಲ ಕಾವ್ಯ ಭಾಷೆಯನ್ನು ಕುರಿತಂತೆ ಪಂಪನ ಅಪೇಕ್ಷೆಗಳನ್ನೇ ಹೇಳುತ್ತಿವೆ. ಇನ್ನು ಗುಣ ಮತ್ತು ಅಲಂಕಾರಗಳ ನೆಲೆಯಲ್ಲಿ ಕಾವ್ಯವನ್ನು ವಿವರಿಸುವ "ಆ ಸಕಲಾರ್ಥ ಸಂಯುತಮಳಂಕೃತಿಯುಕ್ತಮುದಾತ್ತವೃತ್ತಿ ವಿನ್ಯಾಸಮನೇಕ ಲಕ್ಷಣ ಗುಣ ಪ್ರಭವಂ ..........." (ವಿ.ವಿ. 1—9), "ವಿದಿತಂ ಪ್ರಾತೀತಿಕಂ

ಕೋಮಲವೃತ್ತಿಸುಭಗಂ ಸೂಕ್ತಿಗರ್ಭಂ ಮೃದು ಸಂದರ್ಭಂ ವಿಚಾರಕಮುಚಿತ ಪದಂ ..........." (ಆ.ಪು. 1–26) ಎಂಬ ಮಾತುಗಳಿಂದಲೂ ಕಾವ್ಯ ಭಾಷೆಯನ್ನು ಕುರಿತ ಪಂಪನ ನಿಲುವುಗಳನ್ನು ತಿಳಿಯಬಹುದಾಗಿದೆ. ಪಂಪನೇ ಹೇಳಿಕೊಂಡಿರುವ ಇಂಥಲ್ಲ ಮಾತುಗಳಿಂದ ಕಾವ್ಯ ಭಾಷೆಯನ್ನು ಕುರಿತ ಪಂಪನ ನಿಲುವುಗಳನ್ನು, ಅಪೇಕ್ಷೆಗಳನ್ನು ತಿಳಿಯಲು ಬರುತ್ತದೆಯಾದರೂ, ಅವುಗಳ ಖಚಿತವಾದ ನೆಲೆಗಳನ್ನು ತಲುಪಲು ಕಾವ್ಯವನ್ನೇ ಆಶ್ರಯಿಸಬೇಕಾಗುತ್ತದೆ. ಪಂಪನ ಕಾವ್ಯ ಭಾಷೆಯನ್ನು ಕುರಿತ ಚರ್ಚೆಗಳಲ್ಲಿ ಕೆಲವೆಡೆಗಳಲ್ಲಿಯಾದರೂ ~~ಪಂಪನ~~ ಮೇಲೆ ಪ್ರಸ್ತಾಪಿಸಿದ ಮಾತುಗಳ ಪ್ರಭಾವವಿರುವುದನ್ನು ಗುರುತಿಸಬಹುದು. ಕಾವ್ಯ ಭಾಷೆಯನ್ನು ಕುರಿತ ಪ್ರಾಸಂಗಿಕವಾದ ಚರ್ಚೆಗಳಲ್ಲಿಯಂತೂ ಪಂಪನ ಮಾತುಗಳಿಂದಲೇ ಪ್ರಾರಂಭಿಸಿ, ಇವುಗಳಿಂದಲೇ ಮುಗಿಸುವುದನ್ನು ಕಾಣಬಹುದು. ಎಂದೇ ಇಂಥ ಚರ್ಚೆಗಳು ಪಂಪನ ಮೃದುವಚನ ರಚನೆಯನ್ನು, ಪ್ರಸನ್ನ ಕವಿತಾ ಗುಣವನ್ನು ಪ್ರಶಂಸಿಸಿ ಸಂಭ್ರಮಿಸುವುದರಲ್ಲೇ ಪರ್ಯವಸಾನವಾಗುತ್ತವೆ. ಪಂಪನ ಕಾವ್ಯ ಭಾಷೆಯ ಸ್ವರೂಪವನ್ನು ತಿಳಿಯಲು ಅವನ ಮಾತುಗಳಿಂದ ಕೆಲವು ಸೂಚನೆಗಳು ದೊರೆಯುವುದನ್ನು ನಿರಾಕರಿಸಲಾಗದು. ಆದರೆ ಈ ಸೂಚನೆಗಳ ಹಿನ್ನೆಲೆಯಲ್ಲಿ, ಅವನ ಭಾಷಾ ರಚನೆಯ ಪ್ರತ್ಯಕ್ಷ ನಿದರ್ಶನಗಳಾಗಿರುವ ಕೃತಿಗಳಿಂದಲೇ ಹೊರಪಡುವ ನಿಲುವುಗಳು ಮುಖ್ಯವಾಗಬೇಕಾಗುತ್ತದೆ. ಪಂಪನ ಕಾವ್ಯ ಭಾಷೆಯನ್ನು ಕುರಿತ ಕೆಲವು ಪ್ರಬುದ್ಧ ಚರ್ಚೆಗಳು ಈ ಅಂಶವನ್ನು ಗಂಭೀರವಾಗಿ ಪರಿಗಣಿಸಿವೆ.

#### 4.2.2.1 ಕೆಲವು ಮೊದಲ ಚರ್ಚೆಗಳು

ಇಷ್ಟು ವಿವರಗಳ ಹಿನ್ನೆಲೆಯಲ್ಲಿ ಪಂಪನ ಕಾವ್ಯ ಭಾಷೆಯನ್ನು ಕುರಿತ ಕೆಲವು ಚರ್ಚೆಗಳನ್ನು ಗಮನಿಸಬಹುದು. ಮೊದಲಿಗೆ, ಮುಳಿಯ ತಿಮ್ಮಪ್ಪಯ್ಯನವರ

ದೇಸಿಯನ್ನು ಕುರಿತ ಸುದೀರ್ಘವಾದ ಚರ್ಚೆಯನ್ನೇ [9] ಗಮನಿಸೋಣ. 'ವಾಙ್ಮಯದ ದೇಸಿ' ಎಂಬ ಪದವನ್ನು ಬಳಸುವರಾದರೂ ಮುಳಿಯ ಅವರು ದೇಸಿಯನ್ನು ಭಾಷಾ ಸಂಬಂಧಿಯಾದುದಾಗಿ ಮಾತ್ರ ಗಮನಿಸುವುದಿಲ್ಲ. ದೇಸಿಯ ಭಾಷೇತರವಾದ ನೆಲೆಗಳನ್ನೂ ವಿವಕ್ಷೆಯಲ್ಲಿರಿಸಿಕೊಂಡಿದ್ದಾರೆ. ಹೀಗಾಗಿ ಮುಳಿಯ ಅವರ ದೇಸಿಯ ಗ್ರಹಿಕೆ, ಅದರ ವ್ಯಾಪಕವಾದ ಅರ್ಥದಲ್ಲಿಯೇ ಎನ್ನಬಹುದು. 'ದೇಸಿ' – 'ಮಾರ್ಗ' ಕುರಿತಂತೆ ಮುಳಿಯ ಅವರು ನೀಡುವ ಕೆಲವು ವಿವರಗಳು ಹೀಗಿವೆ :–

"ದೇಸಿ – ಮಾರ್ಗ" ಗಳೆಂದು ಕಾವ್ಯ ಪದ್ಧತಿಯೊಳಗೆ ಮುಖ್ಯವಾಗಿ ಎರಡು ಕವಲಿದೆ, ಎಂಬುದು ಕನ್ನಡ ಕಾವ್ಯ ಪರಿಶೀಲನದಿಂದಂತೂ ಸ್ಪಷ್ಟವಾಗುತ್ತಿದೆ. ಅದರಿಂದ 'ದೇಸಿ' ಪದಕ್ಕೆ ಅದರ ಸ್ವರೂಪದಿಂದಲೆ ಸೂಚಿತವಾಗುವ 'ದೇಶ ಸಂಬಂದ್ಧವಾದುದು' ಎಂಬ ವಾಚ್ಯಾರ್ಥವಿದ್ದಿರಬೇಕು, ಎಂಬುದು ಸಿದ್ಧವಾಗುತ್ತಿದೆ. ಈ 'ದೇಸಿ – ದೇಶಿ' ಎಂಬ ಒಂದು ವಿಶಿಷ್ಟ ಧರ್ಮವು ಕಾವ್ಯ ಪ್ರಪಂಚದಲ್ಲಿ ಮಾತ್ರವೇ ಅಲ್ಲ; ಸಂಗೀತ, ವೈದ್ಯ ಶಾಸ್ತ್ರ ಮೊದಲಾದವುಗಳಲ್ಲಿಯೂ ಇರುವಂತೆ ತೋರುತ್ತದೆ." (ಪು : 231)

"ಯಾವುದರಿಂದ ಸಾಮಾನ್ಯವಾಗಿ ಉದ್ದೇಶವನ್ನು ಗುರಿಗೊಳ್ಳಲಾಗುತ್ತದೋ ಅದು ಮಾರ್ಗವು. ಅಥವಾ ಏಕ ಜಾತೀಯವಾದ ಹಲವು ವಿಷಯಗಳನ್ನು ವರ್ಗೀಕರಿಸಿ, ಸಮಾನತೆವಡೆದ, ಆ ವರ್ಗದತ್ತ ಸಹೃದಯರ ಮನಸ್ಸನ್ನು ಗುರಿಗೊಳಿಸುವ ಲಕ್ಷಣ

---

9. ನೋಡಿ : ಮುಳಿಯ ತಿಮ್ಮಪ್ಪಯ್ಯ, ನಾಡೋಜ ಪಂಪ, ಮಂಗಳೂರು, 1938. ಪು: 222–240; 245–323; 429–432 ಇತ್ಯಾದಿ. ಮುಳಿಯ ಅವರಿಂದ ಈ ಚರ್ಚೆಯ ಸಂಬಂಧದಲ್ಲಿ ಉದ್ಧರಿಸುವ ಉದ್ಧರಣೆಗಳ ಪುಟ ಸಂಖ್ಯೆಗಳು ಈ ಮುದ್ರಣದವು.

ಶಾಸ್ತ್ರವನ್ನೇ ಮಾರ್ಗವೆಂದು ಕರೆಯುವುದು. ಆ ಲಕ್ಷಣ ಸೂತ್ರಕ್ಕೊಳಗಾಗದೆ ಬೇರೆ ಬೇರೆಯಾಗಿ ಚದುರಿದುದೇ ದೇಸಿ. ಆ ದೇಸಿಗಳೊಳಗೆ ಸಹೃದಯರೆದೆಗೊಪ್ಪದುದು 'ಗ್ರಾಮ್ಯ'ವೆಂದೂ ಒಪ್ಪುವುದು 'ಅಗ್ರಾಮ್ಯ'ವೆಂದೂ ಎರಡು ಭೇದವಿದೆ." (ಪು : 233)

ಈ ಎರಡೂ ಉದ್ಧರಣೆಗಳಿಂದ ಮುಳಿಯ ಅವರು ದೇಸಿಯನ್ನು ಹೇಗೆ ಗ್ರಹಿಸುತ್ತಾರೆಂಬುದನ್ನು ತಿಳಿಯಬಹುದು. ಈ ಹಿನ್ನೆಲೆಯಲ್ಲಿ ಅವರು 'ಪಂಪನಲ್ಲಿ ತೋರುವ ಬಹುಮುಖವಾದ ದೇಸಿಗಳನ್ನು' ಗುರುತಿಸಿದ್ದಾರೆ. ಅವರು ಗುರುತಿಸಿದ ಬಹುಮುಖ ದೇಸಿಗಳು ಹೀಗಿವೆ :—

(1) ನುಡಿಗಳ ದೇಸಿ
(2) ನುಡಿಗಬ್ಬನ ದೇಸಿ
(3) ಗಾದೆಯ ದೇಸಿ
(4) ಛಂದಸ್ಸಿನ ದೇಸಿ ಅಥವಾ ದೇಸಿ ಹಾಡು
(5) ಜೋತಿಷ್ಯ ವಿಚಾರದ ದೇಸಿ
(6) ವೇಶ್ಯಾವಾಟದೊಳಗಿನ 'ಮಧು ದೇವತಾರಾಧನೆ' ಯ ದೇಸಿ
(7) ಮೃಗಯಾ ವಿನೋದದೊಳಗಿನ ದೇಸಿ

ಮುಳಿಯ ಅವರು ಗುರುತಿಸಿದ ದೇಸಿಯ ಈ ಹಲವು ಮುಖಗಳಲ್ಲಿ ಕೆಲವು ನೇರವಾಗಿ ಭಾಷಾ ಸಂಬಂಧಿಗಳಾದರೆ, ಮತ್ತೆ ಕೆಲವು ಭಾಷೇತರವಾದ ದೇಸಿಯ ನೆಲೆಯಲ್ಲಿ ನೇರುವಂಥವು. ಹೀಗೆನ್ನುವಾಗಲೂ ಆ ಭಾಷೇತರವಾದ ದೇಸಿಯ ವಿವರಗಳು ವ್ಯಕ್ತಗೊಂಡಿರುವುದು ಭಾಷಿಕವಾದ ದೇಸಿಯ ಮೂಲಕವೇ ಎಂಬುದನ್ನಾಗಲಿ, ಭಾಷೇತರವಾದ ದೇಸಿಯ ನೆಲೆಗಳ ವಿವರಣೆಯ ಸಂದರ್ಭದಲ್ಲಿ, ಕನ್ನಡದ ಕೆಲವು ವಿಶಿಷ್ಟ ಪ್ರಯೋಗಗಳ ವಿವರಣೆ — ವಿಶ್ಲೇಷಣೆಯಲ್ಲಿ ಮುಳಿಯ ಅವರು ನೀಡುವ ವಿಶೇಷ ಒತ್ತನ್ನಾಗಲಿ ನಿರಾಕರಿಸಲಾಗದು.

ಇನ್ನು, ಮುಳಿಯ ಅವರು ನಡೆಸಿರುವ ಪಂಪನ ದೇಸಿಯ ಕುರಿತಾದ ಸವಿಸ್ತಾರವಾದ ಚರ್ಚೆಯಲ್ಲಿ ಕಾಣಬರುವ ಕೆಲವು ಮುಖ್ಯಾಂಶಗಳನ್ನಿಲ್ಲಿ ಗಮನಿಸಬಹುದು.

ಮೊದಲನೆಯ ಹಾಗೂ ಬಹು ಮುಖ್ಯವಾದ ಅಂಶವೆಂದರೆ, ದೇಸಿಯನ್ನು ಬಿಡಿ ವಿವರಗಳಾಗಿ ಗ್ರಹಿಸಿರುವುದು ಮತ್ತು ಅವನ್ನು 'ಬಿಡಿ' ಗಳಾಗಿಯೇ ವಿವರಿಸಿರುವುದು. 'ಪಂಪನ ದೇಸಿ' ಎಂಬ ಅಧ್ಯಾಯದ ಪ್ರಾರಂಭದಲ್ಲಿ ಇಂಥ ಚರ್ಚೆಯ ಉದ್ದೇಶವನ್ನು ಕುರಿತು ಹೇಳುವ ಮುಳಿಯ ಅವರ ಮಾತುಗಳೂ ಇದಕ್ಕೆ ಪೂರಕವಾಗಿಯೇ ಇವೆ. ವಿಕ್ರಮಾರ್ಜುನ ವಿಜಯದ ಉಪೋದ್ಘಾತದಲ್ಲಿ "ಅನೇಕ ಪದಗಳಿಗೆ ನಿಷ್ಕೃಷ್ಟವಾದ ಅರ್ಥವು ಇದೇ ಎಂದು ಹೇಳಲು ನಮಗೆ ಸಾಧ್ಯವಾಗಿಲ್ಲ. ವೇಶ್ಯಾ ವಿಹಾರ ಮತ್ತು ಮೃಗಯಾ ವಿನೋದದ ಸಂಬಂಧವಾದ ಪದಗಳಲ್ಲಿ ಕೆಲವಕ್ಕೆ ನಮಗೆ ಅರ್ಥ ತಿಳಿಯದು" ಎಂಬ ಸಂಪಾದಕರ ಮಾತನ್ನು ಪ್ರಸ್ತಾಪಿಸಿ ಮುಳಿಯ ಅವರು "ಸಂಪಾದಕರ ಆ ಮಾತು, ಪಂಪನ ದೇಸಿಯ ಗಹನತೆಯನ್ನೇ ಸೂಚಿಸುತ್ತದೆ. ಅಷ್ಟೊಂದು ದುರ್ಘಟವಾದ ದೇಸಿಯನ್ನು ಒಂದಿಷ್ಟಾದರೂ" ವಿವರಿಸುವ ಪ್ರಯತ್ನ ತಪ್ಪದೆಂಬುದನ್ನು ಸೂಚಿಸಿದ್ದಾರೆ. 'ನುಡಿಗಳ ದೇಸಿ' ಎಂಬಲ್ಲಿ 'ತೆಗಳೆ', 'ಕುಮ್ಮರಿ', 'ಪುಳಿಂದು', 'ಕಳಿಂದು', 'ಕೊಡಸಾರಿ', 'ಎಡವಟ್ಟಿ', 'ಎಕ್ಕ ಸಕ್ಕತನ' ಇಂಥ ಕೆಲವು ಪದಗಳನ್ನು ಕುರಿತ ವಿವರಪೂರ್ಣವಾದ ಚರ್ಚೆಯಿದೆ. ಇಂಥ ಪದಗಳಲ್ಲಿ ಬಹುಮಟ್ಟಿಗೆ ವಿಕ್ರಮಾರ್ಜುನ ವಿಜಯದ ನಿಘಂಟಿನಲ್ಲಿ ಸಂದೇಹಾಸ್ಪದವಾಗಿ ಉಳಿದಿದ್ದವುಗಳೇ ಆಗಿದ್ದು, ಅಂಥ ಸಂದೇಹಗಳನ್ನು ಇಲ್ಲಿ ಪರಿಹರಿಸುವ ಪ್ರಯತ್ನವಿದೆ. ಅದೇ ರೀತಿ 'ಪರಿಗೊಳ್', 'ಮೂರಿವಿಡು', 'ಒಂದಕೆಯ್ಯುವಿಲ್ಲ ಕೈಯೊಳ್' ಇತ್ಯಾದಿ ನುಡಿಗಟ್ಟುಗಳನ್ನೂ, 'ನೆಟ್ಟಯ ಬಳ್ಳಿಂ ಕಿಱಿದು', 'ಅಕ್ಕಿಗೊಟ್ಟು ಮಡಗೂ ಬಿಣ್ಪಿಂದಂ', 'ಬಡಿಗಂಡನಿಲ್ಲ ಪಾಲನೆ ಕಂಡಂ' ಇಂಥ ಗಾದೆಗಳನ್ನೂ ಕುರಿತು ವಿವರಿಸಲಾಗಿದೆ. ಇವೆಲ್ಲ ಭಾಷಿಕವಾದ ದೇಸಿಗೆ ಸಂಬಂಧಿಸಿದ್ದು, ಭಾಷೇತರವಾದ ದೇಸಿಯ ನೆಲೆಯಲ್ಲೂ ಮುಳಿಯ ಅವರು ಬಿಡಿ ವಿವರಗಳಾಗಿಯೇ ಗ್ರಹಿಸಿರುವುದನ್ನು ಗಮನಿಸಬಹುದು.

ಬಿಡಿ ವಿವರಗಳಾಗಿ ಗ್ರಹಿಸುತ್ತಾರೆ ಎನ್ನುವಾಗ ಒಂದೊಂದೂ ಘಟಕವನ್ನು ತನಗೆ ತಾನೆ ಪ್ರತ್ಯೇಕವೆಂಬಂತೆ ನೋಡುತ್ತಾರೆ ಎಂದಷ್ಟೆ.

ಇನ್ನೊಂದು ಅಂಶವೆಂದರೆ, ಪಂಪನಲ್ಲಿ ಗುರುತಿಸಿದ ದೇಸಿ ವಿವರಗಳಿಗೆ ಇಂದಿನ ಪ್ರಾದೇಶಿಕ ಬದುಕಿನ ಕೆಲವು ವಿವರಗಳೊಂದಿಗೆ ಇರುವ ಹೋಲಿಕೆಯನ್ನು ತೋರಿಸುವುದು. ಉದಾಹರಣೆಗೆ ಕೆಲವು ನಿದರ್ಶನಗಳನ್ನು ಗಮನಿಸಬಹುದು.

"ನಮ್ಮ ದಕ್ಷಿಣೋತ್ತರ 'ಕನ್ನಡ ಜಿಲ್ಲೆ' ಗಳ ಕನ್ನಡದಲ್ಲಿಯೂ ತುಳು ಭಾಷೆಯಲ್ಲಿಯೂ '..... ತೆಗಲೆ' ಎಂಬುದು ವಕ್ಷ ಸ್ಥಳಕ್ಕೆ ರೂಢವಾಗಿರುವ ದೇಸಿ." (ಪು : 246)

"ಭೂತಳಮಲ್ಲಾಡೆ ಕೆಸಱ ಕಡಿತದ ತೆಱದಿಂ" ಎಂಬ ಪದ್ಯ ಭಾಗದಲ್ಲಿ ತೋರುವ "ಕಡಿತ ಅಥವಾ 'ಕಡಿತ್ತ' ಪದವು ಚರ್ಮಾರ್ಥಕವಾಗಿ ಈ ತುಳು ಕನ್ನಡ ನಾಡುಗಳಲ್ಲಿ ದೇಸಿಯೆ ಆಗಿಬಿಟ್ಟಿದೆ .......... ಬೆಡು ಮಾಡಲಿಕ್ಕೆಂದು ಸಮ್ಮಗಾರರು ಕೆಸರಿನಲ್ಲಿ ಕಡಿತ (ಚರ್ಮ) ವನ್ನು ಹಾಸಿ ಇಡುವುದು ಪದ್ಧತಿ. ಆ ಕೆಸರ ಕಡಿತವು ಹೇಗೆ ಅತ್ತಿತ್ತ ಅಲ್ಲಾಡುವುದೋ ಹಾಗೆ ಹೋರಾಟಕ್ಕೆ ಬಿಗಿಯಾದ ನೆಲವೆ ಅಲ್ಲಾಡಿತೆಂಬ ಅತಿಶಯೋಕ್ತಿ ಇದು." (ಪು : 247)

'ಬಂದಹಕೆಯುಮಿಲ್ಲ ಕೈಯೊಳ್' ಎಂಬ ಪ್ರಯೋಗವನ್ನು ಕುರಿತು "ಈಗಿನ ಉತ್ತರ ಕನ್ನಡ ಜಿಲ್ಲೆಯೊಳಗಿನ ಬನವಸೆ ಪ್ರಾಂತದಲ್ಲಿ 'ಅಡಕೆಯ ದೇಶಾವರ'ದ ಯಾಜಕ ವೃತ್ತಿ ದೇಸಿಯಾಗಿದೆ. ಅದರಿಂದಲೇ ನಮ್ಮ ಉತ್ತರ ಕನ್ನಡ ಪ್ರಾಂತೀಯರ .......... ಆ ನುಡಿ ತಲೆದೋರುವುದು ಈಗಲೂ ರೂಢವಾಗಿದೆ. ಪಂಪನು ಆ ಪ್ರಾಂತದಲ್ಲಿ ಹುಟ್ಟಿ ಬೆಳೆದವನೆಂದು ಹಿಂದೆ ಸಿದ್ಧಾಂತಿಸಿದುದನ್ನೆ ಈ ನುಡಿಗಟ್ಟು ಮತ್ತಷ್ಟು ಬಲಿಯುತ್ತಿದೆ". (ಪು : 256)

"ಅಕ್ಕಿಗೊಬ್ಬ ಮಡಗೂಬ್ಬುಣ್ಣುಂದ' ವೆಂಬ ನಾಣ್ಣುಡಿ ತುಳುವಿನಲ್ಲಿ ದೇಸಿಯಾಗಿದ್ದು ಅವೇಳೆ ಇದು ಕನ್ನಡಕ್ಕೆ ಮಾರ್ಪಟ್ಟಿರಬಹುದೋ, ಅಥವಾ ಕನ್ನಡದಲ್ಲಿಯೂ ಇದ್ದಿರಬಹುದೋ ಎಂಬುದನ್ನು ನಿರ್ಧರಿಸಲಾರೆವು. ಈ ಗಾದೆ ತುಳುವಿನಲ್ಲೀಗಲೂ ದೇಸಿಯಾಗಿದೆ. ಪಂಪನಲ್ಲಿ ತೋರುತ್ತಿದೆ, ಎಂಬುದನ್ನು ಮಾತ್ರವೇ ಸೂಚಿಸುತ್ತೇವೆ." (ಪು : 261)

ಇಂಥ ಹಲವು ನಿದರ್ಶನಗಳನ್ನು ತೋರಿಸಬಹುದು. ಹೀಗೆ ಪಂಪನಲ್ಲಿ ಕಾಣಬರುವ ದೇಸಿಯ ಘಟಕಗಳನ್ನು, ವಿವರಗಳನ್ನು ಇಂದು ಬಳಕೆಯಲ್ಲಿರುವ ಪ್ರಾದೇಶಿಕವಾದ ಭಾಷಿಕ ಘಟಕಗಳೊಂದಿಗೆ, ವಿವರಗಳೊಂದಿಗೆ ಸಂಬಂಧಿಸಿ ನೋಡುವ ಮುಳಿಯ ಅವರ ಚರ್ಚೆಯ ವಿಧಾನ ಹಲವು ಆಯಾಮಗಳನ್ನು ಪಡೆದುಕೊಳ್ಳುತ್ತದೆಯೆಂಬುದು ಗಮನಾರ್ಹ ಸಂಗತಿ. ಉದಾಹರಣೆಗೆ, ಅವರು ಹೀಗೆ ಮಾಡುವಾಗ ಪಾಠ ಪರಿಷ್ಕರಣಕ್ಕೆ ಸಂಬಂಧಿಸಿದ ಕೆಲವು ಸೂಚನೆಗಳನ್ನು ನೀಡುತ್ತಾರೆ. ಪದ, ಪದಪುಂಜ ಇತ್ಯಾದಿಗಳ ಚಾರಿತ್ರಿಕವಾದ ಬೆಳವಣಿಗೆಯನ್ನು ತಿಳಿಯಲು ಸಹಾಯಕವಾದ ಕೆಲವು ನೆಲೆಗಳನ್ನು ಪರಿಶೀಲಿಸುತ್ತಾರೆ. ಕೆಲವು ರೂಢಿ – ನಂಬಿಕೆಗಳು ಜನಜೀವನದಲ್ಲಿ ಪಡೆದುಕೊಂಡಿರುವ ಸಾತತ್ಯತೆಯ ಸಂಬಂಧದ ಕೆಲವು ಸೂಚನೆಗಳನ್ನು ಕೂಡ ನೀಡುತ್ತಾರೆ. ಇದು ಕೆಲವೆಡೆ ದೂರಾನ್ವಯ ವಿಧಾನವೆಂಬಂತೆ ಕಂಡರೂ ಹೀಗೆ ಸಂಬಂಧಿಸಿ ನೋಡುವ ದೃಷ್ಟಿ ಕೇವಲ ಸಂಬಂಧಿಸಿ ನೋಡುವ ಕುತೂಹಲದ ಉದ್ದೇಶದ್ದು ಮಾತ್ರ ಆಗಿಲ್ಲವೆಂಬುದು ಗಮನಿಸಬೇಕಾದ ಅಂಶ.

ಇದಲ್ಲದೆ ಪಂಪನ ದೇಸಿಯಲ್ಲಿ ತಾವು ಚರ್ಚೆಗೆ ಎತ್ತಿಕೊಂಡ ಪ್ರತಿಯೊಂದು ಅಂಶವನ್ನೂ ಅದರ ವಿವರ–ವಿವರಗಳಲ್ಲಿ ತೆರೆದಿಡುವುದು ಮುಳಿಯ ಅವರ ದೇಸಿ ಚರ್ಚೆಯಲ್ಲಿ ಕಾಣಬರುವ ಮತ್ತೊಂದು ಅಂಶ. ಕೆಲವು ಪದಗಳನ್ನು ಕುರಿತ ವಿವರಗಳಲ್ಲಿ, ಮೃಗಯಾ ವಿನೋದದ ಸಂಬಂಧದ ವಿವರಗಳಲ್ಲಿ, ಜ್ಯೋತ್ಸ್ನಾ ವಿಹಾರದ ಸಂಬಂಧದ ವಿವರಗಳಲ್ಲಿ ಇದನ್ನು ವಿಶೇಷವಾಗಿ ಗಮನಿಸಬಹುದು.

ಈ ಮೇಲೆ ಗುರುತಿಸಿದ ಕೆಲವು ಅಂಶಗಳು ಮುಳಿಯ ಅವರ ಅಧ್ಯಯನದ ವ್ಯಾಪಕತೆಯನ್ನು ಅವರ ಅಧ್ಯಯನಕ್ಕಿರುವ ಬಹುಮುಖ ಆಯಾಮಗಳನ್ನು ಕೂಡ ಸೂಚಿಸಬಲ್ಲವು.

ಇನ್ನೊಂದು ಮಾತು. ಮುಳಿಯ ಅವರು ತಮ್ಮ ದೇಸಿಯ ಚರ್ಚೆಯಲ್ಲಿ ಪಂಪ ದೇಸಿಯ ಬಳಕೆಯಿಂದ ಮಾರ್ಗವನ್ನು ಹೊಸತು ಮಾಡಿದ್ದರ ಬಗ್ಗೆ ಮತ್ತೆ ಮತ್ತೆ ಪ್ರಸ್ತಾಪಿಸಿದ್ದಾರೆ. ನಿದರ್ಶನಕ್ಕೆ ಕೆಲವು ಮಾತುಗಳನ್ನು ಗಮನಿಸಬಹುದು. "………. ಎಲ್ಲದಕ್ಕಿಂತಲೂ ಮೇಲಾದುದೆಂದರೆ 'ಬಗೆ ಹೊಸತಾಗಬೇಕು' ಅಥವಾ 'ದೇಸಿಯಂ ಪೊಸಯಿಸಿ' ಮಾರ್ಗಮಂ ಪೊಸತು ಮಾಡಬೇಕು ಎಂಬುದು. 'ದೇಸಿಯಂ ಪೊಸತು ಮಾಡು'ವಿಕೆ ಎಂದರೆ, ಕಷ್ಟದೊಳಗೆ ಸುಲಭ ಮಾರ್ಗವೆನ್ನ ಬಹುದಾದರೆ, ಆ ಹೊಸತು ಮಾಡಿದ ದೇಸಿಯನ್ನೊಂದಿಸಿ 'ಮಾರ್ಗಮಂ ಪೊಸಯಿಸುವುದೆಂದರೆ ಕಷ್ಟಗಳೊಳಗೂ ಶ್ರಮ ಸಾಧ್ಯವು". (ಪು : 238)

"ಈ 'ಅರಬೊಜಂಗ' ಮೊದಲಾದ ಹೆಸರುಗಳೇ ಅಂದಾದರೂ ದೇಸಿಯಾಗಿದ್ದುವು ಎಂಬುದನ್ನು ಸಕಾರಣವಾಗಿ ನಿರ್ಧರಿಸಲಾರೆವು. ಆದರೆ 'ಮಾರ್ಗಮಂ ಪೊಸತು ಮಾಡು' ವಲ್ಲಿ ದೇಸಿಯನ್ನು ಅಪೂರ್ವ ರೂಪದಿಂದ ಪೊಸಯಿಸಬೇಕಾಗುತ್ತದೆ ಎಂಬ, ಕವಿಯ ಹಿಂದಿನ ಹೇಳಿಕೆಯನ್ನೇ ಭಾವಿಸಿಕೊಂಡರೆ, ಈ ಹೆಸರುಗಳು 'ಪೊಸಯಿಸಿದ ಮಾರ್ಗ' ದಲ್ಲಿಯ ಮುಖ್ಯವಾಗಳಾಗಿ ಇದ್ದಿರಬೇಕೆಂಬುದು ವ್ಯಕ್ತವಾಗುತ್ತಿದೆ." (ಪು : 286)

"ಅಗ್ರಾಹ್ಯವಾದ ತೊಗಟೆಗಳನ್ನು ಬಿಸುಟು ಅಗ್ರಾಮ್ಯವಾದ ದೇಸಿಯ ಸಾರವನ್ನು ಮಾತ್ರವೇ ಸವಿಯುತ್ತಾನೆ. ಅದರೊಡನೆ ಗ್ರಾಮ್ಯವಾದ 'ದೇಸಿಯಂ ಪೊಸಯಿಸಿ' ಹೊಸತು ಮಾಡಿಕೊಂಡ ಮಾರ್ಗರೂಪವಾದ 'ಉದಾರತಾ' ಗುಣವನ್ನು ………. ವಿಸ್ತರಿಸಿಕೊಳ್ಳುವ ಕವಿಯ ಜಾಣ್ಮೆಯು ಹೇಗೆ ಹೊಳೆಯುತ್ತಿದೆ ಎಂಬುದನ್ನು ಭಾವಿಸತಕ್ಕದು." (ಪು : 281)

ಹೀಗೆ ಮಾರ್ಗವನ್ನು ಪ್ರಶಂಸಿಸಿದವರ ಬಗ್ಗೆ – ಗ್ರಾಮ್ಯವಾದ ದೇಸಿಯನ್ನು ಪ್ರಶಂಸಿಸಿದವರ ಬಗ್ಗೆ ಕೂಡ – ಹೇಳುವಾಗ, 'ದೇಸಿ' – 'ಮಾರ್ಗ' ಗಳಿಗೆ ಸಂಬಂಧಿಸಿದಂತೆ ಇರುವ ಒಂದು ಮುಖ್ಯ ಅಂಶವನ್ನು ಮುಳಿಯ ಅವರು ಗುರುತಿಸಿದ್ದಾರೆ. ಆದರೆ ಅವರು ಈ ಅಂಶವನ್ನು ಭಾಷಾ ಸಂಬಂಧಿಯಾದ ನೆಲೆಯಲ್ಲಿ ಮಾತ್ರ ನೋಡುತ್ತಿಲ್ಲ. ಭಾಷೇತರವಾದ ದೇಸಿಯ ನೆಲೆಯಲ್ಲಿ ಕೂಡ ನೋಡುತ್ತಿದ್ದಾರೆ. ಎಂದರೆ ಹೀಗೆ ನೋಡುವುದು ಅನಗತ್ಯವೆಂದಾಗಲೀ, ಅದನ್ನು ನಿರಾಕರಿಸಬೇಕೆಂದಾಗಲೀ ಅಲ್ಲ.[10] ಹಾಗೆ ನೋಡಿದರೆ ಅದು ಪಂಪನಲ್ಲಿ 'ಮಾರ್ಗ' – 'ದೇಸಿ' ಗಳಿಗಿರುವ ವಿಭಿನ್ನ ನೆಲೆಗಳಿಗೆ ಸಂಬಂಧಿಸಿದ ಅಂಶ ಕೂಡ. ಆದರೆ 'ಮಾರ್ಗ' – 'ದೇಸಿ' ಗಳ ಪ್ರಶ್ನೆಯನ್ನು ಮುಳಿಯ ಅವರು ಭಾಷಾ ಸಂಬಂಧಿಯಾದ ಎಂದರೆ, ಅಭಿವ್ಯಕ್ತಿ ಸಂಬಂಧದ್ದಾಗಿ ನೋಡಲಿಲ್ಲ. ದೇಸಿಯ ವಿವರಗಳನ್ನು – ಹಿಂದೆ ಗಮನಿಸಿದಂತೆ –

---

10. ಚಾರಿತ್ರಿಕ ನೆಲೆಯಲ್ಲಿ ಇಂಥ ಅಧ್ಯಯನಗಳಿಗಿರುವ ಸ್ಥಾನವನ್ನು – ಮುಳಿಯ ಅವರ ಚರ್ಚೆಯ ಹಿನ್ನೆಲೆಯಲ್ಲೇ – ಗುರುತಿಸುವ ಕೆ.ವಿ.ನಾರಾಯಣರ ಮಾತುಗಳನ್ನು ಇಲ್ಲಿ ಗಮನಿಸಬಹುದು : "ಚಾರಿತ್ರಿಕ ಕಾರಣಗಳಿಂದಲೂ ಪಂಪನ ದೇಸಿಯನ್ನು ಗಮನಿಸಬಹುದು .......... ಈ ಕಾರಣಗಳಲ್ಲಿ ಒಂದು ಭಾಷಾವಿದರಿಗೆ ಸಂಬಂಧಿಸಿದ್ದು. ಒಂದು ಪದದ, ಸಮುಚ್ಚಯದ, ಚಾರಿತ್ರಿಕ ಬೆಳವಣಿಗೆಯನ್ನು ಗುರುತಿಸುವ ಭಾಷಾವಿದನಿಗೆ ಶಾಸನಗಳ ನಂತರ ಕಾವ್ಯಗಳೇ ಆಧಾರ. ಇದು ಕವಿಯಾಗಿ ಪಂಪನ ಮೌಲ್ಯವನ್ನು ಬದಲಿಸುವುದಿಲ್ಲವಾದರೂ ಅವನ ದೇಸಿ – ಅಭಿವ್ಯಕ್ತಿಯಲ್ಲಿ ಬರುವ ಅವನ ಕಾಲದ ಮಾತು ಇಂದು ಮುಖ್ಯವಾಗುವ ಸಾಧ್ಯತೆ ಇದೆ.

('ಪಂಪನ ದೇಸಿ', ಪಂಪ ಒಂದು ಅಧ್ಯಯನ (ಸಂ.) ಜಿ.ಎಸ್. ಶಿವರುದ್ರಪ್ಪ, ಬೆಂ.ವಿ.ವಿ. 1974. ಪು : 207)

ಬಿಡಿ ವಿವರಗಳಾಗಿ ನೋಡುವಲ್ಲಿ ಆ ಬಿಡಿಗಳ ಮೂಲವನ್ನು — ದೇಸಿ ಘಟಕಗಳ ಮೂಲ ರೂಪ, ನಿಷ್ಪತ್ತಿ ಇತ್ಯಾದಿ — ಕುರಿತು ಅವರು ಹೆಚ್ಚು ಆಸಕ್ತರಾಗಿದ್ದಾರೆ.

ಪಂಪನಲ್ಲಿ 'ಮಾರ್ಗ' — 'ದೇಸಿ' ಗಳೆರಡು ಅವನ ಅಭಿವ್ಯಕ್ತಿ ಸಂಬಂಧದ ಅಂಶವೆನ್ನುವಾಗ, ಅದು ಅವನ ಶೈಲಿಗೆ ಸಂಬಂಧಿಸಿದ್ದೆಂದೇ ಅರ್ಥ. ಮುಳಿಯ ಅವರು 'ಶೈಲಿ' ಎಂಬ ಪದವನ್ನು ಬಳಸಿದ್ದಾರೆ, 'ಸಮಸ್ತ ಭಾರತದ ಶೈಲಿ' ಎಂಬ ಒಂದು ವಿಸ್ತಾರವಾದ ಅಧ್ಯಾಯವನ್ನೇ ಬರೆದಿದ್ದಾರೆ. ಆದರೆ 'ಶೈಲಿ' ಎಂಬ ಪದವನ್ನು ಅವರು ಬಳಸಿರುವುದಾಗಲಿ, ಗ್ರಹಿಸಿರುವುದಾಗಲಿ ನಾವು ಇಂದು ಆ ಪರಿಭಾಷೆಯನ್ನು ನೋಡುವ ಅರ್ಥದಲ್ಲಿ ಅಲ್ಲ. ಮುಳಿಯ ಅವರು ಶೈಲಿಯನ್ನು ಕುರಿತು ನೀಡುವ ವಿವರಗಳಲ್ಲಿ ಒಂದು ಗೊಂದಲವಿರುವಂತೆ ತೋರುತ್ತದೆ. 'ಶೀಲಸ್ಯ ಇಯಂ ಶೈಲೀ' (ಶೀಲ ಸಂಬಂಧದ್ದಾದುದೇ ಶೈಲಿ) ಎಂದು ಹೇಳುವ ಮುಳಿಯ ಅವರು ಮುಂದೆ ಅದನ್ನು ಕುರಿತು ಹೀಗೆ ವಿವರಿಸಿದ್ದಾರೆ. " .......... ಕಾವ್ಯವಾಗಿ ರೂಪುವಡೆದು ಭಾವ ರಸಾಲಂಕಾರಾದಿ ಸಾಧನಗಳಿಂದೊಡಮೆರೆದು ಸೂಸುವ ಕವಿ ಪ್ರತಿಭಾ ವೈಖರಿಯನ್ನೇ ಶೈಲಿ ಎನ್ನುವುದು. ಶಬ್ದಾರ್ಥ ಭಾವನಾದಿಗಳಲ್ಲಿ ಮಾತ್ರ ಸಂಬದ್ಧವಾದ ರೀತಿ — ಗುಣ — ರಸಾದಿಗಳೆಲ್ಲವೂ ಶೈಲಿಯ ನೂಲಿನಲ್ಲಿ ಸುರಿಯಲ್ಪಟ್ಟಿರುತ್ತವೆ ಎಂದು ಭಾವಿಸಬೇಕು." (ಪು : 432)

ಇದಕ್ಕೆ ಪೂರಕವಾಗಿ "ಬಗೆ ಪೊಸತಪ್ಪುದಾಗಿ ಮೃದು ಬಂಧದೊಳೊಂದುವದೊಂದಿ ದೇಸಿಯೊಳ್ .........." ಎಂಬ ಪದ್ಯವನ್ನುದ್ಧರಿಸಿ ಅದಕ್ಕೆ ಬರೆದಿರುವ ವಿವರಣೆ ಹೀಗಿದೆ : "ಇಲ್ಲಿ ನಿರ್ವಹಿಸಿದುದು ಬರಿಯ ಪದ ಬಂಧ ಕ್ರಮವಷ್ಟನ್ನೇ ಅಲ್ಲ; ಗುಣ ವಿಶಿಷ್ಟವಾದ ರೀತಿಯನ್ನೂ ಒಳಗೊಂಡ ಕಾವ್ಯ ಬಂಧವನ್ನು. ಸಾಧನ ಸಂಪತ್ತುಗಳಿಂದೊಡಮೆರೆದು ಸುಗ್ಗಿಯುಲಿಯೊಪ್ಪುವ ಎಳ ಮಾವಿನಂತೆ, ಗುಣ — ರೀತಿ — ದೇಸಿ ಮೊದಲಾದವುಗಳಿಂದ ಬೆರೆದ ಕಾವ್ಯ ಬಂಧವು ಸಹೃದಯರ ಹೃದಯಂಗಮವಾದಲ್ಲಿ ಒಪ್ಪುವುದು. ಹಾಗೊಪ್ಪಿದ ಕಾವ್ಯದಲ್ಲೊಡಮೂಡಿ, ಸಹೃದಯರೊಪ್ಪುಗೆಗೆ ಸಾಧನವಾಗಿದ್ದುಕೊಂಡು, ಕವಿ ಪ್ರತಿಭೆಯನ್ನು ಶಾಶ್ವತವಾಗಿ ಬೆಳಗಿಸುವ ಸಾಧನ

ಸಂಪತ್ತಿಯೇ ಶೈಲಿ .........." (ಪು : 432) ಈ ಹಿನ್ನೆಲೆಯಲ್ಲಿ ಈ ಪದ್ಯದ ಬಗ್ಗೆ ಅವರೇ ಬರೆದಿರುವ ಸವಿಸ್ತಾರವಾದ ಚರ್ಚೆಯನ್ನೂ ('ಕಾವ್ಯ ಧರ್ಮವೋ ಧರ್ಮವೋ' ಎಂಬ ಭಾಗದಲ್ಲಿ) ಗಮನಿಸಬಹುದು.

ಮೇಲಿನ ಈ ಎರಡು ಉದ್ಧರಣೆಗಳಲ್ಲಿ 'ಶೈಲಿ' ಯನ್ನು ವಿವರಿಸಿಕೊಂಡಿರುವುದಕ್ಕೂ, 'ಶೀಲ ಸಂಬದ್ಧವಾದುದೇ ಶೈಲಿ' ಎಂದು ಹೇಳುವುದಕ್ಕೂ ಸ್ಪಷ್ಟವಾಗಿ ವ್ಯತ್ಯಾಸವಿರುವುದನ್ನು ಗಮನಿಸಬಹುದು. ಮುಳಿಯ ಅವರು ಪಂಪ ಭಾರತದ ನಾಯಕ ಪಾತ್ರಗಳ ಗುಣ – ಶೀಲಗಳಿಗೂ ಶೈಲಿಗೂ ಸಂಬಂಧವನ್ನು ಕಲ್ಪಿಸಿಯೇ ಶೈಲಿಯನ್ನು ಶೀಲ ಸಂಬದ್ಧವಾದುದೆಂದು ಕರೆದಿರುವುದು. "ಬಗೆ ಪೊಸತಪ್ಪುದಾಗಿ .........." ಎಂಬ ಪದ್ಯಕ್ಕೆ ಬರೆಯುವ ವಿವರಣೆಯಲ್ಲಿ ರಾಚನಿಕ ಕೌಶಲವನ್ನೇ ಶೈಲಿಯೆಂದು ವಿವರಿಸುತ್ತಾರೆ. ಹೀಗೆ ಮಾಡುವ ಮುಳಿಯ ಅವರು ಇವೆರಡಕ್ಕೂ ಸಂಬಂಧ ಕಲ್ಪಿಸಿಬಿಡುತ್ತಾರೆ. ಹೀಗೆ ಕಲ್ಪಿಸಿರುವುದೇ ಇಲ್ಲಿನ ಗೊಂದಲವೆಂದು ತೋರುತ್ತದೆ. 'ಗುಣ – ರೀತಿ – ದೇಸಿ ಮೊದಲಾದವುಗಳಿಂದ ಬರೆದ ..........' ಇತ್ಯಾದಿ ಹಿನ್ನೆಲೆಯಲ್ಲಿ ವಿವರಿಸುವ ಶೈಲಿಯನ್ನೇ 'ಅಂಥಾ ವಿಶಿಷ್ಟ ನಾಯಕರ ಶೀಲಗಳೆಂಬ ಕುಪ್ಪಿಗೆಗಳಲ್ಲಿಟ್ಟು ತೋರಿಸಲಿಕ್ಕೆ ಪ್ರಯತ್ನಿಸುತ್ತೇವೆ' ಎಂಬ ಮಾತಿನಲ್ಲೇ ಈ ಗೊಂದಲದ ಸ್ಪಷ್ಟ ಅರಿವು ನಮಗಾಗುತ್ತದೆ. ಇನ್ನು 'ಸಮಸ್ತ ಭಾರತದ ಶೈಲಿ' ಯೆಂಬ ಇಡೀ ಅಧ್ಯಾಯದಲ್ಲಿ 'ಚಲದೊಳ್ ದುರ್ಯೋಧನಂ ..........' ಎಂಬ ಪದ್ಯದಲ್ಲಿ ಬರುವ ನಾಯಕರನ್ನು ಅವರ ಗುಣ – ಶೀಲಗಳ ಹಿನ್ನೆಲೆಯಲ್ಲಿ ಸುದೀರ್ಘವಾಗಿ ಪರಿಚಯಿಸುತ್ತಾ ಹೋಗಲಾಗಿದೆ. ಈ ಪದ್ಯದಲ್ಲಿ ಒಂದೊಂದು ಗುಣ ಮತ್ತು ಒಂದೊಂದು ಪಾತ್ರದ ಹೆಸರನ್ನು ಜೊತೆ ಜೊತೆಗೆ ಇಡಲಾಗಿದೆ ಯೆಂಬುದೇನೋ ಸರಿಯೆ. ಆದರೆ ಕೃತಿಯಲ್ಲಿ ಮೊದಲಿಂದ ಕೊನೆಯ ತನಕವೂ ಈ ಗುಣ– ಪಾತ್ರಗಳ (ಚಲ = ದುರ್ಯೋಧನ; ನನ್ನಿ = ಕರ್ಣ; ಸಾಹಸ = ಅರ್ಜುನ ಇತ್ಯಾದಿ) ಸಾತತ್ಯತೆಯನ್ನು—ಮುಳಿಯ ಅವರು ಮಾಡುವಂತೆ – ಗುರುತಿಸಬಹುದೆಂದೇನೂ ತೋರದು. ಈ ಪದ್ಯದ ನೆಲೆಯಿಂದ ಹಲವು ಪ್ರಶ್ನೆಗಳನ್ನು ನಮ್ಮ

ವಿಮರ್ಶಕರು ಎತ್ತಿದ್ದಾರೆ. ಇದನ್ನು ಕುರಿತಂತೆ ಚರ್ಚೆ ಸಾಧ್ಯವಿದೆ. ಇಲ್ಲಿಗೆ ಅನಗತ್ಯವಿರುವ ಈ ಸಂಬಂಧದ ಚರ್ಚೆಯನ್ನು ಮುಂದಿನ ಅಧ್ಯಾಯವೊಂದರಲ್ಲಿ ನಡೆಸಬಹುದಾಗಿದೆ.

ಪಂಪನ ದೇಸಿಯನ್ನು ಕುರಿತ ಮತ್ತೊಂದು ಪ್ರಮುಖ ಚರ್ಚೆ ರಂ.ಶ್ರೀ. ಮುಗಳಿಯವರದು. ಮುಗಳಿಯವರು ತಮ್ಮ 'ಪಂಪನ ದೇಸಿ' ಚರ್ಚೆಯಲ್ಲಿ[11] 'ಮಾರ್ಗ' – 'ದೇಸಿ' ಪ್ರಶ್ನೆಯನ್ನು ಪಂಪನ ಶೈಲಿಯ ಸಂಬಂಧದಾಗಿ ನೋಡುತ್ತಾರೆ. ಈ ಕುರಿತ ಅವರ ಮಾತುಗಳನ್ನಿಲ್ಲಿ ಗಮನಿಸಬಹುದು. “.......... ಮುಖ್ಯವಾಗಿ ದೇಸಿ–ಮಾರ್ಗಗಳ ಸುಂದರ ಹೊಂದಿಕೆಯಲ್ಲಿ ಅವನ ಶೈಲಿಯ ಆದರ್ಶವಿದೆ. ಅವನ ಮೇರೆಗೆ ದೇಸಿ–ಮಾರ್ಗಗಳೆರಡಕ್ಕೂ ಅಷ್ಟೇ ಮಹತ್ವವಿದೆ. ದೇಸಿ ಪ್ರಕೃತಿಯಾದರೆ ಮಾರ್ಗ ಸಂಸ್ಕೃತಿ, ದೇಸಿಯನ್ನು ಅಲ್ಲಗಳೆದ ಮಾರ್ಗವು ಶುಷ್ಕ ಪಾಂಡಿತ್ಯ. ಮಾರ್ಗದ ಸಂಸ್ಕಾರ ಹೊಂದದ ದೇಸಿ ಕೇವಲ ಗ್ರಾಮ್ಯ. ಇವುಗಳ ಸಮನ್ವಯವೇ ತನ್ನ ಆದರ್ಶವೆಂಬುದನ್ನು ಪಂಪ ಭಾರತದ ವರ್ಣನೆಗಳಲ್ಲಿ ಅವನು ಅಲ್ಲಲ್ಲಿ ಸೂಚಿಸಿದ್ದಾನೆ.” (ಪು : 208) ಈ ಅಂಶವನ್ನು ಪಂಪನ ಎರಡೂ ಕಾವ್ಯಗಳಿಗೆ ಅನ್ವಯಿಸಿ “ಆದಿ ಪುರಾಣದಲ್ಲಿ ಕೆಲಮಟ್ಟಿಗೆ, ಪಂಪ ಭಾರತದಲ್ಲಿ ಬಹುಮಟ್ಟಿಗೆ ಪಂಪನು ತನ್ನ ಕಾವ್ಯ ಶೈಲಿಯ ಗುರಿಯನ್ನು ಮುಟ್ಟಿದ್ದಾನೆ ..... ಪಂಪ ಭಾರತವು ದೇಸಿ ಮಾರ್ಗಗಳ ಸಮನ್ವಯ ಸಿದ್ಧಿಯ ವಿಷಯಕ್ಕೆ ಕನ್ನಡ ಕಾವ್ಯ ಪ್ರಪಂಚದಲ್ಲಿ ಮೊದಲನೆಯದು, ಕೊನೆಯದು. ಮಾರ್ಗಕ್ಕೆ ಅದು ಮಾದರಿ, ದೇಸಿಗೆ ಮೇಲ್ಪಂಕ್ತಿ. ತನ್ನ ಕಾಲದ ಕನ್ನಡ ಜನದ ಮಾತನ್ನೆತ್ತಿ ಮುದ್ದಾಡಿ

---

11. ಇದು ಮೊದಲು ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ (30–2) ಪ್ರಕಟವಾಗಿ, ನಂತರ ಪಂಪ ಮಹಾಕವಿ (ಸ್ಮಾರಕ ಗ್ರಂಥ), (ಸಂ.) ರಂ.ಶ್ರೀ.ಮುಗಳಿ, ಲಕ್ಷ್ಮೇಶ್ವರ, 1951 – ಈ ಗ್ರಂಥದಲ್ಲಿ ಸೇರಿದೆ. ಮುಗಳಿಯವರ ಚರ್ಚೆಯಿಂದ ಇಲ್ಲಿ ನೀಡುವ ಉದ್ಧರಣೆಗಳ ಪುಟ ಸಂಖ್ಯೆಗಳು ಈ ಕೃತಿಯವು.

ಅದಕ್ಕೆ ಮಾರ್ಗದ ರಾಜವೇಷವನ್ನು ತೊಡಿಸಿ ಕಾವ್ಯ ಲೋಕದಲ್ಲಿ ಅವನು ಮೆರೆಸಿದ ಪವಾಡವು ಚಿರಸ್ಮರಣೀಯವಾದುದು." (ಪು : 209) ಎಂದಿದ್ದಾರೆ.

'ಮಾರ್ಗ' — 'ದೇಸಿ' ಗಳ ಸಮನ್ವಯವಿರುವುದನ್ನು ಗುರುತಿಸಿ, ಅದನ್ನು ಪಂಪನ ಶೈಲಿಯೆಂದು ಕರೆದಿರುವುದನ್ನು ಮುಗಳಿಯವರ ಬೇರೆ ಮಾತುಗಳಲ್ಲಿ ಕಾಣಬಹುದಾಗಿದೆ. ಮುಳಿಯ ಅವರಲ್ಲಿರುವಂತೆ ಮುಗಳಿಯವರಲ್ಲಿ 'ಶೈಲಿ' ಪರಿಭಾಷೆಯನ್ನು ಕುರಿತ ಗೊಂದಲವಿಲ್ಲ. ಆದರೆ ಯಾವ ಸಮನ್ವಯವನ್ನು ಮುಗಳಿಯವರು ಪಂಪನ 'ಶೈಲಿಯ ಆದರ್ಶ' ವೆಂದು ಕರೆಯುವರೋ, ಆ ಸಂಬಂಧದ ವಿಶೇಷವಾದ ಚರ್ಚೆಗೇನೂ ಕೈಹಾಕಿಲ್ಲ. 'ಸಮನ್ವಯ' ವೆಂದು ಕರೆಯುವ ಮಟ್ಟಿಗೆ, 'ಸುಂದರ ಹೊಂದಾಣಿಕೆ' ಯೆಂದು ಗುರುತಿಸುವ ಮಟ್ಟಿಗೆ ಮಾತ್ರ ಅವನ ಶೈಲಿಯ ಲಕ್ಷಣವನ್ನು ಗುರುತಿಸಿದ್ದಾರೆ. ಉಳಿದಂತೆ ಅವರ ಚರ್ಚೆಯು ಬಹುಪಾಲು 'ದೇಸಿ' ಯ ನಿದರ್ಶನಗಳನ್ನು ಹುಡುಕುವ ಮತ್ತು ಅಂಥಾ ಸಂದರ್ಭದಲ್ಲಿ ಅದು ಹೇಗೆ ಉಚಿತವಾಗಿ ಬಳಕೆಯಾಗಿದೆಯೆಂಬುದನ್ನು ತೋರಿಸುವುದರಲ್ಲಿ ಆಸಕ್ತವಾಗಿರುವಂತಿದೆ.

ಮುಗಳಿಯವರ ಈ ಚರ್ಚೆಯು ಎರಡು ಹಂತಗಳಲ್ಲಿ ನಡೆದಿದೆ. ಮೊದಲ ಹಂತದಲ್ಲಿ ಪಂಪನ ಎರಡೂ ಕೃತಿಗಳಿಂದ ದೇಸಿಯ ಕೆಲವು ನಿದರ್ಶನಗಳನ್ನು ತೋರಿಸಲಾಗಿದೆ. ಹೀಗೆ ತೋರಿಸಲಾಗಿರುವ ನಿದರ್ಶನಗಳು ಮುಖ್ಯವಾಗಿ ಮೂರು ಬಗೆಯವು :—

(1) 'ನಾಟಕ ದೃಶ್ಯಗಳಂತೆ ಸಂವಾದಮಯವಾಗಿ ಪಾತ್ರ ಪ್ರಕಾಶಕವಾದ' ಸನ್ನಿವೇಶಗಳು. ಉದಾ :— "ಬೇಟೆಗಾಗಿ ಬಂದ ಶಂತನು ತಿರುಗುತ್ತ ಬಂದು ತನ್ನೆಗ ಶಾಬಾಷಿಯ ಕಂಪು ತಳ್ತು ಮಧುಪಂಬೋಲ್ ಸೋಲ್ತು ಕಂಡೊಡಾಲುಂ ನಲ್ಮೆಗೆ ದಿಬ್ಯಂ ಬಡಿವಂತೆವೋಲ್ ಪಿಡಿದು 'ನೀಂ ಬಾ ಪೋಪಂ' ಎಂದಂಗೆ ಮೆಲ್ಲಗೆ ತತ್ಕನ್ಯೆ ನಾಣ್ಚಿ <u>'ಬೇಡುವೊಡೆ</u>

<u>ನೀವೆಮ್ಮಯ್ಯನಂ ಬೇಡಿರೇ'</u> ಎಂದಳಂತೆ. ಇಲ್ಲಿಯ ಸನ್ನಿವೇಶಕ್ಕೆ ತೀರ ಕಿರಿದಾದ ಸಂವಾದವೂ ಅದರಲ್ಲಿಯ ದೇಸಿಯೂ ಜೀವಂತ ಕಳೆಯನ್ನು ನೀಡಿವೆ. 'ನೀಂ ಬಾ ಪೋಪಂ' ಎಂಬ ಉಕ್ತಿಯಲ್ಲಿ 'ನೀನು ಬಾ ಹೋಗೋಣ' ಎಂಬ ದೇಸಿಯ ಮಾತು, ಕಾಕು, ವ್ಯಂಗ್ಯಾರ್ಥ ಇವು ಮೂಡಿರುವುವಲ್ಲದೆ ಮಾರ್ಗದ ಪ್ರೌಢಿಯನ್ನೂ ಹೊಂದಿವೆ" (ಪು : 210) ಇತ್ಯಾದಿ.

(2) 'ಪಾತ್ರೋಚಿತವಾದ ಮಾತುಗಾರಿಕೆ, ಆ ಮಾತಿನಲ್ಲಿ ಅಳವಟ್ಟ ಅಚ್ಚರಿಯ ದೇಸಿ'. ಉದಾ :— "ತನ್ನ ತಂದೆ ಶಂತನು ಒಳದೋಟಿಯಲ್ಲಿ ತೊಳಲಾಡುತ್ತಿರುವುದನ್ನು ಅರಿತು ಧೀರ ತ್ಯಾಗಿಯಾದ ಭೀಷ್ಮನು '<u>ಏವುದು</u> ರಾಜ್ಯಲಕ್ಷ್ಮಿ <u>ಪೋ</u> ತನ್ನಯ ತಂದೆಯೆಂದುದ ಕೊಟ್ಟು ವಿವಾಹಮನಿಂದೆ ಮಾಡುವೆಂ' ಎಂದು ನಿಶ್ಚಯಿಸಿದನಂತೆ .......... ಮಾತು ತುಸುವಾದರೂ ಅದರ ದೇಸಿಯ ಕಸುವು ಅಷ್ಟಿಷ್ಟಲ್ಲ" (ಪು : 215) ಇತ್ಯಾದಿ.

(3) ಗಾದೆ ಮಾತುಗಳು.

ಉದಾ :— 'ಪಡೆನೋಡಲ ಬಂದವರಂ ಗುಡಿಪೊಯ್ಸಿದರ ಎಂಬುದಾಯ್ತು.'
'ಪೆಸರ ನಿನಗೆ ಪೊಸರ ಪೆಱ್ಗೆ' (ಪು : 219) ಇತ್ಯಾದಿ.

ಇನ್ನು ಎರಡನೆಯ ಹಂತದಲ್ಲಿ ಪಂಪನ ದೇಸಿಯನ್ನು 'ಪದರಚನೆ' ಮತ್ತು 'ವಾಕ್ಯ ರಚನೆ' ಎಂದು ಎರಡು ಬಗೆಯಾಗಿ ಅಭ್ಯಸಿಸಬಹುದಾದ ಸಾಧ್ಯತೆಯನ್ನು ಕುರಿತು ಪ್ರಸ್ತಾಪಿಸಲಾಗಿದೆ. ಆದರೆ ಈ ಪ್ರಸ್ತಾವ ಪದ ಮತ್ತು ವಾಕ್ಯಗಳ ಹಂತದಲ್ಲಿ ಪಂಪನಲ್ಲಿ ಕಾಣಬರುವ ರಚನಾ ವಿಶೇಷಗಳನ್ನೇನೂ ಕುರಿತಿಲ್ಲ. ಬದಲಾಗಿ ಕೆಲವು

ಪದಗಳನ್ನು ಮತ್ತು ವಾಕ್ಯಗಳನ್ನು ಮುರಿಗೆರೆಯ ದೇಸಿಯ ವಿಶಿಷ್ಟ ಘಟಕಗಳೆಂದು ತೆಗೆದು ತೋರಿಸಲಾಗಿದೆ. ಇದನ್ನು ಅವರು ನೀಡುವ ನಿದರ್ಶನಗಳು ಸಮರ್ಥಿಸುತ್ತವೆ. 'ಜೀಯನೆ', 'ಜೋಳದ ಪಾಟಿ', 'ಪಟ್ಟ ಪಸಿಯಗ್ಗ', 'ಮಾನಾವಿ' ಮೊದಲಾದವುಗಳನ್ನು ಮುರಿಗೆರೆಯ ಕನ್ನಡದ ದೇಸಿಯ ಪದಗಳಾಗಿಯೂ, 'ಉಡೆಹೆಯೊಳ್ ಉಣ್ಣದೆಯುಂ ಕೆಡೆದೆಹೆಯೊಳ್ ಕೆಡೆಯದೆ ನಿಂದೆಹೆಯೊಳ್ ನಿಲ್ಲದೆಯುಃಮೋಡಿದಂ', 'ಎಂದುಂ ಪೋಗು ಎಂದನೆ, ಮಾಣ ಎಂದನೆ, ಪೆಱತೊಂದನೀವೆ ಎಂದನೆ, ನೊಂದು ಅಃ ಎಂದನೆ' ಮೊದಲಾದವುಗಳನ್ನು ವಾಕ್ಯಗಳ ನಿದರ್ಶನಗಳಾಗಿಯೂ ತೋರಿಸಿದ್ದಾರೆ. ಪದರಚನೆ ಮತ್ತು ವಾಕ್ಯ ರಚನೆಯ ಕುರಿತ ಪ್ರಸ್ತಾವದಲ್ಲಿ ಮುಗಳಿಯವರು ತಾವು ತೋರಿಸುವ ನಿದರ್ಶನಗಳಿಗೆ, ಇಂದಿನ ಬಳಕೆಯ ಕನ್ನಡದಲ್ಲಿನ ಕೆಲವು ಸಂವಾದಿ ಪ್ರಯೋಗಗಳನ್ನು ತೋರಿಸುವ — ಮುಳಿಯ ಅವರೂ ಹೀಗೆ ಮಾಡಿದ್ದನ್ನು ಗಮನಿಸಿದ್ದೇವೆ — ಪ್ರಯತ್ನವನ್ನೂ ಮಾಡಿದ್ದಾರೆ. ಉದಾಹರಣೆಗೆ ಕೆಲವನ್ನು ಗಮನಿಸಬಹುದು :—

> "ಅಯ್ತು ಪೋಯ್ತು" (13—68) ಎಂಬುದು ಇವತ್ತು 'ಆದದ್ದಾಗಿ ಹೋಯಿತು', 'ಆಯಿತು ಹೋಯಿತು' ಎಂಬುದಾಗಿ ಬಳಕೆಯಲ್ಲಿದೆ."

> "ಇತ್ತಣ ದಿನನಾಥನಿತ್ತ ಮುಳುಗುವಲ್ಲಿ" (12—179) ಎಂಬುದು 'ಇತ್ತಲಾಗಿನ ಸೂರ್ಯ ಅತ್ತಲಾಗ ಮುಳುಗ್ಯಾನು' ಎಂಬ ರೂಪದಲ್ಲಿ ಮಾತಿನಲ್ಲಿದೆ." ಇತ್ಯಾದಿ.

ಹೀಗೆ ಪಂಪನಲ್ಲಿರುವ ಪ್ರಯೋಗಗಳಿಗೆ ಇಂದಿನ ಬಳಕೆಯ ಕನ್ನಡದಿಂದ ಸಂವಾದಿ ನಿದರ್ಶನಗಳನ್ನು ತೋರಿಸುವಾಗ ಒಂದು ಅಂಶವನ್ನು ಗಮನದಲ್ಲಿಡ ಬೇಕಾಗುತ್ತದೆ. ಅದೆಂದರೆ, ಇಂಥ ಪ್ರಯೋಗಗಳು ಪ್ರಾದೇಶಿಕವಾದ ಒಂದೊಂದೂ

ಪ್ರಭೇದಗಳಲ್ಲಿ ಒಂದೊಂದು ಬಗೆಯಾಗಿರಬಹುದು. ಮತ್ತು ಇವು ಸಂದರ್ಭಾನುಸಾರಿಯಾಗಿ ಬಳಕೆಯಾಗುತ್ತಿರುತ್ತವೆ. ಆ ಸಂದರ್ಭಕ್ಕನುಸಾರವಾಗಿ ಒಂದು ಪ್ರಯೋಗದ ನಿಯೋಗವಿರಲು ಸಾಧ್ಯ. ಹೀಗೆ ಪಂಪನಲ್ಲಿ ದೇಸಿಯ ನಿದರ್ಶನಗಳೆಂದು ತೆಗೆದು ತೋರಿಸುವಾಗ, ಆ ನಿರ್ದಿಷ್ಟ ಪ್ರಯೋಗವನ್ನು ಅದು ಬಳಕೆಯಾಗಿರುವ ಸಂದರ್ಭದಿಂದ ಬೇರೆ ಮಾಡಿರುತ್ತೇವೆ, ಆದುದರಿಂದಲೇ ಇದು ಒಂದು ರೀತಿಯಲ್ಲಿ ಅಪಾಯಕಾರಿ ಕೂಡ. ಉದಾಹರಣೆಗೆ: 'ಇತ್ತಣ ದಿನನಾಥನಿತ್ತ ಮೂಡುಗುಮಲ್ತೆ' ಎಂಬುದಕ್ಕೆ ನೀಡಲಾಗಿರುವ ಸಂವಾದಿ ಪ್ರಯೋಗವನ್ನೇ ನೋಡಬಹುದು. 'ಇತ್ತಲಾಗಿನ ಸೂರ್ಯ ಅತ್ತಲಾಗ ಮೂಡ್ಯಾನು' ಎಂಬುದೊಂದು ಪ್ರಯೋಗವೇನೋ ಬಳಕೆಯಲ್ಲಿದೆ. ಅದರ ವ್ಯತ್ಯಸ್ತ ರೂಪಗಳು ಇವೆ. ಆದರೆ ನಿಜವಾದ ಅರ್ಥದಲ್ಲಿ ಇದು ಪಂಪನ ಪ್ರಯೋಗಕ್ಕೆ ಸಂವಾದಿಯಲ್ಲ. ಪಂಪನ ಪ್ರಯೋಗ 'ಇತ್ತ ಕಡೆಯ ಸೂರ್ಯ ಇತ್ತಲೇ ಹುಟ್ಟುತ್ತಾನೆ' ಎಂಬುದನ್ನು ಸೂಚಿಸುತ್ತಿದ್ದು ತನ್ನ ನಂಬಿಕೆಯ ಋಜುತ್ವದ ಸಮರ್ಥನೆಗಾಗಿ ಕರ್ಣ ಪಾತ್ರದ ಮಾತಾಗಿ ಬಳಕೆಯಾಗಿರುವ ಸಾಧ್ಯತೆಯಿದೆ ಎಂಬುದನ್ನು ಗಮನಿಸಬೇಕು.

ಮುಗಳಿಯವರು ತಮ್ಮ ಟಿಪ್ಪಣಿಯಲ್ಲಿ ಮುಳಿಯ ಅವರಂತೆಯೇ ಪಂಪನ ದೇಸಿಯನ್ನು ಬಿಡಿ ವಿವರಗಳಾಗಿಯೇ ನೋಡಿದ್ದಾರೆ. ಹೀಗೆ ನೋಡುವಾಗ ಸಾಮಾನ್ಯವಾಗಿ ಪಂಪನಿಂದ ತೆಗೆದು ತೋರಿಸುವ ದೇಸಿ ಘಟಕಗಳನ್ನು ಅವುಗಳ ಬಳಕೆಯ ಸಂದರ್ಭದಿಂದ ಬೇರ್ಪಡಿಸಿ ತೋರಿಸಲಾಗಿದೆ ಎಂಬುದು ಸ್ಪಷ್ಟ. ತಮ್ಮ ಟಿಪ್ಪಣಿಯ ಪ್ರಾರಂಭದಲ್ಲಿ ಅವರು "..... ಮುಖ್ಯವಾಗಿ ದೇಸಿ—ಮಾರ್ಗಗಳ ಸುಂದರ ಹೊಂದಿಕೆಯಲ್ಲಿ ಅವನ ಶೈಲಿಯ ಆದರ್ಶವಿದೆ ..... ಇವುಗಳ ಸಮನ್ವಯವೇ ತನ್ನ ಆದರ್ಶವೆಂಬುದನ್ನು ಪಂಪ ಭಾರತದ ವರ್ಣನೆಗಳಲ್ಲಿ ಅವನು ಅಲ್ಲಲ್ಲಿ ಸೂಚಿಸಿದ್ದಾನೆ" ಎಂದು ಹೇಳಿದ್ದಾರೆಯಾದರೂ ಅವರ ಟಿಪ್ಪಣಿಯಲ್ಲಿ ಈ 'ಸುಂದರ ಹೊಂದಿಕೆ'ಯ, 'ಸಮನ್ವಯ'ದ ಪ್ರಶ್ನೆಯನ್ನೇನೂ ಮುಖ್ಯವೆಂದು ಗಣಿಸಿದಂತೆ ಕಾಣುವುದಿಲ್ಲ. "ಭಾರತ ಕಥೆಯ ದುರಂತ ಮೂಲವಾದ ಜೂಜಾಟ ಮತ್ತು ಭೀಷ್ಮ ಪ್ರತಿಜ್ಞೆಯ ಪ್ರಸಂಗಗಳಲ್ಲಿ ಪಂಪನ ಪ್ರತಿಭೆ ದೇಸಿ—ಮಾರ್ಗಗಳ ಸರಿಬೆರಕೆಯಿಂದ ತನ್ನ ಅಭಿವ್ಯಕ್ತಿಯ ತುತ್ತ ತುದಿಯನ್ನೇರಿ

ನಿಂತಿದೆ", (ಪು : 210) "ಪಂಪನಂತೂ ದೇಸಿಯ ಒಂದು ನಿಷ್ಕಳವಾದ ಗುರಿಯನ್ನು ಇಟ್ಟುಕೊಂಡವನು, ಅದನ್ನು ಮಾರ್ಗಗೊಳಿಸಿ ಹೇರಳವಾಗಿ ಬಳಸಿದವನು" (ಪು : 220) ಎಂಬಂಥ ಮಾತುಗಳು ಪಂಪನ ದೇಸಿಯನ್ನು ಕುರಿತ ಮೆಚ್ಚುಗೆಗೆ, ಪ್ರಶಂಸೆಗೆ ಪೂರಕವಾಗಿ ಬಂದಿರುವ ಮಾತುಗಳು ಮಾತ್ರ ಆಗಿ ಉಳಿದುಬಿಡುತ್ತವೆ. ಈ ಚರ್ಚೆಯ ಮುಖ್ಯ ಗಮನ ದೇಸಿಯ ಘಟಕಗಳನ್ನು ನಿದರ್ಶಿಸುವಲ್ಲಿ, ಮತ್ತು ಅವುಗಳು ಪುಲಗೆರೆಯ ತಿರುಳಕನ್ನಡದ ವಿಶಿಷ್ಟ ಪ್ರಯೋಗಗಳೆಂಬುದನ್ನು ಸೂಚಿಸುವಲ್ಲಿ, ಅಂಥ ಪ್ರಯೋಗಗಳಿಗೆ ಇಂದಿನ ಬಳಕೆಯ ಕನ್ನಡದ ಸಂವಾದೀ ಪ್ರಯೋಗಗಳನ್ನು ನೀಡುವುದರ ಕಡೆಗೆ ಮಾತ್ರವೇ ಇದ್ದಂತಿದೆ.

ಪಂಪನ ಭಾಷಾ ಬಳಕೆಯ ವಿಶಿಷ್ಟತೆಯನ್ನು ಅವನ 'ಶೈಲಿ' ಎಂದು ಕರೆದ ಇನ್ನೆರಡು ಚರ್ಚೆಗಳನ್ನಿಲ್ಲಿ ಗಮನಿಸಬಹುದು. ಒಂದು, ಎಸ್.ವಿ.ರಂಗಣ್ಣನವರ 'ಪಂಪನ ಶೈಲಿ'. ಮತ್ತೊಂದು, ಡಿ.ಎಸ್.ಕರ್ಕಿಯವರ 'ಪಂಪನ ಶೈಲಿ : ಮಾರ್ಗ ಮತ್ತು ದೇಸಿ'. ಇವೆರಡೂ ಚರ್ಚೆಗಳು ಇದುವರೆಗೆ ಗಮನಿಸಿದ ಎರಡು ಚರ್ಚೆಗಳಿಗಿಂತ ಸ್ವಲ್ಪ ಭಿನ್ನವೆಂಬಂತೆ ತೋರಬಹುದಾದರೂ ಕರ್ಕಿಯವರ ಚರ್ಚೆ ಮುಗಳಿಯವರ ಚರ್ಚೆಗಿಂತ ಅಂಥ ಹೊಸತನವೇನನ್ನೂ ಒಳಗೊಂಡಿಲ್ಲವೆಂದೇ ಹೇಳಬಹುದು. ರಂಗಣ್ಣನವರ ಚರ್ಚೆ ಮಾತ್ರ ಈ ಎಲ್ಲವುಗಳಿಗಿಂತಲೂ ಭಿನ್ನವಾಗಿರುವಂಥದು.

ರಂಗಣ್ಣನವರ 'ಪಂಪನ ಶೈಲಿ' ಯನ್ನು ಕುರಿತ ಚರ್ಚೆ ಮಾರ್ಗ—ದೇಸಿಯ ನೆಲೆಯಿಂದ ನಡೆದುದಲ್ಲ. ಬದಲಾಗಿ, ಔಚಿತ್ಯದ ನೆಲೆಯಿಂದ ನಡೆದದ್ದು. ಪಂಪನ ಶೈಲಿಯನ್ನು ಇಲ್ಲಿ ಪಂಪನಿಗೆ ಮಾತ್ರ ವಿಶಿಷ್ಟವಾದ ವ್ಯಕ್ತಿ ವಿಶಿಷ್ಟತೆಯೆಂದು ಗ್ರಹಿಸಲಾಗಿದೆ. ಈ ಸಂಬಂಧದ ರಂಗಣ್ಣನವರ ಮಾತುಗಳನ್ನಿಲ್ಲಿ ಗಮನಿಸಬಹುದು :

"ಪಂಪದೇವನ ಮಾರ್ಗದ ಅಪೂರ್ವ ವೈಲಕ್ಷಣ್ಯ ನಮ್ಮನ್ನು ಆವರಿಸಿ, ಆಕರ್ಷಿಸಿ, ಒಳ ಹೊಕ್ಕು ನಮ್ಮ ವಿಮರ್ಶೆಯನ್ನು ಆಶ್ಚರ್ಯ, ಆನಂದಗಳ ಮಿಶ್ರದಿಂದ

ಉದಯಿಸಿದ ಮಾಕತ್ವದ ಕಡೆಗೇ ನಮ್ಮನ್ನು ಹೊರಳಿಸಿಬಿಡುತ್ತದೆ. ನಾಗಚಂದ್ರನೋ ಲಕ್ಷ್ಮೀಶನೋ ರನ್ನನೋ ರಾಘವಾಂಕನೋ ಜನ್ನನೋ ಷಡಕ್ಷರಿಯೋ ಆದರೆ ಅವನ ಶೈಲಿ ಹಾಗಲ್ಲವೇ ಅಲ್ಲ, ಹೀಗೆಯೇ ಸರಿ ಎಂದು ಹಟ ಹಿಡಿದು ವಾದಿಸುವುದು ಸಾಧ್ಯ. ಪಂಪನ ಶೈಲಿ ಒಂದು ವಾಕ್ಯದ ಎಲ್ಲೆಗಳಲ್ಲಿ ಅಡಗಲು ಒಪ್ಪದು. ಅದರಲ್ಲಿ ಎಷ್ಟೋ ವಿಷಯ ಅಂಗಗಳು ಹೇಗೋ ಒಟ್ಟುಗೂಡಿ ಯಾವುದೋ ಒಂದು ಸಾಮರಸ್ಯವನ್ನು ಪಡೆದುಬಿಟ್ಟಿವೆ. ಒಂದು ಪದ್ಯವನ್ನು ಪರಿಶೀಲಿಸಿ ಇದು ಪಂಪನದೇ ಎಂದು ದೃಢವಾಗಿ ಹೇಳಬಹುದು. ಆ ಶೈಲಿ ಇನ್ನಾವ ಕನ್ನಡ ಕವಿಗೂ ಇಲ್ಲ, ಅಸಾಧ್ಯ; ಅದೊಂದು ಅಸಾಧಾರಣ ಶೈಲಿ. ಆದರೆ ಏತರಿಂದ ಅದು ಪಂಪನದೆಂದು ಪ್ರಮಾಣ ಕೊಡುವುದು ಕಷ್ಟ. ಪಂಪನ ಲೇಖನದಲ್ಲಿ ಯಾವೊಂದು ಗುಣವೂ ಎದ್ದು ಕಾಣುವುದಿಲ್ಲ; ಆದರೆ ಒಂದಲ್ಲ ಹತ್ತು ಗುಣಗಳಿವೆ .......... ನಿಶ್ಚಯವಾಗಿ ತನ್ನದೇ ಆದ ವೈಭವದ ಬೆಡಗಿನಿಂದ ತುಂಬಿ ತುಳುಕಾಡುತ್ತಿದೆ ..........–[12]

ರಂಗಣ್ಣನವರು ತಮ್ಮ ಇಡೀ ಚರ್ಚೆಯಲ್ಲಿ, ಪಂಪನ ಶೈಲಿಯಲ್ಲಿ ಅಡಗಿರುವ ಇಂಥ ಹಲವು ಗುಣ–ಲಕ್ಷಣ ವಿಶಿಷ್ಟತೆಗಳನ್ನು ಎತ್ತಿಹಿಡಿಯುತ್ತಾರೆ. "ವಿಲಕ್ಷಣ ಕಾಂತಿಯ ಅಪೂರ್ವ ಶೈಲಿ; ಅನುಕರಿಸಲಾಗದ ಸ್ವಾಭಾವಿಕ ಶೈಲಿ; ದೊಡ್ಡ ಶೈಲಿ" ಎಂದು ಪಂಪನ ಶೈಲಿಯನ್ನು ಕರೆಯುವ ಅವರು ಯಾವುದೇ "ಒಂದನ್ನು ಕುರಿತು ಅದೇ ಪಂಪನ ಶೈಲಿಯ ಗುಟ್ಟೆಂದು ಮೋಸ ಹೋಗದಿದ್ದರೆ ಸರಿ" ಎಂಬ ಎಚ್ಚರಿಕೆಯೊಂದಿಗೆ 'ಪಂಪನ ಶೈಲಿಯ ಕೆಲವು ಲಕ್ಷ್ಯಗಳನ್ನು ಬಿಡಿ ಬಿಡಿಯಾಗಿ' ಪ್ರಸ್ತಾಪಿಸಿದ್ದಾರೆ. ಅವನ್ನು ಹೀಗೆ ಪಟ್ಟಿ ಮಾಡಬಹುದು : 'ಪ್ರಸನ್ನ ಶಾಂತಿ', 'ಚಿತ್ತ ಸ್ವಾಸ್ಥ್ಯ', 'ಮೃದುವಚನ', 'ಪ್ರಾಚೀನ ಮನುಷ್ಯನ ಕಟು ಜಾಯಮಾನದ ಛಾಯೆ', 'ಮಿತ ವಚನ', 'ಕೆಲವು ವೇಳೆ ಎಲ್ಲರ ಬಾಯಲ್ಲಿಯೂ

---

12. ರಂಗಣ್ಣ, ಎಸ್.ವಿ., 'ಪಂಪನ ಶೈಲಿ', ಶೈಲಿ, ಮೈಸೂರು, 1944. ಪು : 40

ಬರುವ ಸಾಧಾರಣವಾದ ದಿನಚರಿ ಭಾಷೆಯನ್ನುಪಯೋಗಿಸಿ ವಸ್ತುವನ್ನು ವಿಶದಪಡಿಸುವುದು', 'ಅನುಕರಣ ಶಬ್ದವನ್ನು ಬಳಸಿ ಅರ್ಥವ್ಯಕ್ತಿಯನ್ನು ಹೆಚ್ಚಿಸುವುದು', 'ಒಂದೇ ಪದವನ್ನು ತಿರುತಿರುಗಿ ಉಪಯೋಗಿಸಿ ಸ್ವಲ್ಪ ಬದಲಾಯಿಸಿ ಬೇರೆ ಅರ್ಥವನ್ನು, ಎಂಥಾ ಗಹನ ವಿಷಯವನ್ನಾದರೂ ಸರಾಗವಾಗಿ ನಿರೂಪಿಸಿ ತನ್ನ ಸರಳತೆಯನ್ನು' ಪರಿಪೋಷಿಸುವ 'ಪುನರುಕ್ತಿ'ಯ ಗುಣ, 'ಧ್ವನಿ ವೈಭವ' ಇತ್ಯಾದಿ.

ಪಂಪನ ಶೈಲಿಯಲ್ಲಿ ಕಾಣಬರುವ ಈ ಮೇಲಿನ ಪ್ರಯೋಗಗಳನ್ನು ಗುರುತಿಸುವಾಗ ರಂಗಣ್ಣನವರು ಇಲ್ಲಿ ಕೆಲವನ್ನಾದರೂ ಭಾಷಾ ಸಂಬಂಧಿಯಾದ ಸಂಗತಿಗಳಾಗಿ ಮಾತ್ರ ನೋಡುತ್ತಿಲ್ಲ, ಕಥಾ ನಿರ್ವಹಣೆಗೆ ಸಂಬಂಧಿಸಿದ ಕೆಲವಂಶಗಳನ್ನೂ ಗಮನಿಸಿದ್ದಾರೆಂಬುದನ್ನು ಕಾಣಬಹುದು. ಪಂಪನ 'ಚಿತ್ತ ಸ್ವಾಸ್ಥ್ಯ' ವನ್ನು ಕುರಿತು ಹೇಳುತ್ತಾ "ಹೇಗಾದರೂ ಮಾಡಿ ದ್ವೇಷ ವೈಮನಸ್ಯಗಳನ್ನು ತೊಡೆದು ಹಾಕಿ ಕ್ಷಮೆ ಒಡಂಬಡಿಕೆಗಳಲ್ಲೇ ಕೊನೆಗಾಣಿಸುವ ಪ್ರತಿಜ್ಞೆ ಪಂಪನದು"; "ಎಲ್ಲೆಲ್ಲಿ ಆತಂಕದ ಸನ್ನಿವೇಶ ಉದ್ಭವಿಸುತ್ತದೆಯೋ ಅಲ್ಲೆಲ್ಲ .......... ಸಂತಸದ ಮುಕ್ತಾಯವನ್ನು ಮಾನವ ನಡವಳಿಕೆಗೆ ಕಿಂಚಿತ್ತೂ ಊನವುಂಟಾಗದಂತೆ ಏರ್ಪಡಿಸುವುದೇ ಪಂಪನ ಮಾರ್ಗ" ಎಂದಿರುವ ಮಾತುಗಳು, ಅರಿಕೇಸರಿಯು ವಿಪರೀತ ಸ್ತೋತ್ರದಿಂದ ಆಗಿದೆಯೆಂದು ಅವರು ತೋರಿಸುವ ಅನೌಚಿತ್ಯದ ನಿದರ್ಶನಗಳು — ಇವೆಲ್ಲ ಈ ಅಂಶವನ್ನು ಸಮರ್ಥಿಸುತ್ತವೆ. ಇನ್ನಿತರ ಕೆಲವು ಪ್ರಯೋಗಗಳನ್ನು ಭಾಷಾ ಸಂಬಂಧಿಯಾದವುಗಳಾಗಿಯೇ ನೋಡಿದ್ದಾರೆ. ಆ ಪ್ರಯೋಗಗಳ ಕುರಿತಾದ ವಿವರಣೆಗಳಾಗಲಿ, ಅವುಗಳಿಗೆ ಪಂಪನಿಂದ ತೋರಿಸುವ ನಿದರ್ಶನಗಳಾಗಲಿ ಗಮನಿಸತಕ್ಕವಾಗಿವೆ.

ಪಂಪನ ದೊಡ್ಡ ಶೈಲಿಯ ಲಕ್ಷಣಗಳಾಗಿ ಈ ಪ್ರಯೋಗಗಳನ್ನು ಹೇಳುವಾಗ ರಂಗಣ್ಣನವರು ಬಳಸುವ ಮಾನದಂಡ ಔಚಿತ್ಯ. ಔಚಿತ್ಯದ ನೆಲೆಯಲ್ಲಿ ಯಾವುದು ಸಮರ್ಥಿತವಾಗುತ್ತದೋ ಅದನ್ನು ಒಪ್ಪಿ, ಹಾಗಲ್ಲದ್ದನ್ನು ನಿರಾಕರಿಸುತ್ತಾರೆ. ಪಂಪನಲ್ಲಿ ಅನೇಕಾಂಶಗಳನ್ನು ಮೆಚ್ಚುವ ಅವರು ಕೆಲವು ಅನೌಚಿತ್ಯಗಳನ್ನೂ ಗುರುತಿಸುತ್ತಾರೆ.

ಈ ಕಾರಣಕ್ಕಾಗಿಯೇ ರಂಗಣ್ಣನವರ ಶೈಲಿ ಚರ್ಚೆ ಔಚಿತ್ಯದ ನೆಲೆಯಿಂದ ನಡೆದಿದೆಯೆಂದು ಮೇಲೆ ಹೇಳಿದ್ದು. ಹಾಗೆ ನೋಡಿದರೆ ಮಾರ್ಗ–ದೇಸಿಯ ನೆಲೆಯಿಂದ ಪ್ರವೇಶಿಸಿದಾಗಲೂ ಅಂತಿಮವಾಗಿ ಔಚಿತ್ಯದ ನೆಲೆಯನ್ನೇ ತಲುಪಬೇಕಾಗುತ್ತದೆ. ರಂಗಣ್ಣನವರು ಮಾರ್ಗ– ದೇಸಿಯ ಪ್ರಸ್ತಾಪವನ್ನೇ ಮಾಡುವುದಿಲ್ಲ. ವಾಸ್ತವವಾಗಿ ಪಂಪನ ಶೈಲಿಯ ಪ್ರಧಾನ ನೆಲೆಯಿರುವುದೇ ಅಲ್ಲಿ. ಅವರು ಅನೌಚಿತ್ಯಕ್ಕೆಂದು ಯಾವ ನಿದರ್ಶನಗಳನ್ನು ಕೊಡುತ್ತಾರೋ ಅವುಗಳಲ್ಲಿ ಕೆಲವನ್ನಾದರೂ ಅನೌಚಿತ್ಯವೆಂದು ಕರೆಯಲಾಗದು. "........... ಎಷ್ಟೋ ಕಡೆ ಉಚಿತ ಪದ ಕೂಡ ಕೇಳಿಸದು. ಕಟು ದೃಷ್ಟಿಯಿಂದ ತನಿಖೆ ಮಾಡಿದರೆ .......... ಔಚಿತ್ಯ ಎಲ್ಲ ಕಾಲದಲ್ಲಿಯೂ ಪಂಪನ ಹಿಡಿಯಲ್ಲಿದೆಯೆಂದು ಹೇಳುವುದು ಕಷ್ಟ" ಎಂದು ಹೇಳುತ್ತಾ "ಅನೆಯನೇಱಿ ಸೌಷ್ಠವಗೆ ಚರ್ಚರಿಕೇಸರಿಯೊಂದು ಗಾಡಿಯುದಾಂನಿ", "ಕರ್ತವ್ಯಮಾವುದೆಂಗೆಯ್ಮಂ ಪೇೞಿಮೆಂದು ನಾರಾಯಣನಂ ಬೆಸಗೊಳೆ ಮಧುಕರ ವನಿತಾವದನ ಕಮಳ ಹಿಮಕರನಿಂತೆಂದಂ", "ಶರ ಶಯ್ಯಾಗ್ರದೊಳಿಯ ನೀಳ್ದಿರೆ ಘಟ ಪ್ರೋದ್ಭೂತ ನಂತಾಗೆ ಪಾಸರನಾತ್ಮಜನಂ ರಣದೊಳ್ ದುಶ್ಶಾಸನಂ ತದ್ವೃಕೋದರ ನಿಂದಂತೞಿಗ ತೞಿಗ" (ಇಲ್ಲಿ 'ವೃಕೋದರ' ಎಂಬೊಂದು ಪದ ಮಾತ್ರ ಉಚಿತವೆನ್ನುತ್ತಾರೆ) ಮೊದಲಾದ ನಿದರ್ಶನಗಳನ್ನು ತೋರಿಸಿದ್ದಾರೆ. ಇವೆಲ್ಲ ಒಂದು ಪದ್ಯದ, ಗದ್ಯದ ಒಟ್ಟು ಘಟಕದ ಒಂದು ಅಂಗವಾಗಿದ್ದು, ಅವನ್ನಷ್ಟೆ ಹೊರತೆಗೆದು ನೋಡುವಾಗ ಕೆಲವೇಳೆ ಹೀಗೆ ಅನುಚಿತವೆಂದು ತೋರಬಹುದು. ಆದರೆ, ಆ ಒಟ್ಟು ಘಟಕದ ಅವಿಚ್ಛಿನ್ನ ಅಂಗಗಳಾಗಿಯೇ ಅವನ್ನು ನೋಡುವಾಗ ಅವರು ತೋರಿಸಿದ ಕೆಲವು ನಿದರ್ಶನಗಳಾದರೂ ಅನುಚಿತವೆಂದು ತೋರಲಾರವು. ಮುಖ್ಯವಾಗಿ (ಪಂಪನ ಮಟ್ಟಿಗಂತೂ ಸಂಸ್ಕೃತ–ಕನ್ನಡಗಳು ಜೊತೆ ಜೊತೆಗೆ ಬಳಕೆಯಾಗುತ್ತಿರುವುದು ಅವನ ಶೈಲಿಯ ಒಂದು ವಿಶಿಷ್ಟಾಂಶವೇ ಆಗಿದೆ.) ಇಂಥ ಕೆಲವನ್ನು ಅನುಚಿತ ಪ್ರಯೋಗಗಳೆಂದು ಅವುಗಳ ಕುರಿತಂತೆ ಎತ್ತಿರುವ ಆಕ್ಷೇಪಗಳನ್ನು ಬಿಟ್ಟರೆ, ಪಂಪನ ಶೈಲಿಯ ಹಲವು ಮುಖಗಳನ್ನು ತಮ್ಮ ವಿಸ್ತಾರವಾದ ಚರ್ಚೆಯಲ್ಲಿ ತೆರೆದಿಡಲು ಪ್ರಯತ್ನಿಸಿದ್ದಾರೆ,

ಮತ್ತು ಆ ಹಲವು ಮುಖಗಳನ್ನು ಪಂಪನ 'ದೊಡ್ಡ ಶೈಲಿ'ಯ ಛಾಯೆಗಳಾಗಿ ನೋಡುತ್ತಾರೆ.

ರಂಗಣ್ಣನವರು ಔಚಿತ್ಯದ ನೆಲೆಯಿಂದ ನೋಡಿದರೆ, ಕರ್ಕಿಯವರು ಮಾರ್ಗ–ದೇಸಿಯ ನೆಲೆಯಿಂದಲೇ ಪಂಪನ ಶೈಲಿಯ ಕುರಿತ ಚರ್ಚೆಯನ್ನು ನಡೆಸಿದ್ದಾರೆ.[13] ಆದರೆ ಕರ್ಕಿಯವರ ಚರ್ಚೆ ಅದುವರೆಗೆ ಪ್ರಸ್ತಾಪಿತವಾಗದ ಯಾವ ಹೊಸ ಸಂಗತಿಗಳನ್ನೂ ಒಳಗೊಂಡಂತೆ ತೋರದು. "ಪಂಪನ ಕಾವ್ಯ ಕುಸುಮ ಮಾಲೆಯಲ್ಲಿ ಇವೆರಡೂ (ಮಾರ್ಗ–ದೇಸಿ) ಹವಣಾಗಿ, ಅಂದವಾಗಿ ಹೊಂದಿಕೊಂಡಿವೆ" ಎಂಬಂಥ ಮಾತುಗಳು ಈಗಾಗಲೇ ಪ್ರಸ್ತಾಪಿತವಾಗಿದ್ದವುಗಳೇ. "ಸಕ್ಕದಕ್ಕೆ ಕನ್ನಡದ ದೀಕ್ಷೆ ಕೊಟ್ಟು ಅದನ್ನು ದೇಸಿಗೆ ತಿರುಗಿಸುವ ಕಲೆಯನ್ನು ಪಂಪ ಬಲ್ಲ .........." "ಮಾರ್ಗ"ಕ್ಕೆ 'ದೇಸಿ' ಜೀವಕಳೆಯನ್ನೂ, ಭಾವಸ್ಪರ್ಶವನ್ನೂ ನೀಡಿ ಸಾರ್ಥಕತೆಯನ್ನು ಪಡೆಯುತ್ತದೆ" ಎಂಬಂಥ ಮಾತುಗಳನ್ನು ಗಮನಿಸಿದಾಗ ಪಂಪನ ಶೈಲಿಯ ಒಂದು ಮುಖ್ಯಾಂಶವನ್ನು ಗುರುತಿಸಿದ್ದಾರೆಂದು ತೋರಬಹುದಾದರೂ ಆ ಮಾತುಗಳಿಗೆ ಪೂರಕವಾದ ವಿವರಗಳಾಗಲಿ, ಸಮರ್ಥನೆಯ ನೆಲೆಗಟ್ಟಾಗಲಿ ಇರುವಂತೆ ತೋರದು. ಬಹುಪಾಲು ಚರ್ಚೆಯೆಲ್ಲ ಪಂಪನ ಕೆಲವು ನಿದರ್ಶನಗಳನ್ನು ತೋರಿಸಿ " .......... ಇಡಿಯ ಪದ್ಯ ದೇಸಿಯ ಬೆಡಗನ್ನು ಎತ್ತಿ ತೋರುತ್ತದೆ", " .......... ಈ ದೇಸಿಯ ಗುಡಿಗೆ ಕಳಸವಿಟ್ಟಂತಿದೆ" ಎಂಬಂಥ ಮಾತುಗಳನ್ನು ಹೇಳುವುದರಲ್ಲಿ ಪ್ರವೃತ್ತವಾಗಿದೆ.

ಇದುವರೆಗೆ ಗಮನಿಸಿದ ನಾಲ್ಕು ಚರ್ಚೆಗಳಲ್ಲಿ ಮೂರು 'ಮಾರ್ಗ'–'ದೇಸಿ'ಯ ನೆಲೆಯಿಂದ ನಡೆದಿರುವಂಥವು. ರಂಗಣ್ಣನವರ ಚರ್ಚೆಯೊಂದು ಮಾತ್ರ

---

13. ಕರ್ಕಿ, ಡಿ.ಎಸ್., 'ಪಂಪನ ಶೈಲಿ : ಮಾರ್ಗ ಮತ್ತು ದೇಸಿ', ಮಹಾಕವಿ ಪಂಪ ಮತ್ತು ಅವನ ಕೃತಿಗಳು, ಕ.ವಿ.ವಿ., 1969. ಪು : 54–64.

'ಮಾರ್ಗ' — 'ದೇಸಿ' ಪ್ರಸ್ತಾಪವನ್ನು ಮಾಡದೆ ಔಚಿತ್ಯದ ನೆಲೆಯಿಂದ ನಡೆದಿರುವಂಥದು. ಈ ಚರ್ಚೆಗಳನ್ನು ಕುರಿತು ಹೇಳುವಾಗ ಅಂತಹ ಸಂದರ್ಭಗಳಲ್ಲಿಯೇ ಅವು ಪಂಪನ ಕಾವ್ಯ ಭಾಷೆಯನ್ನು ಅರ್ಥಾತ್ ಶೈಲಿಯನ್ನು ನೋಡುವ ಕ್ರಮವನ್ನು, ಅವುಗಳ ಸ್ವರೂಪ ಮತ್ತು ಮಿತಿಗಳನ್ನು ಗುರುತಿಸಲಾಗಿದೆ. ಈ ಚರ್ಚೆಗಳಿಗಿಂತ ಭಿನ್ನವಾಗಿರುವ ಕೆಲವನ್ನೀಗ ಗಮನಿಸಬಹುದು.

### 4.2.2.2 ಕಾವ್ಯ ಭಾಷೆಯನ್ನು ಕುರಿತ ಬದಲಾದ ದೃಷ್ಟಿಕೋನ

ಕಳೆದ ದಶಕದ ಪ್ರಾರಂಭದ ನಂತರ ನಡೆದಿರುವ ಪಂಪನ ಕಾವ್ಯ ಭಾಷೆಯನ್ನು ಕುರಿತ ಚರ್ಚೆಗಳು, ಅದುವರೆಗೆ ಬಂದ ಚರ್ಚೆಗಳಿಗಿಂತ ಗಮನಾರ್ಹವಾಗಿ ಭಿನ್ನವಾಗಿವೆ. ಇಲ್ಲಿ ಪರಿಭಾಷೆಗಳನ್ನು ಕುರಿತ ಗೊಂದಲಗಳನ್ನು ಪರಿಹರಿಸಿಕೊಂಡು ಅವನ್ನು ಖಚಿತ ನೆಲೆಯಲ್ಲಿ ವಿವರಿಸಿಕೊಳ್ಳಲಾಗಿದೆ. ಈ ಚರ್ಚೆಗಳೂ ಮಾರ್ಗ—ದೇಸಿಗಳ ನೆಲೆಯಿಂದಲೇ 'ಪಂಪನ ಶೈಲಿ' ಯನ್ನು ನೋಡುತ್ತವೆಯಾದರೂ ನೋಡುವ ವಿಧಾನ ಬೇರೆಯಾಗಿದೆ. ಪಂಪನ ಕಾವ್ಯಗಳಿಂದ ಸುಲಭವಾಗಿ ತೆಗೆದು ತೋರಿಸಬಹುದಾದ ದೇಸಿಯ ಬಿಡಿ ವಿವರಗಳಲ್ಲಿ ಮಾತ್ರ ಆಸಕ್ತವಾಗದೆ, ಪಂಪನ ಭಾಷಿಕ ಬಳಕೆಯ ಹಿನ್ನೆಲೆಗಿರುವ ಕೆಲವು ಮುಖ್ಯ ಅಂಶಗಳನ್ನು ಗುರುತಿಸಲಾಗಿದೆ. ಕೆ.ವಿ.ನಾರಾಯಣರ 'ಪಂಪನ ದೇಸಿ' ಮತ್ತು 'ಪಂಪನ ಶೈಲಿ' ಎಂಬೆರಡು ಚರ್ಚೆಗಳನ್ನು ಕಿ.ರಂ. ನಾಗರಾಜರ 'ಪಂಪ : ಮಾರ್ಗ, ದೇಸಿ ಮತ್ತು ಚಾರಿತ್ರಿಕ ಪ್ರಜ್ಞೆ' ಎಂಬ ಚರ್ಚೆಯನ್ನು ಇಲ್ಲಿ ಗಮನಿಸಬಹುದು.

ಕೆ.ವಿ.ನಾರಾಯಣರ ಚರ್ಚೆಗಳಿಂದ ಮೊದಲಿಗೆ ಕೆಲವು ಮಾತುಗಳನ್ನಿಲ್ಲಿ ಉದ್ಧರಿಸಬಹುದು:

"ಅಭಿವ್ಯಕ್ತಿಗೆ ಸಂಬಂಧಿಸಿದಂತೆ ಇರುವ ವ್ಯತ್ಯಾಸಗಳನ್ನು 'ಮಾರ್ಗ' ಮತ್ತು 'ದೇಸಿ'ಗಳು ಸೂಚಿಸುತ್ತವೆಂಬುದರಿಂದ ಇದು ಮುಖ್ಯವಾಗಿ ಶೈಲಿಗೆ ಅಥವಾ ರೀತಿಗೆ ಸಂಬಂಧಿಸಿದ ಪ್ರಶ್ನೆ". [14]

"ಕಾವ್ಯವನ್ನು ಪಂಪ ವಿವರಿಸಿಕೊಂಡ ರೀತಿ ಅವನ ಶೈಲಿಯ ಕಲ್ಪನೆಯನ್ನು ರೂಪಿಸಿದೆ .......... ಮುಖ್ಯವಾಗಿ ಕಾವ್ಯದಲ್ಲಿ ಭಾಷೆ ಹೇಗೆ ಬಳಕೆಯಾಗ ಬೇಕೆಂದು ಹೇಳುತ್ತಾನೋ ಆ ವಿಧಾನವನ್ನೇ ಇಲ್ಲಿ ಶೈಲಿಯೆಂದು ಪರಿಗಣಿಸಲಾಗಿದೆ. 'ಶೈಲಿ' ಗೆ ಸಂವಾದಿ ಕಲ್ಪನೆಯಾದ 'ರೀತಿ' ಯನ್ನು ನಿರ್ವಚಿಸುವ ಭಾರತೀಯ ಕಾವ್ಯ ಮೀಮಾಂಸಕರೆಲ್ಲರೂ ಕಾವ್ಯದ ಅಭಿವ್ಯಕ್ತಿ ರೂಪವನ್ನೇ ಗಮನಿಸುವುದರಿಂದ ನಮ್ಮ ಪರಿಗಣನೆ ಸೂಕ್ತವೇ ಆಗುತ್ತದೆ." [15]

ಮೇಲಿನೆರಡು ಉದ್ಧರಣೆಗಳನ್ನು ಗಮನಿಸಿದರೆ, ಕೆ.ವಿ.ಎನ್. ಅವರು 'ಮಾರ್ಗ'— 'ದೇಸಿ' ಗಳನ್ನು ಭಾಷಾಸಂಬಂಧಿಗಳಾಗಿಯೂ, ಭಾಷಾ ಬಳಕೆಯ ವಿಧಾನವನ್ನೇ 'ಶೈಲಿ' ಎಂದೂ ಗ್ರಹಿಸಿರುವುದನ್ನು ಕಾಣಬಹುದು. 'ಮಾರ್ಗ'—'ದೇಸಿ', 'ಶೈಲಿ' ಇವನ್ನೆಲ್ಲ ಈ ಮೊದಲು ಗ್ರಹಿಸಿದ್ದಕ್ಕಿಂತ ಹೆಚ್ಚು ಖಚಿತ ನೆಲೆಗಳಲ್ಲಿ ಈ ಚರ್ಚೆಗಳಲ್ಲಿ ವಿವರಿಸಿಕೊಳ್ಳಲಾಗಿದೆ ಮತ್ತು ಚರ್ಚೆಯ ಸ್ವರೂಪದಲ್ಲಿ ಕೂಡ ಇದುವರೆಗಿನ ಚರ್ಚೆಗಳಿಗಿಂತ ಭಿನ್ನವಾಗಿವೆ.

"ಸಂಸ್ಕೃತ ಕಾವ್ಯಗಳ ಪ್ರಭಾವವಿದ್ದು ಕನ್ನಡದಲ್ಲಿ ಬರೆಯ ಹೊರಟ ನಮ್ಮ ಕವಿಗಳಿಗೆ ಅಭಿವ್ಯಕ್ತಿಯ ಸಮಸ್ಯೆ ಸಾಕಷ್ಟು ದೊಡ್ಡದಾಗಿತ್ತು" ಎನ್ನುವ ಕೆ.ವಿ.ಎನ್.

---

14. 'ಪಂಪನ ದೇಸಿ', ಪಂಪ : ಒಂದು ಅಧ್ಯಯನ (ಸಂ.) ಜಿ.ಎಸ್.ಶಿವರುದ್ರಪ್ಪ, ಬೆಂ.ವಿ.ವಿ. 1974. ಪು : 200

15. 'ಪಂಪನ ಶೈಲಿ', ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, (ಸಂ.) ಜಿ.ಎಸ್.ಶಿವರುದ್ರಪ್ಪ, ಬೆಂ.ವಿ.ವಿ. 1975. ಪು : 125.

ಅವರು ಆ ಸಮಸ್ಯೆ, 'ಸಂಸ್ಕೃತ ಚಾಕಚಕ್ಯದ ಶೈಲಿಯ ಆಕರ್ಷಣೆ' ಮತ್ತು ಸಂಸ್ಕೃತ–ಕನ್ನಡಗಳ ಮಿಶ್ರಣಕ್ಕಿದ್ದ ವಿರೋಧ – ಇವೆರಡರ ನಡುವೆ ಇದ್ದ ವಿರೋಧವನ್ನು ಪರಿಹರಿಸಿಕೊಳ್ಳುವುದೇ ಆಗಿತ್ತೆಂದು ಹೇಳುತ್ತಾರೆ. ಇದು (ಈ ಸಮಸ್ಯೆ) ಪ್ರತಿಯೊಬ್ಬರನ್ನೂ ಎದುರಿಸಿದರೂ, ಅದಕ್ಕೆ ಪ್ರತಿಯೊಬ್ಬನ ಉತ್ತರವೂ ಬೇರೆ ಬೇರೆ. ಈ ಉತ್ತರದ ಒಂದು ತುದಿಯಲ್ಲಿ 'ಶುದ್ಧ ದೇಸಿ' ಇದ್ದರೆ ಇನ್ನೊಂದು ತುದಿಯಲ್ಲಿ 'ಶುದ್ಧ ಮಾರ್ಗ' ಇರುತ್ತದೆ ಎಂದಿದ್ದಾರೆ.

ಈ ಸಮಸ್ಯೆಯ ಪರಿಹಾರಕ್ಕೆ ಪಂಪನ ಉತ್ತರ ಶುದ್ಧ ಮಾರ್ಗವೂ ಅಲ್ಲದ, ಶುದ್ಧ ದೇಸಿಯೂ ಅಲ್ಲದ ನೆಲೆಯಲ್ಲಿದೆ. ಇದು ಪಂಪನ ವಿಶಿಷ್ಟತೆ ಕೂಡ. ಈ ವಿಶಿಷ್ಟತೆಯನ್ನು ಮಾರ್ಗ–ದೇಸಿಗಳ ಅಥವಾ ಸಂಸ್ಕೃತ–ಕನ್ನಡಗಳ 'ಸಮನ್ವಯ'ವೆಂದೇ ಗುರುತಿಸಲಾಗಿದೆ. ಪಂಪನಲ್ಲಿ ಮಾರ್ಗ–ದೇಸಿಗಳ ಸಂಬಂಧವನ್ನು ಕುರಿತ ಇದುವರೆಗೆ ಗಮನಿಸಿದ ಚರ್ಚೆಗಳಲ್ಲೆಲ್ಲ 'ಸಮನ್ವಯ'ವೆಂಬುದಕ್ಕೆ ಸಂವಾದಿಯಾಗಿ 'ಒಡಂಬಡಿಕೆ' 'ಹೊಂದಿಕೆ' 'ಸರಿಬೆರಕೆ' ಎಂಬಂಥ ಮಾತುಗಳೆಲ್ಲ ಬಳಕೆಯಾಗಿವೆ. ಈ ಮಾತುಗಳೆಲ್ಲ ಬಹುಮಟ್ಟಿಗೆ ರಾಜಿ ಮನೋಧರ್ಮವೊಂದನ್ನು ಸೂಚಿಸುತ್ತವೆಯೆಂದು ತೋರುತ್ತದೆ. ಮಾರ್ಗ–ದೇಸಿ ಸಮನ್ವಯವನ್ನು ಹೇಳುವಂತೆ 'ಕಾವ್ಯ ಧರ್ಮ'–'ಧರ್ಮ' ಸಮನ್ವಯವನ್ನೂ ಹೇಳಲಾಗಿದೆ. ಈಚೆಗೆ ಕಿ.ರಂ.ನಾಗರಾಜ ಅವರು 'ದೇಸಿ'–'ಮಾರ್ಗ'ಗಳ ನಡುವಿನ ಪ್ರಶ್ನೆ 'ಸಂಘರ್ಷ'ವೆಂಬುದನ್ನು ಪ್ರಸ್ತಾಪಿಸುತ್ತಾ "ಮಾರ್ಗ ಮತ್ತು ದೇಸಿಗಳ ಸಂಘರ್ಷದ ಸ್ವರೂಪ ಪಂಪನ ಕಾವ್ಯದ ವಿಭಿನ್ನ ನೆಲೆಗಳನ್ನು ಪ್ರಕಟಿಸುತ್ತದೆ" ಎಂದಿದ್ದಾರೆ.[16] ಕೆ.ವಿ.ನಾರಾಯಣರು "ಹಲವು ದೃಷ್ಟಿಗಳಿಂದ ಸಮನ್ವಯವಾದಿಯಾದ ಪಂಪ ಸುವರ್ಣ ಮಾಧ್ಯಮವೊಂದರ ಸೃಷ್ಟಿಯ ಕಡೆಗೆ ತನ್ನ ಪ್ರತಿಭೆ, ವ್ಯುತ್ಪತ್ತಿಗಳೆಲ್ಲವನ್ನೂ

---

16. ಪಂಪ : ಮಾರ್ಗ, ದೇಸಿ ಮತ್ತು 'ಚಾರಿತ್ರಿಕ ಪ್ರಜ್ಞೆ', ಅಂಕಣ, 1–3, 1980. ಪು : 16, 18.

ದುಡಿಸಿದವನು. ಶೈಲಿಯಲ್ಲೂ ಈ ಸಮನ್ವಯಕ್ಕೆ ಅವಕಾಶ ಕೊಟ್ಟಿದ್ದಾನೆಂದು ಹೇಳಿದ್ದಾರೆಯಾದರೂ[17] ಈಚೆಗೆ ಅದನ್ನು ಸಮನ್ವಯವೆಂದು ಕರೆಯದೆ ಮುಖಾಮುಖಿಯೆಂದೇ ನೋಡಿದ್ದಾರೆ. ಒಂದೆಡೆಗೆ[18] ಕಾವ್ಯಧರ್ಮ–ಧರ್ಮ ಸಮನ್ವಯದ ಬಗ್ಗೆ ಬರೆಯುತ್ತಾ 'ಇಲ್ಲಿರುವುದು ಮುಖಾಮುಖಿಯೇ ಹೊರತು ಸಮನ್ವಯವಲ್ಲ' ಎನ್ನುವ ಅವರ ಮಾತು ಮಾರ್ಗ–ದೇಸಿಯ ನೆಲೆಗೂ ಅನ್ವಯವಾಗುವಂಥದೆಂದು ತೋರುತ್ತದೆ. ಮಾರ್ಗ–ದೇಸಿಗಳಿಗೆ ಸಂಬಂಧಿಸಿದ ಯಾವ ಅಂಶವನ್ನು 'ಒಡಂಬಡಿಕೆ', 'ಸಮನ್ವಯ', 'ಹದವಾದ ಹೊಂದಿಕೆ', 'ಸರಿಬೆರಕೆ' ಎಂದೆಲ್ಲ ಹಿಂದೆ ಗಮನಿಸಿದ ಚರ್ಚೆಗಳಲ್ಲಿ ಕರೆಯಲಾಯಿತೋ ಅದನ್ನು 'ಮುಖಾಮುಖಿ' ಅಥವಾ 'ಸಂಘರ್ಷ'–ವೆಂದು ನೋಡುವುದು ಸದ್ಯದ ವಿಮರ್ಶೆಯ ನಿಲುವಾಗಿದೆ. ಒಂದು ರೀತಿಯಲ್ಲಿ ಹೀಗೆ ನೋಡುವುದು ಹೆಚ್ಚು ಅರ್ಥಪೂರ್ಣವಾದುದೆಂದು ತೋರುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಪಂಪನ ಕಾವ್ಯ ಭಾಷೆಯ ವಿಶಿಷ್ಟತೆಗೆ – ಮುಳಿಯ ಅವರು ಎನ್ನುವಂತೆ 'ದೇಸಿಯುಂ ಪೊಸತು ಮಾಡಿ ಮಾರ್ಗವನ್ನು ಪೊಸಯಿಸುವ' ಪ್ರಕ್ರಿಯೆಗೆ – ಈ ಮುಖಾಮುಖಿಯೇ ಕಾರಣವಾಗಿದೆ. ಸಂಸ್ಕೃತದ ಛಂದೋ ವೃತ್ತಗಳನ್ನು ಪಂಪ ಬಳಸುವಾಗ ಅವು ಸಂಸ್ಕೃತತನವನ್ನೇ ಉಳಿಸಿಕೊಂಡಿರುವುದಿಲ್ಲ. ಕೆ.ವಿ.ಎನ್. ಅವರು ಈ ಅಂಶವನ್ನು ಪ್ರಸ್ತಾಪಿಸಿ, ಕೆಲವು ನಿದರ್ಶನಗಳನ್ನಿತ್ತು ಹೀಗೆಂದಿದ್ದಾರೆ: " ಅಕ್ಷರ ವೃತ್ತದ ಸ್ವರೂಪದಲ್ಲಿ ಕನ್ನಡಕ್ಕೆ ಹೊಂದುವ ಬದಲಾವಣೆಗಳನ್ನು ಪಂಪನಿಗಿಂತ

---

17. 'ಪಂಪನ ದೇಸಿ', ಪಂಪ: ಒಂದು ಅಧ್ಯಯನ, (ಸಂ.) ಜಿ.ಎಸ್.ಶಿವರುದ್ರಪ್ಪ, ಬೆಂ.ವಿ.ವಿ., 1974. ಪು: 203

18. ಪಂಪನ ಕೃತಿ: ಕಾವ್ಯಧರ್ಮ–ಧರ್ಮ ಸಮನ್ವಯ (ಅಣ್ಣಿಗೆರೆಯಲ್ಲಿ ಪಂಪನನ್ನು ಕುರಿತು ನಡೆದ ವಿಚಾರ ಸಂಕಿರಣದಲ್ಲಿ ಮಂಡಿತ) 1985. ಮತ್ತು ಒಮ್ಮೆ ಪಂಪನ ಭಾಷೆಯ ಸಂಬಂಧದ ಅನೌಪಚಾರಿಕ ಚರ್ಚೆಯಲ್ಲೂ ಪಂಪನಲ್ಲಿ ಮಾರ್ಗ–ದೇಸಿಗಳ ಸಮನ್ವಯವಿಲ್ಲ, ಅವುಗಳ ಮುಖಾಮುಖಿಯಿದೆ ಎಂದಿದ್ದಾರೆ.

ಹಿಂದೆಯೇ ಮಾಡಲಾಗಿತ್ತು. ಕವಿರಾಜ ಮಾರ್ಗವೇ ಅದನ್ನು ಸಮರ್ಥಿಸುತ್ತದೆ. ಆದರೆ ಆ ಬದಲಾದ ಸ್ವರೂಪವನ್ನು ಹೆಚ್ಚು ಕಾವ್ಯಾತ್ಮಕವಾಗಿ ಮೊದಲು ಬಳಸಿದವನು ಪಂಪ. ಚಿಕ್ಕ ಚಿಕ್ಕ ವಾಕ್ಯಗಳನ್ನು ಬಳಸುತ್ತಲೇ ಅಕ್ಷರ ವೃತ್ತದ ಪೆಡಸಾದ ಚೌಕಟ್ಟನ್ನು ಅನುಸರಿಸುವ ಪಂಪನ ಶೈಲಿ ಹೆಚ್ಚು ಸುರಿತ ರೀತಿಯಂತಾಗಿ ಕಾಣುತ್ತದೆ .......... ಅವುಗಳ ಲಯವನ್ನು ಕನ್ನಡ ಲಯಕ್ಕೆ ಹೊಂದಿಸುವ ಪದ ಮೈತ್ರಿಯಿಂದ ಪಂಪ ಮಹತ್ತನ್ನು ಸಾಧಿಸಿದ್ದಾನೆ" ಎಂದಿದ್ದಾರೆ.[19]

ಪಂಪನ ದೇಸಿಯ ಅಧ್ಯಯನಕ್ಕೆ ಸಂಬಂಧಿಸಿದಂತೆ ಇಡೀ ಕಾವ್ಯದ ತುಂಬಾ ಇರುವ, ಈಗ ಬಳಕೆಯಿಂದ ಜಾರಿ ಹೋಗುತ್ತಿರುವ ಶಬ್ದಗಳು, ಪದ ಸಮುಚ್ಚಯಗಳು, ಗಾದೆಗಳು — ಇವನ್ನೆಲ್ಲ ಕಂಡು ಸಂಭ್ರಮಿಸುವುದು ಅನವಶ್ಯಕವೆನ್ನುವ ಅವರು ಔಚಿತ್ಯದ ನೆಲೆಯಲ್ಲಿ ಯಾವುದು ಸಮರ್ಥಿತವಾಗುತ್ತದೋ ಅದನ್ನು ಮಾತ್ರ ಮುಖ್ಯವೆನ್ನುತ್ತಾರೆ. ಈ ಮಾತುಗಳನ್ನು ಹೇಳುವ ಮೂಲಕ ಅದುವರೆಗೆ ನಮ್ಮಲ್ಲಿ ಕಾಣಬರುತ್ತಿದ್ದ ಪ್ರಶಂಸಾಪರವಾದ, ಮೆಚ್ಚುಗೆಯ, ವೈಭವೀಕರಣದ ಅಧ್ಯಯನಗಳ ನೆಲೆಯೊಂದನ್ನು ಪ್ರಶ್ನಿಸುತ್ತಾರೆ. ಇನ್ನು ಪಂಪ ದೇಸಿಯನ್ನು ಬಳಸುವ ಕೆಲವು ವಿಧಗಳನ್ನು ಗುರುತಿಸಿದ್ದಾರೆ. ಮುಖ್ಯವಾಗಿ :—

(1) ಸಂಭಾಷಣೆಯಲ್ಲಿ : ಮಾತಿನಲ್ಲಿ ಬರುವ ಕಾಕುವಿನ ಬಳಕೆ.

(2) ವಾಕ್ಯದ ಭಾವ ಪರಿಸರವನ್ನು ಉಳಿಸಿಕೊಳ್ಳಲು ವಾಕ್ಯದ ಸಹಜ ರೂಪವನ್ನೂ ಪದಗಳ ಅನುಕ್ರಮಣಿಕೆಯನ್ನೂ ಬದಲಿಸುವುದು.

(3) ಆಡುನುಡಿಯಿಂದ ನೇರವಾಗಿ ಎಳೆದ ಮಾತುಗಳನ್ನು ಕೆಲವು ಸಂದರ್ಭಗಳಲ್ಲಿ ಉಚಿತವಾಗಿ ಬಳಸುವುದು.

---

19. 'ಪಂಪನ ಶೈಲಿ' ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಸಂ) ಜಿ.ಎಸ್.ಶಿವರುದ್ರಪ್ಪ, ಬೆಂ.ವಿ.ವಿ., 1975. ಪು:126.

(4) ಅಲ್ಲಲ್ಲಿ ಸಂಸ್ಕೃತಿ ವಿಶಿಷ್ಟ ವಿಚಾರಗಳು ಬಂದಾಗ ತಾನು ಅರಿಸಿದ ಶಿಷ್ಟ ಭಾಷೆಯ ಪದಗಳನ್ನು ಬಳಸುವುದು.

ಇವೆಲ್ಲಕ್ಕೂ ಪಂಪನಿಂದ ನಿದರ್ಶನಗಳನ್ನು ತೋರಿಸಿದ್ದಾರೆ, ಕೆ.ವಿ.ಎನ್. ಅವರು. ಇವುಗಳ ಜೊತೆಗೆ ಅವರೇ ಸೂಚಿಸಿರುವ ಸಂಸ್ಕೃತದ ಅಕ್ಷರ ವೃತ್ತಗಳನ್ನು ಬಳಸುತ್ತಿರುವಾಗ ಅವನ್ನು ಕನ್ನಡದ ಲಯಗಳಿಗೆ ಹೊಂದಿಸುತ್ತಿರುವುದು — ಇಂಥವನ್ನೂ ಗಮನಕ್ಕೆ ತೆಗೆದುಕೊಳ್ಳಬಹುದು. ಕೆ.ವಿ.ಎನ್. ಅವರು ಪಂಪ ದೇಸಿಯನ್ನು (ಭಾಷೆಯನ್ನು) ಬಳಸುತ್ತಿರುವ ವಿಧಗಳೆಂದು ಗುರುತಿಸುವವರಾದರೂ, ಇವೆಲ್ಲ ಈ ನೆಲೆಗಳಿಂದ ಪಂಪನ ಕಾವ್ಯ ಭಾಷೆಯನ್ನು ಅಧ್ಯಯನ ಮಾಡಬಹುದೆಂಬುದರ ಸೂಚನೆಗಳು ಕೂಡ ಆಗಿವೆಯೆನ್ನಬಹುದು.

ಕೆ.ವಿ.ಎನ್. ಅವರು ಗಮನಿಸಿರುವ ಮತ್ತೊಂದು ಅಂಶ, 'ದೇಸಿ' ಪಂಪನ ವ್ಯುತ್ಪತ್ತಿಯ ಒಂದು ಭಾಗವೇ ಆಗಿರುವುದು ಮತ್ತು ಆ ನೆಲೆಯಿಂದ ಚಾರಿತ್ರಿಕವಾಗಿ ಪಂಪನ ಒಂದು ಸಾಧನೆಯನ್ನು ಗುರುತಿಸುವುದು : "ರೀತಿಯ ದೃಷ್ಟಿಯಿಂದ ಒಂದು ಸಾಹಿತ್ಯದ ಚರಿತ್ರೆಯನ್ನು ಗಮನಿಸಿದರೆ ಅದು ತಾಳುವ ಸ್ವರೂಪ ಹೀಗಿರುತ್ತದೆ. ದೇಸಿಯಿಂದ ಮಾರ್ಗ ಅಥವಾ ಅಭಿಜಾತತೆಗೆ, ಮತ್ತೆ ಮಾರ್ಗದಿಂದ ದೇಸಿಗೆ — ಇದೊಂದು ಚಕ್ರೀಯ ಪ್ರಕ್ರಿಯೆ. ದೇಸಿಯಿಂದ ಮಾರ್ಗಕ್ಕೆ ಹೋಗುವಾಗ ವ್ಯುತ್ಪತ್ತಿಯೇ ಪ್ರಧಾನವಾಗುತ್ತದೆ; ಪ್ರತಿಭೆ ಹಿಂದೆ ಸರಿಯಲೂಬಹುದು. ಆದರೆ ಒಮ್ಮೆ ಮಾರ್ಗ ಶೈಲಿಯನ್ನು ತಲುಪಿದ ಮೇಲೆ ದೇಸಿಗೆ ಹಿಂದಿರುಗಿಸುವುದು ಮಹಾಕವಿಯೊಬ್ಬನ ಕೆಲಸ. (ಜನರ ಆಡುನುಡಿಗೆ ಕಾವ್ಯ ಹಿಂದಿರುಗಬೇಕೆಂಬ ಮಾತು ಈ ಕಾಲದ್ದು) ಪಂಪನ ಹಿಂದಿನ ಕಾವ್ಯ ಪರಂಪರೆಯನ್ನು ನಾವಿನ್ನೂ ಸುಸಂಘಟಿತ ಪ್ರಯತ್ನದಿಂದ ಪುನರ್ರಚಿಸಬೇಕಾಗಿದೆ. ಆದರೆ ಪಂಪನ ಕಾವ್ಯಗಳನ್ನೇ ನೋಡಿದಾಗ ಆತ ಮಾರ್ಗದಿಂದ ದೇಸಿಯ ಕಡೆಗೆ ರೀತಿಯನ್ನು ತರಲು ಯತ್ನಿಸಿದವನೆಂದು ತೋರುತ್ತದೆ" ಕಿ.ರಂ.ನಾಗರಾಜರೆಂದಂತೆ, "ಅವನಿಗಿಂತ ಹಿಂದೆ ಇದ್ದಿರಬಹುದಾದ

ಜಡಗೊಂಡ ಮಾರ್ಗವನ್ನು ಹೊಸ ಮರುಸೃಷ್ಟಿಗೆ ಗುರಿಪಡಿಸುವುದು ಅವನ ಜವಾಬ್ದಾರಿಯಾಗಿರುವಂತೆ ತೋರುತ್ತದೆ. ಈ ಎರಡೂ ಅಭಿಪ್ರಾಯಗಳಲ್ಲಿ ವ್ಯಕ್ತವಾಗಿರುವಂತೆ 'ಮಾರ್ಗದಿಂದ ದೇಸಿಯ ಕಡೆಗೆ' ತರುವ, 'ಜಡಗೊಂಡ ಮಾರ್ಗವನ್ನು ಹೊಸ ಮರುಸೃಷ್ಟಿಗೆ ಗುರಿಪಡಿಸುವ' ಸವಾಲೇ ಪಂಪನ ಅಭಿವ್ಯಕ್ತಿಯ ನೆಲೆಯಲ್ಲಿನ ಮುಖ್ಯ ಪ್ರಶ್ನೆ. ಮತ್ತು ಈ ಸವಾಲನ್ನು ಅವನು ಸ್ವೀಕರಿಸಿ ಯಶಸ್ವಿಯಾದದ್ದು ಅವನ ಸಾಧನೆಯಾಗಿರುವಂತೆ ತೋರುತ್ತದೆ. ಇದು ಭಾಷಿಕ ಬಳಕೆಯ ನೆಲೆಯದಾಗಿರುವಂತೆಯೇ ಇತರ ಆಯಾಮಗಳನ್ನೂ ಒಳಗೊಂಡುದೇ ಆಗಿದೆ. ಏಕೆಂದರೆ ಸಿದ್ಧವಾಗಿರುವ ಕಥಾ ಭಿತ್ತಿಯ ನೆಲೆಯಲ್ಲಿ ತನ್ನ ಕಾಲದ ಸತ್ಯವನ್ನು ಕಾಣುವುದು, ತನ್ನ ಸಂಸ್ಕೃತಿಯ ನೆಲೆಗಳನ್ನು ಕಂಡುಕೊಳ್ಳುವ ಪ್ರಯತ್ನವೂ ಇದಕ್ಕೆ ಸಂಬಂಧಿಸಿರುವಂತೆಯೇ ತೋರುತ್ತದೆ. ಈ ಸಂಬಂಧದ ಕೆಲವು ಗಮನಾರ್ಹ ಅಂಶಗಳು ಕಿ.ರಂ. ಅವರ ಚರ್ಚೆಯಲ್ಲಿವೆ.

ಇದುವರೆಗೆ, ಪಂಪನ ಭಾಷೆಯನ್ನು ಕುರಿತಂತೆ ನಡೆದಿರುವ ಎಲ್ಲ ಚರ್ಚೆಗಳನ್ನೂ ಬಹುಮಟ್ಟಿಗೆ ಗಮನಿಸಲಾಗಿದೆ. ಅಧ್ಯಯನದ ಉದ್ದೇಶ ಮತ್ತು ವಿಧಾನಗಳನ್ನಾಧರಿಸಿ ಈ ಅಧ್ಯಯನಗಳನ್ನು ವಿಂಗಡಿಸಿಕೊಂಡದ್ದು ಸಂಗತವೇ ಆಗಿದೆ. ಭಾಷಾ ವಿಜ್ಞಾನದ ನೆಲೆಯಿಂದ ಪಂಪನ ಭಾಷೆಯನ್ನು ದಾಖಲೆಯಂತೆ ನೋಡಿದ ಅಧ್ಯಯನಗಳಲ್ಲಿ ರಾಮಚಂದ್ರ ರಾವ್ ಅವರ ಅಧ್ಯಯನವೊಂದು ಗಮನಾರ್ಹವಾಗಿದೆ. ಉಳಿದೆರಡು ಕಿರು ಪ್ರಯತ್ನಗಳೂ ಗಮನಿಸತಕ್ಕವಾದರೂ ಅಧ್ಯಯನದ ಶಿಸ್ತುಗಳಿಂದ ವಂಚಿತವಾಗಿವೆ. ನೇಗಿನ ಹಾಳರ ಚರ್ಚೆಯಲ್ಲಿ ಅದುವರೆಗೆ ನಡೆದ ಅಧ್ಯಯನಗಳನ್ನು ಗಮನಿಸದ್ದರ ಪರಿಣಾಮವಾಗಿ, ಯಾವ ಹೊಸ ಅಂಶಗಳೂ ಚರ್ಚಿತವಾಗಲಿಲ್ಲ. ಈ ದೃಷ್ಟಿಕೋನದಿಂದ ನಡೆಯಬಹುದಾದ ಅಧ್ಯಯನಗಳು ಪ್ರವೇಶಿಸಬಹುದಾದ ಕ್ಷೇತ್ರಗಳಲ್ಲಿ ವಾಕ್ಯ ವ್ಯವಸ್ಥೆಯೂ ಒಂದಾಗಿದೆ. ಇನ್ನು ಎರಡನೆಯ ಬಗೆಯ ಅಧ್ಯಯನಗಳು — ಈವರೆಗೆ ಗಮನಿಸಿದಂತೆ 'ದೇಸಿ' — 'ಮಾರ್ಗ', ಶೈಲಿ ಸಂಬಂಧದ ಚರ್ಚೆಗಳಾಗಿದ್ದು ಇಲ್ಲಿ ಒಂದು ಕ್ರಮಾನುಗತವಾದ ಬೆಳವಣಿಗೆಯನ್ನು ಗಮನಿಸಬಹುದು. ಹಿಂದೆ

ಗುರುತಿಸಿದಂತೆ, ಪರಿಭಾಷೆಗಳ ಗ್ರಹಿಕೆಯಲ್ಲಿ, ಅಧ್ಯಯನದ ವಿಧಾನದಲ್ಲಿ ಮೊದಮೊದಲ ಚರ್ಚೆಗಳಿಗೂ ಈಚಿನ ಕೆಲವು ಚರ್ಚೆಗಳಿಗೂ ಗಮನಾರ್ಹವಾದ ಬದಲಾವಣೆಗಳನ್ನು ಕಾಣಬಹುದು. ಈಚಿನ ಚರ್ಚೆಗಳಂತೂ (ಕೆ.ವಿ.ಎನ್.) ಪರಿಭಾಷೆಗಳ ಗ್ರಹಿಕೆ, ಅಧ್ಯಯನದ ವಿಧಾನದಲ್ಲಿ ಮಾತ್ರವಲ್ಲದೆ ತನ್ನ ಹಿಂದಿನ ವಿಮರ್ಶಾ ನಿಲುವುಗಳನ್ನೂ ಗಮನಕ್ಕೆ ತೆಗೆದುಕೊಳ್ಳುವ ಅಂಶ — ಆ ನಿಲುವುಗಳ ಸ್ವೀಕರಣೆಯಿರಬಹುದು ಅಥವಾ ನಿರಾಕರಣೆಯಿರಬಹುದು — ಉತ್ತಮ ವಿಮರ್ಶಾ ಪರಂಪರೆಯೊಂದು ನಿರೀಕ್ಷಿಸುವಂಥದು.

ಈ ಎಲ್ಲ ಚರ್ಚೆಗಳ ಹಿನ್ನೆಲೆಯಲ್ಲಿ ಪಂಪನ ಕಾವ್ಯ ಭಾಷೆಗೆ ಸಂಬಂಧಿಸಿದ ಇನ್ನು ಕೆಲವಂಶಗಳನ್ನಿಲ್ಲಿ ಗಮನಿಸಬಹುದು. ಇವು ಇಲ್ಲಿ ಗಮನಿಸಲಾದ ಚರ್ಚೆಗಳಲ್ಲಿ ಗುರುತಿಸಲಾಗಿರುವ ಕೆಲವಂಶಗಳಿಗೆ ಪೂರಕವಾಗಿರುವಂಥವು. ರಂಗಣ್ಣನವರು ಪುನರುಕ್ತಿಯನ್ನು ಕುರಿತು ಪ್ರಸ್ತಾಪಿಸಿದ್ದಾರೆ. ಆದರೆ ಈ ಪುನರುಕ್ತಿ ಪಂಪನಲ್ಲಿ ವಿಭಿನ್ನ ಉದ್ದೇಶಗಳಿಗೆ, ವಿಭಿನ್ನ ರೀತಿಯಲ್ಲಿ ಬಳಕೆಯಾಗಿರುವುದನ್ನು ಅವರು ನೀಡಿರುವ ನಿದರ್ಶನಗಳಿಂದ ತಿಳಿಯಲಾಗದು. ವೈಶಂಪಾಯನ ಸರೋವರದ ರೌದ್ರ ಸ್ವರೂಪವನ್ನು ತೆರೆದಿಡುವಲ್ಲಿ ಪಂಪ ಹೇಗೆ ಪುನರುಕ್ತಿಯನ್ನು ಬಳಸಿದ್ದಾನೆಂಬುದನ್ನು ನೋಡಬಹುದು :—

<u>ಇದು</u> ಪಾತಾಳ ಬಿಲಕ್ಕೆ ಬಾಗಿಲ್
<u>ಇದು ದಲ್</u> ಘೋರಾಂಧಕಾರಕ್ಕೆ ಮಾಡಿದ ಕೂಪಂ
<u>ಪೆಱತಲ್ತು ಇದು</u> ಉಗ್ರ ಲಯ ಕಾಳಾಂಬೋಧರಚ್ಛಾಯೆ

ಇಂಥ ಅಸಂಖ್ಯ ನಿದರ್ಶನಗಳು ಪಂಪನಲ್ಲಿ ಸಿಗುತ್ತವೆ. ಇಲ್ಲಿ ತೋರಿಸಿದ ನಿದರ್ಶನದಲ್ಲಿ 'ಇದು' ಎಂಬ ಪದವನ್ನು ಇತರ ಪದಗಳೊಂದಿಗೆ ವಿನ್ಯಾಸಗೊಳಿಸುತ್ತ ಪುನರಾವರ್ತಿಸುತ್ತಿರುವುದು ಆ ಸರೋವರದ ಒಂದು ಗುಣ ವಿಶೇಷದ ಸೃಷ್ಟನೆಗೆಂದೇ ತೋರುತ್ತಿದೆ.

ಅದೇ ರೀತಿ ಧರ್ಮದ ಮತ್ತು ರಾಜ ಪ್ರಭುತ್ವದ ನೆಲೆಗಳನ್ನು ಪರಸ್ಪರ ಮುಖಾಮುಖಿಗೊಳಿಸುವ ಸಂದರ್ಭವೆಂದು ಭರತ–ಬಾಹುಬಲಿಗಳಿಬ್ಬರಿಗೂ ರಾಜ್ಯವನ್ನು ಹಂಚಿಕೊಟ್ಟು ಶಿಬಿಕೆಯನ್ನೇರಿದ ಆದಿನಾಥನನ್ನು ಕುರಿತ ಚಿತ್ರಗಳ ವಿವರಗಳಿರುವ ಭಾಗವನ್ನು ಕಿ.ರಂ.ನಾಗರಾಜರು ಉದ್ಧರಿಸಿ ಅದನ್ನು ಒಂದು ಅಂತರ ನಾಟಕವೆಂದು ಕರೆದಿದ್ದಾರೆ.[20]

"ನೆಗೞ್ದ ತಪೋರಾಜ್ಯದ ಬಗೆ | ಮಿಗೆ ನಿಂದಂ–ವೃಷಭನಾಥ
ನತ್ತೊಂದೆಡೆಯೊಳ್
ಜಗತೀ ರಾಜ್ಯದ ಬಗೆ ಕೈ | ಮಿಗೆ ನಿಂದಂ ಭರತರಾಜ
ನಿತ್ತೊಂದೆಡೆಯೊಳ್"
(ಆ.ಪು. 9–65)

"ಸುರ ಶಿಲ್ಪಿಗಳಿಂ ಶಿಬಿಕಾ | ವಿರಚನೆ ದೆಸೆಗೆಸೆವುತಿರ್ದುದತ್ತೊಂದೆಡೆಯೊಳ್
ನರ ಶಿಲ್ಪಿಗಳಿಂ ಮಂಟಪ | ವಿರಚನೆ ದೆಸೆಗೆಸೆವುತಿರ್ದುದಿತ್ತೊಂದೆಡೆಯೊಳ್"
(ಆ.ಪು. 9–66)

ಕಿ.ರಂ. ಅವರು ಗುರುತಿಸಿದಂತೆ ಇಲ್ಲಿನ ಅಂತರ ನಾಟಕವನ್ನು, ಮುಖಾಮುಖಿಯನ್ನು ಸಾಧ್ಯಗೊಳಿಸುವಲ್ಲಿ ಇಲ್ಲಿ ಬಂದಿರುವ ಭಾಷಾ ಘಟಕಗಳ ಪುನರಾವರ್ತನೆ ಸಮರ್ಥವಾಗಿರುವಂತೆ ತೋರುತ್ತದೆ.

ಸಂಸ್ಕೃತ–ಕನ್ನಡಗಳು ಜೊತೆ ಜೊತೆಗೆ ಬಳಕೆಯಾಗುವಾಗ (ಕನ್ನಡದ) ದೇಸಿಯ ಘಟಕಗಳು, ಆಡುಮಾತಿನ ಧಾಟಿಯಲ್ಲಿನ ಧ್ವನಿಯ ಏರಿಳಿತಗಳು ಸಂಸ್ಕೃತ ಧಾಟಿಯನ್ನು ಆ ಸಂಸ್ಕೃತ ಪದಗಳಿಗೆ ಇಲ್ಲವಾಗಿಸುತ್ತವೆ. ಇದು ಪಂಪನ ಒಂದು

---

20. ಪಂಪ : ಮಾರ್ಗ, ದೇಸಿ ಮತ್ತು ಚಾರಿತ್ರಿಕ ಪ್ರಜ್ಞೆ, ಅಂಕಣ, 1–3, 1980. ಪು : 18.

ವಿಶಿಷ್ಟ ಸಾಧನೆಯೆನ್ನಬಹುದು. ಈ ಪ್ರಕ್ರಿಯೆಯನ್ನು ಅದರ ಅನೇಕ ಮುಖಗಳಲ್ಲಿ ಗಮನಿಸಬೇಕಾದ ಅಗತ್ಯವಿದೆ. ಸಂಸ್ಕೃತ ಪದಗಳಿಂದ ನಿಬಿಡವಾಗಿರುವ "ಇದಱೊಳ್ ಶ್ವೇತಾತಪತ್ರಸ್ಥಗಿತ ದಶದಿಶಾಮಂಡಲಂ ..........", "ಸುರಸಿಂಧು ಪ್ರಿಯ ಪುತ್ರ ಕೇಳ್ ..........", "ಸುರತರು ನಂದನಂಗಳಿರ ರತ್ನಪಿನದ್ಧ ......." ಎಂಬಂಥ ಅನೇಕ ಪದ್ಯಗಳಲ್ಲಿ ಕಾಣಬರುವ ಈ ಅಂಶವನ್ನು ಗಮನಿಸಬೇಕಾಗಿದೆ.

ಇನ್ನು, ಇಡೀ ಕಾವ್ಯವನ್ನೇ ಗಮನಿಸುತ್ತಿರುವಾಗ ಭಾಷೆಯ ಬಳಕೆಯ ನೆಲೆಯಲ್ಲಿ ಹಲವು ಬಗೆಗಳಿರುವಂತೆ ಕಾಣುತ್ತದೆ. ಪಂಪ ನಿರೂಪಕನಾಗಿ ಬಳಸುವ ಭಾಷೆಗೂ, ಪಾತ್ರಗಳ ಮೂಲಕ ಬರುವ ಭಾಷೆಗೂ ವ್ಯತ್ಯಾಸವಿದೆ. ಮತ್ತೆ ನಿರೂಪಣೆಯಲ್ಲಿ ಕೂಡ ಸಂಸ್ಕೃತಿ ವಿಶಿಷ್ಟ ವಿವರಗಳನ್ನು ನಿರೂಪಿಸುವಲ್ಲಿ ( ಇದನ್ನು ಕೆ.ವಿ.ಎನ್. ಗುರುತಿಸಿದ್ದಾರೆ ) ದೇಸಿಯ ವಿಶಿಷ್ಟ ಪದಗಳು ಬಂದು ಸಾಮಾನ್ಯ ನಿರೂಪಣೆಗಿಂತ ಭಿನ್ನವಾಗಿರುವುದು ಗಮನಿಸತಕ್ಕ ಸಂಗತಿ. ಇದಲ್ಲದೆ ಪಾತ್ರಗಳಲ್ಲಿ ಕೂಡ ಸಂದರ್ಭೋಚಿತವಾದ ಕೆಲವು ವ್ಯತ್ಯಾಸಗಳಿರುವಂತಿದೆ. ಇವೆಲ್ಲ ಪಂಪನ ಭಾಷೆಯನ್ನು ಕುರಿತ ಗಂಭೀರ ಅಧ್ಯಯನಗಳಿಂದ ಖಚಿತಗೊಳ್ಳಬೇಕಿದೆ. ಮತ್ತು ಇಂಥ ವಿಭಿನ್ನ ಶೈಲಿಕ ಸ್ತರಗಳನ್ನು ಕುರಿತು ಮುಂದಿನ ಅಧ್ಯಯನಗಳು ಆಸಕ್ತಿ ವಹಿಸಲು ಅವಕಾಶವಿದೆ.

## ಅಧ್ಯಾಯ : ಐದು

## ಸಾಮಾಜಿಕ ದೃಷ್ಟಿಕೋನ

## 5.1 ಸಾಹಿತ್ಯ ಮತ್ತು ಸಮಾಜದ ಸಂಬಂಧವನ್ನು ಕುರಿತ ಗ್ರಹಿಕೆ : ಕೆಲವು ಸಂಗತಿಗಳು

ಸಾಹಿತ್ಯವನ್ನು 'ಜನಜೀವನದ ಪ್ರತಿಬಿಂಬ', 'ಒಂದು ಯುಗ ಮನಸ್ಸಿನ ವಾಣಿ', 'ಒಂದು ರಾಷ್ಟ್ರ ಜೀವಿತದ ಕಥೆ', 'ಸಮಾಜದ ಅಭಿವ್ಯಕ್ತಿ' ಎಂದೆಲ್ಲ ಕರೆಯಲಾಗಿರುವುದನ್ನು ಮತ್ತೆ ಮತ್ತೆ ಗಮನಿಸುತ್ತಿರುತ್ತೇವೆ. ಈ ಮಾತುಗಳೆಲ್ಲ ಒಂದು ನೆಲೆಯಲ್ಲಿ ಅಸಂಗತ ಸೂತ್ರೀಕರಣಗಳಂತೆಯೋ ಉತ್ಪ್ರೇಕ್ಷಿತ ಉಕ್ತಿಗಳಂತೆಯೋ ಕಂಡರೆ ಆಶ್ಚರ್ಯವಿಲ್ಲ. ಆದರೂ ಈ ಮಾತುಗಳು ಸಾಹಿತ್ಯ ಮತ್ತು ಸಮಾಜದ ನಡುವಣ ಅನಿವಾರ್ಯ ಸಂಬಂಧದ ನೆಲೆಯೊಂದನ್ನು ಕುರಿತಿವೆ ಎಂಬುದು ಸ್ಪಷ್ಟವಿರುವ ಸಂಗತಿ. ಕನ್ನಡದ ಸಂದರ್ಭದಲ್ಲಿ ಬಳಕೆಯಾಗುತ್ತಿರುವ ಈ ಮಾತುಗಳಿಗೆಲ್ಲ ಮೂಲ ಪಾಶ್ಚಾತ್ಯ ವಿಮರ್ಶಾ ಸಾಹಿತ್ಯವೇ ಆಗಿದೆ. ಇದೇ ಮಾತು ಸಾಹಿತ್ಯ ಮತ್ತು ಸಮಾಜದ ನಡುವಣ ಸಂಬಂಧವನ್ನು ಕುರಿತ ವಿಶ್ಲೇಷಣಾ ವಿಧಾನಕ್ಕೆ ಮಾತ್ರವಲ್ಲದೆ, ಒಟ್ಟಾರೆಯಾಗಿ ನಾವಿಂದು 'ಸಾಹಿತ್ಯ ವಿಮರ್ಶೆ' ಯೆಂದು ಕರೆಯುತ್ತಿರುವ ಚಟುವಟಿಕೆಗೇ ಅನ್ವಯವಾಗುವಂಥದು.

ನಮ್ಮ ಇಂದಿನ ಕನ್ನಡ ವಿಮರ್ಶೆಯ ಮುಖ್ಯ ತುಯ್ತವಿರುವುದು ಸಾಹಿತ್ಯ ಮತ್ತು ಸಮಾಜದ ನಡುವಣ ಸಂಬಂಧವನ್ನು ಕುರಿತು ವಿಶ್ಲೇಷಿಸುವುದರಲ್ಲಿ ಎಂಬುದನ್ನು ಈಗಾಗಲೇ ಗುರುತಿಸಲಾಗಿದೆ. ಸಾಮಾಜಿಕ ದೃಷ್ಟಿಕೋನದ್ದೆಂದು ಕರೆಯಬಹುದಾದ ಈ ವಿಮರ್ಶಾ ವಿಧಾನವೇನೂ ತನ್ನದೇ ಆದ ಖಚಿತ ನೆಲೆಗಳನ್ನು ಪಡೆದುಕೊಂಡಿರುವಂತೆ ಕಾಣದು. ಸಾಹಿತ್ಯ ಮತ್ತು ಸಮಾಜದ ನಡುವಣ ಸಂಬಂಧದ ಸ್ವರೂಪ ಇಂಥದೇ ಆಗಿರಬೇಕೆಂಬ ನಿರ್ದೇಶನಾತ್ಮಕವಾದ, ಒತ್ತಾಯಪೂರ್ವಕವಾದ ವಿಚಾರಗಳು ಒಂದು

ಆತಿಯಲ್ಲಿ ಮಂಡಿತವಾಗುತ್ತಿದ್ದರೆ, ಮತ್ತೊಂದು ಆತಿಯಲ್ಲಿ ಸಮಾಜದ ಒಬ್ಬ ಸದಸ್ಯನೇ ಆಗಿರುವ ಲೇಖಕ ತನ್ನ ಪರಿಸರದ ಸಮಾಜವನ್ನು 'ಇಡಿಯಾಗಿ' ಪ್ರತಿಬಿಂಬಿಸುತ್ತಾನೆ, ಅಭಿವ್ಯಕ್ತಿಸುತ್ತಾನೆ. ಆದುದರಿಂದ ಹೀಗೆ ಕೃತಿಯೊಂದರಲ್ಲಿ ಪ್ರತಿಬಿಂಬಿತವಾದ ವಿವರಗಳನ್ನು ತೆಗೆದು ತೋರಿಸುವುದು ವಿಮರ್ಶಕನ ಕೆಲಸ ಎಂಬಂಥ ವಿಚಾರಗಳು ಮಂಡಿತವಾಗುತ್ತಿವೆ. ಇಲ್ಲಿ ಒಂದೆಡೆಗೆ ಸಾಹಿತ್ಯ ಕೃತಿಯೊಂದು ವಹಿಸಬೇಕಾದ ಜವಾಬ್ದಾರಿಯ ಕುರಿತಾದ ಸೂಚನೆಯಿದ್ದರೆ, ಮತ್ತೊಂದೆಡೆಗೆ ಸಾಹಿತ್ಯ ಕೃತಿಯೊಂದನ್ನು ಸಾಮಾಜಿಕ ವಿವರಗಳ ದಾಖಲೆಯೆಂದು ನಂಬಲಾಗಿದೆ. ಕೆಲವೆಡೆ ಇವೆರಡೂ ತಳುಕು ಹಾಕಿಕೊಂಡಿರುವ ನಿದರ್ಶನಗಳನ್ನೂ ಗಮನಿಸಬಹುದು. ಇದರ ಜೊತೆಗೆ ಇನ್ನೂ ಕೆಲವು ಗೊಂದಲಗಳಿರುವುದನ್ನು ಈಗಾಗಲೇ ಗುರುತಿಸಲಾಗಿದೆ.[1] ಸದ್ಯ ಈ ಸಂಬಂಧದ ಚರ್ಚೆಯನ್ನು ಬೆಳೆಸದೆ, ಇಲ್ಲಿಗೆ ಅಗತ್ಯವೆನ್ನಿಸುವ ಕೆಲವು ಸಂಗತಿಗಳನ್ನಷ್ಟೆ ಗಮನಿಸಬಹುದು.

ಸಾಮಾಜಿಕ ದೃಷ್ಟಿಕೋನದವೆಂದು ಕರೆಯಬಹುದಾದ ವಿಮರ್ಶೆಗಳಲ್ಲಿ ತೀರ ಸಾಮಾನ್ಯವಾಗಿಯೇ ಗಮನಕ್ಕೆ ಬರುವ ಒಂದು ಅಂಶವೆಂದರೆ, ಕೃತಿ ವಿಶ್ಲೇಷಣೆಗೆ ಕೃತಿಯಾಚೆಗಿನ ಹೊರ ವಿವರಗಳಿಂದ ಪ್ರವೇಶಿಸುವುದು. ಎಂದರೆ ಕೃತಿಯೊಂದರಲ್ಲಿನ ವಿವರಗಳನ್ನು ಕೃತಿಯ ಹೊರಗಿನ ವಿವರಗಳ ಜೊತೆಗೆ ಸಂಬಂಧಿಸಿ ನೋಡುವುದು. ಪ್ರಾಚೀನ ಕನ್ನಡ ಕೃತಿಗಳನ್ನು ಕುರಿತ ಅಧ್ಯಯನಗಳಲ್ಲಾಗಲಿ, ಆಧುನಿಕ ಕೃತಿಗಳ ಅಧ್ಯಯನದಲ್ಲಾಗಲಿ ಸಾಮಾನ್ಯವಾಗಿ ಕಾಣಬರುವ ಪರಿಪಾಟಿಯೇ ಇದಾಗಿದೆ. ಇದಕ್ಕೆ ಕೆಲವು ಅಪವಾದಗಳಿರುವುದನ್ನು ಒಪ್ಪಬಹುದಾದರೂ ಚಾಲ್ತಿಯಲ್ಲಿರುವ ಬಹುಪಾಲು ವಿಮರ್ಶೆಗಳು ಹಿಡಿದಿರುವ ಜಾಡನ್ನು ಗಮನಿಸಿದರೆ ಈ ಮಾತಿಗೆ

---

1. ನೋಡಿ : ನಾರಾಯಣ ಕೆ.ವಿ., 'ಇತ್ತೀಚಿನ ಕನ್ನಡ ಸಾಹಿತ್ಯ ವಿಮರ್ಶೆ : ಅನ್ಯ ಪ್ರಭಾವಗಳು — ಸಾಧನೆಗಳು', ಸಾಹಿತ್ಯ ವಿಮರ್ಶೆ — 1983 (ಸಂ) ಟಿ.ಪಿ.ಅಶೋಕ, (ಸಾಹಿತ್ಯ ಅಕಾಡೆಮಿ) ಬೆಂಗಳೂರು, 1984 ಪು: 1–11

ಸಮರ್ಥನೆಯಿದೆಯೆಂದು ತೋರುತ್ತದೆ. ಈ ಹೊರ ವಿವರಗಳೆಂದು ಕರೆಯಬಹುದಾದುವು ಲೇಖಕನ ವ್ಯಕ್ತಿ ವಿವರಗಳಿರಬಹುದು, ಕೃತಿಯ ಸಮಕಾಲೀನ ಸಮಾಜದವೆಂದು ಗ್ರಹಿಸಲಾದ ಕೆಲವು ಬಿಡಿ ವಿವರಗಳಿರಬಹುದು, ವಿಮರ್ಶಕನಾದವನು ನಂಬಿದ ಕೆಲವು ವಿಚಾರ ಪ್ರಣಾಲಿಗಳಿರಬಹುದು. ಈ ಹೊರ ವಿವರಗಳನ್ನು ಅನ್ವಯಿಸುವಾಗ ಆಧುನಿಕ ಕೃತಿಗಳನ್ನು ಕುರಿತ ಬಹುಪಾಲು ವಿಮರ್ಶೆಗಳು ಒಂದು ರೀತಿಯ ಸರೀಸಾದ ದಾರಿಯನ್ನು ಹಿಡಿದಂತೆ ಕಂಡರೆ, ಪ್ರಾಚೀನ ಕೃತಿಗಳನ್ನು ಕುರಿತ ವಿಮರ್ಶೆಗಳು ಕೆಲವು ಸಮಸ್ಯೆಗಳನ್ನು ಎದುರಿಸಿದಂತೆ ಕಾಣುತ್ತದೆ. ಈ ಸಮಸ್ಯೆಯ ಕೇಂದ್ರದಲ್ಲಿ ಕೃತಿಯ ಸಮಕಾಲೀನ ಸಮಾಜದ ವಿವರಗಳು ತಿಳಿದಿಲ್ಲವೆಂಬುದೋ, ಹಾಗೆ ತಿಳಿದಿರುವ ವಿವರಗಳನ್ನು ಕೃತಿಯ ವಿವರಗಳಿಗೆ ಅನ್ವಯಿಸಿ ನೋಡಲು ಸಾಧ್ಯವಾಗುತ್ತಿಲ್ಲವೆಂಬುದೋ ಅಥವಾ ತಾನು ನಂಬಿದ ವಿಮರ್ಶಾ ನಿಲುವುಗಳನ್ನು ಅಲ್ಲಿ ಅನ್ವಯಿಸುವುದು ಸಾಧ್ಯವಾಗುತ್ತಿಲ್ಲವೆಂಬುದೋ ಇರಬಹುದೇ? ಎಂಬುದು ವಿಚಾರಾರ್ಹ ಸಂಗತಿಯಾಗಿದೆ. ಇಲ್ಲಿಯೂ ಕೆಲವೆಡೆ ಯಾವ ಸಮಸ್ಯೆಯನ್ನೂ ಎದುರಿಸದೆ ಕವಿಯೇ ತನ್ನ ಬಗ್ಗೆ, ತನ್ನ ಕಾವ್ಯದ ಬಗ್ಗೆ ಹೇಳಿಕೊಂಡ ಕೆಲವು ಪ್ರಾಸಂಗಿಕ ವಿವರಗಳನ್ನೋ, ಕೃತಿಯ ಕಾಲಮಾನದ ಬಗ್ಗೆ ತಿಳಿದಿರುವ ಕೆಲವು ಸರ್ವಸಾಮಾನ್ಯ ಸಂಗತಿಗಳನ್ನೋ ಹಿಡಿದು ಕೃತಿಯನ್ನು ವಿವರಿಸಿರುವುದನ್ನೂ ಕಾಣಬಹುದಾಗಿದೆ. ಒಟ್ಟಿನಲ್ಲಿ ಈ ಬಗೆಯ ಅಧ್ಯಯನಗಳು (ಕೆಲವೇ ಅಪವಾದಗಳನ್ನುಳಿದು) ಒಂದಲ್ಲೊಂದು ರೀತಿಯಲ್ಲಿ ಕೃತಿಯು ಹುಟ್ಟಿದ ಕಾಲದ ಸಾಮಾಜಿಕ ವಿವರಗಳನ್ನು, ಕೃತಿಯದೇ ಅಲ್ಲದ ಇತರ ಮೂಲಗಳಿಂದ ತಿಳಿದಿದ್ದರೆ ಮಾತ್ರ ಕೃತಿಯೊಂದರ ಸಾಮಾಜಿಕ ಅಧ್ಯಯನ ಸಾಧ್ಯವೆಂಬ ಒಂದು ನಂಬಿಕೆಯನ್ನು ಹೊಂದಿರುವಂತೆ ತೋರುತ್ತವೆ. ಆದರೆ ಇಂಥ ನಂಬಿಕೆ ಕೃತಿಯೊಂದರ ಅಧ್ಯಯನದ ಸಂದರ್ಭದಲ್ಲಿ ಅಧ್ಯಯನಕಾರನ ವಿವಕ್ಷೆಯಲ್ಲಿರುವುದು ಸಾಹಿತ್ಯ ಕೃತಿಯೇ? ಅಥವಾ ಸಮಾಜವೇ? ಎಂಬ ಅನುಮಾನಗಳನ್ನು ಹುಟ್ಟಿಸುತ್ತದೆ.

## 5.2 ಪಂಪನನ್ನು ಕುರಿತ ಸಾಮಾಜಿಕ ಅಧ್ಯಯನಗಳ ಹಿನ್ನೆಲೆಯಲ್ಲಿರುವ ಕೆಲವು ಸಂಗತಿಗಳು

ಈ ಮೇಲೆ ಪ್ರಸ್ತಾಪಿಸಿದ ಅಂಶಗಳೆಲ್ಲ ಪ್ರಾಚೀನ ಕನ್ನಡ ಕೃತಿಗಳನ್ನು ಕುರಿತ ಬಹುಪಾಲು ಅಧ್ಯಯನಗಳಿಗೆಲ್ಲ ಅನ್ವಯವಾಗುವಂಥವೇ ಆಗಿವೆ. ಈ ವಿವರಗಳ ಹಿನ್ನೆಲೆಯಲ್ಲಿ ಪಂಪನನ್ನು ಕುರಿತ ಸಾಮಾಜಿಕ ಅಧ್ಯಯನಗಳು ತಮ್ಮ ಹಿನ್ನೆಲೆಗೆ ಹೊಂದಿರುವ ಸಂಗತಿಗಳು ಯಾವುವೆಂಬುದನ್ನು ಗುರುತಿಸುವುದು ಸಾಧ್ಯವಿದೆ.

ಪಂಪನೇ ತನ್ನೆರಡು ಕಾವ್ಯಗಳಲ್ಲಿ ಒಂದನ್ನು 'ಲೌಕಿಕ'ವೆಂದೂ ಮತ್ತೊಂದನ್ನು 'ಜಿನಾಗಮ'ವೆಂದೂ ಕರೆದಿದ್ದಾನೆ. ಲೌಕಿಕವೆಂದು ಕರೆದ ಕೃತಿಯನ್ನು 'ಸಮಸ್ತ ಭಾರತ'ವೆಂದು ಕರೆದುದಲ್ಲದೆ, ಅದರಲ್ಲಿ ಅರ್ಜುನನ ಪಾತ್ರದೊಂದಿಗೆ ಅರಿಕೇಸರಿಯನ್ನು ಹೋಲಿಸಿರುವುದಾಗಿಯೂ ಹೇಳಿದ್ದಾನೆ. ಮತ್ತು ಈ ಅರಿಕೇಸರಿಯನ್ನು ಕಾವ್ಯದ ಪ್ರಾರಂಭದಲ್ಲಿ ಮಾತ್ರವಲ್ಲದೆ ಇತರೆಡೆಗಳಲ್ಲೂ ಮಹಾ ಪರಾಕ್ರಮಿಯೆಂದು ಹೇಳುವ ವಿವರಗಳಿವೆ. ಇಂಥ ವಿವರಗಳ ಆಧಾರದ ಮೇಲೆ ಭಾರತ ಕಥೆಯ ಅರ್ಜುನನೊಂದಿಗೆ ಅರಿಕೇಸರಿಯನ್ನು ಹೋಲಿಸಿ ಬರೆದ ವಿಕ್ರಮಾರ್ಜುನ ವಿಜಯವೆಂದರೆ ಅರಿಕೇಸರಿಯ ವಿಜಯವೇ ಎಂದೂ, ಇದರಿಂದ ಸಹಜವಾಗಿಯೇ ಈ ಕಾವ್ಯದಲ್ಲಿ ಕವಿ ತನ್ನ ಕಾಲದ ಸಂಗತಿಗಳನ್ನು ಹೇಳಿರುವನೆಂದೂ ನಂಬಲಾಯಿತು. 'ಸಮಸ್ತ ಭಾರತ'ವೆಂದು ಕರೆದದ್ದರ ಔಚಿತ್ಯವನ್ನು ಈ ನೆಲೆಯಲ್ಲೇ 'ಸಮೀಕೃತ ಭಾರತ'ವೆಂದು ವಿವರಿಸಿಕೊಳ್ಳುವುದು ರೂಢಿಯಾಗಿದೆ. ಮುಳಿಯ ಅವರಾದಿಯಾಗಿ ಬಹುತೇಕರು ಈ ವಿವರಣೆಯ ಪರವಾಗಿರುವುದನ್ನು ಗಮನಿಸಬಹುದು. ಕೆಲವರು ಈ

ಮಾತನ್ನು 'ಸಮಗ್ರ ಭಾರತ'ವೆಂದೂ ವಿವರಿಸಿದ್ದಾರೆ.[2] ಮತ್ತೆ ಕೆಲವರು ಈ ಎರಡೂ ವಿವರಣೆಗಳ ಸಾಧ್ಯತೆಯನ್ನು ಒಪ್ಪಿ ಮೊದಲಿನದರಲ್ಲೇ ಹೆಚ್ಚು ಔಚಿತ್ಯವಿರುವುದನ್ನು ಕಾಣುತ್ತಾರೆ. ಇದರ ಜೊತೆಗೆ ಪಂಪನ ಕಾಲವನ್ನು 'ವೀರಯುಗ', 'ಕ್ಷಾತ್ರಯುಗ' ಎಂದೆಲ್ಲ ಕರೆಯಲಾಗಿದ್ದು, ಈ ನೆಲೆಯಿಂದ ಪಂಪ ತನ್ನ ಕಾವ್ಯವನ್ನು 'ವಿಕ್ರಮಾರ್ಜುನ ವಿಜಯ' ಎಂದು ಕರೆದದ್ದರ ಔಚಿತ್ಯವನ್ನೂ ಹೇಳಲಾಗಿದೆ. ಇಲ್ಲೆಲ್ಲ ರನ್ನ ತನ್ನ ಕಾವ್ಯವನ್ನು 'ಸಾಹಸ ಭೀಮ ವಿಜಯ'ವೆಂದು ಕರೆದದ್ದನ್ನೂ ಪ್ರಸ್ತಾಪಿಸುತ್ತ, ಇಲ್ಲಿನ ನಾಯಕರು 'ಅರ್ಜುನ', 'ಭೀಮ'ರೇ ಹೊರತು ಧರ್ಮರಾಯನಲ್ಲ. ಎಂದೇ ಈ ಕಾವ್ಯಗಳು ವಿಕ್ರಮಾರ್ಜುನನ, ಸಾಹಸ ಭೀಮನ ವಿಜಯದ ಕಥೆಗಳಾಗಿವೆ. ಇದು ವೀರಯುಗಕ್ಕೆ ಸಹಜವೆಂಬಂತಿದೆ ಎಂದೆಲ್ಲ ವಿವರಿಸಲಾಗಿದೆ. ಇದಲ್ಲದೆ ಪಂಪನ ಸಮಕಾಲೀನ ಶಾಸನಗಳೂ, ಕೆಲವು ಬಿಡಿ ಚಾರಿತ್ರಿಕ ವಿವರಗಳೂ ಈ ಅಧ್ಯಯನಗಳ ಹಿನ್ನೆಲೆಗೆ ಇವೆ.

ಈ ಅಂಶಗಳೆಲ್ಲ ಪಂಪನನ್ನು ಸಾಮಾಜಿಕ ದೃಷ್ಟಿಯಿಂದ ಅಧ್ಯಯನ ಮಾಡಲು ದಾರಿದೀಪಗಳಂತೆಯೋ, ಪೂರ್ವ ಸಾಧನೆಗಳೆಂಬಂತೆಯೋ ಬಳಕೆಯಾಗಿವೆ. ಹೀಗಾದುದರಿಂದಲೋ ಏನೋ ವಿಕ್ರಮಾರ್ಜುನ ವಿಜಯದ ವಿವರಣೆಯೆಲ್ಲ ಅದರ ಸಮಕಾಲೀನತೆಯ ನೆಲೆಯಲ್ಲೇ ನಡೆದರೆ, ಆದಿಪುರಾಣವನ್ನು

---

2. ಸುಜನಾ ಅವರು 'ಸಮೀಕೃತ ಭಾರತ' ಎಂಬ ವಿವರಣೆಯ ಸಾಧ್ಯತೆಯನ್ನು ನಿರಾಕರಿಸಿ, 'ಸಮಗ್ರ ಭಾರತ' ಎಂಬ ವಿವರಣೆ ಮಾತ್ರ ಸಾಧ್ಯವೆಂದು, ಅದನ್ನು ಸಾಧಿಸಲು ಪ್ರತ್ಯೇಕ ಚರ್ಚೆಯೊಂದನ್ನೇ ನಡೆಸಿದ್ದಾರೆ. (ನೋಡಿ : ಪಂಪ ಕವಿಯ ಸಮಸ್ತ ಭಾರತ (ಕಮ್ಮಟದ ಕಿಡಿಗಳು), ಪ್ರ.ಕ. 57–4. 1976. ಪು: 71 – 75) ಆದರೆ 'ಸಮಸ್ತ ಭಾರತ' ಎಂಬುದನ್ನು 'ಸಮೀಕೃತ ಭಾರತವೆಂದು' ವಿವರಿಸಿಕೊಳ್ಳುವುದರಲ್ಲಿ ಒಂದು ವಿಶೇಷ ಅರ್ಥವಿರುವುದನ್ನು (ಪಂಪನ ವಿವಕ್ಷೆಯಲ್ಲಿ ಯಾವ ಅರ್ಥವೇ ಇರಲಿ) ನಿರಾಕರಿಸಲಾಗದು.

ಕುರಿತ ವಿವರಣೆಯೆಲ್ಲ ಅದನ್ನೊಂದು ಜೈನ ಧರ್ಮದ ಕೃತಿಯೆಂಬಂತೆ, ಹೆಚ್ಚೆಂದರೆ ಅದರಲ್ಲಿ ಧರ್ಮವನ್ನು ಮಾತ್ರವಲ್ಲದೆ ಕಾವ್ಯಧರ್ಮವನ್ನೂ ಕಾಣಬಹುದು — ಈ ಸೂಚನೆ ಕೂಡ ಪಂಪನದೇ-ಎಂದು ಹೇಳುವುದರಲ್ಲೇ ಆಸಕ್ತವಾಗಿರುವಂತೆ ತೋರುತ್ತದೆ. ಈ ಮೇಲಿನ ಅಂಶಗಳ ಸಮರ್ಥನೆಗೆ ಪಂಪನನ್ನು ಕುರಿತ ವಿಮರ್ಶೆಗಳು ಹಾಕುವ ಪೀಠಿಕೆಯ ರೂಪದ ಮಾತುಗಳನ್ನೇ ಗಮನಿಸಿದರೂ ಸಾಕೆಂದು ತೋರುತ್ತದೆ. ಕವಿಯೇ ಹೇಳಿಕೊಂಡ ಇಂಥ ಪ್ರಾಸಂಗಿಕವಾದ ವಿವರಗಳನ್ನು ಹೀಗೆ ಬಳಸಿದ್ದರಿಂದ ಈ ಅಧ್ಯಯನಗಳು ತಮಗೆ ತಾವೇ ಕೆಲವು ಮಿತಿಗಳನ್ನು ಹಾಕಿಕೊಂಡಿವೆ. ಈ ಗ್ರಹಿಕೆಗಳನ್ನು ಕೃತಿಗಳ ಮೇಲೆ ಹೇರುವ ಪ್ರಯತ್ನವನ್ನು ಮಾಡಿರುವಂತೆ ತೋರುತ್ತದೆ. ಹೀಗಾಗಿ ಈ ಅಧ್ಯಯನಗಳು ಕೃತಿಯ ವಿವರಣೆಯಲ್ಲಿ ಒಂದು ಬಗೆಯ 'ಏಕಮುಖಿ ಧಾಟಿಯನ್ನು ಹಿಡಿದಂತೆ ಕಾಣಬರುತ್ತವೆ.

ಗಮನಾರ್ಹವಾದ ಇನ್ನೊಂದು ಅಂಶವೆಂದರೆ, ಒಬ್ಬ ಕವಿಗೆ ಅವನ ಕಾಲದ ಸಮಾಜ ಸಿದ್ಧ ರೂಪದಲ್ಲಿ ದೊರೆಯುತ್ತದೆಯೆಂಬುದು. ಪಂಪ ತನ್ನ ಕಾಲವನ್ನು ಇಡಿಯಾಗಿ ಅಭಿವ್ಯಕ್ತಿಸಿದ್ದಾನೆ, ತನ್ನ ಕಾಲದ ಸಮಸ್ತವನ್ನೂ ಅಭಿವ್ಯಕ್ತಿಸಿದ್ದಾನೆ ಎಂಬರ್ಥದ ಮಾತುಗಳೆಲ್ಲ ಸೂಚಿಸುವ ಅಂಶ ಇದೇ ಆಗಿದೆ. ವಾಸ್ತವವಾಗಿ ಯಾವುದೇ ಕವಿಗೂ ಅವನ ಕಾಲದ 'ಸಮಾಜ' ಅಥವಾ 'ಸಂಸ್ಕೃತಿ' ಯನ್ನು ಇಡಿಯಾಗಿ ಪಡೆಯುವುದೂ ಸಾಧ್ಯವಿಲ್ಲ, ಅಭಿವ್ಯಕ್ತಿಸುವುದೂ ಸಾಧ್ಯವಿಲ್ಲ.[3] ತನ್ನ ಸೃಜನಶೀಲ ಪ್ರಕ್ರಿಯೆಯ ಮೂಲಕ ತನ್ನ ಕಾಲದ ಸಮಾಜ, ಸಂಸ್ಕೃತಿಯನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಿರುತ್ತಾನೆ ಎಂದಷ್ಟೇ ಹೇಳಬಹುದಾಗಿದೆ.

---

3. Rene Wellek and Austin Warren, Theory of Literature, Penguin Books, 1978. P: 95

## 5.3 ಪಂಪನ ಸಮಕಾಲೀನ ಸಮಾಜದವೆಂದು ಗುರುತಿಸಿದ ಕೆಲವು ವಿವರಗಳು

ಪಂಪನನ್ನು ಕುರಿತ ಸಾಮಾಜಿಕ ದೃಷ್ಟಿಕೋನದವೆಂದು ಕರೆಯಬಹುದಾದ ಅಧ್ಯಯನಗಳು ಪಂಪನ ಸಮಕಾಲೀನ ಸಮಾಜದವೆಂದು ಕೆಲವು ವಿವರಗಳನ್ನು ತೋರಿಸುತ್ತಾ ಬಂದಿವೆ. ಹೀಗೆ ತೋರಿಸುವಲ್ಲಿ ಈ ಅಧ್ಯಯನಗಳೆಲ್ಲ ಬಹುಮಟ್ಟಿಗೆ ಆಧರಿಸಿರುವುದು ವಿಕ್ರಮಾರ್ಜುನ ವಿಜಯವನ್ನು ಮಾತ್ರ. ಎಡೆಯ ಮಧ್ಯೆ ಪ್ರಾಸಂಗಿಕವಾಗಿ ಆದಿಪುರಾಣದ ಕುರಿತಂತೆ ಪ್ರಸ್ತಾಪಿಸಿದ್ದನ್ನು ಬಿಟ್ಟರೆ, ಈ ಅಧ್ಯಯನಗಳು ಆದಿಪುರಾಣವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವಂತಿದೆ. ವಿಕ್ರಮಾರ್ಜುನ ವಿಜಯದ ನೆರವಿನಿಂದಲೇ ತೋರಿಸುತ್ತ ಬಂದ ಈ ವಿವರಗಳು ಕೂಡ ಮಿತ ಸ್ವರೂಪದವೇ ಆಗಿವೆ. ಅವನ್ನೆಲ್ಲ ಹೀಗೆ ಪಟ್ಟಿ ಮಾಡಬಹುದು :—

(1) ಅರಿಕೇಸರಿಗೆ ಸಂಬಂಧಿಸಿದ ಕೆಲವು ಚಾರಿತ್ರಿಕ ವಿವರಗಳು

(2) ಸಾಮಾಜಿಕ ಮೌಲ್ಯಗಳು

(3) ವೀರಾಲಾಪ ಮತ್ತು ಪ್ರಣಯ ಸಂಭಾಷಣೆಗಳು

(4) ಯುದ್ಧ ಸಂಬಂಧೀ ವಿವರಗಳು : ಯುದ್ಧ ಸಾಮಗ್ರಿಗಳು, ಯುದ್ಧ ಯೋಜನೆ — ಇತ್ಯಾದಿ

(5) ದೇಸಿ ವಿವರಗಳು : ವೇಶ್ಯಾವಾಟಿಕೆ, ಮೃಗಯಾ ವಿನೋದ — ಇತ್ಯಾದಿ

(6) ಕುಲ ಸಂಬಂಧೀ ವಿವರಗಳು

(7) ರಾಜತ್ವ ಸಂಬಂಧೀ ವಿವರಗಳು

(8) ಜೋಳವಾಳಿ, ಲೆಂಕವಾಳಿ — ಇತ್ಯಾದಿ

(9) ಸಾಮಾಜಿಕವಾದ ಇನ್ನಿತರ ಕೆಲವು ಮೇಲು ಸ್ತರದ ವಿವರಗಳು.

ಹೆಚ್ಚು ಕಡಿಮೆ ಪಂಪನನ್ನು ಕುರಿತ ಸಾಮಾಜಿಕ ದೃಷ್ಟಿಕೋನದ ಅಧ್ಯಯನಗಳೆಲ್ಲ ಈ ಮೇಲಿನ ಅಂಶಗಳಿಗೆ ಸಂಬಂಧಿಸಿದಂತೆಯೇ ನಡೆದಿವೆ. ಈ ಅಂಶಗಳಾಚೆಗೆ ಏನನ್ನೂ ಗುರುತಿಸಿದಂತೆ ಕಾಣದು. ಅದರಲ್ಲೂ ಕುಲ ಸಂಬಂಧೀ ಮತ್ತು ರಾಜತ್ವ ಸಂಬಂಧೀ ಭಿನ್ನಾಭಿಪ್ರಾಯಗಳನ್ನು ಕೆಲವೆಡೆ 'ಕೇವಲ ಅಪವಾದ'ಗಳೆಂದು ಕರೆಯಲಾಗಿದೆ. ಹೀಗೆ ಕರೆದ ವಿಮರ್ಶೆಗಳು ಪಂಪನನ್ನು 'ಆಳುವ ವರ್ಗದ ಧೋರಣೆ' ಯ ಕವಿಯೆಂದು ಸ್ಪಷ್ಟವಾಗಿ ಘೋಷಿಸಿವೆ.

ಈ ಮೇಲಿನ ಅಂಶಗಳೆಲ್ಲ ನಮಗೀಗಾಗಲೇ ವಿವರಣೆಯ ಅಗತ್ಯವೇ ಇಲ್ಲದಷ್ಟು ಪರಿಚಿತವಾಗಿವೆ. ಏಕೆಂದರೆ, ಅಷ್ಟುಮಟ್ಟಿಗೆ ನಮ್ಮ ಅಧ್ಯಯನಗಳಲ್ಲಿ ಈ ಅಂಶಗಳೆಲ್ಲ ಪುನರಾವರ್ತಿತವಾಗಿವೆ. ಈ ಒಂದೊಂದೂ ಅಂಶವನ್ನೇ ಹಿಡಿದು, ಅವನ್ನು ನಮ್ಮ ವಿಮರ್ಶೆಗಳು ಹೇಗೆ ಗ್ರಹಿಸಿವೆಯೆಂಬುದನ್ನು ಗಮನಿಸಲು ಅವಕಾಶವಿದೆಯಾದರೂ ಹಾಗೆ ಮಾಡುವುದು ಯುಕ್ತ ವಿಧಾನವೆಂದು ತೋರುವುದಿಲ್ಲ. ಇದಕ್ಕೆ ಕಾರಣ, ಈ ಚರ್ಚೆಗಳಲ್ಲಿ ಕಾಣಬರುವ ಸಂಗತಿಗಳ ಪುನರಾವರ್ತನೆ ಮತ್ತು ಎಲ್ಲದನ್ನೂ ಹೇಳಬೇಕೆಂಬ ಹಂಬಲ. ಹೀಗಾಗಿ ಇದುವರೆಗೆ ಪ್ರಸ್ತಾಪಿಸಿದ ವಿವರಗಳ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿ ನಡೆದ ಕೆಲವು ಚರ್ಚೆಗಳನ್ನು ಮಾತ್ರ ಇಲ್ಲಿ ಗಮನಿಸಬಹುದಾಗಿದೆ.

## 5.4 ಕೆಲವು ಪ್ರತ್ಯೇಕ ಚರ್ಚೆಗಳು

ಪಂಪನನ್ನು ಸಾಮಾಜಿಕ ದೃಷ್ಟಿಯಿಂದ ಗಮನಿಸಿದ ಅಧ್ಯಯನಗಳು ಬೆರಳೆಣಿಕೆಯಷ್ಟನ್ನು ಕೂಡ ಮೀರುವುದಿಲ್ಲ. ಹಲವೆಡೆ ಪ್ರಾಸಂಗಿಕವಾಗಿ ಪಂಪನ ಸಮಕಾಲೀನತೆಯನ್ನು ಕುರಿತು ಹೇಳಲಾಗಿದೆಯಾದರೂ ಸದ್ಯ ಅಂಥವನ್ನೆಲ್ಲ ಇಲ್ಲಿ ಗಮನಿಸುವ ಅಗತ್ಯ ಕಾಣುತ್ತಿಲ್ಲ. ಈ ಪ್ರತ್ಯೇಕ ಚರ್ಚೆಗಳಲ್ಲಿ ಕಾಣಬರುವ

ಕೆಲವು ಸಾಮಾನ್ಯ ಅಂಶಗಳೇ ಆ ಪ್ರಾಸಂಗಿಕ ಪ್ರಸ್ತಾಪಗಳಲ್ಲೂ ಕಾಣಬರುತ್ತವೆ. ಅಥವಾ ಈ ಪ್ರತ್ಯೇಕ ಚರ್ಚೆಗಳನ್ನೇ ಆಧರಿಸಿ ತೀರ್ಮಾನ ರೂಪದ ಅಭಿಪ್ರಾಯಗಳನ್ನು ಆ ಪ್ರಸ್ತಾಪಗಳು ಮಂಡಿಸಿರುತ್ತವೆ. ಇನ್ನು ಈ ಪ್ರತ್ಯೇಕ ಚರ್ಚೆಗಳಲ್ಲಿ ಕೂಡ ಕೆಲವು ನೇರವಾಗಿ ಸಾಮಾಜಿಕ ದೃಷ್ಟಿಕೋನದವಾದರೆ ಮತ್ತೆ ಕೆಲವು ಪಂಪನ ಹಿನ್ನೆಲೆಯನ್ನು ( ಚಾರಿತ್ರಿಕ — ಸಾಮಾಜಿಕ ) ಕುರಿತಂಥವು. ಆದರೂ ಇವೆಲ್ಲಾ ಒಟ್ಟಾರೆಯಾಗಿ ' ಪಂಪ ಮತ್ತು ಸಮಾಜ ' ಎಂಬ ಒಂದು ಸ್ಥೂಲ ಪರಿಧಿಯೊಳಗೇ ತಮ್ಮ ಚರ್ಚೆಗಳನ್ನು ನಡೆಸುವುದರಿಂದ ಇವನ್ನೆಲ್ಲ ಒಟ್ಟಾಗಿಯೇ ಇಲ್ಲಿ ಗಮನಿಸಬಹುದು.

ಮೊದಲಿಗೆ ಮುಳಿಯ ಅವರ ಚರ್ಚೆಯನ್ನೇ ಗಮನಿಸಬಹುದು. ಮುಳಿಯ ಅವರೇನೂ ಈ ಚರ್ಚೆಯನ್ನು ಸಾಮಾಜಿಕ ದೃಷ್ಟಿಕೋನದ್ದೆಂದು ತಾವಾಗಿ ಕರೆದಿಲ್ಲವಾದರೂ, ಪಂಪನ ಸಮಕಾಲೀನ ವಿವರಗಳನ್ನೇ ಈ ಚರ್ಚೆ ಕುರಿತಿದೆ. ಅವರು ಪಂಪನ ಸಮಕಾಲೀನತೆಯನ್ನು ಪ್ರಧಾನವಾಗಿ ಚಾರಿತ್ರಿಕ ವಿವರಗಳ ನೆಲೆಯಿಂದಲೇ ನೋಡಿದ್ದಾರೆ. ' ಸಮಸ್ತ ಭಾರತ ' ವೆಂದರೆ ' ಸಮಾಸೋಕ್ತಿಯ ಭಾರತ ' ವೆಂದೇ ನಂಬುವ ಅವರು ಸಮಸ್ತ ಭಾರತ ರಚನಾ ಕ್ರಮದೊಳಗೆ ಅರ್ಜುನ — ಅರಿಕೇಸರಿಯ ಸಮೀಕರಣದಂತೆಯೇ ಇತರ ಪಾತ್ರಗಳೊಂದಿಗೂ ಪಂಪನ ಸಮಕಾಲೀನ ಚಾರಿತ್ರಿಕ ವ್ಯಕ್ತಿಗಳ ಸಮೀಕರಣವಿರಬೇಕೆಂಬುದನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. "ಭಾರತ ಕಥಾನಕದೊಳಗಿನ ಎಲ್ಲ ವ್ಯಕ್ತಿಗಳಿಗೂ ಪ್ರತಿಯಾಗಿ ಆಗಿನ ಕಾಲದ ಚಾರಿತ್ರಿಕ ವ್ಯಕ್ತಿಗಳನ್ನು ಕವಿ ಕಲ್ಪಿಸಿಕೊಂಡಿದ್ದನೆಂದು ನಮ್ಮ ಭಾವನೆ" ಎಂದು ತೀರ್ಮಾನಿಸಿ, ' ಪ್ರಕೃತವಾದ ಅರಿಕೇಸರಿಯ ' ಮತ್ತು ' ಅಪ್ರಕೃತವಾದ ಅರ್ಜುನನ ' ವಂಶಾನುಕ್ರಮದ ಸಮೀಕರಣವನ್ನು ಸೂಚಿಸುವ ಪಟ್ಟಿಯೊಂದನ್ನು ನೀಡಿದ್ದಾರೆ.[4] ಅದರಂತೆ ಅರಿಕೇಸರಿಯ ಹಿಂದಿನ ' ಚಾಲುಕ್ಯ ವಂಶ ' ಮತ್ತು ಅರ್ಜುನನ ಹಿಂದಿನ ' ಸೋಮ ವಂಶ ' ದ ಅರಸರುಗಳ ಸಮೀಕರಣ ಹೀಗಾಗುತ್ತದೆ : ಯುದ್ಧಮಲ್ಲ =

4. ನೋಡಿ : ನಾಡೋಜ ಪಂಪ, ಮಂಗಳೂರು, 1938. ಪು: 157.

ಸೋಮ; ಅರಿಕೇಸರಿ = ಭರತ; ನರಸಿಂಹ = ಪ್ರತೀಪ; ದುರ್ಗಮಲ್ಲ = ಶಂತನು; ಬದ್ದೆಗ = ಭೀಷ್ಮ; ದುರ್ಗಮಲ್ಲ = ವಿಚಿತ್ರ ವೀರ್ಯ (ಭೀಷ್ಮ ಸಾಪತ್ನ್ಯ); ನರಸಿಂಹ + ಜಾಕಬ್ಬೆ = ಪಾಂಡು + ಕುಂತಿ; ಅರಿಕೇಸರಿ (ರೇವಕನಿರ್ಮಡಿ – ಲೋಕಾಂಬಿಕೆ) = ಅರ್ಜುನ + ಸುಭದ್ರೆ.

ಇದೇ ರೀತಿ ಪಾಂಡವ – ಕೌರವ ಪಕ್ಷದ ಪಾತ್ರಗಳಿಗೂ ಸಮಕಾಲೀನ ಚಾರಿತ್ರಿಕ ವ್ಯಕ್ತಿಗಳ ಸಮೀಕರಣವಿರುವುದನ್ನು ಗುರುತಿಸಿದ್ದಾರೆ. ಈ ಸಂಬಂಧದಲ್ಲಿ ಅವರು ನೀಡುವ ಸಮೀಕೃತ ಪಟ್ಟಿಯ ಪ್ರಕಾರ ಧರ್ಮರಾಯ, ಭೀಮರು ಅನುಕ್ರಮವಾಗಿ ವಿಜಯಾದಿತ್ಯ, ರಾಜ ಭೀಮರಲ್ಲಿ ಸಮೀಕರಣಗೊಂಡರೆ, ಶ್ರೀಕೃಷ್ಣ ಮತ್ತು ಶ್ರೀಕೃಷ್ಣನ ತಂದೆ ವಸುದೇವರು ಅನುಕ್ರಮವಾಗಿ, ರಾಷ್ಟ್ರಕೂಟ ಮುಮ್ಮಡಿ ಕೃಷ್ಣ ಮತ್ತು ಕನ್ನರನ ತಂದೆ ಬದ್ದೆಗ ದೇವರಲ್ಲಿ ಸಮೀಕರಣಗೊಂಡಿದ್ದಾರೆ. ನಕುಲ, ಸಹದೇವರಿಗೆ ಸಂವಾದಿ ಚಾರಿತ್ರಿಕ ವ್ಯಕ್ತಿಗಳನ್ನು ಗುರುತಿಸುವುದಾಗಿಲ್ಲ. ಸುಭದ್ರೆಯನ್ನು ಅರಿಕೇಸರಿಯ ಪಟ್ಟದ ರಾಣಿಯಾದ ಲೋಕಾಂಬಿಕೆಯೊಂದಿಗೆ ಸಮೀಕರಿಸಿದ್ದಾರೆ. ಇನ್ನು ಕೌರವ ಪಕ್ಷದಲ್ಲಿ ಈ ಸಮೀಕರಣಗಳನ್ನು ಎತ್ತಿ ತೋರಿಸುವುದು ಅಷ್ಟು ಸುಲಭವಾಗಿಲ್ಲವೆಂಬುದನ್ನು ಅವರು ನೀಡುವ ಸಂದೇಹಪೂರ್ವಕವಾದ ಸಮೀಕರಣ ಸೂಚನೆಗಳಿಂದ ತಿಳಿಯಬಹುದಾಗಿದೆ. ದುರ್ಯೋಧನ, ದುಶ್ಶಾಸನ, ಕರ್ಣ, ಬಲಭದ್ರರಿಗೆ ಅನುಕ್ರಮವಾಗಿ ಕಕ್ಕಲ, ಕಕ್ಕಲನ ತಮ್ಮನಪ್ಪವನು?, ಬಪ್ಪುವ, ಗೊಜ್ಜಿಗ (ರಾಷ್ಟ್ರಕೂಟ ಗೋವಿಂದ IV) ಎಂಬ ಹೆಸರುಗಳನ್ನು ಸಮೀಕೃತವಾಗಿವೆ ಎಂದು ತೋರಿಸುವರಾದರೂ ಶಲ್ಯ, ದ್ರೋಣರಿಗೆ ಸಮೀಕರಣಗಳನ್ನು ಗುರುತಿಸಲಾಗಿಲ್ಲ. ಭೀಷ್ಮರಿಗೆ ಸಂದೇಹ ಪೂರ್ವಕವಾಗಿ ಚಾಳುಕ್ಯ ಬದ್ದೆಗನನ್ನು

ತೋರಿಸುತ್ತಾರೆ.[5]

ಮುಳಿಯವರ ಈ ಸಮೀಕರಣ ಪ್ರಯತ್ನವನ್ನು ಕುರಿತು ಬರೆಯುತ್ತಾ, ಜಿ.ಎಸ್.ಶಿವರುದ್ರಪ್ಪನವರು "ತನ್ನ ರಾಜನಾದ ಅರಿಕೇಸರಿಯನ್ನು, ಕಥಾನಾಯಕನಾದ ಅರ್ಜುನನಲ್ಲಿ ಸಮಾವೇಶಗೊಳಿಸಿರುವುದಾಗಿ ಕವಿ ಹೇಳಿರುವ ಸ್ಪಷ್ಟ ಆಧಾರವೊಂದರ ಮೇಲೆ, ಕವಿ ಪಂಪನು ಸಂಪೂರ್ಣ ಪ್ರಜ್ಞಾಪೂರ್ವಕವೆಂಬಂತೆ ತನ್ನ ಉಳಿದೆಲ್ಲ ಪಾತ್ರಗಳಲ್ಲಿಯೂ ಅಂದಿನ ಒಬ್ಬೊಬ್ಬ ಚಾರಿತ್ರಿಕ ವ್ಯಕ್ತಿಗಳನ್ನ ಸಮಾವೇಶಗೊಳಿಸಿದ್ದಾನೆ ಎನ್ನುವ ಊಹೆ ತನಗೆ ತಾನೇ ಚಾರಿತ್ರಿಕವಾಗಿ ಸ್ವಾರಸ್ಯವಾಗಿರುವುದಾದರೂ, ಇದು ಎಷ್ಟರಮಟ್ಟಿಗೆ ಸಾಧ್ಯ, ಎಷ್ಟರಮಟ್ಟಿಗೆ ಸಂಪೂರ್ಣ ಚಾರಿತ್ರಿಕ ಎಂಬ ಪ್ರಶ್ನೆ ಹಾಗೆಯೇ ನಿಲ್ಲುತ್ತದೆ. ಚಾರಿತ್ರಿಕ ಸಂಶೋಧನೆಗೆ ಹೊರಟವರಿಗೆ, ಅರ್ಜುನನ ಪಾತ್ರದೊಂದಿಗೆ ಅರಿಕೇಸರಿಯನ್ನು ಸಮಾವೇಶಗೊಳಿಸಿದಂತೆ ಇನ್ನೂ ಒಬ್ಬಿಬ್ಬರನ್ನು ಸಮಾವೇಶಗೊಳಿಸಿರುವ ಸೂಚನೆಗಳು ಸಿಕ್ಕಬಹುದು. ಆದರೆ ಸಮಸ್ತ ಭಾರತದ ಸಮಸ್ತ ಪಾತ್ರಗಳಿಗೂ ಅಂದಿನ ಒಬ್ಬೊಬ್ಬ ವ್ಯಕ್ತಿಯನ್ನು ಕವಿ ಜೋಡಿಸಿರುವನೆಂದು ಸಂಶೋಧಕರು ಪ್ರಜ್ಞಾಪೂರ್ವಕವಾಗಿ ವಿವೇಚನೆಗೆ ಹೊರಟಿರುವಷ್ಟರ ಮಟ್ಟಿಗೆ ಕವಿಯೂ ಸಂಪೂರ್ಣ ಪ್ರಜ್ಞಾಪೂರ್ವಕವಾಗಿಯೇ ಕೃತಿ ರಚನೆ ಮಾಡಿರಲು ಸಾಧ್ಯವೆಂಬುದನ್ನು ನಾವು ಒಪ್ಪಲಾರೆವು")[6] ಎಂದಿದ್ದಾರೆ.

---

5. ಅದೇ, ಪು: 213. ಈ ಮಾತುಗಳನ್ನು ಗಮನಿಸಬಹುದು : "ಪೂರ್ವ ಚಾಳುಕ್ಯ ಭೀಮ ವಿರೋಧಿಯಾದವನು ಸಮಸ್ತ ಭಾರತ ಯುದ್ಧ ಕಾಲದಲ್ಲಿದ್ದಿರಬಹುದೇ? ಇದ್ದರೂ ಅರಿಕೇಸರಿಗೆ ವಿರೋಧಿಯಾಗಲಾರನು. ಆದರೂ ಉದ್ದೇಶಾನುಸಾರವಾಗಿ ಭೀಷ್ಮನೊಡನೆ ಸಮೀಕರಿಸಿರುತ್ತಾನೆ."

6. ಶಿವರುದ್ರಪ್ಪ ಜಿ.ಎಸ. ವಿಮರ್ಶೆಯ ಪೂರ್ವ ಪಶ್ಚಿಮ, ಬೆಂಗಳೂರು, 1984 (5ನೆಯ ಮುದ್ರಣ) ಪು: 71–73

ಈ ಹಿನ್ನೆಲೆಯಲ್ಲಿ ಮುಳಿಯ ಅವರು 'ಕಕ್ಕರಸಂಜೆ ಸಂಜೆಯೊಳ್' ಎಂಬಲ್ಲಿ 'ಕಕ್ಕ – ಅರಸು – ಅಂಜೆ – ಸಂಜೆಯೊಳ್' ಎಂದು ಅನ್ವಯಿಸಿ ಅದರಿಂದ 'ಕಕ್ಕ – ಕಕ್ಕಲ' ಮೊದಲಾದುವುಗಳು ಒಂದೇ ಹೆಸರಿನ ರೂಪಾಂತರಗಳೆಂದೂ, ಈ ಕಕ್ಕಲನೇ ಸುಯೋಧನನಲ್ಲಿ ಸಮೀಕೃತವಾಗಿದ್ದಾನೆಂದೂ ಮಾಡುವ ಊಹೆಯನ್ನು ಕೂಡ ನಿರಾಕರಿಸಿದ್ದಾರೆ.

ಮುಳಿಯ ಅವರ ಸಮೀಕರಣ ಪ್ರಯತ್ನವನ್ನು ಕುರಿತು ಶಿವರುದ್ರಪ್ಪನವರು ಎತ್ತಿರುವ ಅನುಮಾನಗಳು ಸಹಜವೇ ಆಗಿವೆ.[7] ಮುಳಿಯ ಅವರು ಈ ಸಮೀಕರಣಗಳನ್ನು ಊಹಿಸುವ ನೆಲೆಯಲ್ಲಿ ಕಾಣಬರುವ ಅಧ್ಯಯನದ ವ್ಯಾಪಕತೆ ಗಮನಾರ್ಹವಾದುದು, ಅವರು ನೀಡುವ ಕೆಲವು ಚಾರಿತ್ರಿಕ ಸುಳಿಹುಗಳು ಕುತೂಹಲಕರವಾಗಿವೆಯೆಂಬಲ್ಲಿ ಅನುಮಾನವಿಲ್ಲ. ಆದರೆ ಪಂಪನ ಸೂಚನೆಯ ಆಧಾರದ ಮೇಲೆ, ಕೆಲವು ಪಾತ್ರಗಳ ಮಟ್ಟಿಗೆ ದೊರೆಯುವ ಹೋಲಿಕೆಯ ಸಾಧ್ಯತೆಯನ್ನು ಬಹು ದೂರ ಎಳೆಯುತ್ತಿದ್ದಾರೆ, ಅನ್ನಿಸುತ್ತದೆ. ಹೀಗೆ ಎಳೆಯುವುದು ಪೂರ್ಣ ಪ್ರಮಾಣದಲ್ಲಿ ಸಾಧ್ಯವಿಲ್ಲವೆಂಬುದನ್ನು, ಅವರೇ ಕೆಲವು

---

7. ಹೀಗೆ ಪೂರ್ಣ ಪ್ರಮಾಣದ ಸಮೀಕರಣ ಸಾಧ್ಯವಿಲ್ಲವೆಂಬುದನ್ನು ಇತರ ಅನೇಕ ವಿಮರ್ಶಕರು ಗುರುತಿಸಿದ್ದಾರೆ. ಎಲ್. ಬಸವರಾಜು ಅವರು (" .......... ಸಮಕಾಲೀನ ಚಾರಿತ್ರಿಕ ವ್ಯಕ್ತಿಗಳು ಕೆಲವರಾದರೂ ಇದ್ದಿರಬೇಕು. ಇಂಥವರನ್ನು ಒಂದು ರೀತಿಯಲ್ಲಿ ಗುರುತಿಸುವ ಪ್ರಯತ್ನ ಮುಳಿಯ ತಿಮ್ಮಪ್ಪಯ್ಯನವರ ನಾಡೋಜ ಪಂಪದಲ್ಲಿ ಪ್ರಾರಂಭವಾಗಿದೆ. ಅದು ಪರಿಷ್ಕಾರಗೊಂಡು ಮುಂದುವರಿಯುವ ಅವಕಾಶವೂ ಇದ್ದೇ ಇದೆ" ಎನ್ನುವರಾದರೂ ಆ ಇತರ ಪಾತ್ರ–ವ್ಯಕ್ತಿಗಳ ಸಮೀಕರಣ ಕ್ರಿಯೆ ಅರ್ಜುನ–ಅರಿಕೇಸರಿಯರಲ್ಲಿಯಷ್ಟು ಬಹ್ವಂಶ ಸಮವಾದುದಾಗಲಿ..... ಸಮ ವಿವಕ್ಷಿತವಾದುದಾಗಲಿ ಅಲ್ಲವೆನ್ನುತ್ತಾರೆ.) (ನೋಡಿ : 'ಪಂಪ', ಪಂಪ ಒಂದು ಅಧ್ಯಯನ, (ಸಂ) ಜಿ.ಎಸ್.ಶಿವರುದ್ರಪ್ಪ, ಬೆಂ.ವಿ.ವಿ., 1974 ಪು: 327) ಕೆ.ವಿ.ಸುಬ್ಬಣ್ಣನವರು ಮುಳಿಯ ಅವರ ವಾದದ ಪರವಾಗಿಯೇ ಇದ್ದಾರೆ (ನೋಡಿ : 'ಪಂಪನ ಕವಿತೆ : ಅನುಸಂಧಾನಕ್ಕೆ ಹೊಸ ಮಾರ್ಗ', ಅದೇ, ಪು: 313)

ಪಾತ್ರಗಳಿಗೆ ಸಮೀಕರಣ ಸಾಧ್ಯತೆಗಳನ್ನು ಹುಡುಕುವಾಗ ಎತ್ತುವ ಸಂದೇಹಗಳಲ್ಲಿ, ಅನುಮಾನಪೂರ್ವಕ ತೀರ್ಮಾನಗಳಲ್ಲಿ ಕೂಡ ಕಾಣಬಹುದಾಗಿದೆ.)

ಮುಳಿಯ ಅವರ ಈ ಸಮೀಕರಣ ಪ್ರಯತ್ನದ ಹಿನ್ನೆಲೆಯಲ್ಲಿ ಪಂಪ ಭಾರತದಲ್ಲಿನ, ಅರಿಕೇಸರಿಯ ಸಂಬಂಧದ ಕೆಲವು ಯುದ್ಧ ಪ್ರಸಕ್ತಿಗಳು [8] ಮತ್ತು ಅರಿಕೇಸರಿ — ಅರ್ಜುನರ ಸಮೀಕರಣದಿಂದ 'ಭಾರತ ಕಥಾಭಿತ್ತಿಯಲ್ಲಿ' ಅದವೆನ್ನಲಾದ ಅಭಾಸಗಳು ಗಮನದಲ್ಲಿರುವಂತೆ ಕಾಣುತ್ತದೆ. ಅರಿಕೇಸರಿಯ ಸಂಬಂಧದ ಯುದ್ಧ ಪ್ರಸಕ್ತಿಗಳ ನೆಲೆಯನ್ನು ಸಮೀಕರಣ ಸಾಧ್ಯತೆಗಳನ್ನು ಗುರುತಿಸಲು ಬಳಸಿದ್ದಾರೆ. ಸಮಸ್ತ ಭಾರತದಲ್ಲಿ ಅದವೆನ್ನಲಾದ ಅಭಾಸಗಳನ್ನು, ಅಭಾಸಗಳೇ ಅಲ್ಲವೆಂದೂ 'ಸಮಸ್ತ ಭಾರತ ಕಥಾಭಿತ್ತಿ' ಯಲ್ಲಿ ಅವೆಲ್ಲ ಸಂಗತವಾಗಿವೆಯೆಂದೇ ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ ದ್ರೌಪದಿಯನ್ನು ಅರಿಕೇಸರಿಯ ಹಿರಿಯರಸಿಯೊಡನೆ ಪಂಪ ಸಮಕಟ್ಟಿರುವನೆಂದೂ, ಪಂಪ ಭಾರತದಲ್ಲಿ ದ್ರೌಪದಿಯೆಂದರೆ 'ವಿಜಯ ಶ್ರೀ' ಎಂಬುದನ್ನೂ ತಮ್ಮ ವಿವರಪೂರ್ಣವಾದ ಚರ್ಚೆಯಲ್ಲಿ ಸ್ಪಷ್ಟೀಕರಿಸಲು ಪ್ರಯತ್ನಿಸಿದ್ದಾರೆ.[9] ಇದೇ ರೀತಿ ಲೆಂಬುಳಪಾಟಕ = ಹಸ್ತಿನಪುರ; 'ಹಿಮಾಲಯದ

---

8. ಚಳುಕ್ಯ ಕುಳತಿಳಕನಪ್ಪ ವಿಜಯಾದಿತ್ಯಂಗೆ ಗೋವಿಂದರಾಜಂ ಮುಳಿಯೆ ತಳರದೆ ಪೆರ್ಬಗಿಕ್ಕಿ ಕಾದ .......... ಗೊಜ್ಜಿಗನೆಂಬ ಸಕಲ ಚಕ್ರವರ್ತಿ ಬೆಸನೆ ದಂಡುವಂದ ~~ಚಂಡವಂಡ~~ ಮಹಾಸಾಮಂತರಂ ಮುರಿಚಿದುಗೆಲ್ದು .......... ಅತಿವರ್ತಿಯಾಗಿ ಮಾರ್ಮಲೆವ ಚಕ್ರವರ್ತಿಯಂ ಕಿಡಿಸಿ ತನ್ನ ನಂಬಿ ಬಂದ ಬದ್ದೆಗ ದೇವಂಗೆ ಸಕಳ ಸಾಮ್ರಾಜ್ಯಮನೋರಂತು ಮಾಡಿ .......... ಕಕ್ಕಲನ ತಮ್ಮನಪ್ಪ ಬಪ್ಪುವನಂಕಕಾಱನನೊಂದೆ ಮದಾಂಧ ಗಂಧ ಸಿಂಧುರದೊಳೆಡಿಸಿದ .........." (ಪ·ಭಾ· 9—52 ವ); "ಮುಂ ಬಿಜ್ಜನಂ ಕಾದರಿಗನುಟಿದರಂ ಕಾವುದೇಂ ಪೋದ್ಯಮೊಂದೆ (11—61) ಇತ್ಯಾದಿ.

9. ನೋಡಿ : ನಾಡೋಜ ಪಂಪ, ಮಂಗಳೂರು, 1938. ಪು: 155—56, 191—208

ಶಿಖರಗಳೊಳಗೊಂದೆಂದು ಪ್ರಸಿದ್ಧ' ವಿರುವ ವ್ಯಾಸ ಭಾರತದ 'ಶತಶೃಂಗ' = ಬನವಾಸಿ ದೇಶದ ಗೋಕರ್ಣ ಪ್ರಾಂತದ 'ಶತಶೃಂಗ' ಎಂದು ಪ್ರಾದೇಶಿಕ ನೆಲೆಗಳೆಲ್ಲಾ ಸಮೀಕರಣಗಳಿವೆಯೆಂದು ತೋರಿಸುತ್ತಾರೆ. ಇದು ಸಮೀಕರಣವೆಂದು ಮಾತ್ರವೇ ನೋಡಬೇಕಾದ ಅಂಶ ಮಾತ್ರವಲ್ಲ. ಆ ವ್ಯಾಸ ಭಾರತದ ಕಥಾ ಭಿತ್ತಿಯನ್ನೇ ಪಂಪನೂ ಬಳಸುವಾಗ ಮಾಡುವ ಕಾಲ–ದೇಶ ಬದ್ಧತೆಗಳ ಸಂಬಂಧದ ಅಂಶವೇ ಇದಾಗಿದೆ. (ಮುಳಿಯ ಅವರು ಈ ಪ್ರಾದೇಶಿಕ ನೆಲೆಗಳ ಸಮೀಕರಣವನ್ನು ಗುರುತಿಸುವಾಗ ಕೂಡ ಒಂದು ಅತಿಗೇ ಹೋಗಿಬಿಡುತ್ತಾರೆ.) ಇದಕ್ಕೆ "ಸಾರಮನಂಗ ಜಂಗಮ ಲತಾ ಲಲಿತಾಂಗಿಯರಿಂದ ಮಲ್ತು .......... ವನವಾಸದೊಳಿರ್ಪೆನೆಂದು ದುರ್ವಾರ ಪರಾಕ್ರಮಂ ತಳರೆ ಬಾರಿಸಿವಾರಿಸಿ ಕುಂತಿ ಮಾದ್ರಿಯರ" (ವಿ.ವಿ. 1–114) ಎಂಬಲ್ಲಿ 'ವನವಾಸದೊಳಿರ್ಪೆನೆಂದು' ಎಂಬ ಮಾತು "ಅತ್ತ ಆ ಹಿಮಾಲಯ ವನ ಪ್ರದೇಶವೆಂಬ, ಇತ್ತ ಬನವಾಸಿ ದೇಶವೆಂಬ ಉಭಯಾರ್ಥಗಳನ್ನೂ ಒದಗಿಸಬಹುದು, ಹಾಗೆ ಉಭಯಾನುಕೂಲವಾದ ಪದವನ್ನೇ ಪಂಪನಿಟ್ಟಿರಬಹುದೆಂದು ನಮ್ಮ ಭಾವನೆ" ಎಂದು ವಿವರಿಸುವುದನ್ನು ಗಮನಿಸಬಹುದು.[10] ಪಂಪನೇ 'ಬನವಾಸಿ' ಎಂಬುದನ್ನು 'ವನವಾಸಿ' ಎಂದೂ ಕರೆದಿದ್ದಾನೆ. ಆದರೆ ಮುಳಿಯ ಅವರು 'ವನವಾಸದೊಳಿರ್ಪೆಂ' ಎಂಬುದರಲ್ಲಿ 'ಬನವಾಸಿ' ಎಂಬ ಸೂಚನೆಯನ್ನು ಕಾಣುವುದು ಉಚಿತವೆಂದು ತೋರದು.

ಇದುವರೆಗೆ ಗಮನಿಸಿದಂತೆ, ಮುಳಿಯ ಅವರ ಪಂಪನ ಸಮಕಾಲೀನ ಚಾರಿತ್ರಿಕ ವಿವರಗಳ ವಿಶ್ಲೇಷಣೆಯೆಲ್ಲ ಭಾರತ ಕಥೆಯ ಪಾತ್ರಗಳು ಮತ್ತು ಪಂಪನ ಕಾಲದ ಚಾರಿತ್ರಿಕ ವ್ಯಕ್ತಿಗಳ ಸಮೀಕರಣದಲ್ಲೇ ಪರ್ಯವಸಾಯಿಯಾಗಿದೆ. ಈ ಸಮೀಕರಣದ ನೆರೆಯ ವಿವರಗಳೆಲ್ಲ ಕಾವ್ಯದ ದೃಷ್ಟಿಯಿಂದ ತೀರ ಮಹತ್ವದ

---

10. ಅದೇ, ಪು: 161–163

ವಿವರಗಳೇನೂ ಅಲ್ಲ. ಅಲ್ಲದೆ ಮುಳಿಯ ಅವರು ಕಾಣಬಯಸುವ ಪೂರ್ಣ ಪ್ರಮಾಣದ ಸಮೀಕರಣ ಸಾಧ್ಯತೆಗಳು ಅಸಾಧ್ಯವೆಂದೇ ತೋರುತ್ತದೆ. ಪಂಪನೇ ಹೇಳಿಕೊಂಡ 'ತಗುಳ್ದ' ಸಂಗತಿ, ಕಾವ್ಯದಲ್ಲಿರುವ ಕೆಲವೇ ಪ್ರಾಸಂಗಿಕ ಯುದ್ಧ ಪ್ರಸಕ್ತಿಯ (ಅರಿಕೇಸರಿಯ ಸಂಬಂಧದ) ವಿವರಗಳು — ಇಂಥವನ್ನು, ಪಂಪನ ಸಮಕಾಲೀನವಾದ ಕೆಲವು ಚಾರಿತ್ರಿಕ (ರಾಜ ವಂಶಗಳ) ವಿವರಗಳೊಂದಿಗೆ ಹೋಲಿಸಿದ ಪ್ರಯತ್ನದಿಂದ ಪಡೆಯಬಹುದಾದ ಚಾರಿತ್ರಿಕ ಗ್ರಹಿಕೆಗಳು ತೀರ ಮಿತ ಸ್ವರೂಪದವು. ಮತ್ತು ಒಂದರ್ಥದಲ್ಲಿ ಚರಿತ್ರೆಯ ಗೌಣ ವಿವರಗಳು. ವಾಸ್ತವವಾಗಿ ಚಾರಿತ್ರಿಕ ಗ್ರಹಿಕೆಯೆನ್ನುವುದು ಇಂಥ ಅಂಶಗಳಾಚೆಗೆ ಹೋಗಿ ತಿಳಿಯಬೇಕಾದದ್ದು. ಇದಕ್ಕೆ ಪಂಪನ ಕಾವ್ಯಗಳ ಒಳ ವಿವರಗಳನ್ನೇ ಆಧರಿಸಬೇಕಾಗಿದೆ.

ಇದಲ್ಲದೆ, ಮುಳಿಯ ಅವರು ಪಂಪನ ದೇಸಿಯನ್ನು ಕುರಿತು ಚರ್ಚಿಸುವಾಗ ಭಾಷೇತರವಾದ ದೇಸಿಯ ನೆಲೆಗಳಲ್ಲಿ (ಮುಳಿಯ ಅವರು 'ದೇಸಿ' ಎಂಬುದನ್ನು ಭಾಷಿಕವಾದದ್ದು — ಭಾಷೇತರವಾದದ್ದು ಎಂದೇನೂ ವಿಂಗಡಿಸಿಲ್ಲ. ಒಟ್ಟರ್ಥದಲ್ಲಿ 'ದೇಸಿ' ಯನ್ನು ಕುರಿತು ಚರ್ಚಿಸಿದ್ದಾರೆ. ಈ ಚರ್ಚಿತವಾದ ಸಂಗತಿಗಳನ್ನು ಗಮನಿಸಿ ನಾವು ಹೀಗೆ ಭಾಷಿಕ ಮತ್ತು ಭಾಷೇತರ ನೆಲೆಯ ದೇಸಿಯೆಂದು ವಿಂಗಡಿಸಿ ನೋಡಲು ಅವಕಾಶವಿದೆ. ಹಿಂದಿನ ಅಧ್ಯಾಯದಲ್ಲೂ ಈ ಅಂಶವನ್ನು ಸೂಚಿಸಲಾಗಿದೆ.) ಕೆಲವು ಸಮಕಾಲೀನ ಸಾಮಾಜಿಕ ಸಂಗತಿಗಳನ್ನು ಗುರುತಿಸಿದ್ದಾರೆ. ವೇಶ್ಯಾವಾಟಿಕೆ, ಮೃಗಯಾ ವಿನೋದದ ಸಂಬಂಧದ ಅವರ ಚರ್ಚೆಯಲ್ಲಿ ಅವರೇನೂ ಸಮಕಾಲೀನ ಸಾಮಾಜಿಕ ಸಂಗತಿಗಳೆಂದು ಗುರುತಿಸಿಲ್ಲವಾದರೂ, ಅವರ ಚರ್ಚೆಯ ನೆಲೆಯಲ್ಲಿ ಈ ಬಗೆಯ ಗ್ರಹಿಕೆಯಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಎಂ.ಎಂ.ಕಲಬುರ್ಗಿಯವರು ಪಂಪನ ಐತಿಹಾಸಿಕ-ಧಾರ್ಮಿಕ ಹಿನ್ನೆಲೆಯ ಬಗ್ಗೆ ಬರೆಯುತ್ತಾ[11] ಮುಳಿಯ ಅವರು ಪ್ರಸ್ತಾಪಿಸಿದ ಯುದ್ಧ ಪ್ರಸಕ್ತಿಗಳನ್ನು

---

11. 'ಪಂಪನ ಐತಿಹಾಸಿಕ-ಧಾರ್ಮಿಕ ಹಿನ್ನೆಲೆ', ಪಂಪ ಒಂದು ಅಧ್ಯಯನ (ಸಂ) ಜಿ.ಎಸ್.ಶಿವರುದ್ರಪ್ಪ, ಬೆಂ.ವಿ.ವಿ., 1974. ಪು: 19–35

ಕುರಿತು ಪಂಪ "ಎಲ್ಲೋ ಒಂದೆರಡು ವಾಕ್ಯಗಳಲ್ಲಿ ಈ ಘಟನೆಗಳನ್ನು ಹೇಳಿ ಕೈ ತೊಳೆದುಕೊಂಡಿದ್ದಾನೆ" ಎಂದು, "ಹೀಗಿದ್ದರೂ ಗೂರ್ಜರನನ್ನು ಮೂಲೋತ್ಪಾಟನಗೊಳಿಸಿದ ಯುದ್ಧವನ್ನೇ ಪಂಪನು ಭಾರತ ಯುದ್ಧದೊಂದಿಗೆ 'ತಗುಲಿಸಿ' ರುವನೆಂದು ಭಾವಿಸಿ ಮುಳಿಯ ಮೊದಲಾದವರು ವಿಕ್ರಮಾರ್ಜುನ ವಿಜಯದಲ್ಲಿ ಅರಿಕೇಸರಿಯ ಸ್ವಪಕ್ಷ ಪರಪಕ್ಷದವರನ್ನು ಹುಡುಕಿ ಹೇಳುವ ವಿಫಲ ಪ್ರಯತ್ನವನ್ನು ಮಾಡಿದ್ದಾರೆ" ಎಂದಿದ್ದಾರೆ. ಅವರ ಪ್ರಕಾರ ಪಂಪನ ಸಮಕಾಲೀನ ಯುದ್ಧ ಪ್ರಸಕ್ತಿಗಳು ಮಹಾ ಭಾರತ ಯುದ್ಧದೊಂದಿಗೆ ತಳುಕಿ ಪ್ರವಹಿಸಿವೆ ಎಂಬುದಕ್ಕಿಂತ, ಆ ಯುಗದ ರಾಜಕೀಯವನ್ನು ಅರ್ಥ ಮಾಡಿಕೊಳ್ಳಲು ಪಂಪನಿಗೆ ಅವಕಾಶ ಮಾಡಿಕೊಟ್ಟಿವೆ. ಕಲಬುರ್ಗಿಯವರು ತಮ್ಮ ಚರ್ಚೆಯನ್ನು ಮುಂದುವರಿಸುತ್ತಾ, ಪಂಪನಿಗೆ ಈ ಕಾಳಗದ ಕಥೆಗಳಿಗಿಂತ ಮಿಗಿಲಾಗಿ ಹಿನ್ನೆಲೆಯಾಗಿ ನಿಂತುವು ರಾಜಕೀಯ ಆಚರಣೆಗಳು ಮತ್ತು ಸಂವೇದನೆಗಳೆಂದು ಹೇಳಿ, ಈ ಹಿನ್ನೆಲೆಯಲ್ಲಿ ದೇವಾಲಯ ರಚನೆ, ತಟಾಕ ನಿರ್ಮಾಣ, ಯುದ್ಧ ಸಂಬಂಧಿಯಾದ ಕೆಲವು ವಿವರಗಳು, ವೇಳೆವಾಳಿ – ಜೋಳವಾಳಿ, ವೀರ ಜೀವನದ ಆದರ್ಶಗಳು ಇತ್ಯಾದಿಗಳನ್ನು ಪಂಪನಿಂದ ನಿದರ್ಶಿಸಿದ್ದಾರೆ. ಹೀಗೆ ನಿದರ್ಶಿಸಿದುವೆಲ್ಲ ಬಿಡಿ ವಿವರಗಳೇ. ಹೀಗೆ ತೋರಿಸಲಾದ ನಿದರ್ಶನಗಳು, ಪಂಪನ ಕಾವ್ಯಗಳು ತೋರ್ಪಡಿಸುವ ಸಾಮಾಜಿಕ ಗ್ರಹಿಕೆ ಯಾವ ಸ್ವರೂಪದ್ದೆಂದು ಹೇಳುವುದಕ್ಕಿಂತ, ಕವಿ ಇವನ್ನೆಲ್ಲ ಕಾವ್ಯದಲ್ಲಿ 'ಹಾಸುಹೊಕ್ಕುಗೊಳಿಸಿ' ದ್ದಾನೆ ಎಂಬುದರ ಹಿನ್ನೆಲೆಯಾಗಿ ಬಂದಿವೆ.

ಇನ್ನು ಪಂಪನ ಧಾರ್ಮಿಕ ಹಿನ್ನೆಲೆಯ ಸಂಬಂಧದಲ್ಲಿ ಕಾವ್ಯೇತರವಾದ ಆಧಾರಗಳಿಂದ ಜೈನ ಧರ್ಮಕ್ಕೆ ಸಂಬಂಧಿಸಿದ ಕೆಲವು ಮುಖ್ಯ ಸಂಗತಿಗಳನ್ನು ಹೇಳಿದ್ದಾರೆ. ಹೀಗಿದ್ದರೂ ಈ ಸಂಗತಿಗಳು ಕೃತಿಯ ಗ್ರಹಿಕೆಗೆ ಅನಿವಾರ್ಯವಾಗಿ ಪೂರಕಗಳೆಂಬಂತೆ ತೋರವು. ಈ ಇಡೀ ಚರ್ಚೆಯ ಕೊನೆಗೆ ಕಲಬುರ್ಗಿಯವರು, ಪಂಪ ಸ್ವಾತಂತ್ರ್ಯ ವಹಿಸಿ ಬರೆದುದರಿಂದ "ವಿಕ್ರಮಾರ್ಜುನ ವಿಜಯದಲ್ಲಿ ಸಮಕಾಲೀನ ರಾಜಕೀಯ ಜೀವನ ಹೊರಗುಳಿಯದೆ ಒಳ ಸೇರಿತು; ಪರತಂತ್ರ ಸ್ಥಿತಿಯಲ್ಲಿ ನಿಂತು ಬರೆದ

ಕಾರಣ ಆದಿಪುರಾಣದಲ್ಲಿ ಸಮಕಾಲೀನ ಧಾರ್ಮಿಕ ಜೀವನ ಒಳ ನೇರದೆ ಹೊರಗುಳಿಯಿತು" ಎಂದಿದ್ದಾರೆ. ಇಲ್ಲಿ ಮೊದಲಿನದರಷ್ಟು ಎರಡನೆಯ ಮಾತು ಸಮರ್ಥನೀಯವಲ್ಲವೆಂದು ತೋರುತ್ತದೆ. 'ಪರತಂತ್ರ ಸ್ಥಿತಿ' ಎಂದು ಕರೆದದ್ದು ಪಂಪ ಆದಿಪುರಾಣದಲ್ಲಿ ಜಿನಸೇನನನ್ನು ಕೇವಲ ಅನುಕರಿಸಿದ್ದಾನೆ ಎಂಬ ಅರ್ಥದಲ್ಲಾದರೆ, ಈ ಮಾತು ಸಂಗತವಾಗಲಾರದು. ತನ್ನ ಪರಿಮಿತ ನೆಲೆಯಲ್ಲಿ ಆದಿಪುರಾಣ ಕೂಡ ತನ್ನ ಕಾಲದ ಧಾರ್ಮಿಕ ಗ್ರಹಿಕೆಯನ್ನು ವ್ಯಕ್ತಪಡಿಸುತ್ತದೆ, ಎಂಬುದನ್ನು ನಿರಾಕರಿಸಲಾಗದು.

ವಿ.ರಾಮಚಂದ್ರ ರಾವ್ ಅವರೂ ಪಂಪನ ಚಾರಿತ್ರಿಕ ಹಿನ್ನೆಲೆಯನ್ನು ಕುರಿತು ಬರೆಯುವಾಗ,[12] ಇತರ ಹಲವು ಸಂಗತಿಗಳ ಮಧ್ಯೆ (ಸಾಹಿತ್ಯಿಕ, ಪಂಪನ ವ್ಯಕ್ತಿ-ವಂಶ ವಿವರಗಳು) ಸಾಮಾಜಿಕ ಮತ್ತು ರಾಜಕೀಯ ಹಿನ್ನೆಲೆಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ. ಈ ಪ್ರಸ್ತಾಪಗಳಲ್ಲಿ ಇದುವರೆಗೆ ಚರ್ಚಿತವಾಗಿದ್ದ ಹಲವು ಸಂಗತಿಗಳು ಸಮಾವೇಶಗೊಂಡಿರುವುದನ್ನು ಗಮನಿಸಬಹುದು. ಇಂಥ ಚರ್ಚೆಗಳೆಲ್ಲ ಪಂಪನ ಹಿನ್ನೆಲೆಯಾಗಿದ್ದಿರಬಹುದಾದ ವಿವರಗಳನ್ನೇ ಕುರಿತಿದ್ದರೂ, ಪಂಪನ ಕಾವ್ಯಗಳ ಸಮಕಾಲೀನತೆಯನ್ನು ಕುರಿತೇ ಚರ್ಚಿಸುತ್ತವೆ ಎಂಬುದನ್ನು ಗಮನಿಸಬಹುದು.

ಇನ್ನು ಸಾಮಾಜಿಕ ದೃಷ್ಟಿಕೋನದವುಗಳೆಂದು ಕರೆಯಬಹುದಾದ ಅಧ್ಯಯನಗಳಲ್ಲಿ ಎಂ.ಚಿದಾನಂದಮೂರ್ತಿಯವರ ಎರಡು ಬರಹಗಳನ್ನಿಲ್ಲಿ ಗಮನಿಸಬಹುದು. ಒಂದು 'ಪಂಪ ಕವಿ ಮತ್ತು ಮೌಲ್ಯ ಪ್ರಸಾರ' ಮತ್ತು ಇನ್ನೊಂದು 'ಪಂಪ ಕವಿ ಮತ್ತು ಯುಗ ಧರ್ಮ'. ಪರಸ್ಪರ ಪೂರಕವಿರುವ ಇವೆರಡೂ ಚರ್ಚೆಗಳಲ್ಲಿ ಶಾಸನಗಳಿಂದ ಸಿದ್ಧಪಡಿಸಿದ ನೆಲೆಗಟ್ಟಿನ ವಿವರಗಳನ್ನು ಪಂಪನ ಕಾವ್ಯಗಳಿಗೆ ಅನ್ವಯಿಸುವ ಕ್ರಮವಿರುವುದನ್ನು ಗಮನಿಸಬಹುದು.

---

12. 'ಪಂಪನ ಚಾರಿತ್ರಿಕ ಹಿನ್ನೆಲೆ', ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ : ಸಂಪುಟ-2, (ಸಂ) ಜಿ.ಎಸ್.ಶಿವರುದ್ರಪ್ಪ, ಬೆಂ.ವಿ.ವಿ., 1975. ಪು : 60-68

ತಮ್ಮ ಮೊದಲ ಚರ್ಚೆಯಲ್ಲಿ ಚಿದಾನಂದ ಮೂರ್ತಿಯವರು ಪಂಪನ ಕಾಲದ ಶಾಸನಗಳಲ್ಲಿ ದೊರೆಯುವ ವಿವರಗಳನ್ನು ಪಂಪನ ಕೃತಿಗಳ ವಿವರಗಳೊಂದಿಗೆ ಹೋಲಿಸುತ್ತ ಪಂಪ ಸಾಮಾಜಿಕ ಮೌಲ್ಯಗಳ ಗ್ರಾಹಕ, ಪಾಲಕ, ಪ್ರಸಾರಕನಾಗಿರುವನೆಂಬ ಅಂಶವನ್ನು ಪ್ರತಿಪಾದಿಸಿದ್ದಾರೆ. ಈ ಚರ್ಚೆ ಎರಡು ಹಂತಗಳಲ್ಲಿ ನಡೆದಿದೆ. ಮೊದಲ ಹಂತದಲ್ಲಿ, ಪಂಪ ಪೂರ್ವ ಶಾಸನಗಳಲ್ಲಿ ಎದ್ದು ಕಾಣುವ ಮೌಲ್ಯಗಳು ಪಂಪನ ಕಾವ್ಯಗಳಲ್ಲಿ ಬಳಕೆಯಾಗಿರುವುದರಿಂದ, ಪಂಪ ತನ್ನ ಹಿಂದಿನ (ಅಥವಾ ಸಮಕಾಲೀನ) ಬದುಕಿನಲ್ಲಿದ್ದ ಮೌಲ್ಯಗಳನ್ನು ಅಭಿವ್ಯಕ್ತಿಸಿದ್ದಾನೆ ಎಂದು ಹೇಳಲಾಗಿದೆ. ಇನ್ನು ಎರಡನೆಯ ಹಂತದ ಚರ್ಚೆಯಲ್ಲಿ ಪಂಪಾನಂತರದ ಶಾಸನಗಳು ಮತ್ತು ಪಂಪನ ಕಾವ್ಯಗಳಲ್ಲಿ ದೊರೆಯುವ ಮೌಲ್ಯ ಪ್ರಸಕ್ತಿಯ ವಿವರಗಳ ಹೋಲಿಕೆಯ ಆಧಾರದ ಮೇಲೆ ಪಂಪನ ನಂತರದ ಸಂದರ್ಭದಲ್ಲಿ ಪಂಪನ ಕೃತಿಗಳ ಅದರಲ್ಲೂ ಅವನ ಪಂಪ ಭಾರತದ ಪ್ರಭಾವವಿದೆಯೆನ್ನಲಾಗಿದೆ.

'ಮೌಲ್ಯ' ಎಂಬುದನ್ನು ಅವರು ಹೀಗೆ ವಿವರಿಸಿದ್ದಾರೆ:[13] "ಯಾವ ಭಾವನೆ ಅಥವಾ ಆದರ್ಶಗಳು ಒಟ್ಟು ಜನಜೀವನವನ್ನು ಹಿಡಿದು ನಡೆಸುತ್ತವೆಯೋ, ಯಾವುವನ್ನು ಪಡೆಯಲು ಅಥವಾ ಅಗಲು ಒಂದು ಕಾಲದ ಜನಾಂಗ ಹಂಬಲಿಸುತ್ತದೆಯೋ, ಯಾವ ಭಾವನೆ ಅಥವಾ ಆದರ್ಶಗಳಿಗೆ ಉಳಿದ ಭಾವನೆ ಅಥವಾ ಆದರ್ಶಗಳಿಗಿಂತ ಹೆಚ್ಚು ಪ್ರಾಮುಖ್ಯತೆ ಉಂಟೋ ಅವುಗಳನ್ನು 'ಮೌಲ್ಯ'ಗಳೆಂದು ಕರೆಯಬಹುದು." ಹೀಗೆ 'ಮೌಲ್ಯ' ಎಂಬುದನ್ನು ವಿವರಿಸುವಾಗ ಅದರ ಸಾಂಸ್ಕೃತಿಕ ಅನನ್ಯತೆಯನ್ನು ಕೂಡ ಗಮನದಲ್ಲಿರಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಪಂಪನ ಸಮಕಾಲೀನ ಮೌಲ್ಯಗಳೆಂದು ಅವರು ಗುರುತಿಸಿರುವಂಥವು ಹೀಗಿವೆ: ನನ್ನಿ, ಜಸ, ಬೀರ, ಛಲ ಮತ್ತು ಅಭಿಮಾನ, ಪತಿಭಕ್ತಿ, ಚಾಗ (ದಾನ), ಶೌಚ, ಶರಣ್ಬುಗೆ ಕಾವುದು ಇತ್ಯಾದಿ.

---

13. 'ಪಂಪ ಕವಿ ಮತ್ತು ಮೌಲ್ಯ ಪ್ರಸಾರ', ಸಂಶೋಧನ ತರಂಗ– ಭಾಗ – 1, ಮೈಸೂರು, 1966. ಪು: 3 (ಅಡಿ ಟಿಪ್ಪಣಿ)

ಇವುಗಳಲ್ಲಿ ವೀರ ಮತ್ತು ಚಾಗಗಳನ್ನು "ಆ ಯುಗದ ಮೌಲ್ಯಗಳಲ್ಲೆಲ್ಲಾ ಅತ್ಯಂತ ಪ್ರಧಾನವಾದುವು" ಎಂದಿದ್ದಾರೆ. "ಚಲದೊಳ್ ದುರ್ಯೋಧನಂ .........." (ವಿ.ವಿ. 14—64) ಎಂಬ ಪಂಪನ ಪ್ರಸಿದ್ಧ ಪದ್ಯವನ್ನುದ್ಧರಿಸಿ, ಈ ಪದ್ಯ ಅವನ ಸಮಕಾಲೀನ ಮೌಲ್ಯಗಳಲ್ಲಿ ಬಹುಪಾಲನ್ನು ಒಳಗೊಂಡಿದೆ." "ಭಾರತದ ಒಂದೊಂದು ಪಾತ್ರವನ್ನೂ ಒಂದೊಂದು ಮೌಲ್ಯದ ಪ್ರತಿನಿಧಿಯಾಗಿ ಮಾಡಿಕೊಂಡಿದ್ದಾನೆ. ಹೀಗೆ ಮಾಡುವುದರಲ್ಲಿ ಮೂಲ ಮಹಾ ಭಾರತವೂ ಸಾಕಷ್ಟು ಕಾರಣವಾಗಿರಬಹುದು. ಅವನ ಕಾಲದ ಮೌಲ್ಯಗಳು ಕಾರಣ ಎಂಬುದಂತೂ ತೀರ ಸ್ಪಷ್ಟ" ಎಂದಿದ್ದಾರೆ.[14]

ಚಿದಾನಂದ ಮೂರ್ತಿಯವರು 'ಮೌಲ್ಯ' ಎಂಬುದನ್ನು ಕುರಿತು ನೀಡುವ ವಿವರಣೆಯ ನೆಲೆಯಿಂದಲೇ ಗಮನಿಸಿದರೂ, ಅವರು ಮೌಲ್ಯಗಳೆಂದು ಗುರುತಿಸಿದವುಗಳಲ್ಲಿ ಕೆಲವನ್ನಾದರೂ ಒಪ್ಪುವಾಗ ಸಹಜವಾಗಿಯೇ ಕೆಲವು ಅನುಮಾನಗಳು ಸಾಧ್ಯ. ಅವರು ತಮ್ಮ ಚರ್ಚೆಯಲ್ಲಿ ತಲುಪಿರುವ ತೀರ್ಮಾನಗಳಿಗೆ ಪಂಪನ ಸಮಕಾಲೀನ ಶಾಸನಗಳಲ್ಲಿ ಬರುವ ವಿವರಗಳನ್ನು ಆಧಾರವಾಗಿ ತೋರಿಸುತ್ತಾರೆ. ಶಾಸನಗಳು ಜನಜೀವನವನ್ನು ಯಥಾವತ್ತಾಗಿ ಚಿತ್ರಿಸುವುದರಿಂದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಅವು ಹೆಚ್ಚು ವಿಶ್ವಾಸ ಪಾತ್ರಗಳೆಂದು ಭಾವಿಸುತ್ತಾರೆ. ಆದರೆ, ಅವರೇ ಗುರುತಿಸಿರುವಂತೆ ಅರಿಕೇಸರಿಯು ಆಳುತ್ತಿದ್ದ ಪ್ರದೇಶ ಸದಾ ಯುದ್ಧ ಸನ್ನದ್ಧ ಸ್ಥಿತಿಯಲ್ಲಿರುವುದು ಅನಿವಾರ್ಯವಾಗಿತ್ತು. ರಾಜಕೀಯ ಅಂತ:ಕಲಹ, ಏಳು—ಬೀಳುಗಳುಳ್ಳ ಸಂದರ್ಭಗಳಲ್ಲಿ ಇದು ಸಹಜವೇ ಇರುವ ಪರಿಸ್ಥಿತಿ. ಇಂಥ ಸ್ಥಿತಿಯಲ್ಲಿ ಹುಟ್ಟುವ ಶಾಸನಗಳು ವೀರರ ಗುಣಗಾನವನ್ನು ಮಾಡುವುದು, ಪತಿಭಕ್ತಿ, ತ್ಯಾಗ ಇತ್ಯಾದಿ ಗುಣಗಳನ್ನು ಕೀರ್ತಿಸುವುದು, ವೀರ ಸ್ವರ್ಗದ ಕಲ್ಪನೆಯನ್ನು ಎತ್ತಿ ಹಿಡಿಯುವುದು ಸಹಜವೇ ಆಗಿದೆ. ಇಂಥ ಕೀರ್ತನೆ, ಗುಣಗಾನಗಳಲ್ಲಿ ರಾಜ ಶಕ್ತಿಯ ಪರವಾದ ನಿರ್ದಿಷ್ಟ

---

14. ಅದೇ, ಪು : 8—9

ಉದ್ದೇಶಗಳಿರುವುದು ಸಾಧ್ಯ. ಹೀಗಾಗಿ ಇಂಥ ವಿವರಗಳಿಂದ ಒಂದು ರೀತಿಯಲ್ಲಿ ಚಾರಿತ್ರಿಕವಾದ ಕೆಲವಂಶಗಳನ್ನು ಪುನಾರಚಿಸಲು ಸಾಧ್ಯವಾದರೂ, ಆ ವಿವರಗಳನ್ನು ಇಡೀ ಬದುಕಿಗೆ, ಜನಜೀವನಕ್ಕೆ ಮಾನ್ಯವಿದ್ದ ಸಂಗತಿಗಳೆಂದು ಹೇಳುವುದು ಸಂದೇಹಾಸ್ಪದವಾಗುತ್ತದೆ. ಅದುದರಿಂದ ಪಂಪ ಪೂರ್ವ ಮತ್ತು ನಂತರದ ಶಾಸನಗಳು ಮತ್ತು ಪಂಪನ ಕೃತಿಗಳಲ್ಲಿ ಕಾಣಬರುವ ಹೋಲಿಕೆಯನ್ನು ಮೌಲ್ಯ ಸಂಬಂಧಿಯಾದುದಾಗಿ ನೋಡುವ ಬದಲು ಭಾಷಿಕ ರಚನೆಯ ನೆಲೆಯದಾಗಿ ನೋಡುವುದು ಹೆಚ್ಚು ಯುಕ್ತವೆಂದು ತೋರುತ್ತದೆ.) ಚಿದಾನಂದ ಮೂರ್ತಿಯವರು ತಮ್ಮ ವ್ಯಾಪಕ ಅಧ್ಯಯನದ ಫಲವಾಗಿ ಇಂಥ ಹೋಲಿಕೆಯ ಅನೇಕ ನಿದರ್ಶನಗಳನ್ನು ತೋರಿಸುತ್ತಾರೆ. "ಪಂಪನ ನಂತರದ ಶಾಸನಗಳ ಶೈಲಿ ಪ್ರೌಢವಾಗುತ್ತದೆ, ಕಾವ್ಯಮಯವಾಗುತ್ತದೆ. ಇದು ಬಹುಶಃ ಪಂಪನ ಪ್ರಭಾವದ ಫಲವಿರಬಹುದು" ಎಂಬ ಅವರ ಮಾತುಗಳು[15] ಈ ನೆಲೆಯಿಂದ ಗಮನಾರ್ಹವಾಗುತ್ತವೆ. ಕ್ರಿ.ಶ. 946ರ ಶಾಸನದಲ್ಲಿ ಅರಿಕೇಸರಿಯ ವಂಶ ವಿವರಗಳನ್ನು ಹೇಳುವ ಕೆಲವು ಪದ್ಯಗಳು ಪಂಪ ಭಾರತದವೇ ಆಗಿವೆ ಎಂಬುದನ್ನು ಈಗಾಗಲೇ ಗುರುತಿಸಲಾಗಿದೆ. ಇದರಿಂದ ಮನವರಿಕೆಯಾಗುವ ಒಂದು ಸಂಗತಿಯೆಂದರೆ, ಪಂಪನ ಕೃತಿ ರಚನೆಯಾದ ನಂತರ, ಶಾಸನ ರಚಕರು ಪಂಪನ ಕೃತಿಯಲ್ಲಿನ ಮಾತುಗಳನ್ನು ಇಡಿಯಾಗಿಯೋ, ಸ್ವಲ್ಪ ಬದಲಿಸಿಯೋ ಅನುಕರಿಸಿರಬಹುದು. 'ಈ ಅನುಕರಣೆಯ ಅಂಶವನ್ನು ಚಿದಾನಂದ ಮೂರ್ತಿಯವರೇ ನಿದರ್ಶಿಸಿದ ಉದಾಹರಣೆಗಳು ಸಮರ್ಥಿಸುತ್ತವೆ.

ಇದೇ ರೀತಿ ಪಂಪನ ಯುಗಧರ್ಮವನ್ನು ಕುರಿತ ಚರ್ಚೆಯಲ್ಲಿ ಅವರು ಶಾಸನಾಧಾರಿತವಾದ ಕೆಲವು ವಿವರಗಳು ಮತ್ತು ಪಂಪನ ಕೃತಿಗಳಲ್ಲಿ ಕಂಡುಕೊಂಡ ಸಾಮ್ಯತೆಯನ್ನೇ ಆಧರಿಸಿದ್ದಾರೆ. ಪಂಪನ ಕಾಲದ ಯುಗಧರ್ಮವು ' ಪ್ರಧಾನವಾಗಿ

---

15. ಅದೇ, ಪು : 2

ಕ್ಷಾತ್ರ' ಎಂದು ಕರೆದು, "ಪಂಪ ಭಾರತವು ಒಂದು ವೀರ ಕಾವ್ಯ. ಇದು ಅವನದೇ ಮತ್ತೊಂದು ಕಾವ್ಯವಾದ ಆದಿಪುರಾಣಕ್ಕಿಂತ ಹೆಚ್ಚು ಸ್ಪಷ್ಟವಾಗಿ ಆ ಕಾಲದ ಯುಗ ಮುದ್ರೆಯನ್ನು ಹೊತ್ತು ನಿಂತಿದೆ" ಎಂದಿದ್ದಾರೆ.[16] ಈ ನೆಲೆಯಲ್ಲಿ ಪಂಪನ ಕಾಲದ ಯುಗಧರ್ಮದ ಕೆಲವು ಅಂಶಗಳಾಗಿ, 'ವೀರನಿಗಿದ್ದ ಮಾನ್ಯತೆ, ವೀರನ ಕೆಲವು ಗುಣಲಕ್ಷಣಗಳು, ಯುದ್ಧದ ಹಿಂದಿನ ದಿನ ಸೈನ್ಯಗಳ ಶಿಬಿರಗಳಲ್ಲಿ ನಡೆಯುವ ಸೈನಿಕರ ವೀರಾಲಾಪ ಮತ್ತು ಪ್ರಣಯ ಸಂಭಾಷಣೆಗಳು, ವೀರ ಯುಗದಲ್ಲಿ ಆಲೋಚನೆಗಿಂತ ಕ್ರಿಯೆ ಮುಖ್ಯವೆಂಬುದು, ಯುದ್ಧ ಸಂಬಂಧಿಯಾದ ಇನ್ನಿತರ ಕೆಲವು ವಿವರಗಳು ಇತ್ಯಾದಿಯಾಗಿ ಹಲವನ್ನು ಗುರುತಿಸಿದ್ದಾರೆ.

ಇಲ್ಲಿ ಪ್ರಧಾನವಾಗಿ ಗಮನಕ್ಕೆ ಬರುವ ಒಂದು ಅಂಶವೆಂದರೆ, ಕೃತಿಯ ವಿವರಗಳನ್ನು ಕೃತಿಯ ಹೊರಗಿನ ವಿವರಗಳೊಂದಿಗೆ (ಇಲ್ಲಿ ಶಾಸನಗಳು) ಸಂಬಂಧಿಸಿ ನೋಡುವುದರ ಮೂಲಕವಾಗಿ ಯುಗ ಧರ್ಮದ ಒಂದು ಸಾಮಾನ್ಯ ಗ್ರಹಿಕೆಯನ್ನು ಕಂಡುಕೊಳ್ಳುವುದು. ಹೀಗೆ ಕಂಡುಕೊಳ್ಳುವ ಗ್ರಹಿಕೆ ಕೃತಿಯ ಅಧ್ಯಯನದ ಮೂಲಕ ಮಾತ್ರವೇ ಬಂದುದಲ್ಲ; ಬದಲಾಗಿ, ಕೃತಿಯ ಕಾಲದ ಸಾಮಾಜಿಕ ವಿವರಗಳ ವ್ಯಾಖ್ಯಾನಕ್ಕೆ ಕೃತಿ ಮತ್ತು ಕೃತಿಯಾಚೆಗಿನ ಹೊರ ವಿವರಗಳಿಂದ ಪಡೆದದ್ದು. ಹೀಗಾಗಿ ಕೃತಿಯೆನ್ನುವುದು ಇಂಥ ಉದ್ದೇಶಕ್ಕೆ ಬಳಸಲಾದ ಒಂದು ದಾಖಲು ಮಾತ್ರವಾಗಿಬಿಡುತ್ತದೆ.

ಈ ಚರ್ಚೆಯಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವಿದೆ. ಸಮಾಜ ಶಾಸ್ತ್ರಜ್ಞರು ಸ್ಥಿರ ಸಮಾಜ ಮತ್ತು ಸ್ಥಿತ್ಯಂತರ ಸಮಾಜವೆಂದು ಎರಡು ರೀತಿಯ ಸಮಾಜಗಳನ್ನು ಗುರುತಿಸುತ್ತಾರೆಂದು, ಸ್ಥಿರ ಸಮಾಜದ ಕೆಲವು ಲಕ್ಷಣಗಳನ್ನು

---

16. 'ಪಂಪ ಕವಿ ಮತ್ತು ಯುಗ ಧರ್ಮ", ಪಂಪ : ಒಂದು ಅಧ್ಯಯನ, (ಸಂ) ಜಿ.ಎಸ್.ಶಿವರುದ್ರಪ್ಪ, ಬೆಂ.ವಿ.ವಿ., 1974. ಪು : 264 ಮತ್ತು 265.

ಪ್ರಸ್ತಾಪಿಸಿದ್ದಾರೆ. ಈ ಲಕ್ಷಣಗಳು ಯಾವುದೇ ಸಮಾಜಕ್ಕೆ ಪೂರ್ಣವಾಗಿ ಅನ್ವಯವಾಗುವುದಿಲ್ಲವೆಂಬ ಅನುಮಾನವನ್ನು ಉಳಿಸಿಕೊಂಡೇ ಪಂಪನ ಕಾಲದ ಸಮಾಜವನ್ನು ಸ್ಥಿರ ಸಮಾಜವೆಂದು ಕರೆದಿದ್ದಾರೆ. (ವಚನಕಾರರ ಕಾಲವನ್ನು ಸ್ಥಿತ್ಯಂತರ ಸಮಾಜವೆಂದು ಗುರುತಿಸಿದ್ದಾರೆ) ಅವರು ಗುರುತಿಸಿದ ಸ್ಥಿರ ಸಮಾಜದ ಲಕ್ಷಣಗಳ ಹಿನ್ನೆಲೆಯಲ್ಲಿ ಪಂಪನ ಕಾಲಕ್ಕೆ ಸಂಬಂಧಿಸಿದಂತೆ ಬರೆದಿರುವ ಕೆಲವು ಮಾತುಗಳು ಹೀಗಿವೆ: "ಕವಿ ರಾಜಸತ್ತೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡವನು. ಅವನ ವೈಯಕ್ತಿಕ ಧರ್ಮವಾದ ಜೈನ ಧರ್ಮವು ತನ್ನ ಏಳಿಗೆಯ ಪರಾಕಾಷ್ಠೆಯಲ್ಲಿದ್ದಿತು .......... ಜನಜೀವನದಲ್ಲಿ ಶ್ರದ್ಧೆ ಉತ್ಸಾಹಗಳು ತುಂಬಿ ತುಳುಕುತ್ತಿದ್ದುವು. ಭೀಷ್ಮರಿಗೆ ಪಟ್ಟ ಕಟ್ಟದಾಗ ಕರ್ಣ ಸಿಡಿದೆದ್ದರೂ, ತನಗೇ ಮುಂದೆ ವೀರಪಟ್ಟದ ಅವಕಾಶ ಒದಗಿದಾಗ ಅವನು ನಡೆದುಕೊಳ್ಳುವ ರೀತಿಯನ್ನು ನೋಡಿದರೆ ವಯೋವೃದ್ಧರ ಬಗ್ಗೆ ಇದ್ದ ಗೌರವ ಭಾವನೆಯೂ ವ್ಯಕ್ತವಾಗುತ್ತದೆ; ಮತ್ತು ಸಭ್ಯ ಗುಣದ ಪರಿಚಯವೂ ನಮಗಾಗುತ್ತದೆ. ಪಾಂಡವ ಪಕ್ಷಪಾತಿಯಾದ ಕೃಷ್ಣನನ್ನು ದುರ್ಯೋಧನ ಮಾತನಾಡಿಸುವ ರೀತಿಯಲ್ಲೂ ಸಭ್ಯತೆ ಎದ್ದು ಕಾಣುತ್ತದೆ. ಈ ಶಿಷ್ಟಾಚಾರವು ಪಂಪನ ಸಂಸ್ಕಾರವನ್ನೂ ಸೂಚಿಸಬಹುದು, ರಾಜಾಸ್ಥಾನದ ನಡಾವಳಿಯನ್ನೂ ಹೇಳಬಹುದು .........." ಇತ್ಯಾದಿ.[17] ಇಲ್ಲಿ ವಿಕ್ರಮಾರ್ಜುನ ವಿಜಯವನ್ನು ರಾಜಸತ್ತೆಯ ಕೀರ್ತನೆಯ ಕಾವ್ಯವೆಂದಷ್ಟೇ ನೋಡುವುದಾದರೆ ಮಾತ್ರ ಕವಿ ರಾಜಸತ್ತೆಯನ್ನು ಒಪ್ಪಿಕೊಂಡಿದ್ದಾನೆಂದು ಹೇಳಬಹುದು. ಕರ್ಣನ ಸಂಬಂಧದಲ್ಲಿ ಬಂದಿರುವ ಮಾತುಗಳು ಸಂಗತವಾಗಿಯೇ ಇವೆ. ಪಂಪನ ಬಹುಪಾಲು ಪಾತ್ರಗಳು ಹೀಗೆಯೇ. ಅವುಗಳಲ್ಲಿ ಒಂದೇ ಬಗೆಯ ವರ್ತನೆಯನ್ನು ಯಾವಾಗಲೂ ನಿರೀಕ್ಷಿಸಲಾಗದು. ಇನ್ನು ಕೃಷ್ಣನನ್ನು ದುರ್ಯೋಧನ ಮಾತನಾಡಿಸುವ ರೀತಿಯಲ್ಲಿರುವ ಸಭ್ಯತೆಯ ಮಾತು. ಇಲ್ಲಿರುವುದು (ಕೃಷ್ಣ, ಸಂಧಾನಕ್ಕೆ

---

17. ಅದೇ, ಪು: 275–277.

ಬಂದಾಗ ದುರ್ಯೋಧನ ಆಡುವ ಮಾತುಗಳಿಂದಾದರೆ) ವ್ಯಂಗ್ಯ ಪೂರಿತ ಸಭ್ಯತೆಯ ತೋರಿಕೆ ಮಾತ್ರ. ಇದಾದರೂ ರಾಜಾಸ್ಥಾನದ ನಡವಳಿಕೆಯ ಸೂಚನೆಯೇ ಆದೀತು.

ಸ್ಥಿರ ಸಮಾಜದ ಲಕ್ಷಣಗಳ ಹಿನ್ನೆಲೆಯಲ್ಲಿ ಇಂಥ ಇನ್ನೂ ಹಲವು ಸಂಗತಿಗಳನ್ನು ಪ್ರಸ್ತಾಪಿಸಲಾಗಿದೆ. ಈ ಪ್ರಸ್ತಾಪಿತ ಸಂಗತಿಗಳೇ ಸ್ಥಿರ ಸಮಾಜದವೆಂದು ಹೇಳಲಾದ ಲಕ್ಷಣಗಳಿಗೆ ತದ್ವಿರುದ್ಧವಾಗಿವೆ. ಸದ್ಯ ಸ್ಥಿರ–ಸ್ಥಿತ್ಯಂತರ ಸಮಾಜಗಳ ಸಂಬಂಧದ ಚರ್ಚೆಯನ್ನಿಲ್ಲಿ ಬೆಳಸಬೇಕಾದ ಅಗತ್ಯವಿಲ್ಲವೆಂದು ತೋರುತ್ತದೆ. ಆದರೆ ಇಷ್ಟನ್ನು ಮಾತ್ರ ಹೇಳಬಹುದು. ಯಾವ ಸಮಾಜವೂ ಸ್ಥಗಿತವಲ್ಲ, ಸ್ಥಿರ ಸ್ವರೂಪಿಯಲ್ಲ. ಬದಲಾಗಿ ಸಮಾಜವೆನ್ನುವುದೇ ಚಲನಶೀಲ. ಈ ಚಲನಶೀಲತೆಯ ಗತಿಯಲ್ಲಿ ಮಾತ್ರ 'ಹೆಚ್ಚು' — 'ಕಡಿಮೆ' ಗಳಿರಬಹುದಷ್ಟೇ. ಈ ಅಂಶವನ್ನು ಅವರೂ ಗುರುತಿಸಿದ್ದಾರೆ.

ಇದೆಲ್ಲದರ ಮಧ್ಯೆ, ಇವೆರಡೂ ಚರ್ಚೆಗಳು ಪಂಪನನ್ನು ಕುರಿತ ಅಧ್ಯಯನಗಳನ್ನು ನಡೆಸಿದ ಹಲವರಿಗೆ ಒಂದು ಬಗೆಯ ಮಾದರಿಯೆನ್ನಿಸಿವೆ. ಈ ಚರ್ಚೆಗಳ ನಂತರ ಈ ಸಂಬಂಧದಲ್ಲಿ ನಡೆದಿರುವ ಅಧ್ಯಯನಗಳನ್ನು, ಅವು ತಮ್ಮ ಚರ್ಚೆಗಳನ್ನು ಬೆಳೆಸಿರುವ ಧಾಟಿಯನ್ನು ಗಮನಿಸಿದರೆ ಈ ಅಂಶ ಮನದಟ್ಟಾಗುತ್ತದೆ.

ಪಂಪನ ಸಾಮಾಜಿಕತೆಯ ಅರಿವನ್ನು ಕುರಿತು ಎಚ್.ಎಂ.ಚನ್ನಯ್ಯನವರು ಚರ್ಚಿಸಿದ್ದಾರೆ.[18] ಚನ್ನಯ್ಯನವರ ಚರ್ಚೆ ಕೆಲವು ಗೊಂದಲಗಳಿಂದ ಕೂಡಿರುವಂತೆ ಕಾಣುತ್ತದೆ. "………. ಕೇವಲ ತಾನು ಬದುಕುತ್ತಿರುವ ಸಮಾಜದ ಜನಗಳ ನಡವಳಿಕೆಗಳನ್ನು, ಆಚಾರಗಳನ್ನು, ನಂಬಿಕೆಗಳನ್ನು, ಜೀವನದ ರೀತಿಗಳನ್ನು ಎಷ್ಟರ

---

18. 'ಪಂಪನಲ್ಲಿ ಸಾಮಾಜಿಕತೆಯ ಅರಿವು', ಪೂರ್ವೋಕ್ತ : ಪು : 229–245

ಮಟ್ಟಿಗೆ ಕವಿ ತನ್ನ ಕೃತಿಯಲ್ಲಿ ಸೇರಿಸಿದ್ದಾನೆಂಬುದಷ್ಟೇ ಕೃತಿಗೆ ಮಹತ್ವವನ್ನು ತಂದುಕೊಡಲಾರದು. ಹೇಗೆ ಕವಿ ಅವುಗಳನ್ನು ತನ್ನ ಕೃತಿಯಲ್ಲಿ ಉಪಯೋಗಿಸಿ ಕೊಂಡಿದ್ದಾನೆ? ಯಾವ ಒಂದು ಧೋರಣೆಯನ್ನು ಸಮಾಜದ ಬಗ್ಗೆ ತಾಳಿದ್ದಾನೆ? ಅವನ ದೃಷ್ಟಿಕೋನ ಯಾವುದು? ಯಾರಿಗಾಗಿ ಕವಿ ಕೃತಿ ರಚಿಸಿದ್ದಾನೆ? ಅವನ ದೃಷ್ಟಿಯಲ್ಲಿ ಓದುಗರಾರು? ಎನ್ನುವ ಅಂಶಗಳು ಮುಖ್ಯವಾಗುತ್ತವೆ" ಎಂಬೆಲ್ಲ ಮಾತುಗಳನ್ನು ಹೇಳುತ್ತಾರಾದರೂ ಯಾರಿಗಾಗಿ ಕೃತಿ ರಚಿಸಿದ್ದಾನೆ? ಅವನ ದೃಷ್ಟಿಯಲ್ಲಿ ಓದುಗರಾರು? ಅವನ ದೃಷ್ಟಿಕೋನ ಯಾವುದು? ಎಂಬ ಪ್ರಶ್ನೆಗಳಿಗೆಲ್ಲ ಅವರು ಕವಿಯ ಕೆಲವು ಪೂರ್ವ ಸೂಚನೆಗಳಲ್ಲೇ ಉತ್ತರವನ್ನು ಕಂಡುಕೊಂಡಂತಿದೆ. ಪೋಷಕನ ಮನಸ್ಸಂತೋಷಕ್ಕಾಗಿ ಕಾವ್ಯ ಬರೆದಿದ್ದಾನೆ, 'ಕವಿಯ ದೃಷ್ಟಿಯಲ್ಲಿರುವ ಸಹೃದಯರು ಬಹುಶಃ ಅರಿಕೇಸರಿಯ ಆಸ್ಥಾನದಲ್ಲಿದ್ದ ಪಂಡಿತರು, ಅಥವಾ ಬೇರೆ ಅಂಥವರು' ಎಂಬ ಮಾತುಗಳೆಲ್ಲ ಕವಿಯ ಸೂಚನೆಯಿಂದಲ್ಲದೆ, ಕೃತಿಯ ಒಳ ವಿವರಗಳಿಂದ ಗ್ರಹಿಸಿದುವೇನಲ್ಲ.

ಅವರು ವಿಕ್ರಮಾರ್ಜುನ ವಿಜಯದಲ್ಲಿ ವ್ಯಕ್ತವಾಗುವ ಕವಿಯ ಸಾಮಾಜಿಕತೆಯ ಪರಿವೆಯನ್ನು ಮುಖ್ಯವಾಗಿ ಕಾಣಬಹುದೆಂದು ಹೇಳುವ ಕೆಲವು ಸಂದರ್ಭಗಳು ಹೀಗಿವೆ :—

(1) ಚಂದ್ರಿಕಾ ವಿಹಾರದ ಸಂದರ್ಭದಲ್ಲಿ ವರ್ಣಿತವಾಗಿರುವ ವೇಶ್ಯಾವಾಟಿಕೆ

(2) ಮೃಗಯಾ ವಿನೋದದ ವರ್ಣನೆ

(3) ಯುದ್ಧ ವರ್ಣನೆ

(4) ದೇಸಿ ಪ್ರಯೋಗವಾಗಿರುವ ಎಡೆಗಳು

ಈ ಒಂದೊಂದೂ ಸಂದರ್ಭವನ್ನು ಹಿಡಿದು ವಿವರಿಸಿದ್ದಾರೆ. ಆದರೆ ಈ ಸಂದರ್ಭಗಳಲ್ಲಿನ ವಿವರಗಳನ್ನು ಕುರಿತು ಅವರೆನ್ನುವ ಮಾತುಗಳು ಹೀಗಿವೆ :—
ಇಲ್ಲೆಲ್ಲ "ಆ ವಿಷಯಗಳ ಬಗ್ಗೆ ಇರುವ ಅಗಾಧ ಜ್ಞಾನ ಎಂಥದು ಎನ್ನುವುದು

ಗೊತ್ತಾಗುತ್ತದೆ. ಆದರೆ, ತಮ್ಮಷ್ಟಕ್ಕೆ ತಾವು ಸುಂದರವಾಗಿರುವ ಈ ವರ್ಣನೆಗಳು 'ಪ್ರಬಂಧ'ದ ಪರಿಧಿಯಾಚೆಗೆ ಉಳಿದು ಬಿಡುತ್ತವೆ. ಹೀಗೆ, ಕವಿಯ ಸಾಮಾಜಿಕತೆಯ ಅರಿವು ವ್ಯಕ್ತವಾಗುವ ಸಂದರ್ಭಗಳು, ಕಾವ್ಯದಲ್ಲಿ ಅರ್ಥಪೂರ್ಣವಾಗಿ ಉಪಯೋಗವಾಗಿಲ್ಲ. ಇದಕ್ಕೆ ಕಾರಣ, ಈ ಸಂದರ್ಭಗಳನ್ನೂ ಅನಿವಾರ್ಯವಾಗಿ ತನ್ನ ಪೋಷಕನ ಅರ್ಥಾತ್ ರಾಜನ ದೃಷ್ಟಿಕೋನದಿಂದಲೇ ಚಿತ್ರಿಸಬೇಕಾಗಿ ಬಂದದ್ದು". ಈ ಮಾತುಗಳನ್ನೇ ಗಮನಿಸಿದರೂ ಪೂರ್ವ ನಿರ್ಧಾರಿತವಾದ ಒಂದು ನೆಲೆಗಟ್ಟಿನ ಮೇಲೆ ಈ ವಿಚಾರಗಳನ್ನು ಬೆಳೆಸುತ್ತಿದ್ದಾರೆಯೋ ಎನ್ನಿಸುತ್ತದೆ. ಮುಂದೆ ಜನ್ನಯ್ಯನವರು ಹೇಳುವ "ಕವಿಯ ಸಾಮಾಜಿಕತೆಯ ಅರಿವು ಅಗ ಪಟ್ಟಭದ್ರ ಹಿತಾಸಕ್ತಿಗಳುಳ್ಳ ರಾಜತ್ವದ ದೃಷ್ಟಿಕೋನದ್ದಾದ್ದರಿಂದ, ಅದು ಆಳವಾದದ್ದಾಗಿರದೆ ............... ಪರಿಮಿತವಾಗಿದ್ದು ಸಮಾಜದ ಅಂತರಂಗದ ಚಲನೆಯನ್ನು ಗುರುತಿಸುವಂಥದಾಗಿಲ್ಲ." "ರಾಜತ್ವದ ಬಗ್ಗೆ ಇದ್ದ ಇನ್ನೊಂದು ಧೋರಣೆ" ಕಾವ್ಯದಲ್ಲಿಯಾದರೂ "ಅದು ಅಪವಾದ ಮಾತ್ರ", ಅವನದ್ದು ಕ್ರಾಂತಿಕಾರಕವಾದ ಧೋರಣೆಯಲ್ಲ" ಎಂಬ ಮಾತುಗಳಲ್ಲಿ[19] ಅವರ ನಿರೀಕ್ಷೆಯೇನೆಂಬುದನ್ನು ತಿಳಿಯಬಹುದು. ಆದರೆ ಈ ನಿರೀಕ್ಷೆಯೇ ಗೊಂದಲಗಳಿಂದ ಕೂಡಿದೆಯೆ? ಅಥವಾ ನಿರೀಕ್ಷೆಗೆ ತಕ್ಕ ಪುರಾವೆಗಳು ಕೃತಿಯಲ್ಲಿ ದೊರೆಯಲಿಲ್ಲವೇ? ಎಂಬುದು ಇಡೀ ಚರ್ಚೆಯಲ್ಲಿ ಸ್ಪಷ್ಟವಾದಂತಿಲ್ಲ. "ಒಬ್ಬ ಕವಿ ರಾಜನಿಷ್ಠ ಸಾಹಿತ್ಯವನ್ನು ಸೃಷ್ಟಿ ಮಾಡಿದ್ದಾನೆಯೇ ಇಲ್ಲವೇ ಎಂಬುದನ್ನು ಕೇವಲ ಆಶ್ರಯ—ಆಶ್ರಿತ ಸಂಬಂಧಗಳ ಮೂಲಕ ಮಾತ್ರ ಗುರುತಿಸುವುದು ಸಾಧ್ಯವಾಗುವುದಿಲ್ಲ. ಒಂದು ಕಾಲದ ಸಾಮಾಜಿಕ ಪ್ರಕ್ರಿಯೆಗಳ ಹಿನ್ನೆಲೆಯಲ್ಲಿ ಒಬ್ಬ ಕವಿಯನ್ನು ವಿಶ್ಲೇಷಿಸುವುದು ಅತ್ಯಂತ ಮಹತ್ವದ್ದು. ಅವನ ಕಾಲದ ಅಂತರ್ಯದಲ್ಲಿ ನಡೆಯುತ್ತಿದ್ದ ಕ್ರಿಯಾ ವರ್ತನೆಯ ನಿರೂಪಣೆಯ ಮೂಲಕ ಆ ಕಾಲದ

---

19. ಅದೇ, ಪು : 239—240

ಜೀವನದ ವಾಸ್ತವಿಕ ನೆಲೆಯನ್ನು, ಸೂಕ್ಷ್ಮವಾದ ಸಂಬಂಧಗಳನ್ನು ಎಷ್ಟರ ಮಟ್ಟಿಗೆ ಪ್ರಕಟಪಡಿಸಿದ್ದಾನೆ ಎಂಬ ಕಾರಣದಿಂದಲೇ ವಿಶ್ಲೇಷಣೆ ಮುಂದಾಗಬೇಕಾಗುತ್ತದೆ.[20] ಹೀಗಲ್ಲದೆ ರಾಜಾಶ್ರಯದಲ್ಲಿದ್ದವನು 'ರಾಜನಿಷ್ಠ ಕವಿ', 'ಆಳುವ ವರ್ಗದ ಧೋರಣೆಯವನು' ಎಂದು ಹೇಳಲು ಕೃತಿಯ ಅಧ್ಯಯನವೇ ಬೇಕಿಲ್ಲ. ಆ ಕವಿ ಮತ್ತು ಕೃತಿಯನ್ನು ಕುರಿತು ನಮಗಿರುವ ಕೆಲವು ಪೂರ್ವ ನಿರ್ಧಾರಗಳೋ, ಸೂಚನೆಗಳೋ ಮಾತ್ರ ಸಾಕಾಗುತ್ತವೆ.

ಪಂಪ ಭಾರತದ ಯುದ್ಧ ಪರ್ವಗಳಲ್ಲಿನ ಸಮಕಾಲೀನ ಸಂಗತಿಗಳನ್ನು ಕುರಿತು ಶ್ರೀ ಪು ಲಕ್ಷ್ಮೀನರಸಿಂಹ ಶಾಸ್ತ್ರಿಯವರು ಅಧ್ಯಯನವೊಂದನ್ನು ನಡೆಯಿಸಿದ್ದಾರೆ.[21] ಒಂಬತ್ತನೇ ಆಶ್ವಾಸದಿಂದ ಮುಂದಾಗುವ ಆರು ಆಶ್ವಾಸಗಳನ್ನು ಯುದ್ಧ ಪರ್ವಗಳೆಂದು ಕರೆದು, ಅಲ್ಲಿ ಅನೇಕ ಸಮಕಾಲೀನ ಸಂಗತಿಗಳಿವೆಯೆಂದು, ಅವನ್ನು ಕುರಿತು ಚರ್ಚಿಸಿದ್ದಾರೆ. ಅರಿಕೇಸರಿಯ ಸಂಬಂಧದಲ್ಲಿ ಸ್ಮರಿಸಿದ ಕೆಲವು ಯುದ್ಧಗಳ ಸೂಚನೆಗಳು, ಸಮರ ಸಂಪ್ರದಾಯ, ಸಮರ ಸನ್ನಾಹ, ಕಾಳಗದ ಹಲವು ಬಗೆಗಳು, ವೀರ ಪಟ್ಟವನ್ನು ಕಟ್ಟುವುದು, ವೀರಧರ್ಮ, ಯೋಧರ ಉತ್ಸಾಹ, ಚತುರಂಗ ಬಲ, ಶಸ್ತ್ರಾಸ್ತ್ರಗಳು (ಬಾಳ್, ಕಕ್ಕಡೆ, ಪಂಜರಾಯುಧ, ಅರ್ಧ ಚಂದ್ರ, ಕಣೆಯಂಬು, ಕಕ್ಕಂಬು, ಕಲ್ಲಂಬು — ಇತ್ಯಾದಿ) ಮುರಿಗೆಗಾಳಗ, ರಾಜನೀತಿ, (ಇಲ್ಲಿ ಶಲ್ಯನ ಹೇಳಿಕೆಯ ನಿದರ್ಶನಗಳಿವೆ) ಚಿಕಿತ್ಸೆ, ವಿನೋದ ವಿಹಾರ — ಹೀಗೆ ಹಲವು ಸಂಗತಿಗಳನ್ನು ಪಂಪನ ಕಾಲದವಗಳೆಂದು ಗುರುತಿಸಿ,

---

20. ನಾಗರಾಜ ಕಿ.ರಂ., 'ರಾಜನಿಷ್ಠ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ', ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ, (ಸಂ) ಜಿ.ಎಸ್.ಶಿವರುದ್ರಪ್ಪ, ಬೆಂ.ವಿ.ವಿ., 1977. ಪು : 17–18.

21. ಪಂಪ ಭಾರತದ ಯುದ್ಧ ಪರ್ವಗಳಲ್ಲಿ ಸಮಕಾಲೀನ ಸಂಗತಿಗಳು, ಪ್ರ.ಕ., 55–1. ಪು : 59–75

ಒಂದೊಂದನ್ನೂ ಬಿಡಿಬಿಡಿಯಾಗಿ ಚರ್ಚಿಸಲಾಗಿದೆ.

ಯುದ್ಧ ವಿವರಗಳಲ್ಲಿರುವ ಸಮಕಾಲೀನತೆಯನ್ನು ಈ ಮುನ್ನವೇ ಹಲವೆಡೆ ಪ್ರಸ್ತಾಪಿಸಲಾಗಿತ್ತು. ಇಂಥ ಸಂಗತಿಗಳನ್ನು ನೋಡುವ ದೃಷ್ಟಿಕೋನದಲ್ಲಿ ವ್ಯತ್ಯಾಸವೇನೂ ಇಲ್ಲವಾದರೂ ಇದು ಈ ಸಂಗತಿಗಳನ್ನೇ ಕುರಿತ ಪ್ರತ್ಯೇಕ ಚರ್ಚೆಯೆಂಬುದಷ್ಟೆ ಗಮನಿಸಬೇಕಾದ ಅಂಶ. ಈ ಬಗೆಯ ಸಂಗತಿಗಳನ್ನು ಬಿಡಿ ವಿವರಗಳಾಗಿ ಗ್ರಹಿಸಲಾಗಿದ್ದು, ಇಂಥವೆಲ್ಲ ಒಂದು ಬಗೆಯ ಚಾರಿತ್ರಿಕ ವಿವರಗಳ ಪುನಾರಚನೆಗೆ ಬಳಸಬಹುದಾದಂಥವು.

ಇಲ್ಲಿ ಗಮನಿಸಬಹುದಾದ ಮತ್ತೊಂದು ಅಧ್ಯಯನವೆಂದರೆ, ಶಾಂತಿನಾಥ ದಿಬ್ಬದ ಅವರ 'ಪಂಪ ಭಾರತ : ಒಂದು ಸಾಂಸ್ಕೃತಿಕ ಅಧ್ಯಯನ'.[22] ಇತ್ತೀಚೆಗೆ ನಡೆದಿರುವ ಈ ಅಧ್ಯಯನದ ಉದ್ದೇಶವೇ ಪಂಪ ಭಾರತವನ್ನು ಸಾಂಸ್ಕೃತಿಕವಾಗಿ ನೋಡುವುದು. ಆದರೆ ಸಾಂಸ್ಕೃತಿಕ ದೃಷ್ಟಿಯಿಂದ ಪಂಪ ಭಾರತವನ್ನು ಕುರಿತ ಪ್ರತ್ಯೇಕವಾದ ಅಧ್ಯಯನವಿದೆಂಬುದನ್ನು ಬಿಟ್ಟರೆ, ಅಂಥ ಗಮನಾರ್ಹವಾದ ವಿಶೇಷಾಂಶಗಳೇನೂ ಇಲ್ಲರುವಂತೆ ಕಾಣದು. ಪಂಪ ಭಾರತದ ಸಾಂಸ್ಕೃತಿಕ ವಿಶ್ಲೇಷಣೆಯೆಂಬ ಭಾಗದಲ್ಲಿ 'ರಾಜಕೀಯ ಸಂಸ್ಕೃತಿ', 'ಧಾರ್ಮಿಕ ಸಂಸ್ಕೃತಿ', 'ಪ್ರಾದೇಶಿಕ ಸಂಸ್ಕೃತಿ', 'ಕಲಾತ್ಮಕ ಸಂಸ್ಕೃತಿ', 'ಇತರ ಸಂಸ್ಕೃತಿ ಸಹಾಯಕ ವಿಚಾರಗಳು' ಎಂದು ವಿಂಗಡಿಸಲಾಗಿದ್ದು ಅಯಾ ಸಂಗತಿಗಳನ್ನು ಕುರಿತು ಆಯಾ ಶೀರ್ಷಿಕೆಗಳಲ್ಲಿ ಚರ್ಚಿಸಲಾಗಿದೆ.

---

22. ಇದು 1981 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಪಿಎಚ್.ಡಿ. ನಿಬಂಧ. ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಮುಂದೆ ನೀಡುವ ಪುಟ ವಿವರಗಳು ಈ ಅಪ್ರಕಟಿತ ನಿಬಂಧದವು.

ಈ ಅಧ್ಯಯನದಲ್ಲಿ ಮತ್ತೆ ಮತ್ತೆ "ಪಂಪ ಭಾರತದಲ್ಲಿ ಕವಿ ಅನೇಕ ಸಂದರ್ಭಗಳಲ್ಲಿ ಅಂದಿನ ಸಮಾಜವನ್ನೇ ಹಿಡಿದಿಟ್ಟಿದ್ದಾನೆ" (ಪು : 38), ಪ್ರಾದೇಶಿಕ ಸಂಸ್ಕೃತಿಯನ್ನು ಕುರಿತು ಹೇಳುವಾಗ "ಇಲ್ಲಿ ಮೂಡಿದುದೆಲ್ಲ ಪ್ರಾಚೀನ ಕರ್ನಾಟಕದ ಚಿತ್ರವೇ ಆಗಿರಲು ಸಾಕು" (ಪು : 186), "ಪಂಪ ಭಾರತದಲ್ಲಿ ಸಮರಸಗೊಂಡುದು ಜನಸಾಮಾನ್ಯರೆಲ್ಲರ ಜೀವನ ಧರ್ಮ" (ಪು : 32) ಇಂಥ ಮಾತುಗಳು ಬರುತ್ತವೆ. ಇವೆಲ್ಲ ಸೂಚಿಸುವುದು ಹೆಚ್ಚು ಕಡಿಮೆ ಒಂದೇ ಅಂಶವಾಗಿದೆ. ಅದೆಂದರೆ, ಕೃತಿಯನ್ನು ಹತ್ತನೆಯ ಶತಮಾನದ ಸಾಮಾಜಿಕ ವಿವರಗಳುಳ್ಳ ಒಂದು ದಾಖಲೆಯೆಂದು ನಂಬಿರುವುದು. ಎಂದೇ ಅವರು ತಮ್ಮ ನಂಬಿಕೆಗನುಗುಣವಾದ ಕೆಲವು ವಿವರಗಳನ್ನು ಕೃತಿಯಿಂದ ತೆಗೆದಿಡುವುದನ್ನು ಕಾಣಬಹುದು. ಅವರ ಕೆಲವು ಮಾತುಗಳನ್ನಿಲ್ಲಿ ಗಮನಿಸೋಣ : "ಪಂಪ ಭಾರತದಲ್ಲಿ ಊರಿಗೆ ಪೊಳಲು, ಗ್ರಾಮ ಎಂದೂ, ಕುಟುಂಬಕ್ಕೆ ಮನೆಯೆಂದೂ ಸಂಬೋಧಿಸಲಾಗಿದೆ. ಊರ ಹೊರ ವಲಯದಲ್ಲಿ ~~ಕೆರೆಕಾಲುವೆ ಊರ ಅಗಸೆಯೆನ್ನುವುದನ್ನೇ ಅವರು~~ ಕೆರೆಕಾಲುವೆಗಳೂ ಊರ ಸುತ್ತಲೂ ಭತ್ತ ತೆಂಗುಗಳನ್ನು ಬೆಳೆಯುವ ಗದ್ದೆಗಳೂ ಇರುತ್ತಿದ್ದುವು. ನಾವು ಇಂದು ಊರ ಅಗಸೆಯೆನ್ನುವುದನ್ನೇ ಅವರು ಪೊರ ವಲಯವೆನ್ನುತ್ತಿದ್ದರು. ದೊಡ್ಡದಾದ ಊರುಗಳಿಗೆ 'ನಗರ', ಪಟ್ಟಣಗಳೆಂದೂ ಕರೆಯುತ್ತಿದ್ದರು. ಇಂಥ ಹಲವು ಗ್ರಾಮಗಳು ಸೇರಿದ ಭಾಗವನ್ನು 'ವಿಷಯ' ಅಥವಾ 'ನಾಡು' ಎಂದು ಹೇಳುತ್ತಿದ್ದರು. ಕುರುಜಾಂಗಣ ವಿಷಯವಾಗಿದ್ದುದೂ ಹಸ್ತಿನಪುರ ಪೊಳಲಾಗಿದ್ದುದೂ ಪಂಪ ಭಾರತದಿಂದ ತಿಳಿದು ಬರುತ್ತವೆ. (ಪು : 234) ಇದಲ್ಲದೆ, ರಾಜಕೀಯ ಸಂಸ್ಕೃತಿಯನ್ನು ಕುರಿತು ಚರ್ಚಿಸುತ್ತಾ, ಅರಿಕೇಸರಿಯನ್ನೇ ಅರ್ಜುನನನ್ನಾಗಿಸಿ ಪಂಪ ವಿಕ್ರಮಾರ್ಜುನ ವಿಜಯವನ್ನು ರಚಿಸಿದ. ಹೀಗಾದ ಕಾರಣ ಅರಿಕೇಸರಿಯೊಂದಿಗೆ ಅಂದಿನ ರಾಜಕೀಯಕ್ಕೆ ಸಂಬಂಧಿಸಿದ ಹಲವಾರು ಅಂಶಗಳು ಪಂಪ ಭಾರತದಲ್ಲಿ ಸೇರಿಕೊಂಡಿವೆ" ಎಂದೂ "ಸ್ವತಃ ಕವಿಯಾಗಿ ರಾಜಕೀಯ ರಂಗದ ಏಳಿಕೆ ಮಾರೆ ಮಾರೆಗಳನ್ನು ಅರಿತ ಪಂಪ ಅಂದಿನ ರಾಜಕೀಯದ ಸಮಗ್ರ

ರೂಪರೇಷೆಗಳನ್ನು ಇಲ್ಲಿ ಮಾಡಿಸಿದ್ದಾನೆ" ಎಂದೂ ಹೇಳಿ (ಪು : 122–123) ರಾಜರ ಗುಣಶೀಲಗಳು, ರಾಜ್ಯ ಚಿಹ್ನೆ — ರಾಜ ವೈಭವಗಳು, ರಾಜತಂತ್ರ, ಚತುರೋಪಾಯಗಳು, ಆಸ್ಥಾನ ವಾಸಿಗಳು, ಆಸ್ಥಾನದ ವಿವಿಧ ವಿಭಾಗಗಳು, ಶೌರ್ಯ — ವೀರರಿಗಿದ್ದ ಅಗ್ರ ಸ್ಥಾನ, ವೀರಾಲಾಪ, ಯುದ್ಧಾನಂತರದ ಹಲವು ಆಚರಣೆಗಳು ಇಂಥ ಕೆಲವು ಸಂಗತಿಗಳನ್ನು ಕುರಿತು ಚರ್ಚಿಸಿದ್ದಾರೆ. ಹಾಗೆಯೇ ಕಲಾತ್ಮಕ ಸಂಸ್ಕೃತಿಯನ್ನು ಕುರಿತು "ರಸಿಕರಾಗಿದ್ದ ಪಂಪನ ಕಾಲದ ಜನರು ಕೇವಲ ದೇಹ ಸೌಖ್ಯದಲ್ಲಿ ಮೈಮರೆಯುದೆ, ಮನಾನಂದಕ್ಕಾಗಿ, ಉದರ ಪೋಷಣೆಗಾಗಿ ವೀರಯುಗಕ್ಕೆ ಉಚಿತವಾದ ರೀತಿಯಲ್ಲಿ ಬೇಟೆ, ಯುದ್ಧ ಕಲೆ, ಇತ್ಯಾದಿಗಳು ಸಾಮಾನ್ಯವಾಗಿ ಅಂದಿನ ಎಲ್ಲರಿಗೂ ಕರಗತವಾಗಿದ್ದುವು" (ಪು : 213) ಎಂದು ಇಂಥ ಇನ್ನೂ ಕೆಲವು ನಿದರ್ಶನಗಳನ್ನು ಕೊಡುತ್ತಾರೆ.

ಇಲ್ಲಿ ದಿಬ್ಬದ ಅವರು ಅನೇಕ ತೀರ್ಮಾನ ರೂಪದ ವಿಚಾರಗಳನ್ನು ಮಂಡಿಸುತ್ತಾರೆ. ಇದಕ್ಕೆ ಮೇಲಿನ ಕೆಲವು ನಿದರ್ಶನಗಳನ್ನು ಗಮನಿಸಬಹುದು. ಇದು ಸಂಗತವೇ ಅಲ್ಲವೇ ಎಂಬುದನ್ನು ಮುಂದೆ ಗಮನಿಸೋಣ. ಇನ್ನು ಅವರು ಸಾಂಸ್ಕೃತಿಕ ವಿಶ್ಲೇಷಣೆಯಲ್ಲಿ ಗುರುತಿಸುವಂಥ ವಿವರಗಳೆಲ್ಲವೂ ಒಂದು ಸಂಸ್ಕೃತಿಯ ಮೇಲು ಸ್ತರಕ್ಕೆ ಸೇರುವಂಥವು, ಅರ್ಥಾತ್ ಭೌತ ಸಂಸ್ಕೃತಿಯ ವಿವರಗಳು. ಇಂಥವುಗಳನ್ನು ಗುರುತಿಸುವುದರ ಮೂಲಕ ಕೆಲವು ಚಾರಿತ್ರಿಕ ವಿವರಗಳ ಪುನಾರಚನೆಗೆ ನೆರವು ದೊರೆತೀತು. ಹೀಗಾಗುವಾಗ ಕೂಡ ಸಾಮಗ್ರಿಯನ್ನು ತೀರ ಎಚ್ಚರಿಕೆಯಿಂದ ಬಳಸಬೇಕಾಗುತ್ತದೆ. ಈ ಅಧ್ಯಯನದಲ್ಲಿ ಪಂಪ ಭಾರತದಲ್ಲಿ ಉಕ್ತವಾದ ಬಹು ಪಾಲೆಲ್ಲ ಪಂಪನ ಕಾಲದ ಸಂಸ್ಕೃತಿಯ ವಿವರಗಳೆಂದೇ ನಂಬಿ ಕಲೆ ಹಾಕಲಾಗಿದೆ. ಆದರೆ ಯಾವುದೇ ಸಾಹಿತ್ಯ ಕೃತಿ ಈ ನೆಲೆಯಲ್ಲಿ ಒಂದು ಸಂಸ್ಕೃತಿಯನ್ನು, ಇಡೀ ಸಮಾಜವನ್ನು,ಜೀವನ ಧರ್ಮವನ್ನು ಸಮಗ್ರವಾಗಿ ಹಿಡಿದಿಟ್ಟಿರುತ್ತದೆಯೆಂಬುದೊಂದು ಹುಸಿ ಕಲ್ಪನೆ. ಇದು,ದೊರೆತ ಕೆಲವೇ ವಿವರಗಳಿಂದ ಇಡೀ ಬದುಕನ್ನು ಕಾಣಬಯಸುವ ಪ್ರಯತ್ನದ ಫಲವಷ್ಟೇ.

ಈ ಅಧ್ಯಯನವನ್ನು ಕುರಿತು ಇನ್ನೂ ಅನೇಕ ಅಂಶಗಳ ಬಗ್ಗೆ ಪ್ರಸ್ತಾಪಿಸಬಹುದು. ಸದ್ಯ ಹಾಗೆ ಮಾಡಬೇಕಾದ ಅಗತ್ಯವಿಲ್ಲ. ಇಲ್ಲಿ ಈ ಅಧ್ಯಯನ ಪಂಪ ಭಾರತದ ಸಾಂಸ್ಕೃತಿಕ ವಿಶ್ಲೇಷಣೆಗೆ ಹಿಡಿದಿರುವ ದಾರಿ ಯಾವುದೆಂಬುದನ್ನು ಗುರುತಿಸಿಕೊಳ್ಳಲಾಗಿದೆ. ಇದುವರೆಗೆ ಪಂಪನನ್ನು ಸಾಮಾಜಿಕ ದೃಷ್ಟಿಕೋನದಿಂದ ನೋಡುತ್ತ ಬರಲಾಗಿದ್ದ ಕ್ರಮ ವಿಧಾನಕ್ಕೆ ಈ ಅಧ್ಯಯನ ಕೂಡ ಹೊರತಲ್ಲ ಎಂಬುದನ್ನು ಕೂಡ ಗುರುತಿಸಲಾಗಿದೆ. 'ಪಂಪ ಭಾರತದಲ್ಲಿ ಬರುವ ಚಾರಿತ್ರಿಕ ಅಂಶಗಳು', 'ಪಂಪ ಭಾರತದಲ್ಲಿ ಉಕ್ತವಾದ ಯುಗಧ್ವನಿ ಹಾಗೂ ಲೋಕೋಕ್ತಿಗಳು' — ಇಂಥ ಅಧ್ಯಾಯಗಳಲ್ಲೂ ಯಾವ ವಿಶೇಷಾಂಶಗಳೂ ಇಲ್ಲ. ಸದ್ಯ ಒಂದು ಅಂಶವನ್ನು ಕುರಿತು ಮಾತ್ರ ಇಲ್ಲಿ ಪ್ರಸ್ತಾಪಿಸಬಹುದಾಗಿದೆ. ಅದು ದುರ್ಯೋಧನ — ಕರ್ಣ ಮತ್ತು ಅರಿಕೇಸರಿ — ಪಂಪರ ಸ್ನೇಹದ ಸಮೀಕರಣಕ್ಕೆ ಸಂಬಂಧಿಸಿದ್ದು. "ಅರಿಕೇಸರಿಯು ಮಿತ್ರ ತಾನಾದುದರಿಂದ ಪಂಪ ದುರ್ಯೋಧನನ ಮಿತ್ರನಾದ ಕರ್ಣನಲ್ಲಿ ತನ್ನನ್ನು ಸಮೀಕರಿಸಿಕೊಂಡಿರುವನೆಂಬುದೇ ಪ್ರಸ್ತುತ ವಿಚಾರ. ಕಾವ್ಯದುದ್ದಕ್ಕೂ ಈ ನಾಲ್ಕು ಪಾತ್ರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ಕರ್ಣ — ಪಂಪರ ಅಭಿನ್ನ ಚಿತ್ರಣ ಕೇವಲ ಕಾಕತಾಳೀಯ ನ್ಯಾಯ ಮಾತ್ರವಲ್ಲ, ಅದೊಂದು ಉದ್ದೇಶಿತ ಸಮೀಕರಣ ಕ್ರಿಯೆಯೆಂದೇ" ಎಂದು (ಪು : 279) ಸ್ನೇಹವನ್ನು ಈ ಸಮೀಕರಣದ ಹಿನ್ನೆಲೆಯಲ್ಲಿ ಒಂದು ಆದರ್ಶವೆಂದೂ, ಅದೊಂದು 'ವಾತ್ಸಲ್ಯ' ವೆಂದೂ ಕರೆಯುತ್ತಾರೆ. ಎಲ್.ಬಸವರಾಜು ಅವರೇ ಈ ಮೊದಲು ಪಂಪ — ಕರ್ಣ; ಪಂಪ — ಭರತ; ಸಮೀಕರಣ ಸಾಧ್ಯತೆಗಳಿರುವುದನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ.[23] ಪಂಪನಿಗೆ ಕರ್ಣ ಪಾತ್ರದ ಮೇಲೆ ವಿಶೇಷ ಒಲವಿದೆಯೆಂಬುದನ್ನು ಮತ್ತೆ ಮತ್ತೆ ಹೇಳುತ್ತ ಬರಲಾಗಿದೆ. ದಿಬ್ಬದ ಅವರು ಈ ಅಂಶವನ್ನು ಇನ್ನಷ್ಟು

---

23. ನೋಡಿ : 'ಪಂಪ', ಪಂಪ : ಒಂದು ಅಧ್ಯಯನ, (ಸಂ) ಜಿ.ಎಸ್.ಶಿವರುದ್ರಪ್ಪ, ಬೆಂ.ವಿ.ವಿ., 1974. ಪು : 327— 334

ಎಳೆದು ದುರ್ಯೋಧನ — ಕರ್ಣ; ಅರಿಕೇಸರಿ — ಪಂಪರಲ್ಲಿ ಈ ಸ್ನೇಹದ ಆದರ್ಶವನ್ನು ಕಾಣಲು ಯತ್ನಿಸಿದ್ದಾರೆ. ಇದಕ್ಕೆ ಕಾರಣಗಳನ್ನೂ ನೀಡಿ ಸಮರ್ಥಿಸುತ್ತಾರೆ. ಈ ಸಮರ್ಥನೆಗೆ ನೀಡುವ ಕಾರಣಗಳಲ್ಲಿ ಕರ್ಣನಿಗೆ ಸಂಬಂಧಿಸಿದವೆಲ್ಲ ಕೃತಿಯ ಅಂತರ್ಗತ ವಿವರಗಳಾದರೆ, ಪಂಪನ ಸಂಬಂಧದವೆಲ್ಲ ಕಾವ್ಯದ ದೃಷ್ಟಿಯಿಂದ ಗೌಣವೆನ್ನಬಹುದಾದ, ಕವಿಯೇ ಹೇಳಿಕೊಂಡ ವಿವರಗಳೇ ಆಗಿವೆ. ಈ ಸಮೀಕರಣವಿರುವುದಕ್ಕೆ ಕೆಲವು ಸೂಚನೆಗಳು ಸಿಗಬಹುದಾದರೂ ಅದನ್ನೊಂದು ಉದ್ದೇಶಪೂರ್ವಕ ಸಮೀಕರಣವೆನ್ನಲಾಗದು. ಮೇಲಾಗಿ ಅದನ್ನೊಂದು 'ಮೌಲ್ಯ'ವೆಂದು ಸಾಧಿಸುವುದಂತೂ ತೀರ ವಿಚಿತ್ರವಾಗಿದೆ.

## 5.5 <u>ಕೆಲವು ಸಾಮಾನ್ಯ ಅಂಶಗಳು</u>

ಇದುವರೆಗೆ ಪಂಪನನ್ನು ಕುರಿತು ಸಾಮಾಜಿಕ ದೃಷ್ಟಿಯಿಂದ ನಡೆದ ಅಧ್ಯಯನಗಳನ್ನು ಗಮನಿಸಲಾಗಿದೆ. ಆ ಅಧ್ಯಯನಗಳ ಕ್ರಮ ವಿಧಾನಗಳನ್ನೂ, ಲಕ್ಷಣಗಳನ್ನೂ ಸ್ಥೂಲವಾಗಿ ಗುರುತಿಸಲಾಗಿದೆ. ಇಲ್ಲಿ ಚರ್ಚಿಸದ ಒಂದೆರಡು ಬರೆಹಗಳಿವೆಯಾದರೂ, ಅವುಗಳು ಇಲ್ಲಿ ಚರ್ಚಿಸಿದವುಗಳಿಗಿಂತ ಗಮನಾರ್ಹವಾಗಿ ಬೇರೆಯಾಗಿಲ್ಲ. ಇನ್ನು ಈ ಅಧ್ಯಯನಗಳಲ್ಲಿ ಸಾಮಾನ್ಯವಾಗಿ ಕಾಣಬರುವ ಕೆಲವಂಶಗಳನ್ನು ಮಾತ್ರ ಇಲ್ಲಿ ಗಮನಿಸಬಹುದು.

ಮೊದಲನೆಯದಾಗಿ, ಈ ಅಧ್ಯಾಯದ ಪ್ರಾರಂಭದಲ್ಲೇ ಗುರುತಿಸಿದಂತೆ, ಈ ಅಧ್ಯಯನಗಳೆಲ್ಲ ಬಹುಮಟ್ಟಿಗೆ ಕೃತಿಯಾಚೆಯ ಹೊರ ವಿವರಗಳ ನೆರವಿನಿಂದಲೇ ಪ್ರವೇಶಿಸುತ್ತವೆ. ಮತ್ತು ಈ ಹೊರ ವಿವರಗಳೇ ಕೃತಿಯ ಅಧ್ಯಯನಕ್ಕೆ ಪೂರ್ವ ಸೂಚನೆಗಳಂತೆ ಬಳಕೆಯಾಗುವುದರಿಂದ, ಕೃತಿಯ ಒಳ ವಿವರಗಳಿಗಿಂತ,

ಈ ಹೊರ ವಿವರಗಳಿಂದ ತಲುಪಿದ ತೀರ್ಮಾನಗಳೇ ಮುಖ್ಯವಾಗಿವೆ. ಇದರಿಂದ ಈ ಅಧ್ಯಯನಗಳು ಪಂಪನ ಕೃತಿಗಳನ್ನು ನೋಡಲು ಕೆಲವು ಚೌಕಟ್ಟುಗಳನ್ನು ಹಾಕಿಕೊಂಡಿವೆ. ಬಹುಪಾಲು ಅಧ್ಯಯನಕಾರರೆಲ್ಲ ಪಂಪನ "ಆದಿಪುರಾಣ ಧಾರ್ಮಿಕ ಕೃತಿಯಾದುದರಿಂದ ಅಲ್ಲಿ ಸಮಾಜ ಜೀವನ ಚಿತ್ರಣ ಅಷ್ಟಾಗಿ ಇಲ್ಲ" ಎಂಬಂಥ ನಿಲುವನ್ನು ತಾಳಿದರೆ, ಉಳಿದ ಕೆಲವರು ಅಲ್ಲಿಯೂ ಕೆಲವು ಸಾಮಾಜಿಕ ಚಿತ್ರಣಗಳಿರುವುದನ್ನು ಗುರುತಿಸುವುದರಲ್ಲಿ ತೃಪ್ತರಾಗುತ್ತಾರೆ. ಉಳಿದಂತೆ ಆದಿಪುರಾಣದ ಬಹುಪಾಲು ಅಧ್ಯಯನವೆಲ್ಲ ಅಲ್ಲಿ ಧರ್ಮ—ಕಾವ್ಯಧರ್ಮಗಳು ಹೇಗೆ ಸಮನ್ವಯಗೊಂಡಿವೆಯೆಂಬುದನ್ನು ಹೇಳಲು ಮಾತ್ರ ಮೀಸಲಾಗಿದೆ. ಈ ವ್ಯಾಖ್ಯಾನಗಳ ಒಟ್ಟು ದೃಷ್ಟಿ ಆದಿಪುರಾಣ ಧರ್ಮವನ್ನು ಕುರಿತ ಕೃತಿಯಾಗಿದ್ದರೂ ಇಲ್ಲಿ ಕಾವ್ಯ ಧರ್ಮವನ್ನೂ ಕಾಣಬಹುದು ಎಂಬುದನ್ನು ಹೇಳುವುದೇ ಆಗಿದೆ. ಇದಕ್ಕೆ ಪೂರಕವಾಗಿ ಆದಿಪುರಾಣದ ಕೆಲವು ನಿರ್ದಿಷ್ಟ ಭಾಗಗಳನ್ನು ಪದೇ ಪದೇ ಉದ್ಧರಿಸಿ, ವಿವರಿಸುತ್ತಾ ಬರಲಾಗಿದೆ. ಈ ನೆಲೆಯಲ್ಲಿ ಒಂದು ಬರಹಕ್ಕಿಂತ ಮತ್ತೊಂದು ಬರಹಕ್ಕೆ ಗಮನಾರ್ಹವಾದ ಯಾವ ವ್ಯತ್ಯಾಸವೂ ಕಾಣದಿದ್ದರೆ ಆಶ್ಚರ್ಯವಿಲ್ಲ. ಈಚೆಗೆ ಈ ಧರ್ಮ—ಕಾವ್ಯಧರ್ಮಗಳ ಪ್ರಶ್ನೆಯನ್ನು 'ಸಮನ್ವಯ'ವಲ್ಲವೆಂದೂ ಅದು 'ಮುಖಾಮುಖಿಯೆಂದೂ' ನೋಡಿದ ಪ್ರಯತ್ನವೊಂದು ನಡೆದಿದೆ.[24] ಆದಿಪುರಾಣವನ್ನು ಕೇವಲ ಜೈನ ಧರ್ಮದ ಕೈಪಿಡಿಯೆಂದು, ಧರ್ಮವನ್ನಲ್ಲದೆ, ಕಾವ್ಯಧರ್ಮವನ್ನೂ ಒಳಗೊಂಡ ಕಾವ್ಯವೆಂದು ನೋಡುವುದು ಮಾತ್ರವೇ ಮುಖ್ಯವಾಗಬೇಕಿಲ್ಲ. ಅಲ್ಲಿ ಧರ್ಮವನ್ನು ಕುರಿತಂತೆ ಇರುವ ವೈರುಧ್ಯಗಳನ್ನು, ಭೋಗದ ಆಕರ್ಷಣೆ — ನಿರಸನಗಳನ್ನು, ಭಾವಿಯ

---

24. ನಾರಾಯಣ ಕೆ.ವಿ., ಪಂಪನ ಕೃತಿ : ಕಾವ್ಯ — ಧರ್ಮ ಸಮನ್ವಯ, (ಅಣ್ಣಿಗೆರೆಯಲ್ಲಿ ಪಂಪನನ್ನು ಕುರಿತ ವಿಚಾರ ಸಂಕಿರಣದಲ್ಲಿ ಮಂಡಿತ), 1985. ಅಪ್ರಕಟಿತ.

ಬಗೆಗಿನ ಅಮಿತ ದಾಹ ಮತ್ತು ಅದರ ಬಗೆಗಿನ ನಿರ್ಮಮತೆಯನ್ನು ಗಮನಿಸಿ ಆದಿಪುರಾಣದ ಅಧ್ಯಯನ ನಡೆಯಬೇಕಾದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಆದಿಪುರಾಣವನ್ನು ಪಂಪ ಕೇವಲ ಧರ್ಮದ ಕೈಪಿಡಿಯನ್ನಾಗಿ ಮಾತ್ರ ಬರೆದಿಲ್ಲ. ಅಲ್ಲಿ ತನ್ನ ಕಾಲದ ಕೆಲವು ಸತ್ಯಗಳನ್ನು ಶೋಧಿಸುತ್ತಿದ್ದಾನೆ ಎಂದೇ ತೋರುತ್ತದೆ. ಇನ್ನು ವಿಕ್ರಮಾರ್ಜುನ ವಿಜಯವನ್ನು ನೋಡುವಾಗ ಕೂಡ ಅದನ್ನು ಒಂದು 'ವೀರ ಕಾವ್ಯ' ಎಂದೇ ನೋಡುತ್ತ ಬರಲಾಗಿದೆ. ವೀರರ ಆದರ್ಶಗಳನ್ನು, ವೀರ ಒಂದು ಮೌಲ್ಯವಾಗಿರುವುದನ್ನು ಮತ್ತೆ ಮತ್ತೆ ತೆಗೆದು ತೋರಿಸುತ್ತ ಬರಲಾಗಿದೆ. ಕಾವ್ಯೇತರವಾದ ಮೂಲಗಳಿಂದ ಪಡೆದ ವಿವರಗಳಿಗೆ ಪೂರಕವಾಗಿ ಪಂಪನಲ್ಲಿ ಕೆಲವು ವಿವರಗಳನ್ನು ಉದ್ಧರಿಸುತ್ತಾ ಈ ಅಂಶಗಳನ್ನು ಸಮರ್ಥಿಸಲಾಗಿದೆ. ಈ ಸಂದರ್ಭಗಳಲ್ಲಿ "ಒತ್ತಿ ತಮ ಟುಂಬಿನಿಂದ ರಿಪು ಭೂಜ ಸಮಾಜದ ಬೇರ್ಗಳಂ ....." (ಪಂಪ) ತುಟಿಯುಗೋಳೆಳೆ .......... ಗಂಡನಲ್ಲನೆಂತುಂ ಷಂಡಂ" (ರನ್ನ) — ಇಂಥ ಕೆಲವು ಪದ್ಯಗಳನ್ನು ಮತ್ತೆ ಮತ್ತೆ ನಿದರ್ಶನಗಳಾಗಿ ತೋರಿಸಲಾಗಿದೆ. ಆದರೆ ಇವನ್ನು ಒಂದು ಪಾತ್ರದ ಮಾತುಗಳೆಂದೂ, ಇವಕ್ಕೆ ತದ್ವಿರುದ್ಧವಾದ ಅಂಶಗಳೂ ಕಾವ್ಯದಲ್ಲಿ ದೊರೆಯುತ್ತವೆಂಬುದನ್ನೂ ನಿರ್ಲಕ್ಷಿಸಲಾಗಿದೆ. ಆದರೆ ಕುಲ ಸಂಬಂಧದ ವಿರುದ್ಧ ನೆಲೆಗಳನ್ನು ಮಾತ್ರ ನಮ್ಮ ವಿಮರ್ಶೆಗಳಲ್ಲಿ ಗುರುತಿಸುತ್ತ ಬರಲಾಗಿದೆ. ಇಲ್ಲಿ ಅದನ್ನು ವೈರುಧ್ಯವೆಂದು ಗಮನಿಸುವುದಕ್ಕಿಂತ ಹೆಚ್ಚಾಗಿ ಕುಲವನ್ನು ಕುರಿತ ಪಂಪನ ವಿಮರ್ಶೆಯೇ ಅದಾಗಿದೆಯೆಂದು ಭಾವಿಸಿದರೆ ಪ್ರಧಾನವಾಗಿದೆಯೆಂಬುದನ್ನು ಗಮನಿಸಬಹುದಾಗಿದೆ. ಯಾವುದೇ ಸಮಾಜ ವೈರುಧ್ಯಗಳಿಂದ ಕೂಡಿರಲು ಮಾತ್ರ ಸಾಧ್ಯ. ಯಾವುದೇ ಮಹತ್ವದ ಕೃತಿಯೊಂದು ಇಂಥ ವೈರುಧ್ಯಗಳನ್ನು ತನ್ನೊಳಗೆ ಹುದುಗಿಸಿಕೊಂಡಿರುತ್ತದೆ. ಒಂದು ಸಾಹಿತ್ಯ ಕೃತಿಯನ್ನು ಈ ನೆಲೆಗಳಿಂದ ಅಧ್ಯಯನ ಮಾಡದಿರುವಾಗ ಮಾತ್ರ, ಕೃತಿಯಲ್ಲಿ ಒಂದೇ ಧಾಟಿಯ ವಿವರಗಳು ಗಮನಕ್ಕೆ ಬರುತ್ತವೆ. ಮತ್ತು ಇವು ಕೃತಿಯ ಹೊರ ವಿವರಗಳಿಂದ ಪಡೆದ ತೀರ್ಮಾನಗಳಿಗೆ ಸಂವಾದಿಯೂ ಆಗಿರುತ್ತವೆ.

ಈ ಹಿನ್ನೆಲೆಯಲ್ಲೇ ಪಂಪನ ಅಧ್ಯಯನಕ್ಕೆ ಸಂಬಂಧಿಸಿದ ಇನ್ನೊಂದು ಅಂಶವನ್ನು ಗಮನಿಸಬೇಕು. ಅದು ಪಂಪನ ಪಾತ್ರಗಳಿಗೆ ಸಂಬಂಧಿಸಿದ್ದಾಗಿದೆ. ಈ ಕುರಿತ ಎಲ್ಲ ಚರ್ಚೆಗಳಿಗೂ ಒಂದಿಲ್ಲೊಂದು ರೀತಿಯಲ್ಲಿ ಪಂಪನ "ಚಲದೊಳ್ ದುರ್ಯೋಧನಂ .........." ಎಂಬ ಪ್ರಸಿದ್ಧ ಪದ್ಯವೇ ಪ್ರೇರಕ ನೆಲೆಯಾಗಿದೆಯೆಂದು ಹೇಳಬಹುದು. ಈ ಪದ್ಯದ ನೆಲೆಯನ್ನಾಧರಿಸಿದ ಚರ್ಚೆಗಳಲ್ಲಿ ಕೆಲವು ಆ ಪದ್ಯವನ್ನು ಮಾತ್ರ ಕುರಿತಿದ್ದರೆ, ಹಲವು ಈ ನೆಲೆಯಿಂದ ಪಂಪನ ಕೆಲವು ಮುಖ್ಯ ಪಾತ್ರಗಳ ಪರಿಶೀಲನೆಗೆ ತೊಡಗಿವೆ. ಈ ಪರಿಶೀಲನೆಯ ಮಧ್ಯೆ ಪದ್ಯವನ್ನು ಬಗೆ ಬಗೆಯಾಗಿ ವ್ಯಾಖ್ಯಾನಿಸಲಾಗಿರುವುದಲ್ಲದೆ ಕೆಲವು ಲೋಪಗಳನ್ನೂ ಗುರುತಿಸಲಾಗಿದೆ. ಅಲ್ಲಿ ಚಲ, ನನ್ನಿ, ಸಾಹಸ, ಇತ್ಯಾದಿಗಳ ಜೊತೆಗೆ ಒಂದೊಂದು ಪಾತ್ರದ ಹೆಸರು ಬಂದದ್ದನ್ನು ಗಮನಿಸಿ, ಅವು ಆಯಾ ಪಾತ್ರದ 'ಗುಣಶೀಲ'ಗಳೆಂದು, ಆ ಪದ್ಯ 'ಮೌಲ್ಯ ಶ್ರೇಣಿ'ಯನ್ನು ಸೂಚಿಸುತ್ತದೆಂದು, ಪಂಪ ತನ್ನ ಪಾತ್ರಗಳನ್ನು ಕುರಿತು ತಾನೇ ವಿಮರ್ಶಿಸಿದ್ದಾನೆಂದು ವಿವರಿಸಲಾಗಿದೆ. ಕೃಷ್ಣನ ಹೆಸರು ಈ ಪದ್ಯದಲ್ಲಿ ಇಲ್ಲದ್ದನ್ನು, ದುರ್ಯೋಧನನ ಹೆಸರು ಲೋಕಪೂಜ್ಯರನ್ನು ಹೇಳುವ ಈ ಪದ್ಯದಲ್ಲಿ ಮೊದಲು ಬಂದದ್ದು — ಇವನ್ನು ಕುರಿತು ಕೆಲವು ವಾಗ್ವಾದಗಳೂ ನಡೆದಿವೆ. ಈಚೆಗೆ ಚಿದಾನಂದ ಮೂರ್ತಿಯವರು "ಪಂಪ ಅದೊಂದು ಪದ್ಯವನ್ನು ಬರೆದು ಹೆಚ್ಚಿನದನ್ನು ಸಾಧಿಸಲಿಲ್ಲ; ಮತ್ತೂ ಸ್ಪಷ್ಟವಾಗಿ ಕೆಲವು ಪಾತ್ರಗಳನ್ನು ಇಡಿಯಾಗಿ ನೋಡಲು ಅಡ್ಡಿಯನ್ನೂ ಮಾಡಿದ್ದಾನೆ" ಎಂದಿದ್ದಾರೆ.[25] ಶಿವರುದ್ರಪ್ಪನವರು ಈ ಪದ್ಯವನ್ನು ಉದ್ದೇಶಪೂರ್ವಕವೆನ್ನುವುದಕ್ಕಿಂತ ಪ್ರಾಸಂಗಿಕವೆಂದೇ ತೋರುತ್ತದೆ ಎಂದಿದ್ದಾರೆ.[26]

---

25. ನೋಡಿ : 'ಪಂಪನ ಪಾತ್ರ ಸೃಷ್ಟಿಯ ಬಗ್ಗೆ ಚಿಂತನೆಗಳು', ಸಾಹಿತ್ಯ ವಿಮರ್ಶೆ — 1981, (ಸಂ) ಕೆ.ವಿ.ನಾರಾಯಣ, (ಸಾಹಿತ್ಯ ಅಕಾಡೆಮಿ), ಬೆಂಗಳೂರು, 1983. ಪು : 74—75
26. ನೋಡಿ : 'ವಿಕ್ರಮಾರ್ಜುನ ವಿಜಯ : ಒಂದು ಸಮೀಕ್ಷೆ', ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ — ಸಂಪುಟ 2, (ಸಂ) ಜಿ.ಎಸ್.ಶಿವರುದ್ರಪ್ಪ, ಬೆಂ.ವಿ.ವಿ., 1975. ಪು : 91

ಸದ್ಯ ಈ ಅಂಶಗಳನ್ನೆಲ್ಲ ಬದಿಗಿರಿಸಿ ನೇರ ವಿಷಯಕ್ಕೇ ಬರಬಹುದು. ಈ ಪದ್ಯದ ನೆಲೆಯಿಂದ ಹೊರಟ ಬಹುಪಾಲು ಚರ್ಚೆಗಳೆಲ್ಲ ಪಂಪನ ಪಾತ್ರಗಳನ್ನು ಏಕಮುಖವಾಗಿ ನೋಡಲು ಪ್ರಯತ್ನಿಸಿವೆ. ಕೆಲವೆಡೆ ಹೀಗೆ ನೋಡಲು ಸಾಧ್ಯವಾಗುತ್ತಿಲ್ಲವೆಂಬುದನ್ನೂ ಗುರುತಿಸಲಾಗಿದೆ. ಸದ್ಯ ಈ ಪದ್ಯವನ್ನು ಪಂಪ ಪ್ರಾಸಂಗಿಕವಾಗಿ ಹೇಳಿದ್ದೆಂದೇ ಭಾವಿಸುವುದು ಯುಕ್ತವಾಗಿದೆ. ಏಕೆಂದರೆ ಅಲ್ಲಿ ಕಾಣಿಸಿದ ಛಲ, ನನ್ನಿ, ಗಂಡು, ಸಾಹಸದ ಜೊತೆಗಿರಿಸಿದ ಪಾತ್ರಗಳಲ್ಲಿ ಆ ಒಂದೊಂದು ಅಂಶವನ್ನು ಮಾತ್ರವೇ ಕಾಣಲಾಗದು. ಪಂಪನ ಬಹುಪಾಲು ಪಾತ್ರಗಳಲ್ಲಿ ಒಂದು ಗುಣ = ಒಂದು ಪಾತ್ರ ಎಂಬಂಥ ನಾತತ್ಯವನ್ನು ಮೊದಲಿಂದ ಕೊನೆಯವರೆಗೂ ಗುರುತಿಸಲಾಗದು. ಹಿಂದೆ ಗಮನಿಸಿದಂತೆ ಒಂದೇ ಬಗೆಯ ವರ್ತನೆ ಅವುಗಳಲ್ಲಿಲ್ಲ. ತನ್ನ ಬಗ್ಗೆ ವೀರಾವೇಶದಿಂದ ಹೊಗಳಿಕೊಂಡ ಪಾತ್ರ ನಿಜವಾಗಿ ವೀರಾವೇಶವನ್ನು ಪ್ರಕಟಿಸುವಾಗ ಕುಟಿಲ ಮಾರ್ಗವನ್ನೇ ಹಿಡಿಯಬಹುದು; ಕೊಟ್ಟ ಮಾತಿಗೆ ತಪ್ಪದವನು ತಿಳಿದೂ ತಿಳಿದೂ ತಪ್ಪುತ್ತಾನೆ; ರಾಜನೇ ಆದವನು ರಾಜನ ಅವಗುಣಗಳನ್ನು ಟೀಕಿಸುತ್ತಾನೆ. ಹೀಗೆ ಪಂಪನ ಹಲವು ಪಾತ್ರಗಳು 'ಹೀಗೇ ಸರಿ' ಎಂದು ಒಂದು ನಿರ್ದಿಷ್ಟ ಅಂಶ – ಲಕ್ಷಣದಿಂದ ಅಳೆಯಲು ಬಾರವು. ಆದರೆ ಕಾಲ ಬಂದಂತೆ ತೋರಿಕೊಳ್ಳುವ ಗುಣದವು, ಆ ಪಾತ್ರಗಳೆಂದರೆ ಅದು ಸರಳ ವಿವರಣೆಯಾದೀತು. ಸಮಕಾಲೀನ ಸತ್ಯಗಳ ಶೋಧನೆಯ ಪ್ರಕ್ರಿಯೆಯ ನೆಲೆಯಲ್ಲೇ ಈ ಅಂಶವನ್ನು ನೋಡಬೇಕಾಗಿದೆ. ಹೀಗೆ ನೋಡುವಾಗ ಭಾಷೆಯ ಬಳಕೆಯ ನೆಲೆಗಳನ್ನು (ಕಾಕು, ಶೈಲಿಕ ಸ್ತರಗಳು – ಇತ್ಯಾದಿ) ಸೂಕ್ಷ್ಮ ವಿಶ್ಲೇಷಣೆಗೆ ಒಳಗು ಮಾಡಬೇಕಾಗಿರುವುದರ ಅಗತ್ಯವನ್ನಿಲ್ಲಿ ಮರೆಯಲಾಗದು.

ಪಂಪ ತನ್ನ ಕಾಲದ 'ಸಮಸ್ತವನ್ನೂ ಅಭಿವ್ಯಕ್ತಿಸಿದ್ದಾನೆ', ಅವನ ಕಾವ್ಯದಲ್ಲಿ ಆ ಕಾಲದ ಯುಗಧರ್ಮ ಇಡಿಯಾಗಿ ಪ್ರಕಟವಾಗಿದೆ ಎಂಬರ್ಥದ ಮಾತುಗಳನ್ನು ನಮ್ಮ ವಿಮರ್ಶೆಗಳಲ್ಲಿ ಪದೇ ಪದೇ ಬಳಸಲಾಗಿದೆ. ಹೀಗೆ ನಂಬಿದ್ದರ ಪರಿಣಾಮವಾಗಿ ಕೃತಿಯು ಒಂದು ಕಾಲದ ಸಾಮಾಜಿಕ ವಿವರಗಳ ದಾಖಲೆಯಂತೆ

ಭಾವಿಸಲಾಯಿತು. ಹೀಗಾಗಿ ಸಮಕಾಲೀನ ಸಮಾಜದವೆಂದು ಹಲಕೆಲವು ಬಿಡಿ ವಿವರಗಳನ್ನು ತೆಗೆದು ತೋರಿಸುವ ರೂಢಿ ಸಹಜವಾಗಿ ಬೆಳೆದಂತಿದೆ. ವಾಸ್ತವವಾಗಿ ಒಂದು ಸಾಹಿತ್ಯ ಕೃತಿ ಸಮಾಜದ ತದ್ವತ್ ಚಿತ್ರಣವಾಗಿರುತ್ತದೆಂಬುದು ಅಸಂಭವ. ಬಿಡಿ ವಿವರಗಳನ್ನು ಸಮಕಾಲೀನ ಅಂಶಗಳೆಂದು ತೆಗೆದು ತೋರಿಸುವ ಪರಿಪಾಟಿಯೇನೋ ಬೆಳೆದು ಬಂದಿದೆ. ಹೀಗೆ ತೋರಿಸಲಾಗುವ ವಿವರಗಳು ಒಂದಲ್ಲೊಂದು ರೀತಿಯಲ್ಲಿ ಭಾಷ ಸಂಸ್ಕೃತಿಯ ವಿವರಗಳೇ ಆದದ್ದರಿಂದ ಇದು ಸಂಪೂರ್ಣ ನಿರುಪಯುಕ್ತವೇನೂ ಅಲ್ಲ. ಆದರೆ ಸಾಮಾಜಿಕ ಅಧ್ಯಯನವೆಂಬುದು ವಾಸ್ತವವಾಗಿ ಇದರಾಚೆಗೆ ಹೋಗಬೇಕಾಗಿದೆ. ಎಂದರೆ ಹೊರ ವಿವರಗಳನ್ನು ಅನ್ವಯಿಸಿ ನಡೆಸುವ ಅಧ್ಯಯನ ವಿಧಾನವನ್ನು ನಿರ್ಲಕ್ಷಿಸಿ, ಕೃತಿಯ ಒಳ ವಿವರಗಳನ್ನೇ ಆಧರಿಸಿ ನಡೆಯುವ ಅಧ್ಯಯನ ಇದಾಗಬೇಕಿದೆ. ಈ ಒಳ ವಿವರಗಳಿಂದಲೇ ಗ್ರಹಿಕೆಗೆ ಬರುವ ಸಂಸ್ಕೃತಿಯ ಸ್ವರೂಪವನ್ನು, ಸಾಮಾಜಿಕ ನೆಲೆಗಳನ್ನು ಕಂಡುಕೊಳ್ಳುವತ್ತ ನಮ್ಮ ಅಧ್ಯಯನ ಮುಂದಾಗಬೇಕಿದೆ.

ಈ ಹಿನ್ನೆಲೆಯಲ್ಲಿ ಸುಬ್ಬಣ್ಣನವರು ಹೇಳುವ ಕೆಲವು ಅಂಶಗಳನ್ನು ಗಮನಿಸಬಹುದು :[27] "ಪಂಪ ಹತ್ತನೇ ಶತಮಾನದ ಭಾರತಕ್ಕೆ ಮಹಾಭಾರತದ ಪ್ರಮೇಯವನ್ನ ಕೊಟ್ಟುಕೊಂಡು ನೋಡಿದ; ಆ — ಈ ಭಾರತದ ಕಥೆಗಳು ಸಂಘಟ್ಟಿಸೋ ಹಾಗೆ ಮಾಡಿ, ಆ ಸಂಘಟ್ಟನೆಯ ಮಿಂಚಿನಲ್ಲಿ ತನ್ನದೇ ಅನುಭವಗಳನ್ನ ತನ್ನ ಸುತ್ತಣ ಸತ್ಯದ ವಿನ್ಯಾಸ ಕ್ರಮವನ್ನ ಶೋಧಿಸಿಕೊಳ್ಳೋಕೆ ಹೆಣಗಿದ ....."

---

27. 'ಪಂಪನ ಕವಿತೆ : ಅನುಸಂಧಾನಕ್ಕೆ ಹೊಸ ಮಾರ್ಗ', ಪಂಪ : ಒಂದು ಅಧ್ಯಯನ, (ಸಂ) ಜಿ.ಎಸ್.ಶಿವರುದ್ರಪ್ಪ, ಬೆಂ.ವಿ.ವಿ., 1974. ಪು : 314

"ಪುರಾಣ ಪ್ರಕೃತಗಳ ಸಮೀಕರಣದಲ್ಲಿ, ಅದರ ಸಂಘಟ್ಟನೆಯಿಂ ವರ್ತಮಾನದ ಸಂಕೀರ್ಣತನ ಹೊಳೆಸಿಕೊಳ್ಳುವ" ಪ್ರಯತ್ನ ಪಂಪನದು. ಈ ಅಂಶಗಳನ್ನು ನಮ್ಮ ಅಧ್ಯಯನಗಳಲ್ಲಿ ಗಂಭೀರವಾಗಿ ತೆಗೆದುಕೊಳ್ಳಬೇಕಾದ ಅಗತ್ಯವಿದೆ. ಇದರಿಂದ ಪಂಪನನ್ನು ಕುರಿತ ಸಾಮಾಜಿಕ ಅಧ್ಯಯನ ಹೊಸ ಆಯಾಮವನ್ನು ಪಡೆಯಬಹುದೆಂದು ತೋರುತ್ತದೆ.

# ಅಧ್ಯಾಯ : ಆರು

## ತೌಲನಿಕ ದೃಷ್ಟಿಕೋನ

ನಮ್ಮ ಇಂದಿನ ವಿಮರ್ಶಾ ಪರಿಸರದಲ್ಲಿ ಕಾಣಬರುತ್ತಿರುವ ಸಾಹಿತ್ಯಾಧ್ಯಯನದ ವಿಧಾನಗಳಲ್ಲಿ ತೌಲನಿಕ ವಿಧಾನವೂ ಒಂದಾಗಿದೆ. ತೀರ ಸ್ಥೂಲವಾದ ಅರ್ಥದಲ್ಲಿ, ಎರಡು ಅಥವಾ ಹೆಚ್ಚು ಸಾಹಿತ್ಯ ಕೃತಿಗಳ, ಸಾಹಿತ್ಯ ಧಾರೆಗಳ ನಡುವಣ ಸಂಬಂಧಾಂತರಗಳನ್ನು ಕುರಿತ ಅಧ್ಯಯನವನ್ನು 'ತೌಲನ ಕ್ರಮ' ವೆಂದು ಕರೆಯಬಹುದು. ಈ ಸ್ಥೂಲವಾದ ಅರ್ಥದ, ಎರಡು ಅಥವಾ ಹೆಚ್ಚು ಸಾಹಿತ್ಯ ಕೃತಿಗಳ ನಡುವಣ ಸಾಮ್ಯತೆ—ಭಿನ್ನತೆಗಳನ್ನು ಗುರುತಿಸುವ ಮಟ್ಟದ ತೌಲನಿಕ ಅಧ್ಯಯನ ಕ್ರಮವೊಂದು ನಮ್ಮಲ್ಲಿ ಪ್ರವೃತ್ತವಾಗಿದೆಯೆನ್ನಬಹುದು. ಆದರೆ ಈ ಅಧ್ಯಯನ ವಿಧಾನವು ತನ್ನ ಉದ್ದೇಶ ಹಾಗೂ ತಾನು ಅನುಸರಿಸುವ ಕ್ರಮ ವಿಧಾನಗಳ ದೃಷ್ಟಿಯಿಂದ ಒಂದು ಸ್ಪಷ್ಟ ರೂಪವನ್ನೇನೂ ಪಡೆದುಕೊಂಡಿರುವಂತೆ ಕಾಣದು. ಸಾಹಿತ್ಯ ಮತ್ತು ಸಮಾಜದ ನಡುವಣ ಸಂಬಂಧವನ್ನು ಕುರಿತ ವಿಶ್ಲೇಷಣಾ ವಿಧಾನದಂತೆ, ಇದು ಇಂದಿನ ವಿಮರ್ಶೆಯ ಒಂದು ಮುಖ್ಯ 'ತಂತ್ರ' ಕೂಡ ಆಗಿರುವಂತಿಲ್ಲ.

ಹಾಗೆ ನೋಡಿದರೆ ಈ ತೌಲನಿಕ ಅಧ್ಯಯನದ ಆಸಕ್ತಿ ಹೆಚ್ಚಾಗಿ ಕಾಣಬರುತ್ತಿರುವುದು ಆಧುನಿಕ ಸಾಹಿತ್ಯ ಕೃತಿಗಳಿಗಿಂತ ಪ್ರಾಚೀನ ಸಾಹಿತ್ಯ ಕೃತಿಗಳನ್ನು ಕುರಿತಂತೆಯೇ. ಇದರ ಹಿಂದಿರಬಹುದಾದ ಕಾರಣವನ್ನು ಇಂಥದೇ ಎಂದು ಹೇಳಲಾಗದಿದ್ದರೂ ಒಂದು ಅಂಶ ಮಾತ್ರ ಸ್ಪಷ್ಟ. ಅದೆಂದರೆ, ಪ್ರಾಚೀನ ಕೃತಿಗಳ ವಸ್ತುವಿಗೆ ಸಂಬಂಧಿಸಿದುದು. ಬಹುಪಾಲು ತೌಲನಿಕ ಅಧ್ಯಯನಗಳು ಸಾಹಿತ್ಯ ಕೃತಿಗಳ ವಸ್ತುವನ್ನೇ ಕುರಿತು ಚರ್ಚಿಸಿರುವುದೂ ಈ ಅಂಶವನ್ನೇ ಸಮರ್ಥಿಸುತ್ತದೆ. ಬಹಳಷ್ಟು ಪ್ರಾಚೀನ ಕನ್ನಡ ಕೃತಿಗಳಲ್ಲಿ, ಸಂಸ್ಕೃತದ ರಾಮಾಯಣ, ಮಹಾಭಾರತ ಮತ್ತಿತರ ಪುರಾಣ ಕಥೆಗಳ ವಸ್ತುಗಳೇ

ಬಳಕೆಯಾಗಿವೆಯೆಂಬುದು ಸ್ಪಷ್ಟವಿರುವ ಸಂಗತಿ. ಹೀಗಾಗಿ ಆ ಸಂಸ್ಕೃತ ಸಾಹಿತ್ಯದಲ್ಲಿನ ಕಥಾರೂಪಗಳನ್ನೇ ನಮ್ಮ ಕವಿಗಳು ಹೇಗೆಲ್ಲ ಬಳಸಿಕೊಂಡಿದ್ದಾರೆ? ಯಾವ ಮಾರ್ಪಾಟುಗಳನ್ನು ಮಾಡಿಕೊಂಡಿದ್ದಾರೆ? ಯಾವ ದೃಷ್ಟಿಯನ್ನು ತಾಳಿದ್ದಾರೆ? ಎಂಬಂಥ ಪ್ರಶ್ನೆಗಳು ಬಹುಮಟ್ಟಿನ ತೌಲನಿಕ ಅಧ್ಯಯನಗಳ ಹಿಂದಿರುವ ಪ್ರೇರಣೆಗಳಂತಿವೆ. ಈ ಹಿನ್ನೆಲೆಯಲ್ಲಿ "ಕನ್ನಡ ಸಾಹಿತ್ಯಕ್ಕೆ ಸಂಸ್ಕೃತ ಸಾಹಿತ್ಯವೇ ಪ್ರೇರಕ, ಪೋಷಕ ಮತ್ತು ಗುರು" ಎಂಬಂಥ ಅಭಿಪ್ರಾಯಕ್ಕೆ[1] ಕೆಲವೇಳೆ ಸ್ವಲ್ಪ ಹೆಚ್ಚೇ ಮಾನ್ಯತೆ ದೊರೆತಿರುವುದನ್ನು ಗಮನಿಸಬಹುದು. ಕನ್ನಡ ಸಾಹಿತ್ಯವನ್ನು (ಕನಿಷ್ಠ ಸಂಸ್ಕೃತ ಕೃತಿಗಳ ವಸ್ತುವನ್ನೇ ಬಳಸಿದ ಕನ್ನಡ ಕೃತಿಗಳನ್ನು) ಸಂಸ್ಕೃತದ ಪಡಿಯಚ್ಚು ಮಾತ್ರ ಎಂದು ನಂಬಿದುದು ಈ ಬಗೆಯ ಮಾನ್ಯತೆಗೆ ಕಾರಣವಿದ್ದೀತು. ಮೇಲಿನ ಅಭಿಪ್ರಾಯದಲ್ಲಿರುವ ಆಂಶಿಕ ಸತ್ಯವನ್ನು ನಿರಾಕರಿಸಲಾಗದಾದರೂ ಕನ್ನಡ ಸಾಹಿತ್ಯ ಪರಂಪರೆಯು ಕಾಯ್ದುಕೊಂಡು ಬಂದಿರುವ 'ತನ್ನ ತನ' ವನ್ನು ಕೂಡ ಗಮನಿಸಬೇಕಾಗುತ್ತದೆ. ನಮ್ಮ ಬಹುತೇಕ ವಿಮರ್ಶಕರು ಈ ನಂಬಿಕೆಯನ್ನು ಹೊಂದಿದವರೇ ಆಗಿದ್ದಾರೆ.

## 6.1 ಪಂಪನನ್ನು ಕುರಿತ ತೌಲನಿಕ ಅಧ್ಯಯನಗಳ ಸ್ವರೂಪ

ಬಹುತೇಕ ತೌಲನಿಕ ಅಧ್ಯಯನಗಳೆಲ್ಲ ಪಂಪನ ಕೃತಿಗಳನ್ನು ಸಂಸ್ಕೃತದ ಕಥಾ ಚೌಕಟ್ಟಿನ ಹಿನ್ನೆಲೆಯಲ್ಲೇ ಪರಿಶೀಲಿಸಿವೆ. ಕೆಲವೇ ಅಪವಾದಗಳನ್ನುಳಿದು ಉಳಿದೆಲ್ಲ ಪ್ರಯತ್ನಗಳೆಲ್ಲಾ ವ್ಯಾಸಭಾರತದ, ಜಿನಸೇನರ ಪೂರ್ವಪುರಾಣದ

---

1. ಶ್ರೀಕಂಠಯ್ಯ, ಬಿ.ಎಂ., ಕನ್ನಡ ಕೈಪಿಡಿ — ಸಂಪುಟ 2, ಮೈಸೂರು, 1947. ಪು: 472.

ವಸ್ತು ಪಂಪನಲ್ಲಿ ಹೇಗೆ ವಿನ್ಯಾಸಗೊಂಡಿದೆಯೆಂಬುದನ್ನೇ ಮುಖ್ಯವಾಗಿ ಗಮನಿಸಲಾಗಿದೆ. ಆದರೆ ಹೀಗೆ ಗಮನಿಸುವಾಗ ಕಥಾ ಸರಣಿಯಲ್ಲಿರುವ ಸಮಾನಾಂಶಗಳನ್ನೂ ಭಿನ್ನಾಂಶಗಳನ್ನೂ ತೋರಿಸುವ ಆಸಕ್ತಿಯೇ ಪ್ರಮುಖವಾಗಿದೆ. ಮತ್ತು ಇಲ್ಲೆಲ್ಲ 'ಅಷ್ಟು ವಿಸ್ತಾರವಾದ ವಸ್ತುವನ್ನು ಸಂಗ್ರಹಿಸುವ ಪಂಪನ ಸಂಗ್ರಹ ಗುಣವು ಮೆಚ್ಚತಕ್ಕದ್ದು', 'ಮೂಲದಲ್ಲಿ ನೀರಸವಾಗಿರುವುದನ್ನು ರಸಯುಕ್ತವಾಗುವಂತೆ ಮಾಡಿದ್ದಾನೆ' ಎಂಬಂಥ ಮಾತುಗಳು ಮತ್ತೆ ಮತ್ತೆ ಪುನರುಕ್ತವಾಗಿವೆ. ವಿಕ್ರಮಾರ್ಜುನ ವಿಜಯವನ್ನು ಕುರಿತು ವ್ಯಾಸ ಭಾರತದ ಹಿನ್ನೆಲೆಯಲ್ಲಿ ಮಾತ್ರವಲ್ಲದೆ, ರನ್ನ–ಕುಮಾರ ವ್ಯಾಸರ ಕೃತಿಗಳ ಜೊತೆಗಿರಿಸಿ ಕೂಡ ಕೆಲವು ತೌಲನಿಕ ಪರಿಶೀಲನೆಗಳು ನಡೆದಿವೆ. ಈ ಎಲ್ಲ ಪರಿಶೀಲನೆಗಳೂ ಹೆಚ್ಚು ಕಡಿಮೆ ಒಂದೇ ಧಾಟಿಯನ್ನು ಹಿಡಿದಂತೆ ಕಾಣುತ್ತವೆ. ವಿಕ್ರಮಾರ್ಜುನ ವಿಜಯದ ಕಥಾ ಸರಣಿಯಲ್ಲಿರುವ ವ್ಯತ್ಯಾಸಗಳಿಗೆಲ್ಲ ಅರಿಕೇಸರಿಯನ್ನು ಅರ್ಜುನನೊಂದಿಗೆ ಹೋಲಿಸಿದ್ದರ ಪರಿಣಾಮವೇ ಮುಖ್ಯ ಕಾರಣವೆನ್ನಲಾಗಿದೆ. ಈ ಅಂಶವನ್ನು ಬಿಟ್ಟರೆ, ಪಂಪನ 'ಹಿತಮಿತ ಮೃದು ವಚನ' ಗುಣವನ್ನು ಅರ್ಥಾತ್ ಸಂಗ್ರಹ ಗುಣವನ್ನು, ಅವನು ನಂಬಿದನೆಂದು ಹೇಳಲಾದ ಧರ್ಮವನ್ನು ಇಲ್ಲವೆ ಅವನ 'ರಸಿಕತೆ'ಯನ್ನು ಕಾರಣಗಳಾಗಿ ಹೇಳಲಾಗಿದೆ. ಆದಿಪುರಾಣದ ಕಥಾ ಸರಣಿಯಲ್ಲಿರುವ ಕೆಲವು ಭಿನ್ನಾಂಶಗಳಿಗೂ ಇಂಥ ಕಾರಣಗಳ ಹಿನ್ನೆಲೆಯನ್ನೇ ಹುಡುಕಲಾಗಿದೆಯಾದರೂ ವಿಕ್ರಮಾರ್ಜುನ ವಿಜಯದ ರಚನೆಯಲ್ಲಿ ತೋರಿಸಲು ಸಾಧ್ಯವಾದಷ್ಟು ಸ್ವಾತಂತ್ರ್ಯ ಆದಿಪುರಾಣದ ರಚನೆಯಲ್ಲಿ ಸಾಧ್ಯವಾಗಲಿಲ್ಲವೆಂದೂ ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ತೀ.ನಂ.ಶ್ರೀ. ಅವರು ಹೇಳುವ ಮಾತುಗಳನ್ನು[2] ಇಲ್ಲಿ ಗಮನಿಸಬಹುದು : "ವಿಕ್ರಮಾರ್ಜುನ ವಿಜಯವು ಕನ್ನಡದ ಕನ್ನಡಿಯಲ್ಲಿ ಚಿಕ್ಕದಾಗಿ ಬಿದ್ದ ವ್ಯಾಸ

---

2. ನೋಡಿ : ಪಂಪ, ಮೈ.ವಿ.ವಿ. (ಪ್ರ.ಪು.ಮಾ.), 1965 (5ನೇ ಮುದ್ರಣ). ಪು : 14, 38.

ಭಾರತದ ನೆರಳಲ್ಲ; ಅಲ್ಲಿಯ ಚಿನ್ನವನ್ನು ಶೋಧಿಸಿ ತಂದು, ಹೊಸದಾಗಿ ಎರಕ ಹೊಯ್ದು ಒಪ್ಪವಿಟ್ಟು ನಿರ್ಮಿಸಿದ ನೂತನ ಮೂರ್ತಿ ಅದು." "ಆದಿಪುರಾಣದ ರಚನೆಯಲ್ಲಿ ಪಂಪನು ಕೈಕಟ್ಟಿಸಿಕೊಂಡ ಪಟ್ಟುಗಳನ್ನು ತೋರಿಸುವ ಗರಡಿಯಾಳಿನಂತೆ ತೋರುತ್ತಾನೆ." ಈ ಮಾತುಗಳು ಪಂಪನನ್ನು ಕುರಿತ ಅಧ್ಯಯನಗಳ ಮೇಲೆ ಒಂದಲ್ಲೊಂದು ರೀತಿಯಲ್ಲಿ ತಮ್ಮ ಪ್ರಭಾವವನ್ನು ಬೀರಿವೆಯೆನ್ನಬಹುದು. ಬಹುತೇಕ ಅಧ್ಯಯನಗಳೆಲ್ಲ ಈ ಮಾತುಗಳ ಸಮರ್ಥನೆಯ ಧೋರಣೆಯನ್ನೇ ಹೊಂದಿರುವುದನ್ನು ನೋಡಿದರೆ ಈ ಅಂಶ ಸ್ಪಷ್ಟವಾಗುತ್ತದೆ.

ಪಂಪನ ಕೃತಿಗಳನ್ನು ವ್ಯಾಸ ಭಾರತ, ಜಿನಸೇನರ ಪೂರ್ವ ಪುರಾಣ, ಕನ್ನಡದಲ್ಲಿ ರನ್ನ, ಕುಮಾರವ್ಯಾಸರ ಕೃತಿಗಳೊಂದಿಗೆ ಹೋಲಿಸಿದ ಹಲವು ತೌಲನಿಕ ಪರಿಶೀಲನೆಗಳು ಇದುವರೆಗೆ ನಡೆದಿವೆ. ಈ ಹಿಂದೆಯೇ ಗುರುತಿಸಿದಂತೆ, ಈ ಪರಿಶೀಲನೆಗಳೆಲ್ಲ ಆಯಾ ಕೃತಿಗಳ ನಡುವೆ ಇರುವ ಸಮಾನತೆ–ಭಿನ್ನತೆಗಳನ್ನು ಮಾತ್ರವೇ ಮುಖ್ಯವಾಗಿ ಗಮನಿಸುತ್ತಾ ಬಂದಿವೆ. ಹೀಗೆ ಗಮನಿಸುವಾಗ ಕೆಲವು ನಿರ್ದಿಷ್ಟ ಪ್ರಸಂಗಗಳು, ಸನ್ನಿವೇಶಗಳು, ಕಾವ್ಯ ಭಾಗಗಳು ಮತ್ತೆ ಮತ್ತೆ ಉಧೃತವಾಗುತ್ತಾ ಬಂದಿವೆ. ಇಂಥ ಭಾಗಗಳಲ್ಲಿ ಕೆಲವಾದರೂ ಕಾವ್ಯದಲ್ಲಿಯೇ ವಿಶೇಷ ಒತ್ತನ್ನು ಪಡೆದಿರುವಂಥವು ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಇಂಥ ವಿಶೇಷ ಒತ್ತನ್ನು ಪಡೆದಿರುವ ಕಾವ್ಯ ಭಾಗಗಳಿಂದ ಕೃತಿಯ ಕಥೆಯಲ್ಲಿ ಏನನ್ನು ಗ್ರಹಿಸಲು ಸಾಧ್ಯವಾಗುತ್ತದೆ ಎಂಬುದಕ್ಕಿಂತ, ಅವನ್ನು ಕಾವ್ಯೇತರವಾದ ಅಥವಾ ಕಾವ್ಯದ ದೃಷ್ಟಿಯಿಂದ ಗೌಣವೆನ್ನಬಹುದಾದ ವಿವರಗಳೊಂದಿಗೆ ಸಂಬಂಧಿಸಿ ನೋಡುವುದೇ ಮುಖ್ಯವಾಗಿದೆ. ಇದರಿಂದಲೇ ಬನವಾಸಿಯ ವರ್ಣನೆ ಪಂಪನ ದೇಶಾಭಿಮಾನದ ತುಡಿತದ ದ್ಯೋತಕವಾಗುತ್ತದೆ; ವಂಶ ಪವಿತ್ರ ಅವನ ಜೈನ ದೃಷ್ಟಿಯ ಇಲ್ಲವೆ ಅರಿಕೇಸರಿಯ ಪಕ್ಷಪಾತದ ಪರಿಣಾಮವಾಗುತ್ತದೆ.

ವಾಸ್ತವವಾಗಿ ಕಥಾ ಚೌಕಟ್ಟಿನಲ್ಲಿ ಕಾಣಬರುವ ಮಾರ್ಪಾಟುಗಳು, ವ್ಯತ್ಯಾಸಗಳು ಕೃತಿಯಲ್ಲಿ ಸ್ಥಾಪಿಸುವ ಅಂಶ ಅಮುಖ್ಯವಾಗಿದೆ. ಒಂದು ಸಾಹಿತ್ಯ ಪರಂಪರೆಯಲ್ಲಿ ಒಂದೇ ವಸ್ತು ಮತ್ತೆ ಮತ್ತೆ ಸಾಹಿತ್ಯ ಕೃತಿಗಳಲ್ಲಿ ಬಳಕೆಯಾಗುವುದು ತೀರ ಸಹಜ. ನಮ್ಮ ಸಂದರ್ಭದಲ್ಲಂತೂ ಇದು ಗಮನಾರ್ಹವಾಗಿ ಕಾಣಬರುವಂಥದೇ ಆಗಿದೆ. ಒಂದೇ ವಸ್ತು ಬೇರೆ ಬೇರೆಯ ಸಾಹಿತ್ಯ ಕೃತಿಗಳಲ್ಲಿ ಬಳಕೆಯಾಗುವಾಗ, ಬೇರೆ ಬೇರೆಯ ದೃಷ್ಟಿಕೋನಗಳು, ಉದ್ದೇಶಗಳು ಇರಲು ಸಾಧ್ಯ. ಮೇಲು ನೋಟಕ್ಕೆ ಈ ಅಂಶಗಳು ಗಮನಕ್ಕೆ ಬಾರದಿರಬಹುದು; ಎಲ್ಲವೂ ಒಂದೇ ಎನ್ನಿಸಬಹುದು. ಆದರೆ ಸಾಹಿತ್ಯ ಕೃತಿಗಳನ್ನು ಕುರಿತ ಗಂಭೀರ ಅಧ್ಯಯನಗಳಿಂದ ಈ ವಿಶಿಷ್ಟತೆಗಳನ್ನು ಗುರುತಿಸುವುದು ಸಾಧ್ಯವಿದೆ. ಕನ್ನಡದಲ್ಲಿ ಪಂಪ—ರನ್ನ—ಕುಮಾರವ್ಯಾಸರು ಒಂದೇ ವಸ್ತುವನ್ನು ಕುರಿತು ಕೃತಿಗಳನ್ನು ರಚಿಸಿದ್ದರೂ, ಅವರಲ್ಲಿ ಪ್ರತಿಯೊಬ್ಬರ ದೃಷ್ಟಿಯೂ ಬೇರೆಯೆಂಬುದನ್ನು ಹೇಳುತ್ತ ಬರಲಾಗಿದೆ. ಆದರೆ ಈ 'ದೃಷ್ಟಿ' ಎನ್ನುವುದನ್ನು ಮಾತ್ರ ಒಬ್ಬನದು ರಾಜಸತ್ತೆಯ ಪರವಾದುದಾದರೆ ಮತ್ತೊಬ್ಬನದು ಕೃಷ್ಣ ಭಕ್ತಿಯ ಪರವಾದದ್ದು ಎಂದೋ, ಒಬ್ಬನಲ್ಲಿ ಅರ್ಜುನನೋ ಭೀಮನೋ ನಾಯಕನಾದರೆ, ಮತ್ತೊಬ್ಬನಲ್ಲಿ ಕೃಷ್ಣನಿಗೆ ಹೆಚ್ಚು ಪ್ರಾಧಾನ್ಯತೆಯಿದೆಯೆಂದೋ ಹೇಳುವ ಮಟ್ಟಿಗೆ ವಿವರಿಸಲ್ಪಟ್ಟಿದೆ. ಮೇಲಾಗಿ ಈ ದೃಷ್ಟಿಯನ್ನೇ ಕವಿಯ ಉದ್ದೇಶವೆಂದೂ ಹೇಳಲಾಗಿದೆ. ವಾಸ್ತವವಾಗಿ ಸಾಹಿತ್ಯಾಧ್ಯಯನದಲ್ಲಿ ಮುಖ್ಯವಾಗಬೇಕಾದದ್ದು ಕವಿಯ ಉದ್ದೇಶವೇನಿತ್ತು ಎಂಬುದನ್ನು ತಿಳಿಯುವುದು ಅಲ್ಲ, ಬದಲಾಗಿ ಒಂದು ಕೃತಿ ನಮಗೆ ಇಂದು ಹೇಗೆ ಕಾಣುತ್ತಿದೆ, ಯಾವ ಅರ್ಥವನ್ನು ಬಿಚ್ಚಿಕೊಳ್ಳುತ್ತಿದೆ ಎಂಬುದು.

ಇದಲ್ಲದೆ ಈ ತೌಲನಿಕ ಅಧ್ಯಯನಗಳಲ್ಲಿ ಕೆಲವೆಡೆಗಳಲ್ಲಾದರೂ ಕವಿಯೇ ಹೇಳಿಕೊಂಡ ಕೆಲವು ವಿವರಗಳನ್ನು ಕೃತಿ ಪರಿಶೀಲನೆಗಿರುವ ಅಧಿಕೃತ ಸೂಚನೆಗಳೆಂಬಂತೆ ಬಳಸಲಾಗಿದೆ. ಈ ಸೂಚನೆಯ ನಿಲುವುಗಳೇ ಕೃತಿಯ ನಿಲುವುಗಳೆಂಬಂತೆ

ಕಾಣಲಾಗಿದೆ. ಹೀಗೆ ಕಂಡದ್ದರ ಫಲವಾಗಿ ಕೆಲವು ತೀರ್ಮಾನ ರೂಪದ ಅಭಿಪ್ರಾಯಗಳು ಮಂಡಿತವಾಗಿರುವುದನ್ನು ಗಮನಿಸಬಹುದು.

ಈ ಮೇಲೆ ಪ್ರಸ್ತಾಪಿಸಿದ ಅಂಶಗಳೆಲ್ಲ ಪಂಪನನ್ನು ಕುರಿತ ತೌಲನಿಕ ಅಧ್ಯಯನಗಳಲ್ಲಿ ಸಾಮಾನ್ಯವಾಗಿ ಕಾಣಬರುವಂಥವು. ಇದಕ್ಕೆ ಕೆಲವು ಅಪವಾದಗಳಿವೆ ಎಂಬುದನ್ನೂ ಒಪ್ಪಬೇಕು. ಇಷ್ಟು ವಿವರಗಳ ಹಿನ್ನೆಲೆಯಲ್ಲಿ ಇನ್ನು ಮುಂದೆ ಕೆಲವು ತೌಲನಿಕ ಅಧ್ಯಯನಗಳನ್ನು ಪರಿಶೀಲಿಸಬಹುದು. ಇಲ್ಲಿ ಪ್ರತಿಯೊಂದು ಅಧ್ಯಯನವನ್ನೂ ಪ್ರತ್ಯೇಕವಾಗಿ ಗಮನಿಸಲಾಗದು ಮತ್ತು ಅಂಥ ಅಗತ್ಯ ಕೂಡ ಕಾಣುತ್ತಿಲ್ಲ. ಮುಖ್ಯವಾದ ಕೆಲವನ್ನಷ್ಟೆ ಇಲ್ಲಿ ಗಮನಿಸಬಹುದೆಂದು ತೋರುತ್ತದೆ.

ತೌಲನಿಕ ಅಧ್ಯಯನದ ನೆಲೆಗಳಿಗೆ ಸಂಬಂಧಿಸಿದಂತೆ ಇನ್ನೊಂದು ಅಂಶವನ್ನಿಲ್ಲಿ ಪ್ರಸ್ತಾಪಿಸಬೇಕು. ಜಿ.ಎಸ್.ಶಿವರುದ್ರಪ್ಪನವರು ತೌಲನ ಕ್ರಮವನ್ನು ಕುರಿತು ಬರೆಯುತ್ತಾ, ತೌಲನಿಕ ವಿಮರ್ಶೆಯಲ್ಲಿ ಗಮನಕ್ಕೆ ತೆಗೆದುಕೊಳ್ಳಬಹುದಾದ ಕೆಲವು ನೆಲೆಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ.[3] ಅವು ಹೀಗಿವೆ :

(1) ಒಂದೇ ವಸ್ತುವನ್ನು ಆಶ್ರಯಿಸಿ ಬೇರೆ ಬೇರೆಯ ಕವಿಗಳು ಬೇರೆ ಬೇರೆಯ ಕಾಲದಲ್ಲಿ ರಚಿಸಿದ ಕೃತಿಗಳ ಪರಿಶೀಲನೆ.

(2) ಒಂದು ಅಥವಾ ಕೆಲವು ಸಮಾನ ಸನ್ನಿವೇಶಗಳು, ವರ್ಣನೆಗಳು ಬೇರೆ ಬೇರೆಯ ಕೃತಿಗಳಲ್ಲಿ ಕಂಡು ಬಂದಾಗ ಅವುಗಳ ವಿವೇಚನೆ.

(3) ಒಂದು ಭಾಷೆಯ ಕವಿಗೂ ಮತ್ತೊಂದು ಭಾಷೆಯ

---

3. ಶಿವರುದ್ರಪ್ಪ, ಜಿ.ಎಸ್., ವಿಮರ್ಶೆಯ ಪೂರ್ವ ಪಶ್ಚಿಮ, ಮೈಸೂರು, 1977 (4ನೇ ಮುದ್ರಣ) ಪು : 58.

ಕವಿಗೂ ಸಮಾನ ವಸ್ತು, ಸನ್ನಿವೇಶ, ವರ್ಣನೆ ಪಾತ್ರ ಚಿತ್ರಣ — ಇತ್ಯಾದಿಗಳಲ್ಲಿ ಕಂಡುಬರುವ ಸಾಮ್ಯ ವೈಷಮ್ಯಗಳ ಅವಲೋಕನ.

(4) ಸಮಕಾಲೀನ ಕವಿಯೊಬ್ಬನನ್ನು ಮತ್ತೊಬ್ಬ ಸಮಕಾಲೀನ ಕವಿಯೊಂದಿಗೆ ಇರಿಸಿ ಅವರವರ ಕಾವ್ಯದ ವಿಶಿಷ್ಟತೆಯನ್ನು ಗುರುತಿಸುವ ಪ್ರಯತ್ನ.

ಇವುಗಳಲ್ಲಿ ಪಂಪನನ್ನು ಕುರಿತಂತೆ ಮೊದಲೆರಡು ನೆಲೆಗಳಿಂದ ನಡೆದಿರುವ ಅಧ್ಯಯನಗಳೇ ಹೆಚ್ಚಾಗಿವೆ. ಮೂರನೆಯದನ್ನೂ ಕೆಲಮಟ್ಟಿಗೆ ಗಮನಿಸಬಹುದಾದರೂ ಇದು ಕೂಡ ವಸ್ತು ಸಾಮ್ಯತೆಯ ನೆಲೆಯಲ್ಲೇ ಸೇರುವಂಥದು. ಇನ್ನು ಕೊನೆಯದನ್ನು ಪ್ರತ್ಯೇಕವಾಗಿ ಗಮನಕ್ಕೆ ತೆಗೆದುಕೊಂಡ ಪ್ರಯತ್ನಗಳು ಇಲ್ಲವೆಂದೇ ಹೇಳಬಹುದು. ಆದರೂ ಪಂಪ—ರನ್ನರನ್ನು ಕುರಿತು ಚರ್ಚಿಸುವಾಗ, ಈ ಸಂಬಂಧದ ಕೆಲವಂಶಗಳು ಸೂಚಿತವಾಗಿರುವುದನ್ನು ಗಮನಿಸಬಹುದು.

ಪ್ರಸ್ತುತ, ನಮ್ಮ ಅಧ್ಯಯನದ ಸೌಕರ್ಯಕ್ಕಾಗಿ ಪಂಪನನ್ನು ಕುರಿತ ತೌಲನಿಕ ಅಧ್ಯಯನಗಳನ್ನು ಸ್ಥೂಲವಾಗಿ ಎರಡು ಬಗೆಯಾಗಿ ವಿಂಗಡಿಸಿಕೊಳ್ಳಬಹುದೆಂದು ತೋರುತ್ತದೆ: (1) ವಸ್ತು ಸಾಮ್ಯತೆಯನ್ನು ಆಧರಿಸಿದವು ಮತ್ತು (2) ಪ್ರಸಂಗಗಳು, ಸನ್ನಿವೇಶಗಳು, ಪಾತ್ರ ಚಿತ್ರಣ — ಇತ್ಯಾದಿಗಳನ್ನು ಆಧರಿಸಿದವು. ಮೊದಲ ಬಗೆಯವೆಂದು ಕರೆಯಬಹುದಾದ ಚರ್ಚೆಗಳು ಕೂಡ ಕೆಲವು ನಿರ್ದಿಷ್ಟ ಪ್ರಸಂಗ—ಸನ್ನಿವೇಶಗಳನ್ನು ಹಿಡಿದೇ ನಡೆದಿವೆ. ಎಂದೇ ಈ ವಿಂಗಡಣೆಯನ್ನು ಸ್ಥೂಲವಾದದ್ದೆಂದು ಕರೆದದ್ದು.

## 6.2 ವಸ್ತು ಸಾಮ್ಯತೆಯನ್ನು ಆಧರಿಸಿದ ಅಧ್ಯಯನಗಳು

ಪಂಪನ ಕೃತಿಗಳ ಪರಿಷ್ಕರಣಗಳು ಹೊರಬಂದು, ವಿದ್ವಲ್ಲೋಕವು ಅತ್ತ ಗಮನ ಹರಿಸಿದಂದಿನಿಂದಲೂ ಸಂಸ್ಕೃತದ ಕಥಾ ಬಿತ್ತಿಗೆ ಪಂಪ ಋಣಿಯಾಗಿರುವನೆಂಬ ಅಂಶವನ್ನು ಗುರುತಿಸುತ್ತ ಬರಲಾಗಿದೆ. ವ್ಯಾಸನ ಭಾರತ, ಜಿನಸೇನನ ಪೂರ್ವ ಪುರಾಣಗಳು ಪಂಪನ ಕೃತಿಗಳಿಗೆ ಆಕರಗಳೆಂಬುದನ್ನು ಹೇಳಲಾಗಿದೆ. ಈ ನಿಟ್ಟಿನ ಪ್ರತ್ಯೇಕ ಚರ್ಚೆಗಳು ಹೆಚ್ಚಾಗಿ ನಡೆದದ್ದು ಪಂಪ ಭಾರತದ ಬೆಳ್ಳಾವೆ ಪರಿಷ್ಕರಣ ಬಂದ ನಂತರವೇ. ಆದಿಪುರಾಣಕ್ಕೆ ಸಂಬಂಧಿಸಿದಂತೆ ಮಾತ್ರ ಇಲ್ಲಿಯೂ ವಿಪುಲ ಚರ್ಚೆಗಳೇನೂ ನಡೆಯಲಿಲ್ಲ. ಆಗೊಮ್ಮೆ ಈಗೊಮ್ಮೆ ಆದಿಪುರಾಣ ಮತ್ತು ಪೂರ್ವ ಪುರಾಣಗಳ ತೌಲನಿಕ ಚರ್ಚೆಗಳು ಕಾಣಿಸಿಕೊಂಡಿವೆ. ಪಂಪ ಭಾರತಕ್ಕೆ ಸಂಬಂಧಿಸಿದಂತೆ ಬೆಳ್ಳಾವೆ ಪರಿಷ್ಕರಣದ ಮುನ್ನವೂ ಕೆಲವು ಪ್ರಸ್ತಾಪಗಳು ನಡೆದಿದ್ದುವು. 1895ರ ವೇಳೆಗೆ ರನ್ನನ ಗದಾಯುದ್ಧವನ್ನು ಪ್ರಕಟಿಸಿದ ಎಂ.ಎ. ರಾಮಾನುಜಯ್ಯಂಗಾರರು ಪ್ರಸ್ತಾವನಾ ರೂಪದ 'ಗದಾಯುದ್ಧದ ವಿಮರ್ಶೆ' ಎಂಬ ಭಾಗದಲ್ಲಿ ಪಂಪ—ರನ್ನರು ವ್ಯಾಸನ ಭಾರತದ ಕಥಾ ಭಿತ್ತಿಯನ್ನೇ ಆಧರಿಸಿರುವರಾದರೂ, ಪಂಪನ ವಿಕ್ರಮಾರ್ಜುನ ವಿಜಯದ ಮಾದರಿಯಲ್ಲೇ ಗದಾಯುದ್ಧವನ್ನು ಬರೆದಿದ್ದಾನೆಂಬ ಅಂಶವನ್ನು ಚರ್ಚಿಸಿದರು. ರನ್ನನು "ಆದಿ ಪಂಪನ ಹೆಸರನ್ನು .......... ಸ್ಮರಿಸದೆ ಇದ್ದರೂ ಅವನ ಕರ್ಣ — ಶಲ್ಯ — ಗದಾ ಪರ್ವಗಳ ಭಾಗದಲ್ಲಿರುವ ಹಲವು ಪದ್ಯಗಳನ್ನೂ ಕಥಾ ಭಾಗಗಳನ್ನೂ ತನ್ನ ಗ್ರಂಥದಲ್ಲಿ ಸೇರಿಸಿದ್ದಾನೆ" ಎಂದು ಹೇಳಿ ಅದರ ಸ್ಪಷ್ಟೀಕರಣಕ್ಕಾಗಿ ಪಂಪ ಭಾರತದ ಹದಿಮೂರನೇ ಆಶ್ವಾಸದ ಪದ್ಯಗಳು ಮತ್ತು "ಅವುಗಳ ಪಡಿನೆಳಲನಂತಿರುವ" ಗದಾಯುದ್ಧದ ಪದ್ಯಗಳ

ಪಟ್ಟಿಯೊಂದನ್ನು ನೀಡಿದ್ದಾರೆ.[4] ಇದಾದ ಮೇಲೆ ಕೆಲವು ವಿರಳ ಚರ್ಚೆಗಳು ನಡೆದಿವೆ. ಇಂಥವೆಲ್ಲ ತೀರ ಸಾಮಾನ್ಯ ಬಗೆಯ ವಿವರಗಳನ್ನೇ ಒಳಗೊಂಡಿದ್ದು ಯಾವ ವಿಶೇಷಾಂಶಗಳೂ ಇಲ್ಲ. ಇದ್ದಲ್ಲಿ ಪಂಪನಲ್ಲಿ ಕೃಷ್ಣನ ಮಹತ್ವ ಕಡಿಮೆಯಂತೇನೂ ಆಗಿಲ್ಲವೆಂಬ, "ಗದಾಯುದ್ಧವೆಂದರೆ ಪಂಪ ಭಾರತದ ಒಂದು ಉತ್ತಮವಾದ ಅನುಬಂಧವೇ ಸರಿ" ಎಂಬ ಅಂಶಗಳ ಸಮರ್ಥನೆಯಿರುವುದನ್ನು ಕಾಣಬಹುದು.[5]

ರನ್ನ ಕವಿಯ 'ಪ್ರಶಸ್ತಿ' ಗ್ರಂಥದಲ್ಲಿರುವ ಎರಡು ಬರೆಹಗಳು ಇಲ್ಲಿಗೆ ಗಮನಾರ್ಹವಾಗಿವೆಯೆಂದು ತೋರುತ್ತದೆ. ಒಂದು, ಎ. ಶಿವರಾಮಯ್ಯನವರ 'ವ್ಯಾಸ ಭಾರತ, ಕುಮಾರವ್ಯಾಸ ಭಾರತ, ಪಂಪ ಭಾರತ ಮತ್ತು ಗದಾಯುದ್ಧ — ಇವುಗಳ ತುಲನಾತ್ಮಕ ವಿಷಯಗಳು,' ಮತ್ತೊಂದು, ತೀ.ನಂ.ಶ್ರೀ. ಅವರ 'ಗದಾಯುದ್ಧದ ಸ್ವೀಕರಣ ವಿಚಾರ'. ಮೊದಲನೆಯದರಲ್ಲಿ, ಈ ಮೂರು ಕೃತಿಗಳಿಗೂ ಮೂಲವೆನ್ನಲಾಗಿರುವ ವ್ಯಾಸ ಭಾರತದ ಸ್ಥೂಲ ಹಿನ್ನೆಲೆಯಲ್ಲಿ ಈ ಕೃತಿಗಳ ನಡುವೆ ಇರುವ ವ್ಯತ್ಯಾಸಗಳನ್ನು — ಸಮಾನತೆಗಳನ್ನು, ಕೆಲವು ನಿದರ್ಶನಗಳನ್ನು ತೋರಿಸುವುದರ ಮೂಲಕ ಸಾಧಿಸುವ ಪ್ರಯತ್ನ ಮಾಡಲಾಗಿದೆಯೆನ್ನಬಹುದು. "ಕುಮಾರ ವ್ಯಾಸನ ಪದ್ಯಗಳಿಗೂ ಪಂಪನ ಪದ್ಯಗಳಿಗೂ ಹೋಲುವೆಯು ತೋರುವುದರಿಂದ

---

4. ನೋಡಿ : ರಾಮಾನುಜಯ್ಯಂಗಾರ ಸಂಪಾದಿತ ಗದಾಯುದ್ಧಂ (ಮೈಸೂರು, 1925. 3ನೇ ಮುದ್ರಣ), 'ಕೃತಿಯ ಗದಾಯುದ್ಧದ ವಿಮರ್ಶೆ' ಎಂಬ ಭಾಗ, ಪು : xxx-xliii.

5. ನೋಡಿ : ಪಾರಿಶವಾಡ, ಶೇಷ ಭ., ಪಂಪ ಭಾರತ ಮತ್ತು ಗದಾಯುದ್ಧಗಳ ತುಲನೆ, ಕ.ಸಾ.ಪ.ಪ., (10—4. 1926. ಪು : 263-265) 'ಪಂಪ — ರನ್ನರ ದುರ್ಯೋಧನನು' (ಜ.ಕ. 1—3 ಪು : 157—160) 'ಪಂಪ— ರನ್ನರ ಶ್ರೀಕೃಷ್ಣನು' (ಜ.ಕ. 3—6 ಪು : 19—24) ಎಂಬ ಬರೆಹಗಳನ್ನೂ ಗಮನಿಸಬಹುದು.

ಕುಮಾರ ವ್ಯಾಸನು ತನ್ನ ಭಾರತವನ್ನು ಬರೆಯುವ ಮುಂಚೆ ಪಂಪ ಭಾರತವನ್ನು ಓದಿರಬೇಕೆಂದು ಅನುಮಾನವುಂಟಾಗುತ್ತದೆ" ಎಂದೂ, ಹೀಗಿದ್ದರೂ ಕುಮಾರವ್ಯಾಸ ಭಾರತಕ್ಕೂ ಪಂಪ ಭಾರತಕ್ಕೂ ಇರುವ ಸಾಮ್ಯತೆಗಿಂತ ಪಂಪ ಭಾರತ ಮತ್ತು ಗದಾಯುದ್ಧಗಳಿಗಿರುವ ಸಾಮ್ಯವು ಬಹಳ ಎಂದೂ ಹೇಳಿದ್ದಾರೆ.[6] ಇದಕ್ಕೆ ಪೂರಕವಾದ ಕೆಲವು ನಿದರ್ಶನಗಳನ್ನೂ ನೀಡಲಾಗಿದೆ. ಈ ಕೃತಿಗಳಲ್ಲಿರುವ ಕೆಲವು ಮಾರ್ಪಾಡುಗಳಿಗೆ ಸಂಬಂಧಿಸಿದಂತೆ ಶಿವರಾಮಯ್ಯನವರು ಹೇಳುವ ಕೆಲವು ಮಾತುಗಳನ್ನಿಲ್ಲಿ ಗಮನಿಸೋಣ: "ಈ ಕುಮಾರ ವ್ಯಾಸ .......... ಮೊದಲಾದ ಬ್ರಾಹ್ಮಣ ಕವಿಗಳು ಭಾರತವನ್ನು ಬರೆಯುವುದರಲ್ಲಿ ಅವರ ಉದ್ದೇಶವೇನಿದ್ದಿತೆಂದರೆ 'ಭಾರತ ಕಥೆಯ ಸ್ವಾರಸ್ಯವು ಕನ್ನಡಿಗರಿಗೆ ತಿಳಿಯಬೇಕು' ಇಷ್ಟೇ. ಆದರೆ ಪಂಪನಾಗಲಿ ರನ್ನನಾಗಲಿ ಭಾರತವನ್ನು ಬರೆದುದರ ಉದ್ದೇಶವೇ ಬೇರೆ. ತಂತಮ್ಮ ಪೋಷಕರ ಕೀರ್ತಿಯನ್ನು ಚಿರಸ್ಥಾಯಿಯಾಗಿ ಮಾಡುವುದೇ ಅವರ ಉದ್ದೇಶ. ಈ ಉದ್ದೇಶವನ್ನು ಸಫಲಗೊಳಿಸುವುದಕ್ಕಾಗಿ ಅವರು ಬೇಕಾದ ಮಾರ್ಪಾಡುಗಳನ್ನು ಅಲ್ಲಲ್ಲಿ ಮಾಡಿರುವರು."[7] ಇಂಥ ಅಂಶಗಳೇ ಇತ್ತೀಚಿನವರೆಗೂ ಮಂಡಿತವಾಗುತ್ತಿರುವುದನ್ನು ಗಮನಿಸಬಹುದು. ಪಂಪನು ಮಾಡಿಕೊಂಡಿರುವ ಮಾರ್ಪಾಡುಗಳ ಕುರಿತು ಪ್ರಸ್ತಾಪಿಸುತ್ತಾ ಪಂಪ ಕೀಚಕ ವೃತ್ತಾಂತವನ್ನು ಸಂಪೂರ್ಣವಾಗಿ ಕೈಬಿಟ್ಟಿರುವನೆಂದು ಹೇಳಿ, ಅದಕ್ಕೆ ಕಾರಣ "ತನ್ನ ಸ್ವಾಮಿಯನ್ನು ಹೊಗಳಬೇಕೆಂದಿರುವ ಕವಿಗೆ ಭೀಮನ ಪ್ರಾಶಸ್ತ್ಯವನ್ನು ವರ್ಣಿಸುವುದು

---

6. 'ವ್ಯಾಸ ಭಾರತ, ಕುಮಾರ ವ್ಯಾಸ ಭಾರತ, ಪಂಪ ಭಾರತ ಮತ್ತು ಗದಾಯುದ್ಧ', ರನ್ನ ಕವಿ ಪ್ರಶಸ್ತಿ (ಸಂ) ಎಸ್.ವಿ.ರಂಗಣ್ಣ ಮೈಸೂರು, 1928. ಪು: 68.

7. ಅದೇ, ಪು: 48.

ಸಮಯೋಚಿತವಲ್ಲವೆಂದು ತೋರಿದುದೋ ಅಥವಾ ಆ ಕಥೆಯು ಅಷ್ಟು ಪ್ರಾಮುಖ್ಯವಲ್ಲವೆಂದು ಎಣಿಸಿದ್ದೋ ಇರಬೇಕೆನ್ನುತ್ತಾರೆ. ಈ ತೀರ್ಮಾನಕ್ಕೆ ಬರುವಲ್ಲಿ ಶಿವರಾಮಯ್ಯನವರಿಗೆ ಆಧಾರವಾಗಿದ್ದ ಪಠ್ಯ ರೈಸ ಅವರದ್ದು ಇರಬೇಕು. ರೈಸರ ಪರಿಷ್ಕರಣದಲ್ಲಿ ಈ ಭಾಗ ಬಿಟ್ಟು ಹೋಗಿದ್ದು, ಬೆಳ್ಳಾವೆ ಪರಿಷ್ಕರಣದಲ್ಲಿದು ಸೇರ್ಪಡೆಯಾಗಿದೆ. (ಈ ಅಂಶವನ್ನು ಪಂಪ ಭಾರತದ ಪರಿಷ್ಕರಣಗಳನ್ನು ಕುರಿತ ಚರ್ಚೆಯ ಸಂದರ್ಭದಲ್ಲಿ ಪ್ರಸ್ತಾಪಿಸಲಾಗಿದೆ.) ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಕೃತಿಯಲ್ಲಿ ಕಾಣಬರುವ ಮಾರ್ಪಾಡುಗಳಿಗೆ ಹೇಗೆ ಕೆಲವು ನಿರ್ದಿಷ್ಟ ಅಂಶಗಳನ್ನು (ಇಲ್ಲಿ ಪಂಪನ ಸ್ವಾಮಿ ಭಕ್ತಿ) ಸಂಬಂಧಿಸಿ ನೋಡಲಾಗುತ್ತದೆ ಎಂಬುದು.

ಇನ್ನು ತೀ.ನಂ.ಶ್ರೀ. ಅವರ ಚರ್ಚೆ, ಗದಾಯುದ್ಧದ ಕಥಾ ಸರಣಿಯಲ್ಲಿ ಪಂಪ ಭಾರತದ ಮತ್ತು ವೇಣೀ ಸಂಹಾರ ನಾಟಕದ ಪ್ರಭಾವವಿರುವುದನ್ನು ಗುರುತಿಸಿದ್ದ ಎಂ.ಎ.ರಾಮಾನುಜಯ್ಯಂಗಾರರ ಚರ್ಚೆಯ ನೆಲೆಯಿಂದಲೇ ನಡೆದಿದೆ. ಗದಾಯುದ್ಧವು ನಾಟಕದಂತೆ ತೋರುವುದಕ್ಕೆ ರಾಮಾನುಜಯ್ಯಂಗಾರರೆಂದಂತೆ ವೇಣಿ ಸಂಹಾರ ನಾಟಕದ ಪ್ರಭಾವವೇ ಕಾರಣವಲ್ಲವೆಂದೂ ಆ ಎರಡೂ ಕೃತಿಗಳ ಕಥಾ ಭಾಗ, ಬಂಧವೇ ಬೇರೆಯೆಂಬುದನ್ನು ಗುರುತಿಸುತ್ತಾ, ಗದಾಯುದ್ಧ, ನಾಟಕದಂತೆ ತೋರಲು ರನ್ನನ ಪ್ರತಿಭೆಯೊಂದೇ ಕಾರಣವೆಂದು, ಪಂಪ ಭಾರತ–ಗದಾಯುದ್ಧಗಳ ನಡುವಿನ ಪ್ರಶ್ನೆ ಹೆಚ್ಚು ಮುಖ್ಯವೆಂದು ಪರಿಗಣಿಸಿದ್ದಾರೆ.[8] ಅವರು ಈ ಸಂಬಂಧದಲ್ಲಿ ಹೇಳುವ ಕೆಲವು ಮಾತುಗಳನ್ನು ಇಲ್ಲಿ ಗಮನಿಸಬಹುದು : "ಚರ್ಚೆ ಬರುವುದೆಲ್ಲಾ ರನ್ನನಿಗೂ ಪಂಪನಿಗೂ ಇರುವ ಸಂಬಂಧದ ವಿಚಾರದಲ್ಲಿ.......... ಅವನು (ರನ್ನ) ವಿಕ್ರಮಾರ್ಜುನ ವಿಜಯವನ್ನು ನೋಡಿದ್ದನೆಂದು ಹೇಳುವುದಕ್ಕೆ ಕಾಲ ನಿರ್ಣಯ ದೃಷ್ಟಿಯಿಂದ

---

8. 'ಗದಾಯುದ್ಧವಾ ಸ್ವೀಕರಣ ವಿಚಾರವಾ', ಅದೇ, ಪು : 79–80.

ಯಾವ ತಡೆಯೂ ಇಲ್ಲ. ಇದೊಂದು ನಿರ್ಧಾರವಾದ ಮೇಲೆ ರನ್ನನು ಪಂಪ ಭಾರತವನ್ನು ನೋಡಿದ್ದನೆಂದೇ ಅಲ್ಲ, ಚೆನ್ನಾಗಿ ಮನನ ಮಾಡಿದ್ದನೆಂದು ಕೂಡ ನಿರ್ಭಯವಾಗಿ ಸಾರಬಹುದು."

"ಮಹಾಭಾರತದ ಕಥೆಗೂ ಪಂಪ ಭಾರತದ ಕಥೆಗೂ ಅನೇಕ ವ್ಯತ್ಯಾಸಗಳಿವೆ. ಹಾಗೆ ವ್ಯತ್ಯಾಸವಿರುವ ಕಡೆಯಲ್ಲೆಲ್ಲಾ ರನ್ನನು ಸಾಧಾರಣವಾಗಿ ಪಂಪನ ದಾರಿಯಲ್ಲಿ ಹೋಗಿದ್ದಾನೆ .......... ಗದಾಯುದ್ಧದಲ್ಲಿ ಬರುವ ಹೃದಯ ವಿದ್ರಾವಕವಾದ ಪ್ರಲಾಪಗಳಿಗೂ, ಸ್ವಾರಸ್ಯವುಳ್ಳ ಸನ್ನಿವೇಶಗಳಿಗೂ ಸೂಚನೆಯನ್ನು ನಾವು ಪಂಪ ಭಾರತದ ಹದಿಮೂರನೆಯ ಆಶ್ವಾಸದಲ್ಲಿಯೇ ಕಾಣುವುದು."

ಈ ಮಾತುಗಳನ್ನು ಗಮನಿಸಿದರೆ, ತೀ.ನಂ.ಶ್ರೀ. ಪಂಪನ ಪ್ರಭಾವ ರನ್ನನ ಮೇಲೆ ನಿಚ್ಚಳವಾಗಿದೆಯೆಂಬುದನ್ನು ಗುರುತಿಸಿದ್ದಾರೆ ಎಂಬುದು ಸ್ಪಷ್ಟ. ಪಂಪ ಭಾರತದ ಸನ್ನಿವೇಶಗಳನ್ನು ಮಾತ್ರವಲ್ಲದೆ, ಅದರ ಭಾವಗಳನ್ನೂ ಮಾತುಗಳನ್ನೂ ರನ್ನನಲ್ಲಿ ಕಾಣಬಹುದೆಂಬುದನ್ನು ತೀ.ನಂ.ಶ್ರೀ. ಸಮರ್ಥಿಸಿದ್ದಾರೆ. ಆದರೆ ಇದೆಲ್ಲದರ ಮಧ್ಯೆ ರನ್ನ, "ಪಂಪನು ಹೋದ ದಾರಿಯಲ್ಲೇ ಕಣ್ಣು ಮುಚ್ಚಿಕೊಂಡು" ಹೋಗಿಲ್ಲವೆಂಬುದನ್ನೂ, "ಮಾಡಬಹುದಾದ ಮಾರ್ಪಾಡುಗಳನ್ನು ಮಾಡಿಯೇ ಇದ್ದಾನೆ" ಎಂಬುದನ್ನೂ ಗುರುತಿಸಿ ರನ್ನನ ವಿಶಿಷ್ಟತೆಯನ್ನು ಸ್ಥಾಪಿಸಿದ್ದಾರೆ. ಪಂಪನಿಂದ ರನ್ನ ಸ್ವೀಕರಿಸಿರುವ ಹಲವಂಶಗಳನ್ನು 'ಸ್ವೀಕರಣ' ವೆಂದು ಕರೆದಿದ್ದಾರೆ. ಈ ಹಿನ್ನೆಲೆಯಲ್ಲಿ ತೀ.ನಂ.ಶ್ರೀ. ಒಂದು ಊಹೆಯನ್ನು ಮಾಡಿ, ಆ ದೃಷ್ಟಿಯಿಂದ ರನ್ನನು ಮಾಡಿರುವ ಸ್ವೀಕರಣವನ್ನು ವಿಮರ್ಶಿಸಬೇಕೆಂದಿದ್ದಾರೆ.[9] ಆ ಊಹೆ ಹೀಗಿದೆ: "ಪಂಪ ಭಾರತದ ಹದಿಮೂರನೆಯ ಆಶ್ವಾಸವನ್ನು ನೋಡಿ ರನ್ನನ ಮನಸ್ಸಿಗೆ

---

9. ಅದೇ, ಪು : 91

ಹೀಗೆ ಹೊಳೆದಿರಬಹುದು. ಇಲ್ಲಿಯ ವಸ್ತು ಚೆನ್ನಾಗಿದೆ. ಆದರೆ, ಗ್ರಂಥವು ಎಲ್ಲಿ ಅಳತೆ ಮೀರಿ ಹೋಗುವುದೋ ಎಂಬ ಭೀತಿಯಿಂದ ಪಂಪನು ಸಂಕ್ಷೇಪವಾಗಿ ಬರೆದಿರುವುದರಿಂದ ಈ ಭಾಗದ ಸ್ವಾರಸ್ಯವೇ ವ್ಯಕ್ತವಾಗಿಲ್ಲ. ಇದರ ಆಧಾರದಿಂದಲೇ ನಾನು ಒಂದು ಕಾವ್ಯವನ್ನು ಕಟ್ಟಬೇಕು. ಚೆನ್ನಾಗಿರುವ ಸಂದರ್ಭಗಳನ್ನು ವಿಸ್ತರಿಸಬೇಕು .......... ಮೂಲದಲ್ಲಿ ಒಂದು ಸೊಗಸಾದ ಭಾಗವಿದ್ದರೆ ಅದನ್ನೇ ಇನ್ನೊಂದು ರೀತಿಯಲ್ಲಿ ಹೇಳಿ ಇನ್ನೂ ಸೊಗಸಾಗುವಂತೆ ಮಾಡಬೇಕು — ಹೀಗೆಂದು ಆಲೋಚಿಸಿ ರನ್ನನು ಗದಾಯುದ್ಧವನ್ನು ಬರೆದಂತೆ ಕಾಣುತ್ತದೆ." ರನ್ನ ಹೀಗೆಂದುಕೊಂಡು ಬರೆದಿರಲಿ, ಬರೆದಿಲ್ಲದಿರಲಿ ತೀ.ನಂ.ಶ್ರೀ. ಅವರ ಈ ಊಹೆ ಕೃತಿಯ ಗಂಭೀರ ಅಧ್ಯಯನದಲ್ಲಿ ನಿಜವಾಗುತ್ತದೆ ಎಂಬುದು ಮಾತ್ರ ಮುಖ್ಯ.

ಈ ಎರಡೂ ಪ್ರಯತ್ನಗಳು ಪಂಪನನ್ನು ಕುರಿತ ತೌಲನಿಕ ಅಧ್ಯಯನದ ಸಂದರ್ಭದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿವೆ. ಇದುವರೆಗೆ ನಡೆದ ಕೆಲವೇ ಚರ್ಚೆಗಳಲ್ಲಿ ಇಲ್ಲದಿದ್ದ ಒಂದು ಅಧ್ಯಯನದ ಶಿಸ್ತು ಇಲ್ಲಿ (ಮುಖ್ಯವಾಗಿ ತೀ.ನಂ.ಶ್ರೀ. ಅವರಲ್ಲಿ) ಎದ್ದು ಕಾಣುವಂಥದು. ಈ ಅಧ್ಯಯನದ ಮಾದರಿ ಮತ್ತು ಇಲ್ಲಿ ಚರ್ಚೆಗೆ ಎತ್ತಿಕೊಂಡ ನೆಲೆಗಳು ನಂತರ ಈ ನಿಟ್ಟಿನಲ್ಲಿ ನಡೆದ ಚರ್ಚೆಗಳಲ್ಲಿ ಪುನರಾವರ್ತಿತವಾಗಿವೆ.

ಈ ಎಲ್ಲ ಪ್ರಾರಂಭಿಕ ಪ್ರಯತ್ನಗಳ ಜೊತೆಗೆ ಬೆಳ್ಳಾವೆಯವರು ತಾವು ಹೊರ ತಂದ ಪಂಪ ಭಾರತದ ಪರಿಷ್ಕರಣಕ್ಕೆ ಬರೆದ ಉಪೋದ್ಘಾತದಲ್ಲಿ ತೌಲನಿಕ ಚರ್ಚೆಗಳಿಗೆ ಪೂರಕವಾಗಬಲ್ಲ ಕೆಲವಂಶಗಳನ್ನು ಕುರಿತು ಪ್ರಸ್ತಾಪಿಸಿದರು. 'ಕಥಾ ರಚನೆಯಲ್ಲಿಯೂ ಪಾತ್ರ ರಚನೆಯಲ್ಲಿಯೂ ಕವಿ ಮಾಡಿಕೊಂಡಿರುವ' ಮಾರ್ಪಾಡುಗಳಲ್ಲಿ ಕೆಲವು ಮುಖ್ಯವಾದುವನ್ನು ಪಟ್ಟಿ ಮಾಡಿದ್ದಾರೆ. ಇವುಗಳಲ್ಲಿ ಕೆಲವನ್ನು 'ಆಭಾಸ' ಗಳೆಂದೂ ಕರೆದರು. ಇವುಗಳಲ್ಲಿ 'ದೇವಸಭೆಯುಂ ಬ್ರಹ್ಮಸಭೆಯುಮೊಡನಿರ್ದು ನಾಮಕರಣೋತ್ಸವ ನಿಮಿತ್ತಂಗಳಪ್ಪ

ಅಷ್ಟೋತ್ತರಶತನಾಮಗಳನ್ನಿಡುವುದು', 'ಕಥಾ ವಿವರಣೆಯಲ್ಲಿ ಅರ್ಜುನನ ಪರಾಕ್ರಮವನ್ನು ವರ್ಣಿಸುತ್ತಿರುವಾಗ ಅರಿಕೇಸರಿಯ ವಿಚಾರವನ್ನೂ ಇದಕ್ಕೆ ಅಭೇದವಾಗಿರುವಂತೆ' ಯೋಜಿಸಿರುವುದು, ದ್ರೌಪದಿಯ ಪಂಚ ಪತಿತ್ವದ ಪ್ರಶ್ನೆ — ಇತ್ಯಾದಿಗಳು ಅಂಥ ಆಭಾಸಗಳಲ್ಲಿ ಒಂದೆರಡು. ಈ ಕುರಿತು ಮುಳಿಯ ಅವರು ಚರ್ಚಿಸುವಾಗ 'ಇದು ವ್ಯಾಸಭಾರತ ಕಥಾ ಚಿತ್ರಣವೇ ಎಂಬ ಭಾವನೆ ಮನಸ್ಸಿನಲ್ಲಿ ನೆಟ್ಟಿರುವಾಗ' ಮಾತ್ರ ಈ ರಚನಾ ಕ್ರಮವು ಆಭಾಸವಾಗಿ ಕಾಣುವುದೆಂದೂ, ಆದರೆ ಇದು 'ಸಮಸ್ತ ಭಾರತ ಕಥಾ ಭಿತ್ತಿ' ಎಂಬುದನ್ನು ಗಮನಿಸಿದರೆ ಈ ಆಭಾಸಗಳೆಂದು ಕರೆದವು ಆಭಾಸಗಳೇ ಅಲ್ಲವೆಂದೂ ಅಂಥ ಕೆಲವನ್ನು ಸಮರ್ಥಿಸಿದ್ದಾರೆ.[10] ಈ ಸಮರ್ಥನೆಯಲ್ಲಿ ಕೆಲವಂಶಗಳನ್ನು ತೇಲಿಸಿ ಬಿಟ್ಟಿದ್ದಾರೆ ಎನ್ನಿಸುವುದು ಸಹಜ. ಅದು ಅವರು ಹುಡುಕುವ ಪೂರ್ಣ ಪ್ರಮಾಣದ 'ಸಮಸ್ತೀಕರಣ'ದ ಫಲವಷ್ಟೆ. ಆದರೆ ದ್ರೌಪದಿಯ ಸಂಬಂಧದ ಅವರ ಚರ್ಚೆಯಲ್ಲಿ ಸಾಮಾನ್ಯವಾಗಿ ವಾಡಿಕೆಯಲ್ಲಿರುವ ವಿವರಣೆಗಿಂತ ಭಿನ್ನ ವಿವರಣೆಯಿರುವುದಾದರೂ, ಅದನ್ನು ನಂತರದ ಚರ್ಚೆಗಳು ಪರಿಗಣನೆಗೆ ತೆಗೆದುಕೊಂಡಂತೆ ಕಾಣದು.

ನಂತರ ಬಂದ ಎಲ್. ಗುಂಡಪ್ಪನವರ ಪಂಪ — ನಾರಣಪ್ಪರನ್ನು ತೌಲನಿಕವಾಗಿ ಗಮನಿಸಿದ ಚರ್ಚೆಯಲ್ಲಿ[11] ಕೂಡ ಕೆಲವು ಸಮಾನ ಮತ್ತು ಭಿನ್ನಾಂಶಗಳನ್ನು ಕುರಿತ ಪ್ರಸ್ತಾಪಗಳಿವೆ. ಇಲ್ಲಿ ಅವರು ಎತ್ತಿದ ಒಂದು ಅಂಶ ಗಮನಿಸತಕ್ಕದ್ದು. ಇದುವರೆಗೆ ಪಂಪ — ರನ್ನರಲ್ಲಿ, ಕುಮಾರವ್ಯಾಸನಲ್ಲಿರುವ ಕೆಲವು ಮಾರ್ಪಾಡುಗಳಿಗೆ ವ್ಯಾಸೇತರವಾದ ಯಾವುದಾದರೂ ಭಾರತ ಕಥೆ ಮೂಲವಾಗಿದ್ದಿರಬಹುದೇ? ಎಂಬ ಪ್ರಶ್ನೆಯನ್ನು ಎತ್ತುತ್ತ ಬರಲಾಗಿತ್ತು. ಈ ಅಭಿಪ್ರಾಯವನ್ನು

---

10. ನೋಡಿ : ನಾಡೋಜ ಪಂಪ, ಮಂಗಳೂರು, 1938. ಪು : 154—208

11. 'ಪಂಪ—ನಾರಣಪ್ಪ' ಕುಮಾರವ್ಯಾಸ ಪ್ರಶಸ್ತಿ (ಕರ್ನಾಟಕ ಸಂಘ, ಮಹಾರಾಜಾ ಕಾಲೇಜು), ಮೈಸೂರು, 1940. ಪು : 129—137

ಗುಂಡಪ್ಪನವರೂ ಸೂಚಿಸಿ, ಮೂಲ ಗ್ರಂಥದಲ್ಲಿ ಹೇಗೇ ಇದ್ದರೂ ಜನಸಾಮಾನ್ಯದ ಬಳಕೆಯಲ್ಲಿ ಆ ಕಥೆಯು ವಿಧ ವಿಧವಾಗಿ ತೋರುವುದು ಸ್ವಾಭಾವಿಕವಾದುದರಿಂದ, ಇಂಥ ಪ್ರಚಲಿತ ಕಥೆಗಳಿಂದಲೇ ಪಂಪ – ನಾರಣಪ್ಪರು ತಮ್ಮ ಮಾರ್ಪಾಡುಗಳಿಗೆ ಸೂಚನೆಗಳನ್ನು ಪಡೆದಿರಬಹುದೆಂದಿದ್ದಾರೆ. ಇದನ್ನು ಸಂಗತವೆನ್ನಲಿ ಬಿಡಲಿ, ಜನಸಾಮಾನ್ಯನ ಮನೋನೆಲೆಯಲ್ಲೇ ಭಾರತದ ಕಥಾ ಭಿತ್ತಿಯೊಂದಿದೆಯೆಂಬುದನ್ನಾಗಲಿ, ಅದು ಅನಂತ ವೈವಿಧ್ಯತೆಗಳಿಂದ ಕೂಡಿರಲು ಸಾಧ್ಯವೆಂಬುದನ್ನಾಗಲಿ ಒಪ್ಪಬೇಕು.

ಇನ್ನು ಈ ನಿಟ್ಟಿನಲ್ಲಿ ಗಮನಿಸಬಹುದಾದ ಮತ್ತೊಂದು ಅಧ್ಯಯನವೆಂದರೆ ನ.ಸುಬ್ರಹ್ಮಣ್ಯಂ ಅವರ 'ಮಹಾಭಾರತ ಸಮೀಕ್ಷೆ'. ಪಂಪ ಭಾರತ – ಕುಮಾರವ್ಯಾಸ ಭಾರತ – ವ್ಯಾಸ ಭಾರತಗಳ ತೌಲನಿಕ ವಿಮರ್ಶೆಯೆಂದು ಕರೆಯಲಾಗಿರುವ ಈ ಅಧ್ಯಯನ, ವ್ಯಾಸ ಭಾರತದ ಕಥಾ ಚೌಕಟ್ಟಿನ ಹಿನ್ನೆಲೆಯಲ್ಲಿ ಪಂಪ – ಕುಮಾರವ್ಯಾಸರ ಕಥಾ ಸರಣಿಗಳಲ್ಲಿರುವ ಸಂಬಂಧಾಂತರಗಳ ಪರಿಶೀಲನೆಯ ಪ್ರಯತ್ನದ್ದಾಗಿದೆ. ಈ ಪರಿಶೀಲನೆಯನ್ನು ಉದ್ಯೋಗ ಪರ್ವಾಂತ್ಯದವರೆಗೆ ಮಾತ್ರ ನಡೆಸಿರುವುದಾಗಿ ಹೇಳಲಾಗಿದೆ. ಹೀಗೆ ಇಡಿಯಾಗಿ ಪಂಪ–ನಾರಣಪ್ಪರ ಕೃತಿಗಳನ್ನು ಒಟ್ಟಿಗೆ ಇರಿಸಿಕೊಂಡು ವ್ಯಾಸ ಭಾರತದೊಂದಿಗೆ ಹೋಲಿಸಿ ನಡೆಸಿದ ವ್ಯಾಪಕವಾದ ಏಕೈಕ ಅಧ್ಯಯನ ಇದಾಗಿದೆ.[12]

ಪಂಪ–ಕುಮಾರವ್ಯಾಸರಿಗೆ ಮಹಾಭಾರತದ ದಾಕ್ಷಿಣಾತ್ಯ ಪಾಠ ಆಕರವಾಗಿದ್ದಿರಬೇಕೆನ್ನುವ ನ.ಸುಬ್ರಹ್ಮಣ್ಯಂ ಅವರು "ನಿಷ್ಕೃಷ್ಟವಾಗಿ ಅವರಿಗೆ ದೊರೆತಿದ್ದ ಮೂಲದ ಸ್ವರೂಪ ಹೇಗಿತ್ತೆಂಬುದನ್ನು ಹೇಳುವುದು ಕಷ್ಟ.

---

12. ಸುಬ್ರಹ್ಮಣ್ಯಂ, ನ., ಮಹಾಭಾರತ ಸಮೀಕ್ಷೆ, ಮೈಸೂರು, 1973. ಮುಂದೆ ನೀಡುವ ಪುಟ ವಿವರಗಳು ಈ ಮುದ್ರಣದ್ದು.

ಹನ್ನೊಂದನೇ ಶತಮಾನದಲ್ಲಿದ್ದ ದಾಕ್ಷಿಣಾತ್ಯ ಪಾಠದ ಸ್ವರೂಪ ಹೇಗಿತ್ತೆನ್ನುವುದನ್ನು ತಿಳಿಯಲು .......... ತೆಲುಗಿನ ನನ್ನಯ ಭಟ್ಟನು ರಚಿಸಿದ 'ಆಂಧ್ರ ಮಹಾಭಾರತಮು' ಬಹಳ ಸಾಧಕವಾಗಿದೆ. 'ಆಂಧ್ರ ಮಹಾಭಾರತಮು' ಮೂಲ ಭಾರತದ ಸಂಕ್ಷಿಪ್ತ ರೂಪವೇ ಎನ್ನಬಹುದು. ಅದರಲ್ಲೂ ನನ್ನಯ ಭಟ್ಟನು ತನ್ನ ಕಾವ್ಯದಲ್ಲಿ ಪರ್ವ ಸಂಗ್ರಹದ ಭಾಗವನ್ನೇ ತದ್ವತ್ತಾಗಿ ಇಳಿಸಿ, ಮಹಾಭಾರತದ ಪ್ರತಿಯೊಂದು ಪರ್ವದಲ್ಲಿರುವ ಶ್ಲೋಕಗಳ ಸಂಖ್ಯೆಯನ್ನು ಕೊಡುವುದರಿಂದ ಅದು ಹೆಚ್ಚು ವಿಶ್ವಸನೀಯವಾಗಿದೆ" ಎಂದು ಹೇಳುತ್ತಾ ನನ್ನಯ ಭಟ್ಟನಿಗಿಂತ ಅತಿ ಪ್ರಾಚೀನನಲ್ಲದ ಪಂಪನಿಗೂ, ಅತಿ ಅರ್ವಾಚೀನನಲ್ಲದ ಕುಮಾರ ವ್ಯಾಸನಿಗೂ ನನ್ನಯನಿಗೆ ದೊರೆತಿದ್ದ ಮೂಲವೇ ಆಧಾರವಾಗಿರಬೇಕೆಂದು ಊಹಿಸಿದ್ದಾರೆ (ಪು : 21). ಆದರೆ ಪಂಪ — ನನ್ನಯ — ಕುಮಾರವ್ಯಾಸರ ಕೃತಿಗಳ ನೆರೆಯಿಂದಲೇ ಈ ಸಂಬಂಧದ ವಿಶೇಷ ಚರ್ಚೆಯನ್ನೇನೂ ಬೆಳೆಸಿಲ್ಲ.

ಈ ಅಧ್ಯಯನದ ಬಹುಪಾಲು ಪಂಪ — ನಾರಣಪ್ಪ — ವ್ಯಾಸರ ಕಥಾ ಸರಣಿಗಳಲ್ಲಿರುವ ಸಂಬಂಧಾಂತರಗಳ ಪರಿಶೀಲನೆಗೆ ಮೀಸಲಾಗಿದೆ. ಅಂತೂ ಕವಿಗಳು ತಮ್ಮ ದೃಷ್ಟಿಗನುಗುಣವಾಗಿ ಬಿಟ್ಟಿರುವ ಅಂಶಗಳು, ಹೊಸದಾಗಿ ಸೇರಿಸಿಕೊಂಡಿರುವ ಅಂಶಗಳು; ಒಟ್ಟಿನ ಮೇರೆ ಸಾಧಿಸಿದ್ದನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪರ್ವಾನುಕ್ರಮದಲ್ಲಿ ಪರಿಶೀಲಿಸಲಾಗಿದೆ. ವಿವಕ್ಷೆಯಲ್ಲಿರುವ ಕೃತಿಗಳ ಸಾಮ್ಯ ವೈಷಮ್ಯಗಳನ್ನು ಗುರುತಿಸುವಲ್ಲಿ ಅನೇಕ ಅಂಶಗಳು ಪುನರಾವರ್ತಿತವಾಗುತ್ತಾ ಹೋಗಿವೆ. ಇದು ಪರಿಶೀಲನೆಗೆ ಆಯ್ದುಕೊಂಡ ವಿಧಾನಕ್ಕೇ ಸಂಬಂಧಿಸಿರುವಂತೆ ತೋರುತ್ತದೆ.

ಅಂತೂ ಕವಿಗಳ ದೃಷ್ಟಿಗನುಗುಣವಾಗಿ ಕಥಾ ಸರಣಿಯಲ್ಲಿ ಮಾರ್ಪಾಡುಗಳಾಗಿವೆಯೆನ್ನುವಾಗ 'ದೃಷ್ಟಿ' ಎಂಬುದನ್ನು ಹೇಗೆ ಗ್ರಹಿಸಲಾಗಿದೆಯೆಂಬುದು ಕುತೂಹಲದ ಸಂಗತಿ. ಈ ಸಂಬಂಧದಲ್ಲಿ ಸುಬ್ರಹ್ಮಣ್ಯಂ ಅವರ ಕೆಲವು ಮಾತುಗಳನ್ನು

ಗಮನಿಸಬಹುದು : "ಪಂಪ ಜೈನ, ಜಿನ ಭಕ್ತ; ನಾರಣಪ್ಪ ವೈಷ್ಣವ, ವಿಷ್ಣು ಭಕ್ತ. ಮಹಾಭಾರತದಲ್ಲಿ ಪಂಪನದು ಕೇವಲ ಲೌಕಿಕ ದೃಷ್ಟಿಯಾದರೆ, ನಾರಣಪ್ಪನದು ಆಧ್ಯಾತ್ಮಿಕ ದೃಷ್ಟಿ. ಪಂಪ ತನ್ನೊಡೆಯನಿಂದ ಆದೇಶ ಪಡೆದು ಆಶ್ರಯದಾತನಾದ ಅವನ ಮೆಚ್ಚುಗೆಗಾಗಿ ಕಾವ್ಯ ಬರೆದರೆ, ನಾರಣಪ್ಪ ಶ್ರೀ ಕೃಷ್ಣ ಪ್ರೇರಿತನಾಗಿ, ಶ್ರೀ ಕೃಷ್ಣನ ಪ್ರೀತ್ಯರ್ಥವಾಗಿ, ಆತ್ಮೋದ್ಧಾರ ಮತ್ತು ಲೋಕೋದ್ಧಾರಕ್ಕಾಗಿ ಕಾವ್ಯ ಬರೆದ. ಪಂಪ ಮಹಾಭಾರತದಲ್ಲಿ ಪ್ರಧಾನವಾಗಿ ಕಂಡದ್ದು ಅರ್ಜುನನ ಮಹಿಮೆಯನ್ನು, ಆದುದರಿಂದ ಅವನ ಕಾವ್ಯದ ಎಲ್ಲ ಘಟನಾವಳಿಗಳನ್ನೂ ಹಿಡಿದಿಟ್ಟ ಸೂತ್ರ ಅರ್ಜುನನ ಸಾಹಸ. ನಾರಣಪ್ಪ ಕಂಡದ್ದು ಕೃಷ್ಣ ಮಹಿಮೆಯನ್ನು, ಆದುದರಿಂದ ಅವನ ಕಾವ್ಯದ ಘಟನಾವಳಿಗಳನ್ನು ಹಿಡಿದಿಟ್ಟ ಸೂತ್ರ ಕೃಷ್ಣ ಭಕ್ತಿ. (ಪು : 84)

ಪಂಪ — ಕುಮಾರವ್ಯಾಸರ ದೃಷ್ಟಿಯನ್ನು ಕುರಿತು ವಿವರಿಸುವ ಈ ಮಾತುಗಳು, ಇದುವರೆಗಿದ್ದ ಸಾಮಾನ್ಯ ಪರಿಪಾಟಿಗಿಂತ ಬೇರೆಯಾಗಿಲ್ಲವೆಂಬುದನ್ನು ಗಮನಿಸಬೇಕು. ಕೃತಿಯಲ್ಲಿರುವ ಮಾರ್ಪಾಡುಗಳಿಗೆಲ್ಲ, ಈ ಮಾತುಗಳಿಂದ ಉತ್ತರಿಸುವುದು ಸಾಧ್ಯವೆ? ಅಥವಾ ಅಂಥ ಅಗತ್ಯವಿದೆಯೋ? ಎಂಬ ಸಂದೇಹ ಉಳಿದೇ ಬಿಡುತ್ತದೆ. ಇನ್ನು ಸುಬ್ರಹ್ಮಣ್ಯಂ ಅವರ ಇಡೀ ಅಧ್ಯಯನದಲ್ಲಿ ಪಂಪ — ಕುಮಾರವ್ಯಾಸ — ವ್ಯಾಸರ ಕೃತಿಗಳಲ್ಲಿನ ಪರಸ್ಪರ ಸಾಮ್ಯತೆ — ಭಿನ್ನತೆಗಳನ್ನು ಗುರುತಿಸಲಾಗಿದೆ. ಇಡೀ ಕೃತಿಯು ತುಂಬ ಹರಡಿಕೊಂಡಿರುವ ಅಂಥವನ್ನು ಇಲ್ಲಿ ನಿದರ್ಶಿಸಬೇಕಾದ ಅಗತ್ಯವಿಲ್ಲವೆಂದು ತೋರುತ್ತದೆ.

ಸಾಮಾನ್ಯವಾಗಿ ಅವರು ಪಂಪನನ್ನು ಕುರಿತು ಮತ್ತೆ ಮತ್ತೆ ಹೇಳುವ ಕೆಲವು ಮಾತುಗಳು ಹೀಗಿವೆ :

"ಕಥೆಯನ್ನು ನಿರೂಪಿಸುತ್ತಾ ಹೋಗುವಲ್ಲಿ ಬಳಸಿದ ಮಾರ್ಗ ಪಂಪನಿಗೆ ಪ್ರಿಯವಾಗದು. ಹೇಳಬೇಕಾದುದನ್ನು ಹಿತ ಮಿತವಾಗಿ, ನೇರವಾಗಿ

ಹೇಳಿಕೊಂಡು ಮುಂದುವರಿಯುವುದು ಅವನ ಸ್ವಭಾವ." (ಪು : 333)

"ಮೂಲದ ಸನ್ನಿವೇಶಗಳು ಎಲ್ಲಿ ನೀರಸವಾಗಿಯೂ ಒರಟಾಗಿಯೂ ಬರುತ್ತವೆಯೋ ಅಲ್ಲಿ ಕುಶಲ ಕರ್ಮವನ್ನೆಸಗಿ ನಯಗೊಳಿಸಿ ಹೆಚ್ಚು ರಸಮಯವನ್ನಾಗಿಸುವುದು ಪಂಪನ ಕಾರ್ಯ." (ಪು : 263)

"ಪಂಪನಿಗೆ ಕಣಿ ಬೇಕಿಲ್ಲ, ರಪ್ಪಟ ಪಟ ಎಂದು ಎಲ್ಲವನ್ನೂ ಮುಗಿಸಿ ಬಿಡುತ್ತಾನೆ." (ಪು : 185)

ಇಂಥ ಪುನರಾವರ್ತಿತ ಮಾತುಗಳು ಪಂಪನ 'ಹಿತ ಮಿತ' ಗುಣವನ್ನು, ಅವನ ರಚನಾ ಕೌಶಲವನ್ನು ಸ್ಥಾಪಿಸುತ್ತಾ ಹೊರಗುತ್ತವೆಂಬುದು ಸ್ಪಷ್ಟ. ಇದಕ್ಕೆ ವ್ಯತಿರಿಕ್ತವಾಗಿ ಕುಮಾರವ್ಯಾಸನಲ್ಲಿ ವರ್ಣನಾ ನಿಷ್ಠೆಯನ್ನು, ವಿವರ ಬಾಹುಳ್ಯವನ್ನು ಮತ್ತೆ ಮತ್ತೆ ಪ್ರಸ್ತಾಪಿಸಿದ್ದಾರೆ.

ಈ ಅಧ್ಯಯನದಲ್ಲಿ ಸ.ಸುಬ್ರಹ್ಮಣ್ಯ ಅವರು ಬಹುಮಟ್ಟಿಗೆ ಕಥಾ ವಿವರಗಳನ್ನೇ ಮುಖ್ಯವಾಗಿರಿಸಿಕೊಂಡು ತಮ್ಮ ತುಲನೆಯನ್ನು ನಡೆಸಿರುವರಾದರೂ ಪಂಪ — ನಾರಣಪ್ಪರಲ್ಲಿ ಕೆಲವು ಉಕ್ತಿ ಸಾಮ್ಯಗಳನ್ನೂ ಭಾವ ಸಾಮ್ಯಗಳನ್ನೂ ಗುರುತಿಸುತ್ತಾರೆ. ಕೃಷ್ಣ ಸಂಧಾನ, ಕರ್ಣ ಭೇದೋಪಾಯ, ಭೀಮ—ಹಿಡಿಂಬೆಯರ ಸಂತೋಷ ವಿಹಾರ — ಇಂಥ ಸಂದರ್ಭಗಳಿಂದ ತೆಗೆದ ಪದ್ಯಗಳನ್ನು ಆಧರಿಸಿ, ಅವರವರ ವಿಶಿಷ್ಟತೆಯನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಕೆಲವು ನಿದರ್ಶನಗಳಿಂದ 'ಲಯ ಗತಿಗಳಲ್ಲಿ ಕೂಡ ನಾರಣಪ್ಪ ಪ್ರಭಾವಿತನಾಗಿದ್ದಾನೆ' (ಪು : 735) ಎಂದಿದ್ದಾರೆ. ಇದು ಪ್ರಭಾವಿದ್ದಿರಲಿ ಇಲ್ಲದಿರಲಿ, ಇದರಿಂದ ಒಂದು ಅಂಶ ಸ್ಪಷ್ಟ. ಕುಮಾರವ್ಯಾಸನ ಷಟ್ಪದಿಯ ಲಯಗಳು ಮತ್ತು ಪಂಪನ ಕಂದ — ವೃತ್ತಗಳಲ್ಲಿರುವ ಲಯಗಳಲ್ಲಿ ಕಾಣಬರುವ ಸಮಾನ ಗುಣಗಳು ಪಂಪನ ರಚನೆಯ ವಿಶಿಷ್ಟತೆಯನ್ನು ಸಮರ್ಥಿಸುತ್ತವೆ. ಆದರೆ ಸುಬ್ರಹ್ಮಣ್ಯಂ ಅವರು ಇಂಥ

ಅಂಶಗಳನ್ನು ಕೆಲವೆಡೆಗಳಲ್ಲಿ ಮಾತ್ರವೆ ಪ್ರಸ್ತಾಪಿಸಿದ್ದಾರೆ. ಇದು ಇನ್ನಷ್ಟು ವ್ಯಾಪಕವಾಗಿದ್ದರೆ ಕೆಲವು ವಿಶಿಷ್ಟ ಅಂಶಗಳನ್ನು ಹೊರಗೆಡಹಲು ಸಾಧ್ಯವಾಗುತ್ತಿತ್ತು. 'ಕಿರಾತಾರ್ಜುನೀಯ' ದಂಥ ಪ್ರಸಂಗಗಳಲ್ಲಿ ಪಂಪನಿಗೆ ಭಾರವಿಯೇ ಆಧಾರವಾಗಿದ್ದರೆ ನಾರಣಪ್ಪನಿಗೆ ಪಂಪನೇ ಆಧಾರವಾಗಿದ್ದಾನೆಂಬುದನ್ನು ಸಮರ್ಥಿಸುತ್ತಾರೆ. ಆದರೂ ಪಂಪನಿಂದ ರನ್ನ ಪ್ರಭಾವಿತನಾಗಿರುವಂತೆ, ನಾರಣಪ್ಪ ಪ್ರಭಾವಿತನಾಗಿಲ್ಲ, ಪಂಪನ ಪ್ರಭಾವ ನಾರಣಪ್ಪನ ಮೇಲಿದೆ ಎಂದರೆ ನಾರಣಪ್ಪ ಪಂಪನ ಕೃತಿಯನ್ನೇ ಮಗ್ಗುಲಲ್ಲಿಟ್ಟುಕೊಂಡು ಅದನ್ನೇ ಹಿಂಬಾಲಿಸಿದ್ದಾನೆಂದು ಹೇಳಲಾಗದೆಂಬುದು ಅವರ ಸ್ಪಷ್ಟ ನಿಲುವು. (ಪು : 721)

ಕನ್ನಡದ ಇಬ್ಬರು ಮಹತ್ವದ ಕವಿಗಳನ್ನು ವ್ಯಾಸ ಭಾರತದ ಕಥಾ ಚೌಕಟ್ಟಿನ ಹಿನ್ನೆಲೆಯಲ್ಲಿ ವ್ಯಾಪಕ ಪರಿಶೀಲನೆಗೆ ಒಳಗು ಮಾಡಿರುವ ಈ ಅಧ್ಯಯನವನ್ನು ಒಂದು ಗಮನಾರ್ಹ ಪ್ರಯತ್ನವೆಂದೇ ಕರೆಯಬೇಕು. ಕನಿಷ್ಠ ಪಂಪ– ನಾರಣಪ್ಪರನ್ನು ಕುರಿತು ಅಧ್ಯಯನ ಮಾಡುವವರಿಗೆ ಇದೊಂದು ಗಮನಿಸಲೇಬೇಕಾದ ಅಧ್ಯಯನ; ಉದ್ಯೋಗ ಪರ್ವಾಂತ್ಯದವರೆಗಿನ ಕಥಾ ಸರಣಿಯಲ್ಲಿನ ಅನೇಕ ಮಾರ್ಪಾಡುಗಳ ವಿವರಗಳಿಲ್ಲಿ ಕಾಣದೊರೆಯುತ್ತವೆ. ಆದರೆ ಇದೆಲ್ಲದರ ಮಧ್ಯೆ, ಈ ಮಾರ್ಪಾಡುಗಳಿಗೆಲ್ಲ ಪಂಪ– ನಾರಣಪ್ಪರ ಭಿನ್ನ ದೃಷ್ಟಿಕೋನವೇ ಕಾರಣವೆಂದು, ಅದನ್ನು ರಾಜಾಶ್ರಯ, ಭಕ್ತಿ ನಿಷ್ಠೆ, ಕೃಷ್ಣ ಪಾರಮ್ಯ, ಸಂಗ್ರಹ ಗುಣ – ವರ್ಣನಾ ನಿಷ್ಠೆ – ಇಂಥ ಅಂಶಗಳೊಂದಿಗೆ ಸಂಬಂಧಿಸಿ ನೋಡಿದ್ದು ಒಂದು ರೀತಿಯಲ್ಲಿ ತೌಲನಿಕ ಅಧ್ಯಯನದ ಉದ್ದೇಶ ಮತ್ತು ಸಾಧ್ಯತೆಗಳನ್ನು ಸೀಮಿತಗೊಳಿಸಿತೆಂಬುದನ್ನು ಗಮನಿಸಬೇಕು.

ಈ ನಿಬಂಧನಲ್ಲಿ ಪ್ರಾಸಂಗಿಕವಾಗಿಯೂ ಪ್ರತ್ಯೇಕವಾಗಿಯೂ ನಡೆದಿರುವ ಇನ್ನು ಕೆಲವು ತೌಲನಿಕ ಚರ್ಚೆಗಳಿವೆಯಾದರೂ ಸದ್ಯ ಅವನ್ನೆಲ್ಲ ಇಲ್ಲಿ ಪ್ರಸ್ತಾಪಿಸಬೇಕಾದ ಅಗತ್ಯವಿಲ್ಲವೆಂದು ತೋರುತ್ತದೆ. ಈ ಚರ್ಚೆಗಳು ಗಮನಾರ್ಹವಾದ ಅಂಥ ಯಾವ ವಿಶೇಷಾಂಶಗಳನ್ನೂ ಹೊರ ಹಾಕಿಲ್ಲ.

ಹೀಗಾಗಿ ಇನ್ನೆರಡು ಚರ್ಚೆಗಳನ್ನು ಮಾತ್ರ ಇಲ್ಲಿ ಗಮನಿಸಬಹುದು. ಒಂದು ಚಿಟಗುಪ್ಪಿಯವರದು, ಮತ್ತೊಂದು ಸುಜನಾ ಅವರದು. ಭೀಮರಾವ ಚಿಟಗುಪ್ಪಿಯವರು 'ಪಂಪ ರನ್ನರ ವಸ್ತು ವಿಸಂಗತಿಗಳನ್ನು' ಕುರಿತು ಚರ್ಚಿಸಿದ್ದಾರೆ. ಅರ್ಜುನನನ್ನು ಪಂಪ ಸಾಮಂತ ಚೂಡಾಮಣಿಯೆಂದು ಕರೆದದ್ದು, ಅರ್ಜುನ — ಅರಿಕೇಸರಿಯರ ಸಂಬಂಧದ ಇತರ ಅಂಶಗಳನ್ನೂ, ರನ್ನನಲ್ಲಿರುವ ಇಂಥ ಕೆಲವಂಶಗಳನ್ನೂ ಪ್ರಸ್ತಾಪಿಸಿ, "ಪಂಪ—ರನ್ನರ ಈ ಬಗೆಯ ವರ್ಣನೆ ಆಶ್ರಯದಾತರಲ್ಲಿ ಅವರಿಗಿದ್ದ ಅತೀವ ಪಕ್ಷಪಾತದಿಂದ ಸ್ಫುರಿಸಿದ ಕವಿ ವ್ಯಾಪಾರವಲ್ಲದೆ ಬೇರೊಂದಲ್ಲ" ಎಂದಿದ್ದಾರೆ. ಇದೇನೂ ಅಂಥ ಮಹತ್ವದ ಅಂಶವಲ್ಲ. ಇದು ಈ ಮೊದಲೇ ಪ್ರಸ್ತಾಪಿತವಾಗಿದ್ದುದು ಕೂಡ. ಇದಕ್ಕಿಂತ ಮುಖ್ಯವಾಗಿ ಇಲ್ಲಿ ಚಿಟಗುಪ್ಪಿಯವರು ದ್ರೌಪದಿಯ ಪಂಚ ಪತಿತ್ವಕ್ಕೆ ಸಂಬಂಧಿಸಿದ ಕೆಲವು ಗಮನಾರ್ಹ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. 'ಮೊದಲಿಂದ ಕಡೆತನಕ ಪಾಂಡವರೊಡನೆ ಪಡಬಾರದ ಕಷ್ಟವನ್ನು ಅನುಭವಿಸಿದವಳು ದ್ರೌಪದಿ; ಸುಖದ ಕಾಲ ಬಂದಾಗ ಸದ್ದಿಲ್ಲದೆ ಗದ್ದುಗೆ ಏರಿದವಳು ಸುಭದ್ರೆ' ಎಂಬ ಆಕ್ಷೇಪವನ್ನು ಪ್ರಶ್ನಿಸಿ, 'ಪಂಪನ ದೃಷ್ಟಿಯಲ್ಲೂ ಆಕೆ ಪಂಚವಲ್ಲಭೆ, ಪ್ರಕಟವಾಗಿ ಅವನು ಅರ್ಜುನನೊಬ್ಬನಿಗೇ ಮದುವೆ ಮಾಡಿಸಿದ್ದರೂ ಅದೇ ಸಮಯದಲ್ಲಿ ಆಕೆ ಪಾಂಡವರೈವರ ಪತ್ನಿಯಾದಳೆಂಬುದನ್ನು ಪರ್ಯಾಯದಿಂದ ಸೂಚಿಸಿರುವನು .......... ಇದನ್ನು ಅರಿತುಕೊಂಡಾಗ ದ್ರೌಪದಿಯನ್ನು ಏಕವಲ್ಲಭೆಯನ್ನಾಗಿಸಿ ಪಂಪ ತೊಂದರೆಗೀಡಾಗಿರುವನೆಂಬ ಆಕ್ಷೇಪಣೆ ಇಲ್ಲದಂತಾಗಿ ಅವನ ವಿಷಯದಲ್ಲಿ ಗೌರವಾದರಗಳೇ ಇಮ್ಮಡಿಸುವವು" ಎಂದಿದ್ದಾರೆ. ಇದಕ್ಕೆ ಪೂರಕವಾಗಿ "ಅರ್ಜುನ — ಅರಿಕೇಸರಿಯರಲ್ಲಿರುವ ಅಭೇದದ ಮೂಲಕ ದ್ರೌಪದಿಯನ್ನು ಏಕವಲ್ಲಭೆಯನ್ನಾಗಿಸುವುದು ಅನಿವಾರ್ಯವಿದ್ದರೂ ವಿಸಂಗತಿಗಳು ತೋರದಂತೆ ಪಂಪ ಮೂಲವನ್ನು ಮಾರ್ಪಡಿಸಿದ್ದರೆ ಕಥೆಯ ಮೈಗೆಡುತ್ತಿತ್ತು", ಯುಧಿಷ್ಠಿರನು ಹಿರಿಯನೆಂಬ ಕಾರಣದಿಂದ ದ್ರೌಪದಿಯ ಮಾನ ಸನ್ಮಾನಗಳೆಲ್ಲ ಅವನ ಮಾನ ಸನ್ಮಾನಗಳೊಂದಿಗೆ ಸಲ್ಲಗ್ನವಾಗಿವೆಯೆಂದೂ,

ಯುಧಿಷ್ಠಿರನ ಉಪಸ್ಥಿತಿಯಲ್ಲಿ, ದ್ರೌಪದಿಯನ್ನು ಪಟ್ಟಮಹಿಷಿಯನ್ನಾಗಿಸುವುದು ಲೋಕ ಪ್ರಸಿದ್ಧವಿರುವ ಅವಳ ಸ್ಥಾನಮಾನಗಳಿಗೆ ಕುಂದು—ಎಂಬಂಥ ವಿವರಗಳನ್ನೂ ನೀಡಿದ್ದಾರೆ.[13] ಈ ವಿವರಗಳನ್ನು ಕುರಿತ ಚರ್ಚೆ ಸಾಧ್ಯವಿರಬಹುದು. ಆದರೆ ಈ 'ಪಂಚ ಪತಿತ್ವ'ದ ಅಂಶವನ್ನು ಅವರು ವಿವರಿಸಿಕೊಂಡ ರೀತಿ ಸಾಮಾನ್ಯ ಪರಿಪಾಟಿಗಿಂತ ಭಿನ್ನ. ಈ ಮುನ್ನ ಮುಳಿಯ ಅವರು ಇಂಥದೊಂದು ಪ್ರಯತ್ನವನ್ನು ಮಾಡಿದ್ದರು. ಈ ಎರಡೂ ಪ್ರಯತ್ನಗಳೂ ಪಂಪನ ಸಮರ್ಥನೆಯ ಉದ್ದೇಶವನ್ನೇ ಹೊಂದಿವೆಯೆಂಬುದು ಸ್ಪಷ್ಟ.

'ಪಂಪ ಭಾರತದ ವಸ್ತು ವಿನ್ಯಾಸ'ವನ್ನು ಕುರಿತ ತಮ್ಮ ಚರ್ಚೆಯಲ್ಲಿ[14] ಸುಜನಾ ಅವರು ಇದುವರೆಗೆ ಪಂಪನನ್ನು ಕುರಿತು ನಡೆದ ಚರ್ಚೆಗಳಿಗಿಂತ ಭಿನ್ನ ದಾರಿಯೊಂದನ್ನು ಹಿಡಿದಿದ್ದಾರೆ. ಈ ಭಿನ್ನ ದಾರಿಯನ್ನು ಹಿಡಿದದ್ದು ಪಂಪನ ಸೋಲುಗಳನ್ನು, ಅವನ ಕೃತಿಯಲ್ಲಿರುವ ಕುಂದುಗಳನ್ನು ತೋರಿಸಲೆಂದೇ ಎಂಬುದು ಸ್ಪಷ್ಟ. ಪಂಪನನ್ನು ಉದ್ಗಾರಗಳಿಂದ, ಮೆಚ್ಚುಗೆಯ ಮಾತುಗಳಿಂದ ಸಮರ್ಥಿಸುವುದು ಒಂದು ಅತಿಯಾದರೆ, ಇದು ಮತ್ತೊಂದು ಅತಿ. ಪಂಪ — ನಾರಣಪ್ಪರಂಥ ಕವಿಗಳನ್ನು ಕುರಿತು ವಿವೇಚಿಸುವಾಗ 'ನಮ್ಮ ಬಹುಪಾಲು ವಿದ್ವಾಂಸರೆಲ್ಲ' ಅವರನ್ನು 'ಸದ್ಯೋಜಾತರೆಂದೂ ಅಪೂರ್ವ ಸೃಷ್ಟಿಕರ್ತರೆಂದೂ' ಭಾವಿಸಿರುವುದನ್ನು ನೋಡಿ 'ರೋಸಿ ಹೋಗಿರುವುದರಿಂದ ಮೂಲ ಶೋಧನ ದರ್ಶನ ಮಾಡುವ' ತಮ್ಮ ಕಳಕಳಿಯ ಬಗ್ಗೆ ಹೇಳಿಕೊಂಡಿದ್ದಾರೆ. ಆದರೆ

---

13. 'ಪಂಪ–ರನ್ನರ ವಸ್ತು ವಿಸಂಗತಿಗಳು', ಸಂಶೋಧನ ಪಂಚದಶಿ, ಮೈಸೂರು, 1974. ಪು: 20–38

14. ನೋಡಿ: 'ಪಂಪ ಭಾರತದ ವಸ್ತು ವಿನ್ಯಾಸ', ಪಂಪ: ಒಂದು ಅಧ್ಯಯನ, (ಸಂ) ಜಿ.ಎಸ್.ಶಿವರುದ್ರಪ್ಪ, ಬೆಂ.ವಿ.ವಿ., 1974. ಪು: 179, 146, 149 ಇತ್ಯಾದಿ.

ಚರ್ಚೆಯ ಒಟ್ಟು ಧಾಟಿ — ವ್ಯಾಸ ಭಾರತದ ಬಗೆಗಿನ ಒಲವಿನ ಫಲವಾಗಿ — ಪಂಪನದು ವ್ಯಾಸರ ಮಟ್ಟದ ರಚನೆಯಲ್ಲ ಎಂಬುದನ್ನು ಹೇಳುವ ಒಂದು ಅಚಲ ನಿರ್ಧಾರದಿಂದ ಕೂಡಿರುವಂತಿದೆ. ಅವರು ತಮ್ಮ ತೀರ್ಮಾನಗಳಿಗೆ ನೀಡುವ ನಿದರ್ಶನಗಳನ್ನೇ ಗಮನಿಸಿದರೂ ಈ ಬಗೆಯ ತೀರ್ಮಾನಗಳಿಗೆ ಬರಲು ಸಾಧ್ಯವಿದೆಯೇ ಎಂದು ಸಹಜವಾಗಿಯೇ ಅನ್ನಿಸುತ್ತದೆ. ಪಂಪನ 'ಚಲದೊಳ್ ದುರ್ಯೋಧನಂ .....' ಎಂಬ ಪದ್ಯದಲ್ಲಿ ಪಂಪ ಕವಿಯ ಪಾತ್ರ ಕಲ್ಪನೆ ಎಂಥದು ಎಂಬುದು ಸೂಚಿತವಾಗಿದೆಯೆಂದು "ಪಂಪನ ಎಲ್ಲ ಪಾತ್ರಗಳೂ ತದ ತದ ಗುಣ ಸ್ವಭಾವ ನಿರ್ದೇಶಿತರಾಗುವುದರಿಂದ ಹೆಚ್ಚು ಶೋಭಿತರಾದಂತೆ ಕಂಡರೂ ಬಹುವರ್ಣ ದೀಪ್ತರಲ್ಲ. ಅವರೆಲ್ಲ ಹೆಚ್ಚು ಮುಷ್ಟಿ ಗ್ರಾಹ್ಯ ಆದರ್ಶರಾಗುತ್ತಾರೆ." "ಆಯಾ ಪಾತ್ರಗಳಿಗೆ ಆಯಾ ವಿಶೇಷಣಗಳನ್ನು ಕೊಟ್ಟದ್ದರಿಂದ ಆ ಗುಣ ವಿರುದ್ಧವಾದ ಪ್ರಬಲ ಸಂಚಾರೀ ಗುಣವಾವುದೂ ಆ ಪಾತ್ರ ಚಿತ್ರಣದಲ್ಲಿ ಬಾರದಂತೆ ಎಚ್ಚರ ವಹಿಸುವ ಅಪಾಯ ಒದಗಿತು" ಎಂದೆಲ್ಲ ಹೇಳಿದ್ದಾರೆ. ಈ ಬಗೆಯ ತೀರ್ಮಾನ ರೂಪದ ಮಾತುಗಳಿಗೆ ಆ ಪದ್ಯ ಮಾತ್ರವೇ ಆಧಾರವೇ ಅಥವಾ ಕೃತಿಯಲ್ಲಿ ಸಮರ್ಥನೆಯಿದೆಯೇ? ಎಂಬುದು ಗಮನಿಸಬೇಕಾದ ಅಂಶ. ಪದ್ಯ ಗುಣ — ಪಾತ್ರ ಸಮೀಕರಣವನ್ನು ಹೇಳುವ ಮಾಡಿಕೆಯೊಂದು ಹೆಚ್ಚು ಪ್ರಚಲಿತವಾಗಿದ್ದು, ಅದು ತೀರ ದುರ್ಬಲವಾದ ಅಧ್ಯಯನ ವಿಧಾನದ ಫಲವಾಗಿದೆ. ಹಿಂದಿನ ಅಧ್ಯಾಯದಲ್ಲಿ ಗುರುತಿಸಿಕೊಂಡಂತೆ ಆ ಪದ್ಯ ಪ್ರಾಸಂಗಿಕವೆಂದು ನೋಡುವುದು ಉಚಿತವಾಗಿದೆ. ಅದನ್ನೇ ಹಿಡಿದು ಆ ಪಾತ್ರಗಳನ್ನೆಲ್ಲ ನೋಡಬೇಕಾಗಿಲ್ಲ. ವ್ಯಾಸ ಭಾರತದ ನಿದರ್ಶನಗಳನ್ನು ತೋರಿಸುತ್ತಾ ಪಂಪನ ಸೋಲುಗಳನ್ನು ಹೇಳಲು ಇನ್ನೂ ಕೆಲವು ನಿದರ್ಶನಗಳನ್ನು ನೀಡಿದ್ದಾರೆ. ವಾಸ್ತವವಾಗಿ ಕೃತಿಯ ಕಥೆಯಲ್ಲಿ ಆ ಪದ್ಯ, ಪ್ರಸಂಗ, ಪಾತ್ರಗಳು ಯಾವ ಅರ್ಥವನ್ನು ಕೊಡುತ್ತವೆ, ಏನಾಗಿವೆ, ಎಂಬುದಕ್ಕಿಂತ ಸುಜನಾ ಅವರು ಹಾಗೆ ನೋಡುತ್ತಿದ್ದಾರೆ ಎಂದೇ ಅನ್ನಿಸುತ್ತದೆ. ಅವರ ಪ್ರಕಾರ

ಪಂಪನ ಘನತೆಯೆಲ್ಲ ಇರುವುದು ವಸ್ತುವಿನ ಆಯ್ಕೆಯಲ್ಲಿ ಮತ್ತು ಭಾಷೆಯನ್ನು ಬಳಸುವುದರಲ್ಲಿ ಮಾತ್ರ. ಆದರೆ ಭಾಷಾ ಬಳಕೆಯ ಸಂಬಂಧದ ವಿವರಗಳನ್ನೇನೂ ಅವರಿಲ್ಲಿ ಚರ್ಚಿಸಿಲ್ಲ.

ಭಾರತ ಕಥೆಯ ಚೌಕಟ್ಟಿನ ಹಿನ್ನೆಲೆಯಲ್ಲೇ ಪಂಪ ಮತ್ತು ತೆಲುಗಿನ ನನ್ನಯ ಭಟ್ಟನ ಕೃತಿಗಳನ್ನು ಕುರಿತ ಒಂದೆರಡು ತೌಲನಿಕ ಅಧ್ಯಯನಗಳು ನಡೆದಿವೆ. ಕೆ.ವೆಂಕಟರಾಮಪ್ಪನವರು ಈ ಚರ್ಚೆಗೆ ಒಂದು ಪ್ರತ್ಯೇಕ ಕೃತಿಯನ್ನೇ ಮೀಸಲರಿಸಿದ್ದಾರೆ.[15] ಟಿ.ವಿ.ಸುಬ್ಬರಾವ ಅವರು ತಮ್ಮ ಲೇಖನವೊಂದರಲ್ಲಿ ಪಂಪ — ನನ್ನಯರ ಕೃತಿಗಳ ತೌಲನಿಕ ಪರಿಶೀಲನೆಯನ್ನು ನಡೆಸಿದ್ದಾರೆ.[16] ಸುಮಾರು ಎಪ್ಪತ್ತು — ಎಂಭತ್ತು ವರ್ಷಗಳ ಅಂತರದಲ್ಲಿದ್ದ ಈ ಇಬ್ಬರು ಕವಿಗಳಲ್ಲಿ ಕಾಣಬರುವ ಕೆಲವು ಸಾಮ್ಯ — ವೈಷಮ್ಯಗಳನ್ನು ಈ ಅಧ್ಯಯನಗಳು ಗಮನಿಸಿವೆ. ಮತ್ತು ಪಂಪನ ಪ್ರಭಾವ ನನ್ನಯನ ಮೇಲೆ ಆಗಿರಬಹುದೆಂಬ ನಂಬಿಕೆ ಕೂಡ ಈ ಅಧ್ಯಯನಗಳ ಹಿನ್ನೆಲೆಗಿದೆ. ಕನ್ನಡ ಮತ್ತು ತೆಲುಗು ಸಾಹಿತ್ಯದಲ್ಲಿ ಮೊತ್ತಮೊದಲ ಕವಿಗಳಾಗಿರುವ ಇವರಿಬ್ಬರೂ ಒಂದೇ ಕಾಲಮಾನದವರೂ ಆಗಿದ್ದಾರೆ. ಇಬ್ಬರೂ ರಾಜಾಶ್ರಯದಲ್ಲಿದ್ದವರೇ. ಸಾಮಾನ್ಯವಾಗಿ ಈ ಹಿಂದೆ ಗಮನಿಸಿದ ತೌಲನಿಕ ಅಧ್ಯಯನಗಳೆಲ್ಲ ಕೃತಿಯಲ್ಲಿರುವ ಮಾರ್ಪಾಡುಗಳಿಗೂ ಇಂಥ ಕೆಲವು ಅಂಶಗಳಿಗೂ ಸಂಬಂಧವನ್ನು ಕಲ್ಪಿಸಿಬಿಡುತ್ತವೆ. ಈ ಅಧ್ಯಯನಗಳಲ್ಲಿ ಕೂಡ ಇದು ಆಗುತ್ತದೆ. ಆದರೆ ಇಂಥದು ಪಂಪನ ಸಂಬಂಧದ ವಿವರಣೆಗಳಲ್ಲಿ ಕಾಣುವಷ್ಟು ನಿಚ್ಚಳವಾಗಿ ನನ್ನಯನನ್ನು ಕುರಿತ ವಿವರಣೆಗಳಲ್ಲಿ ಕಾಣದೆನ್ನಬಹುದು.

ವೆಂಕಟ ರಾಮಪ್ಪನವರು 'ಅನುವಾದ ವಿಧಾನ' ಎಂಬ ಭಾಗದಲ್ಲಿ ಪಂಪ —

---

15. ಪಂಪ — ನನ್ನಯ : ಒಂದು ಸಮೀಕ್ಷೆ, ಮೈ.ವಿ.ವಿ., 1971
16. ಪಂಪ — ನನ್ನಯ, ಪೂರ್ವೋಕ್ತ, ಪು : 58—85

ನನ್ನಯ್ಯರ ಕೃತಿಗಳಲ್ಲಿನ ಹಲವು ಸಮಾನತೆ — ಭಿನ್ನತೆಗಳನ್ನು ಗುರುತಿಸಿದ್ದಾರೆ. ಇಲ್ಲಿ ಪಂಪ — ನನ್ನಯ್ಯರಿಂದ ಕೆಲವು ಕಥಾ ವಿವರಗಳನ್ನು ತೆಗೆದು ಜೊತೆ ಜೊತೆಗಿರಿಸಿ ಪರಿಶೀಲಿಸಲಾಗಿದೆ. ಈ ಅಧ್ಯಯನದ ಕೊನೆಯಲ್ಲಿ ನನ್ನಯನ ಮೇಲಾಗಿರಬಹುದಾದ ಪಂಪನ ಪ್ರಭಾವವನ್ನು ಪದಪುಂಜಗಳು, ಕೆಲವು ವಿಶಿಷ್ಟ ಪ್ರಯೋಗಗಳು, ವರ್ಣನಾ ಭಾಗಗಳು — ಇತ್ಯಾದಿ ನೆಲೆಗಳಿಂದ ಸ್ಪಷ್ಟೀಕರಿಸಲು ಪ್ರಯತ್ನಿಸಲಾಗಿದೆ. ಸುಬ್ಬರಾವು ಅವರೂ ಒಂದು ಕಿರು ಲೇಖನದ ವ್ಯಾಪ್ತಿಯಲ್ಲೇ ನನ್ನಯನ ಮೇಲಾಗಿರುವ ಪಂಪನ ಪ್ರಭಾವವನ್ನು ಸೂಚಿಸುವ ಇಂಥ ಹಲವು ವಿವರಗಳನ್ನು ತೋರಿಸಿದ್ದಾರೆ. ಈಯೆರಡೂ ಪ್ರಯತ್ನಗಳಲ್ಲಿ ಇಂಥ ಕೆಲವಂಶಗಳಲ್ಲದೆ, ಪಂಪ— ನನ್ನಯರ ವ್ಯಕ್ತಿ ವಿವರಗಳಲ್ಲೂ ಕೆಲವು ಸಮಾನಾಂಶಗಳನ್ನು ಗುರುತಿಸಲಾಗಿದೆಯಾದರೂ ಕಥಾವಿನ್ಯಾಸ ಕ್ರಮದಲ್ಲಿರುವ ಸ್ಪಷ್ಟ ವ್ಯತ್ಯಾಸಗಳನ್ನೂ ಕಂಡುಕೊಳ್ಳಲಾಗಿದೆ. ವಾಸ್ತವವಾಗಿ ಮುಖ್ಯವಾಗಬೇಕಾದದ್ದು ಈ ಕಥಾ ವಿನ್ಯಾಸ ಕ್ರಮವೇ. ಪಂಪನಂತೂ "ವ್ಯಾಸ ಮುನೀಂದ್ರ .......... ವಾರ್ಧಿಯನೀಸುವೆಂ" ಎಂದಿರುವನಾದರೂ ಅವನದು ಕೇವಲ ಸಂಗ್ರಹ ಕಾರ್ಯವಲ್ಲ, ಅನುವಾದವಲ್ಲ. ಕೆಲವನ್ನು ಬಿಡುವ, ಸೇರಿಸುವ ಸರಳ ವಿಧಾನವೂ ಅದಲ್ಲ. ಆ ಕಥಾ ಚೌಕಟ್ಟನ್ನು ನೋಡಿದ ಚಿಕಿತ್ಸಕ ದೃಷ್ಟಿಯ ಫಲವಾಗಿ ಆದ ಪುನರ್ಸೃಷ್ಟಿಯೇ ಅದೆನ್ನಬೇಕು. ಈ ಅಧ್ಯಯನಗಳೇ ಗಮನಿಸಿರುವಂತೆ ನನ್ನಯ ಅಂಥ ಗಮನಾರ್ಹ ಮಾರ್ಪಾಡುಗಳನ್ನೇನೂ ಮಾಡಿಲ್ಲ. ನಿರೂಪಣೆಯೂ ಸೇರಿದಂತೆ ಅನೇಕಾಂಶಗಳಲ್ಲಿ ವ್ಯಾಸರನ್ನು ಅನುಸರಿಸಿದ್ದಾನೆ.

ವಾಸ್ತವವಾಗಿ ಪಂಪ — ನನ್ನಯರನ್ನು ಕುರಿತ ತೌಲನಿಕ, ಪರಿಶೀಲನೆಗಳು ಗಮನಿಸಬಹುದಾದ ಮುಖ್ಯಾಂಶವೊಂದಿತ್ತು. ನ.ಸುಬ್ರಹ್ಮಣ್ಯಂ ಅವರು ನನ್ನಯನ ಕೃತಿಯನ್ನು ಗಮನಿಸಿದರೆ, ಅವನು ದಾಕ್ಷಿಣಾತ್ಯ ಪಾಠವನ್ನನುಸರಿಸಿರಬೇಕೆಂಬ ಊಹೆಗೆ ಸಾಧ್ಯವಿದೆಯೆಂಬ ಅಂಶವನ್ನು ಪ್ರಸ್ತಾಪಿಸಿದ್ದರು. ಆದರೆ ಅವರೇನೂ

ಅದರ ಚರ್ಚೆಯನ್ನು ಬೆಳೆಸಲಿಲ್ಲ. ಈ ಅಧ್ಯಯನಗಳಲ್ಲಿ ಪಂಪ — ನನ್ನಯರನ್ನೇ ಪ್ರತ್ಯೇಕವಾಗಿ ಕುರಿತು ಚರ್ಚಿಸುವಾಗಲೂ ಈ ಅಂಶವನ್ನು ಕೈಬಿಡಲಾಯಿತು. ಈ ಅಂಶವನ್ನು ಈ ಚರ್ಚೆಗಳು ಒಳಗೊಳ್ಳುವುದರಿಂದ ಹೆಚ್ಚಿನ ಪ್ರಯೋಜನವಿತ್ತೆಂದು ತೋರುತ್ತದೆ.

ಇನ್ನೊಂದು ಅಂಶವನ್ನಿಲ್ಲಿ ಪ್ರಸ್ತಾಪಿಸಬೇಕು. ವೆಂಕಟರಾಮಪ್ಪನವರು 'ಅನುವಾದ ವಿಧಾನ' ಎಂದು ಕರೆದು ಆ ಅಧ್ಯಾಯದಲ್ಲಿ ವಸ್ತು ವಿನ್ಯಾಸದ ಚರ್ಚೆಯನ್ನು ಮಾಡಿದ್ದಾರಲ್ಲದೆ ಇತರೆಡೆಗಳಲ್ಲಿ ಹಲವು ಸಲ 'ಅನುವಾದ' ಎಂಬ ಮಾತನ್ನು ಬಳಸಿದ್ದಾರೆ. ಈ ಮಾತು 'ಭಾಷಾಂತರ' ಎಂಬರ್ಥದಲ್ಲಿ ಬಳಕೆಯಾಗಿಲ್ಲವೆಂಬುದೇನೋ ಸರಿಯೆ. ಅದು ಈ ಸಂಬಂಧದಲ್ಲಿ ಬರುವ ವಿವರಗಳನ್ನು ನೋಡಿದರೇ ತಿಳಿಯುತ್ತದೆ. ಪರಿಭಾಷೆಗಳು ಖಚಿತವಾದ ಅರ್ಥದಲ್ಲಿ ಬಳಕೆಯಾಗಬೇಕೆಂಬುದು ಇಲ್ಲಿ ಸೂಚಿಸಬೇಕಾದ ಅಂಶ.

ಉಳಿದಂತೆ ಈ ಅಧ್ಯಯನಗಳು ಪಂಪ–ನನ್ನಯರ ತೌಲನಿಕ ಅಧ್ಯಯನಕ್ಕೆ ನೆಲೆಗಟ್ಟೊಂದನ್ನು ಸಿದ್ಧಮಾಡಿವೆ ಎಂಬುದು ಸ್ಪಷ್ಟ. ಈ ನಿಟ್ಟಿನಲ್ಲಿ ನಡೆಯಲಿರುವ ಅಧ್ಯಯನಗಳು ಈ ಪ್ರಯತ್ನಗಳನ್ನು ಮುಂದುವರಿಸಬೇಕಿದೆ.

ಪಂಪನ ವಿಕ್ರಮಾರ್ಜುನ ವಿಜಯವನ್ನು ಪಂಪನ ನಂತರದ ಕನ್ನಡ ಕವಿಗಳೊಂದಿಗೆ (ರನ್ನ, ನಾರಣಪ್ಪ) ವ್ಯಾಸ ಭಾರತದ ಕಥಾ ಚೌಕಟ್ಟಿನ ಹಿನ್ನೆಲೆಯಲ್ಲಿ ಪರಿಶೀಲಿಸಿದ ಇನ್ನೂ ಕೆಲವು ಪ್ರಯತ್ನಗಳಿವೆ. ಇದುವರೆಗೆ ಗಮನಿಸಿದ ಅಧ್ಯಯನಗಳಿಗಿಂತ ಅವೇನೂ ಗಮನಾರ್ಹವಾಗಿ ಭಿನ್ನವಾಗಿವೆಯೆಂದು ತೋರದು. ತೀರ ಇತ್ತೀಚೆಗೆ ಬಂದ ವ್ಯಾಸ–ಪಂಪರನ್ನು ಕುರಿತ ಚರ್ಚೆಯೊಂದು[17]

---

17. ಕೃಷ್ಣಕುಮಾರ, ಸಿ.ಪಿ., ವ್ಯಾಸ–ಪಂಪ (ಅಣ್ಣಿಗೆರೆಯಲ್ಲಿ ಪಂಪನನ್ನು ಕುರಿತ ವಿಚಾರ ಸಂಕಿರಣದಲ್ಲಿ ಮಂಡಿತ) ಅಪ್ರಕಟಿತ, 1985.

ಕೂಡ ಪಂಪ ಭಾರತದಲ್ಲಿ ನಡೆದಿರುವ ಲೋಪ—ಆಗಮ—ಆದೇಶಗಳ ಪ್ರಕ್ರಿಯೆಯನ್ನೇ ಮುಖ್ಯವಾಗಿ ಗಮನದಲ್ಲಿರಿಸಿಕೊಂಡಿದೆ.

ವಿಕ್ರಮಾರ್ಜುನ ವಿಜಯವನ್ನು ಕುರಿತಂತೆ ನಡೆದಿರುವಷ್ಟು ತೌಲನಿಕ ಚರ್ಚೆಗಳು ಆದಿಪುರಾಣವನ್ನು ಕುರಿತಂತೆ ನಡೆದಿಲ್ಲ. ಆದರೆ ಆದಿಪುರಾಣವನ್ನು ಕುರಿತ ಯಾವುದೇ ಬಗೆಯ ಬರವಣಿಗೆಯಲ್ಲೂ ಆದಿಪುರಾಣಕ್ಕೆ ಮೂಲ ಜಿನಸೇನರ ಪೂರ್ವ ಪುರಾಣವೇ ಎಂಬುದನ್ನು ಗಮನಿಸಲಾಗಿರುತ್ತದೆ. ಈ ಪ್ರಾಸಂಗಿಕ ಪ್ರಸ್ತಾಪಗಳಲ್ಲಿ ಬರುವ ವಿವರಗಳಾಗಲಿ, ಅಂಥ ವಿವರಗಳನ್ನು ನೋಡುವ ದೃಷ್ಟಿಯಾಗಲಿ ಒಂದು ಚರ್ಚೆಯಿಂದ ಮತ್ತೊಂದಕ್ಕೆ ಬೇರೆ ಎಂದೆನ್ನಿಸದು. ಇದೇ ಅಂಶ ಆದಿಪುರಾಣವನ್ನು ಕುರಿತಂತೆ ನಡೆದ ಬೆರಳೆಣಿಕೆಯಷ್ಟು ಪ್ರತ್ಯೇಕ ಚರ್ಚೆಗಳಿಗೂ ಅನ್ವಯವಾಗುವಂಥದು.

ಆದಿಪುರಾಣವನ್ನು ಮೊದಲಿಗೆ ಪರಿಷ್ಕರಿಸಿದ ಎಸ್.ಜಿ.ನರಸಿಂಹಾಚಾರ್ಯರು "ಈ ಕಥೆ ಹಿಂದೆ ಪುರುದೇವಾದಿ ಜಿನೇಂದ್ರರು ಗಣಧರರು ಇವರ ಪರಂಪರೆಯಿಂದ ವೀರ ಜಿನಸೇನಾಚಾರ್ಯ ಪರ್ಯಂತವಾಗಿ ಉಪದೇಶ ಕ್ರಮದಿಂದ ಬಂದಿತೆಂದು" ಈ ಗ್ರಂಥದಲ್ಲಿ ಹೇಳಿದೆಯಾದರೂ "ಜಿನಸೇನನ ಪೂರ್ವ ಪುರಾಣದ ಆಧಾರದಿಂದ ಈ ಗ್ರಂಥವು ಹುಟ್ಟಿದ ಹಾಗೆ ತಿಳಿಯುವುದಿಲ್ಲ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.[18] ಜೊತೆಗೆ, ಕಾಳಿದಾಸ, ಬಾಣ, ಭಾರವಿ ಮೊದಲಾದ ಕವಿಗಳಿಂದ ಕೆಲವು ಭಾವಗಳನ್ನು ತೆಗೆದುಕೊಂಡಿರುವುದರ ನಿದರ್ಶನಗಳನ್ನು ಕುರಿತು ಪ್ರಸ್ತಾಪಿಸಿದರು. ಆದರೂ ಈ ಸಂಬಂಧದ ವಿಶೇಷ ಚರ್ಚೆಯನ್ನೇನೂ ಅವರು ಬೆಳೆಸಲಿಲ್ಲ. ನಂತರ ಕುಂದಣಗಾರರು ತಮ್ಮ ಆದಿಪುರಾಣದ ಪರಿಷ್ಕರಣದ

---

18. ನೋಡಿ : ಎಸ್.ಜಿ.ನರಸಿಂಹಾಚಾರ ಸಂಪಾದಿತ ಆದಿಪುರಾಣದ (1900) 'ಪಂಪ ಕವಿ ಚರಿತಂ' ಎಂಬ ಭಾಗ, ಪು : xiv.

ಉಪೋದ್ಘಾತದಲ್ಲಿ ಪಂಪನು ಜಿನಸೇನಾಚಾರ್ಯರನ್ನು ಅನುಸರಿಸಿದ್ದಾನೆಂಬ ಅಭಿಪ್ರಾಯವನ್ನು ಮಂಡಿಸಿದರು.[19] ಈ ಅಭಿಪ್ರಾಯದ ಸಮರ್ಥನೆಯನ್ನು ಬರಿಯ ಕಥಾ ಸರಣಿಯ ಮೂಲಕ ಮಾತ್ರವಲ್ಲದೆ, 'ಭಾಷಾ ಸರಣಿ' ಉಪಮೆ— ವರ್ಣನೆಗಳ ನೆರವಿನಿಂದಲೂ ಕಾಣಬಹುದೆಂದರು. ಇದಕ್ಕೆ ಪೂರಕವಾಗಿ ಪೂರ್ವ ಪುರಾಣ ಮತ್ತು ಆದಿಪುರಾಣಗಳ ಸಾಮ್ಯಾಂಶಗಳನ್ನಾಧರಿಸಿ ಅಂಥ ಹಲವು ನಿದರ್ಶನಗಳ ಪಟ್ಟಿಯೊಂದನ್ನೇ ನೀಡಿದ್ದಾರೆ. ಎಸ್.ಜಿ.ಎನ್. (1900) ಮತ್ತು ಕುಂದಣಗಾರರ (1953) ಈ ಭಿನ್ನ ಅಭಿಪ್ರಾಯಗಳು ಮಂಡಿತವಾದ ಕಾಲಾವಧಿಯ ಮಧ್ಯೆ ಬಂದಿರುವ ಹಲವು ಚರ್ಚೆಗಳು ಪಂಪನು ಜಿನಸೇನರ ಪೂರ್ವ ಪುರಾಣಕ್ಕೆ ಋಣಿಯಾಗಿರುವನೆಂದೂ ಹಾಗೆ ಋಣಿಯಾಗಿರುವಾಗಲೂ ಆದಿಪುರಾಣವನ್ನು ಸ್ವತಂತ್ರ ಸೃಷ್ಟಿಯೆಂಬ ಭಾವನೆ ಬರುವಂತೆ ರಚಿಸಿದ್ದಾನೆಂಬ ಅಂಶವನ್ನೇ ಎತ್ತಿ ಹಿಡಿಯುತ್ತಾ ಬಂದಿವೆ. ಈ ಚರ್ಚೆಗಳೆಲ್ಲ ಪಂಪನ ಸಂಗ್ರಹ ಗುಣವನ್ನು, ವರ್ಣನಾ ಕೌಶಲವನ್ನು, ಧರ್ಮವನ್ನು ಮಾತ್ರವಲ್ಲದೆ ಕಾವ್ಯ ಧರ್ಮವನ್ನೂ ತನ್ನ ಕೃತಿಯಲ್ಲಿ ಹೇಳಿರುವುದನ್ನು ಬಹುವಾಗಿ ಮೆಚ್ಚಿ ಕೀರ್ತಿಸಿವೆ.

ತೀ.ನಂ.ಶ್ರೀ. ಅವರು ಹೇಳುವ ಕೆಲವು ಮಾತುಗಳನ್ನು ಗಮನಿಸೋಣ: "ಜಿನಸೇನರ ಪೂರ್ವ ಪುರಾಣಕ್ಕೆ ಪಂಪನು ಹೊತ್ತಿರುವ ಸಾಲವನ್ನು ಮೊದಲೇ ಒಪ್ಪಿಕೊಂಡುಬಿಡುವುದು ಉತ್ತಮ. ಕಥಾ ಸರಣಿಯನ್ನು ಮಾತ್ರವಲ್ಲ, ಎಷ್ಟೋ ಭಾವಗಳನ್ನು ಕೂಡ ಅವನು ಅಲ್ಲಿಂದಲೇ ಸ್ವೀಕರಿಸಿರುವನು. ಪಂಪನ ಕಾವ್ಯದ ಎಷ್ಟೋ ಪದ್ಯಗಳೂ ವಚನ ಖಂಡಗಳೂ — ಕೆಲವು ಉತ್ತಮವಾದ ಪದ್ಯಗಳು ಕೂಡ — ಪೂರ್ವ ಪುರಾಣದ ಭಾವಗಳ ಅನುವಾದದಂತಿವೆ. ಸಂಸ್ಕೃತ

---

19. ನೋಡಿ : ಕುಂದಣಗಾರರ ಆದಿಪುರಾಣದ ಪರಿಷ್ಕರಣ (1953), ಉಪೋದ್ಘಾತ, ಪು : 17—25.

ಮಹಾಕೃತಿಯೊಂದರ ಸಾರವನ್ನು ಕನ್ನಡದಲ್ಲಿ ಭಟ್ಟಿಯಿಳಿಸುವುದು ಹೇಗೆಂಬುದಕ್ಕೆ ನಿದರ್ಶನವಾಗಿ ಆದಿಪುರಾಣ ಹುಟ್ಟಿದಂತಿದೆ. ಇಷ್ಟನ್ನು ಹೇಳಿದ ಬಳಿಕ ಪಂಪನ ಪರವಾಗಿ ಈ ಮಾತುಗಳನ್ನೂ ಹೇಳಬೇಕು. ಪೂರ್ವ ಪುರಾಣದ್ದು ಅತಿ ವಿಸ್ತಾರವಾದ ಧಾಟಿ. ಮಾತೆತ್ತಿದರೆ ಮತ ಪ್ರಕ್ರಿಯೆ ದೀರ್ಘವಾಗಿ ಬರುತ್ತದೆ; ಅದರ ಧಾರ್ಮಿಕ ಸಂಗತಿಗಳಲ್ಲಿ ಕಾವ್ಯವಾಹಿನಿ ಎಷ್ಟೋ ವೇಳೆ ಅದೃಶ್ಯವಾಗಿ ಬಿಡುತ್ತದೆ. ಆದಿಪುರಾಣದಲ್ಲಾದರೆ ಈ ಅಂಶಗಳೆಲ್ಲ ಸಂಗ್ರಹವಾಗಿ ಬಂದಿವೆ; ಮರಳು ನೆಲ ಇಲ್ಲೂ ಒಮ್ಮೊಮ್ಮೆ ಕಾಣಿಸಿಕೊಂಡರೂ ಕಾವ್ಯದ ಹೊಳೆ ಆ ಜಾಗದಲ್ಲಿ ಕೂಡ ಒಂದು ರೇಖೆಯಷ್ಟಾದರೂ ಮಿಂಚುತ್ತದೆ. ಅಲ್ಲದೆ ಪಂಪನ ಸ್ವತಂತ್ರ ಪ್ರತಿಭೆಯಿಂದಲೇ ಜಿವಿಷ್ಟದ ಉತ್ಕೃಷ್ಟ ಕಾವ್ಯಭಾಗವೂ ಇಲ್ಲಿ ಬೇಕಾದಷ್ಟು ಉಂಟು."

ಇದರ ಜೊತೆಗೆ ಅವರೇ ಹೇಳಿರುವ "ಆದಿಪುರಾಣದ ಕೆಲವು ನೀರಸವಾದ ಸಂಗತಿಗಳನ್ನೂ ವಿವರಣೆಗಳನ್ನೂ ಬಿಟ್ಟರೆ ಅದೊಂದು ಉತ್ತಮ ಕಾವ್ಯವಾಗುತ್ತದೆ", "............ ಕೈಕಟ್ಟಿಸಿಕೊಂಡು ಪುಕ್ಕಗಳನ್ನು ತೋರಿಸುವ ಗರುಡಿಯಾಳಿನಂತೆ ಕಾಣುತ್ತಾನೆ", ಪಂಪ ಎಂಬ ಮಾತುಗಳನ್ನೂ ಗಮನಿಸಬೇಕು.[20] ತೀ.ನಂ.ಶ್ರೀ. ಅವರ ಮಾತುಗಳಲ್ಲಿ ವ್ಯಕ್ತವಾಗುವ ಮುಖ್ಯ ಅಭಿಪ್ರಾಯಗಳು ತೀ.ನಂ.ಶ್ರೀ. ನಂತರದ ಆದಿಪುರಾಣದ ಓದನ್ನು ಬಹುಮಟ್ಟಿಗೆ ಆವರಿಸಿಕೊಂಡಿವೆ. ಆದಿಪುರಾಣವನ್ನು ಕುರಿತ ಯಾವುದೇ ಬಗೆಯ ಬರವಣಿಗೆಯಲ್ಲಿ ಇದೇ ಅಭಿಪ್ರಾಯಗಳು ಬೇರೊಂದು ರೀತಿಯಲ್ಲಿ ಅಥವಾ ತದ್ವತ್ತಾಗಿ ಮರುಕಳಿಸಿದರೆ ಆಶ್ಚರ್ಯವಿಲ್ಲ. ಈ ಅಭಿಪ್ರಾಯಗಳ ಹಿಂದಿರುವುದು ಆದಿಪುರಾಣದ ವಿಶಿಷ್ಟತೆಯ ಸಮರ್ಥನೆಯೇ. ಇದಕ್ಕೆ ಪೂರಕವಾಗಿ

---

20. ಪಂಪ, ಮೈ.ವಿ.ವಿ., (ಪ್ರ.ಪು.ಮಾ.), 1965 (5ನೇ ಮುದ್ರಣ) ಪು: 14–15.

ಕೆಲವು ನಿರ್ದಿಷ್ಟ ಭಾಗಗಳು ಆದಿಪುರಾಣದಿಂದ ಮತ್ತೆ ಮತ್ತೆ ಉದ್ಧೃತವಾಗುತ್ತಾ ಹೋಗಿವೆ. ಇವನ್ನು ಬೇಕಾದರೆ ಸ್ಥೂಲವಾಗಿ ಲಲಿತಾಂಗ–ಸ್ವಯಂಪ್ರಭೆಯರ, ಶ್ರೀಮತಿ–ವಜ್ರಜಂಘರ ಪ್ರೇಮಾಲಾಪಗಳು; ಜಿನ ಶಿಶುವಿನ ಜನ್ಮಾಭಿಷೇಕ; ನೀಲಾಂಜನೆಯ ನೃತ್ಯ ಪ್ರಸಂಗ; ಭರತ–ಬಾಹುಬಲಿ ಪ್ರಸಂಗ – ಇತ್ಯಾದಿಗಳೆಂದು ಪಟ್ಟಿ ಮಾಡಬಹುದು. ಪಂಪನ ಪುರಾಣ ಮಾರ್ಗವನ್ನು ಹೇಳುವ, ಆದಿಪುರಾಣವನ್ನು ಒಂದು ಜೈನ ಧರ್ಮದ ಕೃತಿಯೆಂಬಂತೆ ವಿವರಿಸುವ ಬರೆಹಗಳೂ ಬಂದಿವೆಯಾದರೂ ಆದಿಪುರಾಣದ ಅಧ್ಯಯನಗಳ ಆಸಕ್ತಿ ಅತ್ತಕಡೆಗೆ ಅಷ್ಟಾಗಿ ಹರಿದಿಲ್ಲವೆಂದೇ ಹೇಳಬಹುದು.

ಕಳೆದ ದಶಕದಲ್ಲಿ ಎಂ.ವಿ.ಶ್ರೀನಿವಾಸ ಮೂರ್ತಿಯವರು ಬರೆದ ಎರಡು ಬರೆಹಗಳು ಹೆಚ್ಚು ಕಡಿಮೆ ಆದಿಪುರಾಣದ ಓದಿನಲ್ಲಿ ಸರ್ವಸಾಮಾನ್ಯವಾಗಿರುವ ಕೆಲವು ನಿಲುವುಗಳನ್ನು ಪ್ರತಿನಿಧಿಸುತ್ತವೆಯೆನ್ನಬಹುದು. ಇಲ್ಲಿ ಬಂದ ಕೆಲವು ಮಾತುಗಳನ್ನು ಗಮನಿಸೋಣ :

"........... ಪಂಪನಿಗಾದರೋ ತನ್ನ ಕೃತಿ ಧರ್ಮೋಪದೇಶಕವಾಗಿರುವುದರ ಜೊತೆಗೆ ಕಾವ್ಯಧರ್ಮದಿಂದಲೂ ಕೂಡಿರಬೇಕೆಂಬ ಉದ್ದೇಶವಿರುವುದರಿಂದ ಧಾರ್ಮಿಕರಿಗೂ ಲೌಕಿಕರಿಗೂ ಒಟ್ಟಿಗೇ ಆದರದ ವಸ್ತುವಾಗಿದೆ." [21]

"'........... ಬಾಳ್ವಿನವಿಂದ್ರಿಯ ವರ್ಗದೆಯ್ದಿಯುಂ ...........' 'ತಲೆವಿಡಿದುಬುಬ್ಬುದಿಕೆ ...........' ಈ ಮಾತುಗಳನ್ನು ಪಂಪನೇ ..... ಹೇಳುತ್ತಿದ್ದಾನೆ ಎಂದು ಹೇಳಲಾಗದಿದ್ದರೂ ಬಹುಶಃ ಪಂಪ ಇದನ್ನು ಅಲ್ಲಗಳೆಯಲಾರ." [21]

" ಒಂದಕ್ಕೊಂದು ಸಂಬಂಧವಿಲ್ಲದಂತೆ ಕಾಣುವ ತೀರ್ಥಂಕರರ ಕಥನದಲ್ಲಿ ಪಂಪ

ಅವೆಲ್ಲವನ್ನೂ ಒಂದುಗೂಡಿಸುವ ಒಂದು ತತ್ವವನ್ನು ಕಂಡಿದ್ದಾನೆ." [21]

"ಪೂರ್ವ ಪುರಾಣ ಮೊದಲು ಮತ ಗ್ರಂಥ, ಆಮೇಲೆ ಕಾವ್ಯ ಎಂಬುದನ್ನು ಬಲ್ಲ ಅವನು ಎಲ್ಲ ಕಾಲದಲ್ಲೂ ತನ್ನ ಕಾವ್ಯಕ್ಕೆ ಮಾನ್ಯತೆ ದೊರಕಿಸಿಕೊಡುವ ಉದ್ದೇಶದಿಂದ ಕಾವ್ಯ ರಚನೆಗೆ ಕೈಹಾಕಿದ." [22]

ಮೇಲಿನ ಮಾತುಗಳಲ್ಲಿ ಆದಿಪುರಾಣದಲ್ಲಿನ ಧರ್ಮ—ಕಾವ್ಯಧರ್ಮ ಸಮನ್ವಯವನ್ನು ಎತ್ತಿ ಹಿಡಿಯುವ, [23] ಕೆಲವು ಪಾತ್ರದ ಮಾತುಗಳನ್ನು ಪಂಪನ ಅಭಿಪ್ರಾಯಗಳೆಂದು ವಿವರಿಸುವ (ಪಂಪ ಭಾರತದ ಅಧ್ಯಯನದಲ್ಲೂ ಹೀಗೆ ಆದುದನ್ನು ಹಿಂದೆ ಗಮನಿಸಲಾಗಿದೆ) ನಮ್ಮ ವಿಮರ್ಶಾ ನಿಲುವುಗಳೂ, ತೌಲನಿಕ ಅಧ್ಯಯನದ ನೆಲೆಗಳೂ ಪ್ರತಿನಿಧಿತವಾಗಿರುವುದನ್ನು ಗಮನಿಸಬಹುದು.

ಇದೇ ಸುಮಾರಿಗೆ ಬಂದ ಎರಡು ಚರ್ಚೆಗಳೂ [24] ಈ ನಿಲುವುಗಳನ್ನೇನೂ

---

21. 'ಆದಿಪುರಾಣದ ವಸ್ತುವಿನ್ಯಾಸ', ಪಂಪ : ಒಂದು ಅಧ್ಯಯನ, (ಸಂ.) ಜಿ.ಎಸ್.ಶಿವರುದ್ರಪ್ಪ, ಬೆಂ.ವಿ.ವಿ., 1974. ಪು : 182, 183, 184—185.

22. 'ಆದಿಪುರಾಣದ ಕಥಾ ವಸ್ತು', ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ — 2, ಅದೇ, 1975. ಪು : 99.

23. ಎಂ.ಎಂ.ಕಲಬುರ್ಗಿಯವರು ತಮ್ಮ 'ಆದಿಪುರಾಣ ಮತ್ತು ಪ್ರಭುಲಿಂಗ ಲೀಲೆ' ಎಂಬ ಚರ್ಚೆಯಲ್ಲಿ (ಕ.ಭಾ., 5—1, 1972) ಪಂಪನಲ್ಲಿ ಕಾವ್ಯ—ಧರ್ಮ ಮತ್ತು ಧರ್ಮಗಳು ವಿಷಮ ಪ್ರಮಾಣದಲ್ಲಿವೆಯೆಂದೂ, 'ಕಾವ್ಯಧರ್ಮಮುಂ ಧರ್ಮಮುಮಂ' ಸಾರೋದ್ಧಾರವಾಗಿ ಬೆಳಗಿದ ಕೀರ್ತಿ ಆದಿಪುರಾಣಕ್ಕಿಂತ ಪ್ರಭುಲಿಂಗ ಲೀಲೆಗೇ ಅನ್ವಯಿಸುವಂತೆ ತೋರುತ್ತದೆ ಎಂದೂ ಅಭಿಪ್ರಾಯ ಪಟ್ಟಿದ್ದಾರೆ.

24. ಕೃಷ್ಣಕುಮಾರ್, ಸಿ.ಪಿ., 'ಪಂಪ ಮತ್ತು ಜಿನಸೇನ ಕೆಲವು ಟಿಪ್ಪಣಿಗಳು', ಪರಾಮರ್ಶೆ, ಮೈಸೂರು, 1975. ಪು : 30—43; ವಿಜಯಾ, ಡಿ., ಪೂರ್ವ ಪುರಾಣ ಮತ್ತು ಆದಿಪುರಾಣ, ಜೀವನ, 35—5, 1975. ಪು : 1—3.

ನಿರಾಕರಿಸುವುದಿಲ್ಲವಾದರೂ, ಜಿನಸೇನರ ಪುರಾಣವು ಕೇವಲ ಶುಷ್ಕ ಗ್ರಂಥವಾಗಿರದೆ, ಕಾವ್ಯಾತ್ಮಕವೂ ರಸಸ್ಯಂದಿಯೂ ಆಗಿದೆಯೆಂಬುದನ್ನೂ ಆಯ್ದುಕೊಂಡುದನ್ನು ಸ್ವತಂತ್ರವಾಗಿ ಮಾಡಿಸುವ ಶಕ್ತಿಯಲ್ಲೇ ಪಂಪನ ವಿಶಿಷ್ಟತೆಯಿದೆಯೆಂದೂ ಎಲ್ಲದೂ ಪಂಪನ ಸ್ವತಂತ್ರ ಸೃಷ್ಟಿಯೆಂಬಂತೆ ಮಾತನಾಡುವುದು ಪಂಪನಿಗೆ ಸಿಗಬಹುದಾದ ಉತ್ತಮ ಅನ್ಯಾಯ ಎಂದೂ ಅಭಿಪ್ರಾಯ ಪಟ್ಟಿವೆ. ಇಲ್ಲಿ ಕೂಡ ಅಂಥ ವಿಶೇಷಾಂಶಗಳ ಮಂಡನೆಯೇನೂ ಇದ್ದಂತಿಲ್ಲ.

ಇತ್ತೀಚೆಗೆ ಕೆ.ವಿ.ನಾರಾಯಣರು 'ಕಾವ್ಯಧರ್ಮ — ಧರ್ಮ ಸಮನ್ವಯ'ವನ್ನು ಕುರಿತ ತಮ್ಮ ಚರ್ಚೆಯಲ್ಲಿ[25] ಈ ಬಿಟ್ಟಿನ ತೌಲನಿಕ ಅಧ್ಯಯನಗಳ ದೃಷ್ಟಿಯಿಂದ ಗಮನಾರ್ಹವಾಗಬಲ್ಲ ಕೆಲವು ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಪಂಪ ಧಾರ್ಮಿಕ ವಸ್ತುವನ್ನಾಯ್ದುಕೊಂಡುದರಿಂದ ಆದಿಪುರಾಣದ ರಚನೆಯಲ್ಲಿ ಹೆಚ್ಚಿನ ಸ್ವಾತಂತ್ರ್ಯ ವಹಿಸಲಾಗಲಿಲ್ಲವೆಂಬ, ಅಲ್ಲಿ ಧರ್ಮ—ಕಾವ್ಯ ಧರ್ಮವನ್ನು ಕಾಣಬಹುದೆಂಬ ನಿಲುವುಗಳನ್ನು ಪ್ರಸ್ತಾಪಿಸಿ, ಇವು ಕವಿಗೆ 'ವಿನಾಯಿತಿ ತೋರಲೆಂದು ಸಮರ್ಥನೆಯಾಗಿ ಬಂದಿವೆಯೆನ್ನುವ ಅವರು ಧರ್ಮ—ಕಾವ್ಯ ಧರ್ಮಗಳ ಸಮನ್ವಯವಾಗಿದೆಯೆಂಬುದನ್ನು ನಿರಾಕರಿಸಿ, ಅದನ್ನು ಮುಖಾಮುಖಿಯೆಂದು ಗ್ರಹಿಸಿದ್ದಾರೆ. ಅವರ ಪ್ರಕಾರ "ಪಂಪನ ಕೃತಿಯ ವಸ್ತುವಿಗೆ ಆಕರ ಜೈನ ಧರ್ಮವಿದ್ದೀತು; ಅವರ ಪುರಾಣ ಪ್ರಪಂಚದ ಕಾಲ ದೇಶಾತೀತವಾದದ್ದೂ ಇದ್ದೀತು. ಆದರೆ ಅವನ ಕೃತಿಯ ಮಂಡನೆಯಲ್ಲಿ ಆಗುವಿಕೆಗೆ ದೊರೆಯುವ ಮಹತ್ವವೇ ಧರ್ಮದ ಮಿತಿಯ ಚೌಕಟ್ಟಿನೊಡನೆ ಮುಖಾಮುಖಿಯಾಗಿರುವುದಕ್ಕೆ

---

25. ಅಣ್ಣಿಗೇರೆಯಲ್ಲಿ ಪಂಪನನ್ನು ಕುರಿತ ವಿಚಾರ ಸಂಕಿರಣದಲ್ಲಿ ಮಂಡಿತ, 1985. ಅಪ್ರಕಟಿತ.

ಪುರಾವೆ.") ಆದಿಪುರಾಣದಲ್ಲಿ 'ಕಥನ' ಮತ್ತು 'ನಟನ'ಗಳ ಸಂಯೋಗ ಎದ್ದು ಕಾಣುವ ಅಂಶವಾಗಿದೆಯೆಂಬುದು, ಧಾರ್ಮಿಕ ಅಂಶಗಳು ಪ್ರಕ್ರಿಯಾತ್ಮಕವಾಗಿ ಮಂಡಿತವಾಗಿವೆಯೆಂಬುದು ತೌಲನಿಕ ಚರ್ಚೆಗಳ ಸಂದರ್ಭದಲ್ಲಿ ಗಮನಿಸತಕ್ಕ ಅಂಶಗಳಾಗಿವೆ.

ಇಲ್ಲಿ ಇನ್ನೊಂದು ಅಂಶವನ್ನು ~~ಸೂಚಿಸಲಾಗಿದೆ~~. ಸೂಚಿಸಬೇಕಾಗಿದೆ. ಆದಿಪುರಾಣದ ಎಲ್. ಬಸವರಾಜು ಅವರ ಪರಿಷ್ಕರಣದಲ್ಲಿ ಪೂರ್ವ ಪುರಾಣ – ಆದಿಪುರಾಣಗಳ ತೌಲನಿಕ ಅಧ್ಯಯನಕ್ಕೆ ಪೂರಕವಾಗಬಲ್ಲ ಟಿಪ್ಪಣಿಗಳಿರುವ ಅಂಶವನ್ನು ಆದಿಪುರಾಣದ ಪರಿಷ್ಕರಣಗಳನ್ನು ಕುರಿತ ಚರ್ಚೆಯ ಸಂದರ್ಭದಲ್ಲಿ ಸೂಚಿಸಲಾಗಿದೆ. ಕೃತಿಯ ಉದ್ದಕ್ಕೂ ಹರಡಿಕೊಂಡಿರುವ ಇಂಥ ಟಿಪ್ಪಣಿ ರೂಪದ ವಿವರಗಳಿಂದ ತೌಲನಿಕ ಅಧ್ಯಯನದ ಹೊಸ ಆಯಾಮವೊಂದಕ್ಕೆ ಪ್ರೇರಣೆಗಳು ದೊರೆಯಬಹುದೇ ಎಂಬುದು ಗಮನಿಸಬೇಕಾದ ಅಂಶವಾಗಿದೆ.

## 6.3 ಕೆಲವು ಪ್ರಸಂಗಗಳು, ಸನ್ನಿವೇಶಗಳು, ಪಾತ್ರಗಳನ್ನಾಧರಿಸಿದ ಅಧ್ಯಯನಗಳು

ಹಿಂದೆ ಗಮನಿಸಿದ ಅಧ್ಯಯನಗಳೆಲ್ಲ ಸಂಸ್ಕೃತ ಕಥಾ ಭಿತ್ತಿಯ ಹಿನ್ನೆಲೆಯಲ್ಲೇ ಪಂಪನ ಕೃತಿಗಳನ್ನು ಪರಿಶೀಲಿಸಿವೆಯಾದರೂ ಒಂದೆರಡನ್ನು ಹೊರತು ಉಳಿದುವೆಲ್ಲ ಕೆಲವು ನಿರ್ದಿಷ್ಟ ಪ್ರಸಂಗಗಳನ್ನೋ ಪಾತ್ರಗಳನ್ನೋ ಹಿಡಿದೇ ಚರ್ಚಿಸಿವೆ. ಈ ಅರ್ಥದಲ್ಲಿ ಇಲ್ಲಿ ಗಮನಿಸುವ ಚರ್ಚೆಗಳಾಗಲಿ, ಅವು ಪ್ರಕಟಪಡಿಸುವ ತೌಲನಿಕ ಪರಿಶೀಲನೆಯ ನಿಲುವುಗಳಾಗಲಿ ಬೇರೆಯೇನೂ ಆಗಿಲ್ಲ. ಆದರೂ ಇವು ಕೆಲವು ಪ್ರಸಂಗಗಳನ್ನು, ಪಾತ್ರಗಳನ್ನು ಕುರಿತ ಪ್ರತ್ಯೇಕ

ಚರ್ಚೆಗಳೆಂಬ ಕಾರಣಕ್ಕಾಗಿ ಬೇರೆಯಾಗಿಯೇ ಗಮನಿಸಬೇಕಿದೆಯಷ್ಟೆ.

ಇಂಥ ಚರ್ಚೆಗಳು ಹಲವು ನಡೆದಿವೆಯಾದರೂ ಅವೆಲ್ಲವನ್ನೂ ಇಲ್ಲಿ ಗಮನಿಸಬೇಕಿಲ್ಲ. ಏಕೆಂದರೆ ಹಲವೆಡೆ ಆಯಾ ಕೃತಿಯಲ್ಲಿ ಆಯಾ ಪಾತ್ರಗಳು, ಸನ್ನಿವೇಶಗಳು ಸಂಗತವೇ ಆಗಿವೆಯೆಂಬ, ಪ್ರಶಂಸೆಯ, ಮೆಚ್ಚುಗೆಯ ವಿವರಣೆಯೇ ಪ್ರಧಾನವಾಗಿದೆ. ಆದುದರಿಂದ ಅಂಥವನ್ನು ಹೊರತು ಪಡಿಸಿಕೊಂಡು ಕೆಲವು ಮುಖ್ಯವಾದುವಷ್ಟನ್ನೇ ಇಲ್ಲಿ ಗಮನಿಸಿದರೆ ಸಾಕಾದೀತು.

ಮೊದಲಿಗೆ ಕರ್ಣ ಪಾತ್ರವನ್ನು ಕುರಿತ ಚರ್ಚೆಯನ್ನೇ ಗಮನಿಸಬಹುದು. ಶಂ.ಬಾ.ಜೋಶಿಯವರು ವ್ಯಾಸ, ಪಂಪ, ಕುಮಾರವ್ಯಾಸರಲ್ಲಿರುವ ಕರ್ಣ ಪಾತ್ರದ ಚಿತ್ರಗಳನ್ನು ಕುರಿತ ತೌಲನಿಕ ಪರಿಶೀಲನೆಯೊಂದನ್ನು ನಡೆಸಿದ್ದಾರೆ. ಈ ತೌಲನಿಕ ಪರಿಶೀಲನೆಯ ನೆರೆಯಿಂದ ಶಂ.ಬಾ. ಅವರು ತಲುಪಿರುವ ತೀರ್ಮಾನವೆಂದರೆ, 'ವ್ಯಾಸರ ಕರ್ಣನ ಚಿತ್ರವು ಸುಸಂಗತವಾಗಿದೆ; ಸುಂದರವಾಗಿದೆ'; ಈ ಸುಸಂಬದ್ಧತೆ ಕನ್ನಡಿಯ ಭಾರತಗಳಲ್ಲಿ ಇಲ್ಲವೆಂಬುದು. ಕರ್ಣನ ಈ ಮೂರೂ ಚಿತ್ರಗಳನ್ನು ಕುರಿತ ಪ್ರತ್ಯೇಕ ಪರಿಶೀಲನೆಯ ಮೂಲಕ ಶಂ.ಬಾ.[26] ಅವರು ಹೇಳುವ ತೀರ್ಮಾನ ರೂಪದ ಮಾತುಗಳು ಹೀಗಿವೆ: "ಕುಮಾರವ್ಯಾಸ ಮತ್ತು ಪಂಪರ ಕರ್ಣನನ್ನು ನೋಡಿದರೆ, ಆತನು ಜೋಳದ ಪಾಳಿಯನ್ನು ನೆನೆವವನೆಂದು ಹೇಳಲಿಕ್ಕಾಗದು. ಮಾಡಿದ ಉಪಕಾರದ ಬಂಧನಕ್ಕಿಂತಲೂ ತೀರ ಹತ್ತಿರದ ರಕ್ತ ಸಂಬಂಧದ ಆಕರ್ಷಣವು ಹೆಚ್ಚು ಬಲವತ್ತರವಾದುದು ಎಂದು ಇವರ ಕರ್ಣನ ಪಾತ್ರ ರಚನೆಯಲ್ಲಿ ಹೊರಪಡುತ್ತದೆ" .......... "ಕರ್ತ—ವ್ಯಾಕರ್ತವ್ಯದ ಇರುಕಿನಲ್ಲಿ — ಮಾತೃಭಕ್ತಿ ಮತ್ತು ಜೋಳದ ಪಾಳಿ, ಬಂಧು ಪ್ರೇಮ ಮತ್ತು ಒಡೆಯನಲ್ಲಿ ನಿಷ್ಠೆ ಇಂತಹ ಎರಡು ಧರ್ಮಗಳ ಎಳೆದಾಟದಲ್ಲಿ

---

26. ಕರ್ಣನ ಮೂರು ಚಿತ್ರಗಳು, 1947. ಪು: 76—78.

ತೊಳಲಾಡುವ ಕರ್ಣನು 'ಚಲ'ದ ಸ್ವಭಾವದವನಾಗಿರದೆ .......... ವಿಚಾರಶೀಲ ವ್ಯಕ್ತಿಯೆಂದು ಪಂಪನು ಮೊದಲಿನಿಂದಲೇ ಸೂಚಿಸುತ್ತ ಬಂದಿದ್ದರೆ ಲೇಸಾಗುತ್ತಿತ್ತು .......... ಏಕಗ್ರಾಹಿಗಳಿಗೆ ಸಂದೇಹಗಳ ಬಾಧೆಯೇ ಇಲ್ಲ. ಪ್ರಶ್ನೆಗಳು ತಲೆದೋರುತ್ತಿರುವಾಗಲೇ ಅವುಗಳ ಉತ್ತರವು ಹೊಳೆದು ಬಿಡುತ್ತದೆ .......... ಕರ್ಣನ ಏಳಿಗೆ—ಇಳಿಗೆಗೂ ಇದೇ ಗುಣವು ಕಾರಣವಾಗಿರುವಂತೆ ವ್ಯಾಸರು ವರ್ಣಿಸಿದ್ದು ಅವರ ಪಾತ್ರ ರಚನೆಗೆ ಸುಸಂಗತವಾಗಿಯೇ ಇದೆ. ಆದರೆ ಈ ಮೂಲ ಸ್ವಭಾವದಲ್ಲಿ ಬದಲಾವಣೆಯನ್ನು ಮಾಡಿಕೊಳ್ಳದೆ ಪರಿಣಾಮದಲ್ಲಿ ಮಾತ್ರ ಬೇರೆಯಾದಂತೆ ವರ್ಣಿಸುವುದು ಸುಸಂಗತವಾಗಲಾರದು." ಈ ಮಾತುಗಳಿಗೆ ಪೂರಕವಾಗಿ ಶಂ.ಬಾ. ಅವರು ತೋರಿಸುವ ಅಂಶಗಳು, ಕರ್ಣ ತನ್ನ ಒಡೆಯನಿಗೆ ಮಾರಕವಾಗಬಲ್ಲ ವಚನವನ್ನು ಕುಂತಿಗೆ (ಪಂಪನಲ್ಲಿ) ಮತ್ತು ಕೃಷ್ಣನಿಗೆ (ಕುಮಾರವ್ಯಾಸನಲ್ಲಿ) ಕೊಟ್ಟದ್ದು, ಏನು ಮಾಡುತ್ತಿರುವೆನೆಂಬ ಅರಿವಿಲ್ಲದೆ ಆಮೂಲಾಗ್ರ ವಿಚಾರಿಯಾಗಿರದೆ ಗೊಂದಲ ಬಡಕ ಹಾಗೂ ಎಲ್ಲರನ್ನೂ ಸಂತೈಸಲು ಹವಣಿಸುವ ಸ್ಥಿತಿ ಅವನದಾಗಿರುವುದು, ಒಡೆಯನಿಗಾಗಿ ಅವನು ಎರಡಿಲ್ಲದ ಮನಸ್ಸಿನಿಂದ ಕಾದದೇ ಹೋದುದು — ಇತ್ಯಾದಿ. ಇವನ್ನು 'ಕನ್ನಡಿಯ ಭಾರತಗಳಲ್ಲಿರುವ ಅನೌಚಿತ್ಯ'ಗಳೆಂದು ಅವರು ಕರೆಯುತ್ತಾರೆ. ಇದಕ್ಕೆ ಪರ್ಯಾಯವಾಗಿ ವ್ಯಾಸ ಭಾರತದಲ್ಲಿ ಕರ್ಣನ ದೃಢ ನಿಶ್ಚಯವು ಎದ್ದು ಕಾಣುವುದನ್ನೂ, ಬಾಣ ತೊಡುವಾಗಲಾಗಲಿ, ಮರಳಿ ಸರ್ಪವು ಬಂದು ಕೇಳಿದಾಗಲಾಗಲಿ 'ಎರಡು ಬಗೆದ ಮಾತು' ಬಂದಿಲ್ಲದಿರುವುದನ್ನೂ, ಕರ್ಣ — ಕುಂತಿ ಮತ್ತು ಕೃಷ್ಣನೊಂದಿಗಿನ ಸಂವಾದದಲ್ಲಿ ಕಾಣುವ ಕರ್ಣನ ನಿಲುವುಗಳನ್ನೂ 'ಸುಸಂಗತ' ಸಂಗತಿಗಳಾಗಿ ತೋರಿಸುತ್ತಾರೆ. ಶಂ.ಬಾ. ಅವರ ವಿವರಗಳ ಮೂಲಕ ಅವರು ನಿರೀಕ್ಷಿಸುತ್ತಿರುವ ಕರ್ಣ ಪಾತ್ರದ ಸ್ವರೂಪವೆಂಥದು ಎಂಬುದನ್ನು ತಿಳಿಯಲು ಸಾಧ್ಯವಿದೆ. ಅದೊಂದು ಬಗೆಯ ಏಕಮುಖ ಆಯಾಮದ ಸಮಗೊಳಿಸಿದ ಪಾತ್ರವಿದ್ದೀತು.

ಇಂಥದೇ ನಿರೀಕ್ಷೆಗಳು ರಂಗಣ್ಣನವರ ಚರ್ಚೆಯಲ್ಲೂ ಕಾಣಬರುತ್ತವೆ. ವ್ಯಾಸ ಭಾರತದಿಂದ ಹಿಡಿದು ಬ್ರಹ್ಮಣಾಂಕನ ಜನ ಭಾರತದವರೆಗಿನ ಹಲವು ಕೃತಿಗಳಲ್ಲಿ ಬಂದ ಕರ್ಣ ಪಾತ್ರದ ರಚನೆಯನ್ನು ಕುರಿತಂತೆ ಅವರು ನಡೆಸುವ ತೌಲನಿಕ ಪರಿಶೀಲನೆಯಲ್ಲಿ, ಮುಖ್ಯವಾಗಿ ಪಂಪ–ಕುಮಾರವ್ಯಾಸರ ಕರ್ಣ ಪಾತ್ರದ ಸಂಬಂಧದ ವಿವರಗಳನ್ನು ಒರೆಗೆ ಹಚ್ಚುವುದನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಈ ಚರ್ಚೆಯ ಮುಖ್ಯ ಆಸಕ್ತಿಯೆಲ್ಲ ಕರ್ಣ ಪಾತ್ರದ ಮಾತು ಮತ್ತು ಕೃತಿಯಲ್ಲಿನ ಅಸಾಂಗತ್ಯದ ಕಡೆಗೇ ಇದೆ. ಆದರೂ ಚರ್ಚೆಯ ಕೊನೆಯಲ್ಲಿ 'ಅವನ ವಿಚಿತ್ರ ಜೀವಿತ ಬೆರಗುಗೊಳಿಸುವಂಥದೂ ಅದ ಘಟನೆಗಳಿಂದ ತುಂಬಿದೆ .......... ಈ ಪರಿಯಲ್ಲಿ ಕರ್ಣ ಅದೃಷ್ಟದ ಕೈಗೂಸು. ವಿಧಿಯ ಗೂಢಾಟಕ್ಕೆ ಸಿಕ್ಕಿ ಬಳಲುವನನ್ನು ಕುರಿತು ನಮಗೆ ಸಹಜವಾಗಿಯೇ ಕನಿಕರ .......... ಸಮಾನ ಶಕ್ತಿಯ ವಿವಿಧ ಒತ್ತಡಗಳ ಕಿತ್ತಾಟದಿಂದ ಅವನ ಚಿತ್ತ ಕದಡಿ ಹೋಗಿ, ಮಾಡತಕ್ಕ ಕರ್ತವ್ಯವೇನೆಂದು ನಿಷ್ಕರ್ಷಿಸುವುದು ಅವನಿಗೆ ಅತಿ ಕಠಿಣವಾಗಿ ಒಳ ಕಾಳಗದ ಸ್ವಾರಸ್ಯ ರಂಗಭೂಮಿಯಂತಾಗಿ ಅಚ್ಚರಿಯನ್ನು ಕೆರಳಿಸುತ್ತಾನೆ' ಎಂದು ಈ ಪಾತ್ರವನ್ನು 'ಕವಲು ಮನಸ್ಸಿನ ಬಹುಮುಖ' ಪಾತ್ರವೆಂದಿದ್ದಾರೆ. 'ಇಂಥ ಕವಲು ಮನಸ್ಸಿನ ಬಹುಮುಖ ಪಾತ್ರಗಳೆಂದರೆ ಅರ್ವಾಚೀನರಿಗೆ ಆಸಕ್ತಿ' ಹೆಚ್ಚೆಂದೂ, ಏಕಮುಖದ, ಅಮಿಶ್ರ ಸ್ವಭಾವದ ಪಾತ್ರಗಳೆಂದರೆ ಅಸಡ್ಡೆ ಎಂದೂ ಹೇಳುವ ಅವರು 'ಅತ್ಯಾಧುನಿಕವಾದ ಈ ಚಿಂತನೆಯೆಲ್ಲವನ್ನು ಹಿಂದಿನ ಕವಿವರ್ಯರ ನಿರ್ಮಾಣಗಳಿಗೆ ಅನ್ವಯಿಸ ಹೋಗುವುದು ಯುಕ್ತವೇ?' ಎಂದು ಪ್ರಶ್ನಿಸಿದ್ದಾರೆ.[27] ಇಂಥ ಚಿಂತನೆಯೊಂದನ್ನು ಹಿಂದಿನ ಕವಿವರ್ಯರ ನಿರ್ಮಾಣಗಳ ಮೇಲೆ ಹೇರುವುದಾಗಲಿ, ಅನ್ವಯಿಸುವುದಾಗಲಿ ಮುಖ್ಯವಲ್ಲ. ಅವರ ನಿರ್ಮಾಣಗಳಲ್ಲೇ ಆ ಲಕ್ಷಣಗಳು

---

27. 'ಕರ್ಣ ಪಾತ್ರದ ತೊಡಕು', ಹೊನ್ನ ಶೂಲ, ಮೈಸೂರು, 1968 (2ನೇ ಮುದ್ರಣ). ಪು : 101–102.

ಕಂಡುಬಂದುದಾದರೆ, ಅದು ನಿರೀಕ್ಷಿಸುವ ಮಾನದಂಡವನ್ನೇ ಬಳಸುವುದು ಯುಕ್ತ ವಿಧಾನವಲ್ಲವೆ? ಈ ಲಕ್ಷಣಗಳು ಪಂಪ — ಕುಮಾರವ್ಯಾಸರ ಪಾತ್ರ ರಚನೆಯಲ್ಲಿ ಕಂಡುಬರುವುದು, ಆ ಪಾತ್ರ ರಚನೆಯಲ್ಲಿರುವ ಗುಣಾತ್ಮಕ ಅಂಶಗಳೇ ಆಗಿವೆಯೇ ಎಂಬುದನ್ನು ಗಮನಿಸಬೇಕಾಗಿದೆ. ಹೀಗಿರುವುದಾದರೆ — ಶಂ.ಬಾ. ಅವರ ಮಾತಿನಲ್ಲೇ ಹೇಳುವುದಾದರೆ — ವ್ಯಾಸರನ್ನು ಹಿಂಬಾಲಿಸಿ ಅವರಂತೆಯೇ ಇವರೂ ಕರ್ಣನನ್ನು ಏಕೆ ವರ್ಣಿಸಲಿಲ್ಲವೆಂದು ಗೊಣಗುವುದು ತಪ್ಪು.

ವ್ಯಾಸ, ಪಂಪ, ನಾರಣಪ್ಪರ ಕೃತಿಗಳಲ್ಲಿ ಬರುವ ಕೃಷ್ಣ ಪಾತ್ರವನ್ನು ಕುರಿತ ಅಧ್ಯಯನವೊಂದನ್ನು ವಿ.ಸೀತಾರಾಮಯ್ಯನವರು ನಡೆಸಿದ್ದಾರೆ.[28] ಕೃಷ್ಣ ಪಾತ್ರವನ್ನು ಕುರಿತಂತೆ ಪಂಪ ಭಾರತದ ಸಂಬಂಧದಲ್ಲಿ ಅನೇಕ ವಾಗ್ವಾದಗಳು ನಡೆದಿವೆ. ಆ ಎಲ್ಲ ವಾಗ್ವಾದಗಳ ನೆಲೆ ಬಹುಶಃ "ಚಲದೊಳ್ ದುರ್ಯೋಧನಂ .........." ಎಂಬ ಪದ್ಯವೇ ಆಗಿದೆ. ಇಲ್ಲಿ ಕೃಷ್ಣನ ಹೆಸರು ಬಿಟ್ಟುಹೋಗಿರುವುದಲ್ಲ — ಅವನು ಅಲೌಕಿಕನೆಂದೇ? ಪಂಪ ಜೈನನಾದುದರ ಪರಿಣಾಮವೇ? ಅವನಲ್ಲಿ ಇತರ ಭಾರತ ನಾಯಕರಂತೆ — ಯಾವ ಒಂದೇ ಗುಣವನ್ನು ಕಾಣಲಾಗದಿದ್ದುದೇ? ಎಂಬಂಥ ಪ್ರಶ್ನೆಗಳು ಮುಖ್ಯವಾಗಿವೆ. ವಿ.ಸೀ. ಅವರು ಇಂಥ ಚರ್ಚೆಗಳಿಗೇನೂ ಹೋಗದೆ ಆಯಾ ಕೃತಿಗಳಲ್ಲಿ ಕೃಷ್ಣ ಪಾತ್ರ ಉಚಿತವಾಗಿಯೇ ಇದೆಯೆಂದಿದ್ದಾರೆ. ಉದ್ಯೋಗ ಪರ್ವದ ಒಂದು ಪ್ರಸಂಗದಲ್ಲಿ — ಅರ್ಜುನ ದುರ್ಯೋಧನರು ಕೃಷ್ಣನ ಸಹಾಯವನ್ನು ಯಾಚಿಸಿ ಬಂದ ಸಂದರ್ಭ — ಕೃಷ್ಣ ಪಾತ್ರದ ವರ್ತನೆಗಳು ಮೂರೂ ಕಡೆ ಚಿತ್ರಿತವಾಗಿರುವುದನ್ನು ಪರಿಶೀಲಿಸಿ "ಕನ್ನಡ ಭಾರತಗಳಲ್ಲಿ ಆತನ ಸ್ವರೂಪ ನಮ್ಮ ಕಣ್ಣೆದುರಿಗೆ ಹಬ್ಬಿ ಬೆಳೆದು ಸಂಪೂರ್ಣವಾಗುವುದಿಲ್ಲ. ಮೊದಲು ಯಾವ ರೀತಿಯಲ್ಲಿ ರೂಪುಗೊಂಡು ಕಾಣುವುದೋ ಕಡೆಯವರೆಗೂ ಹಾಗೆಯೇ ನಿಲ್ಲುತ್ತದೆ" ಎನ್ನುತ್ತಾರೆ.

---

28. 'ಭಾರತಗಳ ಶ್ರೀಕೃಷ್ಣ', ಕವಿ ಕಾವ್ಯ ದೃಷ್ಟಿ, ಮೈಸೂರು, 1970 (2ನೇ ಮುದ್ರಣ). ಪು: 93–116

ದ್ರೌಪದಿಯ 'ಕೇಶ ಪಾಶ ಪ್ರಪಂಚಕ್ಕೆ' ಸಂಬಂಧಿಸಿದ ಕುವೆಂಪು ಅವರ ಚರ್ಚೆಯೊಂದಿದೆ. 'ಮಹಾ ಭಾರತವನ್ನು ದ್ರೌಪದಿಯ ಮುಡಿ ಬಿಚ್ಚಿ ಮುಡಿ ಕಟ್ಟಿದ ಪ್ರಸಂಗದ ಕಥೆಯೆಂದು ವರ್ಣಿಸಿದರೆ ಹೆಚ್ಚೇನೂ ಸತ್ಯದೂರವಾಗದೆ'ನ್ನುವ ಕುವೆಂಪು ಅವರು ದ್ರೌಪದಿಯ ಸಂಬಂಧದಲ್ಲಿ ನಡೆದು ಬಂದಿರುವ ವಾಗ್ವಾದಗಳನ್ನು ಕುರಿತಂತೆ ಯಾವ ಪ್ರಸ್ತಾಪವನ್ನೂ ಮಾಡಿಲ್ಲ. ಅವರ ಗಮನವೆಲ್ಲ ಮುಖ್ಯವಾಗಿ ಪಂಪ—ನಾರಣಪ್ಪರು ಈ 'ಕೇಶ ಪಾಶ ಪ್ರಪಂಚ'ವನ್ನು ಹೇಗೆ ವರ್ಣಿಸಿದ್ದಾರೆಂಬುದರ ಕಡೆಗೆ ಮಾತ್ರ. ಇಬ್ಬರೂ 'ಅದ್ಭುತವಾಗಿಯೆ ವರ್ಣಿಸಿದ್ದರಾದರೂ ಗದುಗಿನ ಭಾರತದಲ್ಲಿ ಬರುವ ಸನ್ನಿವೇಶಗಳಲ್ಲಿಯಾಗಲಿ ಪಾತ್ರಗಳಲ್ಲಿಯಾಗಲಿ ವರ್ಣನೆಗಳಲ್ಲಿಯಾಗಲಿ ಪಂಪ ಭಾರತದ ನವುರು—ನಯಗಳನ್ನು ನಾವು ಕಾಣುವುದಿಲ್ಲ' ಎಂದಿದ್ದಾರೆ. ಈ ಸಂಬಂಧದಲ್ಲಿ ಕುವೆಂಪು ಪಂಪನದನ್ನು 'ಸಂಗ್ರಹಶೀಲಯಾದ ಸಂಸ್ಕೃತ ಕಲೆ' ಎಂದೂ ನಾರಣಪ್ಪನದನ್ನು 'ಗ್ರಾಮೀಣ ದೈತ್ಯ ಕಲೆ' ಎಂದೂ ಕರೆಯುತ್ತಾರೆ. "ಪಂಪನಿಗೆ ಯಾವುದು ಕಲಾ ಮಾತ್ರವಾದ ಲೌಕಿಕ ಕಾವ್ಯವೋ ಅದು ನಾರಣಪ್ಪನಿಗೆ ಜೀವನೋದ್ದೇಶ ಸರ್ವಸ್ವಕ್ಕೂ ಮಾರ್ಗವಾದ ಪವಿತ್ರ ಸಾಧನೆ. ಪಂಪನಂತೆ ನಾರಣಪ್ಪ ತನ್ನ ಮಹೋನ್ನತಿಯನ್ನು ಇಬ್ಬಗೆ ಮಾಡಿಕೊಂಡು ಲೌಕಿಕ — ಆಗಮಿಕವೆಂದು ಎರಡು ಕಾವ್ಯಗಳಲ್ಲಿ ಹಂಚಿ ಪ್ರಕೃತಿ ಸಹಜವಾದ ಛಿನ್ನತ್ವವನ್ನು ಕುಬ್ಜತರವನ್ನಾಗಿ ಮಾಡಿಕೊಂಡಿಲ್ಲ" ಎಂದು ಅವರೆನ್ನುವರಾದರೂ[29] ಆ 'ಕುಬ್ಜತರವಾಗಿ' ಮಾಡಿಕೊಂಡುದರ ಚರ್ಚೆಗೇನೂ ಹೋಗಿಲ್ಲ. ಮೇಲೆ ಗಮನಿಸಿದಂತೆ ಇಬ್ಬರು ಕವಿಗಳಲ್ಲೂ ಬಂದ ವರ್ಣನಾ ರೀತಿಯನ್ನು ಗಮನಿಸುವುದು ಮತ್ತು ಅವನ್ನು ಸಮರ್ಥಿಸುವುದನ್ನು ಮಾತ್ರ ಮುಖ್ಯವಾಗಿ ಗಣಿಸಿದಂತಿದೆ. ಕುವೆಂಪು ಅವರ

---

29. 'ದ್ರೌಪದಿಯ ಶ್ರೀಮುಡಿ', ದ್ರೌಪದಿಯ ಶ್ರೀಮುಡಿ, ಮೈಸೂರು, 1979 (4ನೇ ಮುದ್ರಣ). ಪು: 7—8.

'ಸರೋವರದ ಸಿರಿಗನ್ನಡಿಯಲ್ಲಿ' ಎಂಬ ಮತ್ತೊಂದು ತೌಲನಿಕ ಪರಿಶೀಲನೆಯನ್ನಿಲ್ಲಿ ಗಮನಿಸಬಹುದು.[30] ಇಲ್ಲಿ ಎರಡು ಅಂಶಗಳನ್ನು ಮುಖ್ಯವಾಗಿರಿಸಿಕೊಳ್ಳಲಾಗಿದೆ. ಒಂದು, ವೈಶಂಪಾಯನ — ಅಚ್ಛೋದ ಸರೋವರಗಳ ಸ್ವರೂಪ ತುಲನೆ ಮತ್ತು ಎರಡು, ವೈಶಂಪಾಯನ ಸರೋವರವನ್ನು ಕನ್ನಡ ಕವಿಗಳು (ಪಂಪ — ರನ್ನ — ಕುಮಾರವ್ಯಾಸರು) ಕಂಡ ಬಗೆ ಎಂಥದೆಂಬುದರ ತುಲನೆ. ಈ ತುಲನಾತ್ಮಕ ಅಧ್ಯಯನ ಕ್ರಮವನ್ನು ಕುವೆಂಪು ಅವರು 'ತರತಮ ವಿಮರ್ಶೆ' ಎಂದು ಕರೆಯುತ್ತಾರೆ. ಪಂಪನ ವರ್ಣನೆ ಅತ್ಯಂತ ಅರ್ಗರ್ಭಿತವೆಂದು ವಿವರಿಸುವ ಅವರು ರನ್ನನು ಇತರೆಡೆಗಳಲ್ಲಿ ಹೇಗೇ ತೋರಿದರೂ ಇಲ್ಲಿ ಮಾತ್ರ ಸಪ್ಪೆಯಾಗಿ ಬೆಪ್ಪಾಗಿ ಕಾಣುವನೆಂದೂ, ಮಿಕ್ಕೆಲ್ಲ ವಿಷಯದಲ್ಲೂ ನಾರಣಪ್ಪ ಎಷ್ಟು ವರಿಷ್ಠನೋ ಅಷ್ಟು ಕನಿಷ್ಠ, ಈ ಒಂದರಲ್ಲಿ ಎಂದೂ ಹೇಳುವರಾದರೂ, ಈ ಅಂಶಗಳಲ್ಲಿ ರನ್ನ — ಪಂಪರಿಂದ ಈ ಬಗೆಯ ಸಮಾನ ಮಟ್ಟದ ಸೃಷ್ಟಿಯನ್ನು ಕಾಣಲೆಳಸಬಾರದೆನ್ನುತ್ತಾರೆ. ಇಲ್ಲಿ ಕವಿ ಸಮರ್ಥನೆಯ ಅವರ ಒಲವು ಸ್ಪಷ್ಟವಾಗಿ ಕಾಣುತ್ತದೆ. ಜೊತೆಗೆ ಈ ತಾರತಮ್ಯ ವಿಮರ್ಶೆಯಲ್ಲಿ ಅನ್ಯಾಯವಾಗದಂತೆ ನೋಡಿಕೊಳ್ಳುವುದರ ಬಗ್ಗೆಯೂ ಮೊದಲೇ ಸೂಚಿಸಿದ್ದಾರೆಂಬುದನ್ನೂ ಇಲ್ಲಿ ಗಮನಿಸಬೇಕು. ಕುವೆಂಪು ಅವರ ಈ ಚರ್ಚೆಗಳು ಮುಖ್ಯವಾಗಿ ವಿಮರ್ಶೆಯ ವರ್ಣನಾನಿಷ್ಠ, ರಸನಿಷ್ಠ ನೆಲೆಗಳನ್ನು ಪ್ರಕಟಪಡಿಸುತ್ತವೆ.

ಜಿ.ಎಸ್.ಶಿವರುದ್ರಪ್ಪನವರು ನಡೆಸಿರುವ ಕೆಲವು ತೌಲನಿಕ ಚರ್ಚೆಗಳು ಇಲ್ಲಿ ಗಮನಿಸತಕ್ಕವಾಗಿವೆ. ಪರಿಶೀಲನೆಗೆ ಆಯ್ದುಕೊಂಡ ಕಾವ್ಯ ಭಾಗಗಳ ದೃಷ್ಟಿಯಿಂದಲೂ ಅವನ್ನು ನೋಡುವ ದೃಷ್ಟಿಯಿಂದಲೂ ಕೆಲಮಟ್ಟಿಗೆ

---

30. ತಪೋನಂದನ, ಮೈಸೂರು, 1969. ಪು: 78—105.

ಪಾಡಿಕೆಯ ಧಾಟಿಗಿಂತ ಭಿನ್ನವಾಗಿರುವಂತೆ ಕಾಣುತ್ತವೆ. ಮಹಾಭಾರತದಲ್ಲಿ ಅತ್ಯಂತ ಪ್ರಾಧಾನ್ಯವನ್ನು ಪಡೆದಿರುವ ಭಗವದ್ಗೀತೆಯ ಪ್ರಸಂಗ ಪಂಪನಲ್ಲಿ ಹೇಗೆ ಬಂದಿದೆಯೆಂಬುದನ್ನು 'ಪಂಪನಲ್ಲಿ ಭಗವದ್ಗೀತೆ' ಯಲ್ಲಿ[31] ಚರ್ಚಿಸಿದ್ದಾರೆ. ಈ ಚರ್ಚೆಯ ಹಿನ್ನೆಲೆಗೆ ಪಂಪನಲ್ಲಿ ಭಗವದ್ಗೀತೆಯ, ಕೃಷ್ಣನ ಪ್ರಾಧಾನ್ಯತೆ ಕಡಿಮೆಯಾದವೇ ಎಂಬ ಪ್ರಶ್ನೆಗಳು ಇರುವಂತಿದೆ. ಪಂಪನಲ್ಲಿ ಭಗವದ್ಗೀತೆಯ ಪ್ರಸಂಗ ಎಷ್ಟೇ ಸಂಕ್ಷಿಪ್ತವಾಗಿ ಬಂದಿದ್ದರೂ ಇಲ್ಲಿ ಹೇಳಬೇಕಾದ ಗೀತಾ ತತ್ವವನ್ನು ಎಚ್ಚರದಿಂದ ಕಡೆದಿರಿಸಲಾಗಿದೆಯೆಂಬ ಕಾರಣದಿಂದ ಭಗವದ್ಗೀತೆಗೆ ಊನವಾಗಲೀ, ಭಗವದ್ಗೀತೆಯಲ್ಲಿ ಪ್ರಾಧಾನ್ಯತೆ ಪಡೆದ ಕೃಷ್ಣನ ಹಿರಿಮೆಗೆ ಕೊರತೆಯಾಗಲೀ ಉಂಟಾಗಿಲ್ಲವೆಂದು ಸಮರ್ಥಿಸಿದ್ದಾರೆ. ಅವರ ಪ್ರಕಾರ ಗೀತೆಯ ಉದ್ದೇಶವೇ ಅರ್ಜುನನ ಮನಸಿನಲ್ಲಿದ್ದ ವ್ಯಾಮೋಹವನ್ನು ಕಳೆಯುವುದು. ಪಂಪನ ಭಗವದ್ಗೀತೆಯಲ್ಲಿದು ಸಾಧ್ಯವಾಗಿದೆ. ಜಿ.ಎಸ್.ಎಸ್. ಅವರ 'ಪಂಪ ಮತ್ತು ಹೋಮರ್ : ಒಂದು ಪ್ರಸಂಗ', ಒಂದು ಕುತೂಹಲಕರ ಪ್ರಯತ್ನ. ಹೋಮರ್ ಮತ್ತು ಪಂಪನಲ್ಲಿ ಸಾಮ್ಯತೆ ಕಾಣುವ ಒಂದು ಪ್ರಸಂಗವನ್ನು ಇಲ್ಲಿ ತೌಲನಿಕವಾಗಿ ಗಮನಿಸಲಾಗಿದೆ. ಹೋಮರನಲ್ಲಿ ಯುದ್ಧದ ನಡುವಣ ಒಂದು ದಿನ ಹೆಕ್ಟರ್ ಮತ್ತು ಅವನ ಹೆಂಡತಿಯ ನಡುವೆ ನಡೆಯುವ ಮಾತುಕತೆಗಳನ್ನೂ ಪಂಪನಲ್ಲಿ ಯುದ್ಧದ ಹಿಂದಿನ ದಿನ ಶಿಬಿರಗಳಲ್ಲಿ ನಡೆಯುವ ಶ್ರೀಸಾಮಾನ್ಯ ಗಂಡ–ಹೆಂಡಿರ ಮಾತುಕತೆಗಳನ್ನೂ ಹೋಲಿಸಿದ್ದಾರೆ. ಈ ಮೂಲಕ "ಪಂಪನದು ಕೇವಲ ಮೌಲ್ಯ ಪ್ರಜ್ಞೆಯುಳ್ಳವನ ಬರಹವೆಂದೂ, ಹೋಮರನು ಮೌಲ್ಯ ಪ್ರಜ್ಞೆಯನ್ನು ವೈಭವಿಸದೆಯೂ ವಾಸ್ತವತೆಯ ಅರಿವಿರುವ ಮನುಷ್ಯನೊಬ್ಬನು ಬರೆದ ಸಹಜವಾದ ಚಿತ್ರಣವೆಂದೂ ತೋರುತ್ತದೆ. ಇಂಥ ಕಡೆ ಹೋಮರ್ ಪಂಪನಿಗಿಂತ ಬಹಳ ದೊಡ್ಡವನೆಂದು ಅನ್ನಿಸುತ್ತದೆ" ಎಂದಿದ್ದಾರೆ.[32]

---

31. ಪರಿಶೀಲನ, ಮೈಸೂರು, 1972 (2ನೇ ಮುದ್ರಣ). ಪು : 18–29.
32. ಪ್ರತಿಕ್ರಿಯೆ, ಬೆಂಗಳೂರು, 1982. ಪು : 97.

ಈ ಹೋಲಿಕೆ ಎಷ್ಟೇ ಸ್ವಾರಸ್ಯಕರವಾಗಿರುವುದಾದರೂ, ವಿವರಣೆಯಲ್ಲಿರುವ ಪಾತ್ರಗಳು (ಒಂದೆಡೆಗೆ ರಾಜಮನೆತನದ ವೀರ ಶೇಖರ; ಮತ್ತೊಂದೆಡೆಗೆ ಸಾಮಾನ್ಯ ಸೈನಿಕ) ಅಷ್ಟು ಸಮಾನವಾಗಿಲ್ಲವೇನೋ ಎಂಬ ಅನುಮಾನ ಸಹಜವಾಗಿಯೇ ಏಳುತ್ತದೆ. ಈ ವರ್ಣನೆಯಲ್ಲಿ ನೀಡಲಾದ ಇನ್ನಿತರ ವಿವರಗಳು ಗಮನಾರ್ಹವಾಗಿವೆ.

ಈ ವರ್ಣನೆಗಳಲ್ಲದೆ 'ರತ್ನಾಕರನ ಭೋಗ–ಯೋಗದ ತೊಡಕು', 'ಪಂಪನ ಪುಷ್ಪೋದ್ಯಾನ' – ಇಂಥ ಅವರ ಇನ್ನಿತರ ವರ್ಣನೆಗಳಲ್ಲೂ ತೌಲನಿಕ ನೆಲೆಗಳಿರುವುದನ್ನು ಕಾಣಬಹುದು. ಜಿ.ಎಸ್.ಎಸ್. ಅವರ ತೌಲನಿಕ ಪರಿಶೀಲನೆಗಳು 'ಹೋಲಿಕೆಗಾಗಿ ಹೋಲಿಕೆ' ಗಳಾಗಿರದೆ ಯಾವುದೊಂದು ಅಂಶದ ಸ್ಪಷ್ಟೀಕರಣದ ಅಥವಾ ಹೊಸದೊಂದು ಹೊಳಹನ್ನು ನೀಡುವ ಪ್ರಯತ್ನಗಳಾಗಿರುತ್ತವೆಂಬುದು ಗಮನಿಸಬೇಕಾದ ಅಂಶ.

ಇನ್ನು ಭಾರವಿಯ 'ಕಿರಾತಾರ್ಜುನೀಯ'ದ ಪ್ರಭಾವ ಪಂಪನ ಮೇಲಾಗಿದ್ದಿರಬಹುದಾದ ಸಾಧ್ಯತೆಯನ್ನು ಕುರಿತು ಚರ್ಚಿಸಿದ ಪ್ರಯತ್ನವೊಂದಿದೆ. ಇಲ್ಲಿ ಕಥಾ ವಿವರಗಳ ನೆಲೆಯಿಂದ ಸಮರ್ಥನೆಗಳನ್ನು ನೀಡಿ ಭಾರವಿಯಲ್ಲಿ ವಿಸ್ತೃತವಾದುದು ಪಂಪನಲ್ಲಿ ಸಂಕ್ಷಿಪ್ತಗೊಂಡುದನ್ನು ತೋರಿಸಲಾಗಿದೆ.[33] ದೇವೇಂದ್ರ ಕುಮಾರ ಹಕಾರಿಯವರೂ ಪಂಪನ ಕಾವ್ಯವೂ ಸೇರಿದಂತೆ ಕನ್ನಡ ಕಾವ್ಯಗಳಲ್ಲಿ ಬಂದ ಕಿರಾತಾರ್ಜುನ ಪ್ರಸಂಗದ ಬಗೆಗಳನ್ನು ಕುರಿತು ವರ್ಣಿಸಿದ್ದಾರೆ.[34]

---

33. ಕೃಷ್ಣಮೂರ್ತಿ, ಕೆ.ಎಸ್., 'ಪಂಪ–ಭಾರವಿ', ಅಭಿವಂದನೆ (ಎ.ಆರ್.ಕೃ. ಅಭಿನಂದನ ಗ್ರಂಥ), ಮೈಸೂರು, 1956. ಪು: 178–179.

34. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನೀಯ ಪ್ರಸಂಗ, ಕ.ವಿ.ವಿ., (ಪ್ರ.ಪು.ಮಾ.), 1968. (2ನೇ ಮುದ್ರಣ)

ಅದೇ ರೀತಿ ಸಿ.ಪಿ.ಕೆ. ಯವರು 'ಮಹಾಕವಿಗಳು ಕಂಡ ಸಮಪ್ರತೀಕ' ವನ್ನು ಕುರಿತು ಚರ್ಚಿಸಿದ್ದಾರೆ.[35] ಇಂಥ ಇನ್ನೂ ಕೆಲವು ಚರ್ಚೆಗಳು ನಡೆದಿವೆ. ಇಲ್ಲೆಲ್ಲ ಸಾಮಾನ್ಯವಾಗಿ ಅಂಥಾ ಕವಿಗಳ ವರ್ಣನೆಗಳು ಅತ್ಯುತ್ತಮವಾಗಿವೆಯೆಂದೋ ಪೇಲವವಾಗಿವೆಯೆಂದೋ ಹೇಳಿ, ಅವಕ್ಕೆ ಇದು ಸಂಗ್ರಹಶೀಲತೆಯ ಪರಿಣಾಮವೆಂದೋ ನಂಬಿದ ಮತ ಧರ್ಮಗಳ ಪರಿಣಾಮಗಳೆಂದೋ ಕೆಲವು ಸಾಮಾನ್ಯ ಕಾರಣಗಳನ್ನು ಹೇಳಲಾಗುತ್ತದೆ. ಉದಾಹರಣೆಗೆ, ಹಕಾರಿಯವರು 'ಈಶ್ವರಾರ್ಜುನ ಯುದ್ಧವನ್ನು ರುದ್ರ ರಮ್ಯವಾಗಿ' ಚಿತ್ರಿಸಬಹುದಿತ್ತಾದರೂ ಹಾಗೆ ಮಾಡದಿರಲು ಕಾರಣ ಅರಿಕೇಸರಿಗೆ ಈ ಸನ್ನಿವೇಶದಿಂದ ಕುಂದಾಗುವುದೆಂಬ ಪಂಪನ ಭೀತಿ ಎಂದರೆ, ಸಿ.ಪಿ.ಕೆ. ಯವರು ಸಮಪ್ರತೀಕ ವರ್ಣನೆಯಲ್ಲಿ ಪಂಪ ವ್ಯಾಸರಿಗಿಂತ ಕೆಲವು ಹೆಜ್ಜೆ ಮುಂದೆ ಹೋದರೂ ಕೊನೆಯತನಕ ಈ ಉತ್ಸಾಹ ಉಳಿಯದಿರಲು ಕಾರಣ ಸಂಗ್ರಹಿಸುವಲ್ಲಿರುವ ಪಂಪನ ನೆಟ್ಟ ದೃಷ್ಟಿ. 'ಇದು ಅವನ ಕಾವ್ಯದ ಮುಖ್ಯ ಗುಣದಂತೆ ದೋಷವೂ ಹೌದು' ಎಂದಿದ್ದಾರೆ.

ಇದುವರೆಗೆ, ಮುಖ್ಯವಾದ ಬಹುಪಾಲು ತೌಲನಿಕ ಚರ್ಚೆಗಳನ್ನೆಲ್ಲ ಗಮನಿಸಿದ್ದಾಗಿದೆ. ಈ ಬಗೆಯ ಅಧ್ಯಯನಗಳ ಸ್ವರೂಪ ಎಂಥದೆಂಬುದೂ ಈಗ ಸ್ಪಷ್ಟವಿದೆ. ಪಂಪನನ್ನು ವ್ಯಾಸ–ಜಿನಸೇನರೊಂದಿಗೆ, ಇತರ ಕೆಲವು ಸಂಸ್ಕೃತ ಕವಿಗಳೊಂದಿಗೆ, ಕನ್ನಡ ಕವಿಗಳೊಂದಿಗೆ, ಇನ್ನಿತರ ಕವಿಗಳೊಂದಿಗೆ ಇರಿಸಿ ನೋಡಿದ ಹಲವು ಅಧ್ಯಯನಗಳು ನಡೆದಿವೆ. ಒಂದೆರಡನ್ನು ಹೊರತು (ಅವುಗಳ ಸ್ವರೂಪ ಎಂಥದೇ ಇರಲಿ) ಎರಡೋ ಅಥವಾ ಹೆಚ್ಚೋ ಕೃತಿಗಳನ್ನು ಇಡಿಯಾಗಿ ನೋಡಿದ ಅಧ್ಯಯನಗಳು ನಡೆದಂತಿಲ್ಲ. ವಸ್ತು ಸಾಮ್ಯತೆಯನ್ನಾಧರಿಸಿದ ಚರ್ಚೆಗಳು ವಿವಕ್ಷೆಯಲ್ಲಿರುವ ಕೃತಿಗಳನ್ನು ಇಡಿಯಾಗಿ

---

35. 'ಮಹಾಕವಿಗಳು ಕಂಡ ಸಮಪ್ರತೀಕ', ಕಾವ್ಯ ಗೌರವ, ಮೈಸೂರು, 1981. ಪು : 76–96.

ಗಮನಿಸಿವೆಯೆಂಬಂತೆ ಕಾಣುತ್ತವೆಯಾದರೂ ಅಲ್ಲಿ ಕೂಡ ಕೆಲವೇ ನಿರ್ದಿಷ್ಟ ಭಾಗಗಳು ಪರಿಶೀಲಿತವಾಗುವುದು, ನಿರ್ದಿಷ್ಟ ಪ್ರಶ್ನೆಗಳು ಚರ್ಚಿತವಾಗುವುದೇ ಮುಖ್ಯವಾಗಿದೆ. ಇನ್ನು ಒಂದು ಪ್ರಸಂಗವನ್ನೋ ಪಾತ್ರವನ್ನೋ ಕುರಿತ ಚರ್ಚೆಗಳ ಮಾತಂತೂ ಸರಿಯೆ.

ಇನ್ನೊಂದು ಅಂಶವನ್ನಿಲ್ಲಿ ಗಮನಿಸಬೇಕು. ತೌಲನಿಕ ಚರ್ಚೆಗಳಲ್ಲಿ ಒತ್ತಟ್ಟಿಗೆ ಪ್ರಶಂಸೆ, ಮೆಚ್ಚುಗೆ — ಕವಿ ಸಮರ್ಥನೆಯ ಧಾಟಿಯಿದ್ದರೆ, ಮತ್ತೊಂದೆಡೆಗೆ ಕೃತಿಗಳಲ್ಲಿ ಕಾಣಬರುವ ಮಾರ್ಪಾಡುಗಳನ್ನು ಕವಿಯೇ ಹೇಳಿಕೊಂಡ ಕೆಲವು ವಿವರಗಳೊಂದಿಗೆ ಸಂಬಂಧಿಸಿ, ತೀರ್ಮಾನ ರೂಪದ ಅಭಿಪ್ರಾಯಗಳಿಗೆ ಬರಲಾಗುತ್ತದೆ. ಮೊದಲ ಬಗೆಯವು ಯಾವ ಕವಿ ಕೃತಿಗಳನ್ನು ಬೇಕಾದರೂ ಸರಿಸಾಗಿ ಚರ್ಚಿಸುವ ಮಾರ್ಗವೊಂದನ್ನು ಹಿಡಿದಿವೆ. ಇದರಿಂದ ಯಾವ ಉದ್ದೇಶ ಸಾಧ್ಯವಾಯಿತೆಂಬುದನ್ನು ಕಂಡುಕೊಳ್ಳಬೇಕಿದೆ. ಎರಡನೆಯ ಬಗೆಯವು, ತಮ್ಮ ಎಲ್ಲ ಗುಣಾತ್ಮಕ ಅಂಶಗಳೊಂದಿಗೆ ತಾವೇ ಕೆಲವು ಮಿತಿಗಳನ್ನು ಹಾಕಿಕೊಂಡಿವೆ. ಇದೆಲ್ಲದರ ಆಚೆಗೂ ಕೆಲವು ಮೌಲಿಕ ಚರ್ಚೆಗಳಿವೆಯೆಂಬುದನ್ನೂ ಒಪ್ಪಬೇಕು.

ಒಂದೇ ವಸ್ತು, ಸನ್ನಿವೇಶ, ಪಾತ್ರಗಳು ಎರಡು ಕೃತಿಗಳಲ್ಲಿ ಕಂಡು ಬಂದರೆ, ಯಾವುದರಿಂದ ಯಾವುದು ಪ್ರಭಾವಿತವಾಗಿದೆ, ಯಾವ ಅಂಶಗಳಲ್ಲಿ ಅವೆರಡೂ ಸಮಾನ ಅಥವಾ ಭಿನ್ನ ಎಂಬುದನ್ನು ಮಾತ್ರ ಗಮನಿಸಬೇಕೆ? (ಎಂದರೆ ಹೀಗೆ ನೋಡುವುದನ್ನು ನಿರಾಕರಿಸಬೇಕೆಂದಲ್ಲ) ಎಂಬುದೊಂದು ಮುಖ್ಯ ಪ್ರಶ್ನೆ. ಒಂದೇ ವಸ್ತುವನ್ನಾಧರಿಸಿದ ಇಬ್ಬರು ಲೇಖಕರಲ್ಲಿ, ಆ ವಸ್ತುವನ್ನು ಕುರಿತ ಭಿನ್ನ ದೃಷ್ಟಿಕೋನಗಳು, ವಿಮರ್ಶಾ ನೋಟಗಳು ಇರಲು ಸಾಧ್ಯ. ಇದು ಲೇಖಕನೊಬ್ಬ ತನ್ನ ಕಾಲವನ್ನು, ತನ್ನ ಕಾಲದ ಬದುಕನ್ನು ಕಂಡುಕೊಳ್ಳುವ, ಅರ್ಥೈಸಿಕೊಳ್ಳುವ ಪ್ರಯತ್ನದ ಫಲವೋ ತನ್ನ

ಕಾಲದ, ಬದುಕಿನ ಸಂದರ್ಭದಲ್ಲಿ ಆ ವಸ್ತುವನ್ನು ಕುರಿತ ಶೋಧನದ ಫಲಪ್ರಾಪ್ತಿ ಇದ್ದೀತು. ಇಂಥ ನೆಲೆಗಳು ನಮ್ಮ ತೌಲನಿಕ ಪರಿಶೀಲನೆಗಳಲ್ಲಿ ಗಣನೆಗೆ ಬರಬೇಕಿದೆ.

# ಅಧ್ಯಾಯ : ಏಳು

## ಪಂಪನನ್ನು ಕುರಿತ ವಿಮರ್ಶೆ : ಒಂದು ಅವಲೋಕನ

ಇದುವರೆಗಿನ ಸಮೀಕ್ಷೆಯಲ್ಲಿ ಪಂಪನನ್ನು ಕುರಿತಂತೆ ನಡೆದಿರುವ ಪ್ರಮುಖ ಚರ್ಚೆಗಳನ್ನೆಲ್ಲ ಗಮನಿಸಲಾಗಿದೆ. ಆಯಾ ಅಧ್ಯಾಯಗಳಲ್ಲಿ ಸಂಬಂಧಪಟ್ಟ ಚರ್ಚೆಗಳ ಸ್ವರೂಪ, ಗುಣಾತ್ಮಕ ಹಾಗೂ ಮಿತಿಯ ಅಂಶಗಳನ್ನೂ, ಒಟ್ಟಾರೆಯಾಗಿ ಅವುಗಳ ನೆಲೆ–ಬೆಲೆಗಳನ್ನೂ ಗುರುತಿಸಲು ಪ್ರಯತ್ನಿಸಲಾಗಿದೆ. ಮೊದಲ ಅಧ್ಯಾಯದಲ್ಲೇ ಸ್ಪಷ್ಟಪಡಿಸಿದಂತೆ, ಪಂಪನನ್ನು ಕುರಿತ ವಿಮರ್ಶೆಯ ಅಧ್ಯಯನವೇ ಇದಾಗಿದ್ದರೂ ಇಲ್ಲಿ ಕೇವಲ ವಿಮರ್ಶಾ ಬರಹಗಳನ್ನು ಮಾತ್ರ ಗಮನಿಸಿಲ್ಲ. ಪಂಪನ ಕೃತಿಗಳ ಪರಿಷ್ಕರಣಗಳನ್ನೂ, ಅವನ್ನಾಧರಿಸಿ ನಡೆದಿರುವ ಪಾಠ ಚರ್ಚೆಗಳನ್ನೂ ವಿಮರ್ಶಾ ಚಟುವಟಿಕೆಗೆ ಪೂರಕವಾದ ಇನ್ನಿತರ ಬರಹಗಳನ್ನೂ ಗಮನಿಸಲಾಗಿದೆ. ಪಂಪನಂಥ ಪ್ರಾಚೀನ ಕವಿಯೊಬ್ಬನ ಕೃತಿಗಳ ಕುರಿತಾಗಿರುವ ವಿಮರ್ಶಾ ಸಾಹಿತ್ಯವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಹೀಗಾಗಬೇಕಾದದ್ದು ಒಂದು ರೀತಿಯಲ್ಲಿ ಅನಿವಾರ್ಯವೆಂದೇ ತೋರುತ್ತದೆ. ಕನ್ನಡ ವಿಮರ್ಶೆಯ ಮೊದಲ ದಿನಗಳಲ್ಲಿ ವಿಮರ್ಶಾ ಆಸಕ್ತಿಯು ಪರಿಚಯ, ವಿವರಣೆ, ಸಂಶೋಧನೆ, ತುಲನೆ, ಪುನಾರಚನೆ — ಇಂಥ ಹಲವು ಮುಖಗಳಲ್ಲಿ ಕಾಣಬರುವಂಥದು. ಆಗಿನ ದಿನಗಳಲ್ಲಿ ವಿಮರ್ಶೆ ಎನ್ನುವುದು ಈ ಎಲ್ಲವುಗಳ ಜೊತೆ ಜೊತೆಗೇ ಬೆಳೆದು ಬಂದಿದೆ. ಮತ್ತು ಅವೆಲ್ಲ ಪರಸ್ಪರ ಪೂರಕವೂ ಆಗಿರುವಂಥವು.

ಒಂದು ಕೃತಿಯನ್ನು ಕುರಿತು ನಡೆಯುವ ಎಲ್ಲ ಚರ್ಚೆ, ವಾಗ್ವಾದಗಳೂ ಆ ಕೃತಿಯ ಪಾಠವನ್ನೇ ಅಧರಿಸಿರುತ್ತವೆ. ಹಸ್ತಪ್ರತಿಗಳನ್ನಾಧರಿಸಿ ಸಿದ್ಧಗೊಂಡ ಪ್ರಾಚೀನ ಕೃತಿಯೊಂದರ ಪರಿಷ್ಕೃತ ಪಠ್ಯದ ಸ್ವರೂಪ ಸಹಜವಾಗಿಯೇ ಆ ಕೃತಿಯನ್ನು ಕುರಿತ ಚರ್ಚೆ, ವಾಗ್ವಾದಗಳನ್ನು ಪ್ರಭಾವಿಸುತ್ತದೆ. ಇದರ ಸ್ಪಷ್ಟೀಕರಣದ ಕೆಲವು ನಿದರ್ಶನಗಳನ್ನು ಈ ಅಧ್ಯಯನದ ಚೌಕಟ್ಟಿನೊಳಗೆ

ಕಾಣಬಹುದು. ಕವಿ ಸಂಬಂಧಿಯಾದ ಮತ್ತು ಪಾಠ ಸಂಬಂಧಿಯಾದ ನೆಲೆಯಿಂದ ನಡೆದಿರುವ ಚರ್ಚೆಗಳ ಪ್ರಮಾಣವನ್ನೂ, ಆ ಚರ್ಚೆಗಳು ಓತಪ್ರೋತವಾಗಿ ಬೆಳೆಯುತ್ತಾ ಹೋಗಿರುವುದನ್ನೂ ಗಮನಿಸಿದರೆ, ನಮ್ಮ ಅಧ್ಯಯನ ಪರಂಪರೆಯ ಆಸಕ್ತಿಗಳು ಅತ್ತಕಡೆಗೆ ಹರಿದಿವೆಯೆಂಬ ಅಂಶ ಮನವರಿಕೆಯಾಗುತ್ತದೆ. ಇನ್ನು ಪ್ರತ್ಯೇಕ ಅಧ್ಯಾಯಗಳಲ್ಲಿ ಚರ್ಚಿಸಲಾದ ಭಾಷಿಕ, ಸಾಮಾಜಿಕ, ತೌಲನಿಕ ನೆಲೆಯ ಅಧ್ಯಯನಗಳೆಲ್ಲ ಪಂಪನನ್ನು ಕುರಿತ ವಿಮರ್ಶೆಯಲ್ಲಿ ಕಾಣಬರುವ ಪ್ರಧಾನ ಒಲವುಗಳೇ ಆಗಿವೆ.

## 7.1 ಇನ್ನೂ ಕೆಲವು ಅಧ್ಯಯನಗಳು

ಈ ಹಿಂದಿನ ಸಮೀಕ್ಷೆಯಲ್ಲಿ ಗಮನಿಸದೆ ಕೈಬಿಟ್ಟ ಇನ್ನೂ ಕೆಲವು ಅಧ್ಯಯನಗಳಿವೆ. ಅವು ಮುಖ್ಯವಾಗಿ ಎರಡು ಬಗೆಯವೆನ್ನಬಹುದು. ಒಂದು ಬಗೆಯವು ಪಂಪನನ್ನು ಕುರಿತ ಅಧ್ಯಯನ ಪರಂಪರೆಯಲ್ಲಿ ಯಾವುದೇ ಬಗೆಯ ಮಹತ್ವವನ್ನು ಪಡೆಯದಿರುವಂಥವು. ಅವೆಲ್ಲ ಸಾಮಾನ್ಯವಾಗಿ ಪುನರಾವರ್ತಿತ ವಿವರಗಳನ್ನೇ ಮಂಡಿಸುತ್ತವೆ. ಹೀಗೆ ಮಂಡಿತವಾಗುವಂಥವು ಕೃತಿಯೊಳಗಿನ ಕೆಲವು ನಿರ್ದಿಷ್ಟ ವಿವರಗಳೇ ಆಗಿದ್ದು ಅವನ್ನು ಬೇಕಾದರೆ ಪಟ್ಟಿ ಮಾಡಿಡಬಹುದು. ಅಧ್ಯಯನದ ವಿವಕ್ಷೆಯಲ್ಲಿ ಕೃತಿಯ ಕುರಿತಾದ ಯಾವ ಅಂಶವೇ ಇರಲಿ, ಆ ಅಂಶವನ್ನು ಕುರಿತ ಚರ್ಚೆ ಗೌಣವಾಗಿ ಕವಿಯ ವ್ಯಕ್ತಿ ವಿವರಗಳು, ಅರಿಕೇಸರಿಯ ಕುರಿತ ವಿವರಗಳು, ಕವಿ ತನ್ನ ಕೃತಿಗಳನ್ನು ಲೌಕಿಕ – ಆಗಮಿಕವೆಂದು ಕರೆದದ್ದು, ಅವನ ಬನವಾಸಿಯ ಬಗೆಗಿನ ಪ್ರೀತಿ, ರಸಿಕತೆ – ಇಂಥ ವಿವರಗಳನ್ನು ಹೇಳುವುದೇ ಪ್ರಧಾನವಾಗಿಬಿಡುತ್ತದೆ. ಮುಖ್ಯ

ಚರ್ಚೆಗೆ ನೇರವಾಗಿ ಪ್ರವೇಶಿಸದೆ, ಬಳಸು ದಾರಿಯನ್ನು ಹಿಡಿದು ಮಂಡಿಸುವ ಇಂಥ ವಿವರಗಳು ಹೊಸ ಅಂಶಗಳೇನೂ ಆಗಿರುವುದಿಲ್ಲ. ಈಗಾಗಲೇ ಹೇಳಲಾಗಿರುವ ಅಂಶಗಳನ್ನೇ ಮತ್ತೆ ಪುನರುಚ್ಚರಿಸುವ ಅಗತ್ಯದ ಪ್ರಶ್ನೆ ಇಂಥ ಬರಹಗಳಲ್ಲಿ ಮುಖ್ಯವಾಗುವುದಿಲ್ಲ. ಇದಕ್ಕೆ ಕಾರಣ ಬಹುಶಃ ಅವರೆಗೆ ನಡೆದಿರುವ ಚರ್ಚೆಗಳನ್ನು, ಒಟ್ಟು ಕೆಲಸವನ್ನು ಪರಿಗಣಿಸಿಕೊಳ್ಳದಿರಬಹುದು ಅಥವಾ ಒಂದು ಪರಂಪರೆಯ ಪ್ರಕ್ರಿಯೆಯಲ್ಲಿ ಕೆಲಸ ಮಾಡುತ್ತಿರುವ ಎಚ್ಚರದ ಅಭಾವದ ಪರಿಣಾಮವೂ ಇರಬಹುದು. ಏನೆಂದರೂ ಇದು ಒಂದು ಅಧ್ಯಯನ ಪರಂಪರೆಯ ಆರೋಗ್ಯಕರ ಲಕ್ಷಣವೇನೂ ಅಲ್ಲ. ಇಂಥ ಚರ್ಚೆಗಳಲ್ಲಿ ಸಾಮಾನ್ಯವಾಗಿ ಪಂಪನ ಪ್ರತಿಭಾ ಶಕ್ತಿಯನ್ನು, ಹಿತಮಿತ ಮೃದು ವಚನವನ್ನು ಪ್ರಶಂಸಿಸಿ ಕೀರ್ತಿಸುವುದು ಕಾಣಬರುತ್ತದೆ. ಆದರೆ ಇದರ ಸಮರ್ಥನೆಯ ನೆಲೆಗಳು ಚರ್ಚೆಗಳಲ್ಲಿ ಇರುವುದಿಲ್ಲವೆಂಬುದು ಗಮನಿಸಬೇಕಾದ ಅಂಶ. ಇಂಥ ಬರಹಗಳನ್ನು ಪ್ರತ್ಯೇಕವಾಗಿ ಪರಿಶೀಲಿಸುವ ಅಗತ್ಯ ಕಾಣಲಿಲ್ಲ.

ಇನ್ನೊಂದು ಬಗೆಯ ಬರಹಗಳು ಇವುಗಳಿಗಿಂತ ಸಂಪೂರ್ಣ ಭಿನ್ನವಾಗಿರುವಂಥವು. ಒಂದು ರೀತಿಯಲ್ಲಿ ಕೃತಿ ಪರಿಶೀಲನೆಯ ಸ್ವರೂಪದ ಈ ಬರಹಗಳು ವಿಮರ್ಶೆಗಳ ಅಧ್ಯಯನದ ಸಂದರ್ಭದಲ್ಲಿ ಗಮನಿಸತಕ್ಕವು. ಕೃತಿನಿಷ್ಠ ಒಲವುಗಳುಳ್ಳ ಈ ಚರ್ಚೆಗಳಲ್ಲಿ ಒಂದು ನಿರ್ದಿಷ್ಟ ಪ್ರಸಂಗವನ್ನು, ಸನ್ನಿವೇಶವನ್ನು ಇಲ್ಲವೆ ಒಂದೆರಡು ಪದ್ಯಗಳನ್ನು ಕುರಿತ ವಿಶ್ಲೇಷಣೆಗಳಿರುತ್ತವೆ. ತೇಜಸ್ವಿಯವರ 'ಪಂಪ : ಒಂದು ಮೌಲ್ಯ ವಿವೇಚನೆ', ಸ್ಪಷ್ಟವಾಗಿ ಕೃತಿ ನಿಷ್ಠ ನಿಲುವಿನದೇ ಆಗಿದ್ದರೆ, ಕುವೆಂಪು ಅವರ 'ಪಂಪನಲ್ಲಿ ಭವ್ಯತೆ', ಟಿ.ಎಸ್.ವೆಂಕಣ್ಣಯ್ಯನವರ 'ಪಂಪ ಭಾರತ' ಇಂಥ ಬರಹಗಳಲ್ಲಿ ಕೃತಿ ನಿಷ್ಠ ಒಲವುಗಳು ಪ್ರಧಾನವಾಗಿವೆ. 'ಪಂಪನ ಅಭಿವ್ಯಕ್ತಿ'ಯನ್ನು ಕುರಿತ ತಮ್ಮ ಚರ್ಚೆಯಲ್ಲಿ ಜಿ.ಎಚ್.ನಾಯಕರು 'ಪಂಪನ ಅಭಿವ್ಯಕ್ತಿ ಕೌಶಲವನ್ನೆಲ್ಲ

ಆತನ ಗ್ರಥನ ಕೌಶಲದಲ್ಲಿ ಗುರುತಿಸಬೇಕಾಗಿದೆ'ಯೆಂದು ಹೇಳಿ,[1] ಅತ್ಯುತ್ತಮ ಗ್ರಥನ ಕೌಶಲದ ನಿದರ್ಶನಗಳನ್ನೆತ್ತಿಕೊಂಡು ಪರಿಶೀಲಿಸಿದ್ದಾರೆ. ಈ ಪರಿಶೀಲನೆಯಲ್ಲಿ ಸ್ಪಷ್ಟವಾಗಿ ಕೃತಿನಿಷ್ಠ ವಿಶ್ಲೇಷಣೆಯ ನೆಲೆಗಳು ಪ್ರಕಟವಾಗಿವೆ. ಇಂಥ ಇನ್ನೂ ಒಂದೆರಡು ಪ್ರಯತ್ನಗಳಿರುವುದನ್ನು ಗುರುತಿಸಬಹುದಾದರೂ ಈ ಬಗೆಯ ಚರ್ಚೆಗಳು ವಿರಳವೆಂದೇ ಹೇಳಬೇಕು. ಆದರೆ ಈ ಬಗೆಯ ವಿಶ್ಲೇಷಣೆಯ ನಿಲುವನ್ನು ಒಂದೋ ಎರಡೋ ಪದ್ಯಗಳಿಗೆ, ಒಂದು ಸನ್ನಿವೇಶಕ್ಕೆ ಸಂಬಂಧಿಸಿದಂತೆ ಮಾತ್ರ ಬಳಸಲಾಗಿದೆ. ಇಡೀ ಕೃತಿಯ ಸಮಗ್ರ ವಿಶ್ಲೇಷಣೆಗೆ ಇದನ್ನು ಬಳಸಲಾಗಿಲ್ಲ.

ಇನ್ನು ಪರಿಚಯ ರೂಪದ, ವಿವರಣ ರೂಪದ ಕೆಲವು ಬರೆಹಗಳಿವೆ. ಇಂಥವು ವಿಮರ್ಶೆಯ ಮೊದಲ ದಿನಗಳಿಂದ ಹಿಡಿದು ಈಚಿನವರೆಗೂ ಕಾಣಿಸಿಕೊಳ್ಳುತ್ತಾ ಬಂದಿವೆ. ಕೆಲವೆಡೆಯಾದರೂ ಈ ಪರಿಚಯಾತ್ಮಕ, ವಿವರಣಾತ್ಮಕ ಧಾಟಿಯ ಬರೆಹಗಳು ವ್ಯಾಖ್ಯಾನ ವಿಮರ್ಶೆಯ ಅತ್ಯುತ್ತಮ ಮಾದರಿಗಳಾಗಿವೆ. ಆದರೆ ಇಂಥವು ತೀರ ವಿರಳವೆಂದೇ ಹೇಳಬೇಕು.

## 7.2 ವಿಮರ್ಶೆಯ ಬೆಳವಣಿಗೆ

ಕಳೆದ ಶತಮಾನದ ಕೊನೆಯ ಮತ್ತು ಈ ಶತಮಾನದ ಮೊದಲ ಸರಿಸುಮಾರಿನ ದಿನಗಳನ್ನು ಸ್ಥೂಲವಾಗಿ ವಿಮರ್ಶೆಯ ಚಟುವಟಿಕೆಯೊಂದು

---

1. ನೋಡಿ : 'ಪಂಪನ ಅಭಿವ್ಯಕ್ತಿ', ಪಂಪ : ಒಂದು ಅಧ್ಯಯನ, (ಸಂ) ಜಿ.ಎಸ್.ಶಿವರುದ್ರಪ್ಪ, ಬೆಂ.ವಿ.ವಿ., 1974. ಪು : 214.

ರೂಪುಗೊಳ್ಳಲು ತೊಡಗಿದ ಕಾಲಾವಧಿಯೆನ್ನಬಹುದು. ಹೀಗೆ ರೂಪುಗೊಂಡದ್ದರ ಹಿನ್ನೆಲೆಗೆ ಕಳೆದ ಶತಮಾನದಲ್ಲಿ ಇಂಗ್ಲಿಷ್ ಶಿಕ್ಷಣದ ಫಲವಾಗಿ ನಮ್ಮ ಸಂದರ್ಭದಲ್ಲಿ ಕಾಣಿಸಿಕೊಂಡ ಸ್ಥಿತ್ಯಂತರಗಳು ಮತ್ತು ತನ್ಮೂಲಕ ನಡೆದ ಹೊಸ ಸಾಹಿತ್ಯ ಸೃಜನೆಯ ಯತ್ನಗಳು, ಸಂಶೋಧನೆ, ಗ್ರಂಥ ಸಂಪಾದನೆ, ಸಾಹಿತ್ಯ ಚರಿತ್ರೆ, ಶಾಸನ ಮತ್ತು ಜಾನಪದ ಸಂಗ್ರಹ ಕಾರ್ಯ — ಹೀಗೆ ಸಾಹಿತ್ಯಾಧ್ಯಯನದ ಹಲವು ಪ್ರಯತ್ನಗಳು ಪ್ರವೃತ್ತವಾಗಿವೆ. ಹಳಗನ್ನಡ ಕೃತಿಗಳ ಪರಿಷ್ಕರಣ ಮತ್ತು ಹೊಸ ಸಾಹಿತ್ಯ ಸೃಜನೆಯ ಪ್ರಯತ್ನಗಳ ಹಿಂದೆ ಕಳೆದು ಹೋದ ಕೊಂಡಿಯನ್ನು ಪುನಾರಚಿಸಿಕೊಳ್ಳುವ ಮತ್ತು ನಮ್ಮದಲ್ಲದ ಹೊಸದೊಂದನ್ನು ರೂಢಿಸಿಕೊಳ್ಳುವ ಕಾಳಜಿಗಳು ಪ್ರಧಾನವಾಗಿ ಕಾಣುತ್ತವೆ. ಇಂಥ ಕಾಳಜಿಗಳ ಫಲವಾಗಿ ಪರಿಚಯಾತ್ಮಕ ಧಾಟಿಯ ವಿಮರ್ಶೆಯೊಂದು ಪ್ರಚುರವಾಯಿತೆಂದು ತೋರುತ್ತದೆ.

ಪಂಪನನ್ನು ಮತ್ತು ಅವನಂಥ ಹಳಗನ್ನಡ ಕವಿ ಕೃತಿಗಳನ್ನು ಕುರಿತ ಇಂಥ ಪರಿಚಯಾತ್ಮಕ ವಿಮರ್ಶೆಯ ಪ್ರಾರಂಭದೊಂದಿಗೆ ಆಧುನಿಕ ಕನ್ನಡ ವಿಮರ್ಶೆಯ ಪ್ರಾರಂಭವೂ ಆಗಿದೆ. ಹೀಗಾಗಿ ಪಂಪನನ್ನು ಅಥವಾ ಅವನಂಥ ಹಳಗನ್ನಡ ಕವಿಯೊಬ್ಬನ ಕೃತಿಗಳನ್ನು ಕುರಿತು ಬೆಳೆದು ಬಂದಿರುವ ವಿಮರ್ಶಾ ಸಾಹಿತ್ಯದ ಬಗ್ಗೆ ಹೇಳುವ ಮಾತುಗಳು ಒಂದರ್ಥದಲ್ಲಿ ಆಧುನಿಕ ಕನ್ನಡ ವಿಮರ್ಶಾ ಸಾಹಿತ್ಯಕ್ಕೇ ಅನ್ವಯವಾಗುವಂಥವು. ಆದರೂ ಹಳಗನ್ನಡ ಸಾಹಿತ್ಯ ವಿಮರ್ಶೆಗೂ ಆಧುನಿಕ ಕೃತಿಗಳನ್ನು ಕುರಿತ ವಿಮರ್ಶೆಗೂ ಇರುವ ಕೆಲವು ವ್ಯತ್ಯಾಸಗಳನ್ನೇನೂ ಮರೆಯಲಾಗದು.

ಈಗಾಗಲೇ ಗುರುತಿಸಲಾಗಿರುವಂತೆ ಲೂಯಿ ರೈಸ್ ಬರೆದ ಪರಿಚಯಾತ್ಮಕ ಸ್ವರೂಪದ ' ದಿ ಪೊಯೆಟ್ ಪಂಪ' ಪಂಪನನ್ನು ಕುರಿತ ಮೊದಲ ಬರಹ. ಅವರೇ ಪಂಪ ಭಾರತದ ಪರಿಷ್ಕರಣವನ್ನು ಹೊರತಂದುದು 1898 ರಲ್ಲಿ. 1900 ರಲ್ಲಿ

ಎಸ್.ಜಿ.ನರಸಿಂಹಾಚಾರ್ಯರು ಆದಿಪುರಾಣದ ಪರಿಷ್ಕರಣವನ್ನು ಹೊರತಂದರು. ಈ ಮಧ್ಯೆ ಎಂ.ಎ.ರಾಮಾನುಜಯ್ಯಂಗಾರರು ತಮ್ಮ ಗದಾಯುದ್ಧದ ಪರಿಷ್ಕರಣದ ಅನುಬಂಧದಲ್ಲಿ ಪಂಪ–ರನ್ನರ ಕೃತಿಗಳ ಕುರಿತಾದ ತೌಲನಿಕ ಚರ್ಚೆಯೊಂದನ್ನು ಮಂಡಿಸಿದ್ದನ್ನು ಬಿಟ್ಟರೆ, ಅಂಥ ಗಮನಾರ್ಹ ಚರ್ಚೆಗಳೇನೂ ನಡೆದಂತಿಲ್ಲ. ಆದಿಪುರಾಣದ ಪರಿಷ್ಕರಣದ ಪ್ರಕಟಣೆಯ ನಂತರ ಬೆಳ್ಳಾವೆಯವರ ಪಂಪ ಭಾರತದ ಪರಿಷ್ಕರಣ ಹೊರಬರುವವರೆಗೆ ಕೆಲವಾರು ಚರ್ಚೆಗಳು ಅಲ್ಲಲ್ಲಿ ಕಾಣಿಸಿಕೊಂಡಿವೆ. ಇವುಗಳಲ್ಲಿ ಪರಿಚಯಾತ್ಮಕ ಬರೆಹಗಳು ಮಾತ್ರವಲ್ಲದೆ ಪಾತ್ರಗಳನ್ನು ಕುರಿತು ವಿವೇಚಿಸಿದ ಕೆಲವು ಪ್ರಯತ್ನಗಳೂ ಇವೆ. ಈ ಸುಮಾರಿನಲ್ಲಿ 'ರನ್ನ ಕವಿ ಪ್ರಶಸ್ತಿ' ಯಲ್ಲಿ ಬಂದ ತೀ.ನಂ.ಶ್ರೀ. ಅವರ ಪಂಪ ಭಾರತ – ಗದಾಯುದ್ಧಗಳ ಕುರಿತ ತೌಲನಿಕ ಚರ್ಚೆ ಮತ್ತು ಬಿ.ಶಿವರಾಮಯ್ಯನವರ ವ್ಯಾಸ ಭಾರತದ ಹಿನ್ನೆಲೆಯಲ್ಲಿ ಕನ್ನಡದ ಭಾರತ ಕಥೆಯ ಕಾವ್ಯಗಳ ಕುರಿತಾದ ತೌಲನಿಕ ಪರಿಶೀಲನೆಗಳು ಗಮನಾರ್ಹವಾಗಿವೆ.

ಬೆಳ್ಳಾವೆಯವರ ಪಂಪ ಭಾರತದ ಪರಿಷ್ಕರಣ ಹೊರ ಬಂದ ಮೇಲೆ ಹಲವು ಚರ್ಚೆಗಳು ನಡೆದಿವೆ. ಈ ಅವಧಿಯ ಬರೆಹಗಳು ಪರಿಚಯಾತ್ಮಕವಾಗಿರುವುದರ ಜೊತೆಗೆ ವರ್ಣನಾನಿಷ್ಠ ಮತ್ತು ರಸನಿಷ್ಠ ಒಲವುಗಳನ್ನು ಪ್ರಧಾನವಾಗಿ ಪ್ರಕಟಪಡಿಸುತ್ತವೆ. ಇದರ ಜೊತೆಗೇ ಗಮನಿಸಬಹುದಾದ ಇನ್ನೊಂದು ಮುಖ್ಯ ಅಂಶವೆಂದರೆ ಅಭಿರುಚಿ ನಿರ್ಮಾಣದ ಕಾಳಜಿ. ಈ ಕಾಳಜಿಗಳು ಪ್ರಾರಂಭದಲ್ಲಿ ಕೇವಲ ಸಾಹಿತ್ಯದ ಬಗ್ಗೆ ಮಾತ್ರ ರುಚಿ ನಿರ್ಮಾಣ ಮಾಡುವ ಉದ್ದೇಶದ್ದಾಗಿರದೆ ನಾಡು–ನುಡಿ–ಪ್ರಾದೇಶಿಕತೆಯ ಬಗ್ಗೆ ಶ್ರದ್ಧೆ ಹುಟ್ಟಿಸುವ ಉದ್ದೇಶದ್ದೂ ಕೂಡ ಆಗಿವೆ. ಮತ್ತು ಈ ರುಚಿ ನಿರ್ಮಾಣದ ಕಾಳಜಿಗಳು ಈ ಶತಮಾನದ ಪೂರ್ವಾರ್ಧದವರೆಗೂ ಪ್ರವೃತ್ತವಾಗಿರುವುದನ್ನು ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಐವತ್ತರ ಸುಮಾರಿಗೆ ಬಂದ ರಾಜರತ್ನಂ ಅವರ 'ಪಂಪ ಕವಿಯ ಕರ್ಣ ರಸಾಯನಂ' (1950), 'ಶ್ರೀಕವಿ ಪಂಪ' (1951) ಮತ್ತು

ಕೆ.ವಿ.ಕೃಷ್ಣ ಭಟ್ಟರ 'ಪಂಪ ಭಾರತವೆಂಬ ವಿಕ್ರಮಾರ್ಜುನ ವಿಜಯದೊಳಗಿನ ಕರ್ಣ ರಸಾಯನಂ' (1953) — ಇಂಥ ಕೃತಿಗಳನ್ನು ಹೆಸರಿಸಬಹುದು. ರಾಜರತ್ನಂ ಮತ್ತು ಕೃಷ್ಣ ಭಟ್ಟರು ಪಂಪ ಭಾರತದಲ್ಲಿ ಬರುವ ಕರ್ಣ ಸಂಬಂಧಿಯಾದ ವಿವರಗಳನ್ನೆಲ್ಲ ಒಂದೆಡೆಗೆ ಕಲೆಹಾಕಿದ್ದಾರೆ. ರಾಜರತ್ನಂ ಅವರದು ರಸಪೂರ್ಣ ವಿವರಗಳನ್ನುಳ್ಳ ಸಂದರ್ಭಗಳಲ್ಲಿ ಪಂಪನ ಪದ್ಯಗಳನ್ನೇ ಹಾಕಿ, ಉಳಿದೆಡೆ ಕಥಾ ವಿವರಗಳನ್ನು ನೀಡುವ ಮಾದರಿಯ ಸಂಗ್ರಹ ಕೃತಿಯಾದರೆ, ಕೃಷ್ಣ ಭಟ್ಟರದು ಒಂದು ವ್ಯಾಖ್ಯಾನ ಕೃತಿ. ಅವರೇ ಅದನ್ನು 'ಯಥಾರ್ಥ ಬೋಧಿನಿ' ಎಂದು ಕರೆದಿದ್ದಾರೆ. ಇನ್ನು ರಾಜರತ್ನಂ ಅವರ 'ಶ್ರೀಕವಿ ಪಂಪ' ಪಂಪನ ಕೃತಿಗಳಿಂದಾಯ್ದ ಕೆಲವು ಪ್ರಮುಖ ಭಾಗಗಳನ್ನು ಕಲೆಹಾಕಿರುವ ಪ್ರಯತ್ನವಾಗಿವೆ. ಈ ಕೃತಿಗಳಲ್ಲಿ ಬಂದ ಕೆಲವು ಮಾತುಗಳನ್ನು ಇಲ್ಲಿ ಗಮನಿಸಬಹುದು : "ಪಂಪನ ವಿಕ್ರಮಾರ್ಜುನ ವಿಜಯ ಎಲ್ಲರೂ ಓದಬೇಕಾದ ಕಾವ್ಯ. ಅದರಲ್ಲಿ ಕರ್ಣನ ಕಥೆ ಮತ್ತೆ ಮತ್ತೆ ಸವಿಯಬೇಕೆನ್ನುವ ಭಾಗ, ಇದು ಒಂದು ಕಡೆ ಒಟ್ಟಿಗೆ ಓದಲು ಆಗುವಂತೆ .......... ಆ ಕಥೆಯನ್ನು ಕವಿಯ ಮಾತುಗಳಲ್ಲಿ ಸಂಗ್ರಹಿಸಿದೆ. ಮಧ್ಯೆ ಮಧ್ಯೆ ಬೇಕಾಗುವ ಅವಶ್ಯವಾದ ಕಥೆಯ ಕುಣಿಕೆಗಳನ್ನು ಹೊಸಗನ್ನಡದಲ್ಲಿ ಕೂಡಿಸಿದೆ. ಕಷ್ಟವಾದ ಕೆಲವು ಪದಗಳಿಗೆ .......... ಲಘು ಟಿಪ್ಪಣಿ ಇದೆ" (ರಾಜರತ್ನಂ).

"........... ಪಂಪ ರನ್ನರ ಭಾಷೆಯು ಕೇವಲ ಪಂಡಿತರಿಗೆ ಮೀಸಲಾಗಿರುವುದೆಂದು ದೂರಿಕೊಳ್ಳುವ ಕೋಲಾಹಲವೇ ಕೇಳಿಸುತ್ತಿರುವುದು .......... ತರುಣರಿಗೆ ಅದು ಸುಗಮವಾಗುವಂತೆ ಮಾಡುವುದು ಪ್ರತಿಯೊಬ್ಬ ಕನ್ನಡಿಗನಿಗೂ ಇರುವ ಹೊಣೆಗಾರಿಕೆಯು ಎಂಬ ವಿಚಾರದಿಂದ ಪಂಪನು ತನ್ನ ಭಾರತದಲ್ಲಿ ಹುದುಗಿಸಿಟ್ಟಿರುವ ಬೇರೊಂದು ಕಾವ್ಯವೆಂಬಂತೆ ಭಾಸವಾಗುವ, ಮುಕ್ತ ಕಂಠವಾಗಿ 'ಕರ್ಣ ರಸಾಯನ' ವೆಂದು ಕೊಂಡಾಡಿದ ತನ್ನ ಅಚ್ಚುಮೆಚ್ಚಿನ ಕರ್ಣನ ಚರಿತ್ರೆಯನ್ನು ಪರಿಶೋಧಿಸಿ .......... 'ಯಥಾರ್ಥ ಬೋಧಿನಿ'ಯೆಂಬ ವ್ಯಾಖ್ಯಾನವನ್ನು ಬರೆಯುವ ಸಾಹಸ ಮಾಡಲಾಯಿತು." (ಕೆ.ವಿ.ಕೃಷ್ಣ ಭಟ್ಟ)

ಮೇಲಿನ ಮಾತುಗಳಲ್ಲಿ ವ್ಯಕ್ತವಾಗುವಂತೆ, ಇಡೀ ಕಾವ್ಯದ ಭಾಗವೊಂದನ್ನು ಪ್ರತ್ಯೇಕಿಸುವ, ಅದರ ರಸಾತ್ಮಕತೆಯನ್ನು, ಪಾತ್ರವೊಂದರ ಉದಾತ್ತತೆಯನ್ನು ಮೆರೆಯುವ, ಅಂಥ ಭಾಗಗಳನ್ನು ಕಲೆಹಾಕಿ ವಿವರಿಸಿ, ವರ್ಣಿಸುವ ಆಸಕ್ತಿಗಳು ಪ್ರಧಾನವಾಗಿವೆ. ಇಲ್ಲಿ ಈ ಮುನ್ನಿನ ದಿನಗಳಿಂದಲೂ ಹಳೆಯ ಕಾವ್ಯಗಳ ಸಾರವತ್ತಾದ ಭಾಗಗಳನ್ನು ಸಂಗ್ರಹಿಸಿ, ಕಥೆ ಕೆಡದಂತೆ ಅವುಗಳನ್ನು ಸೇರಿಸಿ ಪ್ರಕಟಿಸುವ ಆಶಯಗಳು ವ್ಯಕ್ತವಾಗಿರುವುದನ್ನು ಗಮನಿಸಬಹುದು.[2] ಇಂಥ ಆಶಯಗಳೂ, ಇಂಥ ಆಶಯಗಳನ್ನೇ ಪ್ರಕಟಪಡಿಸುವ ಕೆಲವು ಸಂಗ್ರಹಗಳೂ ಮುಖ್ಯವಾಗಿ ಆಂಶಿಕ ವಿಮರ್ಶೆಯ ನೆಲೆಗಳನ್ನು ಪ್ರೇರಿಸಿವೆಯೆನ್ನಬಹುದು. ಇನ್ನು ರಸನಿಷ್ಠ, ವರ್ಣನಾನಿಷ್ಠ ನೆಲೆಯ ವಿಮರ್ಶೆಯ ಮಾತಂತೂ ಸರಿಯೇ.

1938 ರಷ್ಟು ಹಿಂದೆಯೇ ಪಂಪನನ್ನು ಕುರಿತ ಪ್ರತ್ಯೇಕ ಕೃತಿಯೊಂದನ್ನು ಬರೆದ ಮುಳಿಯ ತಿಮ್ಮಪ್ಪಯ್ಯನವರ 'ನಾಡೋಜ ಪಂಪ' ಹಲವು ಆಯಾಮಗಳನ್ನು ಪಡೆದಿರುವಂಥದು. ಪಂಪನ ವ್ಯಕ್ತಿ ವಿವರಗಳ, ಅರಿಕೇಸರಿಯ ವಂಶಾವಳಿಯ ಹೊಲಬು, ವಿಕ್ರಮಾರ್ಜುನ ವಿಜಯದಲ್ಲಿನ ಚಾರಿತ್ರಿಕ ನೆಲೆಗಳ ವಿಶ್ಲೇಷಣೆ, ಆದಿಪುರಾಣದ ರಸ ಪ್ರಧಾನತೆ, ಪಂಪನ ದೇಸಿಯ ಬಳಕೆಯ ಸ್ವರೂಪ ಇಂಥ ಹಲವು ಅಂಶಗಳನ್ನು ಕುರಿತ ಚರ್ಚೆ ಈ ಕೃತಿಯಲ್ಲಿದೆ. ಸಂಬಂಧಪಟ್ಟ ಚರ್ಚೆಗಳ ಸಂದರ್ಭದಲ್ಲಿ ಮುಳಿಯ ಅವರ ಚರ್ಚೆಯ ನೆಲೆಗಳನ್ನು ಈಗಾಗಲೇ ಪರಿಶೀಲಿಸಲಾಗಿದೆ. ಮುಳಿಯ ಅವರು ಅನೇಕ ಸಲ ಅತಿಗೆ ಹೋಗಿಬಿಡುತ್ತಾರೆ. ಆದರೂ ಅವರು ಬರಿಯ ಊಹೆಯನ್ನು ಆಧರಿಸಿ ಚರ್ಚೆಯನ್ನು ಬೆಳೆಸುವುದಿಲ್ಲ. ಅವರ ಚರ್ಚೆಯ ಹಲವು ಅಂಶಗಳು ನಮಗಿಂದು ಮಹತ್ವದವೆಂದು ತೋರದಿರ—ಬಹುದಾದರೂ, ಅವುಗಳಿಗೆ ಚಾರಿತ್ರಿಕ ದೃಷ್ಟಿಯಿಂದ ಇರುವ ವಿಶಿಷ್ಟತೆಯನ್ನೇನೂ

---

2. ನೋಡಿ : ಗುಂಡಪ್ಪ, ಡಿ.ವಿ., ಜೀವನ ಸೌಂದರ್ಯ ಮತ್ತು ಸಾಹಿತ್ಯ, ಬೆಂಗಳೂರು, 1932. ಪು : 128—131.

ನಿರಾಕರಿಸಲಾಗದು. ಮುಳಿಯ ಅವರ ಕೃತಿಯಲ್ಲಿ ಉದ್ದಕ್ಕೂ ವರ್ಣನೆ ಮತ್ತು ರಸಸ್ಥಾನಗಳನ್ನು ಹಿಡಿದು ವಿವರಿಸುವ ಆಸಕ್ತಿಗಳು ಪ್ರಕಟವಾಗಿರುವುದನ್ನು ಗಮನಿಸಬಹುದು. ಪಂಪನ ಕೃತಿಗಳನ್ನು ಕುರಿತ ವ್ಯಾಪಕವಾದ ಅಧ್ಯಯನವನ್ನು ನಡೆಸಿದ ಮುಳಿಯ ಅವರ ಕೃತಿಯಲ್ಲೂ ವಿಕ್ರಮಾರ್ಜುನ ವಿಜಯವನ್ನು ಕುರಿತ ಚರ್ಚೆಯೇ ಮುಖ್ಯವಾಗಿದೆ. 'ಆದಿಪುರಾಣವೆಂದರೆ ರಸ ಪ್ರಧಾನವಾದುದು, ಸಮಸ್ತ ಭಾರತವೆಂದರೆ ಶೀಲ ಪ್ರಧಾನವಾದುದು' ಎಂಬ ತಮ್ಮ ನಂಬಿಕೆಗನುಗುಣವಾಗಿ 'ಆದಿಪುರಾಣದಲ್ಲಿ ರಸ ಪ್ರವಹಣ ಸ್ವರೂಪ'ವನ್ನು ವಿವರಿಸುವಲ್ಲಿ ಮಾತ್ರ ಹೆಚ್ಚು ಆಸಕ್ತಿಯನ್ನು ತೋರಿದ್ದಾರೆ. 'ಜಳ್ಳನ್ನು ಗೇರಿ ಹಾರಿಸಿ ನೆಲ್ಲನ್ನು ಆರಿಸಿಕೊಳ್ಳುವುದು ವಿಮರ್ಶಕರ ಕರ್ತವ್ಯವು' ಎನ್ನುವ ಮುಳಿಯರು ತಾವು 'ನೆಲ್ಲು' ಎಂದು ಭಾವಿಸಿದುದನ್ನು, ಅಂಥ ಸನ್ನಿವೇಶ–ಪ್ರಸಂಗಗಳನ್ನು ಅದರ ವಿವರ–ವಿವರಗಳಲ್ಲಿ ತೆರೆದಿಡುತ್ತಾರೆ. ಇದರ ಸ್ಪಷ್ಟ ನಿದರ್ಶನಗಳೆಂದರೆ ಅವರು 'ನಾಡೋಜ ಪಂಪ'ವನ್ನು ಪ್ರಕಟಿಸಿದ ತರುಣದಲ್ಲೇ ಬರೆದ 'ಆದಿಪುರಾಣ ಸಂಗ್ರಹ' (1938) ಮತ್ತು 'ಸಮಸ್ತ ಭಾರತ ಸಾರ' (1941) ಎಂಬೆರಡು ಕೃತಿಗಳು. ಇವೆರಡೂ ಕೃತಿಗಳು 'ಆದಿಪುರಾಣ' ಮತ್ತು 'ಪಂಪ ಭಾರತ'ವನ್ನು ಹೊಸಗನ್ನಡಕ್ಕೆ ಮಾರ್ಪಡಿಸಿರುವ ಪ್ರಯತ್ನಗಳೆಂದು ಹೇಳಲಾಗಿದೆಯಾದರೂ, ಇವು 'ಕೇವಲ ಗದ್ಯಾನುವಾದದ' ಮಾದರಿಯವಲ್ಲ. ಮಾನವ್ಯದ ಉದಾತ್ತ ನೆಲೆಗಳನ್ನು, ಕೃತಿಯ ರಸ ಸ್ಥಾನಗಳನ್ನು ಅದರ ಸಮಗ್ರ ವಿವರಗಳಲ್ಲಿ ತೆರೆದಿಡುವ ವ್ಯಾಖ್ಯಾನ ವಿಮರ್ಶೆಯ ಮಾದರಿಯವು. ಕೃತಿಯುದ್ದಕ್ಕೂ ಇದರ ನಿದರ್ಶನಗಳಿವೆಯಾಗಿ ಇಲ್ಲಿ ಕೆಲವು ಮಾತುಗಳನ್ನು ಉದ್ಧರಿಸಬಹುದು: "ಕರ್ಣನ ಭೇದಿಸಲೆಂದೆ ನುಡಿದನು ಎನ್ನದಿರು, ಒಯ್ಯನೆ ಕೇಳು ಎಂದು ಮಾತಿಗಡಿಗಿಟ್ಟನು. ಅದನ್ನಾಲಿಸಿ ಹುಂ ಎಂದ ಕರ್ಣನೆದೆ ಬೆಚ್ಚಗಾಯಿತು. ಈ ಮಹಾ ಮಂತ್ರವಾದಿಯ ಬಾಯಿಂದ ಯಾವ ವಷಟ್ಕಾರವು ಹೊರಡುವುದೋ ಎಂದು ಕಾತರಗೊಂಡಿತು. 'ನಿನ್ನಾದಿಯೊಳಬ್ಬೆ ಕೊಂತಿ' ಎಂಬ ಮುನ್ನುಡಿಗೆ ಮೊದಲಾಯಿತು. ಎಣಿಸಿದಂತೆ ಅಂತರಂಗವು ಜುಮ್ಮೆಂದುದು. 'ನಿನಗಮ್ಮನಪರ್ತಿ'

ಎಂಬ ಮಾತೂ ಆ ಸಾಲಿನಲ್ಲೊಂದಾಯಿತು. ' ಪಾಂಡು ನಂದನರ ಸೋದರರ .......... ಎನ್ನುವಾಗ ಕೃಷ್ಣನ ಮೊಗದಲ್ಲಿ ಮುಗುಳ್ನಗೆಯರಳಿತು. ' ಪೆರತೇಂ ಪಡೆಮಾತೊ' ಎನ್ನುತ್ತಾ ಮತ್ತೆ ಗಂಭೀರವಾಯಿತು. ' ನಿನ್ನದೀ ಮೇದಿನಿ ...........' ಎಂದನು. ಕರ್ಣನ ಮೋರೆಯು ಕಳವಳವನ್ನು ಕೃಷ್ಣನರಿತನು. ಅದನ್ನು ತಿದ್ದತೊಡಗಿದನು ..........”[3]

“ಅದರೊಳನಲ್ಪ ಕಲ್ಪ ಶತಕೋಟಿಗಳೊಳಗೆ ನೆಲೆಸಂದ ಚಕ್ರಿವೃಂದದ ಬಲದ—ಆಯದ—ಆಯತಿಯ—ಬೀರದ—ಚಾಗದ ಮಾತುಗಳಿಂದಲಂಕೃತವಾದ ಪೂರ್ವ ಚಕ್ರವರ್ತಿಗಳ ಪ್ರಶಸ್ತಿ ಶಾಸನಗಳನ್ನು ಅಲ್ಲಲ್ಲಿ ಕಂಡರು .......... ಭರತೇಶ್ವರ ಚಕ್ರವರ್ತಿಯ ಅಂತರಂಗದಲ್ಲಿ ಆವರೆಗೆ ಕೊಳಗೊಂಡ ಗರ್ವ ರಸವೆಲ್ಲ ಸೋರುತ್ತ ಹೋಯಿತು. ಕಟ್ಟಕಡೆಗೆ ಗಳಿತಗರ್ವನಾಗಿ ಸಿಗ್ಗಾದ ಭರತನ ತಲೆಯೊಡನೆ ಬಗೆಯೂ ಬಾಗಿತು .......... ಏನಾದರೇನು? ತನಗೆ ಸರಿದೊರೆಗಳಾದ, ಮಿಗಿಲು ಮಿಗಿಲುಗಳೆನ್ನಿಸಿದ ಚಕ್ರವರ್ತಿಗಳು ಹಿಂದಾದರೂ ಇದ್ದರೆಂದ ಮೇಲೆ ಈ ಮಹಾ ಪ್ರಯತ್ನವು ವಿಫಲವಾದುದೆಂದೇ ಅವನ ಮರುಕವು .......... ಆ ಮೇಲೆ ಅವನೆದೆಯೊಳಗೆ ಬೇರೊಂದು ವಿಚಾರೋದಯವಾಯಿತು .......... ಈ ಪೂರ್ವಾವನಿಪಾಳರ ಪ್ರಶಸ್ತಿಯೊಳೊಂದೊಂದಂ ರತ್ನದಂಡದಿಂ ಸೀಂಟಿ ಕಳೆವುದು; ಅಯೆಡೆಯಲ್ಲಿ ನಿಜಪ್ರಶಸ್ತಿಗೆಡೆಮಾಡುವುದು .......... ಆ ನಿಜ ಪ್ರಶಸ್ತಿಯೆಂಬುದು ಆಗಲೇ ಭೂತದ ಗಂಬರಿನೊಳಗಾಗಿತ್ತು. ಮುಂದಿನ ಪ್ರಜೆಗಳ ಕಣ್ಣಿಗೊಳಗಾಗುವಲ್ಲಿ ಅದೂ ಕರಗಿ ಹೋಗಬಹುದೆಂದು ಪರಾಂಬರಿಸುವೆಣಿಕೆ ಅತನೆದೆಯಲ್ಲೇ ಮೊಳೆಯಲಿಲ್ಲ..........”[4]

---

3. ಸಮಸ್ತ ಭಾರತ ಸಾರ, ಮಂಗಳೂರು, 1941. ಪು: 125—126.

4. ಆದಿಪುರಾಣ ಸಂಗ್ರಹ, ಮಂಗಳೂರು, 1938. ಪು: 95—96.

ಈ ಮೇಲಿನ ವಿವರಗಳನ್ನು ಗಮನಿಸಿದರೆ ಮೂಲ ಕೃತಿಯ ಕಥಾನಕವನ್ನು ಗದ್ಯದಲ್ಲಿ ಹೇಳುವ ಪರಿ ಮಾತ್ರ ಇದಲ್ಲವೆನ್ನಿಸುತ್ತದೆ. ಆದುದರಿಂದ ಮೂಲ ಕೃತಿ ಹೇಳುವ ಕಥೆಯನ್ನು ತಿಳಿಯಲು ಇರುವ ಪರ್ಯಾಯ ಸಾಧ್ಯತೆಗಳು ಮಾತ್ರ ಈ ಕೃತಿಗಳಲ್ಲ; ಬದಲಾಗಿ ಮೂಲ ಕೃತಿಯ ಕುರಿತಾದ ಆಸಕ್ತಿಯನ್ನು ಹುಟ್ಟಿಸುವ, ಮೂಲ ಕೃತಿಯ ಓದಿಗೆ ಪೂರಕವಾಗುವ, ಕೃತಿಯ ವಿವಿಧ ಮಗ್ಗುಲುಗಳನ್ನು ತೆರೆದು ತೋರಿಸುವ ಪ್ರಯತ್ನಗಳು ಇವಾಗಿವೆ.

1939 ರಲ್ಲಿ ಬಂದ ತೀ.ನಂ.ಶ್ರೀ. ಅವರ 'ಪಂಪ' ಪಂಪನ ಕೃತಿಗಳ ಕುರಿತಾದ ಒಂದು ಕಿರು ಪ್ರಯತ್ನವಾಗಿದ್ದು, ಅದು ಪ್ರಕಟವಾದ ಸರಿಸುಮಾರಿನ ದಿನಗಳಲ್ಲಿ ನಡೆಯುತ್ತಿದ್ದ ಚರ್ಚೆಗಳಿಗಿಂತ ಕೊಂಚ ಭಿನ್ನವಾಗಿದೆ. ಪಂಪನ ಕೃತಿಗಳ ಸಮಗ್ರ ಚರ್ಚೆಯೇನೂ ಇಲ್ಲವಾದರೂ, ತೀ.ನಂ.ಶ್ರೀ. ಅವರು ಇಲ್ಲಿ ನೀಡುವ ಹಲವು ವಿವರಣೆಗಳು ಕೃತಿಗಳ ಸಮಗ್ರ ಅಧ್ಯಯನದ ಫಲವಾಗಿವೆಯೆಂಬುದು ಸ್ಪಷ್ಟ. ಕುರ್ತಕೋಟಿಯವರೆಂದಂತೆ "ಉಚ್ಚ ಮಟ್ಟದ ಅಭಿರುಚಿಯೊಂದನ್ನೇ ಆಧಾರವಾಗಿಟ್ಟುಕೊಂಡಿರುವ ವಿಮರ್ಶೆ ಅವರದು. ಅಲ್ಲದೆ ಅನೇಕ ಕಾವ್ಯಗಳ ಸತ್ಪರಂಪರೆಯಿಂದ ಸಂಸ್ಕಾರಗೊಂಡ ಅವರ ವಿಮರ್ಶಕ ಪ್ರತಿಭೆ ಆಧುನಿಕ ಯುಗದ ಅನೇಕ ವಿಕೃತಿಗಳಿಂದ ದೂರವಾಗಿದೆ."[5] ಈ ಕೃತಿ ಪಂಪನನ್ನು ಕುರಿತ ತನ್ನ ನಂತರದ ಓದಿನಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿರುವಂತೆ ತೋರುತ್ತದೆ. ಈ ಕೃತಿಯಲ್ಲಿ ಬಂದ ವಿವರಗಳು ಮಾತ್ರವಲ್ಲದೆ ವಾಕ್ಯ ವಾಕ್ಯಗಳು ನಂತರದ ದಿನಗಳಲ್ಲಿ ಉದ್ಧೃತವಾಗುತ್ತ ಬಂದಿರುವುದನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ.

ಪಂಪ ಕವಿಯ ಸ್ಮಾರಕೋತ್ಸವದ ಅಂಗವಾಗಿ ಬಂದ 'ಪಂಪ ಮಹಾಕವಿ'

---

5. 'ಸಾಹಿತ್ಯ ವಿಮರ್ಶೆ (ಇತಿಹಾಸ ಪ್ರಬಂಧ)', ನಡೆದು ಬಂದ ದಾರಿ, ಸಂಪುಟ-3, (ಸಂ) ಜಿ.ಬಿ.ಜೋಶಿ ಮತ್ತು ಕೆ.ಡಿ.ಕುರ್ತಕೋಟಿ, ಧಾರವಾಡ, 1961. ಪು: 2025.

ಇಲ್ಲಿ ಗಮನಿಸಬಹುದಾದ ಮತ್ತೊಂದು ಕೃತಿ. ಇದರಲ್ಲಿರುವ ಬರಹಗಳಲ್ಲಿ ಕೆಲವು ಈ ಗ್ರಂಥಕ್ಕಾಗಿಯೇ ಬರೆದವುಗಳಾದರೆ ಉಳಿದ ಕೆಲವು — ಕುವೆಂಪು ಅವರ 'ಪಂಪನಲ್ಲಿ ಭವ್ಯತೆ', ವೆಂಕಣ್ಣಯ್ಯನವರ 'ಪಂಪ ಭಾರತ', ಮುಗಳಿಯವರ 'ಪಂಪನ ದೇಸಿ', ಇವೆಲ್ಲ — ಈ ಮುನ್ನವೇ ಪ್ರಕಟವಾಗಿದ್ದಂಥವು. ಈ ಬರಹಗಳಲ್ಲಿ ಇದುವರೆಗೆ ಗಮನಿಸಿದಂತೆ ಕೃತಿ ಪರಿಶೀಲನೆಯ, ಪರಿಚಯಾತ್ಮಕವಾದ ಹಾಗೂ ವರ್ಣನಾನಿಷ್ಠ ನೆಲೆಗಳು ಸಮರ್ಥವಾಗಿ ಪ್ರತಿನಿಧಿತವಾಗಿವೆ. ಈ ಮುನ್ನವೇ ಬಂದ ಶಂ.ಬಾ. ಅವರ ಕರ್ಣ ಪಾತ್ರದ ತೌಲನಿಕ ಚರ್ಚೆ — ಅದರ ಅಪೇಕ್ಷೆಗಳೇನೇ ಇರಲಿ — ತೌಲನಿಕ ಅಧ್ಯಯನದ ನಿಟ್ಟಿನಿಂದ ಗಮನಿಸತಕ್ಕದಾಗಿದೆ.

1966 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಆರು ಉಪನ್ಯಾಸಗಳ ಸಂಕಲನವೊಂದನ್ನು 'ಪಂಪ ಮಹಾಕವಿ ಹಾಗೂ ಅವನ ಕೃತಿಗಳು' ಎಂಬ ಹೆಸರಿನಿಂದ ಹೊರತಂದಿದೆ. ಬಹುಮಟ್ಟಿಗೆ ಗಮನಾರ್ಹ ವಿಶೇಷ ಚರ್ಚೆಗಳೇನೂ ಇಲ್ಲಿ ನಡೆದಂತಿಲ್ಲವಾದರೂ ಅದುವರೆಗಿನ ಚರ್ಚೆಗಳ ಗುಣಾತ್ಮಕ ಅಂಶಗಳನ್ನು ಇಲ್ಲಿಯೂ ಗಮನಿಸಬಹುದು.

